ಶ್ರೀರಸ್ತು

॥ ಶ್ರೀ ನಿಮಿಷಾಂಬಾ ಪರಮೇಶ್ವರ್ಯೈ ನಮಃ ॥

ಶ್ರೀ ಸೋಮವಂಶ ಆರ್ಯಕ್ಷತ್ರಿಯ
ಪುರಾಣ

ಪರಿಶೋಧಕರು :

ವೇ॥ ಬ್ರ॥ ಶ್ರೀ॥ ಸೋಮಾಂಬುಧಿ ಅಗ್ರಹಾರ ಕೃಷ್ಣಶಾಸ್ತ್ರಿಗಳು

ಗ್ರಂಥಕರ್ತರು :
ಪಾನಗಂಟಿ ಸರಿಗೆ ಕೃಷ್ಣಪ್ಪನವರ
ಕುಮಾರ
ಗೋಪಾಲ್‌ರಾಜು
ಬೆಂಗಳೂರು

ಗ್ರಂಥಪ್ರಕಾಶಕರು :
ಉದ್ದಂಟಿ ಬಾಗಲೂರು ನಾರಾಣಪ್ಪನವರ
ಕುಮಾರ
ಶ್ರೀನಿವಾಸರಾಜು
ಬೆಂಗಳೂರು

ಶ್ರೀರಸ್ತು

॥ ಶ್ರೀ ನಿಮಿಷಾಂಬಾ ಪರಮೇಶ್ವರ್ಯೈನಮಃ ॥

ಶ್ರೀ ಸೋಮವಂಶ ಆರ್ಯಕ್ಷತ್ರಿಯ

ಪುರಾಣ

ಪರಿಶೋಧಕರು :

ವೇ॥ ಬ್ರಂ॥ ಶ್ರೀ॥ ಸೋಮಾಂಬುಧಿ ಅಗ್ರಹಾರ ಕೃಷ್ಣಶಾಸ್ತ್ರಿಗಳು

ಗ್ರಂಥಕರ್ತರು :

ಪಾನಗಂಟಿ ಸರಿಗೆ ಕೃಷ್ಣಪ್ಪನವರ ಕುಮಾರ

ಗೋಪಾಲ್‌ರಾಜು

ಗ್ರಂಥಪ್ರಕಾಶಕರು :

ಉದ್ದಂಟಿ ಬಾಗಲೂರು ನಾರಾಣಪ್ಪನವರ ಕುಮಾರ

ಶ್ರೀನಿವಾಸರಾಜು

ಬೆಂಗಳೂರು

೧೯೭೬

ಸಲಹೆಗಾರರು :
ಸಂಸ್ಕೃತ, ಆಂದ್ರ, ಕನ್ನಡ ತ್ರಿಭಾಷಾರತ್ನ
ವೇ॥ ಬ್ರಂ॥ ಶ್ರೀ॥ ದೇವರಕೊಂಡ ವೇದಾಂತಂ ಕೆ. ಶ್ರೀನಿವಾಸಶಾಸ್ತ್ರಿಗಳು
ವೇ॥ ಬ್ರಂ॥ ಶ್ರೀ॥ ಕೋಟಿಗಲ್ಲು ಈಶ್ವರಂ ಕೆ. ಸೀತಾರಾಮಶಾಸ್ತ್ರಿಗಳು

ಗ್ರಂಥದ ಸರ್ವ ಹಕ್ಕುಗಳು ಗ್ರಂಥಕರ್ತರದು

ಪ್ರಥಮ ಮುದ್ರಣ ೧೦೦೦ ಪ್ರತಿಗಳು

ಬೆಂಗಳೂರು
1967

ಪ್ರತಿ 1ಕ್ಕೆ ಕ್ರಯ ರೂ. 5–00

ಗ್ರಂಥ ದೊರೆಯುವ ಸ್ಥಳಗಳು :

ಗ್ರಂಥಕರ್ತರು :
ಕೆ. ಗೋಪಾಲ್‌ರಾಜು
ಇ. 52, ದಿವಾನ್‌ಖಾನಾ ಲೇನ್,
27ನೇ ಕ್ರಾಸ್. ರಂಗಸ್ವಾಮಿಗುಡಿ ಬೀದಿ,
ಬೆಂಗಳೂರು ಸಿಟಿ.

ಗ್ರಂಥಪ್ರಕಾಶಕರು :
ಬಿ. ಎನ್. ಶ್ರೀನಿವಾಸರಾಜು
ನಂ. 28, ಹುರಿಯೋಪೇಟೆ,
27ನೇ ಕ್ರಾಸ್, ರಂಗಸ್ವಾಮಿಗುಡಿ ಬೀದಿ,
ಬೆಂಗಳೂರು ಸಿಟಿ.

ಮುದ್ರಕರು ;
ವರ್ಮ ಪ್ರಿಂಟರ್ಸ್
ನಂ. 27, ಹುರಿಯೋಪೇಟೆ, 27ನೇ ಕ್ರಾಸ್, ರಂಗಸ್ವಾಮಿಗುಡಿ ಬೀದಿ,
ಬೆಂಗಳೂರು–2.

'Sri Nimishamba Parameswaryinnamaha'

Sri Soma Vamsha Arya Kshatriya Purana

Explorer:

Somambudi Agrahara Krishna Sastry

Author:

Panaganty K. Gopal Raju

Publisher:

Uddanti B. N. Sreenivasa Raju

BANGALORE

1967

Suggestion made by :

Devarakonda Vedantam K. Srinivasa Sastry

Kotagal Eswaram K. Seetarama Sastry

All Rights Reserved by Author

FIRST EDITION 1000 Copies

1967

PRICE RS. 5-00

Available at :

AUTHOR :
K. GOPAL RAJU
E. 52, Dewankhan Lane,
27th Cross,
Rangaswamy Temple Street,
Bangalore-2.

PUBLISHER :
B. N. SRINIVASA RAJU
No. 28, Huriyopet,
27th Cross,
Rangaswamy Temple Street
Bangalore-2.

Printed at :

VARMA PRINTERS

No. 27, 27th Cross, Rangaswamy Temple Street, Bangalore-2.

ಶ್ರೀ ನಿಮಿಷಾಂಬಾದೇವಿ

ಗ್ರಂಥಾರ್ಪಣೆ

ವೇದನಿಧಿಗಳಾದ ಮಹರ್ಷಿಗಳಿಗೆ

ಶ್ರೀಮಾನ್ ಪಾನಗಂಟಿ ಕೆ. ಗೋಪಾಲ್‌ರಾಜುರವರಿಂದ ಸಂಗ್ರಹಿಸಲ್ಪಟ್ಟ ಭರತಖಂಡದ ಪ್ರಸಿದ್ಧ ಮಹಾ ಜನಾಂಗವಾದ ಆರ್ಯಕ್ಷತ್ರಿಯ ಕುಲಪುರಾಣವನ್ನೂ ಮತ್ತು ಅದರ ಕನ್ನಡ ಅನುವಾದವನ್ನೂ ಪರಿಶೀಲಿಸಿ ಪರಿಷ್ಕರಿಸಿದ್ದೇನೆ. ಈ ಪುಣ್ಯ ಪುರಾಣವು ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದಿಂದ ಉದ್ಧರಿಸಲ್ಪಟ್ಟಿದೆ. ಇಂತಹ ಪುಣ್ಯ ಕೆಲಸವನ್ನು ನೋಡುವ ಪುಣ್ಯ ನನಗೆ ಲಭಿಸಿತು. ಕುಲಬಾಂಧವರೂ ಮಹಾಜನರು ಈ ಪುರಾಣವನ್ನು ಓದಿ ಶ್ರೇಯಸ್ಸನ್ನು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ,

ವಿದ್ವಾನ್, ಎಸ್. ಆರ್. ಕೃಷ್ಣಶಾಸ್ತ್ರಿ,

ತಾರೀಖು : ಸಂಸ್ಕೃತ ಅಧ್ಯಾಪಕ, ಆರ್ಯ ವಿದ್ಯಾಶಾಲಾ ಹೈಸ್ಕೂಲು.

6-9-1966 ಬೆಂಗಳೂರು ನಗರ.

ಆರ್ಯಪದ ವಿವರಣೆ

ಆರ್ಯಶಬ್ಧ, ಮತ್ತು ಅನಾರ್ಯ ಶಬ್ದಗಳು, ಜಾತಿವಾಚಕ, ಧರ್ಮವಾಚಕ, ದೇಶವಾಚಕವಲ್ಲ. ಆರ್ಯಶಬ್ಧವು ಋಗ್ವೇದ ಕಾಲಕ್ಕಿಂತ ಮೊದಲಿನಿಂದಲೂ ಈ ಶಬ್ಧವು ರೂಢಿಯಲ್ಲಿತ್ತು ಆದರೆ ಋಗ್ವೇದ ಕಾಲದಲ್ಲಿ ಇದಕ್ಕೆ ಪ್ರಾಶಸ್ತ್ಯ ಬಂದಿತು. ಋಗ್ವೇದ ಮೊದಲನೇ ಮಂಡಲದ 103ನೇ ಸೂಕ್ತದ 3ನೇ ಮಂತ್ರ ಆರನೇ ಮಂಡಲದ 25ನೇ ಸೂಕ್ತದ 2ನೇ ಮಂತ್ರ. ಹತ್ತನೇ ಮಂಡಲದ 65ನೇ ಸೂಕ್ತದ 11ನೇ ಮಂತ್ರಗಳಲ್ಲಿ ಆರ್ಯಶಬ್ಧಕ್ಕೆ ವಿದ್ವಾಂಸ ಕುಲೀನ, ಕರ್ಮನಿರತ ಮೊದಲಾದ ಸದ್ಗುಣಗಳ ಸಂಕೇತ ಸರೂಪದಿಂದ ವರ್ಣಿಸಲ್ಪಟ್ಟಿದೆ.

"ಋ" ಧಾತುವಿನಿಂದ ಆರ್ಯಶಬ್ಧದ ಉತ್ಪತ್ತಿಯಾಗಿದೆ.

"ಋ" ಅಕ್ಷರ, ತ್ಯಾಗಸಂಕೇತ ಆ ತ್ಯಾಗಕಾರಣದಿಂದಲೂ ಮತ್ತು ಪರಂಪರೆಯ ತ್ಯಾಗದಿಂದಲೂ ನಮ್ಮಗಳ ಧಾರ್ಮಿಕತೆ, ಧರ್ಮಕರ್ಮಾಚರಣೆ ಸತ್ಕುಲೋತ್ಪತ್ತಿ, ಶ್ರೇಷ್ಠತೆ, ನಮ್ಮಗಳ ಸದಾಚಾರಗಳ ಪರಂಪರೆಯ ಔದಾರ್ಯ ಮೊದಲಾದ ಗುಣ ಗಳಿಗಾಗಿ ನಮ್ಮಗಳಿಗೆ ಬಂದಿರತಕ್ಕ ಆರ್ಯ ಶಬ್ಧವಾಗಿರುತ್ತೆ.

ಈ ನಮ್ಮಗಳ ಪರಂಪರಾ ಧರ್ಮ ಕರ್ಮಾಚರಣೆಯ ದೆಶೆಯಿಂದಾಗಿ ಪರಮೇಶ್ವರನೂ ಸಹ ಬ್ರಹ್ಮಾಂಡ ಪುರಾಣದಲ್ಲಿ.

ಏತದ್ವಂಶಸಮಾಯುಕ್ತಾಃ ಆರ್ಯಕ್ಷತ್ರಿಯನಾಮಕಾಃ ।

ಎಂದು ಹೇಳಿದೆ. ಮಹಾಭಾರತದಲ್ಲಿ ಸಹ ಆರ್ಯಶಬ್ಧಕ್ಕೆ, ಮೂಲಾರ್ಥವು ಬಹು ಸುಂದರವಾಗಿ ಸೂತ್ರಬದ್ಧವಾಗಿ ಹೇಳಿದೆ.

ವೃತ್ತೇನಹಿಭವತ್ಯಾರ್ಯೋನಧೇನನವಿದ್ಯಯಾ

ಮತ್ತು

ಶ್ರೇಯಾನ್ಸ್ವಧರ್ಮೋವಿಗುಣಃಪರಧರ್ಮಾತ್ಸ್ವನುಷ್ಠಿತಾತ್

ಅಂದರೆ ವೃತ್ತಿಯಿಂದ ಪೂರ್ವಾಪರ ಆಚಾರದಿಂದ ಪರಂಪರಾನುಗತವಾದ ಧರ್ಮಕರ್ಮಾಚರಣೆಯಿಂದ, ಸಕಲ ಸೌಜನ್ಯವಾದ ವ್ಯವಸಾಯದಿಂದ ಸಕಲ ಸದ್ಗುಣ ಗಳ ಸ್ವಭಾವದಿಂದ ಮಾನವನು ಆರ್ಯನಾಗುತ್ತಾನೆ. ಮನುಷ್ಯನ ಜಾತಿ ಹುಟ್ಟು ಮತ್ತು ವಾಸಸ್ಥಳಗಳಿಗೆ ಆರ್ಯಶಬ್ಧವು ಸಂಬಂಧಪಟ್ಟಿದ್ದಲ್ಲ. ನಡವಳಿಕೆ ಪರಂಪ ರಾನುಗತವಾದ ವೇದೋಕ್ತ ಕರ್ಮಗಳು ಪ್ರಾಮುಖ್ಯ.

ಧನ, ವಿದ್ಯೆಗಳನ್ನು ಸಂಪಾದನೆ ಮಾಡುವುದರಿಂದ ಮಾನವನು ಆರ್ಯನಾಗ ಲಾರ. ಆದ್ದರಿಂದ ಪ್ರತಿಯೊಬ್ಬ ಆರ್ಯಕ್ಷತ್ರಿಯನೂ ವೇದೋಕ್ತಕರ್ಮದ ಸದಾಚಾರ ದಿಂದ ಆರ್ಯನಾಗಿ ಪರಿಣಿತಿ ಹೊಂದಬಲ್ಲ.

ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಶೃಂಗೇರಿ ಶಾರದಾಪೀಠದ ಶ್ರೀ ಶ್ರೀ ಜಗದ್ಗುರುಗಳ ಸಂದೇಶ

Sri Sri Sringeri Jagadguru Mahasamsthanam,
Sringeri Math Sharada Peetham
P. O. Sringeri-Kadur (Mysore State)

Office of the Private Secretary to His Holiness The Jagadguru Sri Shankaracharya of Sri Sringeri Mutt.

N. Lakshminarayana Sastry
Private Secretary

Ref. No. 5922/66-67.

Date : 27-4-67. Camp : ಗಯಾ

ಶ್ರೀ ಬಿ. ಎನ್. ಶ್ರೀನಿವಾಸರಾಜುರವರಿಗೆ,

ನಿಮ್ಮ ಮತವಿಷಯವಾಗಿ ಬರ್ದಿರುವ ಗ್ರಂಥವು ತಲುಪಿ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಗೆ ಸಮರ್ಪಿಸಿತು.

ನಿಮ್ಮ ಪ್ರಾಚೀನವನ್ನೂ, ಉಪಾಸನಾ ವಿಧಾನವನ್ನೂ ಪ್ರಚುರಪಡಿಸಿರುವುದು ಸಂತೋಷಕರ. ನಿಮ್ಮ ಈ ಕೆಲಸವನ್ನು ಶ್ರೀ ಶ್ರೀ ಗಳವರು ಆಶೀರ್ವದಿಸಿರುತ್ತಾರೆ.

ಆಶೀರ್ಮಂತ್ರಾಕ್ಷತೆ ಶ್ರೀ ಶಾರದಾ ಚಂದ್ರಮೌಳೀಶ್ವರ ಪ್ರಸಾದ ಕಳ್ಸಿರುತ್ತೆ.

ಮತ್ತೂ ನೀವು ಅಪೇಕ್ಷಿಸಿದಂತೆ ಶ್ರೀ ಶ್ರೀ ಗಳವರ ಫೋಟೋವನ್ನು ಕಳ್ಸಿದೆ.

ಇತಿ

(Sd) N. LAKSHMINARAYANA SASTRY
Private Secretary
To His Holiness The Jagadguru
Maha Swamigalavaru of
Sri Sringeri Mutt.

ಶ್ರೀ ಶ್ರೀ ದ್ವಾರಕಾ ಶಾರದಾಪೀಠ, ದ್ವಾರಕಾ (ಸೌರಾಷ್ಟ್ರ)
ಶ್ರೀ ಶ್ರೀ ಜಗದ್ಗುರುಗಳ ಸಂದೇಶ

Sri Dwaraka Sharada Peeth
Dwaraka (Saurashtra)

No. Date : 16-4-67 Camp : ಬೆಂಗಳೂರು.

ಶ್ರೀಮಾನ್ ಬಿ. ಎನ್. ಶ್ರೀನಿವಾಸರಾಜು,
ಪ್ರೊಪ್ರೈ. ಶ್ರೀ ಶಕ್ತಿಪವರ್‌ರೋಲಿಂಗ್ ಮಿಲ್ಸ್
ಬೆಂಗಳೂರು.

ನೀವು ನಿಮ್ಮ ಕುಲದೇವರಾದ ಶ್ರೀ ನಿಮಿಷಾಂಬಾ ದೇವಿಯ ದಿವ್ಯಮಂದಿರವನ್ನು ಪ್ರಾಚೀನ ಶಿಲ್ಪಶಾಸ್ತ್ರಾನುಸಾರವಾಗಿ ಕಟ್ಟಿಸಲು ವಿವಿಧ ಮೂರ್ತಿಗಳನ್ನೂ, ದೇವಾಲಯದ ಭಾಗಗಳನ್ನೂ ನಿರ್ಮಿಸುತ್ತಿರುವುದನ್ನು ಶ್ರೀ ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಶ್ರೀ ಸ್ವಾಮಿಗಳವರು ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೊಡನೆ ಪರಾಂಬರಿಸಿ, ಹರ್ಷಚಿತ್ತರಾದರು.

ಈಗ ನಿಮ್ಮ ವಂಶ ಚರಿತ್ರೆ-ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣವನ್ನು ಪ್ರಕಟಿಸುತ್ತಿರುವುದು ಸಂತೋಷಪ್ರದವಾದ ವಿಚಾರ. ಸ್ಕಂದ ಪುರಾಣಾದಿಗ್ರಂಥಗಳ ಆಧಾರದಿಂದ ನಿಮ್ಮ ಕುಲದೇವಿಯ ದಿವ್ಯಚರಿತ್ರೆ-ನಿಮ್ಮ ಪೂರ್ವಜರ ವಂಶಾವಳಿ ಮುಂತಾದ ವಿಚಾರಗಳನ್ನು ಸಂಸ್ಕೃತ ಶ್ಲೋಕಾದಿಗಳೊಂದಿಗೆ ಹೃದಯಗ್ರಾಹಿಯಾಗಿ ಕನ್ನಡದಲ್ಲಿ ವಿವರಿಸಿರುವುದು ಭಕ್ತರುಗಳಿಗೆ ಬಹಳ ಹರ್ಷದಾಯಕವಾಗಿದೆ.

ಶ್ರೀ ದ್ವಾರಕಾದೀಶ ಶ್ರೀ ಕೃಷ್ಣ ಚಂದ್ರಮೌಲೀಶ್ವರ ದೇವರು ನಿಮಗೂ, ಸರ್ವರಿಗೂ ಸರ್ವವಿಧ ಮಂಗಳವನ್ನುಂಟುಮಾಡಲೆಂದು ಜಗದ್ಗುರುಗಳು ಆಶೀರ್ವದಿಸಿದ್ದಾರೆ.

ಜಗದ್ಗುರುಗಳ ಆಜ್ಞೆಯಂತೆ,
(Sd) ಮಹಾಬಲಭಟ್ಟ.
Secretary to H. H. Shree
Jagadguru Shankaracharya Maharaja
Shree Sharada Peeth, Dwaraka.

ಪ್ರಸ್ತಾವನೆ

ಕುಲಭಾಂದವರಲ್ಲಿ ವಿಜ್ಞಾಪನೆ :—

ನಾನು ನಮ್ಮ ಕುಲದೇವಿಯಾದ ಶ್ರೀ ನಿಮಿಷಾಂಬಾದೇವಿಯ ಪ್ರಾದುರ್ಭಾವ ಮತ್ತು ಮುಕ್ತರಾಜೋತ್ಪನ್ನವಾದ ನಮ್ಮಗಳ ಕುಲಚರಿತ್ರೆಯನ್ನು ಬರೆಯಬೇಕೆಂದು 1940ರಲ್ಲಿ ನಾನು ಮತ್ತು ನನ್ನ ಮಿತ್ರರಾದ ದಿವಂಗತ ಆರ್. ವೆಂಕಟರಮಣರಾಜು ರವರು ಸಹ ಪ್ರಯತ್ನಪಟ್ಟು ಆಗಿನ ಕಾಲದ ಸ್ಥಿತಿಯಲ್ಲಿ ಹಣದ ಅಭಾವದಿಂದ ಈ ಗ್ರಂಥದ ಕೆಲಸವನ್ನು ನಿಲ್ಲಿಸಿ ಶ್ರೀ ಸೋಮವಂಶ ಆರ್ಯಕ್ಷತ್ರಿಯರ **"ನಿತ್ಯಕರ್ಮವಿಧಿ"** ಎಂಬ ಸಂಧ್ಯಾವಂದನೆ, ದೇವತಾರ್ಚನೆ, ಗೋತ್ರಪ್ರವರಗಳನ್ನೊಳಗೊಂಡ ಚಿಕ್ಕ ಪುಸ್ತಕ ವನ್ನು ಪ್ರಕಟಿಸಿದೆವು. ಸುಮಾರು 25 ವರ್ಷಗಳು ಕಳೆದರೂ ನಮ್ಮ ಜನಾಂಗದಲ್ಲಿ ನಮ್ಮ ಗಳ ಕುಲಪುರಾಣವು ಪ್ರಕಟವಾಗಲಿಲ್ಲವಾದುದರ ದೆಸೆಯಿಂದ ಪುನಃ ನಾನು ಶೇಖರಿ ಸಿದ್ದದ್ದನ್ನೂ ಮತ್ತು ಈಚಿನ 25 ವರ್ಷಗಳಲ್ಲಿ ಸಂಗ್ರಹಿಸಿದ ವಿಷಯಗಳನ್ನೂ ಸಂಗ್ರಹಿಸಿ ಈಗ ಈ ಗ್ರಂಥದಲ್ಲಿ ನಮ್ಮಗಳ ಗೋತ್ರಗಳ ಪ್ರವರದ ಜೊತೆಗೆ ನಮ್ಮ ಹಿಂದಿನವರ ಮನೆತನಗಳಲ್ಲಿ ಬಂದ ಪುಣ್ಯಪುರುಷರ ವಿವರಗಳೊಂದಿಗೆ ಪ್ರಕಟಿಸಿದ್ದೇನೆ. ಅದರ ಜೊತೆಗೆ ಹಾಲಿ ಬೆಂಗಳೂರು, ಮೈಸೂರು, ಶಿವಮೊಗ್ಗ, ಮಧುಗಿರಿ ಮೊದಲಾದ ಸ್ಥಳಗಳಲ್ಲಿರುವ ನಮ್ಮ ಜನಾಂಗದ ಮನೆತನಗಳವರ ವಂಶಾವಳಿಗಳನ್ನೂ ಸಹ ಸೇರಿ ಸಿರುತ್ತೇನೆ, ನಮ್ಮಗಳ ವಂಶದವರಿಂದ ಕಾಲಕಾಲಕ್ಕೆ ಆದರ್ಶವಾಗಿರುವ ಶಾಸನಗಳಾದ 1) ವಿಜಯನಗರಶಾಸನ, 2) ಚಂದ್ರಗಿರಿಶಾಸನ, ೩) ಕಂಚಿಶಾಸನಗಳನ್ನು ಪ್ರಕಟಿ ಸಿರುತ್ತೇನೆ. ಈ ಮೂರು ಶಾಸನಗಳಲ್ಲಿ ಚಂದ್ರಗಿರಿಶಾಸನ ಸಮಯದಲ್ಲಿ ನಮ್ಮಗಳ ವಂಶೀಕರಾದ ಪೂರ್ವಪುಣ್ಯಪುರುಷರುಗಳ ಹೆಸರುಗಳನ್ನೂ ಅವರುಗಳು ವಾಸಿಸುತ್ತಿದ್ದ ಊರುಗಳ ಹೆಸರುಗಳನ್ನೂ ನೋಡಿದರೆ ನಮ್ಮ ಜನಾಂಗವು ಹಿಮಾಲಯ ಪರ್ವತದ ಕೇದಾರ ಬದ್ರೀನಾಥದಿಂದ ಹಿಡಿದು ದಕ್ಷಿಣದ ಕನ್ಯಾಕುಮಾರಿವರೆವಿಗೂ ಪೂರ್ವದ ಪೂರಿ ಜಗನ್ನಾಥದಿಂದ ಹಿಡಿದು ಪಶ್ಚಿಮದ ದ್ವಾರಕೆಯವರೆವಿಗೂ ಇರುವ ದೇಶಗಳಲ್ಲಿ ವಾಸಿಸುವ ಗಣ್ಯರುಗಳ ಹೆಸರುಗಳು ಇರುವುದರಿಂದ ನಮ್ಮ ಜನಾಂಗವು ಹಿಂದೂ ದೇಶದ ಎಲ್ಲಾ ಕ್ಷೇತ್ರಗಳಲ್ಲಿಯೂ ಎಲ್ಲಾ ಪಟ್ಟಣಗಳಲ್ಲಿಯೂ ಎಲ್ಲಾ ಭಾಷೆಗಳನ್ನು ಉಪಯೋಗಿಸುವವರಾಗಿಯೂ ಇರುವುದು ತಿಳಿಯುವುದು. ಆದ್ದರಿಂದ ನಮ್ಮ ಜನಾಂಗದ ವಿದ್ಯಾವಂತರಾದವರು ಈ ವಿಚಾರದಲ್ಲಿ ಸಂಶೋಧನಾ ಕಾರ್ಯವನ್ನು ಮಾಡಬೇಕಾಗಿ ನನ್ನ ವಿನಯಪೂರ್ವಕವಾದ ವಿನಂತಿ, ನಮ್ಮಗಳ ಮೂಲ ಪುರುಷನಾದ ಮುಕ್ತರಾಜನ ಚರಿತ್ರೆಯು ನಾರದ ಪುರಾಣ, ವಿಷ್ಣುಪುರಾಣ, ಭವಿಷ್ಯೋತ್ತರಪುರಾಣ, ಸ್ಕಾಂದಪುರಾಣ, ಹರಿವಂಶ, ಭಾರತ, ಭಾಗವತ, ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆ, ಶಿವಪುರಾಣ, ದೇವೀಪುರಾಣ, ಆನಂದ ರಾಮಾಯಣ ಮೊದಲಾದ ಅನೇಕ ಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಒಂದೊಂದು

ಗ್ರಂಥದಲ್ಲೂ ಸ್ವಲ್ಪ ವ್ಯತ್ಯಾಸಗಳಿಂದಲೂ ಕೆಲವು ವಿಶೇಷ ಸನ್ನಿವೇಶಗಳಿಂದಲೂ ಕೂಡಿದೆ, ಅದರಲ್ಲೂ ಮುಖ್ಯವಾಗಿ ಈಗ ಯಾವ ಪುರಾಣಗಳಲ್ಲಿ ಹುಡುಕಿದರೂ ಚತುರ್ವರ್ಣಗಳನ್ನು ವಿವರಿಸುವ ವರ್ಣವೈಭವಖಂಡಗಳನ್ನು ತೆಗೆದುಬಿಟ್ಟಿರುತ್ತಾರೆ. ಮತ್ತು ಅವುಗಳು ಈಗ ಮುದ್ರಿತವಾಗಿರುವುದಿಲ್ಲ. ನಮ್ಮಗಳ ವಂಶಪುರಾಣಕ್ಕೆ **"ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣ"**ವೆಂದು ಹೆಸರಿಟ್ಟಿದ್ದೇನೆ. ಈ ನಮ್ಮ ವಂಶಪುರಾಣವು ಮುಖ್ಯವಾಗಿ ವ್ಯಾಸಮಹರ್ಷಿಗಳಿಂದ ನಿರ್ಮಿತವಾಗಿರುವ ಹದಿನೆಂಟು ಪುರಾಣಗಳಿಗೆ ಸೇರಿದ ಬ್ರಹ್ಮಾಂಡ ಪುರಾಣದಲ್ಲಿರುವ ವರ್ಣವೈಭವ ಖಂಡದಲ್ಲಿ ಬ್ರಹ್ಮನಾರದ ಸಂವಾದ ರೂಪದಲ್ಲಿರುತ್ತದೆ,

ನಮ್ಮಗಳ ಪೂರ್ವಜರು ಮೂಲ ಗ್ರಂಥಗಳಲ್ಲಿ ಅಂದರೆ ವ್ಯಾಸಮಹರ್ಷಿಯಿಂದ ನಿರ್ಮಿಸಲ್ಪಟ್ಟ ಹದಿನೆಂಟು ಪು ರಾ ಣ ಗ ಳ ಲ್ಲೂ ಪ್ರತಿ ಪುರಾಣದ ಕೊನೆಯಲ್ಲಿ ಚತುರ್ವರ್ಣಗಳ ಧರ್ಮವೂ ಮತ್ತು ಚತುರ್ವರ್ಣಗಳ ವಿವರವೂ ಇದೆ. ಆ ರೀತಿ ಇರುವ ಪುರಾಣಗಳು ಈಗ ಲಭ್ಯವಾಗುತ್ತಿಲ್ಲ. ಮೈಸೂರಿನ ಓರಿಯಂಟಲ್ ಲೈಬ್ರರಿ ಯಲ್ಲಿ ನಾನು ಮತ್ತು ನನ್ನ ಮಿತ್ರರಾದ ದಿವಂಗತ ಆರ್. ವೆಂಕಟರಮಣರಾಜು ಸಹ ಸೇರಿ 1939ರಲ್ಲಿ ಮೈಸೂರಿಗೆ ಹೋಗಿ ಅಲ್ಲಿನ ಲೈಬ್ರರಿಯಲ್ಲಿನ ವಾಲೆಗರಿಯ ಬ್ರಹ್ಮಾಂಡಪುರಾಣದ ವರ್ಣವೈಭವಖಂಡದಲ್ಲಿನ ಕೆಲವು ಅಂಶಗಳನ್ನು ಮತ್ತು ವಾಲೆ ಗರಿಯ ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆಯಲ್ಲಿನ ಕೆಲವಂಶಗಳನ್ನೂ ಬರೆದು ಕೊಂಡುಬಂದೆವು. ಈಗ ನಾನು ಮುದ್ರಿಸಿರುವ ಈ ಗ್ರಂಥಕ್ಕೆ ನಮ್ಮ ಜನಾಂಗದವರು ಮುದ್ರಿಸಿರುವ 1) ಬ್ರಹ್ಮಾಂಡಪುರಾಣ ತೆಲುಗು ಸಂಸ್ಕೃತಮೂಲ, 2) ಬ್ರಹ್ಮಾಂಡ ಪುರಾಣದ ಚಂಪೂಕಾವ್ಯ ತೆಲುಗು, 3) ತೆಲುಗು ಮುಕ್ತರಾಜ ಚರಿತ ಸಂಸ್ಕೃತ ಮೂಲ, 4) ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆ ಕನ್ನಡ ಮತ್ತು ಬ್ರಹ್ಮಶ್ರೀ ಲವಂಗಭಾರತೀ ಸ್ವಾಮಿಗಳ ಮಠದಲ್ಲಿರುವ, 5) ಬ್ರಹ್ಮಾಂಡಪುರಾಣ, ಸಂಸ್ಕೃತ ಮೂಲ ಮರಾಠಿ, 6) ಹರಿವಂಶ ಸಂಸ್ಕೃತಮೂಲ ಮರಾಠಿ, 7) ದೇವೀ ಮಹಾತ್ಮೆ ಮರಾಠಿ, 8) ನಾರದ ಭಕ್ತಿತರಂಗಿಣಿ ಸಂಸ್ಕೃತಮೂಲ ಮರಾಠಿ, 9) ಭವಿಷ್ಯೋತ್ತರ ಪುರಾಣ, ಸಂಸ್ಕೃತಮೂಲ ಮರಾಠಿ, 10) ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ನಾವು ಬರೆದುಕೊಂಡು ಬಂದ ವಾಲೆಗರಿಯ ಬ್ರಹ್ಮಾಂಡ ಪುರಾಣ, ಸಂಸ್ಕೃತಮೂಲ, 11) ಮೈಸೂರಿನ ಲೈಬ್ರರಿಯಲ್ಲಿನ ವಾಲೆಗರಿಯ ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆ ಸಂಸ್ಕೃತಮೂಲ, 12) ದೇವೀಪುರಾಣ 13) ದೇವೀಭಾಗವತ, 14) ಭಾಗವತ, 15) ಭಾರತ, 16) ರಾಮಾಯಣ 17) ವಿಷ್ಣುಪುರಾಣ, 18) ಶಿವಪುರಾಣ, 19) ನಾರದಪುರಾಣ, 20) ಲಲಿತಾ ಸಹಸ್ರನಾಮಭಾಷ್ಯ ಸಂಸ್ಕೃತಮೂಲ ಮರಾಠಿ, 21) ಆನಂದರಾಮಾಯಣ, 22) ರಂಗನಾಥರಾಮಾಯಣವೇ ಮೊದಲಾದ ಇನ್ನೂ ಕೆಲವು ಗ್ರಂಥಗಳಿಂದ ವಿಷಯ ಗಳನ್ನು ಶೇಖರಿಸಿರುವುದರಿಂದ ಮೇಲ್ಕಂಡ ಗ್ರಂಥಋಣವನ್ನು ನೆನೆಯುತ್ತೇನೆ.

ಇನ್ನು ತೆಲುಗಿನಲ್ಲಿ ಮುದ್ರಿತವಾಗಿರುವ ಬ್ರಹ್ಮಾಂಡಪುರಾಣದಲ್ಲಿ ಈಶ್ವರನ ಮಾನಸಪುತ್ರನಾಗಿ ಮುಕ್ತರಾಜರ್ಷಿಯು ಹುಟ್ಟಿದನೆಂದೂ ಆತನ ಮಕ್ಕಳಿಗೆ ರೋಮಶ ಋಷಿಯಿಂದ ಶಾಪ ಪ್ರಾಪ್ತವಾಯಿತೆಂದೂ ಬರೆದಿದೆ ಮತ್ತು ಚಂದ್ರವಂಶ ವರ್ಣನೆಯಾಗಲಿ ಮುಕ್ತರಾಜರ್ಷಿಯಿಂದ ಮುಂದಿನ ಪರಂಪರೆಯಾಗಲಿ ಮುದ್ರಿತವಾಗಿಲ್ಲ ಮತ್ತು ಅಮಲಾಪುರದವರು ಮುದ್ರಿಸಿರುವ ಮುಕ್ತರಾಜರ್ಷಿಯ ಚರಿತ್ರೆಯಲ್ಲಿ ಶ್ರೀ ನಿಮಿಷಾಂಬಾದೇವಿಯು ಮಹಿಷಾಸುರನನ್ನು ಸಂಹಾರಮಾಡಿದಂತೆಯೂ ಮತ್ತು ಧರ್ಮರಾಜನು ಪ್ರಶ್ನಿಸಿದ್ದಕ್ಕೆ ನಾರದಮುನಿಯು ಮುಕ್ತರಾಜರ್ಷಿಯ ಚರಿತ್ರೆಯನ್ನು ಹೇಳಿದಂತೆಯೂ ಮುದ್ರಿಸಿದ್ದಾರೆ. ಅನಂತಪುರದವರು ಮುದ್ರಿಸಿರುವುದರಲ್ಲಿ ಧರ್ಮರಾಜನ ವಿಷಯವಾಗಲಿ ಮಹಿಷಾಸುರನ ವಿಷಯವಾಗಲಿ ಇಲ್ಲಾ. ನಾರದ ಮಹರ್ಷಿಯು ಬ್ರ ಹ್ಮ ದೇ ವ ನ ನ್ನು ಪ್ರಶ್ನಿಸಿದನು, ಬ್ರಹ್ಮನು ನಾರದನಿಗೆ ಮುಕ್ತರಾಜರ್ಷಿಯ ಚರಿತ್ರೆಯನ್ನು ಹೇಳಿದನೆಂದು ಪಾಠಭೇದವಿದೆ. ಕನ್ನಡದಲ್ಲಿ ಮುದ್ರಿತವಾಗಿರುವ ಸನತ್ಕುಮಾರ ಸಂಹಿತೆಯಲ್ಲಿ ಈಶ್ವರನ ಮಾನಸಪುತ್ರನಾಗಿ ಸುಮನಸ್ಕ ಮಹಾರಾಜನು ಜನಿಸಿದನು. ಆತನು ಪುನಃ ಪಾರ್ವತೀ ಪರಮೇಶ್ವರರನ್ನು ಕುರಿತು ತಪಸ್ಸು ಮಾಡಿ ಮುಕ್ತರಾಜನನ್ನು ತನ್ನ ಪುತ್ರನಾಗಿ ವರವನ್ನು ಪಡೆದು ತನ್ನ ಹೆಂಡತಿಯಾದ ಸುಶೀಲಾ ದೇವಿಯಿಂದ ಮುಕ್ತರಾಜನನ್ನು ಪಡೆದನೆಂದೂ ಮತ್ತು ಮುಕ್ತರಾಜನ ಪರಂಪರೆಯಿಂದ ಬಂದ ಚಿತ್ರಕನೆಂಬ ರಾಜನಿಗೂ ಮತ್ತು ಆತನ ಪುತ್ರರಿಗೂ ರೋಮಶ ಋಷಿಯಿಂದ ಶಾಪ ಪ್ರಾಪ್ತವಾಯಿತೆಂದೂ ಬರೆದಿದೆ. ಓರಿಯಂಟಲ್ ಲೈಬ್ರರಿಯ ವಾಲೆಗರಿಯ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮದೇವನಿಗೆ ಮಾನಸಪುತ್ರನಾಗಿ ಸುಮನಸ್ಕ ಮಹಾರಾಜನು ಹುಟ್ಟಿದನೆಂದೂ ಸುಮುಸನ್ಕನು ಪರಮೇಶ್ವರನ ಪ್ರಸಾದದಿಂದ ಮಾನಸಪುತ್ರನಾಗಿ ಮುಕ್ತರಾಜನನ್ನು ಪಡೆದು ತನ್ನ ಪುತ್ರನನ್ನಾಗಿ ಈಶ್ವರನ ಆಜ್ಞಾಪ್ರಕಾರವಾಗಿ ಪಡೆದನೆಂದು ಇದೆ, ಮತ್ತು ಬ್ರಹ್ಮಶ್ರೀ ಲವಂಗಭಾರತೀಸ್ವಾಮಿಗಳ ಮಠದಲ್ಲಿನ ಬ್ರಹ್ಮಾಂಡಪುರಾಣದಲ್ಲಿ ಚಂದ್ರವಂಶವರ್ಣನೆ ಬ್ರಹ್ಮನ ಮಾನಸಪುತ್ರನಾದ ಸುಮನಸ್ಕನಿಗೆ ಗೌತಮ ಮಹರ್ಷಿಯ ಉಪದೇಶದಿಂದ ಸುಮನಸ್ಕನು ಪಾರ್ವತೀ ಪರಮೇಶ್ವರರನ್ನು ತಪಸ್ಸಿನಿಂದ ಮೆಚ್ಚಿಸಿ ಪರಮೇಶ್ವರನ ಮಾನಸಪುತ್ರನಾದ ಮುಕ್ತರಾಜನನ್ನು ಪುತ್ರನನ್ನಾಗಿ ಪಡೆದನೆಂದೂ ಇದೆ, ಆದ್ದರಿಂದ ನಾನು ಬರೆದಿರುವ ಚರಿತ್ರೆಯಲ್ಲಿ ಬ್ರಹ್ಮನ ಮಾನಸ ಪುತ್ರನಾದ ಸುಮನಸ್ಕ ಮಹಾರಾಜನಿಗೆ ಪರಮೇಶ್ವರನ ಮಾನಸದಿಂದ ಮುಕ್ತರಾಜ ಜನನವೆಂದೂ ಚಂದ್ರವಂಶದ ಕುಶಿಕನಿಗೆ ಸುಮನಸ್ಕ ಮಹಾರಾಜನು ಬ್ರಹ್ಮದೇವನ ಆಜ್ಞಾನುಸಾರವಾಗಿ ದತ್ತು ಮಗನೆಂದೂ, ಮುಕ್ತರಾಜರ್ಷಿಯ ಪರಂಪರೆಯಿಂದ ಬಂದ ಚಿತ್ರಕರಾಜನೂ ಮತ್ತು ಆತನ ಮಕ್ಕಳಿಗೆ ರೋಮಶಋಷಿಯಿಂದ ಶಾಪ ಪ್ರಾಪ್ತವೂ ಚಿತ್ರಕನು ತಪಸ್ಸಿನಿಂದ ಈಶ್ವರನನ್ನು ಮೆಚ್ಚಿಸಿ ಶಾಪವಿಮೋಚನೆಯನ್ನು ಪಡೆದನೆಂದೂ ಬರೆದಿರುತ್ತೇನೆ.

ಮತ್ತು ನಮ್ಮಗಳ ವಂಶಗಳ ವಿವರದಲ್ಲಿ ಹರಿವಂಶದ ಸಂಸ್ಕೃತದ ಮೂಲ ಮರಾಠಿ ತಾತ್ಪರ್ಯದ ಪುಸ್ತಕದಲ್ಲಿನ ಕೆಲವಂಶಗಳನ್ನು ಭಾರತ, ಭಾಗವತ, ರಾಮಾಯಣ ಕನ್ನಡದ ಪುಸ್ತಕಗಳಿಂದಲೂ, ಚಂದ್ರವಂಶದಿಂದ ವಂಶಾವಳಿಯನ್ನು ಪ್ರಾರಂಭಿಸಿ ಸುಮನಸ್ಕ ಮುಕ್ತರಾಜ ಸಂಬಂಧಕ್ಕೆ ಅನ್ವಯಿಸಿರುವ ರಾಜರ ವಂಶಾವಳಿಯನ್ನು ಮಾತ್ರ ಸ್ವೀಕರಿಸಿ ಮಿಕ್ಕ ಭಾಗಗಳನ್ನು ಬಿಟ್ಟಿರುತ್ತೇನೆ. ಪುರಾಣದ ಮತ್ತು ದೇವಿಯ ವಿಚಾರದಲ್ಲಿ ಕೊನೆಯದಾಗಿ ನಾರದ ಭಕ್ತಿತರಂಗಿಣಿ ಎಂಬ ಸಂಸ್ಕೃತ ಮೂಲ ಮರಾಠಿ ತಾತ್ಪರ್ಯದಲ್ಲಿ ಶ್ರೀ ಪಾರ್ವತೀದೇವಿಯ ಬೀಜಾಕ್ಷರ ಮತ್ತು ಚಕ್ರಗಳನ್ನು ಹೇಳುವ ಅಧ್ಯಾಯದಲ್ಲಿ ಶ್ರೀ ನಿಮಿಷಾಂಬಾದೇವಿಯ ಷೋಡಷಾಕ್ಷರೀ ಮಂತ್ರವನ್ನೂ ಮತ್ತು ಚಕ್ರವನ್ನೂ ತೆಗೆದು ಈ ಗ್ರಂಥದಲ್ಲಿ ಬರೆದಿರುತ್ತೇನೆ ಮತ್ತು ಶ್ರೀ ನಿಮಿಷಾಂಬಾ ದೇವಿಯ ಅಷ್ಟೋತ್ತರ ಶತನಾಮಗಳನ್ನು ಪುರಾಣಗಳಿಂದಲೂ ಮತ್ತು ದೇವೀ ಸಹಸ್ರ ನಾಮಗಳಿಂದಲೂ ತೆಗೆದು ಜೋಡಿಸಿ ಈ ಗ್ರಂಥದಲ್ಲಿ ಶ್ರೀ ನಿಮಿಷಾಂಬಾ ಅಷ್ಟೋತ್ತರ ಶತನಾಮಾವಳಿಯನ್ನು ಬರೆದಿರುತ್ತೇನೆ.

(1) ನಾನು 1935ರಲ್ಲಿ ನಮ್ಮ ಬಂಧುಗಳ ಜೊತೆಯಲ್ಲಿ ತಿರುಮಲ ತಿರುಪತಿ ವೆಂಕಟರಮಣಸ್ವಾಮಿ ಸೇವೆಗಾಗಿ ಹೋಗಿದ್ದ ಕಾಲದಲ್ಲಿ ತನ್ನ ಪೂಜ್ಯ ತಂದೆಯವರಾದ ದಿವಂಗತ ಸರಿಗೆ ಕೃಷ್ಣಪ್ಪನವರ ಪರಮಾಪ್ತರೂ ಮತ್ತು ಸ್ನೇಹಿತರಾಗಿದ್ದ ಗೋವಿಂದ ರಾಜಪಟ್ಟಣದಲ್ಲಿ ವಾಸಿಸುತ್ತಿದ್ದ ಶ್ರೀ ವತ್ಸಗೋತ್ರದ ಉದ್ದಂಟಿ ಮನೆತನಕ್ಕೆ ಸೇರಿದ ತಿರುಪತಿ ಎನ್. ಮಲ್ಲಯ್ಯ (ಆರ್ಟಿಸ್ಟ್) ನವರು ನನಗೆ ತಮ್ಮಲ್ಲಿದ್ದ · ನಮ್ಮಗಳ ಜನಾಂಗದ ಶಾಸನಗಳು ಮತ್ತು ಕೆಲವು ಪುರಾಣಕ್ಕೆ ಸಂಬಂಧಪಟ್ಟ ಕಾಗದಗಳೂ, ಆಂಧ್ರ ಭಾಗವತ ಪುರಾಣದ ಗ್ರಂಥಗಳನ್ನು ಕೊಟ್ಟು ನಮ್ಮಗಳ ಕುಲದೇವಿಯಾದ ಶ್ರೀ ನಿಮಿಷಾಂಬಾದೇವಿಯ ಪ್ರಾದುರ್ಭಾವದ ವಿಷಯವನ್ನೂ ನಮ್ಮಗಳ ಕುಲದ ಮೂಲ ಪುರುಷನಾದ ಮುಕ್ತರಾಜರ್ಷಿಯ ಚರಿತ್ರೆಯನ್ನೂ ಬರೆಯಲು ಪ್ರೇರೇಪಿ ಸಿದ್ದಲ್ಲದೆ ಆಶೀರ್ವಾದರೂಪವಾಗಿ ತಮ್ಮಲ್ಲಿ ಸಂಗ್ರಹಿಸಿದ್ದ ಸಕಲ ಮಾಹಿತಿಗಳನ್ನೂ ನನ್ನ ವಶಕ್ಕೆ ಕೊಟ್ಟು ಕಳುಹಿಸಿದರು ಈಗ ಹಾಲಿ ಪಾಕಾಲ ಕೊತ್ತಕೋಟೆಯಲ್ಲಿ ವಾಸಿ ಸುತ್ತಿರುವ ಅವರನ್ನು ಈ ಗ್ರಂಥ ಮುದ್ರಣ ಸಮಯದಲ್ಲಿ ಪ್ರಥಮವಾಗಿ ಸ್ಮರಿಸುವುದು ನನ್ನ ಮುಖ್ಯ ಕರ್ತವ್ಯವಾಗಿದೆ.

ಬೆಂಗಳೂರು ಗವೀಪುರದ ಗೋಸಾಯಿ ಮಠದ ಸ್ವಾಮಿಗಳಾದ ಬ್ರಹ್ಮೈಕ್ಯ ರಾಗಿರುವ ಶ್ರೀ ಶ್ರೀ ಶ್ರೀ ಲವಂಗಭಾರತೀಸ್ವಾಮಿಗಳ ಸನ್ನಿಧಿಯಲ್ಲಿ ನಾನು 1940ರಿಂದ 1961ರವರಗಿನ ಪ್ರವಚನ ಕಾಲದಲ್ಲಿ ಸ್ವಾಮಿಗಳು ತಮ್ಮಲ್ಲಿರುವ ಅಪೂರ್ವ ಗ್ರಂಥ ಗಳಿಂದ ಪ್ರವಚನೆಯ ಮಧ್ಯದಲ್ಲಿ ಶ್ರೀ ನಿಮಿಷಾಂಬಾದೇವಿಯ ಮಹಿಮೆ ಬೀಜಾಕ್ಷರಗಳ ಸಮೇತವಾದ ಮಂತ್ರಸಾರ ಮತ್ತು ಮುಕ್ತರಾಜರ್ಷಿಯ ಸಂಬಂಧವಾದ ವಿಷಯ ಗಳನ್ನು ಆಗಾಗ ಟಿಪ್ಪಣಿ ಬರೆಸಿ ನಾನು ಬರೆದಿರುವ ಈ ಗ್ರಂಥಕ್ಕೆ ಮಹೋಪಕಾರ ಮಾಡಿರುವುದರಿಂದ ನನ್ನ ವೇದಾಂತ ಗುರುಗಳು ಮತ್ತು ಈ ಗ್ರಂಥದ ಮೂಲ

ಬರವಣಿಗೆಗೆ ಪ್ರೋತ್ಸಾಹಕರೂ ಆದ ಸ್ವಾಮಿಗಳ ಪಾದಕಮಲಗಳಿಗೆ ನನ್ನ ಅನಂತಾನಂತ ವಂದನೆಗಳು.

ಈ ಗ್ರಂಥದ ಪರಿಶೋಧಕರಾದ ವೇ. ಬ್ರಂ. ಶ್ರೀ ಎಸ್. ಆರ್. ಕೃಷ್ಣಶಾಸ್ತ್ರಿಗಳು ನಾನು ಮತ್ತು ನನ್ನ ಸ್ನೇಹಿತರಾಗಿದ್ದ ದಿವಂಗತ ಆರ್. ವೆಂಕಟರಮಣರಾಜು ಸಹ ಪ್ರಕಾಶಕರಾಗಿ 1940ರಲ್ಲಿ ಮುದ್ರಿಸಿದ್ದ "ನಿತ್ಯಕರ್ಮವಿಧಿ" ಎಂಬ ಸಂಧ್ಯಾವಂದನೆ ದೇವತಾರ್ಚನೆ ಮತ್ತು ಗೋತ್ರಪ್ರವರಗಳನ್ನೊಳಗೊಂಡಿದ್ದ ಗ್ರಂಥವನ್ನು ಪರಿಶೋಧಿಸಿದ್ದರು. ಶಾಸ್ತ್ರಿಗಳು ನನ್ನ ಸಂಸ್ಕೃತ ವಿದ್ಯಾ ಗುರುಗಳೂ ಆಗಿದ್ದಾರೆ. ಅವರನ್ನು ನಾನು ಈ ಗ್ರಂಥದ ಕೈಬರಹದ ಮೂಲವನ್ನು ಕೊಟ್ಟು ಪರಿಶೋಧಿಸಿ ಕೊಡಬೇಕೆಂದು ಪ್ರಾರ್ಥಿಸಿದ್ದಕ್ಕೆ ಸಮ್ಮತಿಸಿ ಅವರಿಗೆ ತುಂಬಾ ತೊಂದರೆಯ ಕಾಲವಾದರೂ ಲಕ್ಷಿಸದೆ ನನ್ನ ಮೇಲಿನ ಪ್ರೀತಿಗೆ ನನ್ನ ಕೈಬರಹದ ಪ್ರತಿಗಳಲ್ಲಿ ಶ್ಲೋಕ ಮತ್ತು ತಾತ್ಪರ್ಯದ ಸಕಲವನ್ನೂ ತಿದ್ದಿ ಸಂಪೂರ್ಣವಾಗಿ ಪರಿಶೋಧಿಸಿ ಕೊಟ್ಟಿರುವುದಕ್ಕೆ ನಾನು ಅವರಿಗೆ ಅತ್ಯಂತ ಚಿರಋಣಿಯಾಗಿದ್ದೇನೆ.

ಈ ಗ್ರಂಥದಲ್ಲಿನ ಸಂಧ್ಯಾವಂದನೆ, ದೇವತಾರ್ಚನೆ, ದೇವೀ ಪೂಜಾವಿಧಾನ ಮತ್ತು ಪ್ರವರಖಂಡಗಳನ್ನು ಪುರೋಹಿತರಾದ ಕೋಟಗಲ್ಲಿನ ವೇ. ಬ್ರಂ. ಶ್ರೀ ಈಶ್ವರಂ ಕೆ. ಸೀತಾರಾಮಶಾಸ್ತ್ರಿಗಳು ನನ್ನ ಬರಹವನ್ನು ತಿದ್ದಿ ಸರಿಪಡಿಸಿಕೊಟ್ಟಿರುವುದಕ್ಕಾಗಿ ಶಾಸ್ತ್ರಿಗಳಿಗೆ ನನ್ನ ಅತ್ಯಂತ ಧನ್ಯವಾದಗಳು. ಈ ಗ್ರಂಥದ ಮುಕ್ತರಾಜ ಪುರಾಣದ ತಾತ್ಪರ್ಯಕ್ಕೆ ಸಹಾಯಕರಾಗಿ ಪ್ರೇರೇಪಿಸಿ ಅದನ್ನು ಸರ್ವಾಂಗ ಸುಂದರವಾಗಿ ಶೋಭಿಸುವುದಕ್ಕೆ ಕಾರಣರಾದ ಚಿಂತಾಮಣಿಯ ವೇ. ಬ್ರಂ. ಶ್ರೀ ದೇವರಕೊಂಡ ಕೆ. ಶ್ರೀನಿವಾಸ ಶಾಸ್ತ್ರಿಗಳಿಗೆ ನನ್ನ ಅತ್ಯಂತ ಧನ್ಯವಾದಗಳು.

ಈ ಗ್ರಂಥವನ್ನು ಪ್ರಕಾಶಿಸಲು ಒಪ್ಪಿ ಇದಕ್ಕೆ ತಗಲಿರುವ ಸಕಲ ವೆಚ್ಚವನ್ನು ಒಬ್ಬರೇ ವಹಿಸಿಕೊಂಡು ಇದಕ್ಕಾಗಿ ನನ್ನ ಜೊತೆಯಲ್ಲಿ ಒಂದು ವರ್ಷದಿಂದ ಶ್ರಮವಹಿಸಿರುವ ಶ್ರೀ ವತ್ಸಗೋತ್ರದ ಉದ್ದಂಟಿ ಮನೆತನದ ಬಿ. ಎನ್. ಶ್ರೀನಿವಾಸರಾಜುರವರಿಗೆ ನಾನು ಚಿರಋಣಿಯಾಗಿದ್ದೇನೆ. ಅಲ್ಲದೆ ಅವರು ಈಗ ಸುಮಾರು 5 ವರ್ಷಗಳ ಹಿಂದೆ ನನ್ನಲ್ಲಿಗೆ ಬಂದು ನನ್ನಲ್ಲಿದ್ದ ಸಂಧ್ಯಾವಂದನೆಯ ಪುಸ್ತಕದಲ್ಲಿನ ಶ್ರೀ ನಿಮಿಷಾಂಬಾದೇವಿಯ ಭಾವಚಿತ್ರವನ್ನು ಕೇಳಿ ತೆಗೆದುಕೊಂಡು ಶ್ರೀ ದೇವಿಯ ಗರ್ಭಗುಡಿಯನ್ನು ಕಟ್ಟಿಸಬೇಕೆಂದು ಸಂಕಲ್ಪಿಸಿದವರು ಈಗ ಶ್ರೀ ನಿಮಿಷಾಂಬಾದೇವಿಯ ದೊಡ್ಡ ಮಂದಿರವನ್ನೇ ಕಟ್ಟಲು ಪ್ರಯತ್ನಿಸಿ ಅದಕ್ಕಾಗಿ ಸುಮಾರು ಒಂದು ಲಕ್ಷ ರೂಪಾಯಿಗಳ ದೇವಸ್ಥಾನದ ಕಟ್ಟಡದ ಶಿಲ್ಪಿ ಕಲಾ ವೈಭವವನ್ನೂ ಮತ್ತು ಜಗದಂಬೆಯಾದ ಶ್ರೀ ನಿಮಿಷಾಂಬಾದೇವಿಯ ಮೂಲ ವಿಗ್ರಹವೇ ಮೊದಲಾದ ವಿಗ್ರಹಗಳೂ, ಗಂಧರ್ವರು, ಲಕ್ಷ್ಮೀ, ಸರಸ್ವತೀ, ಗಣಪತಿ, ಕುಮಾರಸ್ವಾಮಿ ಮೊದಲಾದ ದ್ವಾರಪಾಲಕರು, ದ್ವಾರಸ್ತಂಭಗಳು, ಗರ್ಭಗುಡಿ, ಅರಮಂಡಪ, ಸುನಾಸಿನಗಳೇ ಮೊದಲಾದ ಎಲ್ಲಾ ಕೆಲಸಗಳನ್ನು ತಾವೊಬ್ಬರೇ ಮಾಡಿಸಿರುತ್ತಾರೆ.

ಅತ್ಯಂತ ಶೀಘ್ರ ಕಾಲದಲ್ಲೇ ಬೆಂಗಳೂರಿನಲ್ಲಿ ಶ್ರೀ ನಿಮಿಷಾಂಬಾದೇವಿಯ ಮಂದಿರವು ದಕ್ಷಿಣ ಭಾರತದ ಕಲಾವೈಭವದ ಒಂದು ಪ್ರಮುಖ ಮಂದಿರವಾಗಲಿದೆ, ಅವರು ಸಾಧಿಸುತ್ತಿರುವ ದೇವೀ ಮಂದಿರದ ಕಾರ್ಯವು ಶೀಘ್ರವಾಗಿ ನೆ ರ ವೇ ರ ಲೆಂ ದು ಶ್ರೀ ನಿಮಿಷಾಂಬಾದೇವಿಯನ್ನು ಪ್ರಾರ್ಥಿಸಿ ಅವರು ಮಾಡುತ್ತಿರುವ ಉದಾರ ಕಾರ್ಯಗಳಿಗೂ ಗ್ರಂಥದ ಪ್ರಕಾಶನಕ್ಕೆ ವಹಿಸಿದ ಶ್ರಮಕ್ಕೂ ನಾನು ಅವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥದ ಕಾರ್ಯಗಳಲ್ಲಿ ನನ್ನ ಜೊತೆಯಲ್ಲಿ ಶ್ರಮವಹಿಸಿದ ಚಿರಂಜೀವಿಗಳಾದ ಎಸ್. ಕೃಷ್ಣರಾಜು, ಪಿ. ಕೃಷ್ಣರಾಜು, ಎನ್. ರಾಮಚಂದ್ರರಾಜು ಇವರುಗಳಿಗೆ ಶ್ರೀ ನಿಮಿಷಾಂಬಾದೇವಿಯು ಆ ಯು ರಾ ರೋ ಗ್ಯ ಧನಧಾನ್ಯ ಸಂಪದಗಳನ್ನು ಅನುಗ್ರಹಿಸಲೆಂದು ದೇವಿಯನ್ನು ಪ್ರಾರ್ಥಿಸುತ್ತೇನೆ.

ಈ ಗ್ರಂಥದ ಮುದ್ರಣ ಕಾರ್ಯದಲ್ಲಿ ಮುದ್ರಣ ಪ್ರತಿಗಳನ್ನು ತಿದ್ದಲು ನೆರವಾದ ನನ್ನ ಮಕ್ಕಳಾದ ಜಿ. ಲಕ್ಷ್ಮಣರಾಜು ಮತ್ತು ಜಿ. ಚಕ್ರಪಾಣಿ ಇವರಿಗೆ ದೇವಿಯು ಅನುಗ್ರಹಿಸಲೆಂದು ಭಗವತಿಯನ್ನು ಪ್ರಾರ್ಥಿಸುತ್ತೇನೆ,

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿ ನಮಗೆ ನೆರವಾದ ವರ್ಮ ಪ್ರಿಂಟರ್ಸ್ ಮಾಲೀಕರಾದ ವಿ. ರಾಮರಾಜು ಮತ್ತು ವಿ. ಆಂಜನೇಯರಾಜುರವರಿಗೂ ಮತ್ತು ಬೈಂಡಿಂಗ್ ಕೆಲಸದಲ್ಲಿ ನಿರತರಾದವರೆಲ್ಲರಿಗೂ ನನ್ನ ಅನಂತ ಧನ್ಯವಾದಗಳು.

ಈ ಗ್ರಂಥವನ್ನು ಪೂರ್ವಕಾಂಡ ಮತ್ತು ಉತ್ತರಕಾಂಡ ಎಂಬುದಾಗಿ ಎರಡು ಭಾಗಗಳಾಗಿ ಮಾಡಿ, ಪೂರ್ವಕಾಂಡದಲ್ಲಿ ಮುಕ್ತರಾಜನ ಪುರಾಣವನ್ನೂ, ಉತ್ತರ ಕಾಂಡದಲ್ಲಿ ಸಂಧ್ಯಾವಂದನೆ, ದೇವತಾರ್ಚನೆ, ದೇವೀಪೂಜಾವಿಧಾನ ಶಾಸನಗಳು, ಗೋತ್ರಪ್ರವರಖಾಂಡ ನಮ್ಮಗಳ ವಂಶಾವಳಿಗಳು ಮತ್ತು ನಮ್ಮ ಜನಾಂಗದವರು ಲೋಕ ಕಲ್ಯಾಣಾರ್ಥವಾಗಿ ಸೇವೆ ಸಲ್ಲಿಸುತ್ತಿರುವ ಕ್ಷೇತ್ರಗಳ ವಿವರವನ್ನು ಕೊಟ್ಟಿರುತ್ತೇನೆ. ಪೂರ್ವಕಾಂಡದಲ್ಲಿನ ಮುಕ್ತರಾಜಪುರಾಣದ ಮೂಲ ಶ್ಲೋಕಗಳಿಗೆ ಮುಕ್ತರಾಜ ತಾತ್ಪರ್ಯವೆಂಬ ಕನ್ನಡ ತಾತ್ಪರ್ಯವನ್ನು ಬರೆದಿರುವೆನು. ಮುಕ್ತರಾಜ ಪುರಾಣದ ಹದಿನೆಂಟನೆಯ ಅಧ್ಯಾಯದ ಕೊನೆಯಲ್ಲಿ ಮುಕ್ತರಾಜ ತಾತ್ಪರ್ಯವು ಸಂಪೂರ್ಣವೆಂದು ಬರೆದಿರುತ್ತೇನೆ. ಮುಕ್ತರಾಜಪುರಾಣವಾದ ಬ್ರಹ್ಮಾಂಡಪುರಾಣದಲ್ಲಿರುವ ನಮ್ಮ ಚರಿತ್ರೆಯಲ್ಲಿ ಮುಖ್ಯವಾಗಿ ಬರುವ ಅಂಶವೆಂದರೆ ನಮ್ಮ ವಂಶಪರಂಪರೆಯವರು ವೇದೋಕ್ತಕರ್ಮಮಾರ್ಗದಲ್ಲಿಯೇ ಇರಬೇಕೆಂಬುದು ಪುರಾಣದ ಮೂಲಪುರುಷನಾದ ಸುಮನಸ್ಕ ಮಹಾರಾಜನ ಕಲ್ಯಾಣದ ಪ್ರಥಮ ಘಟ್ಟದಿಂದ ಪ್ರಾರಂಭವಾಗಿ ಕೊನೆಯದಾದ ಚಿತ್ರಕನ ಮತ್ತು ಆತನ ಮಕ್ಕಳಿಗೆ ರೋಮಶ ಋಷಿಯಿಂದ ಬಂದ ಶಾಪದವರೆವಿಗೂ ವೇದೋಕ್ತಕರ್ಮಪ್ರಾಧಾನ್ಯವನ್ನು ಹೇಳಿದೆ. ಆದ್ದರಿಂದ ನಮ್ಮ ಕುಲಬಾಂಧವರು ಇದನ್ನು ಗಮನಿಸಿ ಋಷಿ ಶಾಪವಿಮೋಚನೆಗಾಗಿ ಪರಮೇಶ್ವರನು

ಅಪ್ಪಣೆ ಕೊಟ್ಟಿರುವ ಪ್ರಕಾರ ನಾವುಗಳು ವೇದೋಕ್ತಕರ್ಮನಿರತರಾಗಿ ನಮ್ಮಗಳ ಶ್ರೇಯೋಭಿವೃದ್ಧಿಯನ್ನು ಪಡೆಯಬೇಕಾಗಿದೆ.

ಇದರ ಜೊತೆಗೆ ನಾನು ಗ್ರಂಥಕ್ಕೆ ಇಟ್ಟಿರುವ ಹೆಸರಿಗೆ ಸಮನಾಗಿರಲೆಂದು ನಮ್ಮ ಜನಾಂಗದ ವಂಶಾವಳಿಗಳು ಮತ್ತು ಕುಶಲ ಕರ್ಮಗಳಲ್ಲಿ ವಿವಿಧ ರೀತಿಯಿಂದ ಪ್ರಜ್ವಲಿಸುತ್ತಿರುವ ನಮ್ಮ ಜನಾಂಗದವರ ಸೂಕ್ಷ್ಮ ಪರಿಚಯವನ್ನೂ ಕೊಟ್ಟಿರುತ್ತೇನೆ. ನಮ್ಮ ಜನಾಂಗದ ವಿದ್ಯಾವಂತರು ಇದಕ್ಕಿಂತಲೂ ಹೆಚ್ಚಿನದನ್ನು ಶೇಖರಿಸಿ ಸಂಶೋಧನೆ ಮಾಡಿ ಕಳುಹಿಸಿದರೆ ನಾನು ಅವರುಗಳಿಗೆ ಅತ್ಯಂತ ಋಣಿಯಾಗಿರುವನಲ್ಲದೆ ಮುಂದಿನ ಮುದ್ರಣದಲ್ಲಿ ಅದನ್ನು ಅಗತ್ಯವಾಗಿ ಪ್ರಕಟಿಸುತ್ತೇನೆ. ಕೊನೆಯದಾಗಿ ನಮ್ಮ ಜನಾಂಗದವರೆಲ್ಲರೂ ಈ ಗ್ರಂಥವನ್ನು ಓದಿ ಇದರಲ್ಲಿರುವ ಸಾರವನ್ನು ಸ್ವೀಕರಿಸಿ ಅಸಾರವನ್ನು ಬಿಟ್ಟು ನಮ್ಮ ಕುಲದೇವಿಯನ್ನು ಪ್ರತಿದಿನವೂ ಅವರವರ ಶಕ್ತ್ಯಾನುಸಾರ ಪೂಜೆಮಾಡಿ ನಮ್ಮಗಳಿಗೆ ಬಂದಿರುವ ಆರ್ಯರೆಂಬ ವರಕ್ಕೆ ಅನುಗುಣವಾಗಿ ವೇದೋಕ್ತ ಕರ್ಮಗಳನ್ನು ಅನೂಚಾನವಾಗಿ ನಡೆಸಿಕೊಂಡು ದೇವಬ್ರಾಹ್ಮಣ ಗುರುಪೂಜಾ ನಿರತ ರಾಗಿ ಶ್ರೀ ನಿಮಿಷಾಂಬಾ ಪರಮೇಶ್ವರರನ್ನೂ ಶ್ರೀ ಲಕ್ಷ್ಮೀನಾರಾಯಣರನ್ನೂ ಮತ್ತು ತಮ್ಮಗಳ ಇಷ್ಟದೇವರುಗಳನ್ನೂ ಪೂಜಿಸಿ ಕೃತಾರ್ಥರಾಗಬೇಕೆಂದು ನಮ್ಮ ಜನಾಂಗ ದವರೆಲ್ಲರನ್ನೂ ಪ್ರಾರ್ಥಿಸುತ್ತೇನೆ.

ಇತಿ, ಗ್ರಂಥಕರ್ತ,

ಪಾನಗಂಟಿ ಕೆ. ಗೋಪಾಲರಾಜು

ಶ್ರೀರಸ್ತು

ಶ್ರೀ ನಿಮಿಷಾಂಬಾ ಪರಮೇಶ್ವರ್ಯೈನಮಃ

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣ

ಪೂರ್ವಖಾಂಡ

ವಿಷಯಾನುಕ್ರಮಣಿಕೆ

ಒಂದನೇ ಅಧ್ಯಾಯ

ಮಾನವಸೃಷ್ಟಿ 2

ವರ್ಣಸಂಕರ 5

ರಾಜಧರ್ಮ 8

ಚಂದ್ರವಂಶವರ್ಣನೆ 16

ಎರಡನೇ ಅಧ್ಯಾಯ

ಸುಮನಸ್ಕನ ಜನನ 20

ಸುಮನಸ್ಕನ ತಪಸ್ಸು 22

ಸುಮನಸ್ಕನ ತಪೋಭಂಗ 24

ಸುಮನಸ್ಕನಿಗೆ ವರಪ್ರಧಾನ 29

ಮೂರನೇ ಅಧ್ಯಾಯ

ಸತೀಪರೀಕ್ಷೆ 33

ಸುಶೀಲಾ ಸುಮನಸ್ಕ ವಿವಾಹ 39

ಸುಶೀಲಾ ಸುಮನಸ್ಕ ವಿಹಾರ 42

ಸುಮನಸ್ಕನಲ್ಲಿಗೆ ಗೌತಮಾಗಮನ 44

ನಾಲ್ಕನೇ ಅಧ್ಯಾಯ

ಜಾನುಮಂಡಲ ಸುಮಂಡಲರ ಜನನ 47

ಜಾನುಮಂಡಲ ಸುಮಂಡಲರ ತಪಸ್ಸು 50

ಜಾನುಮಂಡಲ ತಪೋಭಂಗ 52

ಜಾನುಮಂಡಲನ ತಪೋವಿಘ್ನಕ್ಕೆ ಊರ್ವಶಿಯ ಪ್ರವೇಶ 54

ಐದನೇ ಅಧ್ಯಾಯ

ಜಾನುಮಂಡಲನ ತಪೋವಿಘ್ನ ಅಶಕ್ಯವೆಂದು ಊರ್ವಶಿಯ ನಿರೂಪಣೆ 58

ಇಂದ್ರಾದಿಗಳ ಭಯ 60

ಜಾನುಮಂಡಲನಿಗೆ ವರಪ್ರಧಾನ 61

ಜಾನುಮಂಡಲ ರಾಜ್ಯಭಾರ 64

ಆರನೇ ಅಧ್ಯಾಯ

ದೇವೇಂದ್ರಾದಿಗಳಿಗೆ ಭಯ 67

ದೇವತೆಗಳಿಂದ ಬ್ರಹ್ಮನ ಸ್ತುತಿ 68

ಬ್ರಹ್ಮದೇವತೆಗಳಿಂದ ವಿಷ್ಣುಸ್ತುತಿ 69

ಬ್ರಹ್ಮವಿಷ್ಣುಗಳಿಂದ ಈಶ್ವರನ ಸ್ತುತಿ 70

ಏಳನೇ ಅಧ್ಯಾಯ

ಪೌಂಡರೀಕಯಾಗ ಪ್ರೇರಣೆ 75

ಯಾಗಕ್ಕಾಗಿ ಸುಮನಸ್ಕನ ತಪಸ್ಸು 78

ಎಂಟನೇ ಅಧ್ಯಾಯ

ಮುಕ್ತ ಋಷ್ಯುತ್ಪನ್ನ 80

ಮುಕ್ತಕಋಷಿಗೆ ಅಸ್ತ್ರಪ್ರಧಾನ 83

ಒಂಬತ್ತನೇ ಅಧ್ಯಾಯ

ಯಾಗಕ್ಕೆ ಸ್ಥಳ ನಿರ್ದೇಶನ 89

ಯಾಗ ಶಾಲಾ ನಿರ್ಮಾಣ 95

ಹತ್ತನೇ ಅಧ್ಯಾಯ

ಪೌಂಡರೀಕ ಯಾಗ ಪ್ರಾರಂಭ 97

ಶ್ರೀ ನಿಮಿಷಾಂಬ ಪ್ರಾದುರ್ಭಾವ 100

ಹನ್ನೊಂದನೇ ಅಧ್ಯಾಯ

ಜಾನುಮಂಡಲನು ಯುದ್ಧಕ್ಕೆ ಪ್ರಯಾಣ ಮಾಡುವುದು 107

ಮುಕ್ತಕಋಷಿಯ ಅಗ್ನಿ ದೇವಪ್ರಾರ್ಥನೆ 108

ಜಾನುಮಂಡಲನ ವಧೆ 110

ಪೌಂಡರೀಕ ಯಾಗ ಸಂಪೂರ್ಣ 117

ಹನ್ನೆರಡನೇ ಅಧ್ಯಾಯ

ಮುಕ್ತಕ ಋಷಿಯ ವಧೂ ಆಗಮನ 121

ಕಲ್ಯಾಣಮಂಟಪ ರಚನೆ 123

ಹದಿಮೂರನೇ ಅಧ್ಯಾಯ

ಮುಕ್ತರಾಜ ಸುದಕ್ಷಿಣಾದೇವಿಯರ ವಿವಾಹ 128

ಪುಣ್ಯಾಹ ಮತ್ತು ಸ್ವಸ್ತಿವಾಚನ 128
ವಧೂವರರ ಪೂಜೆ 128
ಮುಹೂರ್ತದ ದಿನ ತೈಲಾಭ್ಯಂಜನ 129
ಸಮಾವರ್ತನ ಕರ್ಮ ಮತ್ತು ಕಾಶೀಯಾತ್ರಾ 130
ಮುಕ್ತರಾಜ ಸುದಕ್ಷಿಣೆಯರ ವಿವಾಹ 130
ಕನ್ಯಾದಾನ 131
ಮಾಂಗಲ್ಯಧಾರಣೆ 132
ಅಕ್ಷತಾರೋಪಣೆ 132
ನಾಕಬಲಿಪೂಜಾ 133

ಹದಿನಾಲ್ಕನೇ ಅಧ್ಯಾಯ

ಮುಕ್ತರಾಜ ಸುದಕ್ಷಿಣೆಯರ ವಿಹಾರ 137
ಚಿತ್ರಕನೆಂಬ ಗಂಧರ್ವ ದಂಪತಿಗಳ ಶಾಪವಿಮೋಚನೆ 140

ಹದಿನೈದನೇಅಧ್ಯಾಯ

ಮುಕ್ತರಾಜನ ರಾಜ್ಯಭಾರ 146
ವಿಶ್ವಾಮಿತ್ರಾಗಮನ 147
ಸೂರ್ಯೋಪಾಸನೆ 149

ಹದಿನಾರನೇ ಅಧ್ಯಾಯ

ಮುಕ್ತಕಾಂತೆಗೆ ಪುಂಸವನ ಸೀಮಂತನ 155
ನಾಮಕರಣ ಮಹೋತ್ಸವ 159
ಮುಕ್ತರಾಜ ಪುತ್ರರ ವಿವಾಹ 161
ಯೋಗಿದರ್ಶನ 165
ಮುಕ್ತರಾಜನ ಜ್ಞಾನ ಸಾಮ್ರಾಜ್ಯ 168

ಹದಿನೇಳನೇ ಅಧ್ಯಾಯ

ಮುಕ್ತರಾಜವಂಶ ಪರಂಪರಾ 173
ಚಿತ್ರಕ ಮತ್ತು ಅವನ ಮಕ್ಕಳಿಗೆ ರೋಮಶಋಷಿಯ ಶಾಪ 178

ಹದಿನೆಂಟನೇ ಅಧ್ಯಾಯ

ಪರಮೇಶ್ವರನಿಂದ ಶಾಪವಿಮೋಚನೆ 184
ಚಿತ್ರಕಲಾಭಿವೃದ್ಧಿ 189
ಕಥಾಶ್ರವಣಫಲ 191

ಮಂಗಳಂ

ಉತ್ತರಖಾಂಡ

	ಪೇಜು ನಂ.
ಸಂಧ್ಯಾಕಾಲ ವಿಚಾರ	1
ಸಂಧ್ಯಾದೇವಿ	2
ಕರ್ಮಪ್ರಾಧಾನ್ಯತೆ	3
ಕಾಲನಿರ್ಣಯ	4
ಸಂಧ್ಯಾವಂದನೆ	7
ಪೂಜಾ ವಿವರಣೆ	25
ದೇವತಾರ್ಚನೆ	28
ಶ್ರೀ ನಿಮಿಷಾಂಬಾದೇವಿ ಪೂಜಾ ವಿಧಾನ	45
ಶ್ರೀ ತ್ರಿಪುರಸುಂದರೀ ನಿಮಿಷಾಂಬಾದೇವಿಯ ಚಕ್ರ	49
ಸೂರ್ಯಾಷ್ಟಕ	50
ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ಷೋಡಷಾಕ್ಷರೀ ಮಹಾಮಂತ್ರ	51
ಶ್ರೀ ನಿಮಿಷಾಂಬಾದೇವಿ ಪೂಜಾ	55
ವಿಜಯನಗರ ಶಾಸನ	81
ಚಂದ್ರಗಿರಿ ಶಾಸನ	86
ಕಾಂಚೀನಗರದ ಶಾಸನ	93
ಗೋತ್ರ ಪ್ರವರಗಳು ವಂಶಾವಳಿಗಳು	97
ಶಾಂಡಿಲ್ಯಸ ಗೋತ್ರ	102 107
ದತ್ತಾತ್ರೇಯಸ ,,	115
ಕಾಶ್ಯಪಸ ,,	117
ಪರಾಶರಸ ,,	120
ಸನಂದನಸ ,,	121
ವ್ಯಾಸಮುನಿಸ ,,	122
ಶ್ರೀವತ್ಸಸ ,,	123
ರೋಮಶಸ ,,	127
ವಿಶ್ವಾಮಿತ್ರಸ ,,	128
ದೂರ್ವಾಸ ,,	130
ಭಾರದ್ವಾಜಸ ,,	137 140
ವಸಿಷ್ಠಸ ,,	147
ಕೌಂಡಿನ್ಯಸ ,,	154

ಅತ್ರೇಯಸ ಗೋತ್ರ	162
ಆಂಗೀರಸ ,,	165
ಗಾರ್ಗೇಯಸ ,,	167
ಹರಿತಸ ,,	169
ಗೌತಮಸ ,,	172
ಹರೀಶಸ ,,	175
ಜಮದಗ್ನಿಸ ,,	177
ಸುವರ್ಣಸ ,,	178
ಕುಶಲಸ ,,	179
ಕೌಶಿಕಸ ,,	180
ಕಪಿಲಸ ,,	182
ಮೌದ್ಗಲ್ಯಸ ,,	183
ಅಗಸ್ತ್ಯಸ ,,	184
ಚ್ಯವನಸ ,,	185
ಧೌಮ್ಯಸ ,,	186
ಮೌಸಲಸ ,,	187
ನಾರದಮುನಿಸ ,,	188
ಶಾಂಖ್ಯಾಯನಸ ,,	188
ವೈಶಂಪಾಯನಸ ,,	189
ಅನುಬಂಧ ೧	i to xvii
ಅನುಬಂಧ ೨	xviii to xLiv

ಪೂರ್ವಖಾಂಡ

ಶ್ರೀರಸ್ತು

॥ ಶ್ರೀ ನಿಮಿಷಾಂಬಾ ಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣವು

ಶ್ರೀ ವೇದವ್ಯಾಸ ಪ್ರಣೀತವಾದ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದಲ್ಲಿನ ಮುಕ್ತರಾಜ ಪುರಾಣವು.

ಮಂಗಳ ಶ್ಲೋಕ

ಚೈತನ್ಯಂ, ಸರ್ವಗಂ ಸರ್ವಂ ಸರ್ವಂ ಸರ್ವಭೂತಗುಹಾಶಯಮ್ ।
ಯತ್ ಸರ್ವ ವಿಷಯಾತೀತಂ ತಸ್ಮೈ ಸರ್ವವಿದೇನಮಃ ॥

ತಾ॥ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವುದಾಗಿಯೂ ಎಲ್ಲವೂ ತಾನೇ ಆಗಿರುವದಾಗಿಯೂ ಸರ್ವಭೂತಗಳ ಹೃದಯಕಮಲದ ಗುಹೆಯಲ್ಲಿರುವದಾಗಿಯೂ ಸರ್ವ ವಿಷಯಗಳನ್ನೂ ಮೀರಿರುವದಾಗಿಯೂ ಇರುವ ಚೈತನ್ಯವು ಯಾವುದುಂಟೋ ಅಂಥಾ ಸರ್ವಜ್ಞ ಚೈತನ್ಯವು ನಾನು ಕೈಕೊಂಡಿರುವ ಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಿಸಲೆಂದು ಪ್ರಾರ್ಥಿಸುತ್ತೇನೆ.

ಕುಲದೇವತಾ ಪ್ರಾರ್ಥನೆ

ನಮಸ್ತೇ ಪಾರ್ವತೀದೇವಿ ಕೈಲಾಸ ಘನವಾಸಿನಿ ।
ಕಮಲಾಸನ ಕೌಮಾರಿ ಶ್ರೀ ನಿಮಿಷಾಂಬಾ ನಮೋಸ್ತುತೇ ॥

ತಾ॥ ಕಮಲಾಸನನ ಕುಮಾರಿಯಾಗಿ ಕೈಲಾಸಪತಿಯಾಗಿಯೂ ಸಕಲ ಚರಾಚರಗಳಿಗೆ ಅಧಿಪತಿಯಾಗಿರುವ ಪರಮೇಶ್ವರನಿಗೆ ಅರ್ಧಾಂಗಿಯಾದ ಪಾರ್ವತೀದೇವಿಯೇ ಮುಕ್ತರಾಜನ ಸ್ತೋತ್ರದಿಂದ ಸುಪ್ರೀತಳಾಗಿ ನಿಮಿಷಮಾತ್ರದಲ್ಲಿ ನಿಮಿಷಾಂಬಾ ದೇವಿಯೆಂಬ ಅಭಿನಾಮದಿಂದ ಆವಿರ್ಭವಿಸಿ ಮುಕ್ತರಾಜನ ವಂಶವನ್ನುದ್ಧರಿಸಿದ ಜಗಜ್ಜನನಿಯಾದ ನಿಮಿಷಾಂಬಾದೇವಿಯೇ ಮುಕ್ತರಾಜಪುರಾಣಕ್ಕೆ ಮುಕ್ತರಾಜ ಚರಿತವೆಂಬ ತಾತ್ಪರ್ಯವನ್ನು ಬರೆಯಲುದ್ದೇಶಿಸಿರುವ ಮುಕ್ತರಾಜವಂಶದ ಶ್ಯಾಂಡಿಲ್ಯಸ ಗೋತ್ರದ ನನಗೆ ವಾಗ್ದೇವತಾ ರೂಪಳಾದ ನೀನು ನಿಮಿಷ ನಿಮಿಷಗಳಲ್ಲಿಯೂ ನನ್ನ ಬುದ್ಧಿಯನ್ನು ಪ್ರಕಾಶಗೊಳಿಸಿ ನಾನು ಕೈಗೊಂಡಿರುವ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣ ಕಾರ್ಯವನ್ನು ನಿರ್ವಿಘ್ನವಾಗಿ ನೆರವೇರಲು ನನ್ನನ್ನು ಉದ್ಧರಿಸು.

ಇಷ್ಟದೇವತಾ ಪ್ರಾರ್ಥನೆ

ಶ್ರೀರಾಮಚಂದ್ರ ಶ್ರಿತಪಾರಿಜಾತ ।
ಸಮಸ್ತಕಲ್ಯಾಣ ಗುಣಾಭಿರಾಮ ॥

ಸೀತಾಮುಖಾಂಭೋರುಹಚಂಚರೀಕೋ ।
ನಿರಂತರಂ ಮಂಗಳಮಾತನೋತು ॥

ತಾ॥ ಸಕಲ ಲೋಕಪೂಜ್ಯನಾಗಿಯೂ, ನಿನ್ನನ್ನು ನಂಬಿದ ಭಕ್ತರನ್ನು ಕಾಪಾಡುವುದರಲ್ಲಿ ಅಗ್ರಗಣ್ಯನಾಗಿಯೂ, ಸಮಸ್ತ ಕಲ್ಯಾಣ ಗುಣಗಳಿಂದ ಶೋಭಿಸುತ್ತಾ ಲೋಕಮಾರ್ಗದರ್ಶನಾಗಿಯೂ ಸಂಸಾರದಲ್ಲಿ ತೊಳಲುತ್ತಿರುವ ಪಾಮರನಿಗೆ ನಿನ್ನ ನಾಮಧ್ಯಾನದಿಂದಲೇ ಮುಕ್ತಿಯನ್ನು ಕೊಡುವವನಾಗಿಯೂ ಲೋಕಮಾತೆಯಾದ ಸೀತಾದೇವಿಯ ಮನೋವಲ್ಲಭನೂ ಮನೋಪರಿಪೂರ್ಣನೂ ಪರಮಪಾವನನೂ ಪರಮಾತ್ಮಸ್ವರೂಪನೂ ಆದ ಶ್ರೀರಾಮಚಂದ್ರನೇ ನಿನ್ನನ್ನೇ ನನ್ನ ಮನೋದೈವವಾಗಿ ನೆನೆಯುತ್ತಿರುವ ನನ್ನ ಸಕಲ ಮನೋರಥಗಳನ್ನು ಸಲ್ಲಿಸುವವನಾಗಿಯೂ ಇರುವ ಜಾನಕೀರಮಣನಾದ ಶ್ರೀರಾಮಮೂರ್ತಿಯೇ ನಾನು ಮಾಡುತ್ತಿರುವ ಪುರಾಣಗ್ರಂಥ ಕಾರ್ಯವನ್ನು ಸಫಲಗೊಳಿಸಿ ನನ್ನನ್ನು ಉದ್ಧರಿಸು.

ಗ್ರಂಥಕರ್ತನ ವಂಶಾವಳಿ

ಮುಕ್ತರಾಜವಂಶದ ಶಾಂಡಿಲ್ಯಸ ಗೋತ್ರದ ಪಾನಗಂಟಿ ಮನೆತನದವರು
ಕರ್ನಾಟಕ ರಾಜಧಾನಿಯಾದ ಬೆಂಗಳೂರಿಗೆ ಮೊದಲು ಬಂದು
ನೆಲಸಿದ ಮೂಲಪುರುಷನಾದ ಗೋಪಾಲಯ್ಯನ ವಂಶಾವಳಿ

ಮೂಲಪುರುಷ ಗೋಪಾಲಯ್ಯ

ಗುರುಮೂರ್ತಪ್ಪ

ಪೆದ್ದರಂಗಯ್ಯ ಕೃಷ್ಣಪ್ಪ ಪಿಲ್ಲರಂಗಯ್ಯ ಸುಬ್ಬಯ್ಯ

ಗೋಪಾಲಯ್ಯ

ಪೆದ್ದರಂಗಯ್ಯ ಚಿನ್ನರಂಗಯ್ಯ

ಪಿಲುವಯ್ಯ ರಾಯಪ್ಪ ಕಂಚಿರಂಗಯ್ಯ ವೆಂಕಟನಾರಣಪ್ಪ

ಮುನಿಕೃಷ್ಣಪ್ಪ ಪೆದ್ದಕೃಷ್ಣಪ್ಪ ಚಿನ್ನಕೃಷ್ಣಪ್ಪ ಗೋಪಾಲಯ್ಯ ಆಫೀಸು ಪಿಲ್ಲಯ್ಯ

ಶೆಟ್ಟಿಪಾಪಯ್ಯ ವೆಂಕಟಪ್ಪ ಶ್ಯಾಮಯ್ಯ ಕೃಷ್ಣಪ್ಪ

ಪಾನಗಂಟಿ ಕೆ. ಗೋಪಾಲರಾಜು,
ಗ್ರಂಥಕರ್ತ.

ಶ್ರೀರಸ್ತು

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತಋಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಪುರಾಣವು

ಶ್ರೀ ಮುಕ್ತರಾಜಋಷ್ಯುತ್ಪನ್ನ ಪುರಾಣವು

ಶ್ರೀ ಗಣಪತಿ ಪ್ರಾರ್ಥನೆ

ಶುಕ್ಲಾಂಬರಧರಂವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ॥

ಶ್ರೀ ದೇವಿ ಸ್ತುತಿ

ಚತುರ್ಭುಜೇ ಚಂದ್ರಕಳಾವತಂಸೇ ಕುಚೋನ್ನತೇ ಕುಂಕುಮ ರಾಗಶೋಣೇ ।
ಪುಂಡ್ರೇಕ್ಷುಪಾಶಾಂಕುಶಪುಷ್ಪಬಾಣಹಸ್ತೇ ನಮಸ್ತೇಜಗದೇಕ ಮಾತಃ ॥

ನಮಸ್ತೇಪಾರ್ವತೀದೇವಿ ಕೈಲಾಸಘನವಾಸಿನಿ ।
ಕಮಲಾಸನಕೌಮಾರಿ ನಿಮಿಷಾಂಬೇ ನಮೋಸ್ತುತೇ ॥

ಶ್ರೀ ಗುರು ಪ್ರಾರ್ಥನೆ

ವ್ಯಾಸಂವಸಿಷ್ಠನಪ್ತಾರಂಶಕ್ತೇಃ ಪೌತ್ರಮಕಲ್ಮಷಂ ।
ಪರಾಶರಾತ್ಮಜಂವಂದೇ ಶುಕತಾತಂತಪೋನಿಧಿಂ ॥
ನಿಸ್ತಾರಾಯತುಲೋಕಾನಾಂ ಸ್ವಯಂನಾರಾಯಣಃಪ್ರಭುಃ ।
ವ್ಯಾಸರೂಪೇಣಕೃತವಾನ್ ಪುರಾಣಾನಿಮಹೀತಲೇ ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಒಂದನೆಯ ಅಧ್ಯಾಯ :-

ಮಾನವ ಸೃಷ್ಠಿ

ನಾರದ ಉವಾಚ :-

ಹೇಬ್ರಹ್ಮನ್‌ಶ್ರೋತುಮಿಚ್ಛಾಮಿ ಕಾರಣಂಜಗತಾಂಯತಃ ।
ಯಸ್ಮಾದುತ್ಪದ್ಯತೇಲೋಕೋ ಯಥಾತದ್ವೈದಿಕಾಕ್ರಿಯಾಃ ॥೧॥

ತಾ॥ ಹೇ ಸರ್ವಲೋಕ ಪಿತಾಮಹನಾದ ಪರಮೇಷ್ಠಿಯೇ ಯಾವ ಕಾರಣ ದಿಂದ, ಯಾರಿಂದ ಈ ಗೋಚರಿಸುತ್ತಿರುವ ಜಗತ್ತುಗಳು ಉಂಟಾಯಿತು ಮತ್ತು ವೇದೋಕ್ತಕರ್ಮಗಳು ಹೇಗೆ ಏರ್ಪಟ್ಟವು ಎಂಬುದನ್ನು ನಾನು ನಿನ್ನ ಮುಖಾರವಿಂದ ದಿಂದ ಕೇಳಲು ಇಚ್ಛೆಯುಳ್ಳವನಾಗಿದ್ದೇನೆ. ॥೧॥

ಸೃಷ್ಟ್ಯಾದೌಮಾನುಷೀಂಸೃಷ್ಟಿಂಯಥಾಚಕ್ರೆಪಿತಾಮಹಃ ।
ಬ್ರಾಹ್ಮಣಾಃಕ್ಷತ್ರಿಯಾವೈಶ್ಯಾಶ್ಶೂದ್ರಾಶ್ಚೇತಿಪ್ರಥಾಂಗತಾಃ ॥೨॥
ಬ್ರಾಹ್ಮಣಾದಿಷುವರ್ಣೇಷುಕ್ರಿಯಾಭೇದಃಕಥಂಭವೇತ್ ।
ಏತದ್ಭೇದಮಹಂಜ್ಞಾತುಮಿಚ್ಛಾಮಿಕಮಲಾಸನ ॥೩॥

ತಾ॥ ಎಲೈ ಕಮಲಾಸನನೇ ! ಆದಿಸೃಷ್ಟಿಯಲ್ಲಿ ಲೋಕಪಿತಾಮಹನಾದ ನಿನ್ನಿಂದ ಈ ಮನುಜರು ಹೇಗೆ ಸೃಷ್ಟಿಸಲ್ಪಟ್ಟರೋ, ಈ ಭೂಮಂಡಲದಲ್ಲಿರುವ ಜನಗಳಲ್ಲಿ ಕೆಲವರು ಬ್ರಾಹ್ಮಣರೆಂತಲೂ ಮತ್ತೆ ಕೆಲವರು ಕ್ಷತ್ರಿಯರೆಂತಲೂ ಇನ್ನೂ ಕೆಲವರು ವೈಶ್ಯರೆಂತಲೂ ಮತ್ತೂ ಕೆಲವರು ಶೂದ್ರರೆಂತಲೂ ಹೀಗೆ ಚತುರ್ವರ್ಣಸ್ಥ ರಾಗಿ ಪ್ರಖ್ಯಾತರಾಗಿರುವುದಕ್ಕೆ ಕಾರಣವೇನು ? ಮತ್ತು ಈ ಬ್ರಾಹ್ಮಣಾದಿ ವರ್ಣ ಗಳಲ್ಲಿ ಕ್ರಿಯಾಭೇದವು ಹೇಗೆ ಉಂಟಾಯಿತು ? ಎಂಬುದನ್ನು ನಿನ್ನಿಂದ ತಿಳಿದುಕೊಳ್ಳ ಲಿಚ್ಛಿಸುತ್ತೇನೆ. ॥೨॥೩॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿಕಾರಣಂಜಗತಾಂಮತಂ ।
ಮನ್ಮುಖಾದ್ಬ್ರಾಹ್ಮಣೋಜಾತಃಬಾಹುಭ್ಯಾಂಕ್ಷತ್ರಿಯಸ್ಮೃತಃ ॥೪॥
ಊರುಭ್ಯಾಂವೈಶ್ಯಜಾತಿಸ್ತುಪದ್ಭ್ಯಾಂಶೂದ್ರೋಪ್ಯಜಾಯತ ।
ಯದ್ಬ್ರಹ್ಮಕ್ಷತ್ರಿಯವಿಶಾಂಜಾತ್ಯಾತದ್ವೈದಿಕಾಃಕ್ರಿಯಾಃ ॥೫॥

ತಾ॥ ಎಲೈ ನಾರದನೆ ! ಎಲ್ಲರಿಗೂ ಸಮ್ಮತವಾದ ಕಾರಣವನ್ನು ಹೇಳುತ್ತೇನೆ. ನನ್ನ ಮುಖದಿಂದ ಬ್ರಾಹ್ಮಣರು ಹುಟ್ಟಿದರು ಬಾಹುಗಳಿಂದ ಕ್ಷತ್ರಿಯರು ಜನಿಸಿದರು,

ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಹುಟ್ಟಿದರು. ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಆಯಾ ವರ್ಣಕ್ಕೆ ಅನುಸಾರವಾಗಿ ವೈದಿಕ ಕ್ರಿಯೆಗಳುಂಟಾದವು. ॥೪॥೫॥

ಈ ದೃಶೀಂಮರ್ತ್ಯಸೃಷ್ಟಿಂಚಕರ್ತುಂಕಾಮೋಮಹೇಶ್ವರಃ ।
ವ್ಯಧುನೊತ್ಸ್ವಶರೀರಂತುತಪಸಿಧ್ಯಾನಮಾಸ್ಥಿತಂ ॥೬॥
ಪೂರ್ವಪ್ರಳಯಸಂಲೀನಾಯೇಽಸ್ಥಿತಾಜೀವರಾಶಯಃ ।
ತೇಽಸರ್ವೇಕ್ರಮಶಸ್ತಸ್ಮಾನ್ನಿರ್ಜಗ್ಮುರ್ಜೀವರಾಶಯಃ ॥೭॥

ತಾ॥ ಪಿತಾಮಹನಾದ ಶ್ರೀಮನ್ನಾರಾಯಣನು ತನ್ನ ಸಂಕಲ್ಪದಿಂದ ನನ್ನ ಮುಖಾಂತರ ಮಾನವ ಸೃಷ್ಟಿಯನ್ನು ಮಾಡಲಿಚ್ಛಿಸಿ, ತಪೋನಿಷ್ಟವಾದ ತನ್ನ ಶರೀರವನ್ನು ಕೊಡವಿಕೊಂಡವನಾಗಿ, ತತ್ಪೂರ್ವದಲ್ಲಿ ಪ್ರಳಯಕಾಲದೊಳು ಯಾವ ಯಾವ ಜೀವರಾಶಿಗಳು ತನ್ನಲ್ಲಿ ಲೀನವಾಗಿದ್ದವೋ ಆ ಜೀವರಾಶಿಗಳೆಲ್ಲವೂ ಕ್ರಮವಾಗಿ ಹೊರಗೆ ಗೋಚರಿಸಿಕೊಂಡವು. ॥೬॥೭॥

ತಸ್ಮಾತ್ಸೂರ್ಯಸ್ಸಮುದ್ಭೂತೋಮನುರ್ಜಾತೋಽಸ್ಯಪುತ್ರಕಃ ॥
ವೈವಸ್ವತಮನುಶ್ಚಾಪಿಸೃಷ್ಟವಾನ್ಮನುಜಾನ್ವರಾನ್ ॥೮॥

ತಾ॥ ಹೀಗೆ ನನ್ನ ದೆಸೆಯಿಂದ ಸೂರ್ಯನು ಜನಿಸಿ, ಮನುವೆಂಬುವನನ್ನು ಉತ್ಪಾದನಂಗೈದನು. ಈ ಮನುವೆಂಬುವನು ವಿವಸ್ವಚ್ಛಬ್ದವಾಚ್ಯನಾದ ಸೂರ್ಯನ ದೆಸೆಯಿಂದುಂಟಾದ ಕಾರಣ ಈತನಿಗೆ ವೈವಸ್ವತಮನುವೆಂದು ಪ್ರಸಿದ್ಧಿಯುಂಟಾಯಿತು. ಇಂಥಾ ವೈವಸ್ವತಮನುವು ಉತ್ತಮರಾದ ಮನುಷ್ಯರನ್ನುಂಟುಮಾಡಿದನು. ಮಾನುಷರು ಮನುಸಂಭೂತರಾದುದರಿಂದ ಅವರೆಲ್ಲರಿಗೂ ಮನುಜರೆಂದು ಪ್ರಖ್ಯಾತಿಯುಂಟಾಯಿತು. ॥೮॥

ಕಾಶ್ಯಪಾಶ್ಚಸಮುದ್ಭೂತಾಸೂರ್ಯಾದಪಿಸಮುದ್ಭವಾಃ ।
ವೈವಸ್ವತಮನೋರ್ಜಾತಾಃದ್ವಿವಿಧಾಶ್ಚಭುವಂಗತಾಃ ॥೯॥

ತಾ॥ ಇದಲ್ಲದೆ ನನ್ನ ಮಾನಸಪುತ್ರನಾದ ಕಾಶ್ಯಪನೆಂಬ ಮಹಾಮುನಿಯು ಅನೇಕ ಜನರನ್ನು ಉತ್ಪಾದನೆ ಮಾಡಿದನು. ಹೀಗೆ ಕಾಶ್ಯಪಮುನಿಯ ದೆಸೆಯಿಂದಲೂ. ಸೂರ್ಯನ ದೆಸೆಯಿಂದಲೂ, ಸೂರ್ಯಪುತ್ರನಾದ ಮನುವಿನ ದೆಸೆಯಿಂದಲೂ ಹುಟ್ಟಿದವರು, ಕಾಶ್ಯಪರೆಂತಲೂ ಮನುಜರೆಂತಲೂ ಎರಡು ವಿಧವಾಗಿರುವ ಜನರೆಲ್ಲರು ಭೂಮಂಡಲದಲ್ಲಿ ಪ್ರಸಿದ್ಧಿ ಹೊಂದಿದರು. ॥೯॥

ತಸ್ಮಾದ್ವೈವಸ್ವತಮನೋಽಸ್ಸೃಷ್ಟಿರೇತಾದೃಶೀದ್ವಿಜಾಃ ।
ಮಾಯಾಲೀನನಿಜಜ್ಞಾನ್ಜೀವಾಸ್ಸೂಕ್ಷ್ಮಶರೀರಗಾನ್ ॥೧೦॥

ತಾ॥ ಭಗವಂತನಾದ ಸೂರ್ಯನು ಭೂಮಂಡಲದಲ್ಲಿ ವೈವಸ್ವತಮನುವಿನ ಸೃಷ್ಟಿಯ ವಿಧಾನವನ್ನು ಜೇನುಮೇಣದಲ್ಲಿ ಶಿಲುಕಿದ ಚಿನ್ನದ ಕಣಗಳೋಪಾದಿ

ಮಾಯೆಯಲ್ಲಿ ಲೀನವಾದುದರಿಂದ ಶಿಥಿಲವಾದ ತತ್ವಜ್ಞಾನವುಳ್ಳ ಸೂಕ್ಷ್ಮ ಶರೀರಗತಂಗಳಾದ, ಆ ಜೀವಗಳನ್ನು ನೋಡಿ ಹೀಗೆ ಹೇಳಿದನು. ॥೧೦॥

ಮನುಜಾನಾಂತನುಂಗತ್ವಾಭಜಧ್ವಂಮಾನವಾಭಿಧಾಂ ।
ಮುಖಜಾಃಪ್ರಾವಿಶನ್ವ್ಯಾಲೀನ್ಗೋಧೂಮಾನ್ಬಾಹು
ಜಾಶ್ರಿತಾಃ ॥೧೧॥

ತಾ॥ ಎಲೈ ಜೀವಗಳಿರಾ ? ನೀವುಗಳು ಭೂಮಂಡಲಕ್ಕೆ ಹೋಗಿ ಅಲ್ಲಿರುವ ಓಷಧಿಗಳನ್ನೂ ಜಲವನ್ನೂ ಪಡೆದು ಮನುಷ್ಯರ ಶರೀರಂಗಳನ್ನು ಹೊಂದಿ ಮಾನವರೆಂಬ ನಾಮಧೇಯವನ್ನು ಪಡೆಯಿರೆಂದು ನಿರೂಪಿಸಿ, ಆ ಜೀವರಾಶಿಗಳೊಳು ಬ್ರಹ್ಮಮುಖೋದ್ಗತರಾದ ಬ್ರಾಹ್ಮಣರು ಭತ್ತವನ್ನೂ, ಬಾಹುಜರೆನಿಸಿಕೊಂಡ ಕ್ಷತ್ರಿಯರು ಗೋಧೂಮ ಧಾನ್ಯವನ್ನೂ. ॥೧೧॥

ಊರುಜಾಃಪ್ರಾವಿಶನ್ಮುದ್ಗಾಸ್ಕೃಷ್ಣಧಾನ್ಯಾನಿಪಾದಜಾಃ ।
ಗೌರಾರುಣಹರಿದ್ವರ್ಣಕೃಷ್ಣಧಾನ್ಯಾನಿಯಾನಿಚ ॥೧೨॥

ತಾ॥ ಅದೇ ಪ್ರಕಾರವಾಗಿ ಊರುಜರಾದ ವೈಶ್ಯರು ಮುದ್ಗಳ ಧಾನ್ಯವನ್ನೂ ಪಾದಜರಾದ ಶೂದ್ರರು ಕೃಷ್ಣ ಧಾನ್ಯಂಗಳನ್ನೂ ಹೀಗೆ ಕ್ರಮವಾಗಿ ತಮ್ಮ ವರ್ಣಾನುಗುಣ್ಯವಾಗಿ, ಶುಕ್ಲ, ಅರುಣ, ಹರಿದ್ವರ್ಣ, ಕೃಷ್ಣ ವರ್ಣವಾಗಿರುವ ಧಾನ್ಯಂಗಳನ್ನು ಆಶ್ರಯಿಸಿದವರಾದರು. ॥೧೨॥

ಕ್ಷೀರಾದೀನಿಪ್ರವಿಶ್ಯಾಥಜಜ್ಞಿರೇಜೀವಕೋಟಯಃ ।
ವಿಷ್ಣುಚಾಂದ್ರಾತ್ಮಿಕೈಶ್ಶೀತಕಿರಣೈಸ್ತಾನ್ಯವರ್ಧಯತ್ ॥೧೩॥

ತಾ॥ ಮತ್ತು ಕ್ಷೀರಾದಿಗಳನ್ನು ಅವಲಂಬಿಸಿ ಅನೇಕ ಕೋಟಿಜೀವಗಳು ಹುಟ್ಟಿದವು ಎಲೈ ನಾರದನೇ! ಶ್ರೀಮಹಾವಿಷ್ಣುವು ಅಮೃತ ಶರೀರಿಯಾದ ಚಂದ್ರನ ರೂಪವಾಗಿರುವ ಕಿರಣಗಳಿಂದ ಆ ಜೀವರಾಶಿಗಳಿಗೆ ತೃಪ್ತಿಕರವಾದ ಓಷಧಿಗಳನ್ನು ಅವಲಂಬಿಸಿರುವಂತೆ ವೃದ್ಧಿಪಡಿಸಿದನು. ॥೧೩॥

ಪುಷ್ಣಾಮಿಚೋಷಧೀಸ್ಸೋಮೋಭೂತ್ವೇತಿಗತಯಾಗಿರಾ ।
ತಥಾಪ್ರಭೃತಿಚಂದ್ರೋಯಂ ಓಷಧೀಶ ಇತೀರಿತಃ ॥೧೪॥

ತಾ॥ ಓಷಧಿಗಳನ್ನು ಬೆಳೆಯಿಸುತ್ತಾ (ಸೋಮೋಭೂತ್ವಾ) ಎಂಬ ಶೃತಿ ಪ್ರಮಾಣವನ್ನು ಯಥಾರ್ಥಗೈಯುತ್ತಿರುವನಾದಕಾರಣ ಲೋಕದಲ್ಲಿ ಆ ಮೊದಲ್ಗೊಂಡು ಚಂದ್ರನು ಓಷಧೀಶನೆಂದು ಪ್ರಸಿದ್ಧನಾದನು. ॥೧೪॥

ಭೂತಮಂತ್ರ್ಯಸ್ಸನೇತಂತತ್ಸೂಕ್ಷ್ಮಗೇಹಮುಪಾಗತಾಃ ।
ಅನ್ನೇಷ್ವತಿಷ್ಠತೇಜೀವಾಭುವಿಜನ್ಮಚಿಕೀರ್ಷವಃ ॥೧೫॥

ತಾ॥ ಅನಂತರ! ಅಂತದಿಂದೊಡಗೂಡಿದ ಭೂತಂಗಳು ಜನ್ಮವಂಧರಿಸಲಿಚ್ಛೆಯುಳ್ಳವುಗಳಾಗಿ ಸೂಕ್ಷ್ಮವಾದ ಮಂದಿರವನ್ನೈದಿ ಜೀವರೂಪಗಳಾಗಿ ಅನ್ನಗಳಲ್ಲಿ ನಿಂತು ಮನುಷ್ಯರ ಆಹಾರರೂಪದಲ್ಲಿ ಸೇರಿ ಮಾನವರಾಗಿ ಜನ್ಮಿಸಿರುತ್ತಾರೆ. ॥೧೫॥

ಧಾನ್ಯಾನುರೂಪವರ್ಣಾಸ್ಸ್ಯುಶ್ಚಾತುವರ್ಣಮಥೋಭವೇತ್ ।
ವರ್ಣಾನುರೂಪವಿಪ್ರಾದಿಸ್ಸರ್ವಜ್ಯೇಷ್ಠೋಹಿದೃಶ್ಯತೇ ॥೧೬॥

ತಾ॥ ಮನುಷ್ಯರು ಯಾರು ಯಾರು ಎಂತಂಥಾ ಧಾನ್ಯಗಳನ್ನು ಭುಜಿಸುತ್ತಿದ್ದರೋ. ಹಾಗೆ ಧಾನ್ಯಾನುರೂಪವಾಗಿ ವರ್ಣಗಳುಂಟಾದಕಾರಣ ನಾಲ್ಕು ವರ್ಣಗಳಾದುವು. ಈ ವರ್ಣಾನುರೂಪವಾಗಿರುವ ಬ್ರಾಹ್ಮಣಾದಿಗಳು ಇತರ ಸಂಕರ ಜಾತಿಗಳಿಗಿಂತಲೂ ಉತ್ತಮರು. ಈ ಚತುರ್ವರ್ಣಸ್ಥರಲ್ಲಿ ಬ್ರಾಹ್ಮಣರೇ ಉತ್ತಮರು.॥೧೬॥

ಮುಖಜಾಃಬ್ರಾಹ್ಮಣಾಗೌರಾರಕ್ತವರ್ಣಾಶ್ಚಬಾಹುಜಾಃ ।
ಕ್ಷತ್ರಿಯಾಸ್ಸುಹರಿದ್ವರ್ಣಾವೈಶ್ಯಾಸ್ತ್ವೂರುಸಂಭವಾಃ ॥೧೭॥

ತಾ॥ ಮುಖದಿಂದ ಹುಟ್ಟಿದ ಬ್ರಾಹ್ಮಣರು ಧವಳವರ್ಣರಾಗಿಯೂ, ಬಾಹುಗಳಿಂದ ಹುಟ್ಟಿದ ಕ್ಷತ್ರಿಯರು ರಕ್ತವರ್ಣರಾಗಿಯೂ, ಊರು (ತೊಡೆ)ಗಳಿಂದ ಹುಟ್ಟಿದ ವೈಶ್ಯರು ಹಸುರುವರ್ಣದವರಾಗಿಯೂ. ॥೧೭॥

ಪಾದಜಾಃಕೃಷ್ಣವರ್ಣಾಶ್ಚಶೂದ್ರಾಶ್ಚೇತಿಪೃಥಾಂಗತಾಃ ।
ಕಾಶ್ಯಪೋತ್ಪತ್ತಿತಸ್ಸೂರ್ಯಮುಖಾದುತ್ಪತ್ತಿತೋಪ್ರಜಾಃ ॥೧೮॥

ತಾ॥ ಪಾದಗಳಿಂದ ಹುಟ್ಟಿದ ಶೂದ್ರರು ಕೃಷ್ಣವರ್ಣದವರಾಗಿ ಇರುವರು. ಕಾಶ್ಯಪನಿಂದಲೂ ಸೂರ್ಯನಿಂದಲೂ ಉತ್ಪನ್ನರಾದ ಮನುಜರು ನಾಲ್ಕು ವರ್ಣಗಳುಳ್ಳವರಾಗಿರುವರು. ॥೧೮॥

ವರ್ಣಸಂಕರ

ತಚ್ಛೃತ್ವಾನಾರದಃಪ್ರಾಹಕೃತಾಂಜಲಿಪುಟೋಮುನಿಃ ।
ಪಿತಾಮಹಮಹಾಪ್ರಾಜ್ಞವಿಸ್ತರಾದ್ವಕ್ತುಮರ್ಹಸಿ ॥೧೯॥
ಚತುರ್ಣಾಮಪಿವರ್ಣಾನಾಂಕಥಮಷ್ಟಾದಶೀತಚ ।
ತತ್ತದ್ಭೇದಾಕ್ರಿಯಾಭೇದಾಜ್ಞಾತುಮಿಚ್ಛಾಮ್ಯಹಂ ಪ್ರಭೋ ॥೨೦॥

ತಾ॥ ಬ್ರಹ್ಮನ ನುಡಿಗಳನ್ನು ಕೇಳಿದ ನಾರದ ಮಹಾಮುನಿಯು ಅಂಜಲಿಬದ್ಧನಾಗಿ ಆ ಬ್ರಹ್ಮನನ್ನು ಕುರಿತು ಸ್ವಾಮಿಯಾದ ಪಿತಾಮಹನೇ! ನಾಲ್ಕು ವರ್ಣಗಳಿಂದ ಯಾವ ರೀತಿ ಹದಿನೆಂಟು ಜಾತಿಗಳುಂಟಾದವು ? ಆಯಾ ಜಾತಿಭೇದಗಳನ್ನೂ

ಕ್ರಿಯಾಭೇದಗಳನ್ನೂ ತಿಳಿದುಕೊಳ್ಳಲಿಚ್ಛಿಸುತ್ತೇನೆ, ವಿಸ್ತರಿಸಿ ಹೇಳಲು ನೀನು ಸಮರ್ಥನಾಗಿರುವೆಯಾದ್ದರಿಂದ ಅದರ ವಿವರಗಳನ್ನು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ. ॥೨೦॥

ವಕ್ಷ್ಯಾಮಿನಾರದತ್ವಂಹಿಭೇದಾನ್ಸಂಕ್ಷೇಪತಶ್ಶೃಣು ।
ಚತುರ್ಷ್ವಪಿಚವರ್ಣೇಷುಭೇದೋಽಷ್ಟಾದಶತಾಂಗತಃ ॥೨೧॥

ತಾ॥ ಎಲೈ ನಾರದನೇ ಕೇಳು ಚಾತುರ್ವರ್ಣಗಳಿಂದಲೂ ಉಂಟಾದ ಹದಿನೆಂಟು ಜಾತಿಭೇದಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ ಅದನ್ನು ನೀನು ಗ್ರಹಿಸುವಂಥಾವನಾಗೆಂದು ಬ್ರಹ್ಮನು ನಾರದ ಮುನಿಗೆ ತಿಳಿಸಿದನು. ॥೨೧॥

ಊರುಜಾತ್ಪಾದಜಾಯಾಂಚಜಾತಃಕರಣಸಂಜ್ಞಕಃ ।
ಬ್ರಾಹ್ಮಣಾದಾರ್ಯಯೋಷಾಯಾಂಜಾತೋಽಂಬಿಷ್ಮಇತೀರಿತಃ ॥೨೨॥

ತಾ॥ ವೈಶ್ಯನಿಂದ ಶೂದ್ರಸ್ತ್ರೀಯಲ್ಲಿ ಜನಿಸಿದವನು ಕರಣನೆಂದೂ, ಬ್ರಾಹ್ಮಣನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನಿಗೆ ಅಂಬಿಷ್ಮನೆಂದೂ, ಹೇಳಲ್ಪಡುತ್ತದೆ. ॥೨೨॥

ಬಾಹುಜಾತ್ಪಾದಜಾಯಾಂಚಜಾತೋಽಗ್ರಇತಿಸಂಸ್ಮೃತಃ ।
ಊರುಜಾದ್ಬಾಹುಜಾಯಾಂಚಜಾತೋಮಗಧನಾಮಕಃ ॥೨೩॥

ತಾ॥ ಕ್ಷತ್ರಿಯನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದವನಿಗೆ ಉಗ್ರನೆಂದೂ ವೈಶ್ಯನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನಿಗೆ ಮಾಗಧನೆಂದೂ ಹೆಸರು. ॥೨೩॥

ಊರುಜಾಯಾಂಕ್ಷತ್ರಿಯೇಣಜಾತೋಮಾಹಿಷ್ಯನಾಮಕಃ ।
ಪಾದಜಾದೂರುಜಾಯಾಂಜೇಜಾತಃಕ್ಷತ್ರೇತಿವಿಶ್ರುತಃ ॥೨೪॥

ತಾ॥ ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದವನಿಗೆ ಮಾಹಿಷ್ಯನೆಂದೂ ಶೂದ್ರನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದವನಿಗೆ ಕ್ಷತ್ತನೆಂದೂ ಹೆಸರು. ॥೨೪॥

ಬ್ರಾಹ್ಮಣ್ಯಾಂಬಾಹುಜಾಚ್ಚೈವಸಜ್ಞಾತಸ್ಸೂತನಾಮಕಃ ।
ಬ್ರಾಹ್ಮಣ್ಯಾಮುಶುಜಾಜ್ಜಾತೋವೈದೇಹಇತಿಶ್ರುತಃ ॥೨೫॥

ತಾ॥ ಕ್ಷತ್ರಿಯನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನಿಗೆ ಸೂತನೆಂದೂ, ವೈಶ್ಯನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನಿಗೆ ವೈದೇಹನೆಂದೂ ಹೆಸರು. ॥೨೫॥

ಕರಣ್ಯಾಂಮಾಹಿಷಾಜ್ಜಾತೋರಥಕಾರೇತಿನಾಮಕಃ ।
ಬ್ರಾಹ್ಮಣ್ಯಾಂಶೂದ್ರಸಂಭೂತಶ್ಚಂಡಾಲಇತಿವಿಶ್ರುತಃ ॥೨೬॥

ತಾ॥ ಮಾಹಿಷ ಜಾತಿಯುವನಿಂದ ಕರಣಜಾತಿ ಸ್ತ್ರೀಯಲ್ಲಿ ಹುಟ್ಟಿದವನಿಗೆ ರಥಿಕನೆಂದೂ, ಶೂದ್ರನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನಿಗೆ ಚಂಡಾಲನೆಂದೂ ಹೆಸರು.

ಬ್ರಾಹ್ಮಣಾದಿಷುವರ್ಣೇಷುಭೇದೋऽಷ್ಟಾದಶತಾಂಗತಃ ।
ಅಷ್ಟಾದಶೇಷುವರ್ಣೇಷುಕುಲನೇಕೋತ್ತರಂಶತಂ ॥೨೭॥

ತಾ॥ ಈ ರೀತಿಯಾಗಿ ಬ್ರಾಹ್ಮಣಾದಿ ನಾಲ್ಕು ವರ್ಣದವರಿಂದ ಉಂಟಾದ ಭೇದಗಳು ಹದಿನೆಂಟು ಜಾತಿಗಳಿಂದ. ಮತ್ತೆ ಆ ಹದಿನೆಂಟು ಜಾತಿಗಳಿಂದ ನೂರೊಂದು ಜಾತಿ (ಕುಲ)ಗಳು ಉಂಟಾದವು ಎಂದು ಹೇಳಲ್ಪಟ್ಟಿದೆ. ॥೨೭॥

ಸ್ತ್ರೀಶೂದ್ರಾಣಾಂಭನೇತ್ರೂಷ್ಣೀಂತೇಷಾಂವಿಷ್ಣುಕಥಾಗತಿಃ ।
ಏವಂಕ್ರಮೇಣಲೋಕಾನಾಂಕ್ರಿಯಾಭೇದೋऽಭಿಜಾಯತೇ॥೨೮॥

ತಾ॥ ಸ್ತ್ರೀಯರಿಗೂ, ಶೂದ್ರರಿಗೂ ಅಮಂತ್ರಕ ಕ್ರಿಯೆಗಳೇರ್ಪಟ್ಟಿವೆ. ಅವರುಗಳಿಗೆ ಶ್ರೀಮಹಾವಿಷ್ಣುವಿನ ಕಥೆಗಳೂ ಆತನ ನಾಮಸ್ಮರಣೆ ಆತನ ವಿವಿಧ ರೂಪದ ಮಹಾತ್ಮ್ಯಗಳನ್ನು ಕೇಳುವುದೂ ಆತನ ಪೂಜೆಗಳನ್ನು ಮಾಡುವುದೂ ಆತನನ್ನು ಭಕ್ತಿಯಿಂದ ಹಾಡುವುದೂ ಮೊದಲಾದುವುಗಳಿಂದ ಇವರುಗಳಿಗೆ ಸದ್ಗತಿಯು ಉಂಟಾಗುವುದು. ಈ ರೀತಿಯಾಗಿ ಈ ಜನರಿಗೆ ಕ್ರಿಯಾಭೇದವು ಉಂಟಾಗಿದೆ. ॥೨೮॥

ಗೌರವರ್ಣಾಕೃತಿತ್ವಾಚ್ಚ ಜಾತೀನಾಮುತ್ತಮೋದ್ವಿಜಃ ।
ಬ್ರಹ್ಮಲೋಕಾವನಾರ್ಥಾಯ ಸೃಷ್ಟಾಯೂಯಂ
ಮಯೇರಿತಾಃ ॥೨೯॥

ತಾ॥ ಗೌರವ ವರ್ಣವು, ಆಕಾರವು, ಉತ್ತಮ ಪ್ರದೇಶದಿಂದ ಜನನವೂ ಉಂಟಾದ ಹೇತುವಿನಿಂದ ಜಾತಿಯಲ್ಲಿ ಬ್ರಾಹ್ಮಣರೇ ಉತ್ತಮರು ಬ್ರಹ್ಮಲೋಕವನ್ನು ರಕ್ಷಿಸುವುದಕ್ಕಾಗಿಯೇ ಬ್ರಾಹ್ಮಣ ಸೃಷ್ಟಿಯನ್ನು ಮಾಡಿರುವೆನು ॥೨೯॥

ಬ್ರಾಹ್ಮಣಾನಬ್ರವೀತ್ತಸ್ಮಾತ್ತೇಷಾಂಸರ್ವೇವಶಾನುಗಾಃ ।
ಉತ್ಪನ್ನಕ್ಷತ್ರಸ್ತೂರ್ಯಬಾಹೋಸ್ತತ್ಕಲ್ಪಾವರ್ಣತೋದ್ವಿಜಾಃ ॥೩೦॥

ತಾ॥ ಇತರ ವರ್ಣಗಳವರಾದ ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದವರೆಲ್ಲರೂ ಬ್ರಾಹ್ಮಣ ಸೇವೆಯನ್ನು ಮಾಡುತ್ತಿದ್ದಾರೆ ಅದೇ ಪ್ರಕಾರವಾಗಿಯೇ ಸೂರ್ಯರೂಪಿಯಾದ ನನ್ನ ಭುಜಗಳಿಂದ ಕ್ಷತ್ರಿಯರು ಉತ್ಪನ್ನರಾದ ಕಾರಣ ಸೂರ್ಯನಂತೆ ವರ್ಚಸ್ಸುಳ್ಳವರಾಗಿ ಬ್ರಾಹ್ಮಣರಂತೆಯೇ ಕ್ಷತ್ರಿಯರೂ ಇತರ ವರ್ಣಗಳಿಗಿಂತಲೂ ಉತ್ತಮರು ॥೩೦॥

ಕ್ಷತ್ರಿಯಾಂಶ್ಚತಥಾಭೂಪಾನ್ವೈಶ್ಯಾನ್ವೈವಸ್ತತಾಭಿದಾತ್ ।
ಮನೋರುತ್ಪತ್ತಿತಸ್ಸೂರ್ಯಕಟೆರುತ್ಪತ್ತಿತೋದ್ವಿಜಾಃ ॥೩೧॥

ತಾ॥ ಹಾಗೆಯೇ ವೈಶ್ಯರು ಊರು (ತೊಡೆ) ಪ್ರದೇಶದಿಂದ ಹುಟ್ಟಿದವರಾದ ಕಾರಣ ಹಸರು ಬಣ್ಣವುಳ್ಳವರಾದ್ದರಿಂದಲೂ, ಬ್ರಾಹ್ಮಣ ಕ್ಷತ್ರಿಯರ ಹೊರ್ತಾಗಿ ಇತರರಿಗಿಂತಲೂ ಶ್ರೇಷ್ಠರು ॥೩೧॥

ಹರಿತತ್ವಾಚ್ಚ ಶೂದ್ರಾಸ್ತು ಪಾದಾದುತ್ಪತ್ತಿತೋಽಧಮಾಃ ।
ಕಾರ್ಶ್ಯಪೋತ್ಪತ್ತಿತೋಜಾತೋಽಶ್ರೇಷ್ಠತ್ವಂಮುಖಸಂಭವಾತ್ ॥೩೨॥

ತಾ॥ ಶೂದ್ರರಾದರೋ ಪಾದಗಳ ದೆಸೆಯಿಂದ ಹುಟ್ಟಿದವರಾದ ಕಾರಣ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ತ್ರೈವರ್ಣಗಳವರಿಗಿಂತಲೂ ಕೊನೆಯವರು ॥೩೨॥

ಜಾತಾಸ್ತೇಷಾಂಕ್ರಿಯಾಭೇದಾಸ್ತತ್ತದಾಚಾರಸಮ್ಮತಾಃ ।
ಬ್ರಾಹ್ಮಣಾಕ್ಷತ್ರಿಯಾದಿಶ್ಚ ಜಾತೀನಾಂತಾರತಮ್ಯತಃ ॥೩೩॥

ತಾ॥ ಆಯಾಯಾ ಜಾತಿಯವರಿಗೆ ಆಯಾಯಾ ಆಚಾರಗಳು ಸಮ್ಮತವಾಗುವಂತೆ ಕ್ರಿಯಾಭೇದಗಳುಂಟಾದವು. ಬ್ರಾಹ್ಮಣ ಕ್ಷತ್ರಿಯಾದಿ ಜಾತಿಗಳಿಗೆ ಈ ರೀತಿ ಪ್ರಭೇದ ತಾರತಮ್ಯಗಳಿಂದ ಕ್ರಿಯಾಭೇದಗಳುಂಟಾದವು ॥೩೩॥

ರಾಜಧರ್ಮ

ಪರ್ವತಾರಣ್ಯಪಾನೀಯೈರಶ್ಮಕರ್ದಮಗಹ್ವರೈಃ ।
ಭಟೈರನ್ಯೋನ್ಯಮಿತ್ರೈಶ್ಚ ದುರ್ಗೇಽಶತ್ರುಗಣೈರ್ಯುತೇ ॥೩೪॥

ತಾ॥ ಅರಸಾದವನು ಪರ್ವತದಿಂದಲೂ, ಅರಣ್ಯಗಳಿಂದಲೂ, ಉದಕಗಳಿಂದ ಕೂಡಿದ ತಟಾಕಗಳಿಂದಲೂ, ಬಲದಿಂದಲೂ, ಪಾಷಾಣಾದಿಗಳಿಂದಲೂ, ಕೆಸರಿಂದ ಕೂಡಿದ ಭೂಭಾಗದಿಂದಲೂ, ಗುಹೆಗಳಿಂದಲೂ, ಪರಸ್ಪರಮಾಗಿ ಮೈತ್ರಿಯುಳ್ಳ ಭಟರಿಂದಲೂ, ಯುಕ್ತರಾಗಿರಬೇಕು ॥೩೪॥

ಸುಸಾಲಪರಿಘಾಯಂತ್ರಶತಘ್ನೀಸಂಕಲೇಶುಭೇ ।
ವರ್ಣೈರ್ಗೃಹೀವನೀಭಿಕ್ಷುರೂಪೈರ್ಬ್ರಾಹ್ಮಣಪುಂಗವೈಃ ॥೩೫॥

ತಾ॥ ದೃಢವಾದ ಒಳ್ಳೇ ಕೋಟೆಯಿಂದಲೂ, ಅಗಳ್ತೆಗಳಿಂದಲೂ, ಶತ್ರುಗಳನ್ನು ಭೇದಿಸುವಂತಹ ಶತಘ್ನೀಯಂತ್ರಗಳಿಂದಲೂ, ಶತ್ರುಗಳು ಬರಲಶಕ್ಯವಾದ ರೀತಿಯ ದೃಢವಾಗಿಯೂ ಶುಭಕರವಾಗಿಯೂ ಇರುವ ಕೋಟೆಯಿರಬೇಕು ಮತ್ತು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಯತ್ಯಾಶ್ರಮವೆಂಬ ಚತುರಾಶ್ರಮಗಳನ್ನು ಸ್ವೀಕಾರಮಾಡಿದ ಬ್ರಾಹ್ಮಣರಿಂದಲೂ ॥೩೫॥

ಕ್ಷತ್ರಿಯೈಶ್ಚ ವಣಿಗ್ಭಿಶ್ಚ ಶೂದ್ರೈಸ್ಸಂಕರಜಾತಿಭಿಃ ।
ರಜಕಶ್ಚರ್ಮಕಾರುಶ್ಚ ನಟೋಬುರುಡ ಏವಚ ॥೩೬॥

ತಾ॥ ಕ್ಷತ್ರಿಯರಿಂದಲೂ, ವರ್ತಕರಿಂದಲೂ, ಶೂದ್ರರಿಂದಲೂ, ಸಂಕರ ಜಾತಿಗಳಿಂದಲೂ, ರಜಕ, ಚರ್ಮಕಾರ, ನಟ, ಬುರುಡ ಮೊದಲಾದವರಿಂದಲೂ ॥೩೬॥

ಕೈವರ್ತದಾಶಭಿಲ್ಲಾಶ್ಚ ಚರ್ಮಕಾರಶ್ಚ ನಾವಿಕಃ ।
ತಕ್ಷಕೀತಿಲಯಂತ್ರೀಚಸೂನಶ್ಚಕ್ರೀತಥಾಧ್ವಜೀ ॥೩೭॥

ತಾ॥ ಕೈವರ್ತ, ದಾಶ, ಬಿಲ್ಲ, ಚರ್ಮಕಾರ, ನಾವಿಕ, ತಕ್ಷಕಿ, ತಿಲಯಂತ್ರಿ ಸೂನ, ಚಕ್ರಿ, ಧ್ವಜಿ ಮೊದಲಾದವರುಗಳಿಂದಲೂ ॥೩೭॥

ನಾಪಿತಃಕಾರುಕೋಗ್ರಾಮುಚಂಡಾಲಾಷ್ಷೋಡಶಸೇತಾಃ ।
ಏತೈರ್ಯುತೇರಥೌಘೈಶ್ಚಭಟೈರ್ಯುಕ್ತೇಪುರೇವತ್ ॥೩೮॥

ತಾ॥ ನಾಪಿತ, ಕಾರುಕ ಎಂಬದಾಗಿ ಹದಿನಾರು ಭೇದಗಳುಳ್ಳ ಸಂಕರ ಜಾತಿಯ ವರಿಂದಲೂ, ರಥಸಮುದಾಯದಿಂದಲೂ, ಯುದ್ಧ ಸಮರ್ಥರಾದ ಯೋಧರಿಂದಲೂ, ವಾಯುವಿಗಿಂತಲೂ ವೇಗವಾಗಿ ಹೋಗುವ ಕುದುರೆಗಳಿಂದಲೂ, ಯುಕ್ತವಾದ ಪಟ್ಟಣದಲ್ಲಿ ರಾಜನಿರಬೇಕು ॥೩೮॥

ಗಜಾಶ್ವಶಾಲಾಪ್ರಾಸಾದಶುದ್ಧಾಭಾಟ್ಟಾಲಶೋಭಿತೇ ।
ನಾಟ್ಯಶಾಲಾಸಭಾನಿದ್ರಾಗೃಹಾಢ್ಯೇಹಿತೋವಸೇತ್ ॥೩೯॥

ತಾ॥ ಮತ್ತು ಮೇಘಗಂಭೀರವಾದ ಗಜಗಳಿಂದ ಒಡಗೂಡಿದ ಗಜಶಾಲೆ ಗಳಿಂದಲೂ, ಉತ್ತಮಾಶ್ವಗಳಿರುವ ಲಾಯಗಳಿಂದಲೂ, ಅರಸರು ವಾಸಿಸುವುದಕ್ಕೆ ಯೋಗ್ಯವಾದ ಮನೋಹರವಾಗಿರುವ ಅರಮನೆಗಳಿಂದಲೂ, ಗೋಪುರಗಳಿಂದಲೂ, ಒಳಕೋಟೆಯಿಂದಲೂ, ಕೊತ್ತಳಗಳಿಂದ ಯುಕ್ತವಾಗಿರಬೇಕು ಮತ್ತು ನಾಟ್ಯಶಾಲೆ ಗಳಿಂದಲೂ, ಆಸ್ಥಾನಮಂಟಪಗಳಿಂದಲೂ, ನಿದ್ರಾಗೃಹ (ಶಯನ) ಗಳಿಂದಲೂ, ಭಂಡಾರದ ಮಂದಿರಗಳಿಂದಲೂ ಶೋಭಿಸುತ್ತಿರುವ ಸಕಲಾನುಕೂಲವಾದ ಪ್ರಸಾದ ದಲ್ಲಿ ರಾಜನು ವಾಸಿಸುತ್ತಿರಬೇಕು ॥೩೯॥

ಸಿಂಹಾಸನಂಸ್ಥಿರೈಶ್ವರ್ಯಕರಂಸ್ವಾಸ್ತರಣೈರ್ಯುತಂ ।
ರಾಜ್ಯಲಕ್ಷ್ಮೀಸ್ಥೈರ್ಯಕರಂಸಿತಛತ್ರಪ್ರಧಾರಣಂ ॥೪೦॥

ತಾ॥ ಒಳ್ಳೆಯ ಆಸ್ತರಣದಿಂದೊಡಗೂಡಿದ ಸಿಂಹಾಸನವು ಸ್ಥಿರವಾದ ಐಶ್ವರ್ಯ ವನ್ನುಂಟುಮಾಡುತ್ತದೆ. ಶ್ವೇತಚ್ಛತ್ರಧಾರಣವು ರಾಜಲಕ್ಷ್ಮಿಯನ್ನು ಸ್ಥಿರವಾಗಿ ನಿಲ್ಲಿಸುತ್ತದೆ ॥೪೦॥

ಶ್ರಿಯೋವೃದ್ಧಿಕರಂರಮ್ಯಂಸಿತಚಾಮರವೀಜನಂ ।
ಪಾಪಾಲಕ್ಷ್ಮೀಪ್ರಶಮನಂಚಂದನಾದ್ಯನುಲೇಪನಂ ॥೪೧॥

ತಾ॥ ಚಾಮರಗಳನ್ನು ಬೀಸೋಣದ್ದರಿಂದ ಐಶ್ವರ್ಯ ವೃದ್ಧಿ ಪ್ರದಾಯಕ ವಾಗುವುದು. ಚಂದನಾದಿಗಳ ಲೇಪನದಿಂದ ಶರೀರ ಕಾಂತಿಯುಂಟಾಗಿ ದುರ್ಲಕ್ಷ್ಮಿಯು ಹೋಗಿ ಸುಖ ಮತ್ತು ಸಕಲ ಐಶ್ವರ್ಯಗಳುಂಟಾಗುವವು ॥೪೧॥

ವಸ್ತ್ರಾಲಂಕಾರಕರಣ ತಾಂಬೂಲಂ ಪುಷ್ಪಧಾರಣಂ ।
ದುಷ್ಟಾರಿಸಂಘಭಯದಂಕರೇಶಸ್ತ್ರಪ್ರಧಾರಣಂ ॥೪೨॥

ತಾ॥ ಒಳ್ಳೇ ಪೀತಾಂಬರಗಳನ್ನು ಧರಿಸುವುದೂ, ಅಲಂಕಾರ ಮಾಡಿಕೊಳ್ಳುವುದೂ, ತಾಂಬೂಲ ಚರ್ವಣವೂ, ಪುಷ್ಪಧಾರಣವೂ, ಇವುಗಳು ಪಾಪವನ್ನೂ ದಾರಿದ್ರ್ಯವನ್ನೂ ಹೋಗಲಾಡಿಸುತ್ತವೆ ಮತ್ತು ಯಾವಾಗಲೂ ಖಡ್ಗವನ್ನು ಹಿಡಿದುಕೊಂಡಿರುವುದರಿಂದ, ದುರುಳರಾದ ವೈರಿಗಳಿಗೆ ಭೀತಿಯುಂಟಾಗುವುದು ॥೪೨॥

ಸುಮನೋಹರರತ್ನಾನಾಂಧಾರಣಂದಿವ್ಯರೂಪದಂ ।
ದೇವತಾತಿಥಿವಿಪ್ರಾಣಾಂ ಪೂಜನಂ ಪಾಪನಾಶನಂ ॥೪೩॥

ತಾ॥ ಒಳ್ಳೆಯ ನವರತ್ನಗಳಿಂದ ಮಾಡಲ್ಪಟ್ಟ ಆಭರಣಗಳನ್ನು ಧರಿಸುವುದರಿಂದ ದಿವ್ಯರೂಪವುಂಟಾಗುವುದು. ದೇವತಾರ್ಚನೆಯು ಮತ್ತು ಅತಿಥಿ ಅಭ್ಯಾಗತರಾದ ಬ್ರಾಹ್ಮಣರನ್ನು ಪೂಜಿಸುವುದರಿಂದ ಸಕಲ ಪಾಪಗಳು ಪರಿಹಾರವಾಗಿ ಪುಣ್ಯವು ಲಭಿಸುತ್ತದೆ, ॥೪೩॥

ದಾನಂಧರ್ಮಪ್ರದಂಕೀರ್ತಿವರ್ಧನಂದುರಿತಾಪಹಂ ।
ಆಧ್ಯಸೇವಾದ್ವಿಜೇದೈವೇ ದುಷ್ಟಶತ್ರುವಿನಿಗ್ರಹ ॥೪೪॥

ತಾ॥ ದಾನವು ಧರ್ಮಪ್ರದವಾದದ್ದು ಶ್ರೇಯಸನ್ನು ವೃದ್ಧಿಗೊಳಿಸಿ ಪಾಪವನ್ನು ಪರಿಹಾರಮಾಡುವುದು. ಅಲ್ಲದೆ ಬ್ರಾಹ್ಮಣರಲ್ಲಿ ಭಕ್ತಿಯೂ ದೇವತೆಗಳಲ್ಲಿ ವಿಶ್ವಾಸವೂ ಹರಿಭಜನೆಯೂ, ಸ್ವದಾರರಲ್ಲಿ ರತಿಯೂ, ನಡೆಸುವುರಿಂದ ದುಷ್ಟನಿಗ್ರಹವೂ ವೈರಿಗಳ ಭಂಜನವೂ ಆಗುವುದು ॥೪೪॥

ಶಿಷ್ಟಾನಾಂಚೈವಭೀತಾನಾಂಪಾಲನಂಭೂಭುಜಾಂಹಿತಂ ।
ಹತಾಚಿಂತಾಸ್ವದಾರೇಷುಪುತ್ರೋತ್ಪಾದನನೋವಚ ॥೪೫॥

ತಾ॥ ವೈರಿಗಳನ್ನು ದುಷ್ಟರನ್ನು ತನ್ನ ಭುಜಗಳ ಸಾಮರ್ಥ್ಯದಿಂದ ಜಯಿಸಿ ಶಿಷ್ಟರನ್ನು ಕಾಪಾಡುವುದು ತನ್ನನ್ನೇ ನಂಬಿದ (ಆರ್ತತನದಿಂದ ಆಶ್ರಯಿಸಿರುವ ಸ್ತ್ರೀಯರಿಂದ) ತನ್ನ ಹೆಂಡತಿಯಲ್ಲಿ ಪುತ್ರೋತ್ಪತ್ತಿಯು ವಂಶಶ್ರೇಯಸ್ಕರವು ॥೪೫॥

ಸಂಗ್ರಾಮೇಷ್ವಪಲಾಯಿತ್ವಂ ಶಸ್ತ್ರಧಾರಣಮುಪ್ಯರೌ।
ಸತ್ಯಂವಚನಿಭೂಪಾನಾಮೇಷಧರ್ಮಸ್ಸನಾತನಃ ॥೪೬॥

ತಾ॥ ಮತ್ತು ರಣರಂಗದಲ್ಲಿ ಓಡಿಹೋಗದೆ ಸ್ಥಿರವಾಗಿ ನಿಲ್ಲುವುದೂ, ವೈರಿಗಳ ವಿಷಯವಾಗಿಯೇ ಶಸ್ತ್ರಧಾರಣವೂ, ಮಾತಿನಲ್ಲಿ ದೃಷ್ಟಿಯೂ ರಾಜರಿಗೆ ಮುಖ್ಯವಾಗಿರಬೇಕು. ಇದೇ ರಾಜರಿಗೆ ಅನಾದಿ ಸಿದ್ಧವಾದ ಧರ್ಮವು ॥೪೬॥

ಏಕಂಪರೋಪಕರಣಂ ತತ್ರಾಪಕರಣಂತ್ವಘಂ ।
ಪರಸ್ತ್ರೀಷುಪರಾರ್ಥೇಷುಪಶುಸಿದ್ಧಿರಿತಿಧ್ವಯಂ ॥೪೭॥

ತಾ॥ ಪರಸ್ತ್ರೀಯರಿಗೆ ಅಪಕಾರ ಮಾಡದೆ, ಉಪಕಾರ ಮಾಡುವುದೇ ಮುಖ್ಯವಾದದ್ದು. ಪರಸ್ತ್ರೀಯರಲ್ಲಿಯೂ, ಪರದ್ರವ್ಯದಲ್ಲಿಯೂ, ಹೆರವರ ಪಶುಗಳಲ್ಲಿಯೂ ದೃಷ್ಟಿಯನ್ನಿಡದಿರುವುದೇ ಧರ್ಮವು. ದುರಳರಲ್ಲಿಯೂ ಹಗೆತನಮಾಡುವವರಲ್ಲಿಯೂ ಕಠಿಣವಾಗಿರುವುದೇ ರಾಜಧರ್ಮವು ॥೪೭॥

ಸತ್ಯಂಶೌಚಮಪಾರುಷ್ಯಮಿತಿತ್ರೀಣಿಮಹೀಭುಜಾಂ ।
ಕ್ಷೌರಮಭ್ಯಂಗಮಚ್ಛಾನಿವಸ್ತ್ರಾಣ್ಯಾಭರಣಾನಿಚ ॥೪೮॥
ಶೋಭಾಕರಾಣಿಚಿತ್ರಾಣಿತತ್ತತ್ಕಾಲೋಚಿತಾನಿಚ ।
ತಾನಿಲಕ್ಷ್ಮೀಕರಾಣ್ಯಾಹುಃಪ್ರಾರ್ಥಿವಾನಾಮುರಸ್ಥಲೇ ॥೪೯॥
ಸಂತತಂಚಂದನಾಲೇಪೋಕಂಠಹಾರೋತಿನಿರ್ಮಲಃ ।
ಕರ್ಪೂರವೀಟಿಕಾವಕ್ತ್ರೈಕಸ್ತೂರೀತಿಲಕಾದಿಕೈ ॥೫೦॥

ತಾ॥ ಆದುದರಿಂದ ರಾಜನಿಗೆ ಸತ್ಯವೂ, ಶುಚಿರ್ಭೂತತ್ವವೂ, ಕಾಠಿಣ್ಯವೂ ಈ ಮೂರು ಗುಣಗಳು ಮುಖ್ಯವಾಗಿರಬೇಕು. ಇದಲ್ಲದೆ ರಾಜರುಗಳಿಗೆ ಕ್ಷೌರವೂ, ಅಭ್ಯಂಜನವೂ, ಕೊಳೆಯಿಲ್ಲದ ಶುಭ್ರವಾದ ವಸ್ತ್ರಗಳೂ ಆಭರಣಗಳೂ, ಇವೆಲ್ಲ ಕಲ್ಯಾಣಗುಣವಾಗಿಯೂ, ಕಾಂತಿಪ್ರದವಾಗಿಯೂ, ವಿಚಿತ್ರವಾಗಿಯೂ, ಲಕ್ಷ್ಮೀಪ್ರದವಾಗಿಯೂ ಇರುವ ಕಾರಣ, ರಾಜನಾದವನು ವಕ್ಷಸ್ಥಳದಲ್ಲಿ ಚಂದನಾನುಲೇಪನವನ್ನೂ, ಕಂಠದಲ್ಲಿ ಕಂಠೀಸರವನ್ನೂ ಧರಿಸಬೇಕು ಮತ್ತು ತಾಂಬೂಲ ಚರ್ವಣವನ್ನೂ ಫಾಲ ಪ್ರದೇಶದಲ್ಲಿ ಕಸ್ತೂರಿಯ ತಿಲಕವನ್ನೂ, ಮಂಡೆಯೊಳಗೆ ಮಾಲತೀ ಪೂದಂಡೆಯನ್ನೂ ಧರಿಸುತ್ತಿರಬೇಕು. ಅವುಗಳನ್ನು ಸೇವಿಸುವುದರಿಂದ ಆಯುಸ್ಸು ಅಭಿವೃದ್ಧಿಯಾಗುವುದು ॥೪೮॥೪೯॥೫೦॥

ಮೌಳೌತುಮಾಲತೀಪುಷ್ಪಂರಾಜ್ಞಾಮಾಯುಷ್ಕರಾಣಿಷಟ್ ।
ಚರಭಕ್ತೇಚವಿಶ್ವಾಸೋಗುರೌಭಕ್ತಿಶ್ಚಪೈತೃಕೇ ॥೫೧॥
ವಿಪ್ರೇಷುದೇವತಾಬುದ್ಧಿಶ್ಶುಶ್ರೂಷಾಕರಣಂಗವಿ ।
ಸರ್ವಭೂತೇಧ್ವಹಿಂಸಾಚಸಪ್ತಾರೋಗ್ಯಕರಾಣಿನೃಃ ॥೫೨॥

ತಾ॥ ಇದಲ್ಲದೆ ಚಿತ್ರವಿಚಿತ್ರವಾದ ಪುಷ್ಪಾಹಾರಗಳನ್ನು ಧರಿಸುವಿಕೆಯಿಂದಲೂ ಚಾರನಲ್ಲಿ ಮತ್ತು ಭಕ್ತನಲ್ಲಿ ವಿಶ್ವಾಸವನ್ನೂ, ಗುರುವಿನಲ್ಲಿಯೂ, ಪಿತೃಕರ್ಮದಲ್ಲಿಯೂ ಭಕ್ತಿಯನ್ನೂ, ಬ್ರಾಹ್ಮಣರಲ್ಲಿ ದೇವತಾಬುದ್ಧಿಯನ್ನೂ, ಗೋವುಗಳ ಶಿಶ್ರೂಷೆಯನ್ನೂ, ಸರ್ವಪ್ರಾಣಿಗಳನ್ನೂ ಹಿಂಸಿಸದಿರುವುದೂ, ಈ ಏಳು ಆಚರಣೆಗಳು ರಾಜನಿಗೆ ಶ್ರೇಯಸ್ಸೆಂದು ಪ್ರಾಜ್ಞರು ಹೇಳುತ್ತಾರೆ ॥೫೧॥೫೨॥

ಪ್ರತ್ಯಹಂಭಾಸ್ಕರೋಪಾಸ್ತಿ ರಾರ್ತ್ತಾನಾಮೌಷಧಾರ್ಪಣಂ।
ಭೀತಾಭಯಪ್ರದಾನಂಚಭೇಕಾನಾಂಮೃಗಪಕ್ಷಿಣಾಂ ॥೫೩॥
ವಿಮೋಚನಂವಿರುದ್ಧಾನಾಂವಸ್ತ್ರಾಣಾಮಪಿವರ್ಜನಂ।
ಸವಾಚಶೃತವೃದ್ಧಾನಾಂಸರ್ವಭೂತದಯಾಪಿಚ ॥೫೪॥

ತಾ॥ ಪ್ರತಿದಿವಸವೂ ಸೂರ್ಯೋಪಾಸನೆಯೂ, ರೋಗಾದಿಗಳಿಂದ ಬಾಧಿತರಾದವರಿಗೆ ಔಷಧಿಗಳನ್ನು ಕೊಡಿಸುವುದೂ, ಭೀತರಾದವರಿಗೆ ಅಭಯಪ್ರದಾನವೂ, ಕಪ್ಪೆಗಳನ್ನೂ, ಮೃಗಪಕ್ಷಿಗಳನ್ನೂ ಯಾರಾದರೂ ಹಿಡಿದು ತಂದಲ್ಲಿ ಅವುಗಳನ್ನು ಬಿಡಿಸುವುದೂ, ಕೆಟ್ಟಜನಗಳ ಸಹವಾಸವನ್ನೂ, ಹರಕು ಬಟ್ಟೆಗಳನ್ನು ವರ್ಜಿಸುವುದೂ, ಪ್ರಸಿದ್ಧರಾಗಿಯೂ ಜ್ಞಾನವೈರಾಗ್ಯಾದಿಗಳಿಂದ ವೃದ್ಧರಾಗಿಯೂ ಇರುವ ಮಹಾತ್ಮರನ್ನು ಸೇವಿಸುವುದೂ, ಭೂತದಯಾಪಶ್ಚಾತ್ತಾಪವೂ ಈ ಎಂಟು ಗುಣಗಳು ರಾಜನಿಗೆ ಅಷ್ಟೈಶ್ವರ್ಯಕ್ಕೆ ಬೀಜಪ್ರಾಯವಾಗಿರುವುದರಿಂದ ಇವುಗಳನ್ನು ಯಾವಾಗಲೂ ಬಿಡದೆ ನಡೆಯಿಸುತ್ತಿರಬೇಕು ॥೫೩॥೫೪॥

ಅಷ್ಟಾವೈಶ್ವರ್ಯಬೀಜಾನಿಪ್ರದೋಷಚಭವಾರ್ಚನಂ।
ಆರಾಧನಂಮಹಾಲಕ್ಷ್ಮ್ಯಶ್ಚಪ್ರತಿಭಾರ್ಗ್ಗವಾಸರಂ ॥೫೫॥

ತಾ॥ ಪ್ರತಿದಿನ ಪ್ರದೋಷ ಕಾಲಕ್ಕೆ ಸರಿಯಾಗಿ ಶಿವಪೂಜೆಯನ್ನೂ ಪ್ರತಿ ಶುಕ್ರವಾರದಲ್ಲೂ ಮಹಾಲಕ್ಷ್ಮೀ ಆರಾಧನೆಯನ್ನೂ ರಾಜನು ಮಾಡಬೇಕು ॥೫೫॥

ಸುವಾಸನೀಪೂಜನಂಚಸತ್ಪಾತ್ರಪ್ರತಿಪಾದನಂ।
ದೇವೀಮಹಾತ್ಮ್ಯಪಠನಂ ನವರಾತ್ರೇತದರ್ಚನಂ ॥೫೬॥

ತಾ॥ ಸುವಾಸನೀ ಪೂಜೆಯನ್ನೂ ಸತ್ಪಾತ್ರರಿಗೆ ಪೂಜಾದಾನಾದಿಗಳನ್ನೂ ದೇವಿಮಾಹಾತ್ಮ್ಯದ ಪಾರಾಯಣವನ್ನೂ ನವರಾತ್ರಿಯಲ್ಲಿ ವಿಶೇಷವಾಗಿ ದೇವಿ ಪೂಜೆಯನ್ನೂ ರಾಜನು ಮಾಡಬೇಕು ॥೫೬॥

ಮೃಷ್ಟಾನ್ನಂಮೃದುವಸ್ತ್ರಂಚಗಂಧಪುಷ್ಪಾಣಿಕಾಮಿನಿ।
ಸಂಗೀತಂಪುಷ್ಪತಲ್ಪೇಚ ತಾಂಬೂಲಂಚನಿಚಂದ್ರಕಂ ॥೫೭॥
ಅಷ್ಟಭೋಗಾ ಇಮೇಪ್ರೋಕ್ತಾ ರಾಜ್ಞಾಂಭುವಿಸುಖಾತ್ಮಕಾಃ।
ಸಿಂಹಾಸನಸಿತಚ್ಛತ್ರಚಾಮರಾಣಿಕಲಾಚಿಕಾ ॥೫೮॥

ತಾ॥ ಮೃಷ್ಟಾನ್ನವನ್ನೂ, ಶುಭ್ರವಾದ ಪೀತಾಂಬರಗಳನ್ನೂ ಗಂಧಪುಷ್ಪಗಳನ್ನೂ ಸುಂದರಾಂಗಿಯರನ್ನೂ, ಸಂಗೀತವನ್ನೂ, ತಾಂಬೂಲರಾಗವನ್ನೂ ಸಹ ಪ್ರಾಜ್ಞರು ಅಷ್ಟಭೋಗಗಳೆನ್ನುವರು. ಇವುಗಳೆಲ್ಲವೂ ರಾಜಭೋಗಕ್ಕೆ ಅನುಕೂಲವಾದ ಸುಖಗಳು ಮತ್ತು ಸಿಂಹಾಸನವೂ, ಶ್ವೇತಛತ್ರವೂ, ಚಾಮರಗಳೂ, ಧ್ವಜಗಳಿಂದ ಅಲಂಕೃತವಾದ ಸಲಾಕುಗಳೂ ರಾಜಯೋಗ್ಯಗಳು ॥೫೭॥೫೮॥

ಕುಂಚಿತಾಕುಂಡಿಕಾರತ್ನಕಂಬಳಿಂದುಂದುಭಿರ್ಧ್ವಜಃ ।
ಪತಾಕವ್ಯಜನುಯಾನಂ ಶಿಬಿಕಾಚಾಯುಧಾನಿಚ ॥೫೯॥
ಪಲ್ಯಾಣಂಚಖಲೀನಂಚರಾಜಚಿಹ್ನಾನಿನ್ಯೈವಿದುಃ ।
ಮದಃಕ್ರೋಧಸ್ಸಮತ್ವಂಚಕಾರ್ಯಂಸಂತೋಷಏವಚ ॥೬೦॥

ತಾ॥ ದೋಟಿಯಂತೆ ಸ್ವಲ್ಪ ಬಗ್ಗಿದ ವಿಶೇಷಾಯುಧವೂ, ರತ್ನಕಂಬಳಿಯೂ, ದುಂದುಭಿಯೂ, ಧ್ವಜವೂ, ನಿಶಾಣಿಯೂ, ಬೀಸಣಿಗೆಯೂ, ವಾಹನವೂ, ಪಲ್ಲಕ್ಕಿಯೂ, ದ್ವಾತ್ರಿಂಶದ್ವಿಧವಾಗಿರುವ ಆಯುಧ ವಿಶೇಷಗಳೂ, ಅಂಬಾರಿಯೂ ಮೊದಲಾದುವುಗಳು ಈತನೇ ರಾಜನೆಂದು ಗುರ್ತುಗಳನ್ನುಂಟುಮಾಡುತ್ತವೆ. ಆದ್ದರಿಂದ ಇವುಗಳಿಗೆ ರಾಜಚಿನ್ಹೆಗಳೆಂದು ಹೆಸರು. ಇದಲ್ಲದೆ ಮಧವೂ, ಕ್ರೋಧವೂ, ಸಮಬುದ್ಧಿಯೂ, ಕಾರ್ಯಸಾಮರ್ಥ್ಯವೂ, ಸಂತೋಷವೂ ॥೫೯॥೬೦॥

ಶ್ಲಕ್ಷ್ಣ್ಯಂಪ್ರತಿಕ್ರಿಯಾಯಾಂಚಸ್ವಭಾವಾಃಪ್ರಭುಜಾವಿಮಾ ।
ಇತ್ಯಾದಿಗುಣಸಂಪನ್ನಃಪಾಲಯೇದ್ಭೂಮಿಪೋಮಹೀಂ ॥೬೧॥

ತಾ॥ ವಿರೋಧಿಗಳು ಪ್ರತಿಯಾಗಿ ಮಾಡುವ ವಿಷಯಗಳಲ್ಲಿ ಕಾಠಿಣ್ಯವೂ, ಈ ಗುಣಗಳು ಪ್ರಭುತ್ವದೊಂದಿಗೇನೇ ಹುಟ್ಟುಸ್ವಭಾವ ಸಿದ್ಧವಾಗಿರುವುದು. ಆದ ಕಾರಣ ಅರಸಾದವನು ಇಲ್ಲಿ ನಿರೂಪಿಸಿರುವ ಗುಣಗಳಿಂದಲೂ ಕರ್ಮಗಳಿಂದಲೂ ಇತರವಾದ ರಾಜಧರ್ಮಕ್ಕೆ ವಿರೋಧವಲ್ಲದ ಕೃತ್ಯಗಳಿಂದ ಯುಕ್ತನಾಗಿ ಕಾಮಂದಕಾದಿ ನೀತಿ ಶಾಸ್ತ್ರಕ್ಕೆ ವಿರೋಧವಿಲ್ಲದಂತೆ ನ್ಯಾಯವಾಗಿ ರಾಜ್ಯವನ್ನಾಳಬೇಕು. ಹೀಗೆ ರಾಜ್ಯಭಾರವನ್ನು ಮಾಡುವ ರಾಜನಿಗೆ ಯಾವ ವಿಧದಲ್ಲೂ, ದೋಷವುಂಟಾಗುವುದಿಲ್ಲ ॥೬೧॥

ಬಾಹುಜೋರಕ್ತವರ್ಣಾಂಗಃಕ್ಷತ್ರಿಯೋಭೋಜನಪ್ರಿಯಃ ।
ವಿಶಾಲನೇತ್ರಸ್ತೇಜಸ್ವೀ ಸ್ವರ್ಗಭೋಗೋಚಿತಃ ಸ್ಮೃತಃ ॥೬೨॥

ತಾ॥ ಸನ್ನ ಬಾಹುಗಳ ದೆಸೆಯಿಂದ ಹುಟ್ಟಿದ ಕ್ಷತ್ರಿಯನು ರಕ್ತವರ್ಣವಾದ ಅವಯವಗಳುಳ್ಳವನಾಗಿಯೂ ಭೋಜನದಲ್ಲಿ ಪ್ರೀತಿಯುಳ್ಳವನಾಗಿಯೂ, ವಿಸ್ತಾರವಾದ ಕಣ್ಣುಗಳುಳ್ಳವನಾಗಿಯೂ, ತೇಜೋವಂತನಾಗಿಯೂ ಸ್ವರ್ಗಭೋಗಕ್ಕೆ ಸಮಾನವಾಗಿ ತನ್ನ ದೊರೆತನಕ್ಕೆ ಅನುಕೂಲವಾಗಿರುವಂತೆ ಅಷ್ಟಭೋಗಗಳನ್ನು ಅನುಭವಿಸುವುದಕ್ಕೆ ಅರ್ಹನಾಗಿರುವನು ॥೬೨॥

ತೇನಭೋಜ್ಯಸ್ತುಗೋಧೂಮಃ ಘೃತಂಸ್ಮೃತ್ಯುಕ್ತಮಾಮಿಷಂ ।
ಸಭಕ್ಷ್ಯಮನ್ನಂಭೋಕ್ತವ್ಯಂಬ್ರಾಹ್ಮಣೈಸ್ಸಹನಾರದ ॥೬೩॥

ತಾ॥ ಎಲೈ ನಾರದನೇ ? ಅರಸಾದವನು ತನ್ನ ವರ್ಣಾನುಗುಣ್ಯವಾಗಿ ಕೆಂಬಣ್ಣವಾಗಿರುವ ಗೋಧುವೆಯನ್ನೂ, ಸಮೃದ್ಧಿಯಾಗಿ ತೇಜೋವೃದ್ಧಿಕರವಾದ

ಘೃತವನ್ನೂ, ಸ್ಮೃತ್ಯುಕ್ತವಾದ ಮಾಂಸವನ್ನೂ, ಭಕ್ಷ್ಯಸಹಿತವಾದ ಮೃಷ್ಟಾನ್ನವನ್ನೂ ಭುಜಿಸಬೇಕು ||೬೩||

ಊಹಾಪೋಹಪಟುಶ್ಶೂರಶ್ಚೇಂಗಿತಜ್ಞಾನಕೋವಿದಃ |
ಪ್ರಭುರ್ಮಂತ್ರೋತ್ಸಾಹಶಕ್ತಿತ್ರಿತಯೇನಸಮನ್ವಿತಃ ||೬೪||

ತಾ|| ಅರಸಾದವನು ಊಹಾಪೋಹಚತುರನಾಗಿ, ಶೂರನಾಗಿ ಹೆರವರ ಇಂಗಿತವನ್ನು ಮುಖದರ್ಶನ ಮಾತ್ರದಿಂದಲೇ ತಿಳಿದು, ಪ್ರಭುತ್ವಶಕ್ತಿಯಿಂದಲೂ, ಮಂತ್ರಶಕ್ತಿಯಿಂದಲೂ, ಕಾರ್ಯಗಳ ವಿಷಯವಾಗಿ ಉತ್ಸಾಹಶಕ್ತಿಯಿಂದಲೂ ಕೂಡಿದವನಾಗಿ ರಾಜ್ಯಭಾರವನ್ನು ಮಾಡಬೇಕು ||೬೪||

ಸಾಮ್ನಿಭೇದೇಚದಾನೇಚದಂಡೇಕಾಲವಿಭಾಗವಿತ್ |
ರಥನಾಗಾಶ್ವಪಾದಾತಚತುರಂಗಬಲೈರ್ಯುತಃ ||೬೫||

ತಾ|| ಕಾಲಕ್ಕೆ ತಕ್ಕಂತೆ, ಸಾಮ, ದಾನ, ಭೇದ, ದಂಡ ಎಂಬ ಚತುರೋಪಾಯಗಳ ಸಮಯಾಸಮಯಗಳನ್ನೂ ಅವುಗಳ ಉಪಯೋಗವನ್ನೂ ಬಲ್ಲವನಾಗಿರಬೇಕು. ಮತ್ತು ರಥಗಳಿಂದಲೂ, ಆನೆಗಳಿಂದಲೂ, ಕುದುರೆಗಳಿಂದಲೂ, ಕಾಲಾಳುಗಳಿಂದಲೂ ಕೂಡಿದವನಾಗಿ ||೬೫||

ಸ್ವಕೀಯೇಪರಕೀಯೇಚಚಾರಮಂತ್ರೈರ್ವಿಚಾರವಿತ್ |
ಜ್ಞಾತಿಸಾಮಂತಭೃತ್ಯೇಷುಯಥಾಯೋಗ್ಯಂಪ್ರಸಾದಾತ್ ||೬೬||

ತಾ|| ತನ್ನ ದೇಶದ ಆಡಳಿತಗಳನ್ನೂ, ಪರರಾಯರ ವಿಚಾರವನ್ನೂ, ಚಾರರಿಂದಲೂ, ಮಂತ್ರಿಗಳಿಂದಲೂ ತಿಳಿದುಕೊಂಡು. ಜ್ಞಾತಿಗಳ ವಿಷಯದಲ್ಲೂ, ಸಾಮಂತ ಮಂಡಲಾಧೀಶ್ವರರ ವಿಷಯದಲ್ಲಿಯೂ, ಭೃತ್ಯರಲ್ಲಿಯೂ, ಯಥಾಯೋಗ್ಯವಾಗಿ ಕಾಲವನ್ನರಿತು ಅವರುಗಳನ್ನು ಅನುಗ್ರಹಿಸುತ್ತಿರಬೇಕು |||೬೬||

ಅಕುರ್ವನ್ಕೋಪಸಂತೋಷೌಕದಾಚನನಿರರ್ಥಕೌ |
ಆಯವ್ಯಯೇರಿಪೌಮಿತ್ರೇಗುಣದೋಷೇನಯೇನಯೇ ||೬೭||
ಕಾರ್ಯೇಕಾರ್ಯೇಪ್ಯಗೇಪುಣ್ಯೇಶಾಸ್ತ್ರದೃಷ್ಟ್ಯಾವಿಚಾರಯೇತ್ |
ಸಂಧಿವಿಗ್ರಹಯಾನಾನಿದ್ವೈಧೀಭವನಸಮಾಶ್ರಯಾಃ ||೬೮||

ತಾ|| ಆಯಾ ಸಮಯಗಳಲ್ಲಿ ನಿರರ್ಥಕವಾಗಿ ಕೋಪವನ್ನಾಗಲಿ, ಅನುಗ್ರವನ್ನಾಗಲಿ ಯಾವದೊಂದನ್ನು ಎಲ್ಲಿಯೂ ಎಂದಿಗೂ ಮಾಡಬಾರದು ಮತ್ತು ಲಾಭಾಲಾಭಂಗಳಲ್ಲಿಯೂ, ಶತೃಮಿತ್ರರಲ್ಲಿಯೂ ಗುಣದೋಷಂಗಳಲ್ಲಿಯೂ ಧರ್ಮಾಧರ್ಮಂಗಳಲ್ಲಿಯೂ, ನೀತಿಗಳಲ್ಲಿಯೂ, ಅನೀತಿಗಳಲ್ಲಿಯೂ, ಕಾರ್ಯಾಕಾರ್ಯಂಗಳಲ್ಲಿಯೂ ಪುಣ್ಯಪಾಪಗಳಲ್ಲಿಯೂ, ಶಾಸ್ತ್ರವೆಂಬ ನೇತ್ರದಿಂದ ವಿಚಾರಿಸಿ ಚನ್ನಾಗಿ ನೋಡುತ್ತಿರಬೇಕು.

ಮತ್ತು ಸಂಧಿ, ನಿಗ್ರಹ, ಯಾನ, ದ್ವೈಧೀಭಾವ, ಸಮಾಶ್ರಯ, ಆಸನ ಎಂಬ ಆರು ಗುಣಗಳನ್ನು ತಿಳಿದು ಕಾಲಾನುಗುಣ್ಯವಾಗಿ ಅವುಗಳನ್ನು ವಿಧಿಸುವುದರಲ್ಲಿ ಸಮರ್ಥನಾಗಿರಬೇಕು ||೧೭||೧೮||

ಆಸನಂಷಡ್ಗುಣಾಹ್ಯೇತೇತಾನ್ವಿದಿತ್ವಾವಿಧೌಕ್ಷಮಃ ।
ಅಕ್ಷಸ್ತ್ರೀಮೃಗಯಾದ್ಯೂತನಿದ್ರಾಲಸ್ಯಮಧುಸ್ಥಿತಿಃ ||೧೯||
ಯತ್ಸಪ್ತವ್ಯಸನಂತಸ್ಮಿನ್ನಕುರ್ವಾಣೋಮತಿಂಸದಾ ।
ದರ್ಶಯನ್ಸ್ವಸ್ವಭೃತ್ಯೇಷುಗತ್ವಾಪ್ರತಿದಿನಂಸತಾಂ ||೨೦||
ಚರ್ಸ್ವರಾಜ್ಯೇಪೂರ್ವಸ್ಮಾತ್ಪುಷ್ಟಿಂಜಾಪದೇಜನೇ ।
ಪಶುವೃದ್ಧಿಂ ಸಸ್ಯವೃದ್ಧಿಂ ನೀತಿಂ ಧರ್ಮಂ ವಿಚಾರಯೇ ||೨೧||
ಬಲಕೋಶಸಮೃದ್ಧಾನಿಚಾರೈಶ್ಚತ್ರಾಪರಾನ್ಮೃಶ ।
ಬಲವೃದ್ಧಿಂ ಕೋಶವೃದ್ಧಿಂ ರಾಜ್ಯವೃದ್ಧಿಂ ಪ್ರಕಲ್ಪಯೇತ್ ||೨೨||
ಕೋಶವೃದ್ಧಿಂ ಸವಿಪ್ರಸ್ವಾಂಬಲವೃದ್ಧಿಮಚೇತನಾಂ ।
ಭೂತ್ವಾವಿಪ್ರಮಹೀರಾಜ್ಯವೃದ್ಧಿಂ ಚಾಪಿನಕಾರಯೇತ್ ||೨೩||
ಏವಂಭೂತೋಮಹೀಪಾಲೋಬ್ರಾಹ್ಮಣೈರ್ಮಂತ್ರಿಭಿರ್ವೃತಃ ।
ಇತಿಸಂಮ್ಯಕ್ಪುರಸ್ಕೃತ್ಯಕುಲಯೇದ್ರಾಜ ಲಕ್ಷಣಂ ||೨೪||

ತಾ|| ಅಕ್ಷ, ದ್ಯೂತ, ಮದ್ಯ, ಪರಸ್ತ್ರೀ, ಮೃಗಯಾವಿಹಾರ, ನಿದ್ರೆ, ಆಲಸ್ಯ ಮಧ್ಯಪಾನ ಎಂಬೀಏಳು ವ್ಯಸನಗಳಿಗೆ ಮನಸ್ಸು ಕೊಡದೆ ಶುದ್ಧನಾಗಿರಬೇಕು. ತಮ್ಮ ತಮ್ಮ ಭೃತ್ಯರಲ್ಲಿ ಸೌಹಾರ್ದವನ್ನು ತೋರಿಸುತ್ತಲೂ, ದಿನದಿನವೂ ಸತ್ಪುರುಷರ ಸನ್ನಿಧಿಗೆ ಹೋಗಿ ಸೇವಿಸುತ್ತಲೂ, ದೇಶದಲ್ಲಿರುವ ಜನರಿಗೆಲ್ಲ ಧೈರ್ಯವನ್ನು ಮೊದಲಿಗಿಂತಲೂ ಹೆಚ್ಚಾಗಿ ಪುಷ್ಟಿಸುತ್ತಾ ರಾಜ್ಯದಲ್ಲಿ ಸಂಚರಿಸುತ್ತಲೂ, ಪಶುಗಳ ಕ್ಷೇಮವನ್ನೂ, ಬೆಳೆಗಳ ಅಭಿವೃದ್ಧಿಯನ್ನೂ, ರಾಜನೀತಿಯನ್ನೂ ಧರ್ಮವನ್ನೂ ಸಹ ವಿಚಾರಿಸುತ್ತಾ ತನ್ನ ಬಲವನ್ನೂ ಭಂಡಾರವನ್ನೂ ರಾಜ್ಯಾಭಿವೃದ್ಧಿಯನ್ನೂ ಮಾಡಿಕೊಂಡು ವೈರಿಗಳ ಸೈನ್ಯವನ್ನೂ ಅವರ ಪ್ರಾಬಲ್ಯವನ್ನೂ ಚಾರರ ಮುಖದಿಂದ ವಿಚಾರಣೆ ಮಾಡುತ್ತಲೂ, ಬ್ರಹ್ಮಸ್ವದಿಂದ ಭಂಡಾರಾಭಿವೃದ್ಧಿಯನ್ನೂ, ಚೈತನ್ಯವಿಲ್ಲದವರಿಂದ ಸೈನ್ಯವನ್ನು ಬೆಳೆಯಿಸುವಿಕೆಯಿಂದಲೂ ನಿರ್ಮಿಸಬೇಕು. ಬ್ರಾಹ್ಮಣರ ಭೂಮಿಯಿಂದ ರಾಜ್ಯಾಭಿವೃದ್ಧಿಯನ್ನು ಎಂದಿಗೂ ಯಾವಾಗಲೂ ಮಾಡಕೂಡದು. ಈ ಪ್ರಕಾರವಾಗಿ ರಾಜನು ತನ್ನ ಮಂತ್ರಿಗಳಾದ ಬ್ರಾಹ್ಮಣರಿಂದ ಪರಿವೃತನಾಗಿ ಈ ರಾಜಧರ್ಮ ನೀತಿ ಮೊದಲಾದುವುಗಳನ್ನು ನಡೆಸುತ್ತಾ ರಾಜನಾದವನು ರಾಜ್ಯಭಾರವನ್ನು ಮಾಡಬೇಕು ||೧೯||೨೦||೨೧||೨೨||೨೩||೨೪||

ಚಂದ್ರ ವಂಶ ವರ್ಣನೆ

ಐಳಃಪುರೂರವಾಶ್ಚಾಥರಾಜಾ ರಾಜ್ಯರುಪಾಲಯತ್ ।
ತಸ್ಯಪುತ್ರಾಬಭೋವುರ್ಹಿಸಪ್ತೇಂದ್ರಸಮತೇಜಸಃ ॥೨೫॥

ತಾ॥ ಇಳಾಪುತ್ರನಾದ ಪುರೂರವಸ್ಸೆಂಬ ಮಹಾರಾಯನು ರಾಜ್ಯವನ್ನಾಳುತ್ತಿದ್ದನು. ಆ ಪುರೂರವಸ್ಸೆಂಬ ರಾಜನಿಗೆ ಇಂದ್ರ ಸಮಾನರಾದ ಏಳು ಮಂದಿ ಕುಮಾರರಾದರು ॥೨೫॥

ಆಯುರ್ಮಾಯುರಮಾಯುರ್ವಿಶ್ವಾಯುಶ್ಚೈವವೀರ್ಯವಾನ್ ।
ಶ್ರುತಾಯುಶ್ಚ ಶತಾಯುಶ್ಚ ದಿವ್ಯಾಯುಶ್ಚೋರ್ವಶೀಸುತಾಃ ॥೨೬॥

ತಾ॥ ಪುರೂರುವಸ್ಸಿನ ದೆಸೆಯಿಂದ ಊರ್ವಶಿಯೆಂಬ ದೇವಲೋಕದ ಅಪ್ಸರಾಂಗನೆಯಲ್ಲಿ ಆಯುಸ್ಸು, ಮಾಯುಸ್ಸು, ಅಮಾಯುಸ್ಸು, ವಿಶ್ವಾಯುಸ್ಸು, ಶೃತಾಯುಸ್ಸು, ಶತಾಯುಸ್ಸು, ದಿವ್ಯಾಯುಸ್ಸು ಎಂಬದಾಗಿ ಪ್ರಸಿದ್ಧರಾದ ಏಳು ಜನ ಕುಮಾರರು ಉದಯಿಸಿದರು ॥೨೬॥

ಆಯುಷಸ್ತನಯಾವೀರಾಃಪಂಚೈವಾಸನ್ಮಹೌಜಸಃ ।
ಸ್ವರ್ಭಾನುತನಯಾಯಾಂವೈಪ್ರಭಾಯಾಮಿತಿನಶ್ರುತಂ ॥೨೭॥

ತಾ॥ ಆಯುಸ್ಸೆಂಬ ಜ್ಯೇಷ್ಠಕುಮಾರನಿಗೆ, ಸ್ವರ್ಭಾನುವಿನ ಮಗಳಾದ ಪ್ರಭಾದೇವಿಯಲ್ಲಿ ಶೂರರಾದ ಐದು ಮಂದಿ ಪುತ್ರರಾದರು ॥೨೭॥

ನಹುಷಃಪ್ರಥಮಸ್ತೇಷಾಂ ಧರ್ಮಜ್ಞೋಲೋಕವಿಶ್ರುತಃ ।
ನಹುಷಸ್ಯತುದಾಯಾದಾದೇವೇಂದ್ರಸಮತೇಜಸಃ ॥೨೮॥
ಉತ್ಪನ್ನಾಪಿತೃಕನ್ಯಾಯಾಂ ವಿರಜಾಯಾಂ ಮಹಾಬಲಾಃ ।
ಯತಿರ್ಯಯಾತಿಸ್ಸಂಯಾತಿರಾಯಾತಿಃ ಪಂಚನೋಂಧಕಃ ॥೨೯॥

ತಾ॥ ಅವರೊಳಗೆ ಪರಮಧರ್ಮಿಷ್ಠನಾದ ಲೋಕಪ್ರಖ್ಯಾತನಾದ ನಹುಷನೆಂಬುವನೇ ಜ್ಯೇಷ್ಠಪುತ್ರನು ಅವನಿಂದ ಪಿತೃ ಕನ್ನಿಕೆಯಾದ ವಿರಜೆ ಎಂಬಾಕೆಯಲ್ಲಿ ಯತಿ, ಯಯಾತಿ, ಸಂಯಾತಿ, ಅಯಾತಿ, ಅಂಧಕರೆಂಬ ಐದು ಮಂದಿ ಪುತ್ರರು ದೇವೇಂದ್ರನಂತೆ ಪ್ರಕಾಶಮಾನರಾಗಿ ಶೋಭಿಸಿದರು ॥೨೮॥೨೯॥

ತೇಷಾಂಯಯಾತಿಃ ಪಂಚಾನಾಂ ಮಹಾಬಲ ಪರಾಕ್ರಮಃ ।
ದೇವಯಾನೀ ಮುಶನಸಸ್ಸುತಾಂ ಭಾರ್ಯಾಮವಾಪಸಃ ॥೩೦॥

ತಾ॥ ಆ ಐದು ಮಂದಿ ಕುಮಾರರಲ್ಲಿ ಯಯಾತಿ ಎಂಬುವನು ಮಹಾಪರಾಕ್ರಮಶಾಲಿಯಾಗಿದ್ದನು. ಆ ಯಯಾತಿ ಮಹಾರಾಯನು ಶುಕ್ರಾಚಾರ್ಯನ ಪುತ್ರಿಯಾದ ದೇವಯಾನೀ ಎಂಬಾಕೆಯನ್ನು ವಿವಾಹವನ್ನು ಮಾಡಿಕೊಂಡನು ॥೩೦॥

ಶರ್ಮಿಷ್ಠಾ ಮಾಸುರೀಂಚೈವತನಯಾಂವೃಷಪರ್ವಣಃ ।
ಯದುಂಚತುರ್ವಸುಂಚೈವದೇವಯಾನೀವ್ಯಜಾಯತ ॥೮೧॥

ತಾ॥ ತದನಂತರ ರಾಯನಾದ ಯಯಾತಿಯು ರಾಕ್ಷಸ ರಾಜನಾದ ವೃಷ ಪರ್ವನ ಪುತ್ರಿಯಾದ ಶರ್ಮಿಷ್ಠೆ ಎಂಬುವಳನ್ನು ಮದುವೆಯಾದನು. ಶುಕ್ರಾಚಾರ್ಯನ ಪುತ್ರಿಯಾದ ದೇವಯಾನೀ ದೇವಿಯಲ್ಲಿ ಯದು, ಚತುರ್ವಸು ಎಂಬ ಇಬ್ಬರು ಪುತ್ರರನ್ನು ಪಡೆದನು ।।೮೧।।

ದೃಹ್ಯಂಜಾನುಂಚಪೂರುಂಚಶರ್ಮಿಷ್ಠಾ ಚಾಪ್ಯಜೀಜನತ್ ।
ಸೋಭ್ಯಷಿಂಚದತಿಕ್ರಮ್ಯಯದುಂಜ್ಯೇಷ್ಠಮನಿಂದಿತಂ ॥೮೨॥

ತಾ॥ ರಾಕ್ಷಸರಾಜನ ಕುವರಿಯಾದ ಶರ್ಮಿಷ್ಠೆಯಲ್ಲಿ ದೃಹ್ಯ, ಜಾನು ಪೂರು ಎಂಬ ಮೂರು ಮಂದಿ ಕುಮಾರರುಂಟಾದರು. ಯಯಾತಿ ಮಹಾರಾಯನು ತನ್ನ ಜ್ಯೇಷ್ಠಕುಮಾರನಾದ ಯದುವು ರಾಜ್ಯವನ್ನು ಪಾಲಿಸುವುದಕ್ಕೆ ಸಮರ್ಥನಾಗಿದ್ದರೂ ತನ್ನ ಕಿರಿಯ ಮಗನಾದ ಪೂರು ಎಂಬುವನಿಗೆ (ಪುರೂರವಸ್ಸು) ರಾಜ್ಯಪಟ್ಟಾಭಿಷೇಕ ವನ್ನು ಮಾಡಿದನು ।।೮೨।।

ಯದೋರಪ್ಯಭವನ್ಪುತ್ರಾಃಪಂಚದೇವಸುತೋಪಮಾಃ ।
ಸಹಸ್ರಜಿತ್ತಥಾಜ್ಯೇಷ್ಠಃ ಕ್ರೋಷ್ಟುನೀಲೋಜಿತೋರಘುಃ ॥೮೩॥

ತಾ॥ ಆ ಯದುರಾಯನಿಗೆ ಸಹಸ್ರಜಿತು, ಕ್ರೋಷ್ಟುವು, ನೀಲನು, ಅಜಿತನು, ರಘುವು ಎಂಬ ದೇವಸಮಾನರಾದ ಐದು ಮಂದಿ ಕುಮಾರರುಂಟಾದರು ।।೮೩।।

ವಂಶಃಪಾಪಹರೋನ್ರೂಣಾಂಕ್ರೋಷ್ಟೋರಥನಿಭೋಥತಃ ।
ಕ್ರೋಷ್ಟೋರೇಕೋಭವತ್ಪುತ್ರೋಧ್ವಜನೀಪ ಇತಿಸ್ಮೃತಃ ॥೮೪॥

ತಾ॥ ವಂಶದ ಸಕಲ ಪಾಪಗಳನ್ನು ಪರಿಹರಿಸುವಂಥಾವನಾದ ಕ್ರೋಷ್ಟು ವೆಂಬ ಮಹಾರಾಯನಿಗೆ ಧ್ವಜನೀಪನೆಂಬ ಕುಮಾರನುಂಟಾದನು. ।।೮೪।।

ತಸ್ಯಪುತ್ರೋಮಹಾಮೂರ್ತಿರ್ವಿಶಂಕುಸ್ತತ್ಸುತೋಭವತ್ ।
ವಿಶಂಕೋರಭವತ್ಪುತ್ರೋನಾಮ್ನಾ ಚಿತ್ರರಥೋಬಲೀ ॥೮೫॥

ತಾ॥ ಆತನ ಕುಮಾರನು ಮಹಾಮೂರ್ತಿ ಎಂಬುವನು. ಆತನ ಕುಮಾರನು ವಿಶಂಕು ಎಂಬಾತನು. ಆ ವಿಶಂಕುವಿನ ಪುತ್ರನು ಚಿತ್ರರಥನೆಂಬ ಮಹಾಭುಜಭಲಶಾಲಿ ಯಾಗಿ ಪ್ರಸಿದ್ಧನಾದನು ।।೮೫।।

ಅಥಚೈತ್ರರಥೀಲೋಕೇಶಶಿಬಿಂದುರಿತಿಸ್ಮೃತಃ ।
ಶಶಿಬಿಂದೋಃಪೃಥುಯಶಾರಾಜಾಭೂದ್ಧರ್ಮತತ್ಪರಃ ॥೮೬॥

ತಾ॥ ಆ ಚಿತ್ರರಥನ ಮಗನು ಶಶಿಬಿಂದು ಎಂಬ ಪ್ರಖ್ಯಾತನು ಆ ಶಶಿ ಬಿಂದುವಿಗೆ ಧರ್ಮಾರ್ಥನಾದ ಪೃಥುಯಶಸ್ಸು ಎಂಬ ಕುಮಾರನಾದನು ।।೮೬।।

ಪೃಥುಕರ್ಮಾಚತತ್ಪುತ್ರೋಹ್ಯಸ್ಮಿಕ್ರತುರಥೋಭವತ್ ।
ಪೃಥುಶ್ರವಾಸ್ತುತತ್ಪುತ್ರಸ್ತಸ್ಯಾಸೀತ್ಪೃಥುಸತ್ತಮಃ ॥೮೭॥

ತಾ॥ ಆ ಪೃಥುಯಶಸ್ಸಿನ ಮಹಾರಾಜನಿಗೆ ಪೃಥುಕರ್ಮನೆಂಬ ಕುಮಾರನಾದನು. ಆತನಿಗೆ ಕ್ರತುವೆಂಬ ಪುತ್ರನಾದನು. ಆ ಮಹಾರಾಜನಿಗೆ ಪೃಥುಶ್ರವಸ್ಸೆಂಬ ಕುಮಾರನುಂಟಾದನು. ಆ ರಾಜನಿಗೆ ಪೃಥುಸತ್ತಮನೆಂಬ ಕುಮಾರನಾದನು ॥೮೭॥

ಉಶನಾಸ್ತಸ್ಯಪುತ್ರೋಭೂಚ್ಛೀತೇಷುಸ್ತತ್ಪುತ್ರೋವತ್ ।
ತಸ್ಯಾಭೂದ್ರುಕ್ತಕವಚಶ್ಶರಾವೃತ್ತಸ್ತುತತ್ಸುತಃ ॥೮೮॥

ತಾ॥ ಆ ಪೃಥುಸತ್ತಮ ರಾಜನ ಮಗನು ಉಶನಸ್ಸೆಂಬಾತನು. ಆತನ ಕುಮಾರನು ಶೀತೇಷುವೆಂದು ಪ್ರಸಿದ್ಧನಾದವನು. ಆ ರಾಜನಿಗೆ ರಕ್ತಕವಚನೆಂಬ ನಪುತ್ರನಾದನು. ಆತನ ಕುಮಾರನು ಶರಾವೃತ್ತನೆಂದು ಪ್ರಸಿದ್ಧನಾದನು ॥೮೮॥

ಶರಾವೃತ್ತಸುತೋಜಜ್ಞೇಸ್ವಾಮಿಷೋಲೋಕವಿಶ್ರುತಃ ।
ತಸ್ಮಾದ್ವಿದರ್ಭಸ್ಸಂಜಜ್ಞೇವಿಧರ್ಭಾತ್ಕ್ರಥಕೌಶಿಕೌ ॥೮೯॥

ತಾ॥ ಆ ಶರಾವೃತ್ತನ ಕುಮಾರನು ಸ್ವಾಮಿಷನೆಂದು ಲೋಕಪ್ರಖ್ಯಾತನಾದನು ಆತನ ಮಗನು ವಿಧರ್ಭನೆಂಬುವನು. ಅವನ ಪುತ್ರರೇ ಕ್ರಥಕನು, ಕೌಶಿಕನು ಎಂಬ ಇಬ್ಬರು ಕುಮಾರರುಂಟಾದರು ॥೮೯॥

ರೋಮಪಾದಸ್ತೃತೀಯಸ್ತುಬಭ್ರುಸ್ತಸ್ಯಾತ್ಮಜೋನೃಪಃ ।
ವೃತ್ತಿಸ್ತಸ್ಯಾಭವತ್ಪುತ್ರಶ್ಶಂತಸ್ತಸ್ಯಾಭವತ್ಸುತಃ ॥೯೦॥

ತಾ॥ ಆ ವಿಧರ್ಭನೆಂಬ ರಾಜನ ಮೂರನೆಯ ಮಗನೇ ರೋಮಪಾದನೆಂಬ ಮಹಾಪರಾಕ್ರಮಿಯು. ಆ ರೋಮಪಾದ ರಾಜನಿಗೆ ಬಭ್ರುವೆಂಬಾತನು. ಆತನಿಗೆ ವೃತ್ತಿ ಎಂಬ ಕುಮಾರನಾದನು. ಆ ಮಹಾರಾಜನಿಗೆ ಶಂತನೆಂಬ ಮಹಾಕೀರ್ತಿಶಾಲಿಯಾದ ಕುಮಾರನುಂಟಾದನು ॥೯೦॥

ಶಂತಸ್ಯಪುತ್ರೋಬಲವನ್ನಾಮ್ನಾವಿಶ್ವವಹಶ್ಶುಭಃ ।
ತಸ್ಯಪುತ್ರೋಮಹಾವೀರಃಪ್ರಜಾವಾನ್ಕುಶಿಕಸ್ತತಃ ॥೯೧॥

ತಾ॥ ಆ ಶಂತನ ಮಹಾರಾಯನಿಗೆ ಮಹಾಬಲವಂತನಾದ ವಿಶ್ವವಹನೆಂಬ ಕುಮಾರನುಂಟಾದನು. ಆತನ ಪುತ್ರನು ಮಹಾಶೂರನಾಗಿಯೂ ಮಕ್ಕಳೊಂದಿಗನಾಗಿಯೂ ಇರುವ ಕುಶಿಕನೆಂದು ಪ್ರಖ್ಯಾತನಾದನು ॥೯೧॥

ಅಭೂತ್ತಸ್ಯಸುತಶ್ಶ್ರೀಮಾನ್ಸುಮನಸ್ಕೋಮಹಾಮನಾಃ ।
ತಸ್ಯಾಪ್ಯಾಸೀನ್ಮಕ್ತರಾಜೋರುದ್ರಭಕ್ತೋಮಹಾಬಲಃ ॥೯೨॥

ತಾ॥ ಆ ಕುಶಿಕ ಮಹಾರಾಜನ ನಂದನನೇ ಮಹಾಮನಸ್ವಿಯಾದ ಸುಮನಸ್ಕನೆಂಬ ಬ್ರಹ್ಮಪುತ್ರನು. ಆ ಮಹಾರಾಜನಿಗೆ ರುದ್ರಭಕ್ತನಾಗಿಯೂ ಬಹುಬಲವಂತ

ನಾಗಿಯೂ ಇರುವ ಮುಕ್ತರಾಜನೆಂಬ ಮಹಾಪ್ರಖ್ಯಾತನಾದಂತಹ ಪುತ್ರನು ಉಂಟಾದನು ॥೧೨॥

ಯೇನಾಮಿತಪ್ರಭಾವೇನದೈತೇಯಾವಿಲಯಂಗತಾಃ ।
ಸಪುತ್ರೇಣಸರಾಷ್ಟ್ರೇಣದೇವಾಸ್ಸೇಂದ್ರಪುರೋಗಮಾಃ ॥೧೩॥
ಮುಮುಚುರ್ವಿಸ್ಮಿತಾಭೀತಿಂರಾಕ್ಷಸಾದ್ಘೋರದರ್ಶನಾತ್ ।
ಸ್ತುತ್ವಾಚತಂಮಹಾರಾಜಸ್ವಾನ್ಸ್ವಾನ್ಲೋಕಾನ್ಪ್ರಪೇದಿರೇ ॥೧೪॥

ತಾ॥ ಮಹಾಪರಾಕ್ರಮಿಯಾಗಿದ್ದ ಮುಕ್ತರಾಜನೆಂಬ ಕುಮಾರನಿಂದೊಡಗೂಡಿದವನಾಗಿಯೂ, ರಾಜ್ಯಸಂಪನ್ನನಾಗಿಯೂ ಇರುವ ಯಾವ ಸುಮನಸ್ಕ ಮಹಾರಾಯನಮಗನಿಂದ ದುರುಳರಾದ ಲೋಕಕಂಟಕರಾದ ರಕ್ಕಸರೆಲ್ಲರೂ ಮಡಿದರೋ ಮತ್ತು ಇಂದ್ರಾದಿ ದೇವತೆಗಳೆಲ್ಲರೂ ಯಾವಾತನ ಭುಜಬಲದಿಂದ ಭಯಂಕರರಾದ ರಾಕ್ಷಸರ ಭೀತಿಯನ್ನು ತೊರೆದರೋ, ಅದಲ್ಲದೆ ಯಾವ ಮಹಾರಾಯನನ್ನು ಊರ್ಧ್ವಲೋಕ ವಾಸಿಗಳಾದ ದೇವತೆಗಳೆಲ್ಲರೂ ಸ್ತುತಿಸಿ ನಿರ್ಭಯರಾಗಿ ತಮ್ಮ ತಮ್ಮ ಲೋಕಗಳನ್ನೈದಿದರೋ ಅಂಥ ಪರಾಕ್ರಮಶಾಲಿಯಾದ ಆ ಸುಮನಸ್ಕ ಮಹಾರಾಯನ ಮಗನಾದ ಮುಕ್ತರಾಜನು ರಾಜ್ಯವನ್ನಾಳುತ್ತಿದ್ದನೆಂದು ಬ್ರಹ್ಮನು ನಾರದ ಮುನಿಗೆ ಹೇಳಿದನು ॥೧೩॥೧೪॥

ಇತಿ ಶ್ರೀ ಬ್ರಹ್ಮಾಂಡಪುರಾಣೇ ಬ್ರಹ್ಮನಾರದ ಸಂವಾದೇ ವರ್ಣವೈಭವಖಾಂಡೇ ಚಾತುರ್ವರ್ಣ ವೈದಿಕಧರ್ಮೋನಾಮ ಪ್ರಥಮೋಧ್ಯಾಯ ಸಮಾಪ್ತಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮ ನಾರದ ಸಂವಾದದಲ್ಲಿ ವರ್ಣವೈಭವಖಂಡದಲ್ಲಿ ನಾಲ್ಕು ವರ್ಣಗಳ ವೈದಿಕಧರ್ಮವೆಂಬ ಮೊದಲನೆಯ ಅಧ್ಯಾಯವು ಸಮಾಪ್ತವು.

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಎರಡನೆಯ ಅಧ್ಯಾಯ :-

ಸುಮನಸ್ಕನ ಜನನ

ನಾರದ ಉವಾಚ :-

ಪಿತಾಮಹಮಹಾಪ್ರಾಜ್ಞವಿಸ್ತರಾದ್ವಕ್ತುಮರ್ಹಸಿ ।
ಇದಾನೀಂಶ್ರೋತುಮಿಚ್ಛಾಮಿಮೌಕ್ತಿಕಾನಾಂಕುಲೋದ್ಭವಂ ॥೧॥

ತಾ॥ ಮಹಾ ಪ್ರಾಜ್ಞಶಾಲಿಯಾದ ಪಿತಾಮಹನೇ ! ಮೌಕ್ತಿಕಕುಲದ ಉತ್ಪತ್ತಿಯನ್ನು ನಾನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಅದನ್ನು ನೀನು ವಿಸ್ತರಿಸಿ ಹೇಳಲು ಸಮರ್ಥನಾಗಿರುವೆ ॥೧॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿಮೌಕ್ತಿಕಾನಾಂಕುಲೋದ್ಭವಂ ।
ಮಹಾದೇವಹೃದುದ್ಭೂತಂಕುಲಂಮೌಕ್ತಿಕನಾಮಕಂ ॥೨॥

ತಾ॥ ಎಲೈ ನಾರದ ಮುನಿಯೇ ? ಮೌಕ್ತಿಕ ಕುಲದ ಉತ್ಪತ್ತಿಯನ್ನು ಹೇಳುತ್ತೇನೆ ಲಾಲಿಸುವವನಾಗು, ಮೌಕ್ತಿಕನಾಮಕುಲವು ಶ್ರೀ ಪರಮೇಶ್ವರನ ಹೃದಯ ಕಮಲದಿಂದ ಉತ್ಪನ್ನವಾದದ್ದು ಅಂದರೆ ಶ್ರೀ ಪರಮೇಶ್ವರ ಮಾನಸಸಂಭವವೆಂದು ಹೆಸರು ॥೨॥

ವೇದೋಕ್ತಮಾರ್ಗಸಂಯುಕ್ತಂ ಆರ್ಯಕ್ಷತ್ರಿಯನಾಮಕಂ ।
ಇತಿಭ್ರುವಂತಂಲೋಕೇಶಂ ಪ್ರಣಿಪತ್ಯಮಹಾಮುನಿಃ ॥೩॥

ತಾ॥ ವೇದೋಕ್ತ ಮಾರ್ಗವಾದ ಅನಾದಿ ಕಾಲದ ಧರ್ಮದಿಂದ ಕೂಡಿದ ಈ ಮೌಕ್ತಿಕ ಕುಲಕ್ಕೆ ಆರ್ಯಕ್ಷತ್ರಿಯರೆಂಬ ನಾಮಧೇಯವನ್ನು ಪರಮೇಶ್ವರನು ಕರುಣಿಸಿ ಕೊಟ್ಟಿರುವ ನಾಮಧೇಯವು ಅದನ್ನು ಮಹಾಮುನಿಯಾದ ನಾರದನೇ ತಿಳಿಯು ವಂಥವನಾಗು ॥೩॥

ಉವಾಚಮಧುರಂವಾಕ್ಯಂ ಬ್ರಹ್ಮಾಣಂಲೋಕಶಂಕರಂ ।
ಕಿಮರ್ಥಂಉಗ್ರಮನಸಿಜಾತಂ ತತ್ಕುಲನಾಮಕಂ ॥೪॥
ಶ್ರದ್ಧಾನಾಯಶಿಷ್ಯಾಯಮಂತವಪುತ್ರಾಯಧೀಮತೇ ।
ಮಹ್ಯಂತದ್ವೈತ್ತಮಖಿಲಂ ವಿಸ್ತರಾದ್ವಕ್ತುಮರ್ಹಸಿ ॥೫॥

ತಾ॥ ಬ್ರಹ್ಮದೇವನಿಗೆ ನಾರದಮುನಿಯು ನಮಸ್ಕರಿಸಿ ಮಧುರವಾದ ನುಡಿಗಳಿಂದ ಪ್ರಶ್ನಿಸಿದ್ದೇನೆಂದರೆ ಆರ್ಯಕ್ಷತ್ರಿಯ ಕುಲವು ಪರಮೇಶ್ವರನ ಮನಸ್ಸಿನಿಂದ

ಹೇಗುಂಟಾಯಿತು ಮತ್ತು ಕ್ಷತ್ರಿಯರಲ್ಲಿ ಈ ನಾಮಭೇದವನ್ನು ಪರಮೇಶ್ವರನು ಯಾವ ಕಾರಣಕ್ಕಾಗಿ ನಿಯಮಿಸಿದನು ಎಂಬ ಎಲ್ಲಾ ವಿಷಯಗಳನ್ನು ನಿನ್ನ ಪ್ರಿಯಪುತ್ರನೂ ಬುದ್ಧಿಯುಳ್ಳವನೂ, ಶ್ರದ್ಧೆಯುಳ್ಳವನೂ, ಶಿಷ್ಯನೂ ಆದ ನನಗೆ ಆ ವೃತ್ತಾಂತವನು, ವಿಸ್ತರಿಸಿ ಹೇಳುವನಾಗು ಎಂದು ನಾರದಮುನಿಯು ಪ್ರಶ್ನಿಸಿದನು ॥೪॥೫॥

ಶ್ರೂಯತಾಂಸಾವಧಾನೇನ ವಕ್ಷ್ಯಾಮೇತತ್ಕುಲೋದ್ಭವಂ ।
ಮೇಭುಜೇದಕ್ಷಿಣೇಕಶ್ಚಿತ್ಸುಮನಸ್ಕ ಇತಿಶ್ರುತಃ ॥೬॥

ತಾ॥ ಎಲೈ ನಾರದನೇ ಸಾವಧಾನದಿಂದ ಕೇಳುವವನಾಗು, ಈ ಆರ್ಯಕ್ಷತ್ರಿಯ ವಂಶದ ಉತ್ಪತ್ತಿಯನ್ನು ವಿವರಿಸಿ ಹೇಳುತ್ತೇನೆ. ನನ್ನ ಬಲಭುಜದಿಂದ ಸುಮನಸ್ಕ ನೆಂಬುವನು ಹುಟ್ಟಿದನು ೬॥

ಜಾತಶ್ಚಂದ್ರಸ್ಯವಂಶಸ್ಯ ಕರ್ತಾಸೋಪಿಮಹಾಮತೇ ।
ತಸ್ಯತದ್ವಂಶಜಾನಾಂಚ ಕ್ರಿಯಾ ವೇದೋಕ್ತಮಾರ್ಗಗಾಃ ॥೭॥

ತಾ॥ ಚಂದ್ರವಂಶಕ್ಕೆ ಕರ್ತನಾದ ಒಬ್ಬಾನೊಬ್ಬನು ಹುಟ್ಟಿದನು. ಆತನೂ, ಆತನ ವಂಶೀಯರೂ ವೇದೋಕ್ತಮಾರ್ಗಾನುಸಾರವಾದ ಕರ್ಮಗಳನ್ನು ಆಚರಿಸುವವ ರಾಗಿರುವರು. ॥೭॥

ವಕ್ಷ್ಯಾಮಿಚೋತ್ತರತ್ರೇಣತಸ್ಯಭಾರ್ಯೋದ್ಭವಕ್ರಮಃ ।
ಇದಾನೀಂ ಮುನಿಶಾರ್ದೂಲ ಸಮೂಹಿತಮನಾಶ್ಶೃಣು ॥೮॥

ತಾ॥ ಎಲೈ ಮುನಿಶಾರ್ದೂಲನಾದ ನಾರದನೆ! ಆ ಸುಮನಸ್ಕನ ಹೆಂಡತಿಯು ಎಲ್ಲಿ ಹುಟ್ಟಿದಳು ಆಕೆಯ ವೃತ್ತಾಂತವೇನು ಎಂಬುಂದನ್ನು ಶ್ರದ್ಧೆಯಿಂದ ಕೇಳುವವ ನಾಗು ॥೮॥

ಮಮ ವಾಮಭುಜಾತ್ಕಶ್ಚಿ ಜ್ಜಾತಸ್ಸೋಮೇತಿಸಂಜ್ಞಕಃ ।
ತಜ್ಜಾತಾ ಕನ್ಯಕಾಪೇಕಾ ಸುಶೀಲಾಲೋಕಸುಂದರೀ ॥೯॥

ತಾ॥ ನನ್ನ ಎಡಭುಜದಿಂದ ಸೋಮನೆಂಬ ಹೆಸರುಳ್ಳವನು ಹುಟ್ಟಿದನು. ಆ ಸೋಮನೆಂಬುವನಿಗೆ ಲೋಕಸುಂದರಿಯಾದ ಸುಶೀಲೆಯೆಂಬ ಹೆಸರಿನ ಕನ್ಯೆಯು ಹುಟ್ಟಿದಳು ॥೯॥

ಸುಮನಸ್ಕಸ್ಯಾಸಾಧ್ವೀ ಪತ್ನೀತಿಪ್ರೋಚ್ಯತೇತಥಾ ।
ಮಮ ಪಾದೌಪ್ರಣಮ್ಯಾಶು ಕೃತಾಂಜಲಿ ಪುಟಾಚಸಾ ॥೧೦॥

ತಾ॥ ಲೋಕಸುಂದರಿಯೂ ಸಾಧ್ವೀಮಣಿಯೂ ಆದ ಆ ಸುಶೀಲೆಯು ಸುಮನಸ್ಕನ ಪತ್ನಿಯಾಗಬೇಕೆಂಬ ನನ್ನ ಸಂಕಲ್ಪದಿಂದ ನನ್ನ ಪಾದಗಳಿಗೆ ಪ್ರಮಾಣ

ಗಳನ್ನು ಮಾಡಿ ಕರಗಳನ್ನು ಜೋಡಿಸಿಕೊಂಡು ಕೃತಾಂಜಲಿಯಾಗಿ ನನ್ನ ಮುಖಾರವಿಂದವನ್ನು ನೋಡುತ್ತಾ ॥೧೦॥

ಸ್ವಾಮಿನ್ಕಥಯಭರ್ತಾಮೇ ಪಾಣಿಗ್ರಹಣಕಾರಣಂ ।
ಏವಮುಕ್ತ್ವಾಸುಶೀಲಾಚ ತೂಷ್ಣೀಂತತ್ರಪ್ರತಿಷ್ಠತಃ ॥೧೧॥

ತಾ॥ ಎಲೈ ಪ್ರಭುವೇ! ನನಗೆ ಯಾರು ಭರ್ತರಾಗುವರು. ನನ್ನ ಪಾಣಿಗ್ರಹಣವು ಯಾರೊಡನೆ ಯಾವ ಕಾರಣದಿಂದ ಯಾವಾಗ ನಡೆಯುವದೆಂಬುದನ್ನು ಆಜ್ಞಾಪಿಸಬೇಕೆಂದು ನನ್ನನ್ನು ಪ್ರಾರ್ಥಿಸುತ್ತಾ ಅಲ್ಲಿಯೇ ನಿಂತಿದ್ದಳು ॥೧೧॥

ಬದರೀಕಾನನೇಚೈವ ತಪೋನಿಷ್ಠಾನ್ವಿತಾಮುದಾ ।
ತದಾಪದ್ಮಾಕರಸ್ಯೈವತೀರೇ ತಿಷ್ಠಸುಶೋಭನೇ ॥೧೨॥

ತಾ॥ ಎಲೈ ಶೋಭನಾಂಗಿಯೇ! ಬದರೀಕಾರಣ್ಯದ ಬಳಿಯಿರುವ ಪದ್ಮ ಸರೋವರದ ತೀರದಲ್ಲಿ ಹರ್ಷಚಿತ್ತಳಾಗಿ ನೀನು ತಪಸನ್ನಾಚರಿಸುತ್ತಾ ನಿನ್ನ ಪತಿಯಾಗಮನವನ್ನು ನಿರೀಕ್ಷಿಸಿಕೊಂಡಿರು ॥೧೨॥

ಮೇಭುಜೇದಕ್ಷಿಣೇಜಾತ ಸುಮನಸ್ಕ ಇತಿಸ್ಮೃತಃ ।
ಭರ್ತಾತೇಭವಿತಾಪುತ್ರೀ ತದರ್ಥಂತಪಮಾಚರ ॥೧೩॥

ತಾ॥ ನನ್ನ ಬಲಭುಜದಿಂದ ಉದ್ಭವಿಸಿರುವ ಸುಮನಸ್ಕನೆಂಬ ಹೆಸರುಳ್ಳವನು ಸುಕೋಮಲೆಯಾದ ನನ್ನ ಪ್ರೀತಿ ಪುತ್ರಿಯಾದ ನಿನಗೆ ಗಂಡನಾಗುವನಾದ್ದರಿಂದ ನೀನು ಆತನನ್ನು ಪತಿಯನ್ನಾಗಿ ಪಡೆಯಲು ತಪಸ್ಸನ್ನು ಮಾಡುತ್ತಿರು ॥೧೩॥

ಶೀಘ್ರಂ ತತ್ರೈವಕಲ್ಯಾಣಿ ವಿವಾಹಸ್ತೇ ಭವಿಷ್ಯತಾಃ ।
ಇತ್ಯುಕ್ತ್ವಾ ಸಾಮಯಾನಾರಿ ತಂದೇಶಂ ತಪಸೇಯಯೌ ॥೧೪॥

ತಾ॥ ಎಲೈ ಪ್ರೌಢಳಾಗಿ ಸುಶೋಭಿತಳಾಗಿ ಸಕಲ ಕಲ್ಯಾಣಗುಣಗಳಿಂದ ರಾರಾಜಿಸುತ್ತಿರುವ ಕಲ್ಯಾಣಿಯೇ ನಿನಗೆ ಶೀಘ್ರವೇ ಸುಮನಸ್ಕನೊಡನೆ ವಿವಾಹವು ನೆರವೇರುತ್ತದೆಂದು ನನ್ನಿಂದ ಕೇಳಲ್ಪಟ್ಟ ಆ ಸುಶೀಲೆಯೂ ತಪಸ್ಸನ್ನು ಮಾಡಲು ಬದರಿಕಾಶ್ರಮದ ಪದ್ಮ ಸರೋವರದ ಬಳಿ ಸೇರಿದಳು ॥೧೪॥

ಸುಮನಸ್ಕನ ತಪಸ್ಸು

ಜಾತಮಾತ್ರೇಣಸೋಪ್ಯತ್ರ ಸುಮನಸ್ಕೋಮಹಾಮತಿಃ ।
ಮೇರುಶೃಂಗಂಸಮಾಸಾಧ್ಯ ನಾನಾರತ್ನೈಶ್ಚಶೋಭಿತಂ ॥೧೫॥

ತಾ॥ ಹುಟ್ಟಿದ ಮಾತ್ರದಿಂದಲೇ ಮಹಾಮತಿಯುಳ್ಳ ಆ ಸುಮಸಸ್ಕನಾದರೋ ತಪಸ್ಸಿಗಾಗಿ ನಾನಾ ರತ್ನಗಳಿಂದ ಶೋಭಿಸುತ್ತಿರುವ ಮೇರುಶೃಂಗ ಪರ್ವತದಲ್ಲಿರುವ ಶಿಖರವನ್ನು ತಪಸ್ಸಿನ ಸ್ಥಳವನ್ನಾಗಿ ಮಾಡಿಕೊಂಡನು ॥೧೫॥

ನಾನಾವೃಕ್ಷಸಮಾಕೀರ್ಣಂ ನಾನಾ ಪಕ್ಷಿರವಾಕುಲಂ ।
ಯಕ್ಷ ಕಿನ್ನರ ಗಂಧರ್ವ ಸಿದ್ಧ ಸಂಘೈಶ್ಚಶೋಭಿತಂ ॥೧೬॥

ತಾ॥ ಆ ಸುಮನಸ್ಕನು ತಪಸ್ಸಿಗಾಗಿ ನಿಶ್ಚಯಿಸಿದ ಆ ಪರ್ವತವಾದರೋ ನಾನಾ ವಿಧವಾದ ವೃಕ್ಷಗಳಿಂದಲೂ ನಾನಾ ಪಕ್ಷಿಸಮೂಹಗಳಿಂದಲೂ ಯಕ್ಷ, ಕಿನ್ನರ, ಗಂಧರ್ವರ ಕೋಕಿಲ ಗಾನಗಳಿಂದಲೂ ಸಿದ್ಧ ಸಾಧ್ಯರೇ ಮೊದಲಾದವರ ತಪಸಿದ್ಧಿಯ ವೇಧಘೋಷಣೆಯಿಂದಲೂ ಸದಾ ಮಂಗಳ ಕರವಾಗಿ ಶೋಭಿಸುತ್ತಿದ್ದಿತು ॥೧೬॥

ವಿಯದ್ಗಂಗಾಸಮಾಕೀರ್ಣಂ ಸ್ವರ್ಣಸಾನುಸುಶೋಭಿತಂ ।
ಸೋಽಪ್ಯತ್ರವಿಜನೇಸ್ಥಾನೇ ಸುಮನಸ್ಕೋ ಮಹಾಮತಿಃ ॥೧೭॥

ತಾ॥ ಆ ಮೇರು ಪರ್ವತದಲ್ಲಿ ಆಕಾಶಗಂಗೆಯು ಸದಾ ಝುಳಝುಳ ನಾದದಿಂದ ಪ್ರಹರಿಸುತ್ತಿರುವಳು ಎಲ್ಲಿ ನೋಡಿದರಲ್ಲಿ ಸುವರ್ಣಮಯ ಪ್ರದೇಶಗಳಿಂದ ಕೂಡಿದಂಥಾ ನಿರ್ಜನ ಪ್ರದೇಶವಾಗಿರುವ ಆ ಸ್ಥಳದಲ್ಲಿ ಮಹಾಮತಿಯಾದ ಸುಮನಸ್ಕನು ತಪೋ ನಿರತನಾದನು ॥೧೭॥

ಗ್ರೀಷ್ಮಕಾಲೇತು ಸಂಪ್ರಾಪ್ತೇಕ್ಷತ್ರರ್ಷಿ ಮುನಿಪುಂಗವ ।
ಚತುರ್ಣಾಮಪಿ ವಹ್ನೀನಾಂ ಮಧ್ಯಸ್ಥಸ್ಸಮದೃಷ್ಟಿತಃ ॥೧೮॥

ತಾ॥ ಮಹಾ ಮುನಿಯಾದ ನಾರದನೇ ! ಕೇಳು ಆ ಕ್ಷತ್ರಿಯ ಶ್ರೇಷ್ಠನಾದ ಸುಮನಸ್ಕನು ಗ್ರೀಷ್ಮಋತುವಿನಲ್ಲಿ ನಾಲ್ಕುಕಡೆಯೂ ಬೆಂಕಿ ಉರಿಯುತ್ತಿರಲು ಮಧ್ಯೆ ಇದ್ದು ಸಮದೃಷ್ಟಿಯುಳ್ಳವನಾಗಿ ತಪಸನ್ನು ಮಾಡುತ್ತಿದ್ದನು ॥೧೮॥

ಸೂರ್ಯಪಂಚಕಸಂಜ್ಞಾಕಂ ವಹ್ನಿಂಕೃತ್ವಾಜಿತೇಂದ್ರಿಯಃ ।
ಸುಮನಸ್ಕೋವಿರಾಜರ್ಷಿರ್ನಿರಾಹಾರೋಮಿತಪ್ರಭಃ ॥೧೯॥

ತಾ॥ ಅಂತರಿಕ್ಷದಲ್ಲಿ ಉರಿಯುತ್ತಿರುವ ಸೂರ್ಯನೇ ಐದನೇ ಅಗ್ನಿಯಾಗಿರಲು ಈ ರೀತಿ ಪಂಚಾಗ್ನಿ ಮಧ್ಯದಲ್ಲಿ ನಿರಾಹಾರನಾಗಿ ಜಿತೇಂದ್ರಿಯನಾಗಿ ಆ ಸುಮನಸ್ಕರಾಜರ್ಷಿಯು ದೃಢಮನಸ್ಸಿನಿಂದ ಬ್ರಹ್ಮಸಾಕ್ಷಾತ್‌ಕಾರಕ್ಕಾಗಿ ತಪಸ್ಸಿನಲ್ಲಿದ್ದನು ॥೧೯॥

ನಾಡೀಸ್ಸರ್ವಾಸಮಾರುಧ್ಯ ದಶಪ್ರಾಣಾನ್ವಿಶೇಷತಃ ।
ಯೋಗಮಾರ್ಗೇಣಸಂಭುಯ ಬ್ರಹ್ಮನಾಡೀಂಪ್ರಕೋಪಯ ॥೨೦॥

ತಾ॥ ಮತ್ತು ಸಮಸ್ತ ನಾಡಿಗಳನ್ನೂ ದಶಪ್ರಾಣಗಳನ್ನೂ ವಶಪಡಿಸಿಕೊಂಡು ಜಿತೇಂದ್ರಿಯನಾಗಿ ಯೋಗಮಾರ್ಗದಲ್ಲಿ ಇಡಾಪಿಂಗಳ ನಾಡಿಗಳನ್ನು ಭಂಧಿಸಿ ಕುಂಭಿಕ ದಲ್ಲಿ ಪ್ರವೇಶಮಾಡಿ ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಯೋಗಾರೂಢನಾಗಿದ್ದನು ॥೨೦॥

ಹೃದಿಧ್ಯಾತ್ವಾಮಹಾದೇವಂ ವರದಂ ಭಕ್ತವತ್ಸಲಂ ।
ನಿರಾಮಯಂ ನಿರ್ಗುಣಂಚ ಲೋಕಾನುಗ್ರಹಕಾರಣಂ ॥೨೦॥

ತಾ॥ ಆ ಸುಮನಸ್ಕನಾದರೋ ಸರ್ವ ಲೋಕಗಳನ್ನು ಭರಿಸುತ್ತಿರುವ ಭಕ್ತ ವತ್ಸಲನೂ, ನಿರ್ಗುಣನೂ, ನಿರಾಮಯನೂ, ಮೋಕ್ಷಕಾರನೂ ಆದ ಮಹಾದೇವನನ್ನು ತನ್ನ ಹೃದಯಕಮಲದಲ್ಲಿ ನಿಲ್ಲಿಸಿಕೊಂಡು ಯೋಗಾರೂಢನಾಗಿದ್ದನು ॥೨೦॥

ಪಿತಾಮಹಂ ಮಹಾಯೋಗೀ ತಪೋದುಷ್ಕರಮಾಚರೇತ್ ।
ಶರದಾಮಯುತಂಸಾಂಗಂತಪಸಾಕೃತನಿಶ್ಚಯಃ ॥೨೧॥

ಲೋಕ ಪಿತಾಮಹನಾದ ಆ ಮಹಾದೇವನನ್ನು ಒಲಿಸಿಕೊಳ್ಳಬೇಕೆಂಬ ಕೃತ ನಿಶ್ಚಯದಿಂದ ಆ ಸುಮನಸ್ಕನು ದೀರ್ಘಕಾಲದವರೆಗೂ ದುಷ್ಕರವಾದ ತಪಸ್ಸನ್ನಾ ಚರಿಸುತ್ತಿದ್ದನು ॥೨೧॥

ಏವಂವರ್ಷಸಹಸ್ರಾಣಿ ಚಕಾರಾಂತಿತರಾಂತಪಃ ।
ಏತಚ್ಛ್ರುತ್ವಾದೇವಪತಿಃ ಭೀತಸ್ಸ್ವಶೀಘ್ರಮೇವಸಃ ॥೨೩॥

ತಾ॥ ಹೀಗೆ ಆ ಸುಮನಸ್ಕನು ಘೋರವಾದ ತಪಸ್ಸನ್ನು ಸಹಸ್ರ ವರ್ಷಗಳು ನಿರಾಂತಕವಾಗಿ ಮಾಡುತ್ತಿರಲು ಇದನ್ನು ಕಂಡ ದೇವಪತಿಯಾದ ದೇವೇಂದ್ರನು ಭಯ ಪಟ್ಟವನಾಗಿ ಶೀಘ್ರವೇ ॥೨೩॥

ಮಮಲೋಕಾಧಿಪತ್ಯಾರ್ಥಂ ಆಚರೇದ್ದುಷ್ಕರಂತಪಃ ।
ಇತಿ ನಿಶ್ಚಿತ್ಯತಪಸೋ ವಿಘ್ನಂ ಕರ್ತುಂಸಮುತ್ಸಕಃ ॥೨೪॥

ತಾ॥ ನನ್ನ ದೇವಲೋಕಾದಿಪತ್ಯಕ್ಕಾಗಿ ಸುಮನಸ್ಕ ಋಷಿಯು ತಪವನ್ನಾ ಚರಿಸುತ್ತಿರುವನು. ಆದ್ದರಿಂದ ನನ್ನ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಆತನ ತಪಸ್ಸನ್ನು ಕೆಡಿಸಬೇಕೆಂದು ಆ ದೇವೇಂದ್ರನು ತನ್ನ ಮನಸ್ಸಿನಲ್ಲಿ ಭೀತಿಪಟ್ಟವನಾಗಿ ಬೇಗನೆ ತಪಸ್ಸಿಗೆ ವಿಘ್ನವನ್ನುಂಟುಮಾಡಲು ಪ್ರಯತ್ನಮಾಡಿದನು. ॥೨೪॥

ಸುಮನಸ್ಕನ ತಪೋಭಂಗ

ರಂಭಾದ್ಯಪ್ಸರ ಸಾಂಸ್ತೋಮ ಮಾನೀಯೈತದುವಾಚಸಃ ।
ಸುಮೇರುಶೃಂಗಕ್ಷೇತ್ರಷಿಸಾಕ್ಷಾದ್ಬ್ರಹ್ಮಭುಜೋದ್ಭವಃ ॥೨೫॥

ತಾ॥ ಆ ದೇವೇಂದ್ರನು ರಂಭಾ ಮೊದಲಾದ ಅಪ್ಸರ ಸ್ತ್ರೀಯರನ್ನು ಬರ ಮಾಡಿಕೊಂಡು ಈ ರೀತಿ ಅಪ್ಪಣೆಮಾಡಿದನು. ಎಲೈ ಶೋಭನಾಂಗಿಯರೇ ಮೇರು ಪರ್ವತದ ಶಿಖರದಲ್ಲಿ ಸಾಕ್ಷಾತ್ ಬ್ರಹ್ಮನ ಬಲಭುಜದಿಂದ ಹುಟ್ಟಿದ ಧೀಮಂತನಾದ ಸುಮನಸ್ಕನೆಂಬ ಋಷಿವರ್ಯನು ಘೋರವಾದ ತಪಸ್ಸನ್ನು ಮಾಡುತ್ತಿರುವನು,

ಸುಧೀರ್ವರ್ಾಸುಮನಸ್ಕಾಖ್ಯೋಚೈಚಾರಾಂತಿತರಾಂತಪಃ ।
ಅವಿಳಂಬೇನಕಾಲೇನಮೇರುಶೃಂಗಂಮನೋಹರಂ ॥೨೬॥

ತಾ॥ ನೀವು ವಿಳಂಬಮಾಡದೆ ಸುಮನಸ್ಕನು ತಪಸ್ಸು ಮಾಡುತ್ತಿರುವಲ್ಲಿಗೆ ಹೋಗಿ ಆ ಋಷಿಯ ತಪಸ್ಸು ಭಂಗವಾಗಲು ಬೇಕಾದ ನಿಮ್ಮ ಹಾವಭಾವ ಸಂಗೀತ ನರ್ತನಗಳಿಂದ ಆತನ ತಪಸ್ಸನ್ನು ಭಂಗಮಾಡಿ ದೇವಲೋಕಕ್ಕೆ ಉಂಟಾಗಿರುವ ಭೀತಿಯನ್ನು ಹೋಗಲಾಡಿಸಲು ॥೨೬॥

ಪ್ರವಿಶ್ಯವಿಘ್ನಂತಪಸೋಯುೂಯಂಕುರುತತಸ್ಯಚ ।
ಇತ್ಯುಕ್ತ್ವಾದೇವಪತಿನಾಸ್ತ್ರಿಯೋರಂಭಾದಿಕಾಶ್ಶುಭಾಃ ॥೨೭॥

ತಾ॥ ನೀವು ಶೀಘ್ರವಾಗಿ ಅಲ್ಲಿಗೆ ಹೋಗಿ ಆ ಸುಮನಸ್ಕನ ತಪಸ್ಸನ್ನು ಭಂಗ ಮಾಡಿರೆಂದು ದೇವಪತಿಯಾದ ದೇವೇಂದ್ರನು ಆ ರಂಭಾ ಮೊದಲಾದ ಗಣಿಕೆಯರಿಗೆ ಆಜ್ಞಾಪಿಸಿದನು ॥೨೭॥

ತಥಾಸ್ತ್ವಿತಿಬಲಾರಾತಿಪ್ರಣಮ್ಯಪುರತಸ್ಥಿತಾಃ ।
ನಾನಾರತ್ನಚಯೈಸ್ಸ್ಫೀತೈರ್ಭೂಷಣೈರ್ಭಾಸುರೈರ್ವೃತಾ ॥೨೮॥

ತಾ॥ ಆ ದೇವೇಂದ್ರನ ಅಪ್ಪಣೆಯಂತೆ ರಂಭಾದಿ ಅಪ್ಸರೆಯರು ದೇವರಾಜನಿಗೆ ನಮಸ್ಕರಿಸಿ ಹಾಗೆಯೇ ಆಗಲೆಂದು ಒಪ್ಪಿ ತಮ್ಮ ಶರೀರಗಳಿಗೆ ಒಪ್ಪುವಂತಹ ಮನೋಹರವಾದ ನಾನಾರತ್ನಗಳಿಂದ ಮಾಡಲ್ಪಟ್ಟ ಹಾರಗಳಿಂದಲೂ, ದಿವ್ಯ ದುಕೂಲಗಳಿಂದಲೂ ಶೃಂಗಾರ ಮಾಡಿಕೊಂಡು ಮನಮೋಹಕವಾದ ಸೌಂದರ್ಯವುಳ್ಳಂತಹ ಆ ಗರತಿಯರು ॥೨೮॥

ನಾನಾದಿವ್ಯಾಂಬರೈಶ್ಚೈವಾಲಂಕೃತೈಶ್ಚಾರುಮೂರ್ತಯ ।
ಶೃಂಗಾರನಾಟಕಗಣೈರ್ಯುಕ್ತಾಗಂಧರ್ವಕಿನ್ನರೈಃ ॥೨೯॥

ತಾ॥ ತಮ್ಮ ಶರೀರಗಳಿಗೊಪ್ಪುವ ನಾನಾ ವಿಧವಾದ ಪೀತಾಂಬರಗಳಿಂದ ಅಲಂಕೃತರಾಗಿ ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ನಾಟ್ಯವಿಶಾರದರಾದ ಗಂಧರ್ವ ಕಿನ್ನರರ ಜೊತೆಗೂಡಿ ಶೃಂಗಾರ ಸಂಪನ್ನೆಯರಾದ ಆ ಗಣಿಕೆಯರು ॥೨೯॥

ವೀಣಾಮೃದಂಗ ತಾಳಾದಿ ತೌರ್ಯತ್ರಿಕವಿರಾಜಿತಾಃ ।
ಮೇರುಶೃಂಗ ಸಮಾಸಾದ್ಯ ರತ್ನಸಾನುಸುಶೋಭಿತಂ ॥೩೦॥

ತಾ॥ ವೀಣಾ, ಮೃದಂಗ, ತಾಳಗಳೇ ಮೊದಲಾದ ವಾದ್ಯಗಳಿಂದೊಡಗೂಡಿ ಮೇರುಶೃಂಗ ಪರ್ವತದ ರತ್ನಸಾನುವಿರಾಜಮಾನವಾದ ಶೃಂಗವನ್ನು ಆ ಗಣಿಕೆಯರು ಸೇರಿದರು ॥೩೦॥

ಜಾತಿಪುನ್ನಾಗವಕುಳೈಸ್ಸಪ್ತಪರ್ಣೈಶ್ಚ ಚಂಪಕೈಃ ।
ಜಂಭೀರಕರವೀರಾದಿವೃಕ್ಷಜಾಲೈಶ್ಚಶೋಭಿತಂ ॥೩೦॥

ತಾ॥ ಜಾಜಿ, ಪುನ್ನಾಗ, ವಕುಳ, ಏಳಿಲೆ ಬಾಳೆ, ಸಂಪಿಗೆ, ನಿಂಬೆ, ಕಣಗಲೆ ಮೊದಲಾದ ವೃಕ್ಷಸಮೂಹದಿಂದ ಆ ಗಿರಿರಾಜನು ಶೋಭಿಸುತ್ತಿದ್ದನು ॥೩೦॥

ಸಿಂಹಶಾರ್ದೂಲ ನಾಗಾದ್ಯೈರ್ವ್ಯಾಪ್ತಂ ಪಕ್ಷೀರವಾಕುಲಂ ।
ಸರ್ವಂದೃಷ್ಟ್ವಾತತ್ರಗತ್ವಾತನ್ಮಧ್ಯೇಸಂಸ್ಥಿತಂಮುನಿಃ ॥೩೧॥

ತಾ॥ ಸಿಂಹಗಳು, ಶಾರ್ದೂಲಗಳು, ವ್ಯಾಘ್ರಗಳೂ, ಆನೆಗಳೂ ಮತ್ತು ನಾನಾ ವರ್ಣದ ಪಕ್ಷಿಗಳಿಂದಲೂ ಕೂಡಿದ ಆ ಪರ್ವತ ಶಿಖರದಲ್ಲಿ ನಿಶ್ಚಲನಾಗಿ ಕುಳಿತಿರುವ ಮುನಿಪುಂಗವನನ್ನು ಆ ರಂಭಾದಿ ಗಣಿಕೆಯರು ನೋಡಿದರು ॥೩೧॥

ಸುಮನಸ್ಕಂಮಹಾತ್ಮಾನಂಜ್ವಲತ್ ಪಂಚಾಗ್ನಿಮಧ್ಯಗಂ ।
ಬ್ರಹ್ಮಧ್ಯಾನಪರಂಶಾಸ್ತಂನಿಶ್ಚಲಂಯೋಗಮಾರ್ಗಗಂ ॥೩೩॥

ತಾ॥ ಆ ಶೃಂಗದಲ್ಲಿ ಜ್ವಲಿಸುತ್ತಿರುವ ಪಂಚಾಗ್ನಿಗಳ ಮಧ್ಯದಲ್ಲಿ ಜ್ಞಾನಪರವಶನಾಗಿ ಸಮಾಧಿಸ್ಥಾಯಿಯಾಗಿಯೂ ಬ್ರಹ್ಮಧ್ಯಾನದಲ್ಲಿ ನಿರತನಾಗಿಯೂ ನಿಶ್ಚಲ ಯೋಗದಿಂದ ಕೂಡಿರುವ ಮಹಾತ್ಮನಾದ ಆ ಸುಮನಸ್ಕನನ್ನು ಆ ಗಣಿಕೆಯರು ನೋಡಿದರು ॥೩೩॥

ದೃಷ್ಟ್ವಾತಂಮುನಿ ಶಾರ್ದೂಲಂ ವಿಸ್ಮಯಂ ಪರಮಂಯಯುಃ ।
ಮಹಾನುಭಾವೋಽಯಮಿತಿನಿಶ್ಚಿತ್ಯೈವಂಮುದಾನ್ವಿತಾಃ ॥೩೪॥

ತಾ॥ ಆ ಗಣಿಕೆಯರು ಆ ಮುನಿಪುಂಗವನನ್ನು ನೋಡುತ್ತಾ ನೋಡುತ್ತಾ ಈತನು ಮಹಾನುಭಾವನು ಈತನನ್ನು ನಾವು ಜಯಿಸಲು ಸಾಧ್ಯವಿಲ್ಲವೆಂದು ಅವರುಗಳು ಮನಸ್ಸಿನಲ್ಲಿ ನಿಶ್ಚಯಿಸಿ ಆಶ್ಚರ್ಯ ಸಂತೋಷಗಳನ್ನು ಹೊಂದಿದರು ॥೩೪॥

ದೇವೇಶಕಾರ್ಯಂಕರ್ತವ್ಯಂ ತಸ್ಯವಾಕ್ಯಾನುಸಾರತಃ ।
ಇತಿಮತ್ವಾತತ್ಸಮೀಪಂ ಗತ್ವಾಸಂತುಷ್ಟಚೇತಸಃ ॥೩೫॥

ತಾ॥ ಎಲೈ ನಾರದನೇ ! ಆ ಅಪ್ಸರಸ್ತ್ರೀಯರಾದ ದೇವಾಂಗನೆಯರು ಸಂತುಷ್ಟಚಿತ್ತರಾಗಿ ದೇವೇಂದ್ರನ ವಾಕ್ಯಾನುಸಾರವಾಗಿ ಆತನು ಹೇಳಿದಂತೆ ಮಾಡುವುದು ತಮ್ಮ ಕರ್ತವ್ಯವೆಂದು ಆ ಸುಮನಸ್ಕ ಮುನಿಯ ಸಮೀಪಕ್ಕೆ ಹೋದರು ॥೩೫॥

ಪೂರ್ವರಂಗಂಪ್ರಕಲ್ಪ್ಯಥಮುಖವೀಣಾವಾಕುಲಾ ।
ಭೇರೀಮೃದಂಗಧ್ವನಿಭಿಃಯುಕ್ತಾಶಾಸ್ತ್ರಾನುಸಾರತಃ ॥೩೬॥

ತಾ॥ ಆ ರಂಭಾದಿ ಅಪ್ಸರೆಯರು ಆ ಮುನಿಯ ಸಮೀಪದಲ್ಲಿ ಪೂರ್ವ ರಂಗವನ್ನು ಪ್ರಾರಂಭಿಸಿ ಮಧುರ ಗಾನದಿಂದಲೂ ವೀಣಾ ಮೊದಲಾದ ವಾದ್ಯಸಂಗೀತ

ದಿಂದಲೂ, ಭೇರಿ, ಮೃದಂಗ ಮೊದಲಾದ ಶಾಸ್ತ್ರ ಯುಕ್ತಾನುಸಾರವಾದ ವಾದ್ಯ ಧ್ವನಿಗಳಿಂದಲೂ ಆ ಗಣಿಕೆಯರು ಸಂಗೀತಲೋಲರಾಗಿಯೂ ವಾದ್ಯಧ್ವನಿಗಳಿಂದಲೂ ನಾಟ್ಯವಾಡುತ್ತಾ ಆ ಸುಮನಸ್ಕನ ತಪೋಭಂಗಮಾಡಲುದ್ಯುಕ್ತರಾದರು ।।೩೭।।

ನಟನ್ತಿಗಾನೇಸುಗುಣಾಸ್ಸರಾಭಿನಯಪೂರ್ವಕಂ ।
ತದ್ದೇಹಮಪಿಸಂಸ್ಪೃಶ್ಯಚೇಷ್ಟಾಂಕುರ್ವನ್ತಿನಾರದ ॥೩೭॥

ತಾ।। ಎಲೈ ನಾರದನೇ! ಆ ಗಣಿಕೆಯರು ಭರತ ಶಾಸ್ತ್ರಾನುಸಾರವಾಗಿ ಸ್ವರಾಭಿನಯಪೂರಕವಾಗಿ ನೃತ್ಯ ಮಾಡುತ್ತಾ ಆ ಮುನಿಪುಂಗವನ ಶರೀರವನ್ನು ಆಗಾಗ ಸ್ಪರ್ಶಿಸುತ್ತಾ ತಮ್ಮ ಹಾವಭಾವ ವಿಲಾಸಗಳಿಂದಲೂ ತಮ್ಮ ಮದುರವಾದ ಸ್ವರ ಗಳಿಂದಲೂ ತಮ್ಮ ನಾಟ್ಯದ ಕಿರುಗೆಜ್ಜೆಗಳನಿನಾದದಿಂದಲೂ ಕಾಮಕೇಳೀ ಚೇಷ್ಟೆಗಳನ್ನು ಮಾಡುತ್ತಾ ಆ ಸುಮನಸ್ಕನ ತಪಭಂಗಮಾಡುತ್ತಿದ್ದರು ।।೩೭।।

ಸೋಪಾಯೈಸ್ಸತ್ಕೃತೈಶ್ಚೈವನಚಚಲಾಚಲಾಸನಃ ।
ರಂಭಾದ್ಯಾಸ್ತತ್ತಪ್ಸೋವಿಘ್ನಂನಶಕ್ತಾಃಕರ್ತುಮುತ್ಸುಕಾಃ ॥೩೮॥

ತಾ॥ ಈ ರೀತಿಯಾಗಿ ಉತ್ಸಾಹಯುಕ್ತರಾಗಿ ಅನೇಕ ಪ್ರಕಾರಗಳಿಂದಲೂ, ಅನೇಕ ಉತ್ಸಾಹಗಳಿಂದಲೂ ಆ ರಂಭಾದಿ ಅಪ್ಸರೆಯರು ಎಷ್ಟು ಪ್ರಯತ್ನಪಟ್ಟರೂ ಸ್ಥಿರಾಸನವುಳ್ಳ ಆ ಸುಮನಸ್ಕ ಮಹಾಮುನಿಯು ಎಳ್ಳಷ್ಟೂ ಚಲಿಸದಿರಲು ಆತನ ತಪಸ್ಸನ್ನು ಕೆಡಿಸಲು ಸಮರ್ಥರಾಗಲಿಲ್ಲ ॥೩೮॥

ಅಥೇಂದ್ರಲೋಕಮಾಸಾದ್ಯಪಟ್ಟಣೇऽಮರಶೋಭಿತೇ ।
ಗೃಹೇರತ್ನಚಯೋಪೇತೇತನ್ಮಧ್ಯೇದಿವ್ಯಮಂಟಪೇ ॥೩೯॥
ಸಿಂಹಾಸನೇಸಮಾಸೀನಂ ಋಷಿಸಂಘಸಮಾವೃತಂ ।
ನಾನಾದೇವವರ್ಯೈರ್ಯುಕ್ತಂಸಹಸ್ರಾಕ್ಷಂಪುರಂದರಂ ॥೪೦॥
ದೃಷ್ಟ್ವಾನತ್ವಾऽಪ್ಸರಸ್ಸಂಘೋವಾಕ್ಯಮೇತತ್ತಥಾಬ್ರವೀತ್ ।
ಹೇನಾಥತತ್ತಪೋವಿಘ್ನಂಕರ್ತುಂಶಕ್ತಾವಯಂನಹಿ ॥೪೧॥

ತಾ॥ ಅನಂತರ ರಂಭಾದಿ ಅಪ್ಸರ ಸ್ತ್ರೀಯರು ಇಂದ್ರಲೋಕವನ್ನು ಸೇರಿ ಅಮರಾವತೀ ಪಟ್ಟಣದಲ್ಲಿ ದಿವ್ಯವಾದ ನವರತ್ನ ಶೋಭಿತವಾದ ಗೃಹದ ಮಧ್ಯೆ ದಿವ್ಯಮಂಟಪದಲ್ಲಿ, ದಿವ್ಯಸಿಂಹಾಸನಾರೂಢನಾಗಿ, ಋಷಿಗಣಗಳಿಂದಲೂ, ನಾನಾ ದೇವತೆಗಳಿಂದಲೂ ಪರಿವೇಷ್ಟಿಸಲ್ಪಟ್ಟಿರುವ ಸಹಸ್ರಾಕ್ಷನಾದ ದೇವೇಂದ್ರನಿಗೆ ನಮಸ್ಕರಿಸಿ ಸುಮನಸ್ಕಮಹರ್ಷಿಯ ತಪಸ್ಸಿಗೆ ವಿಘ್ನವನ್ನುಂಟುಮಾಡಲು ತಮ್ಮಿಂದ ಸಾಧ್ಯವಾ॥ ಲಿಲ್ಲವೆಂದು ಆ ರಂಭಾದಿಗಣಿಕೆಯರು ದೇವೇಂದ್ರನಿಗೆ ಬಿನ್ನೈಸಿದರು ॥೩೯॥೪೦॥೪೧॥

ಏವಮುಕ್ತ್ವಾತುಸುತ್ರಾಮಾಹ್ಯಾಸ್ತೇತೂಷ್ಣೀಂಸ್ವಪಟ್ಟಣೇ।
ಅಥೇಶ್ವರಂಹೃದಿಸ್ಥಾಪ್ಯಋಷಿಃತತ್ರೈವಸಂಸ್ಥಿತಃ ॥೪೨॥

ತಾ॥ ಹೀಗೆ ಗಣಿಕೆಯರಿಂದ ಕೇಳಲ್ಪಟ್ಟ ದೇವೇಂದ್ರನು ತನ್ನ ಪಟ್ಟಣದಲ್ಲಿ ಸುಮ್ಮನಿದ್ದಂಥಾವನಾದನು. ಆ ಸುಮನಸ್ಕ ಮುನಿಯಾದರೋ ತನ್ನ ಮನಸ್ಸಿನಲ್ಲಿ ಆ ಪರಮೇಶ್ವರನನ್ನು ಧ್ಯಾನಿಸುತ್ತಾ ಆ ಮೇರುಶೃಂಗದಲ್ಲಿದ್ದನು ॥೪೨॥

ಸುಮನಸ್ಕ ಮಹಾಯೋಗಿ ಬ್ರಹ್ಮಾಣಂಹೃದಿಸಂಸ್ಥಿತಂ।
ಕೃತ್ವಾತಪಸ್ಯತಸ್ತಸ್ಯ ಬ್ರಹ್ಮರಂಧ್ರಂಮನೋಹರಂ ॥೪೩॥

ತಾ॥ ಆ ಮಹಾಯೋಗಿಯಾದ ಸುಮನಸ್ಕನು ತನ್ನ ಹೃದಯದಲ್ಲಿ ಬ್ರಹ್ಮನನ್ನು ಸಂದಾನಮಾಡಿ ಘೋರ ತಪವನ್ನಾಚರಿಸಲು ಆತನ ಬ್ರಹ್ಮರಂದ್ರದಿಂದ ಮನೋಹರವಾದ ಶಕ್ತಿಯು ಉತ್ಪತ್ತಿಯಾಯಿತು ॥೪೩॥

ಭಿತ್ವಾಪ್ರಾದುರಭೂದ್ವಹ್ನಿರೂರ್ಧ್ವಜಾಲಾಸಮನ್ವಿತಃ ।
ತಸ್ಮಾದ್ಭೀತಾಸ್ತಪೋವಹ್ನೇರ್ದಿಕ್ಪಾಲಾಭಯಕಂಪಿತಾಃ ॥೪೪॥

ತಾ॥ ಹಾಗೆ ಬ್ರಹ್ಮರಂದ್ರದಿಂದ ಹುಟ್ಟಿದ ಮನೋಹರವಾದ ಆ ಶಕ್ತಿಜ್ವಾಲೆಯು ಊರ್ಧ್ವಲೋಕಗಳೆಲ್ಲವನ್ನೂ ವ್ಯಾಪಿಸಿ ಅಷ್ಟದಿಕ್ಕುಗಳಲ್ಲಿಯೂ ಪ್ರಜ್ವಲಿಸಲು ಆ ಜ್ವಾಲೆಯನ್ನು ಕಂಡ ಅಷ್ಟದಿಕ್ಪಾಲಕರು ಭಯಕಂಪಿತರಾದರು ॥೪೪॥

ಮುನಯಸ್ಸಿದ್ಧಸಂಘಾಶ್ಚದೇವಾಇಂದ್ರಪುರೋಗಮಾ।
ಭಯಭ್ರಾನ್ತಾಶ್ಚತೇಸರ್ವೇಬ್ರಹ್ಮಾಣಂಶರಣಂಯಯು ॥೪೫॥

ತಾ॥ ಮುನಿಗಳೂ ಸಿದ್ಧರೂ ದೇವತೆಗಳೊಡಗೂಡಿದ ಇಂದ್ರನೂ ಭಯಭ್ರಾಂತರಾಗಿ ಕಮಲಾಸನನಾದ ಬ್ರಹ್ಮನನ್ನು ಮರೆಹೊಕ್ಕರು ॥೪೫॥

ಬ್ರಹ್ಮನ್ವಯಂಭಯಭ್ರಾಂತಾಃ ಪ್ರಾಪ್ತಸ್ತ್ವತ್ಪದಪಂಕಜಂ।
ಅಕಸ್ಮಾದುತ್ಥಿತಾವಹ್ನಿರ್ದದಾಹಭುವನತ್ರಯಂ ॥೪೬॥

ತಾ॥ ಎಲೈ ಬ್ರಹ್ಮದೇವನೇ ಅಕಸ್ಮಾತ್ತಾಗಿ ಬೆಂಕಿಯು ಎದ್ದು ಮೂರು ಲೋಕಗಳನ್ನು ಸುಡುತ್ತಿದೆ ಇದರಿಂದ ಭಯಭ್ರಾಂತರಾಗಿ ನಿನ್ನ ಪಾದಕಮಲಗಳನ್ನು ಆಶ್ರಯಿಸಿದ್ದೇವೆಂದು ಆ ದೇವಸಮೂಹವು ಬ್ರಹ್ಮದೇವನಲ್ಲಿ ಮೊರೆಯಿಟ್ಟರು ॥೪೬॥

ರಕ್ಷರಕ್ಷಮಹಾಪ್ರಾಜ್ಞಪಿತಾಮಹಮಹಾಮತೇ।
ತ್ವಾಂವಿನಾಕಾರಣಂತಸ್ಯನಾಸ್ತಿಕಿಂಚಿಜ್ಜಗತ್ರಯೇ ॥೪೭॥

ಲೋಕನಾಥ್ವಾಽಧುನಾಶಾಂತಿಂ ತತ್ತಪೋಗ್ನೇಸ್ಸಮಾಚರ।
ಇತಿವಿಜ್ಞಾಪ್ಯತೇಸರ್ವೇತೂಷ್ಣೀಂ ತತ್ರವಸನ್ನಿಹಿ ॥೪೮॥

ತಾ॥ ಮಹಾಪ್ರಾಜ್ಞನಾದ ಲೋಕಗಳಿಗೆಲ್ಲಾ ಪಿತಾಮಹನಾದ ಬ್ರಹ್ಮದೇವನೇ ನಮ್ಮನ್ನು ಕಾಪಾಡು ಕಾಪಾಡು. ಇದಕ್ಕೆಲ್ಲಾ ಕಾರಣಕರ್ತನು ನೀನೆ ಆಗಿದ್ದೀಯೆ. ನಿನಗೆ ತಿಳಿಯದಿರುವುದು ಈ ಮೂರು ಲೋಕಗಳಲ್ಲಿಯೂ ಕಿಂಚತ್ತಾದರೂ ಇರುವುದಿಲ್ಲ ಆದ್ದರಿಂದ ಲೋಕಗಳಿಗೆಲ್ಲಾ ಒಡೆಯನಾದ ನೀನೀಗಲೇ ಆ ತಪೋಗ್ನಿ ಯನ್ನು ಶಾಂತ ಗೊಳಿಸಬೇಕೆಂದು ಇಂದ್ರಾದಿ ದೇವತೆಗಳು ಬ್ರಹ್ಮನನ್ನು ವಿಜ್ಞಾಪಿಸಿ ಕೊಂಡರು ಮತ್ತು ಆತನ ಬಳಿಯಲ್ಲೇ ಉಳಿದರು ॥೪೮॥೪೯॥

ಸಮಾಲೋಕ್ಯಂಚತಾನ್ಸರ್ವಾನ್ಬ್ರಹ್ಮಾಲೋಕಪಿತಾಮಹಃ ।
ಉವಾಚವಚನಂಚೈವಂಸರ್ವೇಷಾಂಭಯನಾಶನಂ ॥೪೯॥

ತಾ॥ ಲೋಕಗಳಿಗೆಲ್ಲ ಪಿತಾಮಹನಾದ ಬ್ರಹ್ಮನು ಅವರನ್ನೆಲ್ಲಾ ನೋಡಿ ಸರ್ವರಭಯವನ್ನು ಹೋಗಲಾಡಿಸುವ ಒಂದಾನೊಂದು ಮಾತನ್ನು ಹೇಳಿದನು ॥೪೯॥

ಸುಮನಸ್ಕನಿಗೆ ವರಪ್ರಧಾನ

ಮಾಭೈಷಧ್ವಂಮಹಾಭಾಗಾಶ್ಶಾನ್ತಿಂತಸ್ಯಕರೋಮ್ಯಹಂ ।
ಇತ್ಯುಕ್ತ್ವಾವಿಬುಧೈಸ್ಸಾರ್ಧಂಯಯೌಮೇರುಮಹೀಧರಂ ॥೫೦॥

ತಾ॥ ಎಲೈ ದೇವತೆಗಳಿರಾ ನೀವು ಎಷ್ಟುಮಾತ್ರವೂ ಭಯಪಡಬೇಕಾಗಿಲ್ಲ ಆ ತಪಸ್ಸಿನ ಅಗ್ನಿಜ್ವಾಲೆಯನ್ನು ನಾನು ಶಾಂತಿಗೊಳಿಸುವೆನು ಎಂದು ಹೇಳಿ ಬ್ರಹ್ಮ ದೇವನು ದೇವತೆಗಳೊಡಗೂಡಿ ಮೇರುಪರ್ವತಕ್ಕೆ ಪ್ರಯಾಣ ಮಾಡಿದನು ॥೫೦॥

ಹಂಸಾಧಿರೂಢಸ್ತ್ವರಯಾಜಗಾಮಕಮಲಾಸನ ।
ಸುಮನಸ್ಕಂ ಮುನಿಶ್ರೇಷ್ಠಂ ಆಲೋಕ್ಯಕರುಣಾನ್ವಿತಂ ॥೫೧॥

ತಾ॥ ಹಂಸರೂಡಾಸನನಾಗಿ ಕಮಲೋದ್ಭವನಾದ ಆ ಬ್ರಹ್ಮದೇವನು ಸುಮನಸ್ಕ ಮುನಿಯು ತಪವಾಚರಿಸುತ್ತಿದ್ದ ಸ್ಥಳಕ್ಕೆ ಶೀಘ್ರವಾಗಿ ಬಂದು ಆ ಸುಮನಸ್ಕ ನನ್ನು ಕರುಣಾದೃಷ್ಟಿಯಿಂದ ನೋಡಿದನು ॥೫೧॥

ನಾಡೀರಂಧ್ರಂ ತಪೋಗ್ನಿಜ್ವಾಲಯಾವಳಿತಯಹತ್ ।
ದೃಷ್ಟ್ವಾವಿಸ್ಮಯಮಾನಿಷ್ಟೋಥಾವರ್ತತ್ವರಯಾನ್ವಿತಃ ॥೫೨॥

ತಾ॥ ಆ ಬ್ರಹ್ಮದೇವನು ಸುಮನಸ್ಕನ ನಾಡೀರಂದ್ರದಿಂದ ಹೊರಡುತ್ತಿರುವ ಆ ತಪೋಜ್ವಾಲೆಯನ್ನು ಕಂಡು ಆಶ್ಚರ್ಯವನ್ನು ಹೊಂದಿ ಆ ಮುನಿಯ ಸಮೀಪಕ್ಕೆ ಬಂದು ನಿಂತನು ॥೫೨॥

ತತ್ಸಮೀಪಂಗತೋಬ್ರಹ್ಮಾನಾಡೀಂತಸ್ಯಸುದುರ್ಲಭಾಂ ।
ಹಸ್ತೇನಾಚ್ಛಾದಯಾಮಾಸಲೋಕಸಂರಕ್ಷಣಾಯವೈ ॥೫೩॥

ತಾ॥ ಹೀಗೆ ತಪವನ್ನಾಚರಿಸುತ್ತಿರುವ ಸುಮನಸ್ಕನ ಸಮೀಪಕ್ಕೆ ಬಂದ ಬ್ರಹ್ಮ ದೇವನು ಆ ನಾಡೀ ರಂಧ್ರದಿಂದ ಹೊರಡುತ್ತಿರುವ ಜ್ವಾಲೆಯ ಮೇಲೆ ತನ್ನ ಕೈಯನ್ನಿಟ್ಟು ಲೋಕಗಳ ಸಂರಕ್ಷಣಾರ್ಥವಾಗಿ ಆ ಜ್ವಾಲೆಯನ್ನು ಉಪಶಮನ ಗೊಳಿಸಿದನು ॥೫೩॥

ಅಕ್ಷಿಯುಗ್ಮಂನಿಮೀಲ್ಯಾಥಸುಮನಸ್ಕೋಮುನೀಶ್ವರಂ ।
ಪುರೋಗತಮಥಾಲೋಕ್ಯಪಿತಾಮಹಮತಂದ್ರಿತಃ ॥೫೪॥

ತಾ॥ ಆಗ ಆ ಮುನೀಶ್ವರನಾದ ಸುಮನಸ್ಕನು ಮೆಲ್ಲನೆ ಕಣ್ಣುಗಳನ್ನು ತೆರೆದು ಮುಂದೆ ನಿಂತಿರುವ ಪಿತಾಮಹನಾದ ಬ್ರಹ್ಮದೇವನನ್ನು ನೋಡಿದನು ॥೫೪॥

ಉತ್ಥಾಯಸಹಸಾತಸ್ಮೈನಮಾಮಚಪುನಃಪುನಃ ।
ಅದ್ಯಮೇಸಫಲಂಜನ್ಮ ಅದ್ಯಮೇಸಫಲಂ ತಪಃ ॥೫೫॥
ಅದ್ಯಮೇಸಫಲಂಸರ್ವಂತ್ವತ್ಪ್ರಸದಾತ್ಪಿತಾಮಹ ।
ತವರೂಪಂನಚಾನನ್ತಿಮುನಯಸಿದ್ಧಚಾರಣ ॥೫೬॥

ತಾ॥ ಆ ಬ್ರಹ್ಮನನ್ನು ನೋಡಿದ ತಕ್ಷಣವೇ ಸುಮನಸ್ಕನು ಮೇಲಕ್ಕೆದ್ದು ಮತ್ತೆ ಮತ್ತೆ ನಮಸ್ಕರಿಸುತ್ತಾ ಈ ರೀತಿ ಹೇಳಿದನು. ದೇವಾ ಸಿದ್ಧ, ಚಾರಣಾದಿಗಳೂ ಸಹ ನಿನ್ನ ಸ್ವರೂಪವನ್ನು ಅರಿಯರು ಇಂಥಾ ನಿನ್ನ ದರ್ಶನದಿಂದ ನನ್ನ ಜನ್ಮ ಸಫಲ ವಾಯಿತು ನನ್ನ ತಪವು ಸಫಲವಾಯಿತು ನಿನ್ನ ದರ್ಶನ ಅನುಗ್ರಹಗಳಿಂದ ನನ್ನ ಸರ್ವಸ್ವವೂ ಸಫಲವಾಯಿತೆಂದನು ॥೫೫॥೫೬॥

ಇಂದ್ರಾದ್ಯಷ್ಟದಿಗೀಶಾಶ್ಚ ಯಕ್ಷಗಂಧರ್ವಕಿನ್ನರಾಃ ।
ತಸ್ಮಾದಹಂಕೀಟಮಾತ್ರೋಯಾಚೇಹಂತ್ವದನುಗ್ರಂ ॥೫೭॥

ತಾ॥ ಮಹರ್ಷಿಗಳೂ ಸಿದ್ಧಚಾರಣರೂ ಇಂದ್ರಾದಿ ಅಷ್ಟದಿಕ್ಪಾಲಕರೂ ಗಂಧರ್ವ ಕಿನ್ನರರೇ ಮೊದಲಾದವರೂ ನಿನ್ನ ಅನುಗ್ರಹ ಪಡೆಯಲಾರದವರಾಗಿರಲು ನಾನೆಷ್ಟರವನು ಒಂದು ಕೀಟಕಕ್ಕೆ ಸಮಾನನು ಎಲೈ ಬ್ರಹ್ಮದೇವನೆ! ನಿನ್ನ ಅನುಗ್ರಹ ವನ್ನು ಯಾಚಿಸುವೆನು ॥೫೭॥

ಇತಿಸಂಸ್ತುತ್ಸದೇವೇಶಂಸುಮನಸ್ಕೋಮಹಾಮತಿಃ ।
ಕೃತಾಂಜಲಿಪುಟೋಭೂತ್ವಾತೂಷ್ಣೀಮಾಸ್ತೇಋಷೀಶ್ವರಃ ॥೫೮॥

ತಾ॥ ಸಕಲ ದೇವತೆಗಳಿಗೂ ಒಡೆಯನಾದ ಆ ಬ್ರಹ್ಮದೇವನನ್ನು ನಾನಾ ರೀತಿಯಿಂದ ಸ್ತುತಿಸುತ್ತಾ ಮಹಾಮತಿಯಾದ ಆ ಸುಮನಸ್ಕನು ಎರಡು ಕೈಗಳನು ಜೋಡಿಸಿಕೊಂಡು ಕೃತಾಂಜಲೀ ಬದ್ಧನಾಗಿ ನಿಂತಿದ್ದನು ॥೫೮॥

ಶ್ರುತ್ವಾತಸ್ಯವಚಸ್ಸತ್ಯಂಅತಿಗಂಭೀರಯಾಗಿರಾ ।
ದಿಶೋಭಿಂರ್ದತಥಾಬ್ರಹ್ಮನಾಚಮುಚೇಮುನಿಂತಥಾ ॥೫೯॥

ತಾ॥ ಸತ್ಯವಾದ ಆ ಸುಮಸ್ಕನ ನುಡಿಗಳನ್ನು ಕೇಳಿ ಸಂತುಷ್ಟನಾದ ಆ ಬ್ರಹ್ಮ ದೇವನು ದಿಕ್ಕುಗಳು ಪ್ರತಿಧ್ವನಿಸುವಂತೆ ಗಂಭೀರವಾದ ಒಂದಾನೊಂದು ಮಾತನ್ನು ಹೇಳಿದನು ॥೫೯॥

ಮಹಾಯೋರ್ಗಿಪ್ರಸನ್ನೋಸ್ಮಿಕ್ಷ್ವವೃಣೀಷ್ವವರನುತ್ತಮಂ ।
ತದಿದಾನೀಂಪ್ರದಾಸ್ಯಾಮಿವರಮಿಷ್ಟಫಲಪ್ರದಂ ॥೬೦॥

ತಾ॥ ಮಹಾಯೋಗೀಶ್ವರನಾದ ಸುಮನಸ್ಕನೇ ನಾನು ನಿನ್ನ ತಪಸ್ಸಿಗೆ ಪ್ರಸನ ನಾಗಿದ್ದೇನೆ ನಿನ್ನ ಇಷ್ಟದಾಯಕ ಏನು ಇರುವುದೋ ಆ ವರವನ್ನು ಕೇಳುವವನಾಗ ಅದನ್ನೀಗಲೇ ನೆರವೇರಿಸುತ್ತೇನೆಂದು ಬ್ರಹ್ಮದೇವನು ಹೇಳಿದನು ॥೬೦॥

ಏವಮುಕ್ತೋಽಥರಾಜರ್ಷಿಃಪ್ರತ್ಯುವಾಚಪಿತಾಮಹಂ ।
ಕೃತಾರ್ಥೋಸ್ಮಿಕೃತಾರ್ಥೋಽಸ್ಮಿತಪಸಂದರ್ಶನಾದಹಂ ॥೬೧॥

ತಾ॥ ಬ್ರಹ್ಮದೇವನ ವಚನವನ್ನು ಕೇಳಿ ರಾಜರ್ಷಿಯಾದ ಸುಮನಸ್ಕನು ನಿನ್ನ ದರ್ಶನದಿಂದ ಕೃತಕೃತ್ಯನಾನೆಂದು ಪ್ರತ್ಯುತ್ತರವನ್ನು ಹೇಳಿ ॥೬೧॥

ಸಏವಮುಕ್ತ್ವಾಕ್ಷತ್ರರ್ಷಿರ್ಯಯಾಚೇಽಥವರತ್ರಯಂ ।
ಮನ್ನಾಮಸಂಜ್ಞಕೋವಂಶೋಭವತ್ವಿಹಸದಾಕುರುಂ ॥೬೨॥
ಮನುಮದ್ವಂಶಜಾನಾಂಚವೇದಾಭ್ಯಾಸೇದಿಕಾರಿಕಾಃ ।
ಮದ್ವಂಶಜಾನಾಂಸರ್ವೇಷಾಂಕ್ಷತ್ರಿಯಾಣಾಂವಿಶೇಷತಃ ॥೬೩॥
ಆರ್ಯಕ್ಷತ್ರಿಯಇತ್ಯಾಖ್ಯಾಲೋಕೇಖ್ಯಾತಿಂಗಮಿಷ್ಯತಿ ।
ದೇಹಿತತ್ಪರಮಂಬ್ರರ್ಹತಪಸಾತೋಷಿತೋಯದಿ [॥೬೪॥

ತಾ॥ ಸುಮನಸ್ಕರಾಜರ್ಷಿಯು ಹೀಗೆಂದು ಬ್ರಹ್ಮದೇವನನ್ನು ಕುರಿತು ಮೂರು ವರಗಳನ್ನು ಬೇಡಿದನು. 1) ನನ್ನ ಹೆಸರಿನಿಂದ ಕೂಡಿದ ನನ್ನ ವಂಶವು ಭೂಲೋಕದಲ್ಲಿ ಸ್ಥಿರವಾಗಿರಲಿ 2) ನನ್ನ ವಂಶೀಯರಾದ ಕ್ಷತ್ರಿಯರೆಲ್ಲರಿಗೂ ವೇದಾಧ್ಯಯನಮಾಡಲು ಅಧಿಕಾರವುಂಟಾಗಲಿ 3) ನನ್ನ ವಂಶೀಯರೆಲ್ಲರೂ ಆರ್ಯಕ್ಷತ್ರಿಯರೆಂಬ ಹೆಸರಿನಿಂದ ಲೋಕಪ್ರಸಿದ್ಧರಾಗಲಿ ಈ ನನ್ನ ಮೂರು ವರಗಳನ್ನು ನನ್ನ ತಪಸ್ಸಿನಿಂದ ನಿನಗೆ ಸಂತೋಷವಾಗಿದ್ದಲ್ಲಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು ॥೬೨॥೬೩॥೬೪॥

ಭವಿಷ್ಯತಿಮಹಾಯೋರ್ಗಿವಂಶಸ್ತ್ವನ್ನಾಮಕೋಭುವಿ ।
ಮಹಾದೇವಮುಖಾಜ್ಜಾತೋಭವಿಷ್ಯತಿವಿಶೇಷತಃ ॥೬೫॥

ತಾ॥ ಎಲೈ ಮಹಾಯೋಗಿಯಾದ ಸುಮನಸ್ಕನೇ ನಿನ್ನ ಹೆಸರುಳ್ಳ ವಂಶೀ ಯರು ಭೂಲೋಕದಲ್ಲಿ ಪರಮೇಶ್ವರನ ಮುಖದಿಂದ ಹುಟ್ಟಿ ಆತನಿಂದ ನಿನ್ನ ವಂಶವು

ಖ್ಯಾತಿಯನ್ನು ಪಡೆಯುತ್ತದೆ. (ಅಂದರೆ ನೀನು ಪರಮೇಶ್ವರನನ್ನು ಮೆಚ್ಚಿಸಿ ವರ ವನ್ನು ಪಡೆದ ಕುಮಾರನಿಂದ ನಿನ್ನ ವಂಶವು ಖ್ಯಾತಿಯನ್ನು ಪಡೆಯುತ್ತದೆಂದು ಅರ್ಥವು) ॥೬೫॥

ವೇದಾಧಿಕಾರಣಸ್ಸರ್ವೇತ್ವದ್ವಂಶ್ಯಾಃಪ್ರಭುಪನ್ತಿಹಿ।
ಆರ್ಯಕ್ಷತ್ರಿಯ ಇತ್ಯಾಖ್ಯಾತ್ವದ್ವಂಶ್ಯಾನಾಂಭವೇನ್ಮನೇ ॥೬೬॥

ತಾ॥ ಅಲ್ಲದೆ ಮುಂದೆ ವೇದಾಧಿಕಾರವುಳ್ಳವರಾಗಿ ಹುಟ್ಟುತ್ತಾರೆ ಮತ್ತು ನಿನ್ನ ವಂಶಕ್ಕೆ ಆರ್ಯಕ್ಷತ್ರಿಯರೆಂದು ಪ್ರಖ್ಯಾತಿ ಪಡೆಯಲಿ ಹೀಗೆಂದು ವರಗಳನ್ನು ಕೊಟ್ಟನು ॥೬೬॥

ನಿಮಿಷಾಖ್ಯಾಮಹಾದೇವೀಸಾಕ್ಷಾದ್ದುರ್ಗಾಂಶಸಂಭವಾ।
ತ್ವದ್ವಂಶಜಾನಾಂಸರ್ವೇಷಾಂಭವಿತ್ರೀಕುಲದೇವತಾ ॥೬೭॥

ತಾ॥ ಎಲೈ ಸುಮನಸ್ಕನೇ ಮತ್ತೂ ವಿಶೇಷವಾದದ್ದನ್ನು ಕೇಳು ಸಾಕ್ಷಾತ್ ದುರ್ಗಾದೇವಿಯ ಅಂಶದಿಂದ ಅವತರಿಸುವಂಥಾ ನಿಮಿಷಾಂಬಾ ಎಂಬ ಮಹಾ ದೇವಿಯು ಮುಂದೆ ನಿಮ್ಮ ವಂಶೀಯರಿಗೆಲ್ಲ ಕುಲದೇವತೆಯಾಗುವಳು ॥೬೭॥

ಇತ್ಯುದೀರ್ಯಸ್ವರ್ಣಗರ್ಭೋಽತಿಕೃಪಯಾವರಯಾನ್ವಿತಃ।
ಪಂಚಾಕ್ಷರೀವಿಖ್ಯಾತಂ ಮಂತ್ರಂ ತಸ್ಯೋಪದಿಶ್ಯಚ ॥೬೮॥

ತಾ॥ ಹೀಗೆಂದು ಹೇಳಿದ ಆ ಹಿರಣ್ಯಗರ್ಭನಾದ ಬ್ರಹ್ಮದೇವನು ಪರಮ ಪ್ರೀತಿಯಿಂದ ಆ ಸುಮನಸ್ಕ ಮಹಾಮುನಿಗೆ ಶಿವಪಂಚಾಕ್ಷರೀ ಮಂತ್ರವನ್ನು ಉಪ ದೇಶಿಸಿದನು ॥೬೮॥

ಅಧಿರುಹ್ಯತದಾಹಂಸಂಸುಮನಸ್ಕೋಮಹಾಮುನಿಃ।
ಇತಿತಸ್ಮೈವರಂದತ್ವಾಬ್ರಹ್ಮಲೋಕಂಜಗಾಮಹಃ ॥೬೯॥

ತಾ॥ ಈ ರೀತಿಯಾಗಿ ಹಂಸವಾಹನನಾದ ಬ್ರಹ್ಮದೇವನು ಸುಮನಸ್ಕ ಮಹಾ ಮುನಿಗೆ ವರಗಳನ್ನು ಕೊಟ್ಟು ತನ್ನ ಲೋಕವನ್ನು ಸೇರಿದನು ॥೬೯॥

ಇತಿ ಶ್ರೀಬ್ರಹ್ಮಾಂಡ ಪುರಾಣೇ ಬ್ರಹ್ಮ ನಾರದ ಸಂವಾದೇ ವರ್ಣವೈಭವ ಖಾಂಡೇ ಸುಮನಸ್ಕ ವರಪ್ರದಾನೇದ್ವಿತಿಯೋಧ್ಯಾಯಃ

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ಬ್ರಹ್ಮನಾರದ ಸಂವಾದದಲ್ಲಿ ವರ್ಣ ವೈಭವ ಖಂಡದಲ್ಲಿ ಸುಮನಸ್ಕನಿಗೆ ವರಪ್ರದಾನವೆಂಬ ಎರಡನೇ ಅಧ್ಯಾಯ ಸಮಾಪ್ತವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಮೂರನೆಯ ಅಧ್ಯಾಯ :-

ಸತೀ ಪರೀಕ್ಷೆ

ನಾರದ ಉವಾಚ :-

ಶ್ರೋತುಂಕೌತೂಹಲಂಬ್ರಹ್ಮನ್ತನ್ಮೇವಿಸ್ತರತೋವದಂ ।

ತಾ॥ ಎಲೈ ಬ್ರಹ್ಮದೇವನೇ! ನನಗೆ ಕೇಳಲು ಬಹಳ ಕುತೂಹಲವಿರುವುದರಿಂದ ಸುಮನಸ್ಕ ಋಷಿಯ ವಿಚಾರವನ್ನು ಸವಿಸ್ತಾರವಾಗಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿಸುಮನಸ್ಕಕಥಾಮಿಮಾಂ ॥೧॥

ಎಲೈ ನಾರದನೇ! ಆ ಸುಮನಸ್ಕನ ಮುಂದಿನ ಕಥಾವಿಸ್ತಾರವನ್ನು ನಿರೂಪಿಸುತ್ತೇನೆ ಕೇಳುವಂಥಾವನಾಗು ॥೧॥

ತತೋಪತ್ನೀಪರಿಕ್ಷಾರ್ಥಂವ್ಯಚರತ್ಭುವನತ್ರಯಂ ।
ಕದಾಚಿತ್ಸೋಪಿರಾಜರ್ಷಿಬ್ರಹ್ಮಾರಣ್ಯಂಯಯೌಮುದಾ ॥೨॥

ತಾ॥ ಅನಂತರ ರಾಜರ್ಷಿಯಾದ ಸುಮನಸ್ಕನು ಒಂದಾನೊಂದು ಸಮಯದಲ್ಲಿ ತನಗೆ ಹೆಂಡತಿಯಾಗಲು ಯೋಗ್ಯಳಾದ ಸ್ತ್ರೀಯನ್ನು ಪರೀಕ್ಷಿಸಲು ಮೂರು ಲೋಕಗಳನ್ನೂ ಸಂಚರಿಸುತ್ತಾ ಬ್ರಹ್ಮಾರಣ್ಯವನ್ನು ಸೇರಿದನು ॥೨॥

ತನ್ಮಧ್ಯೇಬದರೀನಾಮ್ನಾಖ್ಯಾತಂದಿವ್ಯಾಶ್ರಮಂಮುನಿಃ ।
ನಾನಾವೃಕ್ಷಸಮಾಕೀರ್ಣಂಝಿಲ್ಲಿಕಾಮೃಗಸೇವಿತಂ ॥೩॥

ತಾ॥ ಆ ಅರಣ್ಯದಲ್ಲಿ ನಾನಾ ವೃಕ್ಷಗಳಿಂದಲೂ ಪರಿಪರಿಯಾದ ಮೃಗಗಳಿಂದಲೂ ಶೋಭಿಸುತ್ತಿರುವ ಬದರೀ ವನವನ್ನು ನೋಡಿದನು ॥೩॥

ನಾನಾವಿಧಲತಾಕೀರ್ಣಂನಿತ್ಯರ್ತುಫಲಸನ್ನಿಭಂ ।
ದೃಷ್ಟ್ವಾವಿಸ್ಮಯಾಪನ್ನಃವನಮಧ್ಯೇಚರತ್ತದಾ ॥೪॥

ತಾ॥ ನಾನಾ ಬಗೆಯ ಬಳ್ಳಿಗಳಿಂದಲೂ ಸರ್ವಋತುಗಳಲ್ಲಿಯೂ ಫಲಭರಿತವಾಗಿರುವ ಮರಗಳನ್ನೂ ಅಲ್ಲಿರುವ ಝರಿಗಳನ್ನೂ ಮನೋಹರವಾದ

ಆ ವನದ ಮಧ್ಯದಲ್ಲಿರುವ ಆಶ್ರಮವನ್ನು ಕಂಡು ಸುಮನಸ್ಕನು ಆಶ್ಚರ್ಯವನ್ನು ಹೊಂದಿದನು ॥೪॥

ಕಾಸಾರಂತತ್ರವಿಸ್ತೀರ್ಣಂಕಮಲೋತ್ಪಲಶೋಭಿತಂ ।
ಜಲಪಕ್ಷಿಭಿರಾಕೀರ್ಣಂರಾಜಹಂಸೈಶ್ಚ ಶೋಭಿತಂ ॥೫॥

ತಾ॥ ಆ ವನದಲ್ಲಿ ವಿಸ್ತಾರವಾದ ಒಂದು ಸರೋವರದಲ್ಲಿ ತಾವರೆ ಹೂವುಗಳಿಂದಲೂ ಹಂಸಗಳೇ ಮೊದಲಾದ ನೀರು ಹಕ್ಕಿಗಳಿಂದಲೂ ನೀರಿನ ಅಲೆಗಳಿಂದಲೂ ಆ ಸರೋವರವು ಶೋಭಾಯಮಾನವಾಗಿದ್ದಿತು ॥೫॥

ವೀಚೀವಿಕ್ಷೇಪಶೋಭಾಢ್ಯಾಂದೃಷ್ಟ್ವಾವಿಸ್ಮಯಮಾಯಯೌ ।
ತಸ್ಯಾಸ್ತದುತ್ತರೇತೀರೇನಾರಿತಿಷ್ಠತಿಶೋಭನಾ ॥೬॥

ತಾ॥ ಆ ಸರೋವರದ ಉತ್ತರದಿಕ್ಕಿನ ದಡದಲ್ಲಿ ಶುಭಾಂಗಿಯಾದ ಯುವತೀಮಣಿಯೊಬ್ಬಳು ನೆಲಸಿರುವುದನ್ನು ಕಂಡು ಆ ಸುಮನಸ್ಕನು ಆಶ್ಚರ್ಯವನ್ನು ಹೊಂದಿದನು ॥೬॥

ನೀಲಕೇಶಾಚಂದ್ರಮುಖೀಏಣಾಕ್ಷೀಚಸುನಾಸಿಕಾ ।
ಬಿಂಬಾಧರೀಚಾರುಮುಖೀಕಪೋಲಾಭ್ಯಾಂಪ್ರಶೋಭಿತಾ ॥೭॥

ತಾ॥ ನೀಲವರ್ಣದ ಕೇಶರಾಶಿಯೂ ಚಂದ್ರನಿಗೆ ಸಮಾನವಾದ ಮುಖಬಿಂಬವೂ ಜಿಂಕೆಯಂತೆ ಕಣ್ಣುಗಳುಳ್ಳವಳೂ ಸುಮನೋಹರವಾದ ನಾಸಿಕವೂ, ಸ್ವರ್ಣರಂಜಿತ ಕಪೋಲಗಳೂ ಉಳ್ಳ ಚಂದ್ರಮುಖಿಯಂತಿರುವ ಸುಂದರಿಯನ್ನು ನೋಡಿದನು ॥೭॥

ಕಲ್ಪವಲ್ಲೀಸಮಾನಾಭ್ಯಾಂಭುಜಾಭ್ಯಾಂಉಜ್ಜ್ವಲಾಚಸಾ ।
ಕಂಬುಗ್ರೀವಾಚಕ್ರವಾಕೀಯುಗವದ್ವರ್ತುಲಸ್ತನೀ ॥೮॥

ತಾ॥ ತೊಂಡೆಯ ಹಣ್ಣಿನಂತಿರುವ ತುಟಿಗಳೂ ಕಾಂತಿಯಿಂದ ಹೊಳೆಯುತ್ತಿರುವ ಕೆನ್ನೆಗಳೂ ಕಲ್ಪವೃಕ್ಷದ ಬಳ್ಳಿಯಂತಿರುವ ತೋಳುಗಳೂ ಶಂಖಕ್ಕೆ ಸಮಾನವಾಗಿರುವ ಕಂಠವೂ, ಚಕ್ರವಾಕಮಿಥುನದಂತೆ ಗುಂಡಾದ ಸ್ತನಗಳೂ ಉಳ್ಳ ಆ ಯುವತಿಯನ್ನು ಕಂಡನು ॥೮॥

ಸಿಂಹಮಧ್ಯಾನೀಲರೋಮರಾಜಿಭಿಸ್ತುವಿರಾಜಿತಾ ।
ಗಂಗಾವರ್ತೋಜ್ಜ್ವಲನ್ನಾಭಿಸುವೃತ್ತಕಟಿರಂಜಿತಾ ॥೯॥

ತಾ॥ ಸಿಂಹದ ನಡುವಿನಂತೆ ಸಣ್ಣದಾದ ಸೊಂಟವುಳ್ಳವಳೂ ಗಂಗೆಯಲ್ಲಿನ ಸುಳಿಯಂತೆ ಹೊಳೆಯುತ್ತಿರುವ ನಾಭಿ ಉಳ್ಳವಳೂ ನೋಟಕ್ಕೆ ರಂಜಿಸುತ್ತಿರುವ ಆ ರಮಣೀಮಣಿಯನ್ನು ಕಂಡನು ॥೯॥

ರಂಭೋರುಚಾರುಜಂಘಾಚಜ್ಯಾನುಭ್ಯಾಂಚವಿರಾಜಿತಾ ।
ಭಾಸುರಾಪಾದಪದ್ಮಾಭ್ಯಾಂಭೂಸಖೀಲೋಕಸುಂದರೀ ॥೧೦॥

ತಾ॥ ಬಾಳೇ ಗಿಡದಂತಿರುವ ತೊಡೆಗಳುಳ್ಳವಳೂ ಮನೋಹರವಾದ ಜಂಘೆಗಳೂ ವಿರಾಜಮಾನವಾದ ಜಾನುಗಳೂ ಕಮಲದಂತಿರುವ ಪಾದಗಳುಳ್ಳವಳೂ ಭೂದೇವಿಗೆ ಸ್ನೇಹಿತಳಂತಿರುವ ಸುಂದರಿಯನ್ನು ನೋಡಿದನು ॥೧೦॥

ಜಟಾವಲ್ಕಲಧಾರೀಚಸಾಕ್ಷಾದ್ಬ್ರಹ್ಮಭುಜೋದ್ಭವಾ ।
ರುದ್ರಾಕ್ಷಮಾಲಿಕೋಪೇತಾಹ್ಯಚಲಾಸನಸಂಸ್ಥಿತಾ ॥೧೧॥

ತಾ॥ ಸಾಕ್ಷಾತ್ ಬ್ರಹ್ಮದೇವನ ಭುಜದಿಂದ ಜನ್ಮಿಸಿರುವ ಆ ಸುಂದರಿಯಾದರೋ ಜಟಾವಲ್ಕಗಳನ್ನು ಧರಿಸಿದವಳಾಗಿ ರುದ್ರಾಕ್ಷಿ ಮಾಲೆಗಳಿಂದ ಅಲಂಕೃತಳಾಗಿ ಸ್ಥಿರಾಸನಳಾಗಿ ತಪವನ್ನು ಮಾಡುತ್ತಿದ್ದಳು ॥೧೧॥

ಭರ್ತುರಾಗಮನಂನಿತ್ಯಂವಾಂಛಂತೀತತ್ರತಿಷ್ಠತೇ ।
ತಾಂದೃಷ್ಟ್ವಾಚಿಂತಯಾಮಾಸತತ್ಪರೀಕ್ಷಾಸಮುದ್ಯತಃ ॥೧೨॥

ತಾ॥ ತನ್ನ ಭರ್ತನಿಗಾಗಿ ನಿತ್ಯವೂ ಆತನ ಆಗಮನ ಚಿಂತೆಯಿಂದ ಕೂಡಿ ಆಸನದಲ್ಲಿ ಮಂಡಿಸಿರುವ ಆ ತರುಣಿಯನ್ನು ಸುಮನಸ್ಕನು ನೋಡಿ ಆಶ್ಚರ್ಯದಿಂದ ಆಕೆಯನ್ನು ಪರೀಕ್ಷಿಸಬೇಕೆಂದು ಆಲೋಚಿಸಿದನು ॥೧೨॥

ಕಥಮೇನಾಂವಿಚಾರ್ಯಾಥಪೃಚ್ಛೇಹಂಚಾರುಹಾಸಿನೀಂ ।
ಇತಿನಿಶ್ಚಿತ್ಯಮನಸಾಸುಮನಸ್ಕೋಮಹಾಮುನಿಃ ॥೧೩॥

ತಾ॥ ಆ ಸುಂದರೀಮಣಿಯು ಯಾರು ಎಂಬ ವಿಚಾರವನ್ನು ಆಕೆಯಿಂದಲೇ ತಿಳಿಯಲು ಸುಮನಸ್ಕ ಮಹಾಮುನಿಯು ತನ್ನಲ್ಲಿ ನಿಶ್ಚಯಿಸಿಕೊಂಡನು ॥೧೩॥

ತತ್ರಗತ್ವಾತುತಾಂನಾರೀಂದೃಷ್ಟ್ವೋವಾಚಮುನೀಶ್ವರಃ ।
ಕಾತ್ವಂಸ್ಥಿತಾತ್ರಕಲ್ಯಾಣಿಕಿಮತ್ರವನಮಧ್ಯಮೇ ॥೧೪॥

ತಾ॥ ಆ ಕಲ್ಯಾಣಿಯ ಸಮೀಪಕ್ಕೆ ಹೋಗಿ ಮುನೀಶ್ವರನಾದ ಸುಮನಸ್ಕನು, ಎಲೈ ಕಲ್ಯಾಣಿಯೇ ! ನೀನು ಯಾರು ಏತಕ್ಕಾಗಿ ಈ ವನದಲ್ಲಿ ನೆಲಸಿದ್ದೀಯೆ ಎಂದು ಕೇಳಿದನು ॥೧೪॥

ಅಹಂವೈಸುಮನಸ್ಕಾಖ್ಯೋಋಷೀಣಾಂಪ್ರವರಸ್ಮೃತಃ ।
ತ್ವದ್ವೃತ್ತಾಂತಮಶೇಷಂವೈಬಾಲೇವದಮಹಾಮತೇ ॥೧೫॥

ತಾ॥ ನಾನು ಸುಮನಸ್ಕನೆಂಬ :ಹೆಸರುಳ್ಳ ಮುನಿಪ್ರವರನು ಎಲಾ ಮತಿವಂತಳಾದ ಬಾಲೆಯೇ ನಿನ್ನ ವೃತ್ತಾಂತವೆಲ್ಲವನ್ನು ತಿಳಿಸೆಂದು ಆ ಸುಮನಸ್ಕನು ಕೇಳಿದನು ॥೧೫॥

ಅಹಂನ್ವೈಬ್ರಹ್ಮಣೋವಾಮಭುಜಾಚ್ಚಾತಾಮುನೀಶ್ವರ ।
ಉದ್ಭವಾನಂತರಂಮಾಂಚಪುತ್ರೀಗಚ್ಛೆಮಹದ್ವನಂ ॥೧೬॥

ತಾ॥ ಆ ಕನ್ಯೆಯು ಸುಮನಸ್ಕನೊಡನೆ ಈ ರೀತಿ ನುಡಿದಳು ಎಲೈ ಮುನೀಶ್ವರನೇ ! ನಾನು ಬ್ರಹ್ಮನ ಎಡ ಭುಜದಿಂದ ಜನಿಸಿದವಳು. ನಾನು ಹುಟ್ಟಿದ ಕೂಡಲೆ ಬ್ರಹ್ಮದೇವನು ನನಗೆ ಹೇಳಿದ್ದೇನೆಂದರೆ ಎಲೌ ಪುತ್ರಿಯೇ ನೀನು ಬದರೀ ವನವನ್ನು ಸೇರು ॥೧೬॥

ಬದರೀನಾಮಕುರಮ್ಯಂ ಆಶ್ರಮಂ ಮೃಗಸಂಯುತಂ ।
ಕಮಲೈರ್ಭಾಸುರಂ ನಿತ್ಯಂ ಅದ್ಭುತಂ ಕಮಲಾಕರಂ ॥೧೭॥

ತಾ॥ ಆ ಬದರೀ ನಾಮಕವಾದ ಆ ಆಶ್ರಮವು ಅನೇಕ ಮೃಗಗಳಿಂದಲೂ ಸದಾ ಕಮಲದ ಹೂಗಳಿಂದ ತುಂಬಿರುವ ಸರೋವರಗಳಿಂದಲೂ ನಿತ್ಯ ಅದ್ಭುತ ವಾಗಿರುವ ಆ ವನದಲ್ಲಿರು ॥೧೭॥

ಏತಿಸ್ಮೈವೋತ್ತರೇತೀರೇ ಬ್ರಹ್ಮಧ್ಯಾನಪರಾಭವ ।
ಮನಸಾಪರಮಾತ್ಮಾನಂ ಧ್ಯಾಯಂತೀತಿಪ್ರತಿಷ್ಠ ಹಿ ॥೧೮॥

ತಾ॥ ನೀನು ಆ ವನದಲ್ಲಿ ಸಕಲ ಚರಾಚರ ವಸ್ತುಗಳಿಗೆ ಮೂಲಭೂತನಾದ ಪರಬ್ರಹ್ಮನನ್ನು ನಿನ್ನ ಮನಸ್ಸಿನಲ್ಲಿ ಧಾರಣೆ ಮಾಡಿ ಪರಮಾತ್ಮನ ಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿರು ॥೧೮॥

ಕದಾಚಿಲ್ಲೀಲಯಾರಾಜಋಷಿಸ್ತತ್ರಾಗಮಿಷ್ಯತಿ ।
ಮದ್ದಕ್ಷಿಣಭುಜಾಚ್ಚಾತಃ ಸುಮನಸ್ಕೋಮಹಾಮುನಿಃ ॥೧೯॥

ತಾ॥ ನೀನು ಹೀಗೆ ಪರಮಾತ್ಮನ ಧ್ಯಾನದಲ್ಲಿರುವ ಸಮಯದಲ್ಲಿ ನನ್ನ ಬಲ ಭುಜದಿಂದ ಹುಟ್ಟಿದ ಸುಮನಸ್ಕ ಮಹಾಮುನಿ ಎಂಬ ರಾಜಋಷಿಯು ನಿನ್ನ ಸಮೀಪಕ್ಕೆ ಬರುವನು ॥೧೯॥

ತೇನ್ಯೆವತೇತದಾಶೀಘ್ರಂ ವಿವಾಹೋಪಿಭವಿಷ್ಯತಿ ।
ಇತ್ಯುಕ್ತ್ವಾಬ್ರಹ್ಮಣಾಚಾಹಂತ್ವದಾಗಮನಕಾಂಕ್ಷಯ ॥೨೦॥

ತಾ॥ ಹೀಗೆ ನಿನ್ನ ಬಳಿಗೆ ಬರುವ ಆ ಸುಮನಸ್ಕನೊಡನೆ ನಿನಗೆ ಶೀಘ್ರವಾಗಿ ವಿವಾಹವಾಗುತ್ತದೆಂದು ಆ ಬ್ರಹ್ಮದೇವನು ಹೇಳಿದನು. ಆತನ ವಾಕ್ಯದಂತೆ ತಮ್ಮ ಆಗಮನಾಕಾಂಕ್ಷಿಯಾಗಿ ನಾನು ಇಲ್ಲಿರುವೆನು ॥೨೦॥

ಅಹಂವಸಾಮಿರಾಜರ್ಷೇಕಿಂಕರ್ತವ್ಯಮತಃಪರಂ ।

ತಾ॥ ಆದ್ದರಿಂದ ಎಲೈ ರಾಜರ್ಷಿಯೇ ಇನ್ನು ಮುಂದಿನ ಕರ್ತವ್ಯವೇನೆಂಬು ದನ್ನು ಅಪ್ಪಣೆ ಕೊಡಿರೆಂದು ಆ ಬಾಲೆಯು ನುಡಿದಳು ।

ಸುಮುನಸ್ಕ ಉವಾಚ :-

ತಸ್ಮೈದದಕ್ಷಿಣಭುಜಾಚ್ಚಾತೋಹಂಮುನಿಪುಂಗವಃ ।
ಶೀಘ್ರಂವರಯಕಲ್ಯಾಣಿಮಾಂತಸ್ಮಾತ್ತ್ವತ್ಸಮೀಪಗಂ । ॥೨೦॥

ತಾ॥ ಎಲೈ ಕಲ್ಯಾಣಿಯೇ ! ಆ ಬ್ರಹ್ಮನ ಬಲಭುಜದಿಂದ ಜನಿಸಿದ ಸುಮನಸ್ಕನೆಂಬ ಮುನಿಪುಂಗವನು ನಾನೇ ಆದ್ದರಿಂದ ನಿನ್ನ ಸಮೀಪಕ್ಕೆ ಬಂದಿರುವ ನನ್ನನ್ನು ವರಿಸುವವಳಾಗು ॥೨೦॥

ಕನ್ಯಕೋವಾಚ :-

ಸತ್ಯಂರಾಜರ್ಷೇಕಿಂಚಿತ್‌ಸಂಕೇತಂಮಮವಿದ್ಯತೇ ।
ತತ್ಸಂಕೇತಾನುಕುಲಶ್ಚೇನ್ಮಾಂವೃಣೀಷ್ವಮುನೀಶ್ವರ ॥೨೨॥

ತಾ॥ ಎಲೈ ರಾಜರ್ಷಿಯಾದ ಮುನಿಶ್ರೇಷ್ಠನೇ! ನೀನು ಹೇಳಿದಿದು ನಿಜ. ಆದರೆ ನನಗೆ ಒಂದು ಸಂಕೇತವಿದೆ ಆದಕ್ಕೆ ನೀನು ಒಪ್ಪುವುದಾದರೆ ನನ್ನನ್ನು ವಿವಾಹವಾಗಬಹುದು ॥೨೨॥

ಸುಮುನಸ್ಕ ಉವಾಚ :-

ತಥಾಽಸ್ತುವದಕಲ್ಯಾಣಿತತ್ಕರೋಮಿಸುದುಷ್ಕರಂ ॥೨೩॥

ತಾ॥ ಎಲೈ ಕಲ್ಯಾಣಿಯೇ ! ಹಾಗೆಯೇ ಆಗಲಿ, ಆ ನಿನ್ನ ಸಂಕೇತವು ಏನೆಂಬುದನ್ನು ತಿಳಿಸು ಅದು ಎಷ್ಟೇ ದುಷ್ಕರವಾಗಿದ್ದರೂ ಅದನ್ನು ನಾನು ನಡೆಸಿ ಕೊಡುತ್ತೇನೆ ॥೨೩॥

ಏವಂವದತಿಧರ್ಮಿಷ್ಠೇಸುಶೀಲಾಪ್ರತ್ಯುವಾಚತಂ ।
ಅಂಸ್ಯಾಪ್ಯನತಿದೂರೇಚಋಷಯಃಕಶ್ಯಪಾದಯಃ ॥೨೪॥

ತಾ॥ ಧರ್ಮಿಷ್ಠನಾದ ಸುಮನಸ್ಕನ ಮಾತನ್ನು ಕೇಳಿದ ಕಲ್ಯಾಣಿಯಾದ ಆ ಸುಶೀಲೆಯು ಪ್ರತ್ಯುತ್ತರವನ್ನು ಈ ರೀತಿ ಹೇಳಿದಳು ಇಲ್ಲಿಗೆ ಅತಿ ಸಮೀಪದಲ್ಲಿಯೇ ಕಶ್ಯಪಾದಿ ಋಷಿಗಳು ವಾಸಮಾಡಿಕೊಂಡಿರುವರು ॥೨೪॥

ಎಸನ್ತಿತತ್ರಗತ್ವಾತ್ವಮಯಾಸಹಮಹಾಮತೇ ।
ಮತ್ಪಾಣಿಗ್ರಹಣಸ್ತೇಷಾಂಪುರೋಭಾಗೇಮುನೀಶ್ವರಃ ॥೨೫॥

ತಾ॥ ನನ್ನಲ್ಲಿ ನಿನಗೆ ದಯೆಯುಂಟಾಗಿದ್ದಲ್ಲಿ ನನ್ನನ್ನು ಕರೆದುಕೊಂಡು ಅಲ್ಲಿಗೆ ಹೋಗಿ ಆ ಮಹರ್ಷಿಗಳ ಎದುರಿನಲ್ಲಿ ನನ್ನನ್ನು ವಿವಾಹವಾಗುವುದು ನನಗೆ ಸಮ್ಮತವಾಗಿರುವುದು ॥೨೫॥

ಕುರ್ವಿದಂಮಮಸಂಕೇತಂಅಸ್ತಿಚೇನ್ಮಯಿಪೇದಯಾ ।
ಇತಿತದ್ವಚನಂಶ್ರುತ್ವಾಸುಮನಸ್ಕೋಮಹಾಮುನಿಃ ॥೨೬॥

ತಾ॥ ಈ ರೀತಿ ವಿವಾಹವಾಗಬೇಕೆಂಬುದೇ ನನ್ನ ಸಂಕೇತವು ಆದ್ದರಿಂದ ನನ್ನೀ ಕೋರಿಕೆಯನ್ನು ನೆರವೇರಿಸಿಕೊಡಬೇಕೆಂದು ಆ ಸುಮನಸ್ಕನನ್ನು ಸುಶೀಲೆಯು ಪ್ರಾರ್ಥಿಸಿದಳು ॥೨೬॥

ತಥಾಸ್ತ್ವಿತಿಪ್ರತಿಜ್ಞಾತಃಸ್ತ್ರಿಯಾಸಹಮಹಾಮತಿಃ ।
ವಿವಾಹಾರ್ಥಂಕ್ಷಣಂಧ್ಯಾತ್ವಾವಿಧಿಪೂರ್ವಕಮಾತ್ಮನಿ ॥೨೭॥

ತಾ॥ ಆ ವಚನವನ್ನು ಕೇಳಿದ ಆ ಸುಮನಸ್ಕಮುನಿಯು ವಿಧ್ಯುಕ್ತವಾಗಿ ವಿವಾಹವಾಗುವುದೇ ಸರಿಯೆಂದು ಕ್ಷಣಕಾಲ ಆಲೋಚಿಸಿ ಹಾಗೆಯೇ ಆಗಲೆಂದು ತನ್ನ ಅಂಗೀಕಾರವನ್ನು ಸೂಚಿಸಿದನು ॥೨೭॥

ತದ್ದೃಷ್ಟ್ವಾಽನತಿದೂರೇತುಋಷೀಣಾಂಮಂಡಲಂಚತತ್ ।
ತತ್ರಗತ್ವಾಮಹಾಯೋಗೀಋಷೀಣಾಮಗ್ರತಸ್ಥಿತಃ ॥೨೮॥

ತಾ॥ ಸಮೀಪದಲ್ಲಿರುವ ಮಹರ್ಷಿಗಳ ಸಮೂಹವನ್ನು ನೋಡಿ ಆ ಸುಮನಸ್ಕನು ಸುಶೀಲೆಯೊಡನೆ ಹೊರಟು ಆ ಮಹರ್ಷಿಗಳ ಸಮೀಪವನ್ನು ಸೇರಿದನು ॥೨೮॥

ನತ್ವಾನತ್ವಾಪುನರ್ನತ್ವಾಪ್ರಾರ್ಥಯಾಮಾಸತಾನ್ಮುನೀನ್ ।
ಕಶ್ಯಪೋತ್ರಿರ್ಭರದ್ವಾಜೋವಿಶ್ವಾಮಿತ್ರೋಽಥಗೌತಮಃ ॥೨೯॥
ಜಮದಗ್ನಿರ್ವಸಿಷ್ಠಶ್ಚಸಪ್ತೈತೇಋಷಯಸ್ತದಾ ।
ಅಗಸ್ತ್ಯೋಪಿಭೃಗುಶ್ಚೈವಕೌಂಡಿನ್ಯಶ್ಚ್ಯವನಸ್ತದಾ ॥೩೦॥
ಮರೀಚಿರ್ಭಾರ್ಗವಶ್ಚೈವಶ್ಯಾಂಡಿಲ್ಯೋರೋಮಶಸ್ತದಾ ।
ವಾಮದೇವೋಮಹಾದೇವೋವಾಸಿಷ್ಠಶ್ಚಪರಾಶರಃ ॥೩೧॥
ಯಾಜ್ಞವಲ್ಕ್ಯಋಷ್ಯಶೃಂಗಃ ಶೌನಕೋಮುದ್ಗಲೋಮಹಾನ್ ।
ಇತ್ಯಾದ್ಯಾಮುನಯಸ್ಸರ್ವೇಸುಮನಸ್ಕಂಮಹಾಮುನಿಂ ॥೩೨॥

ತಾ॥ ಅಲ್ಲಿದ್ದ ಆ ಮಹರ್ಷಿಗಳಿಗೆಲ್ಲಾ ಸುಮನಸ್ಕನು ಅನೇಕ ಸಾರಿ ನಮಸ್ಕಾರಗಳನ್ನು ಪ್ರತಿಯೊಬ್ಬರಿಗೂ ಸಾರಿ ಸಾರಿ ನಮಸ್ಕಾರಗಳನ್ನು ಮಾಡಿದನು. ಅಲ್ಲಿದ್ದ ಮಹರ್ಷಿಗಳ್ಯಾರ್ಯಾರೆಂದರೆ ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ ವಸಿಷ್ಠರೆಂಬ ಸಪ್ತಋಷಿಗಳೂ ಮತ್ತು ಅಗಸ್ತ್ಯ, ಭೃಗು, ಕೌಂಡಿಣ್ಯ, ಚ್ಯವನ, ಮರೀಚಿ, ಭಾರ್ಗವ, ಶ್ಯಾಂಡಿಲ್ಯ, ರೋಮಶ, ವಾಮದೇವ, ವಾಸಿಷ್ಠ, ಪರಾಶರ ಯಾಜ್ಞವಲ್ಕ್ಯ, ಋಷ್ಯಶೃಂಗ, ಶೌನಕ, ಮುದ್ಗಲ ಮೊದಲಾದ ಮಹರ್ಷಿಗಳಿಗೆಲ್ಲಾ ಸುಮನಸ್ಕನು ಪ್ರಣಾಮಗಳನ್ನು ಮಾಡಿದನು ॥೨೯॥೩೦॥೩೧॥೩೨॥

ಶೃಣುಧ್ವಂಮುನಯಃಸರ್ವೇಮದ್ವಾಕ್ಯಂವಿನಯಾನ್ವಿತಂ ।
ಅಹಂವೈಬ್ರಹ್ಮಣಾದಿಷ್ಟೋವಿವಾಹಾರ್ಥಂಮುನೀಶ್ವರಾಃ ॥೩೩॥

ತಾ॥ ಎಲೈ ಮುನಿವರ್ಯರೇ ವಿನಯದಿಂದ ಕೂಡಿದ ನನ್ನ ಪ್ರಾರ್ಥನೆಯನ್ನು ಆಲಿಸಿರಿ ನಾನು ಬ್ರಹ್ಮನಿಂದ ಆಜ್ಞಪ್ತನಾಗಿ ವಿವಾಹಾರ್ಥವಾಗಿ ಈಕೆಯೊಡನೆ ತಮ್ಮಗಳ ಸನ್ನಿಧಿಗೆ ಬಂದಿರುವೆನು ॥೩೩॥

ಯೇಯೇಸರ್ವೇಸಮಾಗತ್ಯಮಮನ್ಯೈವಾಹಿಕಕ್ರಮಾ ।
ಕರ್ತವ್ಯಂಕರ್ಮವಿಧಿನಾವೇದೋಕ್ತೇನಮುನೀಶ್ವರಾಃ ॥೩೪॥

ತಾ॥ ಎಲೈ ಮುನೀಶ್ವರರಾದ ಮಹರ್ಷಿಗಳೇ ! ತಾವೆಲ್ಲರೂ ಸೇರಿ ನಮ್ಮ ವಿವಾಹವನ್ನು ವೇದೋಕ್ತ ವಿಧಾನದಿಂದ ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ ॥೩೪॥

ಇತಿವಿಜ್ಞಾಪ್ಯರಾಜರ್ಷಿಸ್ತೇಷಾಮಗ್ರೇಕ್ಷಣಂಸ್ಥಿತಃ ।
ತೇಸರ್ವೇತಂಪುರಸ್ಕೃತ್ಯಬೃಹದಾರಣ್ಯಮಾಯಯುಃ ॥೩೫॥

ತಾ॥ ರಾಜರ್ಷಿಯಾದ ಸುಮನಸ್ಕನ ವಿಜ್ಞಾಪನೆಯನ್ನು ಕೇಳಿದ ಆಮಹರ್ಷಿಗಳೆಲ್ಲರೂ ಕ್ಷಣಕಾಲದಲ್ಲಿ ತಮ್ಮೆಲ್ಲರ ಅಭಿಪ್ರಾಯದಿಂದ ಆ ಸುಮನಸ್ಕನನ್ನು ಪುರಸ್ಕರಿಸಿ ಆ ಮಹರ್ಷಿಗಳೆಲ್ಲರೂ ಸುಶೀಲೆ ಸುಮನಸ್ಕರೊಡಗೂಡಿ ಬೃಹದಾರಣ್ಯವನ್ನು ಸೇರಿದರು ॥೩೫॥

ಸುಶೀಲ ಸುಮನಸ್ಕ ವಿವಾಹ

ಸುಮನಸ್ಕೋಪಿರಾಜರ್ಷಿರ್ಮುನಿಭಿಸ್ಸಹಸುವ್ರತಃ ।
ತದ್ವನೇಚತಪಶ್ಶಕ್ತ್ಯಾವಿವಾಹೇಸಕ್ತಮಾನಸಃ ॥೩೬॥

ತಾ॥ ರಾಜರ್ಷಿಯಾದ ಸುಮನಸ್ಕನು ಮಹರ್ಷಿಗಳೊಡನೆ ಆ ವನಕ್ಕೆ ಬಂದವನಾಗಿ ಈ ಸ್ಥಳವು ನಮ್ಮ ವಿವಾಹಕ್ಕೆ ಪ್ರಶಸ್ತವಾಗಿದೆಯೆಂದು ತನ್ನ ಮನಸ್ಸಿನಲ್ಲಿ ನಿರ್ಧರಿಸಿಕೊಂಡು ತನ್ನ ತಪಶ್ಶಕ್ತಿಯಿಂದ ಇಲ್ಲಿ ವಿವಾಹವು ನಡೆಯುವಂತೆ ಮಾಡಬೇಕೆಂದು ಸಂಕಲ್ಪಿಸಿದನು ॥೩೬॥

ಸಂಸ್ಮರ್ರವಿಶ್ವಕರ್ಮಾಣಂಸರ್ವಲೋಕೋಪಕಾರಕಂ ।
ಆಗತಂತಂಸಮಾಲೋಕ್ಯವಾಕ್ಯಮೇಕ್ಮಥಾಬ್ರವೀತ್ ॥೩೭॥

ತಾ॥ ಸರ್ವಲೋಕೋಪಕಾರನಾದ ವಿಶ್ವಕರ್ಮನನ್ನು ತನ್ನ ಮನಸ್ಸಿನಲ್ಲಿ ಸ್ಮರಿಸಿ ತನ್ನ ತಪಶ್ಶಕ್ತಿಯಿಂದ ಆತನನ್ನು ಬರಮಾಡಿಕೊಂಡು ಆತನೊಡನೆ ಈ ರೀತಿ ಹೇಳಿದನು ॥೩೭॥

ವಿಶ್ವಕರ್ಮನ್ಮಹಾಬುದ್ಧೇಮಮಾತ್ರೈವಶುಭಪ್ರದಂ ।
ಕರ್ತವ್ಯಂದಿವ್ಯಭವನಂಲೋಕತ್ರಯಸುಪೂಜಿತಂ ॥೩೮॥

ತಾ॥ ಮಹಾಬುದ್ಧಿಶಾಲಿಯಾದ ವಿಶ್ವಕರ್ಮನೇ! ಈ ಸ್ಥಳದಲ್ಲಿಯೇ ನನಗೋಸ್ಕರವಾಗಿ ಶುಭಪ್ರದವಾದ ತ್ರಿಲೋಕಪೂಜ್ಯವಾಗುವಂಥಾ ಒಂದು ದಿವ್ಯಮಂದಿರವನ್ನು ನಿರ್ಮಿಸುವವನಾಗು ॥೩೮॥

ನಾನಾರತ್ನಸಮಾಕೀರ್ಣಂನಾನಾಚಿತ್ರಸಮನ್ವಿತಂ ।
ಸೌವರ್ಣಂಚಮಹಾದೀಪ್ತಂದಿವ್ಯಮಂದಿರಮದ್ಭುತಂ ॥೩೯॥
ಸರ್ವಾಲಂಕಾರಸಂಯುಕ್ತಂಕೃತಂತಂವಿಶ್ವಕರ್ಮಣಾ ।
ತಂದೃಷ್ಟ್ವಾವಿಸ್ಮಿತಾಸರ್ವೇಮುನಯೋದೀಪ್ತತೇಜಸಃ ॥೪೦॥

ತಾ॥ ಆ ಸುಮನಸ್ಕನ ಆಜ್ಞೆಯ ಪ್ರಕಾರ ಪ್ರಾಜ್ಞನೂ ವಿಚಕ್ಷಣನೂ ಆದ ಆ ವಿಶ್ವಕರ್ಮನು ಅನೇಕರತ್ನಗಳಿಂದ ವಿರಾಜಿಸುವಂಥಾ ನಾನಾ ಚಿತ್ರವಿಚಿತ್ರಗಳಿಂದೊಡಗೂಡಿದ ಸುವರ್ಣಮಯವಾದ ಸರ್ವಾಲಂಕಾರ ಶೋಭಿತವಾದ ಮಹಾಪ್ರಕಾಶಮಾನವಾಗಿಯೂ ಅತ್ಯದ್ಭುತವಾಗಿಯೂ ಇರುವ ಒಂದು ದಿವ್ಯಮಂದಿರವನ್ನು ನಿರ್ಮಾಣ ಮಾಡಿದನು. ಆ ಋಷಿವರ್ಯರೆಲ್ಲಾ ಆ ಮಂದಿರದ ಅಂದವನ್ನೂ ಸೊಬಗನ್ನೂ ನೋಡಿ ವಿಸ್ಮಿತರಾದರು ॥೩೯॥೪೦॥

ತತಃಪರಂಕ್ಷಣಾರ್ಧೇನತಪಶ್ಶಕ್ತ್ಯಾಸಮಾರ್ಜಿತಂ ।
ಅಷ್ಟೈಶ್ವರ್ಯಮಯಂದ್ರವ್ಯಂಸರ್ವಸಾಂಭಾರಸಂಯುತಂ ॥೪೧॥

ತಾ॥ ಈ ರೀತಿಯಲ್ಲಿ ವಿವಾಹ ಮಂದಿರವು ನಿರ್ಮಾಣವಾದ ಅರ್ಧಕ್ಷಣದಲ್ಲಿಯೇ ಆ ಸುಮನಸ್ಕನ ತಪಶಕ್ತಿಯಿಂದ ಅಷ್ಟೈಶ್ವರ್ಯ ಸಮೇತ ಸರ್ವಮಂಗಳಕರವಾದ ಸಕಲ ಸಾಂಬಾರಗಳೂ ಆ ದಿವ್ಯಮಂದಿರದಲ್ಲಿ ತುಂಬಿದವು ॥೪೧॥

ತಂದೃಷ್ಟ್ವಾಮುನಯಸ್ಸರ್ವೇ ಚಕ್ರುರ್ವೈವಾಹಿಕಾಃ ಕ್ರಿಯಾಃ ।
ಶುಭೇ ದಿನೇ ಮುಹೂರ್ತೇಚ ಸ್ವಸ್ತಿಪುಣ್ಯಾಹಮಾಚರನ್ ॥೪೨॥

ತಾ॥ ಅದನ್ನೆಲ್ಲಾ ಕಂಡು ಋಷಿಗಳೆಲ್ಲಾ ಒಂದಾನೊಂದು ಶುಭದಿನದೊಳಗಿನ ಶುಭಮುಹೂರ್ತದಲ್ಲಿ ಸ್ವಸ್ತಿಪುಣ್ಯಾಹಪುರಸ್ಸರವಾಗಿ ವೈವಾಹಿಕ ಮಂಗಳ ಕಾರ್ಯಗಳನ್ನು ನೆರವೇರಿಸುವವರಾದರು ॥೪೨॥

ಅವಿಘ್ನಾಯ ವಿವಾಹಸ್ಯಋಷಯಸ್ಸರ್ವದೇವತಾಃ ।
ಪ್ರಾರ್ಥನಾಂಚೈವಕುರ್ವಾಣಾಃ ಆದಿತ್ಯಾದಿನವಗ್ರಹಾನ್ ॥೪೩॥
ಚಕ್ರುರ್ಯಾಗೇತು ಪೂಜಾಂಚ ನವಗ್ರಹಮುಖೇನವೈ ।
ವೈವಾಹಿಕಂ ಶುಭಂ ಚಕ್ರು ಸುಶೀಲಾ ಸುಮನಸ್ಕಯೋಃ ॥೪೪॥

ತಾ॥ ನಿರ್ವಿಘ್ನವಾಗಿ ವಿವಾಹಲಘ್ನವನ್ನು ನೆರವೇರಿಸಲು ಆ ಮಹರ್ಷಿಗಳೆಲ್ಲಾ ಸಮಸ್ತ ದೇವತೆಗಳನ್ನು ಪ್ರಾರ್ಥಿಸಿ ಆದಿತ್ಯಾದಿ ನವಗ್ರಹಗಳನ್ನುಪೂಜಿಸಿ ಆದಿತ್ಯಾದಿ ನವಗ್ರಹಮುಖವೆಂಬ ಹೋಮವನ್ನು ಪೂರ್ತಿಗೊಳಿಸಿ ಶುಭಮುಹೂರ್ತದಲ್ಲಿ ಆ ಸುಶೀಲೆ ಸುಮನಸ್ಕರ ವಿವಾಹವನ್ನು ನೆರವೇರಿಸಿದರು ॥೪೩॥೪೪॥

ಏವಂಕ್ರಮೇಣ ಸಂಕಲ್ಪ್ಯವಿಧಿಪೂರ್ವಮನುಕ್ರಮಾತ್ ।
ಚತುರ್ಥೇಽಹನಿಸಂಪ್ರಾಪ್ತೇಕೃತಂ ಹೋಮಾದಿಕಂಮಹತ್ ॥೪೫॥

ತಾ॥ ಈ ರೀತಿ ಸಂಕಲ್ಪಿಸಿದಂತೆ ವಿದ್ಯುಕ್ತವಾಗಿ ಕ್ರಮವರಿತು ವಿವಾಹ ಮಹೋತ್ಸವವನ್ನು ನೆರವೇರಿಸಿ ನಾಲ್ಕನೆಯ ದಿನದಲ್ಲಿ ಹೋಮಾದಿಗಳನ್ನು ಆಚರಿಸಿದರು ॥೪೫॥

ಏವಂ ಕ್ರಮೇಣ ನಿರ್ವರ್ತ್ಯ ಶುಭಕರ್ಮಾಣ್ಯತಂದ್ರಿತಃ ।
ತೋಷಯಿತ್ವಾಮುನೀನ್ಸರ್ವಾನ್ ವಸ್ತ್ರಾಭರಣಸಂಸ್ಕೃತೈಃ ॥೪೬॥

ತಾ॥ ಆ ಮಹರ್ಷಿಗಳೆಲ್ಲರೂ ಯಾವ ಲೋಪದೋಷವೂ ಇಲ್ಲದೆ ವಿವಾಹ ಮಂಗಳ ಕಾರ್ಯಗಳನ್ನು ನೆರವೇರಿಸಲು ಆ ಸುಮನಸ್ಕನು ವಸ್ತ್ರಾಭರಣಾದಿಗಳಿಂದ ಆ ಮಹರ್ಷಿಗಳೆಲ್ಲರನ್ನೂ ಪೂಜಿಸಿ ಸಂತೋಷಪಡಿಸಿದನು. ॥೪೬॥

ತಾನುದ್ದಿಶ್ಯಮಹಾಪ್ರಾಜ್ಞಃ ಸುಮನಸ್ಕೋಮಹಾಮತಿಃ ।
ಉವಾಚ ಮಧುರಂ ವಾಕ್ಯಂ ಅತ್ಯನ್ತವಿನಯಾನ್ವಿತಂ ॥೪೭॥

ತಾ॥ ಮಹಾ ಪ್ರಾಜ್ಞನಾದ ಸುಮನಸ್ಕನು ಅತ್ಯಂತ ವಿನಯವೂ ಮಧುರವೂ ಆದ ವಾಕ್ಯದಿಂದ ತನ್ನ ಉದ್ದಿಶ್ಯವನ್ನು ಆ ಮಹರ್ಷಿಗಳಿಗೆ ವಿಜ್ಞಾಪಿಸಿಕೊಂಡನು. ॥೪೭॥

ಶೃಣುಧ್ವಂ ಮುನಯಸ್ಸರ್ವೇ ಮದ್ವಾಕ್ಯಂ ಪ್ರಾರ್ಥನಾಯುತಂ ।
ಕೂಟಸ್ಥಾ ಪ್ರಭವಿಷ್ಯನ್ತು ಮದ್ವಂಶಸ್ಯ ಮುನೀಶ್ವರಾಃ ॥೪೮॥

ತಾ॥ ಪ್ರಾರ್ಥನಾಯುಕ್ತವಾದ ನನ್ನ ವಾಕ್ಯವನ್ನು ಮಹರ್ಷಿಗಳಾದ ನೀವೆಲ್ಲರೂ ಲಾಲಿಸಿರಿ ನನ್ನ ವಂಶಕ್ಕೆ ಕೂಟಸ್ಥನು ಜನಿಸುವಂತೆಯೂ ॥೪೮॥

ಯುಯಂ ಮದ್ವಂಶಜಾನಾಂಚ ವೇದೋಕ್ತ ವಿಧಿನಾಕ್ರಿಯಾಃ ।
ಸದಾಸನ್ನಿತ್ವತಿಸರ್ವೇನ್ವೈ ವರಂಕುರ್ವನ್ತುಮೇತಥಾ ॥೪೯॥

ತಾ॥ ಹಾಗೆಯೇ ನನ್ನ ವಂಶದಲ್ಲಿ ಹುಟ್ಟಿದವರಿಗೆ ವೇದೋಕ್ತ ವಿಧಿಪ್ರಕಾರ ಸಮಸ್ತ ಕರ್ಮಗಳು ಸದಾ ಆಚರಣೆಯಲ್ಲಿರುವಂತೆಯೂ ಮಹರ್ಷಿಗಳಾದ ನೀವು ನನಗೆ ವರವನ್ನು ಕರುಣಿಸಿರಿ ॥೪೯॥

ಇತಿ ವಿಜ್ಞಾಪ್ಯಯೋಗೀಶಃ ತೇಷಾಮಗ್ರೇಸ್ಥಿತಶ್ಚಸಃ ।
ತೇಸರ್ವೇಮುನಯಃ ಪ್ರೀತಾವರ್ದತಸ್ಮೈತಥಾಸ್ತ್ವಿತಿ ॥೫೦॥

ತಾ॥ ಈ ರೀತಿ ವಿಜ್ಞಾಪಿಸಿ ಆ ಸುಮನಸ್ಕ ಯೋಗೀಶ್ವರನು ಅವರ ಮುಂದೆ ನಿಂತಿರಲು ಆ ಮಹರ್ಷಿಗಳೆಲ್ಲಾ ಸುಪ್ರೀತರಾಗಿ ಹಾಗೆಯೇ ಆಗಲೆಂದು ವರವನು ಕೊಟ್ಟರು ॥೫೦॥

ತತಸ್ತಾನ್ಪ್ರೇಷಯಾಮಾಸತೇ ಜಗ್ಮುರ್ನಿಜಮಾಶ್ರಮಃ ।
ಆತ್ಮಾನಂಹಿತಥಾಮೇನೇ ಕೃತಕೃತ್ಯಂ ಮುನೀಶ್ವರಃ ॥೫೧॥

ತಾ॥ ಅನಂತರ ಆ ಮಹರ್ಷಿಗಳೆಲ್ಲರನ್ನೂ ಕಳುಹಿಸಿಕೊಡಲು ಆ ಋಷಿಗಳೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ತೆರಳಿದರು ಬಳಿಕ ಆ ಸುಮನಸ್ಕನಾದರೋ ತಾನು ಕೃತ ಕೃತ್ಯ ನಾದೆನೆಂದು ಸಂತೋಷದಿಂದಿದ್ದನು. ॥೫೧॥

ಸುಶೀಲಾ ಸುಮನಸ್ಕ ವಿಹಾರ

ಗೃಹಸ್ಥಾಶ್ರಮಮಾಪನ್ನೋ ಸುಮನಸ್ಕೋಮಹಾಮುನಿಃ ।
ಹರ್ಮ್ಯೇಷು ಚಂದ್ರಶಾಲಾ ಸುಲತಾಮಂಡಲವೇಶ್ಮಸು ॥೫೨॥
ಸುಶೀಲಯಾಸಮಾಯುಕ್ತೋರೇಮೇಪ್ರತಿದಿನಂಮುನಿಃ ।
ವಸಂತಕಾಲೇಸಂಪ್ರಾಪ್ತೇಕದಾಚಿದ್ಭಾರ್ಯಯಾಸಹ ॥೫೨॥

ತಾ॥ ಈ ರೀತಿ ಗೃಹಸ್ಥಾಶ್ರಮ ಧರ್ಮದಲ್ಲಿರುತ್ತಾ ಆ ಸುಮನಸ್ಕನು ವಸಂತ ಕಾಲವು ಸಂಪ್ರಾಪ್ತವಾಗಲು ತನ್ನ ಹೆಂಡತಿಯಾದ ಸುಶೀಲೆಯೊಡನೆ ಮಧುಚಂದ್ರ ವಿಹಾರಾರ್ಥವಾಗಿ ಉಪ್ಪರಿಗೆಗಳಲ್ಲಿಯೂ, ಚಂದ್ರಶಾಲೆಗಳಲ್ಲಿಯೂ ಲತಾ ಮಂಟಪ ಗಳಲ್ಲಿಯೂ ಅನುದಿನವೂ ರತಿಸುಖವನ್ನನುಭವಿಸಿದನು. (ಇಲ್ಲಿ ವಸಂತಋತುವು ವಿವಾಹನಂತರ ಇರುವುದರಿಂಧ ಸುಮನಸ್ಕ ಸುಶೀಲೆಯರ ವಿವಾಹವು ಶಶಿರಋತುವಿ ನಲ್ಲಿ ನಡೆದಿದೆ ಎಂಬ ಭಾವವು) ॥೫೨॥೫೩॥

ಪಲಾಶ್ ಪುಷ್ಪಶೋಭಾಭಿಃಸಂಧ್ಯಾರಾಗವದುಜ್ವಲಂ ।
ನಾರಂಗಚೂತಪನಸಾಕಪಿತ್ಥಾಶ್ವತ್ಥಶೋಭಿತಂ ॥೫೪॥

ತಾ॥ ಪ್ರಕಾಶಮಾನವಾಗಿ ಶೋಭಿಸುತ್ತಿರುವ ಮುತ್ತುಗದ ಪುಷ್ಪಗಳಿಂದಲೂ ಕಿತ್ತಲೆ, ಮಾವು, ಹಲಸು, ಬೇಲ, ಅರಳಿ ಮೊದಲಾದ ವೃಕ್ಷಗಳಿಂದ ಸಂಧ್ಯಾರಾಗ ವೆಂಬಂತೆ ವಸಂತಋತುವು ವಿಜೃಂಭಿಸುತ್ತಿತ್ತು ॥೫೪॥

ನಾನಾಪಕ್ಷಿಸಮಾಕೀರ್ಣಂವಿಚಿತ್ರಗೃಹಶೋಭಿತಂ ।
ಸಿಂಹಶಾರ್ದೂಲನಾಗಾದ್ಯೈರ್ವ್ಯಾಪ್ತಮುದ್ಯಾನಮದ್ಭುತಂ ॥೫೫॥

ತಾ॥ ನಾನಾ ವಿಧವಾದ ಪಕ್ಷಿಗಳಿಂದಲೂ, ಸಿಂಹ, ಹುಲಿ, ಆನೆ ನಾನಾ ವಿಧವಾದ ಹಾವುಗಳೂ ಮೊದಲಾದ ಅನೇಕ ವಿಧವಾದ ಮೃಗಗಳಿಂದ ಶೋಭಿತವಾದ ಆ ಉಧ್ಯಾನವನದಲ್ಲಿ ಚಿತ್ರವಿಚಿತ್ರ ತರವಾದ ಗೃಹಗಳಿಂದಲೂ ಆ ಉಧ್ಯಾನವನವು ಶೋಭಿಸುತ್ತಿದ್ದಿತು ॥೫೫॥

ಜರಕುಕ್ಕುಟನತ್ಯೂಹೈಃ ಕ್ರೌಂಚಾದ್ಯೈಕಲಕೂಜಿತೈಃ ।
ತೇಷಾಂರನ್ಯೈಸ್ಸಮಾಕೀರ್ಣಂಚೇವತೋಧ್ಯಾನಸನ್ನಿಭಂ ॥೫೬॥
ವಾಪೀಕೂಪತಟಾಕಾದ್ಯೈರ್ಮಯೂರೈರ್ಹಂಸಪಕ್ಷಿಭಿಃ ।
ಕಾರಂಡವೈಶ್ಚಕ್ರವಾಕೈರ್ಭಾಸುರಕಾಮಿತಪ್ರದಂ ॥೫೭॥

ತಾ॥ ಆ ವನದಲ್ಲಿ ಝುಳಝುಳಿಸುವ ಕಾಲುವೆಗಳೂ ಭಾವಿಗಳೂ ಕೆರೆಗಳೂ ಹಂಸಪಕ್ಷಿಗಳಿಂದ ಕೂಡಿದ ಸರೋವರಗಳೂ ನವಿಲು, ಹಂಸ, ಕಾರಂಡವ, ಚಕ್ರವಾಕಾದಿಪಕ್ಷಿಗಳೂ ನೀರು ಕೋಳಿಗಳೂ ಕ್ರೌಂಚಪಕ್ಷಿಗಳೇ ಮೊದಲಾದವುಗಳ ಕಲಕಲವರಶಬ್ದಗಳಿಂದ ಕೂಡಿ ದೇವಲೋಕದ ಉದ್ಯಾನವನದಂತೆ ಆ ವನವು ಶೋಭಿಸುತ್ತಾ ಇದ್ದಿತು ॥೫೬॥೫೭॥

ವನಂಪ್ರವಿಶ್ಯಧರ್ಮಾತ್ಮಾಭಾರ್ಯಾಯುಕ್ತೋಮಹಾಮತಿಃ ।
ತನ್ಮಧ್ಯೇಸಂಸ್ಥಿತಂದಿವ್ಯಂಭಾಸುರಂಚಲತಾಗೃಹಂ ॥೫೮॥

ತಾ॥ ಅಂಥಾ ವನವನ್ನು ಧರ್ಮಾತ್ಮನೂ ಮಹಾಮತಿಯೂ ಆದ ಸುಮನಸ್ಕನು ಹೆಂಡತಿಯೊಡನೆ ಆ ವನದಲ್ಲಿರುವ ಲತಾ ಗೃಹವನ್ನು ಸೇರಿದನು ॥೫೮॥

ಏಲಾಲವಂಗಕುಟಜಮಲ್ಲಿಕಾದಿಸುಗಂಧಿತಂ ।
ತಸ್ಮಿನ್ರಮ್ಯೇತಯಾಯುಕ್ತೋಭಾರ್ಯಯಾಸ್ಮರಸನ್ನಿಭಃ ॥೫೯॥

ತಾ॥ ಆ ವನದಲ್ಲಿ ಯಾಲಕ್ಕಿ, ಲವಂಗ, ಕುಟಜ, ಮಲ್ಲಿಗೆ ಮೊದಲಾದವುಗಳಿಂದ ಪರಿಮಳಯುಕ್ತವಾದ ಸುವಾಸನೆಯು ಕಂಪಿಸುತ್ತಿರಲು ಮನೋಹರವಾದ ಆ ಲತಾಗೃಹದಲ್ಲಿ ಹೆಂಡತಿಯಾದ ಸುಶೀಲೆಯೊಡನೆ ಸಂತೋಷದಿಂದ ಸುಮನಸ್ಕನು ಬಹುಕಾಲ ಸುಖಿಸಿದನು ॥೫೯॥

ತತ್ರಾನ್ತರೇಸಮೀಪಸ್ಥಂರಸಾಲದ್ರುಮಸಂಸ್ಥಿತಂ ।
ಚಕ್ರಂವಾಕಂತದಾದೃಷ್ಟ್ವಾಸಂಯೋಗೋನ್ನತಭಾಸ್ವತಂ ॥೬೦॥
ಸ್ವಭಾರ್ಯಾಂಪ್ರತಿಸಂತುಷ್ಟೋವಾಕ್ಯಮೇಕದುವಾಚಸಃ ।

ತಾ॥ ಹೀಗೆ ಸಂತೋಷವಾಗಿರಲು ಸಮೀಪದಲ್ಲಿದ್ದ ಸಿಹಿ ಮಾವಿನ ಮರದ ಮೇಲೆ ಸಂತೋಷದಿಂದ ಸುಖಿಸುತ್ತಿದ್ದ ಚಕ್ರವಾಕಪಕ್ಷಿಗಳ ಮಿಥುನವನ್ನು ಕಂಡು ಸಂತಸದಿಂದ ಆ ಸುಮನಸ್ಕನು ತನ್ನ ಹೆಂಡತಿಯೊಡನಿಂತೆಂದನು ॥೬೦॥

ಹೇಸಾಧ್ವಿತಾವುಭೌಚಕ್ರವಾಕೌರತಿಮನೋಹರೌ।
ದೃಶ್ಯತೇಭಾಗ್ಯಸಂಪನ್ನೌಇತ್ಯುಕ್ತ್ವಾಸಂಚೇರತುರ್ವನೇ ॥೬೦॥

ತಾ॥ ಎಲೈ ಸಾಧ್ವೀಮಣಿಯೇ! ದಾಂಪತ್ಯ ಸೌಖ್ಯವನ್ನನುಭವಿಸುತ್ತಿರುವ ಆ ಚಕ್ರವಾಕಪಕ್ಷಿಗಳು ಭೋಗಭಾಗಿನಿಗಳಾಗಿ ಸಂತೋಷದಿಂದಿರುವುದನ್ನು ನೋಡೆಂದು ಹೇಳಿ ದಂಪತಿಗಳಾದ ಅವರಿಬ್ಬರೂ ಆ ವನದಲ್ಲಿ ಸಂಚರಿಸುತ್ತಿದ್ದರು ॥೬೦॥

ಸಾಯಂಕಾಲೇತುಸಂಪ್ರಾಪ್ತೇಭಾರ್ಯಾಯುಕ್ತಸ್ಸ್ವಮಂದಿರಂ।
ಪ್ರವಿಶ್ಯಸುಖಮಾಸೀನಸ್ತ್ವಯಾಸಹಮುದಾನ್ವಿತಃ ॥೬೨॥

ತಾ॥ ಹೀಗೆ ವನದಲ್ಲಿ ಅಲ್ಲಲ್ಲಿ ಸಂಚರಿಸುತ್ತಿರಲು ಸಾಯಂಕಾಲವು ಸಮೀಪಿಸಲು ಭಾರ್ಯೆಯಿಂದೊಡಗೂಡಿದ ಸುಮನಸ್ಕನು ತಮ್ಮ ಮಂದಿರವನ್ನು ಸೇರಿ ಕ್ರೌಂಚಪಕ್ಷಿಗಳ ಹಾಗೆ ತಾವೂ ಸಹ ಅತ್ಯಂತ ಸಂತೋಷದಿಂದಿದ್ದರು ॥೬೨॥

ಗೌತಮಾಗಮನ

ಏವಂಪ್ರತಿದಿನಂನೀತ್ವಾಪರಾಂಪ್ರೀತಿಮುಪಾಗದುತ್।
ಕದಾಚಿತ್ಸುಮಹಾಯೋಗಿಗೌತಮೋಯಮುನಿನಾಂವರಃ ॥೬೩॥

ತಾ॥ ಈ ರೀತಿಯಾಗಿ ಪ್ರತಿನಿತ್ಯವೂ ಆ ಸುಮನಸ್ಕನು ಅತ್ಯಂತ ಪ್ರೀತಿಯಿಂದ ಹೆಂಡತಿಯೊಡನೆ ಸುಖದಿಂದಿರಲು ಅಕಸ್ಮಾತ್ತಾಗಿ ಒಂದಾನೊಂದು ದಿನ ಮಹಾ ಯೋಗಿಯೂ ಋಷಿಶ್ರೇಷ್ಠನೂ ಆದ ಗೌತಮನು ॥೬೩॥

ಗಂಗಾಸ್ನಾನಂಸಮಾಕರ್ತುಂಮಾರ್ಗೇತಸ್ಯಪುರಂಯಯುಯುಂ।
ತನ್ಮಂದಿರಂತಥಾದೃಷ್ಟ್ವಾಪ್ರವಿಶತ್ಮುನಿವಲ್ಲಭಃ ॥೬೪॥

ತಾ॥ ಗಂಗಾಸ್ನಾನಕ್ಕಾಗಿ ಹೊರಟವನಾಗಿ ಮಾರ್ಗಮಧ್ಯದಲ್ಲಿ ಸುಮನಸ್ಕನ ಮಂದಿರವನ್ನು ಕಂಡು ಆ ಋಷಿವಲ್ಲಭನು ಮಂದಿರವನ್ನು ಪ್ರವೇಶಿಸಿದನು ॥೬೪॥

ಆಗತಂತಂಸಮಾಲೋಕ್ಯಸುಮನಸ್ಕೋಮಹಾಮುನಿಃ।
ಅರ್ಘ್ಯಾದಿಭಿಃಸಮಭ್ಯರ್ಚ್ಯಸಂಸ್ಥಾಪ್ಯಮುನಿಮಾಸನೇ ॥೬೫॥
ಸಂಪೂಜ್ಯಗಂಧಪುಷ್ಪಾದ್ಯೈಸ್ತೋಷಯಿತ್ವಾಮುನೀಶ್ವರಂ।
ಸ್ವಾಗತಂಬ್ರಾಹ್ಮಣಶ್ರೇಷ್ಠಂಕಚ್ಚಿತ್ಸರಂತವಾಶ್ರಮೇ ॥೬೬॥
ಗೌತಮೋಪಿಮಹಾಪ್ರಾಜ್ಞಸುಮನಸ್ಕಮಥಾಬ್ರವೀತ್

ತಾ॥ ಗೌತಮ ಮುನಿಯ ಆಗಮನವನ್ನು ನೋಡಿ ಆತನನ್ನು ದಿವ್ಯಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಾದಿಗಳಿಂದ ಮಹಾ ಬುದ್ಧಿಶಾಲಿಯಾದ ಆ ಸುಮನಸ್ಕನು ಗೌತಮ

ಮುನಿಯನ್ನು ಪೂಜಿಸಿ ಮತ್ತು ಗಂಧ ಪುಷ್ಪಾದಿಗಳಿಂದಲೂ ಪೂಜಿಸಿ ಬ್ರಾಹ್ಮಣ ಶ್ರೇಷ್ಠನೇ ನಿಮಗೆ ಸುಖಾಗಮನವಾಗಲಿ ನಿಮ್ಮ ಆಶ್ರಮದಲ್ಲಿ ಸರ್ವರೂ ಕುಶಲಿಗಳಲ್ಲವೆ ಎಂದು ಕುಶಲಪ್ರಶ್ನೆಯನ್ನು ಮಾಡಿದ ಆ ಸುಮನಸ್ಕನನ್ನು ನೋಡಿ ಮಹಾ ಪ್ರಾಜ್ಞನಾದ ಗೌತಮಋಷಿ ಇಂತೆಂದನು ।।೬೫।।೬೬।।

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಗೌತಮಸಮಾಗಮೋ ನಾಮ ತೃತೀಯೋಧ್ಯಾಯಃ ।।

ತಾ।। ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ವರ್ಣವೈಭವ ಖಂಡದಲ್ಲಿ ಬ್ರಹ್ಮ ನಾರದ ಸಂವಾದದಲ್ಲಿ ಗೌತಮ ಸಮಾಗಮವೆಂಬ ಮೂರನೇ ಅಧ್ಯಾಯವು ಸಮಾಪ್ತವು ।।

ಹೇಸಾಧ್ವಿತಾವುಭೌಚಕ್ರವಾಕೌರತಿಮನೋಹತೌ ।
ದೃಶ್ಯತೇಭಾಗ್ಯಸಂಪನ್ನೌಇತ್ಯುಕ್ತ್ವಾಸಂಚರ್ರವನೇ ॥೬೧॥

ತಾ॥ ಎಲೈ ಸಾಧ್ವೀಮಣಿಯೇ ! ದಾಂಪತ್ಯ ಸೌಖ್ಯವನ್ನನುಭವಿಸುತ್ತಿರುವ ಆ ಚಕ್ರವಾಕಪಕ್ಷಿಗಳು ಭೋಗಭಾಗಿನಿಗಳಾಗಿ ಸಂತೋಷದಿಂದಿರುವುದನ್ನು ನೋಡೆಂದು ಹೇಳಿ ದಂಪತಿಗಳಾದ ಅವರಿಬ್ಬರೂ ಆ ವನದಲ್ಲಿ ಸಂಚರಿಸುತ್ತಿದ್ದರು ॥೬೧॥

ಸಾಯಂಕಾಲೇತುಸಂಪ್ರಾಪ್ತೇಭಾರ್ಯಾಯುಕ್ತಸ್ಸ್ವಮಂದಿರಂ ।
ಪ್ರವಿಶ್ಯಸುಖಮಾಸೀನಸ್ತಯಾಸಹಮುದಾನ್ವಿತಃ ॥೬೨॥

ತಾ॥ ಹೀಗೆ ವನದಲ್ಲಿ ಅಲ್ಲಲ್ಲಿ ಸಂಚರಿಸುತ್ತಿರಲು ಸಾಯಂಕಾಲವು ಸಮೀಪಿಸಲು ಭಾರ್ಯೆಯಿಂದೊಡಗೂಡಿದ ಸುಮನಸ್ಕನು ತಮ್ಮ ಮಂದಿರವನ್ನು ಸೇರಿ ಕ್ರೌಂಚಪಕ್ಷಿಗಳ ಹಾಗೆ ತಾವೂ ಸಹ ಅತ್ಯಂತ ಸಂತೋಷದಿಂದಿದ್ದರು ॥೬೨॥

ಗೌತಮಾಗಮನ

ಏವಂಪ್ರತಿದಿನಂನೀತ್ವಾಪರಾಂಪ್ರೀತಿಮುಪಾಗದುತ್ ।
ಕದಾಚಿತ್ಸಮಹಾಯೋಗಿಗೌತಮೋಯಮುನಿನಾಂವರಃ ॥೬೩॥

ತಾ॥ ಈ ರೀತಿಯಾಗಿ ಪ್ರತಿನಿತ್ಯವೂ ಆ ಸುಮನಸ್ಕನು ಅತ್ಯಂತ ಪ್ರೀತಿಯಿಂದ ಹೆಂಡತಿಯೊಡನೆ ಸುಖದಿಂದಿರಲು ಅಕಸ್ಮಾತ್ತಾಗಿ ಒಂದಾನೊಂದು ದಿನ ಮಹಾ ಯೋಗಿಯೂ ಋಷಿಶ್ರೇಷ್ಠನೂ ಆದ ಗೌತಮನು ॥೬೩॥

ಗಂಗಾಸ್ನಾನಂಸಮಾಕರ್ತುಂಮಾರ್ಗೇತಸ್ಯಪುರಂಯಯುಂ ।
ತನ್ಮಂದಿರಂತಥಾದೃಷ್ಟ್ವಾಪ್ರವಿಶ್ಯಮುನಿವಲ್ಲಭಃ ॥೬೪॥

ತಾ॥ ಗಂಗಾಸ್ನಾನಕ್ಕಾಗಿ ಹೊರಟವನಾಗಿ ಮಾರ್ಗಮಧ್ಯದಲ್ಲಿ ಸುಮನಸ್ಕನ ಮಂದಿರವನ್ನು ಕಂಡು ಆ ಋಷಿವಲ್ಲಭನು ಮಂದಿರವನ್ನು ಪ್ರವೇಶಿಸಿದನು ॥೬೪॥

ಆಗತಂತಂಸಮಾಲೋಕ್ಯಸುಮನಸ್ಕೋಮಹಾಮುನಿಃ ।
ಅರ್ಘ್ಯಾದಿಭಿಃಸಮಭ್ಯರ್ಚ್ಯಸಂಸ್ಥಾಪ್ಯಮುನಿಮಾಸನೇ ॥೬೫॥
ಸಂಪೂಜ್ಯಗಂಧಪುಷ್ಪಾದ್ಯೈಸ್ತೋಷಯಿತ್ವಾಮುನೀಶ್ವರಂ ।
ಸ್ವಾಗತಂಬ್ರಾಹ್ಮಣಶ್ರೇಷ್ಠಂಕಚ್ಚಿತ್ಸರಂತವಾಶ್ರಮೇ ॥೬೬॥
ಗೌತಮೋಪಿಮಹಾಪ್ರಾಜ್ಞಸುಮನಸ್ಕಮಥಾಬ್ರವೀತ್

ತಾ॥ ಗೌತಮ ಮುನಿಯ ಆಗಮನವನ್ನು ನೋಡಿ ಆತನನ್ನು ದಿವ್ಯಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಾದಿಗಳಿಂದ ಮಹಾ ಬುದ್ಧಿಶಾಲಿಯಾದ ಆ ಸುಮನಸ್ಕನು ಗೌತಮ

ಮುನಿಯನ್ನು ಪೂಜಿಸಿ ಮತ್ತು ಗಂಧ ಪುಷ್ಪಾದಿಗಳಿಂದಲೂ ಪೂಜಿಸಿ ಬ್ರಾಹ್ಮಣ ಶ್ರೇಷ್ಠನೇ ನಿಮಗೆ ಸುಖಾಗಮನವಾಗಲಿ ನಿಮ್ಮ ಆಶ್ರಮದಲ್ಲಿ ಸರ್ವರೂ ಕುಶಲಿಗಳಲ್ಲವೆ ಎಂದು ಕುಶಲಪ್ರಶ್ನೆಯನ್ನು ಮಾಡಿದ ಆ ಸುಮನಸ್ಕನನ್ನು ನೋಡಿ ಮಹಾ ಪ್ರಾಜ್ಞನಾದ ಗೌತಮಋಷಿ ಇಂತೆಂದನು ||೬೫||೬೬||

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಗೌತಮಸಮಾಗಮೋ ನಾಮ ತೃತೀಯೋಧ್ಯಾಯಃ ||

ತಾ|| ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ವರ್ಣವೈಭವ ಖಂಡದಲ್ಲಿ ಬ್ರಹ್ಮ ನಾರದ ಸಂವಾದದಲ್ಲಿ ಗೌತಮ ಸಮಾಗಮವೆಂಬ ಮೂರನೇ ಅಧ್ಯಾಯವು ಸಮಾಪ್ತವು ||

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

–: ನಾಲ್ಕನೆಯ ಅಧ್ಯಾಯ :–

ಜಾನುಮಂಡಲ ಸುಮಂಡಲರ ಜನನ

ಗೌತಮ ಉವಾಚ :–

ಸಮನಸ್ಕಮಹಾಯೋಗಿ ಪೂಜನೀಯೋಸಿತತ್ವತಃ ।
ಕಂಚಿದ್ರಹಸ್ಯಂತೇವಕ್ತುಂ ಆಗತೋಹಂ ಮುನೀಶ್ವರ ॥೧॥

ತಾ॥ ಮುನೀಂದ್ರನೂ ಯೋಗಿಯೂ ಆದ ಎಲೈ ಸುಮನಸ್ಕನೇ! ನೀನು ಯಥಾರ್ಥವಾಗಿ ಪೂಜಿಸಲ್ಪಡಲರ್ಹನು. ನಾನು ಒಂದು ರಹಸ್ಯವಾದ ವಿಚಾರವನ್ನು ನಿನಗೆ ಹೇಳಲು ಇಲ್ಲಿಗೆ ಬಂದೆನೆಂದು ಗೌತಮಮುನಿಯು ಹೇಳಿದನು ॥೧॥

ಇತಿ ತದ್ವಚನಂ ಶೃತ್ವಾ ಸುಮನಸ್ಕೋ ಮಹಾಯಶಾಃ ।
ಉವಾಚ ಮಧುರಂವಾಕ್ಯಂ ಪ್ರೀತ್ಯಾಪರಮಯಾನ್ವಿತಃ ॥೨॥

ತಾ॥ ಈ ರೀತಿಯಾಗಿ ಹೇಳಿದ ಗೌತಮ ಮುನೀಂದ್ರನ ವಾಕ್ಯವನ್ನು ಕೇಳಿ ತುಂಬಾ ಅಕ್ಕರೆಯಿಂದ ಮಹಾ ನೀತಿವಂತನಾದ ಆ ಸುಮನಸ್ಕನು ಮಧುರ ವಾಕ್ಯಗಳಿಂದ ಉತ್ತರವನ್ನು ಹೇಳಿದ್ದೇನೆಂದರೆ ॥೨॥

ಕಿಂತದ್ರಹಸ್ಯಂ ಭಗವರ್ನವಕ್ತುಮರ್ಹಸಿತತ್ವತಃ ।
ಇತ್ಯೇತದ್ವಚನಂಶೃತ್ವಾಗೌತಮೋಯಮಿನಾಂವರಃ ॥ ॥೩॥

ತಾ॥ ಎಲೈ ಭಗವಂತಸ್ವರೂಪನಾದ ಮಹಾಮುನಿಯೇ! ಆ ರಹಸ್ಯವೇನೆಂಬುದನ್ನು ತಿಳಿಸುವವನಾಗು ಎಂದು ಸುಮಸ್ಕನು ಕೇಳಲು ಆ ತ ನೊ ಡ ನೆ ಗೌತಮ ಮುನೀಂದ್ರನಿಂತೆಂದನು ॥೩॥

ಶೃಣುತ್ವಂವಚ್ಮರಾಜರ್ಷಿಯಾಗೋಸ್ತಿಭುವಿಕಶ್ಚನ ।
ಪೌಂಡರೀಕ ಇತಿಖ್ಯಾತಃಕ್ರತುಸ್ಸರ್ವಫಲಪ್ರದಃ ॥೪॥

ತಾ॥ ಎಲೈ ರಾಜರ್ಷಿಯಾದ ಸುಮನಸ್ಕನೇ ಕೇಳು! ಪೌಂಡರೀಕವೆಂಬ ಒಂದು ಪ್ರಸಿದ್ಧವಾದ ಯಾಗವುಂಟು ಅದು ಸರ್ವಫಲಪ್ರದವಾದದ್ದು ॥೪॥

ತೇನಯಾಗೇನದೇವಾನಾಂಪ್ರೀತಿಸ್ಸದ್ಯೋಭಿಜಾಯತೇ ।
ತಂತಥಾವಿಧಮಾಖ್ಯಾತಂಯಾಗಂಕರ್ತುಂತ್ವಮರ್ಹಸೀ ॥೫॥

ಅಂಥಾ ಶ್ರೇಷ್ಠವಾದ ಯಾಗವನ್ನು ನೀನು ಮಾಡುವುದರಿಂದ ಆ ಯಾಗದಿಂದ ಸಮಸ್ತ ದೇವತೆಗಳು ಸುಪ್ರೀತರಾಗುತ್ತಾರೆ. ಅಂಥಾ ಶ್ರೇಷ್ಠವಾದ ಯಾಗವನ್ನು ಮಾಡಲು ನೀನು ಸಮರ್ಥನು ॥೫॥

ತಸ್ಯಯಾಗಸ್ಯವಿಘ್ನೋಽಪಿಭವಿಷ್ಯತಿಸುದಾರುಣಃ ।
ತಸ್ಮಿನ್ ವಿಘ್ನೇವಿನಷ್ಟೇತುಯಾಗಸ್ಸಾಂಗೋಭವಿಷ್ಯತಿ ॥೬॥

ತಾ॥ ಆದರೆ ಆ ಮಹಾ ಯಾಗಕ್ಕೆ ದಾರುಣವಾದ ವಿಘ್ನವುಂಟಾಗುತ್ತದೆ, ಆ ವಿಘ್ನವು ನಶಿಸಿದರೆ ಯಾಗವು ಸಾಂಗವಾಗಿ ನೆರವೇರುತ್ತದೆ ॥೬॥

ಇತಿ ತದ್ವಚನಂಶ್ರುತ್ವಾಸುಮನಸ್ಕೋಽಬ್ರವೀದ್ವಚಃ ।
ಕೋಽಯಂವಿಘ್ನೋಽಸ್ಯಯಾಗಸ್ಯಕಥಂತಸ್ಯಪ್ರತಿಕ್ರಿಯಾ ॥೭॥

ತಾ॥ ಹೀಗೆ ಹೇಳಿದ ಗೌತಮಮುನಿಯ ವಾಕ್ಯವನ್ನು ಕೇಳಿದ ಸುಮನಸ್ಕನು ಎಲೈ ಮಹಾತ್ಮನೇ ! ಅದೆಂತಹ ವಿಘ್ನವು. ಯಾವ ರೀತಿ ವಿಘ್ನವುಂಟಾಗುತ್ತದೆ ಅದಕ್ಕೆ ಪ್ರತಿಕ್ರಿಯೆ ಏನು ಆ ವಿಘ್ನಕ್ಕೆ ನಿವಾರಣೋಪಾಯವೇನು ಎಂದು ಸುಮನಸ್ಕನು ಗೌತಮ ಋಷಿಯನ್ನು ಕೇಳಿದನು ॥೭॥

ಪುರಾಕೃತಯುಗೇ ಜಾನುಮಂಡಲಾಖ್ಯಸುಮಂಡಲಾ ।
ನಿಶಾಚರೌಮಹಾವೀರೌವಿಕೃತೌಲೋಕಕಂಟಕಾ ॥೮॥

ತಾ॥ ಬಹಳ ಹಿಂದಿನ ಕಾಲದಲ್ಲಿ ಅಂದರೆ ಕೃತಯುಗದಲ್ಲಿ ಜಾನುಮಂಡಲ ಸುಮಂಡಲರೆಂಬ ಇಬ್ಬರು ರಾಕ್ಷಸರಿದ್ದರು ಅವರು ಮಹಾವೀರರೂ ವಿಕಾರಸ್ವರೂಪವುಳ್ಳವರೂ ಆಗಿ ಲೋಕಕಂಟಕರಾಗಿದ್ದರು ॥೮॥

ವಿಸ್ತರೇಣೈವತತ್ಸರ್ವಂವಕ್ತುಮರ್ಹಸಿನೋಽಧುನಾ ।
ಸರಾಕ್ಷಸಃಕಸ್ಯಪುತ್ರಃಕೋದೇಶಸ್ತಸ್ಯರಾಕ್ಷಸಃ ॥೯॥

ತಾ॥ ಆ ಲೋಕಕಂಟಕರಾದ ಆ ರಾಕ್ಷಸರು ಯಾರ ಮಕ್ಕಳು ಅವರು ದೇವತೆಗಳಿಗೆ ತೊಂದರೆ ಕೊಡಲು ಕಾರಣವೇನು ಎಂಬುದನ್ನು ತಾವು ಈಗ ಅದನ್ನೆಲ್ಲಾ ವಿಸ್ತಾರವಾಗಿ ತಿಳಿಸಬೇಕೆಂದು ಪ್ರಾರ್ಥಿಸಿದನು ॥೯॥

ಗೌತಮ ಉವಾಚ :–

ದಿತಿಃಪರಮದುಃಖಾರ್ತಾಪುತ್ರಾಣಾಂಮರಣಾದ್ಭೃಶಂ ।
ತಪೋನಿಷ್ಠಂಮಹಾಶಾಂತಂಕಾಶ್ಯಪಂಸಂದದರ್ಶಹಾ ॥೧೦॥

ಎಲೈ ಸುಮನಸ್ಕನೇ ಕೇಳು ! ಹಿಂದೆ ಒಂದಾನೊಂದು ಕಾಲದಲ್ಲಿ ದೈತ್ಯರ ಮಾತೆಯಾದ ದಿತಿದೇವಿಯು ತನ್ನ ಮಕ್ಕಳಾದ ದೈತ್ಯರೆಲ್ಲರೂ ತನ್ನ ಸವತಿಯಾದ ಅದಿತಿ

ದೇವಿಯ ಕುಮಾರರಾದ ದೇವತೆಗಳು ಸಂಹಾರ ಮಾಡಿದ ಕಾರಣದಿಂದ ಆ ದಿತಿ ದೇವಿಯು ಬಹು ದುಃಖಾಕ್ರಾಂತೆಯಾಗಿ ತಪೋನಿಷ್ಠನು ಪರಮ ಉಪಶಾಂತನು ಮತ್ತು ಪರಮ ಯೋಗಿಯಾಗಿರುವ ತನ್ನ ಪತಿಯಾದ ಕಶ್ಯಪ ಮಹಾಮುನಿಯ ಸಮೀಪವನ್ನೈದಿ ಆತನನ್ನು ಕಂಡಳು ||೧೦||

ಶೋಕೇನಮಹತಾವಿಷ್ಟಾರುರೋದಭೃಷದುಃಖಿತಾ।
ತಸ್ಯಾಸ್ತದ್ರೋದನಂಶೃತ್ವಾಕಾಶ್ಯಪೋ ಮುನೀಸತ್ತಮಃ ||೧೧||

ತಾ|| ಮತ್ತು ಆ ದೇವಿಯು ಪುತ್ರಶೋಕದಿಂದ ಸಂತಪಿಸುತ್ತಾ ಬಹು ದುಃಖಾಕ್ರಾಂತಳಾಗಿ ಸಮೀಪದೊಳು ಪ್ರಲಾಪಿಸುತ್ತಿರಲಾಗಿ ಮುನಿಶ್ರೇಷ್ಠನಾದ ಕಾಶ್ಯಪ ಮಹಾಮುನಿಯು ಆ ದೈತ್ಯ ಮಾತೆಯೂ ತನ್ನ ಪ್ರಿಯಪತ್ನಿಯೂ ಆದ ಆಕೆ ಯನ್ನು ಕುರಿತು ||೧೧||

ಮಾರೋದೀಸ್ತ್ವಂಪ್ರಿಯೇಭಾರ್ಯೇದೇವಾನಾಂಭ್ರೀತಿದಾಯಕಂ।
ಪುತ್ರದ್ವಯಂಮತ್ಪ್ರಸಾದಾದ್ಭವಿಷ್ಯತೀಸುಶೋಭನೇ ||೧೨||

ತಾ|| ಎಲೈ ಪ್ರೀತಿಪಾತ್ರಳಾದ ಮಡದಿಯೇ ಯಾತಕ್ಕೆ ನೀನು ರೋಧಿ ಸುತ್ತಿರುವಿ ನಿನ್ನ ಪುತ್ರರಾದ ದೈತ್ಯರ ನಾಶದಿಂದ ರೋಧಿಸುತ್ತಿರುವುದನ್ನು ನಾನು ತಿಳಿದಿರುವೆನು. ಕಳೆದುಹೋದ ವಿಷಯವನ್ನು ಕುರಿತು ಯಾಕೆ ಚಿಂತಿಸುವೆ, ಈ ರೋಧನವನ್ನು ಬಿಡು ಎಲೈ ಶುಭಕರಳೇ ! ನನ್ನ ಅನುಗ್ರಹದಿಂದ ಸರ್ವತ್ರ ಜಯಶೀಲರಾದ ಈರ್ವರು ಪುತ್ರರು ಮರಳಿ ನಿನಗುಂಟಾಗುವರು. ನೀನು ರೋಧನ ವನ್ನು ಬಿಟ್ಟು ಸಮಾಧಾನಳಾಗಿರೆಂದು ಹೇಳಿದನು. ||೧೨||

ಕಾಲೇನಗಚ್ಛತಾವಿಪ್ರಾದಿತಿಃಗರ್ಭಮವಾಪಸಾ।
ತಥಾಪುತ್ರದ್ವಯಂಜಜ್ಞೇಕಾಶ್ಯಪಾದ್ಬಲಸಂಯುತಂ ||೧೩||

ತಾ|| ಎಲೈ ಸುಮನಸ್ಕನೇ ಹೀಗೆ ಕೆಲವು ಕಾಲ ಕಳೆದ ಮೇಲೆ ಆ ದಿತಿ ದೇವಿಯು ಗರ್ಭಿಣಿಯಾಗಿ ಹಾಗೆಯೇ ದೇವಗರ್ವಾಪಹಾರಕರಾದ ಅತಿ ಧೃಡಾಂಗ ವಾದ ದೇಹವುಳ್ಳ ಪುತ್ರದ್ವಯರನ್ನು ಪಡೆದಳು ||೧೩||

ತದಾತುಕಾಶ್ಯಪಸ್ಸೋಪಿಭೂಮೌಃಕೇತುರಿವಸ್ಥಿತಂ।
ತೇಜೋಮಂಡಲಪರ್ಯಂತಂವ್ಯಾಪ್ತಂದ್ದಷ್ಟ್ವಾಮಹಾಮುನಾಃ ||೧೪||

ತಾ|| ಆ ಸಮಯದಲ್ಲಿ ಮಹಾ ತಪಸ್ವಿಯಾದ ಕಾಶ್ಯಪ ಮಹಾಮುನಿಯು ತೇಜೋಮಂಡಲದವರೆವಿಗೂ ಮಹದಾಕಾರರಾಗಿ ಭೂಮಂಡಲಕ್ಕೇನೆ ಧ್ವಜಪಟಗಳೋ ಪಾದಿ ಭೂಮ್ಯಾಕಾಶಂಗಳಿಗೆ ಜನನವಾದಕ್ಷಣದಲ್ಲಿಯೇ ಬೆಳೆಯುತ್ತಿರುವ ಮಕ್ಕಳನ್ನು ನೋಡಿದನು ||೧೪||

ಯಸ್ಯಜಾನುಪ್ರಮಾಣೇನವಾನಿತಾಸ್ಸರ್ವಮಾನವಾಃ ।
ಕೇಸುಮಂಡಲಂ ಜಾನುಮಂಡಲಾಭಿದಮುತ್ತಮಂ ॥೧೫॥

ತಾ॥ ಆ ಇಬ್ಬರು ಬಾಲಕರಲ್ಲಿ ಯಾವ ಬಾಲಕನು ಜಾನು ಪ್ರಮಾಣದಿಂದಿದ್ದನೋ ಅವನಿಗೆ ಜಾನುಮಂಡಲನೆಂದೂ, ತೇಜೋಮಂಡಲಪರ್ಯಂತರವಿರುವವನಿಗೆ ಸುಮಂಡಲನೆಂದೂ ಹೀಗೆ ಆ ಬಾಲಕರಿಗೆ ನಾಮಧ್ಯೇಯವನ್ನಿಟ್ಟನು ॥೧೫॥

ಜಾನುಮಂಡಲನಾಮಾಸೌಜ್ಯೇಷ್ಠ ಪುತ್ರೋಭವತ್ತಯೋಃ ।
ತದಾದಿತಿಸ್ಸುತಂ ಜ್ಯೇಷ್ಠಮುವಾಚಕರುಣಾಂಗಿರಂ ॥೧೬॥

ತಾ॥ ಆ ಇಬ್ಬರು ಕುಮಾರರಲ್ಲಿ ಜಾನುಮಂಡಲನೆಂಬಾತನೇ ಜ್ಯೇಷ್ಠಪುತ್ರನು, ಸುಮಂಡಲನೆಂಬುವನು ಕಿರಿಯ ಕುಮಾರನು. ಆಗ ದಿತಿದೇವಿಯು ಕಡು ಧೃಡಾಂಗರಾದ ಪುತ್ರರಿಬ್ಬರನ್ನು ನೋಡಿ ಸಂತೋಷಚಿತ್ತೆಯಾಗಿ ಜ್ಯೇಷ್ಠಪುತ್ರನಾದ ಜಾನುಮಂಡಲನನ್ನು ಕರೆದು ಹೀಗೆ ಹೇಳಿದಳು. ॥೧೬॥

ಪುತ್ರಪುತ್ರಭವತ್ಯೇವ ಮಮಪ್ರಾಣಾವಸಂತಿಹಿ ।
ದೇವತೇಭ್ಯೋಭಯಂ ಮಹ್ಯಂತ್ವತ್ಕೃತೇನಭವೇದ್ಯಥಾ ॥೧೭॥

ತಾ॥ ಎಲೈ ಮುದ್ದು ಕುವರನೇ, ಹಿಂದೆ ನಾನು ಪಡೆದ ಪುತ್ರರು ವ್ಯಾತರಾಗಿರುವುದರಿಂದ ನನ್ನ ಪ್ರಾಣಗಳೆಲ್ಲವನ್ನೂ ನಿನ್ನಲ್ಲಿಯೇ ಇರಿಸಿದ್ದೇನೆ. ಆದ್ದರಿಂದ ನಿನಗಾಗಿ ನಾನು ದೇವತೆಗಳ ಭೀತಿಯಿಲ್ಲದವಳಾಗಿ ಹೇಗಿರಬೇಕೋ ಹಾಗೆ ನೀನು ಮಾಡುವವನಾಗೆಂದು ಹೇಳಿದಳು. ॥೧೭॥

ದೇವಾಸ್ತ್ವಥ್ಭ್ರಾತೃಹಂತಾರಸ್ಯಾಪತ್ನ್ಯಾಸ್ತೇಮಹಾಬಲಾಃ ।
ತಸ್ಯಾತದ್ವಚನಂಶ್ರುತ್ವಾರೋಷವಿಸ್ಫಾರಿತೇಕ್ಷಣಃ ॥೧೮॥

ತಾ॥ ನನ್ನ ಸವತಿಯ ಮಕ್ಕಳಾದ ದೇವತೆಗಳು ನಿನ್ನ ಒಡಹುಟ್ಟಿದವರನ್ನು ಕೊಂದುಹಾಕಿದ್ದರಿಂದ ಬಹು ಬಲವಂತರೆನಿಸಿಕೊಂಡು ಮೂರು ಲೋಕಗಳನ್ನು ತಮ್ಮ ವಶಮಾಡಿಕೊಂಡಿರುವರು. ಅಂಥ, ಬಲಿಷ್ಠರ ಮಧ್ಯದಲ್ಲಿ ನೀವು ಹೇಗೆ ಜೀವಿಸುತ್ತೀರೋ ಎಂದು ಪರಿಪರಿವಿಧದಲ್ಲಿ ಹೇಳಲು ತನ್ನ ಮಾತೆಯ ವಾಕ್ಯಗಳನ್ನು ಕೇಳಿದ ಜಾನುಮಂಡಲನು ರೋಷಾವೇಶದಿಂದ ಕೆಂಗಣ್ಣುಗಳುಳ್ಳವನಾಗಿ ತಾಯಿಯನ್ನು ಕುರಿತು ಈ ವಿಧವಾಗಿ ಹೇಳಿದನು ॥೧೮॥

ಕಿಂಕುರ್ವತೇಲ್ಪವೀರ್ಯಾಸ್ತೇದೇವಾಸ್ಸಮರಭೀರವಃ ।
ತಥಾಯತ್ನಂಕರಿಷ್ಯಾಮಿಸೇಂದ್ರಾಶ್ಚಸಮರುದ್ಗಣಾಃ ॥೧೯॥

ತಾ॥ ಎಲೈ ಮಾತೆಯೇ ಕೇಳು ರಣಾಗ್ರದಲ್ಲಿ ಹೇಡಿಗಳಾಗಿ ಓಡಿಹೋಗುವ ಅಲ್ಪ ವೀರ್ಯವುಳ್ಳ ದೇವತೆಗಳು ಏನು ಮಾಡಬಲ್ಲರು ಆದ್ದರಿಂದ ನೀನು ಆ ದೇವತೆಗಳ

ಭೀತಿಯನ್ನು ಬಿಟ್ಟು ನಿಶ್ಚಿಂತೆಯಾಗಿರು ದೇವೇಂದ್ರನೇ ಮೊದಲಾದ ಮರುದ್ಗಣಗಳನ್ನೂ ಸಹ ॥೧೯॥

ವಶೇಸ್ಥಾಸ್ಯಂತಿನೋಮಾತಸ್ಸತ್ಯಂಸತ್ಯಂವದಾಮಿತೇ ।
ಇತ್ಯುಕ್ತ್ವಾಮಾತರಂಪಶ್ಚಾತ್ತಪಃಕರ್ತುಂಮನೋದಧೌ ॥೨೦॥

ತಾ॥ ಮತ್ತು ಈ ಮೂರು ಲೋಕಗಳೂ ಸಹ ಹೇಗೆ ನನ್ನ ವಶದಲ್ಲಿರುವುದೋ ಹಾಗೆ ಮಾಡುವೆನು ನೋಡು ನಿನ್ನ ಪಾದಸಾಕ್ಷಿಯಾಗಿ ನಾನು ಅನೃತವನ್ನು ನುಡಿಯುವುದಿಲ್ಲ ನನ್ನ ವಾಕ್ಯವನ್ನು ನಂಬಿ ಈ ಶೋಕವನ್ನು ಬಿಡೆಂದು ತಾಯಿಗೆ ಸಮಾಧಾನವನ್ನು ಹೇಳಿ ತಪಸ್ಸು ಮಾಡಬೇಕೆಂದು ಮನಸ್ಸಿನಲ್ಲಿ ನಿರ್ಧಾರಮಾಡಿಕೊಂಡನು ॥೩೦॥

ಜಾನುಮಂಡಲ ಸುಮಂಡಲರ ತಪಸ್ಸು

ಮಾತುರಾಶೀರ್ವ್ಯಾಹೃತಶ್ಚಭ್ರಾತ್ರಾಸಹವನಂಗತಃ ।
ಹಿಮವಚ್ಛೇಖರೇಪುಣ್ಯೇತಪಸ್ತಪ್ತುಂಪ್ರಚಕ್ರಮೇ ॥೨೧॥

ತಾ॥ ಹೀಗೆ ನಿರ್ಧಾರಮಾಡಿಕೊಂಡ ಬಳಿಕ ಆ ಜಾನುಮಂಡಲನು ತಾಯಿಯ ಆಶೀರ್ವಾದವನ್ನು ಪಡೆದು ತನ್ನ ತಮ್ಮನಾದ ಸುಮಂಡಲನೊಡನೆ ಪುಣ್ಯಸಂಪತ್ಕರವಾದ ಹಿಮವತ್ಪರ್ವತಕ್ಕೆ ಹೋಗಿ ಅಲ್ಲಿ ತಪಸ್ಸು ಮಾಡುವುದಕ್ಕೆ ಯೋಗ್ಯವಾದ ಸ್ಥಳದಲ್ಲಿ ತಪಸ್ಸು ಮಾಡಲು ಪ್ರಾರಂಭಿಸಿದನು ॥೨೧॥

ಯಕ್ಷಕಿನ್ನರಗಂಧರ್ವೈಸಿದ್ಧಸಂಘೈಶ್ಚಸೇವಿತಂ ।
ವಿಯದ್ಗಂಗಾಸಮಾಕೀರ್ಣಂರತ್ನಸಾನುಸುಶೋಭಿತಂ ॥೨೨॥

ತಾ॥ ಆ ಹಿಮವತ್ಪರ್ವತವು ಯಕ್ಷ, ಕಿನ್ನರ, ಕಿಂಪುರುಷರು, ಗಂಧರ್ವಸಿದ್ದರೇ ಮೊದಲಾದ ಗುಂಪುಗಳಿಂದ ಸೇವಿಸಲ್ಪಡುತ್ತಾ ಆಕಾಶ ಗಂಗೆಯಿಂದ ಕೂಡಿ ನಾನಾ ವೃಕ್ಷ ರತ್ನಗಳ ಸಾಲುಗಳಿಂದ ಆ ವನಪ್ರದೇಶವೆಲ್ಲವೂ ವಿರಾಜಿಸುತ್ತಿತ್ತು ॥೨೨॥

ಕುತ್ರಚಿದ್ವಿಜನೇಸ್ಥಾನೇಪ್ರಪೇದೇದುಷ್ಕರಂತಪಃ ।
ಸ್ಥಿತಸ್ಸರ್ವಇಂದ್ರಿಯಾಹ್ಯಾರುನಿಗೃಹ್ಯಚಮಹಾಮತಿಃ ॥೨೩॥

ತಾ॥ ಆ ನಿರ್ಜನವಾದ ಮೇರುಗಿರಿಯಲ್ಲಿ ಮಹಾಮತಿಯಾದ ಜಾನುಮಂಡಲನು ಇಂದ್ರಿಯಗಳನ್ನು ತನ್ನ ಸ್ವಾದೀನಮಾಡಿಕೊಂಡು ಮಹಾ ದುಷ್ಕರವಾದ ತಪಸ್ಸನ್ನು ಮಾಡುತ್ತಿದ್ದನು ॥೨೩॥

ಗ್ರೀಷ್ಮಕಾಲೇತುಸಂಪ್ರಾಪ್ತೇಜಾನುಮಂಡಲರಾಕ್ಷಸಃ ।
ಚತುರ್ಣವಪಿವಹ್ನೀನಾಂಮಧ್ಯಸ್ಥಸ್ಸೂರ್ಧ್ವದೃಷ್ಟಿಕಃ ॥೨೪॥

ತಾ॥ ಹೀಗೆ ಜಾನುಮಂಡಲನು ತಪಸ್ಸುಮಾಡುತ್ತಿರಲು ಗ್ರೀಷ್ಮಋತುವು ಸಂಪ್ರಾಪ್ತವಾಗಿ ಆ ಜಾನುಮಂಡಲನು ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯು ಪ್ರಜ್ವಲಿಸುತ್ತಿರಲು ಅದರ ಮದ್ಯದಲ್ಲಿ ಕುಳಿತು ಊರ್ದ್ವ ದೃಷ್ಟಿಯುಳ್ಳವನಾಗಿ ಧ್ಯಾನಮಾಡುತ್ತಿದ್ದನು ॥೨೪॥

ಸೂರ್ಯಂಪಂಚಮಸಂಜ್ಞಾಕಂವಹ್ನಿಂಕೃತ್ವಾಮಹಾಮತಿಃ ।
ಸರ್ವನಾಡೀಸ್ಸಮಾರುಧ್ವದಶಪ್ರಾಣಾನ್ವಿಶೇಷತಃ ॥೨೫॥

ತಾ॥ ಹೀಗೆ ಗ್ರೀಷ್ಮಋತುವಿನಲ್ಲಿ ನಾಲ್ಕು ದಿಕ್ಕುಗಳಿಂದ ಅಗ್ನಿಜ್ವಾಲೆಗಳು ದಹಿಸುತ್ತಿರಲು ಮೇಲೆ ಸೂರ್ಯನು ಐದನೇ ಅಗ್ನಿಯೋಪಾದಿಯಲ್ಲಿ ಅತೀ ತೀಕ್ಷ್ಣವಾದ ಉಷ್ಣದಿಂದ ಅಗ್ನಿಯಂತಿರಲು ಮಹಾಮತಿಯಾದ ಆ ಜಾನುಮಂಡಲನು ತನ್ನ ನಾಡೀ ದ್ವಾರಗಳಾದ ಸರ್ವದ್ವಾರಗಳನ್ನು ಬಂಧಿಸಿ ದಶಪ್ರಾಣಗಳನ್ನು ಊರ್ದ್ವ ಮುಖವಾಗಿ ಮಾಡಿಕೊಂಡು ತಪಸ್ಸನ್ನು ಮಾಡುತ್ತಿದ್ದನು ॥೨೫॥

ಯೋಗಮಾರ್ಗೇಣಸಂಭೂಯಬ್ರಹ್ಮಾಣಂಹೃದಿಚಿಂತಯನ್ ।
ನಿರಾಮಯಂನಿರ್ಗುಣಮವ್ಯಯಂವಿಭುಂಲೋಕಾಧಿಪಂ ॥೨೬॥
ಲೋಕಗುರುಂಕಮಲಜಂಧ್ಯಾಯನ್ಸದಾನಂದಮನಃ ।
ಶಾಂತಿಮೂರ್ತಿಂಮಹಾನುಭಾವಂಹೃದಿಜಾನುಮಂಡಲಃ ॥೨೭॥

ತಾ॥ ಹೀಗೆ ಕಠಿಣ ತಪಸ್ಸು ಮಾಡುತ್ತಿದ್ದ ಆ ಮಹಾನುಭಾವನಾದ ಜಾನುಮಂಡಲನು ಯೋಗಮಾರ್ಗದಿಂದ ತನ್ನ ಪ್ರಾಣ ವಾಯುಗಳನ್ನು ಬಂದಿಸಿ ತನ್ನ ಹೃದಯಕಮಲದಲ್ಲಿ ನಿರಾಮಯನೂ ನಿರ್ಗುಣನೂ ಅವ್ಯಯನೂ ಶಾಂತಿಸ್ವರೂಪನೂ ಲೋಕಾಧಿಪನೂ ಲೋಕಗುರುವೂ ಸದಾನಂದನೂ ಅನಂತಸ್ವರೂಪನೂ ಆದ ಬ್ರಹ್ಮನನ್ನು ಸ್ಮರಿಸುತ್ತಾ ಧ್ಯಾನಯೋಗದಲ್ಲಿ ನಿರತನಾಗಿದ್ದನು ॥೨೬॥೨೭॥

ಶೀತಕಾಲೇತುಸಂಪ್ರಾಪ್ತೇಜಲಮಧ್ಯೇಕೃತಾಸನಃ ।
ತಥಾವಾತೇಸಮುತ್ಪನ್ನೇಪರ್ವತಾಗ್ರೇಸುನಿಶ್ಚಲಃ ॥೨೮॥

ತಾ॥ ಈ ರೀತಿ ಪರಮಾತ್ಮನಾದ ಬ್ರಹ್ಮನನ್ನು ಧ್ಯಾನಿಸುತ್ತಾ ಬೇಸಿಗೆಯ ಕಾಲವನ್ನು ಕಳೆಯಲು ಚಳಿಕಾಲವು ಸಂಪ್ರಾಪ್ತವಾಯಿತು ಆಗ ಆ ಜಾನುಮಂಡಲನು ಕೊರೆಯುತ್ತಿರುವ ನೀರಿನ ಮಧ್ಯದಲ್ಲಿ ಕುಳಿತು ಧ್ಯಾನವನ್ನು ಮಾಡುವನು, ಸ್ವಲ್ಪಕಾಲ ಹಿಮಸುರಿಯುತ್ತಿರುವ ಪರ್ವತ ಶಿಖರದಲ್ಲಿ ಕುಳಿತು ಧ್ಯಾನಮಾಡುವನು ಮಳೆಗಾಲದಲ್ಲಿ ಬಯಲು ಪ್ರದೇಶದಲ್ಲಿ ಗಾಳಿ ಮಳೆಗಳಿಗೆ ಮನಕೊಡದೆ ವನಮಧ್ಯದಲ್ಲಿ ಕುಳಿತು ಜಿತೇಂದ್ರಿಯನಾಗಿ ಆ ಪರಮಾತ್ಮನನ್ನು ಧ್ಯಾನಿಸುತ್ತಿದ್ದನು ॥೨೮॥

ಪ್ರಾವೃಟ್ಕಾಲೇತಥಾದ್ರೈತ್ಯೋಬಹಿರೇವಸುನಿಶ್ಚಲಃ ।
ಏವಂಕ್ರಮೇಣಶುದ್ಧಾತ್ಮಾಚಚಾರಾತಿತರಾಂತಪಃ ॥೨೯॥

ತಾ॥ ಈ ರೀತಿಯಾಗಿ ಆ ಜಾನುಮಂಡಲನು ಬೇಸಿಗೆಯಲ್ಲಿ ಪಂಚಾಗ್ನಿ ಮಧ್ಯದಲ್ಲೂ ಚಳಿಕಾಲದಲ್ಲಿ ಸರೋವರ ತಟಾಕಗಳಲ್ಲೂ ಮಳೆಕಾಲದಲ್ಲಿ ಪರ್ವತ ವನಗಳಲ್ಲೂ ಕ್ರಮಬದ್ಧವಾಗಿ ನಿಶ್ಚಲ ಮನಸ್ಸಿನಿಂದ ತಪವನ್ನಾಚರಿಸುತ್ತಿದ್ದನು ॥೨೯॥

ಜಾನುಮಂಡಲ ತಪೋಭಂಗ

ಗೌತಮ ಉವಾಚ :-

ತಚ್ಛ್ರುತ್ವಾದೇವತಾನಾಥಸ್ತಸ್ಯವೃತ್ತಾಂತಮದ್ಭುತಂ ।
ಮಮಲೋಕಾಧಿಪತ್ಯರ್ಥಂಸಕರೋತಿಮಹತ್ತಪಃ ॥೩೦॥

ತಾ॥ ಜಾನುಮಂಡಲನು ಈ ರೀತಿ ಘೋರವಾದ ತಪಸ್ಸನ್ನು ಮಾಡುತ್ತಿರುವುದನ್ನು ದೇವೇಂದ್ರನು ಕೇಳಿದವನಾಗಿ ತನ್ನ ಅಧಿಕಾರವನ್ನು ಬಯಸಿ ಈ ರೀತಿ ತಪೋನಿರತನಾಗಿರುವನಾದ್ದರಿಂದ ॥೩೦॥

ಇತಿನಿಶ್ಚಿತ್ಯಭೀತಸ್ಸ್ಯತದ್ವಿಘ್ನಂಕರ್ತುಮುತ್ಸುಕಃ ।
ಸಮ್ಯಗ್ವಿಚಾರ್ಯದೇವೇಶೋಮನಸಾಕೃತನಿಶ್ಚಯಃ ॥೩೧॥

ತಾ॥ ತಾನು ಅವನ ತಪಸ್ಸಿಗೆ ವಿಘ್ನವನ್ನುಂಟುಮಾಡಬೇಕೆಂದು ತನ್ನ ಮನದಲ್ಲಿ ನಿಶ್ಚಯಿಸಿಕೊಂಡ ಆ ದೇವೇಂದ್ರನು ಭೀತಿಪಟ್ಟವನಾಗಿ ವಿಚಾರಮಾಡಲ್ಪಟ್ಟವನಾಗಿ ಅಪ್ಸರಾಂಗನೆಯರನ್ನು ಕರೆಯಿಸಲು ನಿಶ್ಚಯಿಸಿಕೊಂಡನು ॥೩೧॥

ಊರ್ವಶೀಂತಾಂಸಮಾಹೂಯಸಂಗೀತನಿಪುಣಾಶುಭಾಂ ।
ನೀಲಜೀಮೂತಸಂಕಾಶಕಭರೀಭರಶೋಭಿತಾಂ ॥೩೨॥

ತಾ॥ ಹೀಗೆ ಜಾನುಮಂಡಲನ ತಪಸ್ಸನ್ನು ವಿಘ್ನಮಾಡಬೇಕೆಂದು ಯೋಚಿಸಿದ ಆ ದೇವೇಂದ್ರನು ಸಂಗೀತನಿಪುಣಳೂ ಕಪ್ಪಾದ ಕೂದಲುಳ್ಳವಳೂ ಶೋಭಿಸುವ ಮುಂಗುರುಳುಗಳುಳ್ಳವಳೂ ಆದ ಊರ್ವಶಿಯನ್ನು ಕರೆಯಿಸಿದವನಾದನು ॥೩೨॥

ಅನಂಗವಿದ್ಯಾಕುಶಲಾಂಮೋಹಿನೀಂಸುರನರ್ತಕೀಂ ।
ಏತಾದೃಶಾಂಸಮಾಲೋಕ್ಯವಾಕ್ಯಮೇಕಮಥಾಬ್ರವೀತ್ ॥೩೩॥

ತಾ॥ ಅನಂಗವಿದ್ಯೆಯಾದ ಕಾಮಕೇಳಿಯಲ್ಲಿ ಕುಶಲಳೂ ನೋಡಿದಾಕ್ಷಣವೇ ಸರ್ವರನ್ನು ಭ್ರಮೆಗೊಳಿಸುವಂಥಾ ಮೋಹಿನಿಗೆ ಸಮಾನವಾದ ರೂಪುಳ್ಳವಳೂ ದೇವಲೋಕದ ನರ್ತಕಿಯೂ ಆದ ಊರ್ವಶಿಯು ಬಂದದ್ದನ್ನು ಕಂಡ ದೇವೇಂದ್ರನು ಒಂದಾನೊಂದು ವಾಕ್ಯವನ್ನು ಹೇಳಿದನು ॥೩೩॥

ಶ್ರುಣುಭದ್ರೇಽದ್ಯಮದ್ವಾಕ್ಯಂದೇವಾನಾಂಹಿತಮುತ್ತಮಂ ।
ತ್ವಯಾಲಬ್ಧಸುಖಾಸರ್ವೇಭವೇಯುಸ್ಸುರಸತ್ತಮಾಃ ॥೩೪॥

ತಾ॥ ಎಲೈ ಮಂಗಳಕರಳಾದ ಊರ್ವಶಿಯೇ! ದೇವತೆಗಳೆಲ್ಲಾ ನಿನ್ನಿಂದ ಹೊಂದಲ್ಪಟ್ಟ ಸುಖವುಳ್ಳವರಾಗಿರುವರು ಆದ್ದರಿಂದ ಶುಭಾಂಗಿಯಾದ ನೀನು ದೇವತೆಗಳಿಗೆ ಹಿತಕರವಾದ ನನ್ನ ವಾಕ್ಯವನ್ನು ಕೇಳುವವಳಾಗು ॥೩೪॥

ಮೇರುಶೃಂಗೇದೈತ್ಯವರೋಜಾನುಮಂಡಲನಾಮಕಃ ।
ಕರೋತ್ಯತಿತಪೋಘೋರಂತಸ್ಯವಿಘ್ನಂಸಮಾಚರ ॥೩೫॥

ತಾ॥ ಮೇರು ಪರ್ವತದ ಶಿಖರದಲ್ಲಿ ಜಾನುಮಂಡಲರೆಂಬ ದೈತ್ಯ ಶ್ರೇಷ್ಠರು ಘೋರವಾದ ತಪಸ್ಸನ್ನು ಮಾಡುತ್ತಿರುವರು. ಅವರ ತಪಸ್ಸನ್ನು ನೀನು ದೇವತೆಗಳ ಹಿತಕ್ಕಾಗಿ ವಿಘ್ನವನ್ನುಂಟುಮಾಡು ॥೩೫॥

ಅವಿಳಂಬೇನಕಾಲೇನಮೇರುಶೃಂಗಂಮನೋಹರಂ ।
ಆಸಾದ್ಯತತ್ತಪೋವಿಘ್ನಂಕರ್ತುಮರ್ಹಸಿಶೋಭನೇ ॥೩೬॥

ತಾ॥ ಶುಶೋಭಿತಳಾದ ಮಂಗಳಾಂಗಿಯೇ ಮನೋಹರವಾದ ಆ ಮೇರು ಶೃಂಗವನ್ನು ನೀನು ಜಾಗ್ರತೆಯಾಗಿ ಸೇರಿ ಆ ರಾಕ್ಷಸರ ಘೋರ ತಪಸ್ಸಿಗೆ ವಿಘ್ನವನ್ನುಂಟುಮಾಡುವವಳಾಗು ॥೩೬॥

ತೇನೈವಮುಕ್ತಾಸಾನಾರೀಪ್ರಣಮ್ಯಸುರಸತ್ತಮಂ ।
ಊರ್ವಶೀವಾಕ್ಯಮವದತ್ವಿನಯಾನ್ವಿತಮುತ್ತಮಂ ॥೩೭॥

ತಾ॥ ಈ ರೀತಿ ಹೇಳಿದ ದೇವೇಂದ್ರನ ವಾಕ್ಯವನ್ನು ಕೇಳಿದ ಆ ಊರ್ವಶಿಯು ದೇವೇಂದ್ರನಿಗೆ ನಮಸ್ಕರಿಸಿ, ವಿನಯದಿಂದ ಕೂಡಿದ ಉತ್ತಮವಾದ ವಾಕ್ಯವನ್ನು ಹೇಳಿದ್ದೇನೆಂದರೆ ॥೩೭॥

ತಥೈವಾಸ್ತುಮಹಾರಾಜಯದಾಜ್ಞಾಪಯಸಿಪ್ರಭೋ ।
ಇತ್ಯೇವಮುಕ್ತ್ವಾಸಾನಾರಿಬಲಾರಾತಿಂಪ್ರಣಮ್ಯಚಂ ॥೩೮॥

ತಾ॥ ಮಹಾರಾಜನೇ! ನಿನ್ನ ಆಜ್ಞೆಯಂತೆಯೇ ನಡೆದುಕೊಳ್ಳುತ್ತೇನೆಂದು ಹೇಳಿ ದೇವೇಂದ್ರನಿಗೆ ನಮಸ್ಕಾರಮಾಡಿ ಆ ಊರ್ವಶಿಯು ತನ್ನ ಮಂದಿರವನ್ನು ಸೇರಿದಳು ॥೩೮॥

ಅಲಂಕೃತ್ವಾಸ್ವರ್ಣರತ್ನಭಾಸುರೈರ್ದಿವ್ಯಭೂಷಣೈಃ ।
ವಿಮಾನಂಸೂರ್ಯಸಂಕಾಶಂಆರುಹ್ಯೋದಿತಮನ್ಮಥಾ ॥೩೯॥

ತಾ॥ ಆ ಊರ್ವಶಿಯು ಬಂಗಾರದಿಂದಲೂ ರತ್ನಗಳಿಂದಲೂ ಮಾಡಲ್ಪಟ್ಟ ಝಗಝಗಿಸುತ್ತಿರುವ ಆ ಆಭರಣಗಳನ್ನು ಧರಿಸಿ ಪೀತಾಂಬರಗಳನ್ನುಟ್ಟು ಸರ್ವಾಲಂಕೃತಳಾಗಿ

ಸೂರ್ಯನಂತೆ ಪ್ರಕಾಶಮಾನವಾದ ರಥವನ್ನೇರಿ ನೋಡುವವರಿಗೆ ಸಾಕ್ಷಾತ್ ಮನ್ಮಥನಂತೆ ಕಂಗೊಳಿಸಿದಳು ॥೩೯॥

ಜಾನುಮಂಡಲನ ತಪೋವಿಘ್ನಕ್ಕೆ ಊರ್ವಶಿಯ ಪ್ರವೇಶ

ಮೇರುಶೃಂಗಂಸಮಾಸಾದ್ಯನಾನಾವೃಕ್ಷೈಸ್ಸಮನ್ವಿತಂ ।
ನಾನಾಪುಷ್ಪಫಲೈರ್ಯುಕ್ತಂಮಂದಮಾರುತಶೋಭಿತಂ ॥೪೦॥

ತಾ॥ ನಾನಾ ವಿಧವಾದ ಮರಗಳಿಂದಲೂ, ನಾನಾ ವಿಧವಾದ ಪುಷ್ಪಗಳಿಂದಲೂ ನಾನಾ ವಿಧವಾದ ಫಲಗಳಿಂದಲೂ ಕೂಡಿ ಮಂದಮಾರುತದಿಂದ ಶೋಭಿಸುತ್ತಿರುವ ಮೇರುಶೃಂಗ ಪರ್ವತದಲ್ಲಿ ಊರ್ವಶಿಯು ಬಂದು ಸೇರಿದಳು ॥೪೦॥

ಅನನ್ತರತ್ನರುಚಿರಂಪ್ರವಿಶ್ಯಶಿಖರಂಮುಹತ್ ।
ತತ್ಸಮೀಪೇವನೇಬ್ರಹ್ಮಧ್ಯಾನಯುಕ್ತಂಜಿತೇಂದ್ರಿಯಂ ॥೪೧॥

ತಾ॥ ಆ ಊರ್ವಶಿಯು ಅನಂತರ ರತ್ನಗಳಿಂದ ತುಂಬಿದ ಸುಮನೋಹರವಾದ ಆ ಮೇರು ಶಿಖರದಲ್ಲಿ ಸಂಚರಿಸುತ್ತಿರಲು ಅ ಶಿಖರ ಸಮೀಪದ ವನದಲ್ಲಿ ಜಿತೇಂದ್ರಿಯ ನಾಗಿ ಬ್ರಹ್ಮಧ್ಯಾನಾಸಕ್ತನಾದ ಓರ್ವ ತಪಸ್ವಿಯನ್ನು ಕಂಡಳು ॥೪೧॥

ಅನನ್ಯಮನಸಂಶಾನ್ತಂಅಚಲಾಸನಸಂಸ್ಥಿತಂ ।
ಜಾನುಮಂಡಲಮುತ್ಯುಗ್ರಂದೃಷ್ಟ್ವಾವಿಸ್ಮಿಯಮಾಯಯೌ ॥೪೨॥

ತಾ॥ ಅನನ್ಯಮನಸ್ಕನೂ ಶಾಂತನೂ ಚಲಿಸದ ಸ್ಥಿರಾಸನವುಳ್ಳವನೂ ಬ್ರಹ್ಮ ಧ್ಯಾನಪರನೂ ಆದ ಉಗ್ರಮೂರ್ತಿಯಾಗಿ ಭಯಂಕರವಾಗಿ ತಪಸ್ಸನ್ನಾಚರಿಸುತ್ತಿದ್ದ ಆ ಜಾನುಮಂಡಲನನ್ನು ನೋಡಿ ವಿಸ್ಮಯಾವಿಷ್ಟಳಾದಳು ॥೪೨॥

ತಂದೃಷ್ಟ್ವಾಭಯವಿಭ್ರಾಂತಾಚಿನ್ತಯಾಮಾನಸುಂದರೀ ।
ಮಹಾನುಭಾವೋಯಮಿತಿನಿಶ್ಚಿತ್ಯಮನಸಾತಥಾ ॥೪೩॥

ತಾ॥ ಸೌಂದರ್ಯವತಿಯಾದ ಊರ್ವಶಿಯು ಆ ಜಾನುಮಂಡಲನನ್ನು ನೋಡಿ ಭಯವಿಭ್ರಾಂತಳಾಗಿ, ಈತನು ಮಹಾನುಭಾವನು ಈತನನ್ನು ನಾನು ಜಯಿಸಲು ಅಶಕ್ಯವೆಂದು ಮನಸ್ಸಿನಲ್ಲಿಯೇ ನಿಶ್ಚಯಿಸಿದವಳಾಗಿ ॥೪೩॥

ಯಚ್ಚೈಭಾವಿಭವತ್ಯೇವವಿಧಿನಾನಿಯತೇನಚ ।
ದೇವಾನಾಂಸುಹಿತಾರ್ಥಾಯಜಿಷ್ಣೋಃಕಾರ್ಯಂಕರೋಮ್ಯಹಂ ॥೪೪॥

ತಾ॥ ವಿಧಿನಿಯತವಾದುದು ಮುಂದಾಗಬೇಕಾಗಿರುವುದು ಆಗದೆ ಇರಲಾರದು ಆದರೂ ದೇವತೆಗಳ ಹಿತಕ್ಕಾಗಿ ದೇವೇಂದ್ರನು ಮಾಡಿದ ಅಪ್ಪಣೆಯ ಪ್ರಕಾರ ನನ್ನ ಕಾರ್ಯವನ್ನು ನಾನು ಮಾಡುತ್ತೇನೆಂದುಕೊಂಡಳು ॥೪೪॥

ಇತಿಮತ್ವಾತತ್ಸಮೀಪಂಗತ್ವಾಸೌದಾಮಿನೀನಿಭಾ ।
ಮನೋಹರಂಪೂರ್ವರಂಗಂಸಮಾಸಾನ್ಯಕೃಶೋದರೀ ॥೪೫॥

ತಾ॥ ಹೀಗೆ ಯೋಚಿಸಿಕೊಂಡು ಮಿಂಚಿನಂತೆ ಹೊಳೆಯುವ ದೇಹಕಾಂತಿ ಯುಳ್ಳ ಕೃಶೋದರಿಯಾದ ಆ ಊರ್ವಶಿಯು ಜಾನುಮಂಡಲನ ಸಮೀಪವನ್ನೈದಿ ಮನೋಹರವಾದ ಪೂರ್ವರಂಗವನ್ನು ನಿರ್ಮಿಸಿದಳು ॥೪೫॥

ಅರ್ಧೇಂದುನಿಟಿಲಾಂರಮ್ಯಾಂಪೂರ್ಣಚಂದ್ರನಿಭಾನನಾಂ ।
ಭ್ರೂವಲ್ಲಿಕಾಸಮಾಯುಕ್ತಾ-ಶತಪತ್ರನಿಭೇಕ್ಷಣಾಂ ॥೪೬॥

ತಾ॥ ಮನೋಹರವಾದ ಅರ್ಧಚಂದ್ರ ಸಧೃಶನಿಟಿಲ ಮತ್ತು ಸಂಪೂರ್ಣ ಚಂದ್ರನಿಗೆ ಸಾಟಿಯಾದ ಮುಖವುಳ್ಳವಳೂ, ಬಳ್ಳಿಗಳಂತೆ ತಿದ್ದಿರುವ ಹುಬ್ಬುಗಳುಳ್ಳ ವಳೂ ಕಮಲಗಳಿಗೆ ಸಮಾನವಾದ ಕಣ್ಣುಗಳುಳ್ಳ ಆ ಊರ್ವಶಿಯು ತನ್ನ ದೃಷ್ಟಿವೀಕ್ಷಣೆ ಯಿಂದ ಜಾನುಮಂಡಲನನ್ನು ನೋಡಿದರೂ ಆತನು ಚಲಿಸಲಿಲ್ಲಾ ॥೪೬॥

ವಿಲೋಭಯನ್ತೀಂಲೋಕಾಂಶ್ಚನಾಶಿಕಾಂಚಿತಚಂಪಿಕಾ ।
ಶ್ರೀಕಾರಸದೃಶಶ್ರೋತಾಂಮಣಿಕಾಟಂಕಶೋಭಿತಂ ॥೪೭॥

ತಾ॥ ಶ್ರೀಕಾರದಂತಿರುವ ತನ್ನ ಕಿವಿಗಳಿಗೆ ರತ್ನಸ್ಥಗಿತ ಬೆಂಡೋಲೆಗಳನ್ನು ಧರಿಸಿದವಳಾಗಿಯೂ ತನ್ನನ್ನು ನೋಡಿದ ಮಾತ್ರದಿಂದಲೇ ಲೋಕಮೋಹನ ಸೌಂದರ್ಯಬೀರುವ ಅಂಗಾಗಗಳುಳ್ಳವಳಾಗಿಯೂ ಸೌಂದರ್ಯವಾದ ಸಂಪಿಗೆ ಹೂವಿ ನಂತಿರುವ ಮೂಗುಳ್ಳವಳಾದ ಆ ಊರ್ವಶಿಯು ತನ್ನ ಸುವಾಸನಾಯುಕ್ತವಾದ ಉಸ್ವಾಶ, ನಿಸ್ವಾಶವೆಂಬ ವಾಯುವಿನಿಂದ ಆ ತಪಸ್ವಿಯನ್ನು ಸ್ಪರ್ಶಿಸಿದರೂ ಆತನು ಅಚಲನಾಗಿದ್ದನು ॥೪೭॥

ಕುಂದೋಪಮಾನರದನಾಂಗಗನೋಪಮಧ್ಯಮಾಂ ।
ಕಂಬುಕಂಠೀವಿಶಾಲಾಕ್ಷೀಂಮೃಣಾಳಭುಜಶೋಭಿತಾಂ ॥೪೮॥

ತಾ॥ ಮಲ್ಲಿಗೆಮೊಗ್ಗಿನಂತಿರುವ ಹಲ್ಲುಗಳುಳ್ಳವಳೂ ಕಂಡೂ ಕಾಣದಹಾಗಿರುವ ಸೊಂಟವುಳ್ಳವಳೂ ಶಂಖದಹಾಗಿರುವ ಕಂಠವುಳ್ಳವಳೂ ಜಿಂಕೆಯ ಕಣ್ಣುಗಳಂತೆ ವಿಶಾಲ ವಾದ ನೇತ್ರಗಳುಳ್ಳವಳೂ ತಾವರೆದಂಟಿನಂತಿರುವ ತೋಳುಗಳುಳ್ಳವಳೂ ಆದ ಆ ಊರ್ವಶಿಯು ಹಾವಭಾವವಿಲಾಸಗಳಿಂದ ತನ್ನ ಹಲ್ಲುಗಳನ್ನು ಜಗ್ಗುವುದರಿಂದ ಬರುವ ಮಧುರಶಬ್ದದಿಂದಲೂ ತನ್ನ ಕಂಠಶ್ರೀಯ ನಾದದಿಂದಲೂ ತನ್ನ ತೋಳುಗಳ ಭಾ

ಭಂಗಿಗಳಿಂದುಂಟಾಗುವ ಶಬ್ದದಿಂದಲೂ ಆ ತಪಸ್ವಿಗೆ ನಾನಾ ರೀತಿಯಿಂದ ವಿಘ್ನ ಮಾಡಿದರೂ ಆ ಜಾನುಮಂಡಲನು ನಿಶ್ಚಿಂತನಾಗಿದ್ದನು ॥೪೮॥

ರತ್ನಕಂಕಣಕೇಯೂರವಿಲಸದ್ಬಾಹುವಲ್ಲರೀಂ ।
ಸುವರ್ಣಕಲಶೋತ್ತುಂಗಪೃಥುಪೀನಪಯೋಧರೀಂ ॥೪೯॥

ತಾ॥ ರತ್ನಗಳಿಂದ ಮಾಡಿದ ಕಂಕಣಗಳನ್ನು ಧರಿಸಿರುವವಳೂ ಕೇಯೂರ ವೆಂಬ ನೂಪುರಗಳನ್ನೂ ಭುಜಭೂಷಣಗಳನ್ನು ಧರಿಸಿರುವವಳೂ ಸುವರ್ಣಕಲಶಗಳಂತೆ ಉನ್ನತವಾಗಿಯೂ ಗುಂಡಾಗಿರುವ ಸ್ತನಗಳುಳ್ಳವಳಾಗಿಯೂ ಇರುವ ಆ ಊರ್ವಶಿಯು ತನ್ನ ಆಭರಣಗಳಿಂದ ಬರುವ ಕಿಲಕಿಲನಾದದಿಂದಲೂ ನಾಟ್ಯದಿಂದ ತನ್ನ ಕುಚಗಳಿಂದ ಬರುವ ಚಲನ ಶಬ್ದಗಳಿಂದಲೂ ಆ ಜಾನುಮಂಡಲನ ತಪಸ್ಸಿಗೆ ವಿಘ್ನಮಾಡಿದರೂ ಆತನು ಬ್ರಹ್ಮಧ್ಯಾನನಿರತನಾಗಿದ್ದನು ॥೪೯॥

ಗಂಭೀರನಾಭೀಸುಷಿರಾಂಪೃಥುಶ್ರೋಣೀಂಭರಾಂಶುಭಾಂ ।
ಕದಳೀಸ್ತಂಭವಿಭ್ರಾಜದೂರುಕಾಂಡವಿರಾಜಿತಾಂ ॥೫೦॥

ತಾ॥ ಆಳವಾದ ನಾಭಿಯುಳ್ಳವಳೂ ದಪ್ಪವಾದ ಕಟಿಪಶ್ಚಾದ್ಭಾಗವುಳ್ಳವಳೂ ಕದಳೀಸ್ತಂಭಗಳಂತಿರುವ ತೊಡೆಗಳುಳ್ಳವಳೂ ಆಮೆಯಂತಿರುವ ಮೊಣಕಾಲಿನ ಚಿಪ್ಪುಗಳುಳ್ಳವಳಾಗಿಯೂ ಇರುವ ಆ ಊರ್ವಶಿಯು ತನ್ನ ನಾಭಿಯಿಂದ ಎಳೆಯುತ್ತಿರುವ ಉಸ್ವಾಶ, ನಿಸ್ವಾಶದಿಂದ ಮೇಲೇರುತ್ತಿರುವ ಚಲನಗತಿಯಿಂದಲೂ ನಾಟ್ಯದಲ್ಲಿ ತನ್ನ ತೊಡೆಗಳ ಘರ್ಷಣೆಯಿಂದುಂಟಾಗುವ ಮಧುರನಾದದಿಂದಲೂ ಆತನ ತಪಸ್ಸಿಗೆ ವಿಘ್ನವನ್ನುಂಟುಮಾಡಿದಳು ॥೫೦॥

ಕಿಂಕಿಣೀಪಾದಕಟಕವಿಲಸತ್ಪಾದಪಂಕಜಾಂ ।
ತಟಿರುಜ್ವಲಗಾತ್ರಾಂತಾಂಪದ್ಮಗಂಧಮನೋಹರಾಂ ॥೫೧॥

ತಾ॥ ಕಿಂಕಿಣಿ ಕಾಲ್ಕಡಗಗಳನ್ನು ಧರಿಸಿ ಅಲಂಕೃತವಾದ ಪಾದಗಳುಳ್ಳವಳೂ ಮಿಂಚಿನಂತೆ ಹೊಳೆಯುವ ಶರೀರಕಾಂತಿಯುಳ್ಳವಳೂ ಕಮಲ ಗಂಧದಂತಿರುವ ದೇಹ ಸುವಾಸನೆಯುಳ್ಳವಳೂ ಆದ ಆ ಊರ್ವಶಿಯು ತನ್ನ ಕಿಂಕಿಣಿ ಗೆಜ್ಜೆಗಳ ನಾಟ್ಯ ಶಬ್ದದಿಂದಲೂ ತನ್ನ ತುಟಿಗಳಿಂದ ಮಧುರಗಾನಾಲಾಪದಿಂದಲೂ ತನ್ನ ದೇಹಕಾಂತಿಯ ಪರಿಮಳದಿಂದಲೂ ಆ ಜಾನುಮಂಡಲನ ತಪಸ್ಸಿಗೆ ವಿಘ್ನವನ್ನು ಮಾಡಿದಳು ॥೫೧॥

ಅಕರೋತ್ತ್ರುಭಯಾಸ್ವರ್ಣಪುತ್ರಿಕೇವವಿಭಾಸುರಾ ।
ಮುಖವೀಣಾರವೇನೈವಗಾನಾನುನಯಪೂರ್ವಕಂ ॥೫೨॥
ನಿತ್ಯಂಸಾಭಿನಯಂದಿವ್ಯಂನಾನಾಗಾನಮನೋಹರಂ ।
ತಥಾಪಿತತ್ತಪೋವಿಘ್ನಂಅಶಕ್ತಾಕರ್ತುಮಂಗನಾ ॥೫೩॥

ತಾ॥ ಮಿಂಚಿನಂತೆ ಹೊಳೆಯುವ ದೇಹಕಾಂತಿಯುಳ್ಳ ಕೃಶೋದರಿಯಾದ ಊರ್ವಶಿಯು ಆ ಜಾನುಮಂಡಲನ ಸಮೀಪದಲ್ಲಿ ಮನೋಹರವಾದ ಸುವರ್ಣಪುತ್ತಳಿಯೋಪಾದಿಯಲ್ಲಿ ಮುಖವೀಣಾರವದಿಂದ ಸಂಗೀತಸಹಿತವಾದ ನಾನಾ ಬಗೆಯ ನರ್ತನಗಳನ್ನು ಎಡಬಿಡದೆ ಬಹುಕಾಲ ಪ್ರದರ್ಶಿಸಿದರೂ ಆ ಜಾನುಮಂಡಲನ ತಪಸ್ಸನ್ನು ವಿಘ್ನಮಾಡಲು ಶಕ್ತಳಾಗಲಿಲ್ಲಾ ॥೫೨॥೫೩॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಜಾನುಮಂಡಲ ತಪಶ್ಚರಣೋನಾಮ ಚತುರ್ಥೋಽಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ವರ್ಣವೈಭವ ಖಂಡದಲ್ಲಿ ಬ್ರಹ್ಮ ನಾರದ ಸಂವಾದದಲ್ಲಿ ಜಾನುಮಂಡಲನ ತಪಸ್ಸೆಂಬ ನಾಲ್ಕನೇ ಅಧ್ಯಾಯವು ಸಮಾಪ್ತವು.

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಐದನೆಯ ಅಧ್ಯಾಯ :-

ಜಾನುಮಂಡಲನ ತಪೋವಿಘ್ನ ಅಶಕ್ಯವೆಂದು ದೇವೇಂದ್ರನಿಗೆ ಊರ್ವಶಿಯ ನಿರೂಪಣೆ

ಗೌತಮ ಉವಾಚ :-

ಅಥೋರ್ಧ್ವಲೋಕಮಾಸಾದ್ಯ ಭಾಸ್ವನ್ಮಾತ್ಯಂಸೇನಮಂಡಲೈಃ ।
ನಗರ್ಯಾಮಮರಾವತ್ಯಾಂ ತನ್ಮಧ್ಯೇರತ್ನಮಂದಿರೇ ॥೧॥

ದಿವ್ಯರತ್ನಶುಭಾಢ್ಯೇಚ ದೇವತಾಗಣಸೇವಿತೇ ।
ದಿವ್ಯಸಿಂಹಾಸನಾರೂಢಂ ದಿಕ್ಪಾಲಕುಲಸೇವಿತಂ ॥೨॥

ಋಷಿಸಂಘೈಃಪರಿವೃತಂ ಸಹಸ್ರಾಕ್ಷಂ ಪುರಂದರಂ ।
ದೃಷ್ಟ್ವಾನತ್ವಾಚೋರ್ವಶೀಸಾಪ್ರೋವಾಚಭಯವಿಹ್ವಲಾ ॥೩॥

ತಾ॥ ಆ ಜಾನುಮಂಡಲನ ತಪೋವಿಘ್ನಮಾಡಲು ಅಶಕ್ಯಳಾದ ಆ ಊರ್ವಶಿಯು ಮೇರುಶೃಂಗದಿಂದ ದೇವಲೋಕವನ್ನು ಸೇರಿ ಸಕಲ ದೇದೀಪ್ಯಮಾನದಿಂದ ಪ್ರಕಾಶಿಸುತ್ತಿರುವ ಸೌಧಸಮೂಹಗಳಿಂದ ಕೂಡಿದ ಆ ಅಮರಾವತಿ ಪಟ್ಟಣದಲ್ಲಿನ ದಿವ್ಯ ದೇದೀಪ್ಯವಾದ ರತ್ನಮಂದಿರದಲ್ಲಿ ದೇವಗಣಗಳಿಂದಲೂ ಅಷ್ಟದಿಕ್ಪಾಲಕರಿಂದಲೂ ಸೇವಿಸಲ್ಪಡುತ್ತಾ ಋಷಿಸಮೂಹದಿಂದ ಪರಿವೃತನಾಗಿ ವಜ್ರ ವೈಡೂರ್ಯವೇ ಮೊದಲಾದ ನವರತ್ನಗಳಿಂದ ನಿರ್ಮಿತವಾದ ರತ್ನಸಿಂಹಾಸನಾರೂಢನಾದ ಸಹಸ್ರನೇತ್ರಗಳುಳ್ಳ ದೇವೇಂದ್ರನನ್ನು ಕಂಡು ನಮಸ್ಕರಿಸಿ ಭಯವಿಹ್ವಳಳಾಗಿ ಆ ಊರ್ವಶಿಯು ಹೇಳಿದ್ದೇನೆಂದರೆ ॥೧॥೨॥೩॥

ಹೇನಾಥತತ್ತಪೋವಿಘ್ನಂಕರ್ತುಂಮಮನಶಕ್ಯತೇ ।

ತಾ॥ ಪೂಜ್ಯನಾದ ಎಲೈ ಸ್ವಾಮಿಯೇ ನಿನ್ನ ಆಜ್ಞೆಯ ಪ್ರಕಾರ ಆ ಜಾನುಮಂಡಲನ ತಪೋವಿಘ್ನವನ್ನು ನಾನು ಮಾಡಲು ಶಕ್ತಳಾಗದೆ ಬಂದಿದುದಕ್ಕಾಗಿ ನಿನ್ನ ಕ್ಷಮೆಯನ್ನು ಕೋರುತ್ತೇನೆಂದು ಊರ್ವಶಿಯು ಹೇಳಿದಳು ।

ಶೃತ್ವಾತದ್ವಚನಂಶಕ್ರಃಪ್ರತ್ಯುವಾಚಚತಾಂಪ್ರತಿ ॥೪॥

ತಾ॥ ಆ ಊರ್ವಶಿಯು ಹೇಳಿದ ವಾಕ್ಯವನ್ನು ಕೇಳಿದ ಸಹಸ್ರಾಕ್ಷನಾದ ದೇವೇಂದ್ರನು ಪ್ರತ್ಯುತ್ತರವನ್ನು ಹೇಳುತ್ತಾನೆ ॥೪॥

ತ್ವಮೇವನಚಶಕ್ತಾಚೇನ್ಮಯಾಪಿಚನಶಕ್ಯತೇ।
ತಪಸಸ್ತಸ್ಯವಿಘ್ನಂತುಕರ್ತುಂಶಕ್ತಶ್ಚತುರ್ಮುಖಃ ॥೫॥

ತಾ॥ ಎಲೈ ಊರ್ವಶಿಯೇ ನೀನೇ ಆ ಜಾನುಮಂಡಲನ ತಪಸ್ಸಿಗೆ ವಿಘ್ನವನ್ನುಂಟುಮಾಡಲು ಅಶಕ್ತಳಾದ ಮೇಲೆ ನಾನೂ ಕೂಡ ಆ ಅಸುರನ ತಪಸ್ಸನ್ನು ಕೆಡಿಸಲು ಶಕ್ತನಲ್ಲ. ಚತುರ್ಮುಖನಾದ ಬ್ರಹ್ಮದೇವನು ಆ ಅಸುರನ ತಪೋವಿಘ್ನ ಮಾಡಲು ಶಕ್ತನಾಗಿರುವನು ॥೫॥

ತಮೇವ ಶರಣಂಯಾಮಿ ಬ್ರಹ್ಮಲೋಕಂಚ ಶಂಕರಂ।
ಇತ್ಯೇವಮುಕ್ತ್ವಾತುಂನಾರೀಂ। ಆಜ್ಞಾಯಭವನಂಪ್ರತಿ ॥೬॥

ತಾ॥ ಆದ್ದರಿಂದ ಲೋಕಸಂರಕ್ಷಕನಾಗಿಯೂ ಲೋಕಶಂಕರನಾಗಿಯೂ ಇರುವ ಬ್ರಹ್ಮನನ್ನೇ ಶರಣುಹೊಂದುವೆನು ಎಂದು ಹೇಳಿ ಊರ್ವಶಿಯನ್ನು ಅವಳ ಮನೆಗೆ ಕಳುಹಿಸಿ ಮುಂದಿನ ಕರ್ತವ್ಯವನ್ನು ಚಿಂತಿಸುತ್ತಾ ತನ್ನ ಮಂದಿರವನ್ನು ಸೇರಿದನು ॥೬॥

ಸರ್ವಾನ್‌ದೇವಾನ್ ಸಮಾಹೂಯಸಭಾಯಾಂಸುರಸತ್ತಮಃ।
ಮಂತ್ರಿತುಂಮಂತ್ರಿಭಿಸ್ಸಾರ್ಧಂ ಸಾಧುತತ್ರೋಪಚಕ್ರಮೇ ॥೭॥

ತಾ॥ ಹೀಗೆ ಚಿಂತಾಮಗ್ನನಾದ ಆ ದೇವೇಂದ್ರನು ಸಮಸ್ತ ದೇವತೆಗಳನ್ನು ಋಷಿಗಣಗಳನ್ನು ಮಂತ್ರಿಗಳೇ ಮೊದಲಾದ ಆಚಾರ್ಯರನ್ನು ಕರೆಯಿಸಿ ಸಭೆಯಲ್ಲಿ ತನ್ನ ದಾಯಾದಿಯಾಗಿರುವ ಆ ಜಾನುಮಂಡಲನ ತಪದಿಂದ ಒದಗಿರುವ ಭಯವನ್ನೂ ಊರ್ವಶಿಯಿಂದ ತಪೋಭಂಗವಾಗದೆ ಇರುವುದನ್ನೂ ಮುಂದೆ ತನಗೆ ಒದಗಬಹುದಾದ ತೊಂದರೆಗಳ ನಿವಾರಣೆಗಾಗಿ ತಾವೆಲ್ಲರೂ ಯೋಚಿಸಿ ಮುಂದಿನ ಕಾರ್ಯವನ್ನು ಮಾಡಲು ಸಲಹೆಯನ್ನು ಕೊಡಿರೆಂದು ಸಕಲರೊಡನೆ ಮಂತ್ರಾಲೋಚನೆಯನ್ನು ಮಾಡಿದನು ॥೭॥

ಗೌತಮ ಉವಾಚ :–

ವರ್ಷಾಣಾಂ ಶತಸಾಹಸ್ರಂಹೃದಿಧ್ಯಾತ್ವಾಪಿತಾಮಹಂ।
ತಥಾಸಿದ್ಧಿಮತಸ್ತಸ್ಯ ಬ್ರಹ್ಮರಂಧ್ರಂಮನೋಹರಂ ॥೮॥

ತಾ॥ ಎಲೈ ಸುಮನಸ್ಕನೇ ಕೇಳು ಹೀಗೇ ದೇವೇಂದ್ರನು ಮಂತ್ರಾಲೋಚನೆಯಲ್ಲಿರಲು ಆ ಜಾನುಮಂಡಲನು ತನ್ನ ಹೃದಯದಲ್ಲಿ ಬ್ರಹ್ಮನನ್ನು ಸ್ಥಾಪಿಸಿಕೊಂಡು ತನ್ನ ಸಿದ್ಧಿಗಾಗಿ ಒಂದು ಲಕ್ಷ ಸಂವತ್ಸರಗಳು ತಪಸ್ಸನ್ನಾಚರಿಸುತ್ತಿರಲು ಆತನ ತಪಸ್ಸಿದ್ಧಿಯ ಸಮಯ ಒದಗಲು ಆ ಜಾನುಮಂಡಲನ ಬ್ರಹ್ಮರಂಧ್ರದಿಂದ ಮನೋಹರವಾದ ಜ್ವಾಲೆಯು ಉಂಟಾಯಿತು ॥೮॥

ಭಿತ್ವಾಪ್ರಾದುರಭೂಧ್ವಹ್ನಿರೂರ್ಧ್ವಗಜ್ವಾಲಾಸಮನ್ವಿತಃ ।
ತಸ್ಮಾದ್ಭೀತಾಸ್ತಪೋವಹ್ನೇರ್ದಿಕ್ಪಾಲಾವಿಸ್ಮಯಾನ್ವಿತಾಃ ॥೯॥

ತಾ॥ ಹೀಗೆ ಆ ಜಾನುಮಂಡಲನ ಬ್ರಹ್ಮರಂಧ್ರದಿಂದ ಹೊರಟ ಆ ಜ್ವಾಲೆಯು ಊರ್ಧ್ವಗ ಲೋಕಗಳನ್ನೆಲ್ಲಾ ವ್ಯಾಪಿಸಲು ಅದನ್ನು ಕಂಡ ಅಷ್ಟದಿಕ್ಪಾಲಕರುಗಳು ಭಯದಿಂದ ಕಂಪಿಸಿದವರಾಗಿ ವಿಸ್ಮಯವನ್ನೊಂದಿದರು ॥೯॥

ಇಂದ್ರಾದಿಗಳ ಭಯ

ಶೋಷಯನ್ತೀ ಸಮುದ್ರಾಶ್ಚ ಕಂಪಿತಾಶ್ಚಾಷ್ಟದಿಗ್ಗಜಾಃ ।
ಪ್ರಚಲನ್ತೀಮಹೀಂದ್ರಾಶ್ಚ ಡಳಿಪಾಶ್ಚಾಪಿತಾರಕಾಃ ॥೧೦॥

ತಾ॥ ಆ ಜಾನುಮಂಡಲನಿಂದ ಹೊರಟ ತಪೋಗ್ನಿಯಿಂದ ಸಮುದ್ರಗಳು ಇಂಗಿಹೋದವು ಅಷ್ಟದಿಗ್ಗಜಗಳು ನಡುಗಿಹೋದವು ಪರ್ವತಗಳೆಲ್ಲಾ ಚಲಿಸಿ ಭೂಕಂಪಗಳಾದವು ॥೧೦॥

ಸಿದ್ಧಚಾರಣಗಂಧರ್ವದೇವಾಶ್ಚೇಂದ್ರಪುರೋಗಮಾಃ ।
ಲೋಕಾಲೋಕಾಧಿಪಾಶ್ಚೈವಭುವನಾನಿಚತುರ್ದಶಃ ॥೧೧॥
ಯಕ್ಷರಾಕ್ಷಸವೀರಾಶ್ಚ ತಪೋನಿಷ್ಠಾಮುನೀಶ್ವರಾಃ ।
ಭಯಭ್ರಾನ್ತಾಶ್ಚ ತೇಸರ್ವೇಸಂವೃತ್ತಾಸ್ಸಹಸಾತಥಾ ॥೧೨॥

ತಾ॥ ಹೀಗೆ ಆ ಜಾನುಮಂಡಲನ ತಪೋಗ್ನಿಯಿಂದ ಅನರ್ಥಗಳಾಗಲು ಸಿದ್ಧರೂ, ಚಾರಣರೂ, ಗಂಧರ್ವರೂ, ಇಂದ್ರಾದಿ ದೇವತೆಗಳೂ ಲೋಕಗಳಿಗೆ ಅಧಿಪತಿಗಳಾದ ಅಷ್ಟದಿಕ್ಪಾಲಕರೂ ಹದಿನಾಲ್ಕು ಲೋಕಗಳಲ್ಲಿರುವ ಯಕ್ಷ, ರಾಕ್ಷಸರೂ, ತಪೋನಿರತರಾದ ಮುನೀಶ್ವರರೂ ಇದ್ದಕ್ಕಿದ್ದಂತೆ ಭಯಭ್ರಾಂತರಾಗಿ ಎಲ್ಲರೂ ಒಟ್ಟಾಗಿ ಸೇರಿದರು ॥೧೧॥ ॥೧೨॥

ಸೃಷ್ಟಾರಂಸರ್ವಜಗತಾಂಬ್ರಹ್ಮಾಣಂಶರಣಂಯಯುಃ ।
ಸ್ವಾಮಿರ್ನಮಹಾತಪೋವಹ್ನೇರ್ಭಯಾತ್ತ್ವತ್ಪಾದಪಂಕಜಃ ॥೧೩॥

ತಾ॥ ಹೀಗೆ ಎಲ್ಲಾ ಒಟ್ಟಾಗಿ ಸೇರಿದ ಆ ದೇವತೆಗಳು ಸಮಸ್ತ ಲೋಕಗಳನ್ನು ಸೃಷ್ಟಿಸುವಂಥಾ ಬ್ರಹ್ಮದೇವನಲ್ಲಿಗೆ ಹೋಗಿ ಎಲ್ಲರೂ ಶರಣಾಗತರಾಗಿ, ಎಲೈ ಸ್ವಾಮಿಯೇ ತಪೋವಹ್ನಿಯ ಭಯದಿಂದ ನಾವುಗಳೆಲ್ಲರೂ ನಿಮ್ಮ ಪಾದಪಂಕಜವನ್ನು ಸೇರಿರುವೆವು ನಮ್ಮನ್ನು ರಕ್ಷಿಸಬೇಕು ॥೧೩॥

ಗತಾಸ್ಮಸ್ತದ್ಭವಾರ್ಶೀಘ್ರಂನಿವರ್ತಯತುತದ್ಭಯಂ ।
ಅಕಸ್ಮಾದುತ್ಥಿತೋವಹ್ನಿರ್ದದಾಹಭುವನತ್ರಯಂ ॥೧೪॥

ತಾ॥ ಹೀಗೆ ಹಠಾತ್ತನೇ ಎದ್ದಿರುವ ಆ ತಪೋಗ್ನಿಯು ಮೂರು ಲೋಕಗಳನ್ನೂ ಸುಡುತ್ತಿದೆ. ಇದನ್ನು ನಿವಾರಿಸಿ ನಮಗೆ ಪ್ರಾಪ್ತವಾಗಿರುವ ಭಯವನ್ನು ಹೋಗಲಾಡಿಸಬೇಕೆಂದು ಪ್ರಾರ್ಥಿಸಿದರು ॥೧೪॥

ರಕ್ಷರಕ್ಷಮಹಾಪ್ರಾಜ್ಞಪಿತಾಮಹಮಹಾಮತೇ ।
ತ್ವಾಂವಿನಾಕಾರಣಂತಸ್ಯನಾಸ್ತಿಕಿಂಚಜ್ಜಗತ್ರಯೇ ॥೧೫॥

ತಾ॥ ಮಹಾಮತಿಯೂ ನಮ್ಮೆಲ್ಲರಿಗೂ ಪಿತಾಮಹನೂ ಮಹಾಪ್ರಾಜ್ಞನೂ ಆದ ಸ್ವಾಮಿಯೇ ನಮ್ಮನ್ನು ರಕ್ಷಿಸು, ರಕ್ಷಿಸು, ಇದಕ್ಕೆಲ್ಲಾ ಕಾರ್ಯಕಾರಣಭೂತನೂ ನೀನಲ್ಲದೆ ಮತ್ತ್ಯಾರು ಎಲೈ ಲೋಕನಾಥನೇ ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡಿರುವ ಆ ತಪೋಜ್ವಾಲೆಯನ್ನು ನೀನೀಗಲೇ ಶಾಂತಗೊಳಿಸಿ ನಮ್ಮನ್ನು ಕಾಪಾಡೆಂದು ಪ್ರಾರ್ಥಿಸಿದರು ॥೧೫॥

ಸಮಾಲೋಕ್ಯಚಕಾರ್ಾಸರ್ವಾ್ವಿಚಾರ್ಯಚಪಿತಾಮಹಃ ।
ಉವಾಚಮಧುರಂವಾಕ್ಯಂತಾರ್ಸರ್ವಾ್ಪ್ರತಿಸಾದರಂ ॥೧೬॥

ತಾ॥ ಹೀಗೆ ದೇವತೆಗಳೊಡಗೂಡಿದ ಸಮಸ್ತರಿಂದ ಪ್ರಾರ್ಥಿಸಲ್ಪಟ್ಟ ಪಿತಾಮಹನಾದ ಬ್ರಹ್ಮದೇವನು ಅವರನ್ನೆಲ್ಲಾ ನೋಡಿ ಸಮಸ್ತ ವಿಚಾರವನ್ನು ಆಲಿಸಿ ಆಧರದಿಂದ ಕೂಡಿದ ಮಧುರವಾಕ್ಯದಿಂದ ಹೇಳಿದ್ದೇನೆಂದರೆ ॥೧೬॥

ಜಾನುಮಂಡಲನಿಗೆ ವರಪ್ರಧಾನ

ಮಾಭೈಷಧ್ವಂಮಹಾಭಾಗಾಃಶಾನ್ತಿಂತಸ್ಯಕರೋಮ್ಯಹಂ ।
ಇತಿಭ್ರುರ್ವಸ್ಸುರೈಸ್ಸಾರ್ಥಂಜಗಾಮಸುರಪರ್ವತಂ ॥೧೭॥

ತಾ॥ ಎಲೈ ದೇವತೆಗಳಿರಾ ನೀವು ಭಯಪಡಬೇಕಾಗಿಲ್ಲ ಆತನ ತಪಸ್ಸಿನಿಂದುಂಟಾದ ಅಗ್ನಿಯನ್ನು ನಾನು ಶಾಂತಗೊಳಿಸುತ್ತೇನೆಂದು ಹೇಳಿ ದೇವತೆಗಳೊಡಗೂಡಿ ಮೇರುಪರ್ವತದ ಸಮೀಪವನ್ನು ಸೇರಿದನು ॥೧೭॥

ತಂಬ್ರಹ್ಮರಂಧ್ರಮಾಚ್ಛಾದ್ಯತಚ್ಛಾನ್ತಿಂಕೃತವಾ್ವಿಭುಃ ।
ತತೋರಾಕ್ಷಸವೀರಶ್ಚನಿವರ್ತ್ಯತಪಸೋಮುನಃ ॥೧೮॥

ತಾ॥ ಹೀಗೆ ದೇವತೆಗಳ ಸಮೂಹದೊಡನೆ ಬಂದ ಕಮಲಾಕರನಾದ ಬ್ರಹ್ಮದೇವನು ಆ ಜಾನುಮಂಡಲನ ಬ್ರಹ್ಮರಂಧ್ರದಿಂದ ಬರುತ್ತಿರುವ ತಪೋಜ್ವಾಲೆಯನ್ನು ತನ್ನ ಕೈಯಿಂದ ಮುಚ್ಚಿ ಆ ಜ್ವಾಲೆಯನ್ನು ಶಾಂತಗೊಳಿಸಲು ಜಗದ್ವಿಭುವಾದ ಬ್ರಹ್ಮನು ಕೃತಕೃತ್ಯನಾದನು ಆಗ ತಪೋಧನನಾದ ಆ ಜಾನುಮಂಡಲನು ತಪಸ್ಸಿನಿಂದ ಬಹಿರ್ಮುಖನಾದನು ॥೧೮॥

ಅಕ್ಷಿಯುಗ್ಮಂನಿಮಿಲ್ಯಾಥನನಾಮಚಪುನಃಪುನಃ ।
ಚತುರ್ಮುಖಂಜಗದ್ವಂದ್ಯಂಲೋಕನಾಥಂಪಿತಾಮಹಂ ॥೧೯॥

ತಾ॥ ಹೀಗೆ ಬಹಿರ್ಮುಖನಾದ ಆ ಜಾನುಮಂಡಲನು ತನ್ನ ಉನ್ಮೀಲವಾದ ಕಣ್ಣುಗಳಿಂದ ಎದುರಿಗೆ ನಿಂತಿರುವ ಪಿತಾಮಹನೂ ಲೋಕನಾಥನೂ ಸಕಲ ಜಗತ್ತಿಗೆ ಸೃಷ್ಟಿಕರ್ತನೂ ಜಗತ್ತಿಗೆಲ್ಲಾ ಪೂಜ್ಯನೂ ಆದ ಚತುರ್ಮುಖ ಬ್ರಹ್ಮನನ್ನು ಕಂಡು ಪುನಃ ಪುನಃ ನಮಸ್ಕರಿಸಿದನು ॥೧೯॥

ಸಂಸ್ತುತ್ಯರಾಕ್ಷಸಶ್ರೇಷ್ಠಃತೂಷ್ಣೀಂತತ್ರೈವಸಂಸ್ಥಿತಃ ।
ಶೃತ್ವಾತದ್ವಚನಂಸಮ್ಯಕ್‌ದೇವದೇವಪಿತಾಮಹಃ ॥೨೦॥

ತಾ॥ ಹೀಗೆ ನಮಸ್ಕಾರ ಮಾಡುತ್ತಾ ಆ ರಾಕ್ಷಸಶ್ರೇಷ್ಠನಾದ ಜಾನು ಮಂಡಲನು ತನ್ನೆದುರಿನಲ್ಲಿ ನಿಂತಿರುವ ಆ ಬ್ರಹ್ಮದೇವನನ್ನು ಮನಸಾರ ಸಂತೃಪ್ತಿಯಿಂದ ಸ್ತುತಿಸಿದನು, ಅದನ್ನು ಕೇಳಿದ ದೇವದೇವನೂ ಪಿತಾಮಹನೂ ಆದ ಬ್ರಹ್ಮದೇವನು ॥೨೦॥

ಸಂತೋಷ್ಟೋಽಹಂಮಹಾಯೋಗಿ‌ತಪಸಾತ್ವತ್ಕೃತೇನಚ ।
ಇದಾನೀಂತೇಪ್ರಸನ್ನೋಽಸ್ಮಿವೃಣೀಷ್ವವರಮುತ್ತಮಂ ॥೨೧॥

ತಾ॥ ಎಲೈ ಮಹಾಯೋಗಿಯೇ ನಿನ್ನ ತಪಸ್ಸಿಗೆ ಸಂತುಷ್ಟನಾಗಿ ನಿನಗೆ ವರಗಳನ್ನು ಕೊಡಲು ಪ್ರಸನ್ನನಾಗಿ ಬಂದಿರುವೆನು ಆದ್ದರಿಂದ ನಿನ್ನ ಅಭೀಷ್ಟವಾದ ವರವನ್ನು ಕೇಳುವವನಾಗು ॥೨೧॥

ದಾಸ್ಯಾಮ್ಯಹಂಶುಭಕರಂತವಸೌಭಾಗ್ಯಕಾರಣಂ ।
ಇತ್ಯುಕ್ತೋರಾಕ್ಷಸಶ್ರೇಷ್ಠಃಪ್ರತ್ಯುವಾಚಂಪಿತಾಮಹಂ ॥೨೨॥

ತಾ॥ ನಿನ್ನ ಶ್ರೇಯಸ್ಸಿಗೆ ಕಾರಣವಾದುದೂ ಶುಭಕರವಾದುದೂ ಆದಂಥಾ ವರವನ್ನು ಕೊಡುತ್ತೇನೆಂದು ಹೇಳಿದ ಪಿತಾಮಹನನ್ನು ಕುರಿತು ರಾಕ್ಷಸಶ್ರೇಷ್ಠನು ಇಂತೆಂದು ಪ್ರತ್ಯುತ್ತರವನ್ನು ಕೊಡುವವನಾದನು ॥೨೨॥

ಯದಿಪ್ರೀತೋಽಸಿದೇವೇಶತಪಸಾಮತ್ಕೃತೇನಚ
ತದಯಾಚೇವರಂಶ್ರೇಷ್ಠಂಮಮಸೌಭಾಗ್ಯಕಾರಣಂ ॥೨೩॥

ತಾ॥ ಎಲೈ ದೇವತೆಗಳಿಗೆ ಒಡೆಯನೇ ಲಾಲಿಸು ನನ್ನ ತಪಸ್ಸಿನಿಂದ ನೀನು ಸುಪ್ರೀತನಾಗಿದ್ದರೆ ನನ್ನ ಸೌಭಾಗ್ಯಕ್ಕೆ ಕಾರಣವಾದ ವರವನ್ನು ಯಾಚಿಸುತ್ತೇನೆ ॥೨೩॥

ಬ್ರಹ್ಮಾಣಮೂಚತುರ್ದ್ವೈತ್ಯೌಪ್ರಣಿಪತ್ಯಜಗದ್ಗುರುಂ ।
ಅವಧ್ಯಂಚೆಸೌಬ್ರೂಹಿಸರ್ವಭೂತಷುಸರ್ವದಾ ॥೨೪॥

ತಾ॥ ಎಲೈ ಸೃಷ್ಟಿಕರ್ತ ಬ್ರಹ್ಮದೇವನೇ! ಪೃಥಿವ್ಯಾದಿ ಪಂಚಮಹಾಭೂತಗಳಿಂದ ಸಂಭವಿಸುವ ಪ್ರಾಣಿಜಾತದಲ್ಲಿ ಯಾವ ಪ್ರಾಣಿಯಿಂದಲೂ ಎಲ್ಲಿಯೂ ಎಂದಿಗೂ ನಮಗೆ ಮರಣವುಂಟಾಗದ ಹಾಗೆ (ಅಮರತ್ವವನ್ನು) ವರವನ್ನು ಪಾಲಿಸೆಂದನು ॥೨೪॥

ತಾವಬ್ರವೀತ್ತದಾದೇವೋಲೋಕಾನಾಂಪ್ರಭುರವ್ಯಯಃ ।
ನಾಸ್ತಿಸರ್ವಾನುರಕ್ಷಂನ್ಯೈಸರ್ವಲೋಕೇಷುಸರ್ವದಾಃ ॥೨೫॥

ತಾ॥ ಈ ರೀತಿ ವರವನ್ನು ಕೇಳಿದ ಆ ದಿತಿಪುತ್ರನನ್ನು ಸೃಷ್ಟಿಕರ್ತನಾಗಿಯೂ ಲೋಕನಾಯಕನಾಗಿಯೂ ಮತ್ತು ನಾಶರಹಿತನಾದ ಆ ಬ್ರಹ್ಮದೇವನು ಎಲೈ ರಾಕ್ಷಸ ಶ್ರೇಷ್ಠನೇ ಚತುರ್ದಶ ಲೋಕಗಳಲ್ಲಿ ಎಲ್ಲಿಯೂ ನಾಶರಹಿತವಾದುದಿಲ್ಲ ಆದ್ದರಿಂದ ಅಮರತ್ವವನ್ನು ಬಿಟ್ಟು ಯಾವುದನ್ನಾದರೂ ಕೇಳೆಂದನು ॥೨೫॥

ತಸ್ಯತದ್ವಚನಂಶ್ರುತ್ವಾಜಾನುಮುಂಡಲನಾಮಕಃ ।
ಉವಾಚವಚನಂಧೀಮಾನ್ಪ್ರಣಿಪತ್ಯಜಗದ್ಗುರುಂ ॥೨೬॥

ತಾ॥ ಆ ಜಾನುಮಂಡಲ ರಾಕ್ಷಸನು ಮಹಾಬುದ್ಧಿವಂತನಾದ ಕಾರಣ ಬ್ರಹ್ಮನ ವಚನವನ್ನು ಕೇಳುತ್ತಲೇ ಅಸಾಧ್ಯವಾದ ವರವನ್ನು ಪ್ರಾರ್ಥಿಸಬೇಕೆಂದು ತನ್ನ ಮನಸ್ಸಿನಲ್ಲಿ ನಿರ್ಧರಿಸಿ ಈ ರೀತಿ ಯೋಚಿಸಿದನು. ಲೋಕದಲ್ಲಿ ದೇವತೆಗಳು ಮನುಷ್ಯರು ಪಶು ಪಕ್ಷಿ ಮೃಗಾದಿಗಳೆಲ್ಲವೂ ಯೋನಿಗಳಲ್ಲಿ ಉದ್ಭವಿಸುವವೇ ಹೊರ್ತು ಯೋನಿ ಸಂಭಂಧವಿಲ್ಲದ ಅಯೋನಿಜವೆನಿಸಿಕೊಂಡ ಪ್ರಾಣಿಯು ಎಲ್ಲಿಯೂ ಇಲ್ಲವಾದ ಕಾರಣ ಯೋನಿಜವಸ್ತುವಿನಿಂದ ನನಗೆ ಮರಣವುಂಟಾಗದಂತೆ ವರವನ್ನು ಪಡೆದರೆ ಯಕ್ಷ, ಕಿನ್ನರ, ಗಂಧರ್ವ, ವಿಧ್ಯಾಧರ ಗುಹ್ಯಕಾದಿ ದೇವಯೋನಿ ವಿಶೇಷಗಳಿಂದಾಗಲಿ ಘೋರವಾದ ಭೂತ, ಪ್ರೇತ, ಪಿಶಾಚ, ದೈತ್ಯ, ರಾಕ್ಷಸ, ಸಿಂಹ, ವ್ಯಾಘ್ರ ವರಾಹಾದಿ ಕ್ಷುದ್ರ ಮೃಗಗಳೇ ಮೊದಲಾದ ಯಾರಿಂದಲೂ ಮತ್ತು ಮನುಷ್ಯರಿಂದಲೂ ಭೀತಿ ಇಲ್ಲದಂತೆ ಮರಣ ಧರ್ಮರಹಿತನಾಗಿ ಸುಖವಾಗಿರುವಂಥಾ ವರವನ್ನು ಕೇಳಲು ನಿಶ್ಚಯಿಸಿ ಎಲೈ ಜಗದ್ಗುರುವಾದ ಪಿತಾಮಹನೇ ॥೨೬॥

ಯೋನಿಜಾನ್ಮೆಭಯಂಮಾಸ್ತುಸಮಾಸ್ಥೀಯಮಹೀಮಿಮಾಂ ।
ಪ್ರಚರಿಷ್ಯಾಮಿಲೋಕೇಶತತ್ಪ್ರಸಾದಾತ್ಪಿತಾಮಹಃ ॥೨೭॥

ತಾ॥ ಈ ಧರಾತಲದಲ್ಲಿ ದೇವದಾನವ ಗಂಧರ್ವರೂ ಸಕಲ ಪ್ರಾಣಿವರ್ಗವೂ ಯೋನಿಜಾತವಾದ್ದರಿಂದ ಯೋನಿಜವಾದ ಪ್ರಾಣಿ ಜಾತದಿಂದ ನನಗೆ ಮರಣಭೀತಿ ಯಿಲ್ಲದಂತೆ ವರವನ್ನು ಕೊಡುವವನಾಗು ನಿನ್ನ ಅನುಗ್ರಹರೂಪವಾದ ಆ ವರದಿಂದ ಲೋಕತ್ರಯದಲ್ಲಿಯೂ ಮರಣಭೀತಿ ಇಲ್ಲದೆ ನಾನು ನಿರಾಂತಕವಾಗಿ ಸಂಚರಿಸಲಿಚ್ಛಿಸುತ್ತೇನೆಂದು ಪ್ರಾರ್ಥಿಸಿದನು ॥೨೭॥

ಶ್ರುತ್ವಾತದ್ವಚನಂಶ್ರೀಮಾನ್‌ದೇವದೇವಪಿತಾಮಹಃ ।
ತಥಾಸ್ತ್ವಿತಿವರಂದತ್ವಾಯಯೌಸ್ವಭವನಂಪ್ರತಿ ॥೨೮॥

ತಾ॥ ಈ ರೀತಿಯಾಗಿ ವರವನ್ನು ಕೇಳಿದ ಆ ಜಾನುಮಂಡಲನಿಗೆ ಅದರಂತೆಯೇ ಶ್ರೀಮಂತನೂ ದೇವದೇವಪಿತಾಮಹನೂ ಆದ ಬ್ರಹ್ಮದೇವನು ವರವನ್ನು ಕೊಟ್ಟು ತನ್ನ ಲೋಕವನ್ನು ಸೇರಿದನು ॥೨೮॥

ಜಾನುಮಂಡಲ ರಾಜ್ಯಭಾರ

ತದ್ವರಂಪ್ರಾಪ್ಯದೈತೇಯಃಪರಂಸಂತುಷ್ಟಮಾನಸಃ ।
ವ್ರತಾವಸಾನಂಕೃತ್ವಾಥನಿಯಮೇನಧೃಢವ್ರತಃ ॥೨೯॥

ತಾ॥ ಹೀಗೆ ವರವನ್ನು ಪಡೆದ ಆ ಜಾನುಮಂಡಲನು ಬ್ರಹ್ಮದೇವನು ಅಂತರ್ದಾನವಾಗಲು ಅತ್ಯಂತ ಸಂತೋಷವನ್ನು ಹೊಂದಿ ತನ್ನ ತಪಸ್ಸಿನ ನಿಯಮವನ್ನು ಸಾಕುಮಾಡಿದನು ॥೨೯॥

ಸ್ವಕೀಯೈಸ್ಸರ್ವರಕ್ಷೋಭಿರ್ಬಲಿಭಿಃಪರ್ವತೋಪಮೈಃ ।
ನಾನಾರತ್ನಸಮಾಕೀರ್ಣಂಸ್ವರ್ಣವಪ್ರವರಾಜಿತಂ ॥೩೦॥
ಸ್ವಪುರಂಪ್ರಾಪ್ಯದೈತೇಯೋಹ್ಯವಾಸಸುಚಿರಂತಥಾ ।
ತತಸ್ತುರಾಕ್ಷಸಶ್ರೇಷ್ಠೋಜಾನುಮಂಡಲನಾಮಕಃ ॥೩೧॥

ತಾ॥ ಹೀಗೆ ತಪವನ್ನು ಬಿಟ್ಟು ರಾಕ್ಷಸ ಶ್ರೇಷ್ಟನಾದ ಜಾನುಮಂಡಲನು ತನ್ನ ಸ್ವಜನರಾದ ಬಲಿಷ್ಟರೂ ಪರ್ವತಸಮಾನ ಪರಾಕ್ರಮವುಳ್ಳ ರಾಕ್ಷಸಪರಿವಾರದಿಂದಲೂ ನಾನಾ ರತ್ನಗಳಿಂದಲಂಕೃತವಾದ ಚಿನ್ನದಂತೆ ಕಾಂತಿಯುಳ್ಳ ಅಂತಃಪುರಗಳಿಂದ ತುಂಬಿರುವ ತನ್ನ ಪಟ್ಟಣವನ್ನು ಸೇರಿದನು ॥೩೦॥೩೧॥

ಮಾಯಾವಿದಂಶಿಲ್ಪಿಶ್ರೇಷ್ಟಂಮಯಮಾನೀಯಯತ್ನತಃ ।
ನಿರ್ಮಮೇರಮಣದ್ವೀಪೇಪ್ರತಿಷ್ಠಾನನಾಮತಾಂಪುರೀಂ ॥೩೨॥

ತಾ॥ ತನ್ನ ಪಟ್ಟಣವನ್ನು ಸೇರಿದ ಜಾನುಮಂಡಲನು ತನ್ನ ತಾಯಿಯಾದ ಆ ದಿತಿದೇವಿಯ ಆಶಯವನ್ನು ಪರಿಗ್ರಹಿಸಿ ಸರ್ವ ಮಾಯಾವಿ ವಿಶಾರದನಾಗಿರುವ ಶಿಲ್ಪಿಶ್ರೇಷ್ಟನಾದ ಮಯನನ್ನು ಕರೆಯಿಸಿ ಪ್ರಯತ್ನಪೂರ್ವಕವಾಗಿ ರಮಣಕವೆಂಬ ಮಹಾ ದ್ವೀಪದಲ್ಲಿ ವೈರಿಗಳು ಬರಲವಕಾಶವಿಲ್ಲದಂತೆ ಲೋಕಪ್ರಖ್ಯಾತವಾದ ಪ್ರತಿಷ್ಟಾನಗರವೆಂಬ ಪಟ್ಟಣವನ್ನು ಸೃಜಿಸಿದನು ॥೩೨॥

ತಾಮಾಸ್ಥಾಯಪುರೀಂಶ್ರೇಷ್ಠಾಂನಿರ್ಮಿತಾಂಮಯಮಾಯಯಾ ।
ಸೌಧಾಟ್ಟಾಲಸಮಾಕೀರ್ಣಾಂತೋರಣೈರುಪಶೋಭಿತಾಂ ॥೩೩॥

ತಾ॥ ಹೀಗೆ ಮಹಾ ಮಾಯಾವಿಯಾದ ಮಯನಿಂದ ನಿರ್ಮಿಸಲ್ಪಟ್ಟದ್ದಾಗಿ ಸಕಲ ಸೌವರ್ಣಂಗಳಿಂದ ಕೂಡಿದ ಸೌಧಗಳಿಂದಲೂ ಅಪರಂಜಿಯಿಂದ ನಿರ್ಮಿಸಲ್ಪಟ್ಟ ರತ್ನಖಚಿತವಾದ ಬುರುಜುಗಳಿಂದಲೂ, ನೇತ್ರಾನಂದಕರವಾದ ತೋರಣಗಳಿಂದಲೂ ಆ ಪಟ್ಟಣವು ಶೋಭಿಸುತ್ತಿದ್ದಿತು ॥೩೩॥

ಯಂತ್ರಧ್ವಜವತೀಂಗುಪ್ತಾಂಶುಭಾಂಭೋಗವತೀಮಿವ ।
ಮೇಸಿಕೃತಾರ್ಥಮಾತ್ಮಾನಂತೃಣೀಕೃತಜಗತ್ರಯಂ ॥೩೪॥

ತಾ॥ ವಿವಿಧ ಯಂತ್ರಗಳಿಂದಲೂ ಜಲಸಮೃದ್ಧವಾದ ಆಗಳ್ತೆಗಳಿಂದಲೂ ಒಡಗೂಡಿ ಭೂಮಂಡಲದಲ್ಲಿ ಇದೇ ಸರ್ವೋತ್ತಮವೆಂಬಂತೆ ಅತ್ಯುನ್ನತವಾದ ಧ್ವಜಗಳಿಂದ ವ್ಯಾಪ್ತವಾಗಿಯೂ ಶುಭಕರವಾದ ಭೋಗವತಿಪುರದಂತೆ ಇರುವ ಆ ಪುರವನ್ನು ನೋಡಿ ಆ ಜಾನುಮಂಡಲನು ಸಂತೋಷಚಿತ್ತನಾಗಿ ಆ ಪಟ್ಟಣದಲ್ಲಿ ವಾಸಿಸುತ್ತಾ ಈ ಲೋಕತ್ರಯವನ್ನು ತೃಣವಾಗಿ ಭಾವಿಸಿ ತಾನೇ ಕೃತಾರ್ಥನೆಂದು ಕೊಂಡನು ॥೩೪॥

ತದಾತೇದಾನವಾಸ್ಸರ್ವೇಮುಧೃತಾಸ್ಸುರಭೀತಿತಃ ।
ತೇಷ್ಯಾಜಗ್ಮುರ್ವರಂಶೃತ್ವಾಜಾನುಮಂಡಲಕಸ್ಯತತ್ ॥೩೫॥

ತಾ॥ ಪೂರ್ವದಲ್ಲಿ ದೇವತೆಗಳಿಂದ ಭಗ್ನದರ್ಪರಾಗಿ ಭೀತಿಯಿಂದ ಔತು ಕೊಂಡಿದ್ದ ಕ್ರೂರರೂ ದುಷ್ಕರ್ಮಿಗಳೂ ಪಾಪಾತ್ಮರೂ ದುಷ್ಟರೂ ಆದ ಯಾವ ಯಾವ ರಾಕ್ಷಸರಿದ್ದರೋ ಆ ರಾಕ್ಷಸರೆಲ್ಲರೂ ಈಗ ಜಾನುಮಂಡಲನಿಗೆ ಲಬ್ಧವಾಗಿರುವ ವರವನ್ನು ಕೇಳಿ ಆತನ ಬಳಿ ನಿರ್ಭೀತಿಯಿಂದ ಜೀವಿಸಬಹುದೆಂದು ಆತನಲ್ಲಿಗೆ ಬಂದು ಸೇರಿದರು ॥೩೫॥

ಸಮಾಗತೇಷುದೈತ್ಯೇಷುತ್ರ್ಯೈರುಕ್ತೋಜಾನುಮಂಡಲಃ ।
ಪ್ರಜಂಘಸ್ಯಸುತಾಂಭಾರ್ಯಾಂಮಿತ್ರವಿಂದಾಮವಾಪಸಃ ॥೩೬॥

ತಾ॥ ಹೀಗೆ ಮಹಾ ಬಲವಂತರಾದ ರಾಕ್ಷಸರೆಲ್ಲರೂ ತನ್ನ ಬಳಿ ಬಂದು ಸೇರಿದ ಬಳಿಕ ಜಾನುಮಂಡಲನು ಆ ರಾಕ್ಷಸರೊಡಗೂಡಿ ಚೆನ್ನಾಗಿ ಆಲೋಚಿಸಿ ಪ್ರಜಂಘನ ಪುತ್ರಿಯಾದ ಮಹಾ ರೂಪವತಿಯಾದ ಮಿತ್ರವಿಂದೆ ಎಂಬುವಳನ್ನು ಭಾರ್ಯೆಯನ್ನಾಗಿ ಮಾಡಿಕೊಂಡನು ॥೩೬॥

ತಾಂಚಾರುನೇತ್ರಾಂಶುಭಲಕ್ಷಣಾನ್ವಿತಾಂಸುನಾಸಿಕಾಂ ।
ಕುಂತಲಶೋಭಿತಾನನಾಂವಿನೋದಯಂತಿಪರಮೇ ॥೩೭॥
ಣತೇಜಸಾಲಬ್ಧ್ವಾತದಾಮಾನಸಮಾಧಿಪರಾಜಹಾ ।
ತಸ್ಯಪುತ್ರಾಸ್ಸಮುಭರ್ವಸಪ್ತಸಪ್ತಾರ್ತಿತೇಜಸಃ ॥೩೮॥
ಪಿತುಸ್ಸಮಾನವೀರ್ಯಾಶ್ಚಪ್ರಖ್ಯಾತಾಶ್ಚಪರಾಕ್ರಮೈಃ ।

ತಾ॥ ಸಮೀಚೀನವಾದ ನೇತ್ರಗಳುಳ್ಳವಳಾಗಿಯೂ ಸಲಕ್ಷಣ ಲಕ್ಷಿತೆಯಾಗಿಯೂ ಸಂಪಿಗೆಯ ಮೊಗ್ಗಿನ ಹಾಗೆ ಸುಕುಮಾರವಾಗಿ ಕಂಗೊಳಿಸುವ ನಾಸಿಕವುಳ್ಳವಳಾಗಿಯೂ ಮುಂಗುರುಳುಗಳಿಂದ ಇಂಪಾಗಿ ತೋರುವ ಮೊಗದಾವರೆವುಳ್ಳವಳಾಗಿಯೂ ನೋಡಿದಾಕ್ಷಣವೇ ಮೋಹಿಸುವಂತಾ ಮಹಾ ರೂಪವತಿಯಾಗಿ ಮದನನ ರಾಣಿಯಾದ ರತೀದೇವಿಯ ಹಾಗೆ ದರ್ಶನಮಾತ್ರದಿಂದಲೇ ಮದನನ ಭಾದೆಯನ್ನುಂಟುಮಾಡುವಂಥಾ ಆ ಮಿತ್ರವಿಂದೆಯ ಸಂಗದಲ್ಲಿ ಜಾನುಮಂಡಲನು ಅಗ್ನಿಯಂತೆ ಪ್ರಕಾಶಮಾನರಾಗಿಯೂ ಸೂರ್ಯಸಮಾನಪರಾಕ್ರಮವುಳ್ಳವರಾಗಿಯೂ ಲೋಕವಿಖ್ಯಾತರಾಗಿರುವಂತಾ ಏಳು ಮಕ್ಕಳನ್ನು ಪಡೆದನು ॥೩೭॥೩೮॥

ಇತಿ ಬ್ರಹ್ಮಾಂಡಪುರಾಣೇವರ್ಣವೈಭವಖಾಂಡೇಬ್ರಹ್ಮನಾರದಸಂವಾದೇ। ಜಾನುಮಂಡಲವರಪ್ರದಾನಂನಾಮಪಂಚಮೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ಬ್ರಹ್ಮ ನಾರದ ಸಂವಾದದಲ್ಲಿ ವರ್ಣವೈಭವ ಖಂಡದಲ್ಲಿ ಜಾನುಮಂಡಲನಿಗೆ ವರಪ್ರಧಾನವೆಂಬ ಐದನೇ ಅಧ್ಯಾಯವು ಸಮಾಪ್ತವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

–: ಆರನೆಯ ಅಧ್ಯಾಯ :–

ದೇವೇಂದ್ರಾದಿಗಳಿಗೆ ಭಯ

ಸುಮನಸ್ಕ ಉವಾಚ :–

ತತಃಪರಂಕಿಂಕೃತವಾನ್ ರಾಕ್ಷಸಃ ಪಿಶಿತಾಶನಃ ।
ತತ್ಸರ್ವಂಬ್ರೂಹಿವಿಸ್ತಾರಾತ್ ಶ್ರೋತುಕಾಮೋಽಸಿಗೌತಮ ॥೧॥

ತಾ॥ ಎಲೈ ಪೂಜ್ಯನಾದ ಗೌತಮ ಮುನೀಂದ್ರನೇ! ತರುವಾಯ ಮಾಂಸಾಹಾರಿಯಾದ ಆ ಜಾನುಮಂಡಲನೆಂಬ ರಾಕ್ಷಸನು ಏನು ಮಾಡಿದನು, ಎಂಬುದನು ಕೇಳಬೇಕೆಂಬ ಇಚ್ಛೆ ನನಗೆ ಬಹುವಾಗಿದೆ ಆದ್ದರಿಂದ ಅದನ್ನೆಲ್ಲಾ ವಿಸ್ತಾರವಾಗಿ ನಿರೂಪಿಸಬೇಕೆಂದು ಪ್ರಾರ್ಥಿಸಿದ ಆ ಸುಮನಸ್ಕನೊಡನೆ ಮಹಾತ್ಮನಾದ ಗೌತಮ ಮುನಿಯು ಹೇಳಿದ್ದೇನೆಂದರೆ ॥೧॥

ಗೌತಮ ಉವಾಚ :–

ವದಾಮಿಶೃಣುರಾಜರ್ಷೇವೃತ್ತಾಂತಸ್ಯದುರಾತ್ಮನಃ ।
ಬ್ರಹ್ಮಣಾಥವರಂಪ್ರಾಪ್ಯರಾಕ್ಷಸೋಽಯುದ್ಧದುರ್ಮದಃ ॥೨॥

ತಾ॥ ಎಲೈ ರಾಜರ್ಷಿಯಾದ ಸುಮನಸ್ಕನೇ ಕೇಳು ಆ ಜಾನುಮಂಡಲ ರಾಕ್ಷಸನ ಮುಂದಿನ ಕಥೆಯನ್ನು ಅವನು ಬ್ರಹ್ಮನಿಂದ ವರವನ್ನು ಪಡೆದು ಮತ್ತಿನಿಂದ ತನ್ನೊಡನೆ ಸೇರಿದ ದುಷ್ಟರಾಕ್ಷಸರ ಭೋಧೆಯಿಂದಲೂ ತಾಯಿಯಾದ ದಿತಿದೇವಿಯ ಆಶಯದಿಂದಲೂ ದೇವತೆಗಳ ಮೇಲೆ ದುರುದ್ದೇಶ್ಯದಿಂದ ದುರಾತ್ಮನಾಗಿ ಯುದ್ಧ ಪ್ರವೃತ್ತನಾದನು ॥೨॥

ವಿಜಿತ್ಯಸಹಸಾಸರ್ವಾ್ ದಿಕ್ಪಾಲಾನಮಿತಪ್ರಭಾನ್ ।
ಪ್ರಾಪ್ಯಸ್ವರ್ಗಮಥಕ್ರೂರಃಪತಿಂತಸ್ಯವಿಜಿತ್ಯಚ ॥೩॥

ತಾ॥ ಹೀಗೆ ಯುದ್ಧಮದೋನ್ಮತ್ತನಾದ ಆ ಜಾನುಮಂಡಲನು ಕ್ರೂರನಾಗಿ ದಿಕ್ಪಾಲಕರನ್ನು ತನ್ನ ಬಲದಿಂದ ಸೋಲಿಸಿ ದೇವಲೋಕವನ್ನು ಹೊಂದಬೇಕೆಂದು ಸ್ವರ್ಗದಲ್ಲೂ ಸಹ ದೇವತೆಗಳನ್ನು ಸದೆಬಡಿದು ಇಂದ್ರನನ್ನು ಸೋಲಿಸಿ ಸ್ವರ್ಗವನ್ನಾಕ್ರಮಿಸಿದನು ॥೩॥

ಆಕ್ರಮ್ಯಭುವನಂಸರ್ವಂತೀತಯಾಮಾಸಸರ್ವತಃ ।
ಏವಂಸ್ಥಿತೇಚದೈತ್ಯೇಂದ್ರೋದೇವಾಇಂದ್ರಪುರೋಗಮಾಃ ॥೪॥

ತಾ॥ ಸಕಲ ಲೋಕಗಳನ್ನು ವಶಪಡಿಸಿಕೊಂಡು ಎಲ್ಲರನ್ನೂ ಕ್ರೂರವಾಗಿ ಹಿಂಸಿಸುತ್ತಾ ದುರ್ಮಾರ್ಗಪ್ರವರ್ತಕನಾಗಲು ಇಂದ್ರಾದಿದೇವತೆಗಳೂ ಸಿದ್ದರೂ ಯಕ್ಷ ಗಂಧರ್ವಕಿನ್ನರರೂ ಋಷಿಗಳೆಲ್ಲರೂ ಆ ದೈತ್ಯನಿಂದ ಹಿಂಸಿಸಲ್ಪಟ್ಟವರಾಗಿ ಬ್ರಹ್ಮನನ್ನು ಶರಣು ಹೊಂದಿದರು ॥೪॥

ದೇವತೆಗಳಿಂದ ಬ್ರಹ್ಮನಸ್ತುತಿ

ಲೋಕನಾಥನಮಸ್ತೇಸ್ತುಸೃಷ್ಟಿಸ್ಥಿತ್ಯಂತಕಾರಣ ।
ಪಿತಾಭವಸಿಲೋಕಾನಾಂಮಾತಾಸಿಕಮಲಾಸನ ॥೫॥

ತಾ॥ ದೇವಗಣ ಋಷಿಗಣಗಳೆಲ್ಲರೂ ಸೇರಿ ಬ್ರಹ್ಮನನ್ನು ಈ ಪ್ರಕಾರವಾಗಿ ಸ್ತೋತ್ರಮಾಡಿದರು. ಲೋಕನಾಥನೂ ಸೃಷ್ಟಿ, ಸ್ಥಿತಿ, ಲಯಕರ್ತನೂ ಕಮಲಾಸನನೂ ಲೋಕದಲ್ಲಿರುವ ಸಕಲ ಪ್ರಾಣಿಗಳಿಗೆ ತಂದೆಯೂ ತಾಯಿಯೂ ಆದ ನಿನಗೆ ನಮಸ್ಕಾರವು ॥೫॥

ತತ್ಪ್ರಸಾದೇನಭೂತಾನಿಜೀವಂತಿಭುವನತ್ರಯೇ ।
ಇದಾನೀಂಭವತಾಲಬ್ಧವರದಾನಸ್ಸರಾಕ್ಷಸಃ ॥೬॥

ತಾ॥ ಎಲೈ ಪಿತಾಮಹನೇ! ಮೂರು ಲೋಕಗಳಲ್ಲಿರುವ ಸಕಲ ಜೀವರಾಶಿ ಗಳಿಗೆ ಸೇರಿದ ಪ್ರಾಣಿಗಳೆಲ್ಲಾ ನಿನ್ನ ಅನುಗ್ರಹದಿಂದ ಜೀವಿಸುತ್ತಿರುವವು. ನಿನ್ನಿಂದ ವರವನ್ನು ಪಡೆದ ಆ ಜಾನುಮಂಡಲ ರಾಕ್ಷಸನು ॥೬॥

ಗರ್ವಿತೋಬಲಸಂಪನ್ನೋದದಾಹಭುವನತ್ರಯಂ ।
ವಿಜಿತ್ಯಚಸುರಾನಸ್ಮಾನ್ ದಿಕ್ಪಾಲಾನಮಿತಪ್ರಭಾನ್ ॥೭॥

ತಾ॥ ಮದೋನ್ಮತ್ತನಾಗಿ ಬಲಸಂಪನ್ನನಾಗಿ ನಿನ್ನ ವರಪ್ರಧಾನದಿಂದ ದುರ್ಮಾರ್ಗಪ್ರವೃತ್ತನಾಗಿ ಕ್ರೂರಿಯಾಗಿ ದಿಕ್ಪಾಲಕರನ್ನೂ ದೇವೇಂದ್ರನಾದ ನನ್ನನ್ನೂ ಗೆದ್ದು ಗರ್ವದಿಂದ ಮೂರು ಲೋಕಗಳನ್ನು ದಹಿಸುತ್ತಾ ಲೋಕಕಂಟಕ ನಾಗಿರುವನು ॥೭॥

ಆಕ್ರಮ್ಯಸರ್ವಲೋಕಾಶ್ಚಬಲವಾನ್ ರಾಕ್ಷಸೋತ್ತಮಃ ।
ಯಥೇಷ್ಟಂಸುರನಾಥಸ್ಯಪದಂಭುಜ್ಕ್ತೇಸುರೋತ್ತಮಃ ॥೮॥

ತಾ॥ ಎಲೈ ಸುರಶ್ರೇಷ್ಠನಾದ ಪಿತಾಮಹನೇ! ಬಲಶಾಲಿಯಾದ ಆ ರಾಕ್ಷಸೋತ್ತಮನು ಸಕಲ ಲೋಕಗಳನ್ನೂ ಆಕ್ರಮಿಸಿಕೊಂಡು ಇಂದ್ರಪದವಿಯನ್ನೂ ಯಥೇಚ್ಛವಾಗಿ ತಾನೇ ಅನುಭವಿಸುತ್ತಿರುವನು ॥೮॥

ವಯಂತಸ್ಯಪುರಃಸ್ಥಾತುಂನಶಕ್ತಾಸ್ತ್ವತ್ಪ್ರಸಾದತಃ ।
ರಕ್ಷಸಾಪೀಡಿತಾಸ್ತೇದ್ಯಪ್ರಾಪ್ತಾಸ್ತ್ವತ್ಪಾದಪಂಕಜಂ ॥೯॥

ತಾ॥ ಎಲೈ ವರಪ್ರದನಾದ ಪಿತಾಮಹನೇ ! ನಿನ್ನ ಅನುಗ್ರಹಕ್ಕೆ ಪಾತ್ರನಾಗಿ ನಿನ್ನಿಂದ ವರವನ್ನು ಹೊಂದಿರುವ ಆ ಜಾನುಮಂಡಲ ರಾಕ್ಷಸನಿಂದ ಹಿಂಸೆಯನ್ನು ಅನುಭವಿಸಿ ಅವನೆದುರಿಗೆ ನಿಂತು ಯುದ್ಧಮಾಡಲು ಶಕ್ತಿ ಇಲ್ಲದೆ ಈಗ ನಿನ್ನ ಪಾದ ಕಮಲಗಳನಾಶ್ರಯಿಸಿದ್ದೇವೆ ॥೯॥

ಭಯಮಸ್ಮಾಕಮದ್ಯೈವಭೇತ್ತುಮರ್ಹಸಿಮತ್ಪ್ರಭೋ ।
ಇತ್ಯೇವಸ್ತುವತೋದೇವಾರ್ ಆಲೋಕ್ಯಕಮಲಾಸನಃ ॥೧೦॥

ತಾ॥ ಮೂರು ಲೋಕಗಳಿಗೆ ಒಡೆಯನಾದ ಕಮಲಾಸನನೇ ! ನಮಗೆ ಪ್ರಾಪ್ತ ವಾಗಿರುವ ಭಯವನ್ನು ಈಗಲೇ ಹೋಗಲಾಡಿಸುವವನಾಗು ಎಂದು ದೇವೇಂದ್ರನೇ ಮೊದಲಾದ ಆ ದೇವತೆಗಳಾದಿಯಾಗಿ ಸರ್ವರೂ ಸ್ತುತಿಸಿದರು ॥೧೦॥

ಜಹಾದಮಧುರಂವಾಕ್ಯಂಮೇಘಗಂಭೀರಯಾಗಿರಾ ।
ಶೃಣುಧ್ವಂತ್ರಿದಶಾಸ್ಸರ್ವೇಭಯವಾರಣಕಾರಣಂ ॥೧೧॥
ಮಯಾಕರ್ತುಮಶಕ್ಯಂತದ್ರಾಕ್ಷಸಾಧಿಪಮಾಶಿಣಂ ।

ತಾ॥ ಹೀಗೆ ಪ್ರಾರ್ಥಿಸಿದ ದೇವತೆಗಳನ್ನು ಕಂಡು ಕಮಲ ಸಂಭವನಾದ ಬ್ರಹ್ಮನು ಮೇಘಧ್ವನಿಯಂತೆ ಗಂಭೀರವಾದ ಮತ್ತು ಮಧುರವಾದ ವಾಕ್ಯಗಳನ್ನು ಹೇಳಿದನು ದೇವತೆಗಳಿರಾ ! ಆ ರಾಕ್ಷಸಾಧಿಪನ ಸಂಹಾರವನ್ನು ಮತ್ತು ನಿಮ್ಮಗಳ ಭಯ ನಿವಾರಣೆಯನ್ನು ಮಾಡಲು ನನ್ನಿಂದ ಆಗಲಾರದು ॥೧೧॥

ಬ್ರಹ್ಮಾದಿದೇವತೆಗಳಿಂದ ವಿಷ್ಣುಸ್ತುತಿ

ಪ್ರಾರ್ಥಯಾಮೋವಯಂಸರ್ವೇಜನಾರ್ಧನಮರಿಂದಮಂ ।
ಇತ್ಯುಕ್ತ್ವಾದೇವತಾಃಸರ್ವಾಃಬ್ರಹ್ಮಲೋಕಪಿತಾಮಹಃ ॥೧೨॥

ತಾ॥ ಬ್ರಹ್ಮದೇವನು ಸಕಲ ದೇವತೆಗಳನ್ನೂ ಋಷಿಗಳನ್ನೂ ನೋಡಿ ಈ ಕಾರ್ಯವು ಶತ್ರುಸಂಹಾರಕನಾದ ಮಹಾವಿಷ್ಣುವಿನಿಂದ ಸಾಧ್ಯವೇ ಹೊರತು ನನ್ನಿಂದಾಗ ದೆಂದು ಹೇಳಿ ಅವರೊಡಗೂಡಿ ವೈಕುಂಠಕ್ಕೆ ಬಂದು ಸೇರಿದನು ॥೧೨॥

ವೈಕುಂಠಂತತ್ರವಿಶ್ಯಾಥವಿಷ್ಣುಂಲೋಕಗುರುಂಪ್ರಭುಂ ।
ಲಕ್ಷ್ಮೀಕಾಂತಂಮಹಾಮೂರ್ತಿಂಸುತ್ವಾನತ್ವಾಪುನಃಪುನಃ ॥೧೩॥

ತಾ॥ ಸರ್ವಮಂಗಳದಾಯಕಳಾದ ಶ್ರೀ ಲಕ್ಷ್ಮೀದೇವಿಗೆ ಪತಿಯಾಗಿಯೂ ವೈಕುಂಠಾಧಿಪತಿಯಾಗಿಯೂ ಸರ್ವಲೋಕಗಳಿಗೂ ಗುರುವಾಗಿಯೂ ಸೃಷ್ಟಿ ಸ್ಥಿತಿ ಲಯ

ಗಳಿಗೆ ಮೂಲಭೂತನಾಗಿ ವಿಶ್ವವಿಖ್ಯಾತ ಪರಮಪುರುಷನಾಗಿರುವ ಶ್ರೀಹರಿಯನ್ನು ದೇವದೇವನಾದ ಬ್ರಹ್ಮದೇವನು ವೈಕುಂಠಪತಿಯಾದ ವಿಷ್ಣುವನ್ನು ಈ ರೀತಿಯಾಗಿ ಪ್ರಾರ್ಥಿಸಿದನು ॥೧೩॥

ಭೋಃಸ್ವಾಮಿನ್ ಶೃಣುಮದ್ವಾಕ್ಯಂವಿಶದಂಭಯಸಂಯುತಂ ।
ದಾನವೇಂದ್ರೋಜಾನುಮಾಂಶ್ಚ ಸರ್ವಾನ್ ಧರ್ಷಯತಸ್ಸದಾ ॥೧೪॥

ತಾ॥ ಹೀಗೆ ಪ್ರಾರ್ಥಿಸಿದನಂತರ ಬ್ರಹ್ಮನು ಸ್ವಾಮಿಯೇ ಭಯಗ್ರಸ್ತನಾದ ನನ್ನ ವಾಕ್ಯಗಳನ್ನು ಲಾಲಿಸುವವನಾಗು, ದಾನವೇಂದ್ರನಾದ ಜಾನುಮಂಡಲನು ನನ್ನಿಂದ ವರವನ್ನು ಹೊಂದಿ ಸಕಲ ದೇವತೆಗಳಿಗೂ ಅವಧ್ಯನಾಗಿ ಸಕಲ ಲೋಕಪಾಲಕರನ್ನೂ ಪೀಡಿಸುತ್ತಿರುವನು ॥೧೪॥

ನಪಶ್ಯಾಮೋವಧಾಯಶುತ್ವಾವಿನಾಕಾರಣಂಪ್ರಭೋ ।
ಇತಿಶೃತ್ವಾವಚಸ್ತೇಷಾಂಜಗಾದಮಧುಸೂದನಃ ॥೧೫॥

ತಾ॥ ಈ ರೀತಿಯಾಗಿ ಸಕಲ ಜಗತ್ತನ್ನೂ ಭಾಧಿಸುತ್ತಿರುವ ಆ ರಾಕ್ಷಸನನ್ನು ಸಕಲ ರಾಕ್ಷಸ ಸಂಹಾರಿಯಾದ ಮಧುಸೂದನನಾಗಿರುವ ನೀನು ನಮ್ಮಿಂದ ವಧಿಸಲ ಸಾಧ್ಯನಾದ ಆ ದೈತ್ಯನನ್ನು ವಧಿಸಿ ನಮ್ಮಗಳೆಲ್ಲರಿಗುಂಟಾಗಿರುವ ಭಯವನ್ನು ಹೋಗ ಲಾಡಿಸಬೇಕೆಂದು ಪ್ರಾರ್ಥಿಸಿದನು ॥೧೫॥

ಮಧುಸೂದನ ಉವಾಚ :-

ಹೇಬ್ರಹ್ಮನ್ ಶೃಣುವಕ್ಷ್ಯಾಮಿತದುಪಾಯಂವಿಚಾರ್ಯತಾ ।
ಮೃತ್ಯಂಜಯೇನನಿಹಿತೋಭವಿತಾಜಾನುಮಂಡಲಃ ॥೧೬॥

ತಾ॥ ಎಲೈ ಬ್ರಹ್ಮನೇ ಕೇಳು ! ಆ ಜಾನುಮಂಡಲನನ್ನು ವಧಿಸಲು ಸರ್ವ ಮೃತ್ಯುಕಾರಕನಾದ ಆ ಮೃತ್ಯಂಜಯನೇ ತಕ್ಕವನು ಆದ್ದರಿಂದ ಈ ಕಾರ್ಯಕ್ಕಾಗಿ ಪರಮೇಶ್ವರನನ್ನು ಪ್ರೇರೇಪಿಸಿದರೆ ಆ ಪರಮೇಷ್ಟಿಯು ಆ ಅಸುರನ ಸಂಹಾರಕ್ಕೆ ತಕ್ಕ ಉಪಾಯವನ್ನು ತಿಳಿಸುವನು ॥೧೬॥

ಬ್ರಹ್ಮ ವಿಷ್ಣುಗಳಿಂದ ಈಶ್ವರನ ಸ್ತುತಿ

ಇತ್ಯುಕ್ತ್ವಾಮುನಿಭಿಸ್ಸಾರ್ಧಂಯಯೌಕೈಲಾಸಪರ್ವತಂ ।
ತಮೀಶಾನಂಭೂತನಾಥಂಸ್ತುತಿಂಕರ್ತುಂಮುರಾಂತಕಃ ॥೧೭॥
ತಥಾದಿದೇವತಂದೇವೇಶಂನೀಲಲೋಹಿತಮೀಶ್ವರಂ ।
ಭಜಾಮ್ಯಶ್ಶರಣಂಸರ್ವೇಇತ್ಯುಕ್ತ್ವೋರಗಭೂಷಣಂ ॥೧೮॥

ತಾ॥ ಹೀಗೆಂದು ತಿಳಿಸಿ ಬ್ರಹ್ಮನೇ ಮೊದಲಾದ ದೇವತೆಗಳಿಂದಲೂ ಮುನೀಶ್ವರರನ್ನು ಕೂಡಿಕೊಂಡು ಮಹಾವಿಷ್ಣುವು ಕೈಲಾಸಪರ್ವತಕ್ಕೆ ಒಡೆಯನೂ ಆದಿ

ದೇವನೂ ಭೂತಗಣಗಳಿಗೆ ನಾಥನೂ ದೇವತೆಗಳಿಗೆ ಪ್ರಭುವೂ ನೀಲಲೋಹಿತನೂ ಸರ್ಪಭೂಷಣನೂ ಭವರೋಗ ನಿವಾರಣನೂ ಸಕಲ ಜಗತ್ಕರ್ತನೂ ಆದ ಪರಮೇಶ್ವರನ ಸಮೀಪವನ್ನು ಹೊಂದಿ ಎಲ್ಲರೂ ನಮಸ್ಕರಿಸಿದರು ॥೧೭॥೧೮॥

ತತ್ರದೃಷ್ಟ್ವಾಮಹಾದೇವಂಪ್ರಣಮ್ಯಸುರಸತ್ತಮಾಃ ।
ವಿಸ್ಮಯೈರನ್ವಿತಾಸ್ಸರ್ವೇಸಂಸ್ತೋತುಂಶಿವಮುದ್ಯತಾಃ ॥೧೯॥

ತಾ॥ ಹೀಗೆ ನಮಸ್ಕರಿಸುತ್ತಿರುವ ದೇವತೆಗಳನ್ನೂ ಋಷಿಗಳನ್ನೂ ಬ್ರಹ್ಮ ವಿಷ್ಣುಗಳನ್ನೂ ಪ್ರಣವಸ್ವರೂಪನಾದ ಪರಮೇಶ್ವರನು ನೋಡಲು ಆಗ ಸಕಲ ದೇವತೆಗಳೂ ಋಷಿಗಳೂ ಸೇರಿ ಓಂಕಾರರೂಪನಾದ ಪರಮೇಶ್ವರನನ್ನು ಸ್ತುತಿಸಲು ಪ್ರಾರಂಭಿಸಿದರು ॥೧೯॥

ಬಭೂವುರ್ಭಾರತೀನಾಥಸಹಿತಾಸ್ಸರ್ವದೇವತಾಃ ।
ದೇವದೇವನಮಸ್ತೇಸ್ತುನಮಸ್ತೋಭಕ್ತವತ್ಸಲ ॥೨೦॥

ತಾ॥ ಭಕ್ತವತ್ಸಲನಾದ ಪರಮೇಶ್ವನನ್ನು ನೋಡಿ ಸ್ತುತಿಸಲು ನಿಂತಿದ್ದ ಭಾರತೀ ರಮಣನಾದ ಬ್ರಹ್ಮದೇವನು ವಿಸ್ಮಯಗೊಂಡವನಾಗಿ ದೇವತೆಗಳ ಕೂಡ ಮಹಾದೇವನನ್ನು ಸ್ತೋತ್ರಮಾಡಲುಪಕ್ರಮಿಸಿದನು ॥೨೦॥

ನಮಸ್ತೇಪಾರ್ವತೀನಾಥನಮಸ್ತೇಲೋಕಶಂಕರ ।
ಕಾಲಾಂತಕನಮಸ್ತೇಸ್ತುಭಕ್ತಾಭೀಷ್ಟವರಪ್ರದ ॥೨೧॥

ತಾ॥ ಎಲೈ ದೇವದೇವನೆ ! ನಿನಗೆ ನಮಸ್ಕಾರ ಭಕ್ತವತ್ಸಲನೇ ನಿನಗೆ ನಮಸ್ಕಾರ ಪಾರ್ವತೀರಮಣನಾಗಿಯೂ ಲೋಕಗಳಿಗೆಲ್ಲಾ ಮಂಗಳವನ್ನುಂಟುಮಾಡುವವನಾಗಿಯೂ ಇರುವ ಮಂಗಳಪ್ರದನಾದ ಸ್ವಾಮಿಯೇ ನಿನಗೆ ನಮಸ್ಕಾರವು ಕಾಲಾಂತಕನಾಗಿಯೂ ಭಕ್ತರ ಅಭೀಷ್ಟವನ್ನು ನೆರವೇರಿಸುವವನಾಗಿಯೂ ಇರುವ ಪರಮಾತ್ಮನೇ ನಿನಗೆ ನಮಸ್ಕಾರವು ॥೨೧॥

ನಮಸ್ತೇವೃಷಭಾರೂಢನಮಸ್ತೇನೀಲಲೋಹಿತ ।
ನಮಸ್ತುಭ್ಯಂಮಹಾದೇವನಮಸ್ತೇತ್ರಿಪುರಾಂತಕ ॥೨೨॥
ತ್ರ್ಯಂಬಕಾಯನಸ್ತೋಸ್ತುನಮಸ್ತೇಜಗತಃಪ್ರಭೋ ।
ವ್ಯೋಮಕೇಶನಮಸ್ತೇಸ್ತುಗಜಾಸುರಹರಪ್ರಭೋ ॥೨೩॥

ತಾ॥ ವೃಷಭಾರೂಢನಾಗಿಯೂ ನೀಲಲೋಹಿತನಾಗಿಯೂ ತ್ರಿಪುರಾಸುರರನ್ನು ಸಂಹಾರಮಾಡಿದ ಮಹಾದೇವನೇ ನಿನಗೆ ನಮಸ್ಕಾರ, ತ್ರಿನೇತ್ರಧರನಾಗಿಯೂ ಜಗದೊಡೆಯನಾಗಿಯೂ ಗಜಾಸುರನನ್ನು ಸಂಹರಿಸಿದ. ವ್ಯೋಮಕೇಶನಾದ ಸ್ವಾಮಿಯೇ ನಿನಗೆ ನಮಸ್ಕಾರ ನಮಸ್ಕಾರ ॥೨೨॥೨೩॥

ಶೂಲಪಾಣೇನಮಸ್ತೇಸ್ತು ನಾಗಾಭರಣಭೂಷಿತ ।
ಇತ್ಯೇವಂಬಹುಭಿರ್ವಾಕ್ಯೈಃಸ್ತುತ್ವಾವಿಷ್ಣು ಪುರೋಗಮಾಃ ॥೨೪॥
ಸಂಸ್ತುತ್ಯಪಾರ್ವತೀನಾಥಂಪುರತಸ್ತಸ್ಯಸಂಸ್ಥಿತಾಃ ।
ತಾನ್ವೀಕ್ಷ್ಯಸಹಸಾಬ್ರಹ್ಮಸಹಿತಾನ್ ಲೋಕಪಾಲಕಾನ್ । ॥೨೫॥
ಪ್ರೀತ್ಯಾಗಂಭೀರಯಾವಾಕ್ಯಮುದಾಚತ್ರಿಪುರಾಂತಕ

ತಾ॥ ವಿಷವನ್ನು ಹರಣಮಾಡಿ. ಸರ್ಪಭೂಷಣನಾಗಿ ತ್ರಿಗುಣಾತ್ಮಕ ಚಿನ್ಹೆಯಾದ ಶೂಲವನ್ನು ಧರಿಸಿದವನಾದ ಮಹಾದೇವನೇ ಎಂದು ನಾನಾ ವಿಧವಾಗಿ ವಿಷ್ಣು ಆದಿದೇವತೆಗಳೆಲ್ಲರೂ ಪಾರ್ವತೀಸಹಿತನಾದ ಶಿವನನ್ನು ಸ್ತುತಿಸುತ್ತಾ ನಿಂತಿರಲು ಆ ಚಂದ್ರಧರನು ಸುಪ್ರೀತನಾಗಿ ಬ್ರಹ್ಮಾದಿಗಳೊಡನೆ ಗಂಭೀರವಾಕ್ಯಗಳಿಂದ ಉತ್ತರವನ್ನು ಕೊಡಲುಪಕ್ರಮಿಸಿದನು ॥೨೪॥೨೫॥

ಕಿಮರ್ಥಂಭಯಸಂಭ್ರಾಂತಾಃಯೂಯಂಬ್ರಹ್ಮಪುರೋಗಮಾಃ॥೨೬॥
ಕಸ್ಮಾದಿದಂಭಯಂಪ್ರಾಪ್ತಂಯುಷ್ಮಾಕಂಸುರಸತ್ತಮಾಃ ।
ತಂಚಾಮಿಂಸಹಸಾಯುದ್ಧೇನಿಹನಿಷ್ಯಾಮಿಸಾಂಪ್ರತಂ ॥೨೭॥
ಇತ್ಯುಕ್ತ್ವಾವ್ಯೋಮಕೇಶೇನಸಂತುಷ್ಟಾಸ್ಸುರಸತ್ತಮಾಃ ।
ಜನಾರ್ಧನಸಮಾಯುಕ್ತಾಃಪ್ರೋಚುಸ್ಮರಹರಂಪ್ರತಿ ॥೨೮॥

ತಾ॥ ಎಲೈ ಬ್ರಹ್ಮಾದಿದೇವತೆಗಳಿರಾ ! ನೀವೇಕೆ ಇಷ್ಟು ಭಯಭ್ರಾಂತರಾಗಿದ್ದೀರಿ ? ನಿಮ್ಮಗಳಿಗೆ ಯಾವ ಶತ್ರುವಿನಿಂದ ಈ ರೀತಿ ಭಯವುಂಟಾಗಿದೆಯೋ ಆ ಶತ್ರುವನ್ನೀಗಲೇ ಯುದ್ಧದಲ್ಲಿ ಸಂಹರಿಸುತ್ತೇನೆಂದು ಹೇಳಿದ ಪರಶಿವನ ವಾಕ್ಯಗಳಿಗೆ ಸಂತುಷ್ಟರಾದ ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳು ಮನ್ಮಥನನ್ನು ಜಯಿಸಿದ ಮಹಾದೇವನೊಡನೆ ಇಂತೆಂದರು ॥೨೬॥೨೭॥೨೮॥

ಭವತ್ಯಸ್ಮಾಸುಸರ್ವೇಷುತ್ವಪಾನಿಷ್ಟೇತ್ವಯಿಪ್ರಭೋ ।
ಕಾವಾಭೀತಿರಿಹಾಸ್ಮಾಕಂವಿದ್ಯತೇತ್ರಿಪುರಾಂತಕಂ ॥೨೯॥

ತಾ॥ ಎಲೈ ತ್ರಿಪುರಾಂತಕನಾದ ಪ್ರಭುವೇ ಸರ್ವರಕ್ಷಕನಾದ ನೀನು ನಮ್ಮಲ್ಲಿ ಕೃಪೆಯನ್ನಿಟ್ಟಿರುವಾಗ ನಮಗೆ ಭಯವೆಲ್ಲಿಯದು ॥೨೯॥

ತಥಾಪಿಕಿಂಚಿದ್ವಕ್ತವ್ಯಂಇದಾನೀಂಭಯಕಾರಣಂ ।
ರಾಕ್ಷಸಂಕೋಪಿದುಷ್ಟಾತ್ಮಾಜಾನುಮಂಡಲನಾಮಕಃ ॥೩೦॥
ಹಿರಣ್ಯಗರ್ಭಂತಪಸಾದುಸ್ತರೇಣೈವತೋಷಯತ್ ।
ವರಮಸ್ಮಾತ್ಸಸಂಪ್ರಾಪ್ಯಕ್ರೂರಂಲೋಕಭಯಂಕರಂ ॥೩೧॥

ತಾ॥ ಎಲೈ ಸ್ವಾಮಿಯೇ ! ಆದಾಗ್ಯೂ ಈಗ ಒದಗಿರುವ ಭಯಕಾರಣ ಸ್ವಲ್ಪವಿದೆ, ಅದನ್ನು ವಿಜ್ಞಾಪಿಸಿಕೊಳ್ಳುತ್ತೇವೆ. ದುಷ್ಟಾತ್ಮನಾದ ಜಾನುಮಂಡಲನೆಂಬ

ರಾಕ್ಷಸನು ದುಷ್ಕರವಾದ ತಪಸ್ಸನ್ನು ಮಾಡಿ ಬ್ರಹ್ಮನನ್ನು ಸಂತೋಷಪಡಿಸಿ ಯಾರಿಂದಲೂ ಅವಧ್ಯನಾಗಿರುವಂಥಾ ದುಷ್ಕರವಾದ ವರವನ್ನು ಪಡೆದು ಆ ವರಬಲದಿಂದ ಕ್ರೂರಿಯಾಗಿ ಲೋಕಕಂಟಕನಾಗಿರುವನು ।।೩೦।।೩೧।।

ವಿಚಿತ್ವಾಸರ್ವಲೋಕಾಶ್ಚ ಇಂದ್ರಾದೀನ್ ಬಲಗರ್ವಿತಃ ।
ಇಂದ್ರಲೋಕಂಚಸಂಪ್ರಾಪ್ಯಭೀಷಯನ್ ಪಿಶಿತಾಶನಃ ॥೩೨॥

ತಾ॥ ಮಾಂಸ ಭಕ್ಷಕನಾದ ಆ ಜಾನುಮಂಡಲ ರಾಕ್ಷಸನು ಸರ್ವಲೋಕಗಳಿಗೆ ಭಯವನ್ನುಂಟುಮಾಡುತ್ತಾ ದೇವತೆಗಳಾದ ನಮ್ಮೆಲ್ಲರನ್ನು ಓಡಿಸಿ ಸುಖವಾಗಿ ಇಂದ್ರ ಪದವಿಯುನ್ನು ಅನುಭವಿಸುತ್ತಿರುವನು ।।೩೨।।

ಸುಖನ್ಯೆಂದ್ರಪದಂಭುಜ್ಞೋಕ್ತ್ವೇಚ್ಛಾಲ್ಯಸುರಸತ್ತಮಾನ್ ।
ರಕ್ಷಸಾತೇನಸಂಪ್ರಾಪ್ತಭಯಾತ್ತ್ವತ್ಪಾದಪಂಕಜಂ ॥೩೩॥

ತಾ॥ ಹೀಗೆ ನಮ್ಮಗಳೆಲ್ಲರನ್ನೂ ಹಿಂಸಿಸುತ್ತಾ ಇಂದ್ರಪದವಿಯುನ್ನೂ ಸಹ ತಾನೇ ಯಥೇಚ್ಛವಾಗಿ ಅನುಭವಿಸುತ್ತಿರುವ ಆ ರಾಕ್ಷಸನ ಭಾದೆಯನ್ನು ತಾಳಲಾರದೆ ನಾವುಗಳು ತಮ್ಮ ಪಾದಕಮಲಗಳನ್ನು ಆಶ್ರಯಿಸಿದ್ದೇವೆ ।।೩೩।।

ಸಂಪ್ರಾಪ್ತಾನ್ ಭಯವಿಭ್ರಾಂತಾನ್ ಅಸ್ಮಾನ್ ರಕ್ಷತುಮರ್ಹಸಿ ।
ಇತ್ಯೇವದ್ವಚನಂಶ್ರುತ್ವಾಸುರಾಣಾಂಪಾರ್ವತೀಪತಿಃ ॥೩೪॥

ತಾ॥ ಆದ್ದರಿಂದ ಭಯಶೋಕಾದಿಗಳಿಂದ ನೊಂದಿರುವ ನಮ್ಮಗಳನ್ನು ರಕ್ಷಿಸಿ ಕಾಪಾಡಬೇಕೆಂದು ಪ್ರಾರ್ಥಿಸುತ್ತಿರುವ ದೇವತೆಗಳ ವಾಕ್ಯವನ್ನು ಆಲಿಸಿದ ಪಾರ್ವತೀ ಪತಿಯಾದ ಪರಮೇಶ್ವರನು ।।೩೪।।

ವಿಹಸ್ಯಮಧುರಂವಾಕ್ಯಂಪ್ರೋವಾಚಸುದಯಾನ್ವಿತಃ ।
ಮಾಭೈಷಧ್ವಂಮಹಾಭಾಗಾವಧಸ್ತಸ್ಯಕರೋಮ್ಯಹಂ ॥೩೫॥

ತಾ॥ ಪರಮದಯಾನ್ವಿತನಾಗಿ ಮಂದಹಾಸದಿಂದ ಕೂಡಿದ ಮಧುರವಾಕ್ಯಗಳಿಂದ ಎಲೈ ದೇವತೆಗಳಿರಾ ! ನೀವು ಭಯವನ್ನು ತ್ಯಜಿಸುವವರಾಗಿರಿ ಆ ಜಾನುಮಂಡಲನನ್ನು ನಾನು ಸಂಹರಿಸುತ್ತೇನೆಂದು ದೇವತೆಗಳಿಗೆ ಮಹಾದೇವನು ಅಭಯವನ್ನು ನೀಡಿದನು ।।೩೫।।

ಭವತ್ಯಲ್ಪೇನಕಾಲೇನಭವತಾಂಪ್ರೀತಿರುತ್ತಮಾ ।
ಇತ್ಯುಕ್ತ್ವಾಪ್ರೇಷಯಾಮಾಸಮುರಾರೀಂದ್ರಪುರೋಗಮಾನ್ ॥೩೬॥

ತಾ॥ ಎಲೈ ದೇವತೆಗಳಿರಾ ! ಇನ್ನು ಅತ್ಯಲ್ಪಕಾಲದಲ್ಲೇ ನಿಮ್ಮ ಕೋರಿಕೆಯನ್ನು ಈಡೇರಿಸುತ್ತೇನೆಂದು ಪರಮೇಶ್ವರನು ಶ್ರೀಮನ್ನಾರಾಯಣನೇ ಮೊದಲಾದ ಇಂದ್ರಾದಿ ದೇವತೆಗಳನ್ನು ಕಳುಹಿಸಿಕೊಟ್ಟವನಾದನು ।।೩೬।।

ಇತಿ ಶ್ರೀಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮ ನಾರದ ಸಂವಾದೇ ಇಂದ್ರಾದಿ ಭಯನಿವಾರಣೋನಾಮಷಷ್ಠೋಽಧ್ಯಾಯಃ ।

ತಾ॥ ಇಲ್ಲಿಗೆ ಬ್ರಹ್ಮಾಂಡ ಪುರಾಣದ ವರ್ಣವೈಭವಖಂಡದಲ್ಲಿ ಬ್ರಹ್ಮ ನಾರದ ಸಂವಾದದಲ್ಲಿ ಇಂದ್ರಾದಿ ದೇವತೆಗಳ ಭಯ ನಿವಾರಣೆಯೆಂಬ ಆರನೇ ಆಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಏಳನೆಯ ಅಧ್ಯಾಯ :-

ಪೌಂಡರೀಕಯಾಗ ಪ್ರೇರಣೆ

ಸುಮನಸ್ಕ ಉವಾಚ :-

ಗೌತಮತ್ವಾಂಮಹಾಭಾಗಪೃಚ್ಛಾಮಿಮುನಿಸತ್ತಮ ।
ಈಶ್ವರಃಕೇನವಿಧಿನಾರಾಕ್ಷಸಂಘಾತಯಿಷ್ಯತಿ ॥೧॥

ತಾ॥ ಮುನಿಶ್ರೇಷ್ಠನೂ ಮಹಾಭಾಗನೂ ಆದ ಎಲೈ ಗೌತಮಋಷಿಯೇ ! ಆ ಪರಮೇಶ್ವರನು ಜಾನುಮಂಡಲ ರಾಕ್ಷಸನನ್ನು ಯಾವ ವಿಧದಿಂದ ಸಂಹರಿಸಿದನು ಎಂಬುದನ್ನು ಹೇಳಬೇಕೆಂದು ಪ್ರಾರ್ಥಿಸಿದನು ॥೧॥

ಕಿಮುದೀರ್ಯಸುರೇಂದ್ರಾನ್‌ಪ್ರೇಷಯಾಮಾಸತತ್ಪರಃ ।
ಇತ್ಯೇತತ್ಸಂಶಯಂಸೋಽದ್ಯಭಗರ್ವಚ್ಛೇತ್ತುಮರ್ಹಸಿ ॥೨॥

ತಾ॥ ಆ ಪರಮೇಶ್ವರನು ಶ್ರೀಮನ್ನಾರಾಯಣಾದಿ ದೇವೇಂದ್ರಾದಿಗಳಿಗೆ ಏನೆಂದು ಹೇಳಿಕಳುಹಿಸಿದನು ಎಂಬುದರ ನನ್ನ ಸಂಶಯವನು ಋಷಿಶ್ರೇಷ್ಠನಾದ ನೀನು ಪರಿಹರಿಸಬೇಕೆಂದು ಕೋರಿದನು ॥೨॥

ಇತ್ಯೇತದ್ವಚನಂಶ್ರುತ್ವಾಸುಮನಸ್ಕಸ್ಯಧೀಮತಃ ।
ಉವಾಚಗೌತಮೋವಾಕ್ಯಂವಿಹಸ್ಯಯಮಿನಾಂವರಃ ॥೩॥

ತಾ॥ ಬುದ್ಧಿಶಾಲಿಯೂ ಧೀಮಂತನೂ ಆದ ಸುಮನಸ್ಕ ಮಹಾರಾಯನು ಮಧುರ ವಾಕ್ಯಗಳಿಂದ ಕೇಳಿದ ಪ್ರಶ್ನೆಗಳಿಗೆ ಶ್ರೇಷ್ಠನಾದ ಗೌತಮನು ನಕ್ಕು ಹೀಗೆಂದು ಹೇಳಲುಪಕ್ರಮಿಸಿದನು ॥೩॥

ಗೌತಮ ಉವಾಚ :-

ಶೃಣುತ್ವಂಸಾವಧಾನೇನಸುಮನಸ್ಕಮಹಾಮತೇ ।
ತ್ವನ್ಮುಖೇನೈವದೈತೇಂದ್ರಂವಧಯಿಷ್ಯಾಮಿಶೀಘ್ರತಃ ॥೪॥

ತಾ॥ ಮಹಾಮತಿಯಾದ ಸುಮನಸ್ಕರಾಯನೇ ! ಸಾವಧಾನದಿಂದ ಕೇಳುವವನಾಗು ಆ ಪರಮೇಶ್ವರನು ನಿನ್ನ ಮೂಲಕವಾಗಿಯೇ ಬೇಗನೇ ಆ ಜಾನುಮಂಡಲ ರಾಕ್ಷಸನನ್ನು ಸಂಹಾರಮಾಡಿಸುವೆನು ॥೪॥

ಇತ್ಯುದೀರ್ಯಸುರೇಂದ್ರಾದೀನ್ ತದಾಪ್ರೇಷಿತವಾನ್ ಪ್ರಭುಃ ।
ತೇಽಪಿಸಂಚಿನ್ತ್ಯಮನಸಾಸರ್ವಲಕ್ಷಣಸಂಯುತಾ ॥೫॥

ತಾ॥ ಎಂದು ಪರಮೇಶ್ವರನು ಇಂದ್ರಾದಿದೇವತೆಗಳನ್ನು ಹಿಂದಕ್ಕೆ ಕಳುಹಿಸಲು ಮನಸ್ಸಿನಲ್ಲಿ ಸಮಾಧಾನ ಹೊಂದಿದವರಾಗಿ ಸಮಸ್ತ ಲಕ್ಷಣಗಳಿಂದ ಕೂಡಿದ ಆ ದೇವತೆಗಳು ಹಾಗೆಯೇ ಆಗಲೆಂದು ॥೫॥

ತಥಾಽಸ್ತ್ವಿತ್ಯೇವಸಂಪ್ರೀತಾಜಗ್ಮುಸ್ಸ್ವಂನಗರೀಪ್ರತಿ ।
ತದಾಪ್ರಭೃತಿದೇವೇಂದ್ರಃಋಷಿಭಿಸಹನಿತ್ಯಶಃ ॥೬॥

ತಾ॥ ಸಂತಸಗೊಂಡವರಾಗಿ ದೇವೇಂದ್ರನೊಂದಿಗೆ ತಮ್ಮ ತಮ್ಮ ಲೋಕಗಳನ್ನು ಸೇರಿದರು ಪರಮೇಶ್ವರನ ಆಜ್ಞೆಯಿಂದಾಗಿ ದೇವೇಂದ್ರಾದಿದೇವತೆಗಳೂ ಋಷಿಗಣಗಳೂ ನಿತ್ಯವೂ ಆ ಸಮಯವನ್ನೇ ನಿರೀಕ್ಷಿಸುತ್ತಿರುವರು ॥೬॥

ವರ್ತಂತೇಪೀಡಿತಾಸ್ತೇನತ್ವದೀಯೋದಯಕಾಂಕ್ಷಿಣಃ ।
ತಸ್ಮಾದಿಂದ್ರಪ್ರಿಯಾರ್ಥಂವೈರಾಕ್ಷಸೇಂದ್ರಂಮಹಾಬಲಂ ॥೭॥

ತಾ॥ ಈ ರೀತಿಯಾಗಿ ನಿರೀಕ್ಷಿಸುತ್ತಿರುವ ದೇವತೆಗಳಿಗೂ ಋಷಿಗಳಿಗೂ ಆ ಜಾನುಮಂಡಲನು ಸಕಲ ಪೀಡೆಗಳನ್ನು ಮಾಡಿ ಭಾಧಿಸುತ್ತಿದ್ದರೂ ಪರಮೇಶ್ವರನ ಆಜ್ಞಾಪ್ರಕಾರವಾಗಿ ನಿನ್ನ ಉದಯವನ್ನೇಕಾಂಕ್ಷಿಸುತ್ತಿರುವರು ॥೭॥

ಸಂಹೃತ್ಯಸರ್ವಲೋಕಾನಾಂಸುಖಂಕುರುಮಹಾಮತೇ ।
ಇತ್ಯೇವಮುಕ್ತೋಮುನಿನಾಸುಮನಸ್ಕೋಮಹಾಮತಿಃ ॥೮॥

ತಾ॥ ಆದ್ದರಿಂದ ದೇವೇಂದ್ರಾದಿಗಳ ಹಿತಕ್ಕಾಗಿ ಮಹಾಬುದ್ಧಿಶಾಲಿಯಾದ ಸುಮನಸ್ಕನೇ ನೀನು ಲೋಕಕಲ್ಯಾಣವನ್ನು ಮಾಡಲು ಆ ರಾಕ್ಷಸನಾದ ಜಾನುಮಂಡಲನನ್ನು ಸಂಹರಿಸಿ ಸಮಸ್ತಲೋಕಗಳಿಗೂ ಸುಖವನ್ನುಂಟುಮಾಡೆಂದು ಮಹಾಮತಿಯಾದ ಸುಮನಸ್ಕನಿಗೆ ಶ್ರೇಷ್ಠನಾದ ಗೌತಮಮುನಿಯು ಹೇಳಿದನು ॥೮॥

ಸುಮನಸ್ಕ ಉವಾಚ :–

ಕ್ರೂರೋಮಹಾಬಲೀದೈತ್ಯೋಮಾಯಾವೀರಾಕ್ಷಸೇಶ್ವರಃ ।
ಪುರತಸ್ತಸ್ಯಸಂಗ್ರಾಮೇಕಥಂತಿಷ್ಠೇತ್ತುದುರ್ಬಲಃ ॥೯॥
ಕಥಂವಾಯಾಗಸಂಪೂರ್ತಿರ್ನಿರ್ವಿಘ್ನೋಮೇಭವಿಷ್ಯತಿ ।
ಇತ್ಯೇವಚಿಂತಯಾಕ್ರಾನ್ತಃಗೌತಮಂಶರಣಂಗತಃ ॥೧೦॥

ತಾ॥ ಈ ರೀತಿಯಾಗಿ ಹೇಳಿದ ಗೌತಮಮುನಿಯ ಮಾತನ್ನು ಕೇಳಿದ ಆ ಸುಮನಸ್ಕನು ಕ್ರೂರಿಯೂ ಮಹಾಬಲಿಷ್ಟನೂ ಮಾಯಾವಿಯೂ ಆದ ಜಾನುಮಂಡಲ

ನನ್ನು ದುರ್ಬಲನಾದ ನಾನು ಯುದ್ಧದಲ್ಲಿ ಹೇಗೆ ಎದುರಿಸಿ ಯುದ್ಧಮಾಡಲು ಸಾಧ ಮಹಾಪರಾಕ್ರಮಿಯಾಗಿ ವರಪ್ರದಾನದಿಂದ ದೇವಾದಿದೇವತೆಗಳನ್ನೂ ಲಕ್ಷ್ಯೆ ಮಾಡದಿರುವ ಆ ರಾಕ್ಷಸನ ಎದುರಿಗೆ ನಿಲ್ಲಲು ನನಗೆ ಹೇಗೆ ಸಾಧ್ಯ ? ಮತ್ತು ನಿರ್ವಿಘ್ನ ವಾಗಿ ಯಾಗವನ್ನು ಹೇಗೆ ನೆರವೇರಿಸಲಾದೀತು ಎಂದು ಚಿಂತಾಕ್ರಾಂತನಾಗಿ ಆ ಸುಮನಸ್ಕನು ಗೌತಮಮುನಿಯನ್ನೇ ಶರಣುಹೊಂದಿದನು ॥೯॥೧೦॥

ಗೌತಮ ಉವಾಚ :-

ಗೌತಮೋಪಿಮಹಾಪ್ರಾಜ್ಞಸ್ಸುಮನಸ್ಕಋಷೀಶ್ವರಃ ।
ಉವಾಚಮಧುರಂವಾಕ್ಯಂಪ್ರೀತ್ಯಾರಾಜರ್ಷಿಣಂತಥಾ ॥೧೧॥

ತಾ॥ ಆ ಮಹಾಪ್ರಾಜ್ಞನೂ ಋಷೀಶ್ವರನೂ ಆದ ಗೌತಮನು ರಾಜರ್ಷಿ ಯಾದ ಸುಮನಸ್ಕನನ್ನು ಪ್ರೀತಿಯಿಂದ ಕಂಡು ಮಧುರವಾದ ಒಂದಾನೊಂದು ಮಾತನ್ನು ನುಡಿದದ್ದೇನೆಂದರೆ ॥೧೧॥

ಸುಮನಸ್ಕಮಹಾಪ್ರಾಜ್ಞಾಶೃಣುಮದ್ವಚನಂಹಿತಂ ।
ಈಶ್ವರಂಪಾರ್ವತೀನಾಥಂಭಜಸ್ವತ್ರಿಪುರಾನ್ತಕಂ ॥೧೨॥

ತಾ॥ ಮಹಾಬುದ್ಧಿವಂತನಾದ ಸುಮನಸ್ಕ ಮಹಾರಾಯನೇ ಹಿತವಾದ ನನ್ನ ವಚನವನ್ನು ಕೇಳು ತ್ರಿಪುರಾಂತಕನೂ ಪಾರ್ವತೀನಾಥನೂ ಆದ ಆ ಪರಮೇಶ್ವರನನ್ನು ಭಜಿಸುವವನಾಗು ॥೧೨॥

ಸಏವಯಾಗರಕ್ಷಾರ್ಥಂಹಿತಾರ್ಥಂಜಗತಾಮಪಿ ।
ಯತ್ನಂಕರೋತಿಸಂಪ್ರೀತ್ಯಾಭಗವಾನ್ಫಾಲಲೋಚನಃ ॥೧೩॥

ತಾ॥ ಆ ಪರಮಾತ್ಮನಾದ ಫಾಲಾಕ್ಷನನ್ನು ಭಜಿಸುವುದರಿಂದ ಆ ಭಗವಂತನೇ ನಿನ್ನಲ್ಲಿ ಪ್ರಿತಿಯುಳ್ಳವನಾಗಿ ನಿನ್ನಿಂದ ಮಾಡಲ್ಪಡುವ ಯಾಗ ಸಂರಕ್ಷಣೆಗೂ, ಲೋಕ ಗಳಿಗೆ ಹಿತವನ್ನುಂಟುಮಾಡುವುದಕ್ಕೂ ತಕ್ಕ ಪ್ರಯತ್ನವನ್ನು ಮಾಡುತ್ತಾನೆ ॥೧೩॥

ಇತ್ಯೇತದ್ವಚನಂಶ್ರುತ್ವಾಸುಮನಸ್ಕೋಮಹಾಮತಿಃ ।
ಪ್ರೀತ್ಯಾಪರಮಯಾಯುಕ್ತೋಗೌತಮಂಮುನಿಪುಂಗವಂ ॥೧೪॥
ಪೂಜಯಾಮಾಸವಿಧಿನನ್ಮಧುಪರ್ಕಾದಿಭಿಸ್ಸಹ ।
ಉವಾಚಸಮಹಾಪ್ರಾಜ್ಞಃಗೌತಮಂವದತಾಂವರಃ ॥೧೫॥

ತಾ॥ ಮಹಾಪ್ರಾಜ್ಞನಾದ ಸುಮನಸ್ಕಮಹಾರಾಯನು ಗೌತಮಮುನೀಂದ್ರನು ಹೇಳಿದ ಪರಮಮಧುರವಾದ ಮಾತುಗಳನ್ನು ಕೇಳಿ ಅತ್ಯಂತ ಪ್ರೀತಿಯಿಂದ ಆ ಗೌತಮ ಮುನಿಯನ್ನು ಮಧುಪರ್ಕಾದಿಗಳಿಂದ ಪೂಜಿಸಿ, ಮಾತನಾಡುವುದರಲ್ಲಿ ಮಹಾ ಚತುರ ನಾದ್ದರಿಂದ ಮತ್ತೆ ಪ್ರಶ್ನಿಸಿದ್ದೇನೆಂದರೆ ॥೧೪॥೧೫॥

ತಥೈವಾಹಂಕರಿಷ್ಯಾಮಿಯತ್ತ್ವಯಾಭಿಹಿತಂಹಿತಂ ।
ಇತ್ಯೇವಂಸುಮನಸ್ಕೇನಪೂಜಿತೋಮುನಿಸತ್ತಮಃ ॥೧೬॥
ಗಂಗಾದಿಪುಣ್ಯತೀರ್ಥಾನಾಂಸೇವಾರ್ಥಂಪ್ರಯಯೌಮುದಾ ।
ತದಾರಾಜರ್ಷಿಕಶ್ರೀಮಾನ್ಸುಮನಸ್ಕೋಮಹಾಯಶಾಃ ॥೧೭॥

ತಾ॥ ಮಹಾಪ್ರಾಜ್ಞಶಾಲಿಯಾದ ಆ ಗೌತಮಮುನೀಂದ್ರನನ್ನು ಸುಮಧುರ ವಾಕ್ಯಗಳಿಂದ ಸ್ತುತಿಸಿ ರಾಜರ್ಷಿಯಾದ ಸುಮನಸ್ಕನು ಹೇಳಿದ್ದೇನೆಂದರೆ ಭಗವನ್ ತಮ್ಮ ಹಿತವಾದ ಅಪ್ಪಣೆಯಂತೆಯೇ ಮಾಡುತ್ತೇನೆ ತಮ್ಮ ಕರುಣೆಯು ನನ್ನನ್ನು ಪುನೀತ ನನ್ನಾಗಿ ಮಾಡಿತೆಂದು ಹೇಳಲು ಆತನಿಂದ ಪೂಜಿಸಲ್ಪಟ್ಟ ಆ ಗೌತಮಮುನಿಯು ಗಂಗಾದಿ ಪುಣ್ಯತೀರ್ಥಗಳನ್ನೆಲ್ಲಾ ಸೇವಿಸಲು ಸಂತಸದಿಂದ ಹೊರಟು ಹೋದನು ॥೧೬॥॥೧೭॥

ಯಾಗಸಂರಕ್ಷಣಾರ್ಥಂವೈಸುರಾಣಾಂತೋಷ್ಕೇಣಾಯಚ ।
ಪಾರ್ವತೀಪತಿಮುದ್ದಿಶ್ಯಕರ್ತುಕಾಮಸ್ತಪೋಮ್ಹತ್ ॥೧೮॥

ತಾ॥ ಅನಂತರ ಮಹರ್ಷಿಯಿಂದ ಆಜ್ಞಾಪ್ತನಾದ ಆ ಸುಮನಸ್ಕಮಹಾರಾಯನು ತಾನು ಕೈಗೊಳ್ಳುವ ಯಾಗಸಂರಕ್ಷಣೆಗಾಗಿಯೂ ದೇವತೆಗಳ ಹಿತಕ್ಕಾಗಿಯೂ ಸಕಲ ಪಾಪಹರನಾದ ಪಾರ್ವತೀಪತಿಯಾದ ಪರಮೇಶ್ವರನನ್ನು ಕುರಿತು ತಪಸ್ಸು ಮಾಡಲು ॥೧೮॥

ಯಾಗಕ್ಕಾಗಿ ಸುಮನಸ್ಕನ ತಪಸ್ಸು

ಭಾರ್ಯಯಾಸಹಧರ್ಮಾತ್ಮಾಯಯೌಶೀಘ್ರಂಹಿಮಾಲಯ ।
ತತ್ರಕಿಂಚಿತ್ತಟಂಪ್ರಾಪ್ಯನಾನಾವೃಕ್ಷಸಮಾಕುಲಂ ॥೧೯॥

ತಾ॥ ಸಕಲ ಧರ್ಮಗಳನ್ನು ತಿಳಿದವನಾದ ಆ ಸುಮನಸ್ಕಮಹಾರಾಜನು ತನ್ನ ಹೆಂಡತಿಯಿಂದೊಡಗೂಡಿ ಪರಮೇಶ್ವರನ ತಪಸ್ಸಿಗೆ ಸರಿಯಾದ ಸ್ಥಳವಾದ ಹಿಮಾಲಯಾ ಪರ್ವತದ ನಾನಾ ವೃಕ್ಷಸಮೂಹಗಳಿಂದ ಕೂಡಿದ ವನದಲ್ಲಿ ತಪವನ್ನಾಚರಿಸಲು ಸಂಕಲ್ಪಿಸಿದನು ॥೧೯॥

ನಾನಾಪಕ್ಷಿಭಿರಾಕೀರ್ಣಂಲತಾಮಂಡಲಶೋಭಿತಂ ।
ವಿಯದ್ಗಂಗಾಸಮಾಯುಕ್ತಂವಿಭುಧೈಶ್ಚಾಪಿಸೇವಿತಂ ॥೨೦॥

ತಾ॥ ಅನೇಕ ವಿಧವಾದ ಪಕ್ಷಿಗಳ ಕಿಲಕಿಲನಾದವೂ ಎಲ್ಲಿ ನೋಡಿದರಲ್ಲಿ ಶೋಭಿಸುವ ಲತಾಮಂಟಪಗಳೂ ಇರುವ ವನಗಳಿಂದಲೂ ದೇವಗಂಗೆಯು ಹರಿಯುತ್ತಿರಲು ತಪೋಧನರು ತಪಸ್ಸಿನಿಂದ ಪರಮಾತ್ಮನನ್ನು ಸೇವಿಸುತ್ತಿರುವ ॥೨೦॥

ಹಂಸಕಾರಂಡವಾಕೀರ್ಣೈಃಪದ್ಮಕಲ್ಹಾರಶೋಭಿತೈಃ ।
ನಿರ್ಮಲೋದಕಸಂಪೂರ್ಣೈಸ್ಸರೋಭಿಶ್ಚವಿರಾಜಿತಃ ॥೨೧॥

ತಾ॥ ಮತ್ತು ಹಂಸಪಕ್ಷಿಗಳಿಂದಲೂ ಚಕ್ರವಾಕಪಕ್ಷಿಗಳಿಂದಲೂ ಪದ್ಮಕಲ್ಹಾರಾದಿ ಹೂಗಳಿಂದಲೂ ತುಂಬಿರುವ ಮತ್ತು ನಿರ್ಮಲೋದಕವುಳ್ಳ ಸರೋವರಗಳಿಂದ ರಾರಾಜಿಸಂತ್ತಿರುವ ॥೨೧॥

ಆವೃತಂಋಷಿಸಂಘೈಶ್ಚವ್ರತನಿಷ್ಠತಪೋಧನೈಃ ।
ತತ್ರೈಕತ್ರಶುಚೌದೇಶೇಭಾರ್ಯಯಾಮುನಿಸತ್ತಮಃ ॥೨೨॥

ತಾ॥ ಆ ವನಪ್ರದೇಶದಲ್ಲಿ ಋಷಿಸಮೂಹದಿಂದಲೂ ವ್ರತನಿಷ್ಠರಿಂದಲೂ ತಪೋಧನರಿಂದಲೂ ತುಂಬಿರುವ ಆ ಹಿಮವತ್ಪರ್ವತದ ಒಂದಾನೊಂದು ಪ್ರದೇಶದ ಸರೋವರತೀರದಲ್ಲಿ ಭಾರ್ಯೆಯಿಂದೊಡಗೂಡಿ ಆ ಸುಮನಸ್ಕರಾಜನು ತಪಸ್ಸಿಗಾಗಿ ನಿಂತನು ॥೨೨॥

ಹೃದಿಧ್ಯಾತ್ವಾಮಹಾದೇವಂಋಷಿಃಪಂಚಾಗ್ನಿಮಧ್ಯಗಃ ।
ಸುಖದಂಸರ್ವಲೋಕಾನಾಂತಪಃಕರ್ತುಪ್ರಚಕ್ರಮೇ ॥೨೩॥

ತಾ॥ ಈ ರೀತಿಯಾಗಿ ಭಾರ್ಯಾಸಹಿತನಾದ ಆ ಸುಮನಸ್ಕಮಹಾರಾಜನು ಮಹಾದೇವನನ್ನು ತನ್ನ ಹೃದಯದಲ್ಲಿ ಧ್ಯಾನಿಸುವವನಾಗಿ ಸರ್ವಲೋಕಗಳಿಗೂ ಸುಖವನ್ನು ಬಯಸಿ ಪಂಚಾಗ್ನಿ ಮಧ್ಯದಲ್ಲಿದ್ದು ತಪಸನ್ನಾಚರಿಸುತ್ತಿದ್ದನು ॥೨೩॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ
ಸುಮನಸ್ಕ ತಪಶ್ಚರಣೋನಾಮ ಸಪ್ತಮೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡ ಪುರಾಣದ ವರ್ಣವೈಭವ ಖಂಡದಲ್ಲಿ ಬ್ರಹ್ಮನಾರದ ಸಂವಾದದಲ್ಲಿ ಸುಮನಸ್ಕನು ತಪವನ್ನು ಕೈಕೊಂಡ ವಿಚಾರವೆಂಬ ಏಳನೇ ಆಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಏಂಟನೆಯ ಆಧ್ಯಾಯ :-

ಮುಕ್ತಿಯುತ್ಪನ್ನ

ನಾರದ ಉವಾಚ :-

ಹೇಬ್ರಹ್ಮಂತುಮಿಚ್ಛಾಮಿಸರ್ವಲೋಕಪಿತಾಮಹ ।
ಕಿಂಕೃತಂಸುಮನಸ್ಕೇನಗೌತಮಪ್ರೇರಿತೇನಚ ॥೧॥
ತತ್ಸರ್ವಂವದವಿಸ್ತಾರಾತ್ನೃಣಾಂಪಾಪವಿನಾಶನಂ ।
ಶೃಣುನಾರದಕ್ಷ್ಯಾಮಿತದ್ವೃತ್ತಾಂತಮನುತ್ತಮಂ ॥೨॥

ತಾ॥ ಸರ್ವಲೋಕಗಳಿಗೂ ತಂದೆಯಾದ ಬ್ರಹ್ಮದೇವನೇ ! ಋಷಿಶ್ರೇಷ್ಟನಾದ ಗೌತಮಮುನೀಂದ್ರನಿಂದ ಪ್ರೇರಿತನಾದ ಆ ಸುಮನಸ್ಕಮಹಾರಾಯನು ಅನಂತರ ಏನು ಮಾಡಿದನು ! ಜನರಪಾಪಪರಿಹಾರಕವಾದ ಆ ಕಥೆಯನ್ನೆಲ್ಲಾ ಸವಿಸ್ತಾರವಾಗಿ ಹೇಳುವವನಾಗು ನಾನು ಕೇಳಲಿಚ್ಛಿಸುತ್ತೇನೆಂದು ಪ್ರಶ್ನಿಸುತ್ತಿರುವ ನಾರದನನ್ನು ನೋಡಿ ಎಲೈ ನಾರದನೇ ! ಅನಂತರ ನಡೆದ ಕಥೆಯನ್ನು ಹೇಳುವೆನು ಲಾಲಿಸುವನಾಗೆಂದು ಬ್ರಹ್ಮದೇವನು ನುಡಿದನು ॥೧॥೨॥

ತೀವ್ರೇಣತಪಸಾತಸ್ಯತೋಷಿತಸ್ತ್ರಿಪುರಾಂತಕಃ ।
ಪಾರ್ವತ್ಯಾಸಹಸಂಪ್ರಾಪ್ತಸ್ಸುಮನಸ್ಕಂಮಹಾಮುನಿಂ ॥೩॥

ತಾ॥ ಆ ಸುಮನಸ್ಕಮಹಾರಾಯನು ಪತ್ನೀಸಮೇತನಾಗಿ ಅನೇಕ ವಿಧವಾದ ಕಠಿಣವಾಗಿಯೂ ಶಾಸ್ತ್ರಸಮ್ಮತವಾಗಿಯೂ ಇರುವ ವಿವಿಧ ಋತುಗಳಲ್ಲಿ ವಿವಿಧವಾದ ತಪೋನಿಷ್ಟೆಯಿಂದ ತೀರ್ವವಾಗಿ ತ್ರಿಪುರಾಂತಕನಾದ ಪರಮೇಶ್ವರನನ್ನು ಹೃದಯ ಕಮಲದಲ್ಲಿ ನಿಷ್ಟನಾಗಿ ಧ್ಯಾನಿಸಲು ಅತ್ಯಂತ ಸುಪ್ರೀತನಾದ ಪರಮೇಶ್ವರನು ಕೃಪೆ ಯಿಂದ ಪಾರ್ವತೀಸಹಿತನಾಗಿ ತಪವನ್ನಾಚರಿಸುತ್ತಿರುವ ಸುಮನಸ್ಕ ದಂಪತಿಗಳಿಗೆ ದರ್ಶನವನ್ನಿತ್ತನು ॥೩॥

ಸುಮನಸ್ಕಮಹಾಪ್ರಾಜ್ಞತಪಸೋತೋಷಿತೋಸ್ಮ್ಯಹಂ ।
ಕಿಂತೇಽಭೀಷ್ಟಂಪ್ರದಸ್ಯಾಮಿವೃಣುಮದ್ವಚನಾದಿಹಂ ॥೪॥

ತಾ॥ ಮಹಾಪ್ರಾಜ್ಞನಾದ ಸುಮನಸ್ಕನೇ ! ನಿನ್ನ ತಪಸ್ಸಿಗೆ ಮೆಚ್ಚಿಸಂತಸ ಗೊಂಡಿರುವೆನು ನಿನ್ನ ಮನದ ಅಭೀಷ್ಟವೇನೆಂಬುದನ್ನು ತಿಳಿಸು ಆ ವರವನ್ನು ಅನುಗ್ರಹಿಸುವೆನು ಎಂದು ಪರಮೇಶ್ವರನು ಸುಮನಸ್ಕನಿಗೆ ಹೇಳಿದನು ॥೪॥

ಇತ್ಯೇತದ್ವಚನಂಶ್ರುತ್ವಾಸುಮನಸ್ಕೋಮಹಾಮತಿಃ ।
ಪ್ರಣಮ್ಯಪಾರ್ವತೀನಾಥಂಭಕ್ತ್ಯಾಪರಮಯಾಯುತಃ ॥೫॥

ತಾ॥ ಈ ರೀತಿಯಾಗಿ ಹೇಳಿದ ಪರಮೇಶ್ವರನ ವಾಕ್ಯಗಳನ್ನು ಕೇಳಿದ ಮಹಾ ಬುದ್ಧಿಶಾಲಿಯಾದ ಆ ಸುಮನಸ್ಕನು ತನ್ನ ಸತಿಯೊಡನೆ ಪಾರ್ವತೀಸಹಿತನಾದ ಆ ಪರಮೇಶ್ವರರನ್ನು ನೋಡಿ ಭಕ್ತಿಯಿಂದ ಪ್ರಣಾಮಗಳನ್ನು ಮಾಡಿದರು ॥೫॥

ಶಿರಸ್ಯಂಜಲಿಮಾಧಾಯಸ್ತುತ್ವಾಸ್ತುತಿಭಿರೀಶ್ವರಂ ।
ಉವಾಚವಾಕ್ಯಂರಾಜರ್ಷಿಃಶಂಕರಂಲೋಕಶಂಕರಂ ॥೬॥

ತಾ॥ ಆ ಸುಮನಸ್ಕ ದಂಪತಿಗಳಿಬ್ಬರೂ ಶಿರಸ್ಸಿನಲ್ಲಿ ಕೈಗಳನ್ನು ಜೋಡಿಸಿ ಕೊಂಡು ಅಂಜಲೀಬದ್ಧರಾಗಿ ಲೋಕಗಳಿಗೆಲ್ಲಾ ಮಂಗಳವನ್ನುಂಟುಮಾಡುವ ಸಕಲ ಲೋಕಗಳಲ್ಲಿರುವ ಜೀವರಾಶಿಗಳೆಲ್ಲರಿಗೂ ತಾಯಿತಂದೆಯಂತಿರುವ ಆ ಪಾರ್ವತೀ ಪರಮೇಶ್ವರರನ್ನು ಅನೇಕ ಪ್ರಕಾರವಾಗಿ ಸ್ತೋತ್ರಮಾಡಿ ಬೇಡಿಕೊಳ್ಳುವುದೇನೆಂದರೆ॥೬॥

ಕೃತಾರ್ಥೋಽಸ್ಮಿಕೃತಾರ್ಥೋಽಸ್ಮಿಪ್ರಸಾದೇನತವಪ್ರಭೋ ।
ಯದಿಪ್ರೀತೋಽಸಿತಪಸಾಮತ್ಕೃತೇನಪುರಾನ್ತಕ ॥೭॥

ತಾ॥ ಮಹಾದೇವನೇ ನಿಮ್ಮ ದರ್ಶನಾನುಗ್ರಹದಿಂದ ನಾವು ಕೃತಕೃತ್ಯರಾದೆವು ಎಲೈ ತ್ರಿಪುರಾಂತಕನಾದ ಸ್ವಾಮಿಯೇ ನನ್ನ ತಪಸ್ಸಿನಿಂದ ನೀನು ಸುಪ್ರೀತನಾಗಿದ್ದಲ್ಲಿ ನಾನು ಯಾಚಿಸುವಂಥಾ ವರವನ್ನು ಕರುಣಿಸುವವನಾಗು ॥೭॥

ಏತದ್ವರಮಹಂಯಾಚೇಸರ್ವಲೋಕಸುಖಪ್ರದಂ ।
ಸವನಂಕರ್ತುಕಾಮೋಽಸ್ಮಿಪೌಂಡರೀಕಮಿತಿಶ್ರುತಂ ॥೮॥

ತಾ॥ ಎಲೈ ಸ್ವಾಮಿಯೇ ನಾನು ಯಾಚಿಸುವ ವರಗಳು ಸರ್ವಲೋಕಗಳಿಗೂ ಸುಖಪ್ರದವಾಗಿರುವಂಥಾ ಪೌಂಡರೀಕವೆಂಬ ಮಹಾಯಾಗವನ್ನು ಮಾಡಬೇಕೆಂಬ ನನ್ನ ಕಾಮಾಪೇಕ್ಷೆಯದಾಗಿರುತ್ತದೆ ॥೮॥

ತಸ್ಯವಿಘ್ನಕರಃಕ್ರೂರೋಜಾನುಮಂಡಲರಾಕ್ಷಸಃ ।
ಪೀಡಯರ್ನ್ಸರ್ವಲೋಕಾಂಶ್ಚವರ್ತತೇಸುಮಹಾಬಲಃ ॥೯॥

ತಾ॥ ಹಾಗೆ ನಾನು ಮಾಡಬೇಕೆಂದಿರುವ ಆ ಯಾಗಕ್ಕೆ ಮಹಾದುಷ್ಟನಾಗಿಯೂ ಅತಿ ಕ್ರೂರನಾಗಿಯೂ ಜಾನುಮಂಡಲನೆಂಬ ಪರಾಕ್ರಮಿಯಾದ ರಾಕ್ಷಸನು ವಿಘ್ನಕಾರಿ ಯಾಗಿದ್ದಾನೆ. ಅಲ್ಲದೆ ಅವನು ಸರ್ವಲೋಕಗಳನ್ನೂ ಹಿಂಸಿಸುತ್ತಿದ್ದಾನೆ. ಅದಕ್ಕಾಗಿ ಸಮಸ್ತ ಲೋಕಗಳಿಗೂ ಸುಖಪ್ರದವಾದ ಒಂದು ವರವನ್ನು ಬೇಡಿಕೊಳ್ಳುತ್ತೇನೆ ॥೯॥

ವಧಾರ್ಥಂತಸ್ಯದೈತ್ಯಸ್ಯವೀರ್ಯವಂತಂಮಹಾಬಲಂ ।
ಸುತಂದೇಹಿಮಹಾದೇವಮಮವಂಶವಿವರ್ಧನಂ ॥೧೦॥

ತಾ॥ ಆ ಯಾಗನಿರ್ವಿಘ್ನಕ್ಕಾಗಿ ಯಜ್ಞಕಂಟಕನಾದ ಆ ದೈತ್ಯನನ್ನು ಸಂಹರಿಸು ವಂಥಾ ಮಹಾಶಕ್ತನೂ ವೀರ್ಯವಂತನೂ ಮತ್ತು ನನ್ನ ವಂಶೋದ್ಧಾರಕನಾಗುವಂಥಾ ಪುತ್ರರತ್ನವೆಂಬ ವರವನ್ನು ಅನುಗ್ರಹಿಸುವವನಾಗು ॥೧೦॥

ಇತ್ಯೇತದ್ವಚನಂಶ್ರುತ್ವಾಮುದಾಪರಮಯಾಯುತಃ ।
ಸಸದ್ಯೋಮನಸಾತತ್ರಋಷಿಂಮುಕ್ತಕನಾಮಕಃ । ॥೧೧॥

ತಾ॥ ಈ ರೀತಿಯಾಗಿ ಸುಮನಸ್ಕನು ವರಗಳನ್ನು ಬೇಡಲು ಪರಮ ಸಂತೋಷಯುಕ್ತನಾದ ಪರಮೇಶ್ವರನು ತನ್ನ ಮನಸ್ಸಿನಿಂದ ಒಬ್ಬನನ್ನು ನಿರ್ಮಿಸಿ ಅವನಿಗೆ ಮುಕ್ತಕಋಷಿ ಎಂಬ ನಾಮಧ್ಯೇಯವನ್ನು ಕರುಣಿಸಿದನು ॥೧೧॥

ಸರ್ವಲಕ್ಷಣಸಂಪನ್ನಂಸರ್ವಾಭರಣಭೂಷಿತಂ ।
ಭಾನುಕೋಟಿಪ್ರತೀಕಾಶಂವರಂದೈತ್ಯಕುಲಾಂತಕಂ ॥೧೨॥

ತಾ॥ ಆ ಬಾಲಕನು ಸರ್ವಲಕ್ಷಣಸಂಪನ್ನನಾಗಿಯೂ ಸರ್ವಾಭರಣಗಳಿಂದ ಭೂಷಿತನಾಗಿಯೂ ಕೋಟಿಸೂರ್ಯ ಪ್ರಕಾಶಮಾನನಾಗಿಯೂ ದೈತ್ಯಕುಲಸಂಹಾರಕ ನಾಗಿಯೂ ಆ ಮುಕ್ತಕಋಷಿಯು ಈಶ್ವರತೇಜಸ್ಸಿನಿಂದ ಪ್ರಕಾಶಿಸಿದನು ॥೧೨॥

ಮೌಂಜೀಕೃಷ್ಣಾಜಿನಧರಂಜಟಾಮಂಡಲಮಂಡಿತಂ ।
ಸ್ವರ್ಣೋಪವೀತಸಂಯುಕ್ತಂಕಮಂಡಲುಧರಂವಿಭುಂ ॥೧೩॥

ತಾ॥ ಮುಕ್ತರಾಜ ಬಾಲಕನು ಹುಟ್ಟಿದ ಕ್ಷಣವೇ ಮಾಂಜೀಕೃಷ್ಣಾಂಜನಗಳನ್ನು ಧರಿಸಿದವನಾಗಿಯೂ ಜಟಾಮಂಡಲಧಾರಿಯಾಗಿಯೂ ಸುವರ್ಣಯಜ್ಞೋಪವೀತ ವನ್ನು ಧರಿಸಿರುವವನಾಗಿಯೂ ಕಮಂಡಲವನ್ನು ಹಿಡಿದವನಾಗಿಯೂ ಎಲ್ಲಾ ಲೋಕ ಗಳನ್ನು ಪಾಲಿಸುವಂತಿರುವ ಪರಮೇಶ್ವರನ ಹಾಗೆ ಆ ಮುಕ್ತರಾಜನು ಶೋಭಿಸಿದನು ॥೧೩॥

ಜಿತೇಂದ್ರಿಯಂಮಹಾಯೋಗಂಶಾಲಿನಂತೀಕ್ಷ್ಣಶೋಭಿತಂ ।
ರುದ್ರಾಕ್ಷಮಾಲಸಂಯುಕ್ತಂತ್ರಿಪುಂಡ್ರೈಶ್ಚವಿರಾಜಿತಃ ॥೧೪॥

ತಾ॥ ಪರಮೇಶ್ವರನಂತೆ ಜಿತೇಂದ್ರಿಯನೂ ಮಹಾಯೋಗಿಯೂ ಆಗಿ ರುದ್ರಾಕ್ಷಿ ಮಾಲೆಗಳಿಂದ ಅಲಂಕೃತನಾಗಿ ಶರೀರವನ್ನೆಲ್ಲಾ ಭಸ್ಮದಿಂದ ತ್ರಿಪುಂಡರೀಕೃತಧಾರಣೆ ಮಾಡಿದವನಾಗಿ ನೋಡಿದವರಿಗೆ ತೀಕ್ಷ್ಣವಾದ ಯೋಗಿಕುಮಾರನಂತೆ ಶೋಭಿಸಿದನು ॥೧೪॥

ಪಂಚಾಕ್ಷರೀಜಪಾಸಕ್ತಂಸಾಕ್ಷಾದ್ರುದ್ರಸ್ವರೂಪಿಣಂ ।
ಏತಾದೃಶಂಮಹಾನೌನಿಂನಿರ್ಮಾಯಮನಸಾಶಿವಃ ॥೧೫॥

ತಾ॥ ಪಂಚಾಕ್ಷರೀಮಂತ್ರವನ್ನು ಜಪಿಸುವವನಾಗಿಯೂ ಸದಾಶಿವನ ಮನಸ್ಸಿನಿಂದ ಉತ್ಪನ್ನನಾದ್ದರಿಂದ ಮುಕ್ತಕಮುನಿಯು ಸಾಕ್ಷಾತ್ ರುದ್ರರೂಪಿಯಾಗಿ ಪ್ರಕಾಶಿಸಿದನು ॥೧೫॥

ದದೌಚಸುಮನಸ್ಕಾಯಪುತ್ರಮುದ್ಭುತವಿಕ್ರಮಂ ।
ತಂಪ್ರಾಪ್ಯಸುಮನಸ್ಕೋಪಿನನಂದಪ್ರಿಯಯಾಸಹ ॥೧೬॥

ತಾ॥ ಆ ಪರಮೇಶ್ವರನು ಈ ರೀತಿಯಲ್ಲಿರುವ ಪುತ್ರನನ್ನು ಸೃಷ್ಟಿಸಿ, ಮುಕ್ತಕಋಷಿಯನ್ನು ಸುಮನಸ್ಕನಿಗೆ ಪ್ರಸಾದಿಸಲು ತನ್ನ ಹೆಂಡತಿಯೊಡನೆ ಕೂಡಿದ ಆ ಸುಮನಸ್ಕನು ಪುತ್ರನನ್ನು ಪಡೆದು ಸಂತೋಷಿಸಿದನು ॥೧೬॥

ಮುಕ್ತಕೋಪಿಋಷಿಶ್ರೇಷ್ಠ ಸಾಕ್ಷಾದ್ರುದ್ರಾಂಶಸಂಭವಃ ।
ಸುಮನಸ್ಕಂಚಪಿತರಂಸುಶೀಲಾಮಾತರಂಚಸಃ ॥೧೭॥

ತಾ॥ ಈ ರೀತಿಯಾಗಿ ಪಡೆದ ಸಾಕ್ಷಾತ್ ಪರಮೇಶ್ವರರೂಪಿ ಪುತ್ರನಾದ ಮುಕ್ತಕಋಷಿಯು ತಂದೆಯಾದ ಸುಮನಸ್ಕನಿಗೂ ತಾಯಿಯಾದ ಸುಶೀಲೆಗೂ ನಮಸ್ಕರಿಸಲು ಆ ದಂಪತಿಗಳು ಆ ಮುಕ್ತಕಋಷಿಯನ್ನು ಪುತ್ರವಾತ್ಸಲ್ಯದಿಂದ ಆಲಿಂಗನ ಮಾಡಿಕೊಂಡರು ॥೧೭॥

ಮುಕ್ತಕಋಷಿಗೆ ಅಸ್ತ್ರಪ್ರಧಾನ

ಮುಕ್ತರಾಜ ಉವಾಚ :—

ಪ್ರಣಮ್ಯತಾಭ್ಯಾಮಾಶ್ಲಿಷ್ಟೋನನಾಮ ಪರಮೇಶ್ವರಂ ।
ಸ್ವಾಮಿರ್ನಿಕಥಯಲೋಕೇಶಮಮನಿರ್ಮಾಣಕಾರಣಂ ॥೧೮॥

ತಾ॥ ಆಗ ಮುಕ್ತಕಋಷಿಯು ಪರಮೇಶ್ವರನಿಗೆ ನಮಸ್ಕಾರಮಾಡಿ ಎಲೈ ಸ್ವಾಮಿಯಾದ ಲೋಕನಾಥನೇ ನನ್ನನ್ನು ನಿರ್ಮಿಸಿದ ಕಾರಣವೇನು ಎಂಬುದನ್ನು ತಿಳಿಸಬೇಕೆಂದು ಪ್ರಾರ್ಥಿಸಿದನು. ॥೧೮॥

ಕಿಂಕರ್ತವ್ಯಂಮಯಾದೇವತತ್ಕರೋಮಿತ್ವದಾಜ್ಞಯಾ ।
ಇತಿತದ್ವಚನಂಶ್ರುತ್ವಾಪಾರ್ವತೀಸಹಿತಶ್ಶಿವಃ ॥೧೯॥

ತಾ॥ ಎಲೈ ಸ್ವಾಮಿಯೇ ನನ್ನಿಂದ ಯಾವ ಕಾರ್ಯವು ನೆರವೇರಬೇಕಾಗಿದೆ ಎಂಬುದನ್ನು ತಿಳಿಸಿದರೆ ತಮ್ಮ ಆಜ್ಞಾಪಾಲಕನಾಗಿ ನಾನು ಆ ಕೆಲಸವನ್ನು ಮಾಡುವೆನೆಂದು ಹೇಳಿದ ವಾಕ್ಯಗಳನ್ನು ಕೇಳಿದ ಆ ಪಾರ್ವತೀಸಹಿತನಾದ ಪರಮೇಶ್ವರನು ॥೧೯॥

ಈಶ್ವರೋವಾಚ :–

ಉವಾಚಮಧುರಂವಾಕ್ಯಂಮುದಾಮುಕ್ತಋಷಿಂಪ್ರತಿ ।
ಶೃಣುವತ್ಸಮಹಾಬಾಹೋತವನಿರ್ಮಾಣಕಾರಣಂ ॥೨೦॥

ತಾ॥ ಸರ್ವಲೋಕಶಕ್ತನಾದ ಪರಮೇಶ್ವರನು ಅತ್ಯಂತ ಮಧುರವಾದ ಮಾತುಗಳಿಂದ ಮಹಾ ಬಾಹುಬಲಶಾಲಿಯಾದ ಮಗನೇ ನಿನ್ನ ನಿರ್ಮಾಣ ಕಾರಣವನ್ನು ಲಾಲಿಸುವನಾಗೆಂದು ಪರಮೇಶ್ವರನು ಹೇಳಿದನು ॥೨೦॥

ಅಸ್ತಿಕಶ್ಚನದೈತ್ಯೇಯೋಜಾನುಮಂಡಲನಾಮಕಃ ।
ವರದಾನೇನಸಂದೃಪ್ತ್ಯೋದೇವಾನಾಮಂತಕೋಪಮಃ ॥೨೧॥

ತಾ॥ ಎಲೈ ಕುಮಾರನೇ ಜಾನುಮಂಡಲನೆಂಬ ರಾಕ್ಷಸನು ಬ್ರಹ್ಮನ ವರಬಲದಿಂದ ಮಹಾ ಮದಿಸಿದವನಾಗಿ ಅತ್ಯಂತ ಕ್ರೂರಿಯಾಗಿ ಲೋಕಕಂಠಕನಾಗಿ ದೇವತೆಗಳನ್ನು ಮೃತ್ಯುವೋಪಾದಿಯಲ್ಲಿ ಭಾಧಿಸುತ್ತಿರುವನು ॥೨೧॥

ಸರ್ವಯಜ್ಞನಿಘಾತೀಚವರ್ತ್ತೇಸುಮಹಾಬಲಃ ।
ತಂನಿಹತ್ಯಚದೈತೇಯಂಸಮರೇಪಿಶಿತಾಶನಂ ॥೨೨॥

ತಾ॥ ಲೋಕದಲ್ಲಿ ಮಾಡುವ ಯಜ್ಞ ಯಾಗಾದಿಗಳನ್ನು ಧ್ವಂಸಮಾಡುತ್ತಾ ಋಷಿಗಳನ್ನು ಹಿಂಸಿಸುತ್ತಾ ದುರ್ಮಾರ್ಗಪ್ರವರ್ತಕನಾಗಿ ಮಾಂಸಭಕ್ಷಕನಾಗಿ ಮಹಾ ಬಲಶಾಲಿಯಾಗಿರುವ ಆ ಜಾನುಮಂಡಲ ರಾಕ್ಷಸನನ್ನು ಯುದ್ಧದಲ್ಲಿ ನೀನು ವಧಿಸಬೇಕೆಂದು ಪರಮೇಶ್ವರನು ಮುಕ್ತಕಋಷಿಗೆ ಹೇಳಿ ಮತ್ತೂ ಹೀಗೆಂದನು ॥೨೨॥

ಏತತ್ಕ್ರೋಸುಮನಸ್ಕಸ್ಯಯಾಗಸಂರಕ್ಷಣಂಕುರು ।
ಲೋಕಾನಾಂಸುಖದಂತಸ್ಯರಾಕ್ಷಸೇಂದ್ರಸ್ಯನಿಗ್ರಹಃ ॥೨೩॥

ತಾ॥ ಮತ್ತೂ ಸುಮನಸ್ಕನು ಮಾಡುವ ಪೌಂಡರೀಕವೆಂಬ ಯಾಗವು ನಿರ್ವಿಘ್ನವಾಗುವಂತೆ ಯಾಗಸಂರಕ್ಷಣೆಮಾಡುವವನಾಗು, ಆ ಯಾಗ ವಿಘ್ನಕಾರಕನಾದ ರಾಕ್ಷಸೇಂದ್ರನಾದ ಆ ಜಾನುಮಂಡಲನನ್ನು ವಧಿಸಿ ಲೋಕಗಳಿಗೆಲ್ಲಾ ಸುಖವನ್ನುಂಟುಮಾಡುವವನಾಗು ॥೨೩॥

ಇತ್ಯೇತದ್ವಚನಂಶ್ರುತ್ವಾಪುರಾರೇರ್ಮುಕ್ತಕೋಋಷಿಃ ।
ಪ್ರಣಮ್ಯಪಾರ್ವತೀನಾಥಂಉವಾಚಚಕೃತಾಂಜಲಿಃ ॥೨೪॥

ತಾ॥ ಹೀಗೆ ಹೇಳಿದಪರಮೇಶ್ವರನ ಮಾತುಗಳನ್ನು ಕೇಳಿದ ಮುಕ್ತಕಋಷಿಯು ಪಾರ್ವತೀನಾಥನಾದ ಶಂಕರನಿಗೆ ನಮಸ್ಕರಿಸಿ ಬದ್ಧಾಂಜಲಿಯಾಗಿ ಪ್ರಾರ್ಥಿಸಿದ್ದೇನೆಂದರೆ ॥೨೪॥

**ಭಗವಂಸ್ತಸ್ಯದೈತ್ಯಸ್ಯದೃಪ್ತಸ್ಯವರದಾನತಃ ।
ಕಥಂಕುರ್ಯಾಂಹಿಬೇನೇಶವಧಮುಜ್ಞಾತಸಂಗರಃ ॥೨೫॥**

ತಾ॥ ಎಲೈ ಸರ್ವಲೋಕಪಿತಾಮಹನಾದ ಪರಮೇಶ್ವರನೇ ಬ್ರಹ್ಮನ ವರಬಲದಿಂದ ಕೊಬ್ಬಿ ಅನೇಕ ಯುದ್ಧಗಳಲ್ಲಿ ದೇವತೆಗಳನ್ನು ಪೀಡಿಸಿ ಮಹಾ ಮದಿಸಿರುವ ಆ ರಾಕ್ಷಸನನ್ನು ಯುದ್ಧಮಾಡಲರಿಯದ ನಾನು ಹೇಗೆ ಅವನನ್ನು ಸಂಹರಿಸಲಿ ॥೨೫॥

**ಇತ್ಯೇತದ್ವಚನಂಶ್ರುತ್ವಾವಿಹಸ್ಯತ್ರಿಪುರಾಂತಕಃ ।
ಸಂಸ್ಪೃಶ್ಯಕರಪದ್ಮೇನಋಷಿಂಮುಕ್ತಿಕನಾಮಕಂ ॥೨೬॥**

ತಾ॥ ಈ ರೀತಿಯಾಗಿ ಬೇಡಿಕೊಳ್ಳುತ್ತಿರುವ ಮುಕ್ತಕಋಷಿಯನ್ನು ತ್ರಿಪುರಸಂಹಾರನಾದ ಪರಮೇಶ್ವರನು ತನ್ನ ಕಮಲಗಳಂತಿರುವ ಕೈಗಳಿಂದ ಮಗನನ್ನು ಸ್ಪರ್ಶಿಸಿದವನಾದನು ॥೨೬॥

**ಉಪದಿಶ್ಯಮಹಾಸ್ತ್ರಾಣಿದಿವ್ಯಾನಿವಿವಿಧಾನಿಚ ।
ನವರತ್ನಮಯಂದಿವ್ಯಂಮುಕುಟಂಸ್ವರ್ಣರಂಜಿತಂ ॥೨೭॥**

ತಾ॥ ಆ ಪರಮೇಶ್ವರನು ಪರಮ ಪ್ರೀತಿಯಿಂದ ಮಂದಹಾಸಯುಕ್ತನಾಗಿ ಮುಕ್ತಕಋಷಿಗೆ ಉದ್ದೇಶ್ಯಪೂರ್ವಕವಾಗಿ ನಾನಾ ವಿಧವಾದ ದಿವ್ಯವಾದ ಮಹಾಸ್ತ್ರಗಳೆಲ್ಲವನ್ನು ಕೊಟ್ಟು ಅನುಗ್ರಹಿಸಿ ಸುವರ್ಣದಿಂದ ಮಾಡಲ್ಪಟ್ಟ ನವರತ್ನಖಚಿತವಾದ ಕಿರೀಟವನ್ನೂ ಸಹ ಕೊಟ್ಟನು. ॥೨೭॥

**ಅಭೇದ್ಯಕವಚಂಚೈವಕೋಟಿಸೂರ್ಯಪ್ರಭಾಯುತಂ ।
ಗದಾಂಪಾಶುಪತಂಚಾಸ್ತ್ರಂವಧಾರ್ಥಂತಸ್ಯರಾಕ್ಷಸಃ ॥೨೮॥**

ತಾ॥ ಮತ್ತು ರಣರಂಗದಲ್ಲಿ ಭೇದಿಸಲಾಗದಂತಹ ಕೋಟಿಸೂರ್ಯ ಪ್ರಕಾಶಮಾನವಾಗಿ ಹೊಳೆಯುವ ಅಭೇಧ್ಯವಾದ ಕವಚವನ್ನೂ ಗಧೆಯನ್ನೂ ಮತ್ತು ವರದಿಂದ ಕೊಬ್ಬಿರುವ ಆ ರಾಕ್ಷಸನ ವಧಾರ್ಥವಾಗಿ ಪಾಶುಪತಾಸ್ತ್ರವನ್ನು ಮುಕ್ತಕಋಷಿಗೆ ಕೊಟ್ಟನು ॥೨೮॥

**ಗಾಯತ್ರ್ಯಾದಿಮಹಾಮಂತ್ರಾನ್ದದೌಪ್ರೀತ್ಯಾಮಹೇಶ್ವರಃ ।
ನಿಮಿಷಾಖ್ಯಾಮಹಾದೇವೀತ್ವತ್ಸಹಾಯಂಕರೋತಿಸಾ ॥೨೯॥**

ತಾ॥ ಪರಮೇಶ್ವರನು ಅತ್ಯಂತ ವಾತ್ಸಲ್ಯದಿಂದ ಮುಕ್ತಕಋಷಿಗೆ ಗಾಯಿತ್ರಿಯೇ ಮೊದಲಾದ ಮಹಾಮಂತ್ರಗಳನ್ನು ಉಪದೇಶಮಾಡಿ, ರಣರಂಗದಲ್ಲಿ ನಿನಗೆ ಧೈರ್ಯವುಂಟಾಗಲು ನೀನು ನೆನಸಿದಾಕ್ಷಣ ನಿಮಿಷಾಂಬಾ ಎಂಬ ಹೆಸರುಳ್ಳ ಮಹಾದೇವಿಯು ನಿನಗೆ ಸಹಾಯಮಾಡುವಳೆಂದು ಅಭಯಪ್ರದಾನಮಾಡಿದನು ॥೨೯॥

ಇತ್ಯುವಾಚಮಹಾದೇವಃಶೈಲಪುತ್ರೀಮನಃಪ್ರಿಯಃ ।
ವಿಲೋಕ್ಯಸುಮನಸ್ಕಂಚವಾಕ್ಯಮೇಕದುವಾಚಹ ॥೩೦॥

ತಾ॥ ಪರ್ವತರಾಜನಪುತ್ರಿಯಾದ ಪಾರ್ವತೀದೇವಿಯ ಮನೋವಲ್ಲಭನಾದ ಮಹಾದೇವನು ಈ ರೀತಿಯಾಗಿ ಮಗನಾದ ಮುಕ್ತಕಋಷಿಯನ್ನು ಆಶೀರ್ವಾದಮಾಡಿದ ನಂತರ ಸುಮನಸ್ಕ ಮಹಾರಾಯನಿಗೆ ಈ ರೀತಿ ಹೇಳಿದನು ॥೩೦॥

ಸುಮನಸ್ಕಮಹಾಪ್ರಾಜ್ಞ ಶೃಣುಮದ್ವಚನಂಹಿತಂ ।
ಯಾಗಸಂರಕ್ಷಣಾರ್ಥಂಯುಸಂತಮುಕ್ತಕನಾಮಕಂ ॥೩೧॥

ತಾ॥ ಮಹಾ ಪ್ರಜ್ಞಾಶಾಲಿಯಾದ ಸುಮನಸ್ಕನೇ ನನ್ನ ಹಿತವಾದ ವಚನವನ್ನು ಕೇಳುವವನಾಗು. ನಿನ್ನ ಯಾಗಸಂರಕ್ಷಣಾರ್ಥವಾಗಿ ಈ ಮುಕ್ತಕನೆಂಬ ಸುತನನ್ನು ಅನುಗ್ರಹಿಸಿರುತ್ತೇನೆ. ನೀನು ಈತನ ಸಹಾಯದಿಂದ ಯಾಗವನ್ನು ಪೂರೈಸುವವನಾಗು ॥೩೧॥

ಕೃತ್ವಾಸಹಾಯಂಸಹಸಾಸಂಹೃತ್ಯದನುಜಾಧಿಪಂ ।
ಲೋಕಾನಾಮುಪಿಸಂತೋಷಂಕುರುತ್ವಂಶೀಘ್ರಯತ್ನತಃ ॥೩೨॥

ತಾ॥ ಹಾಗೆ ನೀನು ಮಾಡುವ ಆ ಪೌಂಡರೀಕ ಯಾಗವು ಈತನ ಬಾಹುಬಲ ಸಹಾಯದಿಂದ ನಿರ್ವಿಘ್ನವಾಗಿ ನೆರವೇರುವುದು. ಅದರ ಕಂಟಕನಾದ ಆ ಜಾನುಮಂಡಲ ರಾಕ್ಷಸನನ್ನು ಸಂಹಾರಮಾಡಿ ಲೋಕಕಣ್ಯಾಣವನ್ನುಂಟುಮಾಡುವುದಕ್ಕಾಗಿ ಶೀಘ್ರವೇ ಪ್ರಯತ್ನವನ್ನು ಮಾಡುವವನಾಗು ॥೩೨॥

ಸುದಕ್ಷಿಣೇತಿಕನ್ಯಾವೈಮಮವಾಮಭುಜೋದ್ಭವಂ ।
ತ್ವತ್ರೇಸ್ಮಿಪೌಂಡರೀಕಾಖ್ಯೇಯಾಗೇಮುಕ್ತಋಷಿಸ್ತಥಾ ॥೩೩॥
ತಪಸ್ವಿನೀಮಹಾಸಾಧ್ವೀಹ್ಯಸ್ಯಭಾರ್ಯಾಭವಿಷ್ಯತಿ ।
ಏತದ್ವಂಶೇಸಮುದ್ಭೂತಾಸ್ಸರ್ವಲೋಕೋಪಕಾರಕಾಃ ॥೩೪॥

ತಾ॥ ಆ ನಿನ್ನ ಪೌಂಡರೀಕವೆಂಬ ಯಾಗವು ಈ ಮುಕ್ತಕಋಷಿಯಿಂದ ಸಂರಕ್ಷಿಸಲ್ಪಟ್ಟು ಸಂಪೂರ್ಣವಾದಮೇಲೆ ನನ್ನ ಎಡಭುಜದಿಂದ ಜನಿಸಿದ ಸುದಕ್ಷಿಣೆ ಎಂಬ ಸಾಧ್ವೀಮಣಿಯು ತಪಸ್ವಿನಿಯೂ ಲೋಕಸುಂದರಿಯೂ ಆಗಿರುವ ಆ ಕನ್ಯಾರತ್ನವನ್ನು ಈ ಮುಕ್ತಕಮುನಿಗೆ ಭಾರ್ಯೆಯನ್ನಾಗಿ ಮಾಡುವವನಾಗು. ಈತನಿಂದ ಹುಟ್ಟುವ ವಂಶವು ಸರ್ವಲೋಕೋಪಕಾರಕವಾಗುವುದು. ॥೩೩॥ ॥೩೪॥

ಭವಿಷ್ಯಂತಿಮಹಾತ್ಮಾನಃಪರಸ್ಪರಹಿತೈಷಿಣಃ ।
ಏತದ್ವಂಶಸಮಾಯುಕ್ತಾಃಆರ್ಯಕ್ಷತ್ರಿಯನಾಮಕಾಃ ॥೩೫॥

ತಾ॥ ಹೀಗೆ ಮುಂದೆ ಈತನ ವಂಶದಲ್ಲಿ ಹುಟ್ಟುವವರು ಸರ್ವಲೋಕಗಳಿಗೂ ಉಪಕಾರಿಗಳಾಗಿಯೂ ಪರಸ್ಪರ ಹಿತೈಷಿಗಳಾಗಿಯೂ ಆಗಿರುತ್ತಾರೆ. ಈತನ ವಂಶೀಯರೆಲ್ಲರೂ ಆರ್ಯಕ್ಷತ್ರಿಯರೆಂದು ಪ್ರಖ್ಯಾತರಾಗುತ್ತಾರೆ ॥೩೫॥

ವೇದೋಕ್ತಮಾರ್ಗತಶ್ಚೈವವರ್ತನೇಪೃಥವೀತಲೇ ।
ಜಾತಕರ್ಮಾಧಿಕಾರ್ಯಾಣಿತೇಷಾಂವೇದೋಕ್ತಮಾರ್ಗತಃ ॥೩೬॥

ತಾ॥ ಈ ಮುಕ್ತಕಋಷಿಯ ವಂಶದಲ್ಲಿ ಉತ್ಪನ್ನರಾದವರೆಲ್ಲರೂ ವೇದೋಕ್ತ ಮಾರ್ಗಪ್ರವರ್ತಕರಾಗಿ ಭೂಲೋಕದಲ್ಲಿ ಪ್ರಖ್ಯಾತರಾಗುತ್ತಾರೆ ಮತ್ತು ಹುಟ್ಟಿದ ಸಕಲರೂ ಜಾತಕರ್ಮಾದಿವೇದೋಕ್ತ ಮಾರ್ಗವನ್ನು ಅನುಸರಿಸಿ ಲೋಕಮಾರ್ಗ ಪ್ರವರ್ತಕರಾಗುತ್ತಾರೆ ॥೩೬॥

ಋಷಿಗೋತ್ರೈಃಪ್ರವರ್ತನ್ತೇರೂಪಕಂದರ್ಪಸ್ವರ್ಜಿತಾಃ ।
ಶುಚಿರ್ಭೂತಾಶ್ಚ ತೇಸರ್ವೇಅತೀವಸುಮನೋಹರಾಃ ॥೩೭॥

ತಾ॥ ಮತ್ತು ಈ ವಂಶಜರೆಲ್ಲಾ ಋಷಿಗಳ ಗೋತ್ರಪ್ರವರವುಳ್ಳವರಾಗಿಯೂ ಮನ್ಮಥನಂಥಾರೂಪವುಳ್ಳವರಾಗಿಯೂ ಶುಚಿರ್ಭೂತರಾಗಿಯೂ ಮನೋಹರ ಮೂರ್ತಿಗಳಾಗಿಯೂ ಇರುತ್ತಾರೆ ॥೩೭॥

ಏವಂಕ್ರಮೇಣವರ್ತನ್ತೇಯುಷ್ಮದ್ವಂಶಸಮುದ್ಭವಾಃ ।
ತೇಷಾಂಮುಕ್ತಕನಾಮ್ನಾನ್ಯೈಕುಲಂವೃದ್ಧಿಮುಪೈಷ್ಯತಿ ॥೩೮॥

ತಾ॥ ಈ ರೀತಿಯಾಗಿ ಕಾಲಕ್ರಮದಲ್ಲಿ ಮುಕ್ತಕಋಷಿ ವಂಶಸ್ಥರೆಂದು ಪ್ರಸಿದ್ಧರಾಗಿ ನಿನ್ನ ಕುಲದವರು ಅಭಿವೃದ್ಧಿಹೊಂದಿ ಲೋಕಪ್ರಖ್ಯಾತರಾಗಿರುತ್ತಾರೆಂದು ಪರಮೇಶ್ವರನು ಸುಮನಸ್ಕರಾಯನಿಗೆ ಹೇಳಿದನು ॥೩೮॥

ಇತ್ಯುನೀರ್ಯಾಪುರಾರಾತಿರ್ಯಯೌಕೈಲಾಸಮುತ್ತಮಂ ।
ಸುಮನಸ್ಕೋಪಿರಾಜರ್ಷಿರ್ಭಾರ್ಯಯಾಸಹಶೀಘ್ರತಃ ॥೩೯॥
ಪುತ್ರಂಮೌಕ್ತಿಕಮಾದಾಯಸ್ವಪುರಂಪ್ರಾಪ್ತವಾನ್ಮುದಾ ।

ತಾ॥ ಈ ರೀತಿಯಾಗಿ ಪಾರ್ವತೀರಮಣನಾದ ಪರಶಿವನು ಆ ಸುಮನಸ್ಕನಿಗೆ ಆಜ್ಞಾಪಿಸಿದನಂತರ ಉತ್ತಮವಾದ ತನ್ನ ಕೈಲಾಸವನ್ನು ಸೇರಲು ಪಾರ್ವತೀಸಹಿತನಾಗಿ ಆ ತ್ರಿಪುರಾಂತಕನು ಅಂತರ್ಧಾನನಾದನು. ತದನಂತರ ರಾಜರ್ಷಿಯಾದ ಆ ಸುಮನಸ್ಕನು ತನ್ನ ಭಾರ್ಯೆಯಾದ ಸುಶೀಲೆಯೂ ಮತ್ತು ವರಪುತ್ರನಾದ ಮುಕ್ತರಾಜನ ಸಹಿತ ಹೊರಟು ಸಂತೋಷದಿಂದ ತನ್ನ ಪುರವನ್ನು ಸೇರಿದನು ॥೩೯॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮೌಕ್ತಿಕಋಷಿಸಂಭವೋನಾಮ ಅಷ್ಟಮೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮನಾರದ ಸಂವಾದದಲ್ಲಿ ಮುಕ್ತಋಷ್ಯುತ್ಪನ್ನವೆಂಬ ಎಂಟನೇ ಆಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಒಂಬತ್ತನೆಯ ಅಧ್ಯಾಯ :-

ಯಾಗಕ್ಕೆ ಸ್ಥಳನಿರ್ದೇಶನ

ನಾರದ ಉವಾಚ ;-

ತತಃಪರಂಕಿಂಕೃತವಾ೯ಸುಮನಸ್ಕೋಋಷೀಶ್ವರಃ ।
ತತ್ಸರ್ವಂವದವಿಸ್ತಾರಂಶ್ರೋತುಂಕೌತೂಹಲಂಹಿಮೇ ॥೧॥

ತಾ॥ ಎಲೈ ಪಿತಾಮಹನಾದ ಬ್ರಹ್ಮದೇವನೇ ! ತದನಂತರ ಋಷೀಶ್ವರನಾದ ಸುಮನಸ್ಕನು ಏನು ಮಾಡಿದನು ಎಂಬುದನ್ನು ಸವಿಸ್ತಾರವಾಗಿ ಹೇಳುವವನಾಗು ನಾನು ಕೇಳಬೇಕೆಂಬ ಕುತೂಹಲವುಳ್ಳವನಾಗಿದ್ದೇನೆ ॥೧॥

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮನುತ್ತಮಂ ।
ಸುಮನಸ್ಕೋವಿರಾಜರ್ಷಿಸುತಂಮುಕ್ತಕನಾಮಕಂ ॥೨॥
ಸಂಪ್ರಾಪ್ಯಾತೀವಸಂತುಷ್ಟೋಭಾರ್ಯಯಾಸಹವೀರ್ಯವಾ೯ ।
ಸವನಂಕುರ್ತುಕಾಮಸ್ಸ೯ಯಯೌಗಂಗಾತಟಂಪ್ರತಿ ॥೩॥

ತಾ॥ ಎಲೈ ನಾರದನೇ ! ಆ ರಾಜರ್ಷಿಯಾದ ಸುಮನಸ್ಕಮಹಾರಾಯನು ಈಶ್ವರದತ್ತವಾದ ಮತ್ತು ಸುಮನೋಹರನಾಗಿರುವ ಮುಕ್ತಕನೆಂಬ ತನ್ನ ಕುಮಾರನನ್ನು ಹೊಂದಿದ ಸಂತೋಷಚಿತ್ತದಿಂದ ಪರಮೇಶ್ವರನ ವಾಕ್ಯದಂತೆ ತನ್ನ ಕರ್ತವ್ಯಕ್ಕಾಗಿ ಭಾರ್ಯೆಯಿಂದೊಡಗೂಡಿ ತಾನು ಮಾಡಬೇಕಾಗಿರುವ ಯಾಗಕ್ಕಾಗಿ ಸ್ಥಳವನ್ನು ಹುಡುಕುತ್ತಾ ಗಂಗಾತೀರವನ್ನು ಸೇರಿದನು ॥೨॥೩॥

ತಪೋವನಂಮಹಾರಮ್ಯಂಅತೀವಪ್ರಿಯದರ್ಶನಂ ।
ಜಾತೀಪುನ್ನಾಗವಕುಳಮಲ್ಲಿಕಾಭಿರ್ವಿರಾಜಿತಂ ॥೪॥

ತಾ॥ ಹೀಗೆ ಆ ಸುಮನಸ್ಕನು ಭಾರ್ಯಾಪುತ್ರರೊಡಗೂಡಿ ಗಂಗಾತೀರದಲ್ಲಿ ಬರುತ್ತಿರಲು ಅತ್ಯಂತ ರಮ್ಯವಾಗಿಯೂ ನೋಡಲು ಮನೋಹರವಾಗಿಯೂ ಇರುವ ಒಂದು ತಪೋಪ್ರದೇಶವನ್ನು ಕಂಡು ಸಂತೋಷಭರಿತನಾಗಿ ಆ ವನವನ್ನು ನೋಡಲು ಅಲ್ಲಿ ಜಾಜಿ, ಪುನ್ನಾಗ, ವಕುಳ, ಮಲ್ಲಿಗೆ ಮೊದಲಾದ ಸುವಾಸನಾಯುಕ್ತವಾದ ಮರಗಳಿಂದ ವಿರಾಜಿಸುತ್ತಿರುವ ॥೪॥

ಏಲಾಲವಂಗಮರಿಚನಾಗವಲ್ಲೀವಿಶೋಭಿತಂ।
ಪುನ್ನಾಗೈಃಕೋವಿದಾರೈಶ್ಚ ಮಧೂಕೈರ್ಮಾತುಲಂಗಕೈಃ ॥೫॥

ತಾ॥ ಆ ವನದಲ್ಲಿ ಎಲ್ಲಿ ನೋಡಿದರಲ್ಲಿ ಸುಗಂಧವನ್ನು ಹರಡುವ ಏಲಕ್ಕಿ, ಲವಂಗ, ಮೆಣಸು, ವೀಳೆದೆಲೆಯ ಬಳ್ಳಿಗಳೂ ಪುನ್ನಾಗ, ಕೋಧಾರ, ಮಧೂಕ, ಮಾತುಲಂಗವೇ ಮೊದಲಾದ ಮರಗಳು ಎಲ್ಲೆಲ್ಲಿಯೂ ಶೋಭಿಸುತ್ತಿರುವ ॥೫॥

ಖರ್ಜೂರೈಃಕೇತಕೀವೃಕ್ಷಃಕ್ರಮುಕೈರುಪಶೋಭಿತಂ।
ಕಪಿತ್ಥ ಬಿಲ್ವಾಮಲಕೈರ್ದಾಡಿಮಾದಿಭಿರಾವೃತಂ ॥೬॥

ತಾ॥ ಮತ್ತು ಆ ವನರಾಜದಲ್ಲಿ ಖರ್ಜೂರ, ಕೇತಕಿ, ಕ್ರಮುಕ, ಬೇಲ, ಬಿಲ್ವ, ಆಮಲಕ, ದಾಡಿಮ ವೃಕ್ಷಗಳೂ ಒಂದಕ್ಕೊಂದು ಸ್ಪರ್ಧಿಸುವಂತೆ ಸಹಕರಿಸುತ್ತಾ ಸುಯ್ ಗುಟ್ಟುತ್ತಾ ಮನಸ್ಸಿಗೆ ಆಂದವನ್ನುಂಟುಮಾಡುತ್ತಿದ್ದವು ॥೬॥

ಜಂಬೀರೈಶ್ಚ ರಸಾಲೈಶ್ಚ ನ್ಯಗ್ರೋಧೈಸ್ಸುಮನೋಹರಂ।
ವಕುಳೈಸ್ತಾಲಹಿಂತಾತ್ಯೈಃರಸಾತೈಶ್ಚಾಪಿಶೋಭಿತಂ ॥೭॥

ತಾ॥ ಆ ಮನೋಹರವಾದ ವನದಲ್ಲಿ ನಿಂಬೆ, ವಕುಳ, ತಾಳೆ, ಹಿಂತಾಲ, ರಸಾಲತಿಯೇ ಮೊದಲಾದ ಅನೇಕಾನೇಕ ವಿವಿದ ಸ್ವರೂಪವಾದ ಆ ವೃಕ್ಷಗಳು ರಾರಾಜಿಸುತ್ತಿರುವ ಆ ವನವನ್ನು ಅಲಂಕರಿಸಿದ್ದವು ॥೭॥

ಸಿಂಹಶಾರ್ದೂಲಮಾತಂಗಗಂಡಬೇರುಂಡಶೋಭಿತಂ।
ವರಾಹೈಃಶ್ವಾದೈಶ್ಚಾಪಿಮೃಗಸಂಘಸಮಾವೃತಂ ॥೮॥

ತಾ॥ ಆ ಮಹಾಪ್ರದೇಶದಲ್ಲಿ ವನರಾಜನಾದ ಸಿಂಹಗಳೂ ಅತೀ ಭಯಾನಕವಾದ ವ್ಯಾಘ್ರಗಳೂ, ಮದೋವಿಶೇಷವಾದ ಗಜರಾಜಗಳೂ, ದೇವಲೋಕದ ಗಂಡಬೇರುಂಡಗಳೂ, ವರಾಹಾದಿ ಮೃಗಸಮೂಹಗಳಿಂದ ಆ ವನವು ಶೋಭಿಸುತ್ತಾ ಇದ್ದಿತು ॥೮॥

ಕೋಕಿಲಾಲಾಪಸಂಕೀರ್ಣಂಮಯೂರನಿನದೋಜ್ವಲಂ।
ಶಾರಿಕಾರಾವರುಚಿರಂಶುಕವಾಗ್ಭಿರ್ವಿರಾಜಿತಂ ॥೯॥

ತಾ॥ ಮತ್ತು ಆ ಮನೋಹರವಾದ ವನದಲ್ಲಿ ಸಂಗೀತರೂಪಶಬ್ದದಿಂದ ಕರ್ಣಾನಂದವನ್ನುಂಟುಮಾಡುತ್ತಿರುವ ಕೋಗಿಲೆಗಳೂ ವನರಾಜನ ಋತುಸಂದರ್ಶನ ಮಾಡಿಸುವ ನರ್ತನದಿಂದ ನೋಡಲು ಹರ್ಷವನ್ನು ಮಾಡುವ ನವಿಲುಗಳೂ ಮುದ್ದುಮಾತುಗಳಿಂದ ಮನಸ್ಸಂತೋಷಪಡಿಸುವ ಗಿಳಿಗಳೂ ಕಣ್ಣಿಗೆ ಆನಂದವನ್ನುಂಟು ಮಾಡುವ ಜಿಂಕೆಗಳಿಂದಲೂ ಕೂಡಿ ಆ ವನವು ದೇವೇಂದ್ರನ ನಂದನ ವನದಂತೆ ಶೋಭಿಸುತ್ತಾ ಇದ್ದಿತು ॥೯॥

ಹಂಸಕಾರಂಡವಾಕೀರ್ಣೈಸ್ಸರೋಭಿಶ್ಚ ವಿರಾಜಿತಂ ।
ಏತಾದೃಶಂಮಹಾರಣ್ಯಂಸುಮನಸ್ಕೋಮಹಾಮತಿಃ ॥೧೦॥

ತಾ॥ ಎಲ್ಲೆಲ್ಲಿಯೂ ಸರೋವರಗಳು ಅದರಲ್ಲಿ ಹಂಸಪಕ್ಷಿ ಸಮೂಹವು ಕಾರಂಡ ಪಕ್ಷಿಗಳ ಕಲಕಲನಾದವು ಕೇಳುತ್ತಿರಲು ಇದೆಲ್ಲವನ್ನು ನೋಡುತ್ತಾ ಆ ಮಹಾರಣ್ಯದಲ್ಲಿ ಸುಮನಸ್ಕಮಹಾರಾಜನು ಯಾಗಮಾಡಲು ಪ್ರಶಸ್ತವಾದ ಸ್ಥಳ ವಿದೆಂದು ತನ್ನ ಮನಸ್ಸಿನಲ್ಲಿ ನಿರ್ಧರಿಸಿಕೊಂಡನು ॥೧೦॥

ದುಷ್ಟ್ವಾವಿಸ್ಮಯಮಾಪನ್ನಃಪರಾಂಪ್ರೀತಿಮುಪಾಗಮತ್ ।
ಸುಪರ್ವಲೋಕತಟನೀತಟೋಜಜನವಾಸಿನಃ ॥೧೧॥

ತಾ॥ ಮಹಾ ಬುದ್ಧಿಶಾಲಿಯಾದ ಆ ಸುಮನಸ್ಕ ಮಹಾರಾಜನು ಈ ರೀತಿ ವಿವಿಧ ವೃಕ್ಷಗಳಿಂದಲೂ ಮೃಗಪಕ್ಷಿಗಳಿಂದ ಕೂಡಿರುವ ಆ ಮಹಾರಣ್ಯದಲ್ಲಿ ಜನರು ವಾಸಿಸುತ್ತಿರುವುದನ್ನು ಕಂಡು ಆಶ್ಚರ್ಯಪಟ್ಟು ಮತ್ತು ಆ ಪ್ರದೇಶವನ್ನು ನೋಡುತ್ತಾ ತಿರುಗುತ್ತಿದ್ದನು ॥೧೧॥

ತಪೋಧನಾನ್ಮಹಾಭಾಗಾನ್ಯಮನಸ್ಸಂಶಿತವ್ರತಾನ್ ।
ದೃಷ್ಟ್ವಾನ್ಸಹಪುತ್ರೇಣಭಾರ್ಯಯಾಸಹಿತೋನಘಃ ॥೧೨॥

ತಾ॥ ಈ ರೀತಿಯಾಗಿ ಆ ಗಂಗಾನದೀತೀರದಲ್ಲಿ ಸಂಚರಿಸುತ್ತಿರಲು ಅಲ್ಲಿ ಅನೇಕ ಮಹಾತ್ಮರೂ, ತಪೋನಿಷ್ಟರೂ, ಯಮ ನಿಯಮ ವ್ರತನಿಷ್ಟರೇ ಮೊದಲಾದ ಅನೇಕ ಮಹರ್ಷಿಗಳು ನೆಲಸಿರುವುದನ್ನು ಆ ಸುಮನಸ್ಕನು ಭಾರ್ಯಪುತ್ರರೊಡಗೂಡಿ ಅವರನ್ನೆಲ್ಲಾ ನೋಡಿದನು ಅಲ್ಲಿದ್ದ ಮಹಾಋಷಿಗಳಾರ್ಯಾರೆಂದರೆ ॥೧೨॥

ವಸಿಷ್ಠಂನಾಮದೇವಂಚಕೌಂಡಿನ್ಯಂಚ್ಯವನಂತಥಾ ।
ಗಾಲವಂಕಶ್ಯಪಂಚೈವಭೃಗುಂಜೈಮುನಿನೇವಚ ॥೧೩॥

ತಾ॥ ಆ ಮಹಾಋಷಿಗಳಾದ ವಸಿಷ್ಠರು, ವಾಮದೇವರು, ಕೌಂಡಿನ್ಯರು, ಚ್ಯವನರು, ಗಾಲವರು, ಕಶ್ಯಪರು, ಭೃಗುಋಷಿಗಳು ಹಾಗೂ ಜೈಮುನಿಗಳು ॥೧೩॥

ವಿಶ್ವಾಮಿತ್ರಭರದ್ವಾಜಾಅತ್ರಿಗೌತಮಮಾಮುನಾನ್ ।
ಕಣ್ವಂಚಾಪಿಮಹಾಭಾಗಂಕಪಿಲಂಸುಂದರಾಹ್ವಯಂ ॥೧೪॥

ತಾ॥ ಮತ್ತು ವಿಶ್ವಾಮಿತ್ರಋಷಿಯು ಭರದ್ವಾಜರು, ಅತ್ರಿಮಹಾಮುನಿಯು, ಗೌತಮರು, ತಪೋಧನರಾದ ಕಣ್ವಮಹರ್ಷಿಗಳು ಮಹಾಯೋಗಾಚಾರ್ಯರಾದ ಕಪಿಲರೂ ಸುಂದರಋಷಿಗಳೂ ಅಲ್ಲಿ ಇದ್ದರು ॥೧೪॥

ಶೃತಿಕೀರ್ತಿಂಋಷಿಶ್ರೇಷ್ಠಂತಥಾಶ್ಯಾಂಡಿಲ್ಯರೋಮಶೌ ।
ಜಾಬಾಲಿಂಭಾರ್ಗವಂಚೈವಧೌಮ್ಯಾಖ್ಯಂರೋಮಹರ್ಷಣಂ ॥೧೫॥

ತಾ॥ ಋಷಿಶ್ರೇಷ್ಠನಾದ ಶೃತಿಕೀರ್ತಿಯೂ, ಶ್ಯಾಂಡಿಲ್ಯರೂ. ರೋಮಶರೂ, ಜಾಬಾಲಿಯೂ ಭಾರ್ಗವರೂ, ಮತ್ತು ಧೌಮ್ಯರೂ. ರೋಮಹರ್ಷಣರೂ ಅಲ್ಲಿದ್ದರು ।।೧೫।।

ಕಠೋಥಂಗಾಧಿಶಬಳೌಕಲವಿಂಕಪರಾಶರೌ ।
ನಾಭಿಲಾತ್ರಿಯಮೌದ್ಗಲ್ಯಾಮಿತ್ರಶ್ರೀವತ್ಸಸಂಜ್ಞಕೌ ॥೧೬॥

ತಾ॥ ಕಠೋಧರೂ, ಗಾಧಿಯೂ, ಶಬಳಿಯೂ, ಕಲವಿಂಕರೂ, ಪರಾಶರರೂ, ನಾಭಿಲರೂ, ಅತ್ರೇಯಮುನಿಗಳೂ, ಮೌದ್ಗಲ್ಯರೂ, ಮಿತ್ರರೂ, ಶ್ರೀವತ್ಸಮುನಿಗಳೂ ಸಹ ಅಲ್ಲಿದ್ದರು ।।೧೬।।

ಪೌಲಸ್ತ್ಯನವಗೋಶೀರ್ಷೌರಮಾರ್ಕಂಡೇಯಂಮಹಾಮುನಿಂ ।
ಬಕದಾಲ್ಭ್ಯನ್ಯಾಯಋಷಿಂಕುತ್ಸಂನಾರದನೋವಚ ॥೧೭॥

ತಾ॥ ಪೌಲಸ್ತ್ಯಋಷಿಯೂ, ನವಗೋಶೀರ್ಷರೂ, ಮಹಾಮುನಿಗಳಾದ ಮಾರ್ಕಂಡೇಯರೂ, ವ್ರತನಿರತರಾದ ಬಕದಾಲ್ಭ್ಯರೂ, ನ್ಯಾಯಮುನಿಯೂ, ಕುತ್ಸ ಋಷಿಯೂ ಮತ್ತು ದೇವರ್ಷಿಗಳಾದ ನಾರದರೂ ಅಲ್ಲಿದ್ದರು ।।೧೭।।

ಮಂಕಣಂಚಋಷಿಶ್ರೇಷ್ಠಂಸಧರ್ಮೋಪನಾಮಕಂ ।
ಋಷ್ಯಶೃಂಗಂಮಹಾಬುದ್ಧಂಪಾರಾಶರ್ಯಂಮಹಾಮತಿಂ ॥೧೮॥

ತಾ॥ ಮಂಕಣರೂ, ಸಧರ್ಮರೂ, ಋಷ್ಯಶೃಂಗರೂ, ಪದ್ಮರೂ, ಮಹಾಬುದ್ಧ ರೆಂಬುವರೂ, ವ್ಯಾಸರೇ ಮೊದಲಾದ ಋಷಿಶ್ರೇಷ್ಠರೆಲ್ಲರೂ ಅಲ್ಲಿದ್ದರು ।।೧೮।।

ವಾಲಖಿಲ್ಯಂಚವಕುಲಂ ಉಗ್ರಸೇನಂಶಿರೋದ್ಭವಂ ।
ಚಿಣ್ವಂಮಹಾತಪಶ್ರೇಷ್ಠಂಸನಂಡನಮಹಾಮುನಿಂ ॥೧೯॥

ತಾ॥ ವಾಲಖಿಲ್ಯಋಷಿಗಳೂ, ನಕುಲಮುನಿಯೂ, ಉಗ್ರಸೇನರೂ, ಶಿರೋದ್ಭವರೂ, ಚಿಣ್ವಮುನಿಗಳೂ, ಮಹಾ ತಪಶ್ರೇಷ್ಟರಾದ ಸನಂದನ ಮುನಿಗಳೂ ಅಲ್ಲಿದ್ದರು ।।೧೯।।

ಜೀಪನಂಗೋಪುರಂಚೈವಗೋಪಗೋಕುಲನಾಮಕೌ ।
ಏವಮನ್ಯಾಮಹಾಭಾಗಾತಪಸಾಧ್ವಸ್ತಕಲ್ಮಷಾ ॥೨೦॥

ತಾ॥ ಜೀಪಸರೂ, ಗೋಪಕರೂ ಗೋಪರೆಂಬುವರೂ ಗೋಕುಲ ನಾಮ ಧೇಯರೇ ಮೊದಲಾದ ಋಷಿಶ್ರೇಷ್ಠರೂ ಪಾಪರಹಿತರೂ ಲೋಕಕಲ್ಯಾಣವನ್ನು ಮಾಡುವ ಸಕಲ ಋಷಿಗಳೂ ಅಲ್ಲಿ ನೆಲಸಿದ್ದರು ।।೨೦।।

ಸುಶೀಲಾಮುಕ್ತಕಾಭ್ಯಾಂಚಸಂಗತೋಽಮುನಿಸತ್ತಮಾಃ ।
ಸುಮನಸ್ಕಸ್ಸದಾದ್ರಷ್ಟ್ವಾಪ್ರಣಮ್ಯಮುನಿಪುಂಗವಾನ್ ॥೨೧॥

ತಾ॥ ಹೀಗೆ ಅಲ್ಲಿರುವ ಸಕಲ ಮುನಿಶ್ರೇಷ್ಠರಾದ ಎಲ್ಲಾ ಋಷಿಗಳಿಗೂ ಸುಮನಸ್ಕನು ಭಾರ್ಯೆಯಾದ ಸುಶೀಲೆ ಮತ್ತು ಪುತ್ರನಾದ ಮುಕ್ತರಾಜರೊಡಗೂಡಿ ಸಕಲರಿಗೂ ನಮಸ್ಕಾರಗಳನ್ನು ಮಾಡಿದರು ॥೨೧॥

ಉತ್ಥಾಯಚತಥಾಶೀಘ್ರಂವಿನಯೇನಕೃತಾಂಜಲೀಃ ।
ಶೃಣುಧ್ವಂಮುನಯಸ್ಸರ್ವೇಮದ್ವಾಕ್ಯಂಕೃಪಯಾನ್ವಿತಾಃ ॥೨೨॥

ತಾ॥ ಈ ರೀತಿಯಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಎದ್ದು ನಿಂತುಕೊಂಡು ಅಂಜಲೀಬದ್ದನಾಗಿ ಆ ಸುಮನಸ್ಕನು ಈ ರೀತಿಯಾಗಿ ಪ್ರಾರ್ಥಿಸಿದನು. ಮಹಾತ್ಮರಾದ ಮತ್ತು ಕೃಪಾನಿಧಿಗಳಾದ ಮಹರ್ಷಿಗಳಿರಾ ನನ್ನ ವಿನಯಪೂರ್ವಕವಾದ ವಿಜ್ಞಾಪನೆಯನ್ನು ಲಾಲಿಸಿರಿ ॥೨೨॥

ಈಶ್ವರೇಣಾಭ್ಯನುಜ್ಞೋಽಸ್ಮಿಮುಕ್ತಕೇನಸುತೇನಚ ।
ಸುಶೀಲಯಾಚಸಹಿತಃಕರ್ತುಕಾಮೋಮಹಾಧ್ವರಂ ॥೨೩॥

ತಾ॥ ನಾನು ಚತುರ್ಮುಖ ಬ್ರಹ್ಮನಿಂದ ಪ್ರೇರಣಾನುಸಾರವಾಗಿ ಸ್ವೀಕರಿಸಿದ ಧರ್ಮಪತ್ನಿಯಾದ ಸುಶೀಲೆಯೊಡಗೂಡಿ ಪಾರ್ವತೀಪತಿಯಾದ ಪರಮೇಶ್ವರನಿಂದ ಆಜ್ಞಾಪ್ತನಾಗಿ ಪುತ್ರನಾದ ಮುಕ್ತಕನಿಂದ ಕೂಡಿ ಪೌಂಡರೀಕವೆಂಬ ಮಹಾಯಾಗವನ್ನು ಮಾಡಬೇಕೆಂಬ ನನ್ನ ಇಚ್ಛೆಯನ್ನು ॥೨೩॥

ಸಮೀಪಂಭವತಾಮದ್ಯಪ್ರಾಪ್ತೋಽಸ್ಮಿಮುನಿಸತ್ತಮಾಃ ।
ಇತ್ಯೇತದ್ವಚನಂಶ್ರುತ್ವಾಮುನಿಯಸ್ಸಂಶಿತವ್ರತಾಃ ॥೨೪॥

ತಾ॥ ಎಲೈ ಮಹರ್ಷಿಗಳಿರಾ ಆ ನನ್ನ ಸಂಕಲ್ಪಪೂರ್ತಿಗಾಗಿ ತಮ್ಮಗಳ ಸನ್ನಿಧಿಗೆ ಬಂದಿದ್ದೇನೆ ಆದ್ದರಿಂದ ತಾವುಗಳು ಕೃಪಯಾವಿಷ್ಟರಾಗಿ ನನ್ನ ಪ್ರಾರ್ಥನೆಯನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸಿದ ಸುಮನಸ್ಕಮಹಾರಾಯನ ವಾಕ್ಯಗಳನ್ನು ಕೇಳಿದ ಮಹರ್ಷಿಗಳು ಭವಿಷ್ಯದಲ್ಲಿರುವ ತೊಂದರೆಗಳನ್ನು ಅರಿತವರಾದಕಾರಣ ಮನಸ್ಸಿನಲ್ಲಿ ಸಂಶಯವನ್ನು ಹೊಂದಿದರು ॥೨೪॥

ಊಚುಸ್ಸಂಶಯಮಾಪನ್ನಾಃಸುಮನಸ್ಕಋಷಿಂಪ್ರತಿ ।
ಸುಮನಸ್ಕಮಹಾಭಾಗಕಥಂತ್ವಂಕರ್ತುಮರ್ಹಸಿ ॥೨೫॥

ತಾ॥ ಈ ರೀತಿಯಾಗಿ ಸಂಶಯಾವಿಷ್ಟರಾದ ಆ ಮಹರ್ಷಿಗಳು ಸುಮನಸ್ಕನಿಗೆ ಪ್ರತಿಯಾಗಿ ಈ ವಿಧವಾಗಿ ಹೇಳಿದರು ಮಹಾಯಶಸ್ವಿಯಾದ ಸುಮನಸ್ಕನೇ ನಿನ್ನ ಸಂಕಲ್ಪದ ಯಾಗವನ್ನು ಯಾವ ರೀತಿ ಹೇಗೆ ಪೂರೈಸುತ್ತೀ ಎಂಬುದೇ ನಮ್ಮಗಳ ಸಂಶಯವು ॥೨೫॥

ವರ್ತನ್ತೇಬಹವೋದೈತ್ಯಾಃಕ್ರಿಯಾಪ್ರತ್ಯುಹಕಾರಿಣಃ ।
ತಸ್ಮಾದ್ವಯಂಭಯಭ್ರಾನ್ತಾಃವಸಾಮುಚ್ಛನ್ನತೇಜಸಃ ॥೨೬॥

ತಾ॥ ಎಲೈ ಸುಮನಸ್ಕನೇ ನಿನ್ನ ಸಂಕಲ್ಪದ ಮಹಾಯಾಗಕ್ಕೆ ವರ್ತಮಾನಕಾಲದಲ್ಲಿ ವಿಘ್ನಮಾಡಲು ಅನೇಕ ದೈತ್ಯರಿರುವುದರಿಂದ ಆ ಮಹಾಯಾಗವನ್ನು ನೀನು ಹೇಗೆ ನೆರವೇರಿಸಲಿಚ್ಛಿಸುತ್ತೀಯೆ ? ನಾವೆಲ್ಲಾ ಆ ದೈತ್ಯರ ಹಾವಳಿಯಿಂದ ತೇಜೋಹೀನರಾಗಿರುತ್ತೇವೆಂದು ಹೇಳಿದರು ॥೨೬॥

ಇತ್ಯೇತದ್ವಚನಂಶ್ರುತ್ವಾಸುಮನಸ್ಕೋಮಹಾಯಶಾಃ ।
ಉವಾಚಪ್ರಾಂಜಲಿರ್ವಾಕ್ಯಂಋಷೀನಗ್ನಿಸಮಪ್ರಭಾನ್ ॥೨೭॥

ತಾ॥ ಅಗ್ನಿಗೆ ಸಮಾನ ತೇಜಸುಳ್ಳ ಆ ಮಹರ್ಷಿಗಳು ಈ ರೀತಿ ಹೇಳಲು ಆ ವಾಕ್ಯಗಳನ್ನು ಕೇಳಿದ ಮಹಾ ಕೀರ್ತಿವಂತನಾದ ಆ ಸುಮನಸ್ಕನು ಕೈಗಳನ್ನು ಜೋಡಿಸಿಕೊಂಡು ವಿನಯಪೂರ್ವಕವಾಗಿ ಮುಂದೆ ಹೇಳುವ ರೀತಿ ಹೇಳುತ್ತಾನೆ ॥೨೭॥

ಸುಮನಸ್ಕ ಉವಾಚ ;–

ಶೃಣುಧ್ವಂಮುನಿಯಸ್ಸರ್ವೇಮದ್ವಾಕ್ಯಂವಿನಯಾನ್ವಿತಂ ।
ಅಯಂಮಮಸುತಶ್ರೀವಾನ್ತ್ರಿಣೇತ್ರಾಂಶಸಮುದ್ಭವ ॥೨೮॥
ಸರ್ವಶಸ್ತ್ರಭೃತಾಂಶ್ರೇಷ್ಠಃಧೀರೋನ್ಯೈರಾಕ್ಷಸಾಂತಕಃ ।
ಅಯಂಚೇತಾಮಹಾಯಾಗೇಬಲಿನಾಮವಿರಾಕ್ಷಸಃ ॥೨೯॥

ತಾ॥ ಎಲೈ ಮುನಿಶ್ರೇಷ್ಠರೇ ವಿನಯದಿಂದ ಕೂಡಿದ ನನ್ನ ಮಾತುಗಳನ್ನು ನೀವೆಲ್ಲರೂ ಲಾಲಿಸಿರಿ ಶ್ರೀಮಂತನಾದ ಈ ನನ್ನ ಪುತ್ರನು ಸಾಕ್ಷಾತ್ ಪರಮೇಶ್ವರನ ಅಂಶದಿಂದ ಜನಿಸಿದವನು ಮತ್ತು ಸಮಸ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ ಧೀರನೂ ಆಗಿ ರಾಕ್ಷಸರಿಗೆ ಯಮಸ್ವರೂಪನೂ ಆಗಿರುವನು ಈ ಮುಕ್ತಕನು ಬಲಿಷ್ಠರಾದ ಆ ರಾಕ್ಷಸರನ್ನು ಯುದ್ಧದಲ್ಲಿ ಗೆದ್ದು ಯಾಗವನ್ನು ನೇರವೇರಿಸಲು ಸಮರ್ಥನಾಗಿರುವನು ಮತ್ತು ಈತನ ವಿಶೇಷಗಳನ್ನು ಹೇಳುವೆನು ಕೇಳಿರಿ ॥೨೮॥೨೯॥

ಶಿಕ್ಷಿತಾಸ್ತ್ರಸ್ತ್ರಿಣೇತ್ರೇಣವರೋಮುಕ್ತಕನಾಮಕಃ ।
ಭವತಾಂಚಪ್ರಸಾದೇನರಿಪೂನ್ಸರ್ವಾನ್ಜಯಿಷ್ಯತಿ ॥೩೦॥

ತಾ॥ ತ್ರಿಪುರಸಂಹಾರಿಯಾದ ಪರಮೇಶ್ವರನಿಂದ ಶಿಕ್ಷಿತನಾಗಿ ಅಸ್ತ್ರಶಸ್ತ್ರಗಳುಳ್ಳವನೂ ವೀರನೂ ಧೀರನೂ ಆದ ಈ ಮುಕ್ತಕನು ನಿಮ್ಮಗಳ ಅನುಗ್ರಹದಿಂದ ಶತ್ರುಗಳನ್ನೆಲ್ಲಾ ಜಯಿಸಲು ಸಮರ್ಥನಾಗಿರುವನು ॥೩೦॥

ಇತ್ಯೇತದ್ವಚನಂಶ್ರುತ್ವಾಋಷಯೋವಿಸ್ಮಯಾನ್ವಿತಾಃ ।
ಮುಕ್ತಕಂತಂಸಮಾಲೋಕ್ಯಋಷಿಯೋಹ್ಯುಗ್ರತೇಜಸಃ ॥೩೧॥

ತಾ॥ ಈ ರೀತಿಯಿಂದ ಹೇಳಿದ ಸುಮನಸ್ಕರಾಜನ ಮಾತುಗಳನ್ನು ಕೇಳಿದ್ದ ಆ ಮಹರ್ಷಿಗಳೆಲ್ಲರೂ ಉಗ್ರತೇಜಸುಳ್ಳವರಾಗಿ ಆ ಮುಕ್ತಕಋಷಿಯನ್ನು ಕಂಡು ವಿಸ್ಮಯಾವಿಷ್ಟರಾದರು ॥೩೧॥

ನನೆಂದುರುರ್ಮುನಯಸ್ಸರ್ವೇತದಾನಿರ್ಭಯಮಾನಸಾಃ ।
ಊಚುಸ್ತದೇಕವಾಕ್ಯೇನಸುಮನಸ್ಕಋಷಿಂಪ್ರತಿಃ ॥೩೨॥

ತಾ॥ ಆ ಮುಕ್ತಕಮುನಿಯನ್ನು ಕಂಡು ಮಹರ್ಷಿಗಳೆಲ್ಲಾ ನಿರ್ಭಯಮಾನಸರಾದವರಾಗಿ ಸಕಲರೂ ಏಕಕಂಠಸ್ತರಾಗಿ ಉಚ್ಚಸ್ವರದಲ್ಲಿ ಸುಮನಸ್ಕರಾಜನಿಗೆ ಪ್ರತಿಯಾಗಿ ಇಂತೆಂದರು ॥೩೨॥

ಯಾಗಶಾಲ ನಿರ್ಮಾಣ

ತಥೈವಾಸ್ತುಮಹಾಭಾಗಯಾಗಂತ್ವಂಕರ್ತುಮರ್ಹಸಿ ।
ಇತ್ಯೇತದ್ವಚನಂಶ್ರುತ್ವಾಸುಮನಸ್ಕೋಮಹಾಮತಿಃ ॥೩೩॥
ಏವಂಋಷಿಭಿರಾಜ್ಞಾತಃಕರ್ತುಕಾಮೋಮಹಾಧ್ವರಂ ।
ವಿಶ್ವಕರ್ಮಾಣಮಾಹೂಯತತ್ರಗಂಗಾನದೀತಟೇ ॥೩೪॥

ತಾ॥ ಎಲೈ ಮಹಾಭಾಗ್ಯಶಾಲಿಯಾದ ಸುಮನಸ್ಕರಾಯನೇ ನಿನ್ನ ಮನೋಭೀಷ್ಟದಂತೆಯೇ ಆಗಲಿ ನೀನಿನ್ನು ಮಹಾಯಾಗವನ್ನು ಮಾಡಲು ಪ್ರಯತ್ನಿಸೆಂದು ಋಷಿಗಳೆಲ್ಲರೂ ಹೇಳಲು, ಆ ಗಂಗಾನದೀ ತೀರದಲ್ಲಿ ಪೌಂಡರೀಕ ಯಾಗವನ್ನು ಮಾಡಲು ಮಹಾಬುದ್ಧಿಶಾಲಿಯಾದ ಆ ಸುಮನಸ್ಕನು ಋಷಿಗಳ ಆಜ್ಞಾಪ್ರಕಾರವಾಗಿ ವಿಶ್ವಕರ್ಮನನ್ನು ಕರೆಯಿಸಿದನು ॥೩೩॥೩೪॥

ಉತ್ತರಾಯಣೇವಸಂತಋತೌಪ್ರಥಮಪಕ್ಷೇ ।
ಪಂಚಮ್ಯಾಂಮಕರಲಗ್ನೇಸರ್ವೇಗ್ರಹಾಉಚ್ಚಸ್ಥಾನೇ ॥೩೫॥
ಯಾಗಶಾಲಾಂನಿರ್ಮಾಯವಿಶಾಲಾಂಸುಮನೋಹರಾಂ ।
ಸರ್ವಸಂಭಾರಸಂಪೂರ್ಣಂದಿವ್ಯಮಾಣಿಕ್ಯಶೋಭಿತಾಃ ॥೩೬॥

ತಾ॥ ಆ ವಿಶ್ವಕರ್ಮನು ಯಾಗಶಾಲೆ ನಿರ್ಮಾಣಕ್ಕೆ ಪ್ರಶಸ್ತವಾದ ಉತ್ತರಾಯಣದಲ್ಲಿ ವಸಂತಋತುವಿನ ಮೊದಲನೇ ಪಕ್ಷದ ಪಂಚಮಿ ಮಕರಲಗ್ನದಲ್ಲಿ ಎಲ್ಲಾ ಗ್ರಹಗಳೂ ಉಚ್ಚಸ್ಥಾನದಲ್ಲಿರಲು ಯಾಗಶಾಲೆಯನ್ನು ಪ್ರಾರಂಭಿಸಿ ಆ ಯಾಗಶಾಲೆಯು ವಿಶಾಲವಾಗಿಯೂ ಮನೋಹರವಾಗಿಯೂ ಸರ್ವಸಂಭಾರಗಳಿಂದ ಪೂರ್ಣವಾಗಿಯೂ ದಿವ್ಯ ಮಾಣಿಕ್ಯಗಳಿಂದ ಶೋಭಿಸುವಂತೆಯೂ ಮಾಡಿದನು ॥೩೫॥೩೬॥

ಯೂಪಸ್ತಂಭಸಮಾಯುಕ್ತಾಂಅಗ್ನ್ಯಾಯತನಶೋಭಿತಾಂ ।
ಹೋಮಕುಂಡತ್ರಯಯುತಾಂಸ್ವರ್ಣಭಿತ್ತಿನಿವಿರಾಚಿತಾಂ ॥೩೭॥

ತಥಾವಿಧಾಯಾಗಶಾಲಾಂಪ್ರವಿಶ್ಯಋಷಿಭಿಸ್ಸಹ ।
ಪರ್ವಕಾಲೇಸಮುತ್ಪನ್ನೇಪಣ್ಯೇಶುಭಮುಹೂರ್ತಕೇ ॥೩೮॥

ತಾ॥ ಆ ವಿಶ್ವಕರ್ಮನು ಯಾಗಶಾಲೆಯನ್ನು ಯೂಪಸ್ತಂಭಸಮಾಯುಕ್ತವೂ, ಅಗ್ನ್ಯಾಯತನ ಶೋಭಿತವೂ ಆಹವನೀಯ ಗಾರ್ಹಪತ್ಯ ದಕ್ಷಿಣಾಗ್ನಿಗಳೆಂಬ ಮೂರು ಅಗ್ನಿಕುಂಡಗಳ ಸಹಿತ ಸುವರ್ಣಗೋಡೆಗಳಿಂದ ವಿರಾಜಿತವೂ ಆದ ಯಾಗಶಾಲೆಯನ್ನು ನಿರ್ಮಾಣಮಾಡಿ ಸುಮನಸ್ಕರಾಯನಿಗೆ ಕೊಡಲು ಆಗ ಮಹಾಯೋಗಿಯಾದ ಆ ಸುಮನಸ್ಕನು ಪರ್ವಕಾಲದ ಶುಭಮುಹೂರ್ತದಲ್ಲಿ ಪುಣ್ಯಸಮಯದಲ್ಲಿ ಮಹರ್ಷಿಗಳಿಂದೊಡಗೂಡಿ ಆ ಯಾಗಶಾಲೆಯನ್ನು ಪ್ರವೇಶಿಸಿದನು ॥೩೭॥೩೮॥

ದಕ್ಷಿಣೀಯಾದಿಕರ್ಮಾಣಿಕರ್ತುಮಾರಬ್ಧತಾಂತಥಾ ।
ದೀಕ್ಷಿತಸ್ಸಮಹಾಯೋಗೀಯಾಗಂಕರ್ತುಂಪ್ರಚಕ್ರಮೇ ॥೩೯॥

ತಾ॥ ಈ ರೀತಿಯಾಗಿ ಯಾಗಶಾಲೆಯನ್ನು ಪ್ರವೇಶಮಾಡಿದ ಮಹಾಯೋಗಿಯಾದ ಆ ಸುಮನಸ್ಕನು ಯಾಗಕ್ಕೆ ಮೊದಲು ಮಾಡಬೇಕಾದ ಕಾರ್ಯಗಳನ್ನು ಮಾಡಲು ಯಜ್ಞದೀಕ್ಷೆಯನ್ನು ವಹಿಸಿ ದಕ್ಷಿಣತೇಯವೇ ಮೊದಲಾದ ಕ್ರಿಯೆಗಳನ್ನು ಮಾಡಲು ಪ್ರಾರಂಭಿಸಿದನು ॥೩೯॥

ವಿಶ್ವಕರ್ಮಾಶಿಲ್ಪವಿದ್ಯಾಚಮತ್ಕಾರವಿದಾಂವರಃ ।
ಕೃತಾಮಯಾರತ್ನಮಯೀಯಾಗಶಾಲಾಮನೋಹರಾ ॥೪೦॥
ಇತ್ಯುಕ್ತ್ವಾಪ್ರಯಯೌಹೇಹಾತ್ಝಟಿತಿಸ್ವಗೃಹಂಪ್ರತಿ ।

ತಾ॥ ಶಿಲ್ಪಿ ವಿದ್ಯಾಚಾತುರ್ಯವುಳ್ಳವರಲ್ಲಿ ಅಗ್ರೇಸರನಾದ ವಿಶ್ವಕರ್ಮನಾದರೋ, ರತ್ನಮಯವೂ ಮನೋಹರವೂ ಆದ ಯಾಗಶಾಲೆಯು ನನ್ನಿಂದ ನಿರ್ಮಿಸಲ್ಪಟ್ಟಿತೆಂದು ಹೇಳಿ ಆ ಸುಮನಸ್ಕರಾಯನ ಆಜ್ಞೆಯನ್ನು ಪಡೆದು ಬೇಗನೇ ತನ್ನ ಸ್ವಕೀಯ ಗೃಹವನ್ನು ಸೇರಿದನು ॥೪೦॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ
ಸುಮನಸ್ಕಯಾಗೋಪಕ್ರಮೋನಾಮ ನವಮೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಸುಮನಸ್ಕನ ಪೌಂಡರೀಕವೆಂಬ ಯಾಗ ಉಪಕ್ರಮವೆಂಬ ಒಂಬತ್ತನೇ ಆಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹತ್ತನೆಯ ಅಧ್ಯಾಯ :-

ಪೌಂಡರೀಕಯಾಗ ಪ್ರಾರಂಭ

ನಾರದ ಉವಾಚ :-

ಪಿತಾಮಹಮಹಾಪ್ರಾಜ್ಞನಮಸ್ತೇಸುರಸತ್ತಮ ।
ಮುಕ್ತಕಸ್ಯಚವೃತ್ತಾಂತಂಅದ್ಭುತಂಪಾಪನಾಶನಂ ॥೧॥
ಶ್ರೋತುಂಕೌತೂಹಲಂಮೇಽಸ್ತಿಯಥಾವದ್ವಕ್ತುಮರ್ಹಸಿ ।
ಶೃಣುನಾರದವಕ್ಷ್ಯಾಮಿತದ್ವೃತ್ತಾಂತಂಮಹಾದ್ಭುತಂ ॥೨॥

ತಾ॥ ಸುರಶ್ರೇಷ್ಠನೂ ಮಹಾಪ್ರಾಜ್ಞನೂ ಆದ ಪಿತಾಮಹನೇ! ನಿನಗೆ ನಮಸ್ಕರಿಸುತ್ತೇನೆ. ಮುಕ್ತಕಋಷಿಯ ವೃತ್ತಾಂತವು ಅದ್ಭುತವೂ ಪಾಪಪರಿಹಾರಕವಾದುದರಿಂದ ಇದನ್ನು ಕೇಳಲು ನನಗೆ ತುಂಬಾ ಕುತೂಹಲವಾದ್ದರಿಂದ ಆ ಕಥೆಯನ್ನು ಹೇಳಬೇಕೆಂದು ನಾರದನು ಪ್ರಾರ್ಥಿಸಲು ಬ್ರಹ್ಮದೇವನಿಂತೆಂದನು. ಎಲೈ ನಾರದನೇ! ಆ ಮುಕ್ತಕಋಷಿಯ ಅದ್ಭುತವಾದ ವೃತ್ತಾಂತವನ್ನೆಲ್ಲಾ ಸವಿಸ್ತಾರವಾಗಿ ನಿರೂಪಿಸುವೆನು ಆಲಿಸುವವನಾಗು ॥೧॥೨॥

ಏವಂಗಂಗಾನದೀತೀರೇಮಹಾಯೋಗಿಭಿರಾವೃತೇ ।
ವರ್ತಮಾನೇಮಹಾಯಾಗೇಪೌಂಡರೀಕಸಮಾಹ್ವಯೇ ॥೩॥
ಸರ್ವಾನ್‌ದೇವಾನ್‌ಸಮಾಹೂಯಸುಮನಸ್ಕೋಮಹಾಮುನಿಃ ।
ಸಂಸ್ಥಾಪ್ಯಯಜ್ಞಶಾಲಾಯಾಂತತ್ಪೂಜಾರ್ಥಮತಂದ್ರಿತಃ ॥೪॥

ತಾ॥ ಮಹರ್ಷಿಯಾದ ಆ ಸುಮನಸ್ಕನು ಗಂಗಾನದೀ ತೀರದಲ್ಲಿ ಪೌಂಡರೀಕವೆಂಬ ಮಹಾಯಾಗಕ್ಕೆ ಪ್ರಾರಂಭಮಾಡಲು ಸಮಸ್ತದೇವತೆಗಳನ್ನೂ ಆಹ್ವಾನಮಾಡಿ ಅವರನ್ನು ಪೂಜಿಸುವುದಕ್ಕೋಸ್ಕರ ಯಜ್ಞಶಾಲೆಯಲ್ಲಿ ಸಮಾಹಿತಮನಸ್ಕನಾಗಿ ಕಲಶಸ್ಥಾಪನೆಯನ್ನು ಮಾಡಿ ಸರ್ವದೇವತೆಗಳನ್ನು ಆವಾಹನೆ ಮಾಡಿದನು ॥೩॥೪॥

ಮುಕ್ತನಾಮಸುತಂದೃಷ್ಟ್ವಾ ಉವಾಚವಚನಂತಥಾ ।
ಶೃಣುವತ್ಸಮಹಾಬಾಹೋಸಾವಧಾನೇನಯತ್ನತಃ ॥೫॥
ತ್ವಮಧ್ಯಯಾಗರಕ್ಷಾರ್ಥಂಸನ್ನದ್ಧೋಭವಸತ್ವರಃ ।
ಅಸ್ತ್ರಶಸ್ತ್ರಾದಾಯಯತ್ನೇನಬಹಿರೇವಸಮಂತತಃ ॥೬॥

ತಾ॥ ಆ ಮುಕ್ತಕನಾಮ ಪುತ್ರನನ್ನು ಸುಮನಸ್ಕನು ನೋಡಿ ಎಲೈ ಮಹಾಬಲಶಾಲಿಯಾದ ಪುತ್ರನೇ ನಾನು ಹೇಳುವುದನ್ನು ಸಾವಧಾನಚಿತ್ತದಿಂದ ಆಲಿಸುವವ

ನಾಗು. ಈಗ ಪ್ರಾರಂಭಿಸಿರುವ ಯಾಗಸಂರಕ್ಷಣಾರ್ಥವಾಗಿ ನೀನೀಗಲೆ ಶಸ್ತ್ರಧಾರಿಯಾಗಿ ಯಾಗಶಾಲೆಯ ಹೊರಗಡೆ ಇದ್ದು ಚತುರ್ದಿಕ್ಕುಗಳಲ್ಲಿಯೂ ಯಾಗಕ್ಕೂ ಯಾಗಕಾರ್ಯಗಳಿಗೂ ಯಾವ ತೊಂದರೆಯೂ ಬರದಂತೆ ಜಾಗರೂಕನಾಗಿ ಕಾಯುವವನಾಗೆಂದು ಹೇಳಿದನು ॥೫॥೬॥

ತಿಷ್ಠ ಸರ್ವಾಣಿರಕ್ಷಾಂಸಿವಾರಯರ್ಬಾಣವೃಷ್ಟಿಭಿಃ ।
ರಕ್ಷಾಂಕುರ್ವಸ್ಯಯಾಗಸ್ಯದೀಕ್ಷಿತೋಹಂಪ್ರಯತ್ನತಃ ॥೭॥
ಇತ್ಯೇವಮುಕ್ತ್ವಾಸುಮುಕ್ತಋಷಿಂನಿಯೋಜ್ಯಸವನಾವನೇ ।
ಪ್ರವಿಶ್ಯಯಾಗಶಾಲಾಂಸ್ಸೈಸ್ಥಿತರ್ನಾಮುನಿಪುಂಗವಃ ॥೮॥

ತಾ॥ ಎಲೈ ಪುತ್ರನೇ ವಿಘ್ನಕಾರಿಗಳಾಗಿ ಬರತಕ್ಕ ಸಕಲ ರಾಕ್ಷಸರನ್ನೂ ಬಾಣಗಳ ಸುರಿಮಳೆಯಿಂದ ನಿರೋಧಿಸಿ ಯಾಗರಕ್ಷಣೆಯನ್ನು ಮಾಡುವವನಾಗು ನಾನು ದೀಕ್ಷೆಯನ್ನು ವಹಿಸಿ ಯಾಗಪ್ರಯತ್ನದಲ್ಲಿರುತ್ತೇನೆಂದು ಈ ರೀತಿಯಾಗಿ ಆ ಮುಕ್ತಕ ಋಷಿಗೆ ಯಾಗರಕ್ಷಣೆಗಾಗಿ ಆಜ್ಞಾಪಿಸಿ ಮುನಿಪುಂಗವನಾದ ಆ ಸುಮನಸ್ಕ ಮಹಾರಾಯನು ಯಾಗಶಾಲೆಯನ್ನು ಪ್ರವೇಶಿಸಿ ಯಾಗಕಾರ್ಯಗಳಲ್ಲಿ ನಿರತನಾದನು ॥೭॥೮॥

ಏತಸ್ಮಿನ್ನಂತರೇದೈತ್ಯೋಜಾನುಮಂಡಲನಾಮಕಃ ।
ಶೃತ್ವಾಚಾರಮುಖೇನೈವಯಾಗವೃತ್ತಾಂತಮದ್ಭುತಂ ॥೯॥
ಆಹೂಯಸ್ವಗುರುಂಕಾವ್ಯಂತೇನಸಮ್ಮಂತ್ರ್ಯರಾಕ್ಷಸಃ ।
ಅತ್ಯಂತಕೋಪತಾವಿಷ್ಟಃಯಾಗಧ್ವಂಸೇಸಮಾಹಿತಃ ॥೧೦॥

ತಾ॥ ಹೀಗೆ ಯಾಗವನ್ನು ಸುಮನಸ್ಕನು ಪ್ರಾರಂಭಿಸಲು ಅಷ್ಟರಲ್ಲಿ ಜಾನುಮಂಡಲರಾಕ್ಷಸನು ತನ್ನ ಗೂಢಚಾರರಿಂದ ಅದ್ಭುತವಾದ ಈ ಯಾಗವೃತ್ತಾಂತವನ್ನು ತಿಳಿದುಕೊಂಡವನಾಗಿ ತಮ್ಮ ಗುರುವಾದ ಶುಕ್ರಾಚಾರ್ಯರನ್ನು ಕರೆಯಿಸಿಕೊಂಡು ಆತನೊಡನೆ ಈ ಯಾಗದಿಂದ ರಾಕ್ಷಸ ಕುಲವು ನಾಶವಾಗುವುದನ್ನು ಹೇಗೆ ನಿವಾರಿಸುವುದೆಂಬುದಾಗಿ ಮಂತ್ರಾಲೋಚನೆಯನ್ನು ನಡೆಯಿಸಿ, ತನ್ನ ರಾಕ್ಷಸಕುಲವನ್ನೇ ನಾಶಮಾಡಲು ಪ್ರಾರಂಭಿಸಿರುವ ಈ ಪೌಂಡರೀಕ ಯಾಗವನ್ನು ಧ್ವಂಸಮಾಡಬೇಕೆಂದು ಅತ್ಯಂತ ಕೋಪಾವಿಷ್ಟನಾಗಿ ಆ ಜಾನುಮಂಡಲನು ತನ್ನ ಮನದಲ್ಲಿ ನಿಶ್ಚೈಸಿದನು ॥೯॥೧೦॥

ಆಹೂಯಮನ್ತ್ರಿಚತುರ್ರಾನಾಗಾಯುತಬಲೈರ್ಯುತಾನ್ ।
ಅಂಜನಾಚಲಸಂಕಾಶಾನ್ಕ್ರೋಧತಾಮ್ರಾಯತೇಕ್ಷಣಾನ್ ॥೧೧॥
ಸರ್ಪಬಾಹುಂಚಶೂರಂಚದೇವಾನ್ತಕಘಟೋದರೌ ।
ಏತಾನ್ಮಂನ್ತ್ರೀನ್ಸಮಾಲೋಕ್ಯಉವಾಚಾಽಭೀಲಲೋಚನಃ ॥೧೨॥

ತಾ॥ ಈ ರೀತಿಯಾಗಿ ಮನದಲ್ಲಿ ತೀರ್ಮಾನಿಸಿಕೊಂಡ ಆ ಜಾನುಮಂಡಲ ರಾಕ್ಷಸನು ತನ್ನ ಮಂತ್ರಿಗಳನ್ನು ಕರೆಯಿಸಿದವನಾದನು. ಅವರಲ್ಲಿ ಹತ್ತುಸಾವಿರ ಆನೆಗಳ ಭುಜಬಲವುಳ್ಳವರೂ ಅಂಜನಾದ್ರಿಗೆ ಸಮಾನವಾದ ಕಪ್ಪಾದ ದೇಹಕಾಂತಿಯುಳ್ಳವರಾಗಿಯೂ ಮತ್ತು ಕೆಂಪಾದ ಕಣ್ಣುಗಳುಳ್ಳವರಲ್ಲಿ ಪ್ರಮುಖರಾದವರು ಸರ್ಪಬಾಹು, ಶೂರಬಾಹು, ದೇವಾಂತಕ, ಘಟೋದರರೆಂಬ ಮಂತ್ರಿಗಳಲ್ಲಿ ಪೌಂಡರೀಕಯಾಗದಿಂದ ಕುಲಕ್ಷಯವಾಗುವ ವಿಚಾರವನ್ನು ಮಂತ್ರಾಲೋಚನೆಮಾಡಿ ಅವರೊಡನೆ ಭಯಂಕರವಾದ ಕೆಂಪಾದ ನೇತ್ರಗಳುಳ್ಳವನಾಗಿಯೂ ಕಡುಕೋಪದಿಂದಲೂ ಆ ಜಾನುಮಂಡಲನು ಹೀಗೆಂದು ಹೇಳಿದನು ।।೧೧।।೧೨।।

ಶೃಣುಧ್ವಂಮಂತ್ರಿಣಸರ್ವೇಚತುರಂಗಬಲೈರ್ಯುತಾಃ ।
ಋಷೀಣಾಂಮಂಡಲಂಪ್ರಾಪ್ಯಶಾಲಾಂಶೀಘ್ರಂನಿಪಾತ್ಯಚ ॥೧೩॥
ಸನ್ನಿಗೃಹ್ಯಋಷೀನ್ಸರ್ವಾನ್ಆಗಚ್ಛಧ್ವಂಪ್ರಯತ್ನತಃ ।
ಇತ್ಯುಕ್ತ್ವಾರಾಕ್ಷಸೇಂದ್ರೇಣರಾಕ್ಷಸಾಘೋರದಶನಾಃ ॥೧೪॥

ತಾ॥ ಎಲೈ ಮಹಾ ಬಾಹುಬಲಶಾಲಿಗಳೂ ಮತ್ತು ಘೋರಕಾರ್ಯಗಳನ್ನು ಮಾಡಿ ಜಯವನ್ನು ಹೊಂದಿರುವ ಮಂತ್ರಿಗಳಿರಾ ಕೇಳಿರಿ ! ನೀವೀಗಲೇ ಚತುರಂಗ ಸೈನ್ಯಸಮೇತರಾಗಿ ಹೊರಟು ಅಲ್ಲಿ ಯಾಗಮಂಡಲದಲ್ಲಿರುವ ಋಷಿಮಂಡಲವನ್ನೂ ಯಾಗಶಾಲೆಯನ್ನೂ ಧ್ವಂಸಮಾಡಿ ಋಷಿಗಳನ್ನೆಲ್ಲಾ ಭಂಧಿಸಿ ಸರ್ವಪ್ರಯತ್ನಗಳಿಂದಲೂ ಆ ಯಾಗಕ್ಕೆ ವಿಘ್ನವನ್ನಾಚರಿಸತಕ್ಕದೆಂದು ಆ ಜಾನುಮಂಡಲನು ಆಜ್ಞಾಪಿಸಲು, ಅವರೆಲ್ಲರೂ ಆತನ ಆಜ್ಞೆಯನ್ನು ಪಾಲಿಸಲು ಆಗಲೆಂದರು ।।೧೩।।೧೪।।

ವಸಂತಋತೌತೃತೀಯಪಕ್ಷಾಷ್ಟಮೀಸಂಧಿಕಾಲೇ ।
ಸರ್ವೇಮೃಗಾದುಶ್ಶ್ಯೂಚಶ್ಚಸರ್ಪಬಾಹುಃಮುಪಾಯಯು ॥೧೫॥
ತಥಾಽಸ್ತ್ವಿತ್ಯೇವತಸ್ಯಾಜ್ಞಾಂತಪೋವನಂಸರಾಕ್ಷಸಾನ್ ।
ತತ್ರದೃಷ್ಟ್ವಾಕ್ಷುಷೀನ್ಸರ್ವಾನ್ಯಾಗಶಾಲಾಂತರೇಸ್ಥಿತಾನ್ ॥೧೬॥

ತಾ॥ ರಾಕ್ಷಸರ ಮಂತ್ರಿ ಪ್ರಮುಖನಾದ ಸರ್ಪಬಾಹುವು ಕ್ರೂರವಾದ ಆಕಾರವುಳ್ಳವರಾಗಿಯೂ ಸರ್ವಾಯುಧಗಳುಳ್ಳವರಾಗಿಯೂ ಇರುವ ಕೋಟಿರಾಕ್ಷಸರಿಂದೊಡಗೂಡಿ ವಸಂತ ಋತುವಿನ ಮೂರನೇ ಪಕ್ಷದ ಅಷ್ಟಮೀ ತಿಥಿಯ ಸಂಧಿಕಾಲದಲ್ಲಿ ಎಲ್ಲಾ ಮೃಗಗಳು ದುಶ್ಶಕುನಗಳನ್ನು ಸೂಚಿಸುತ್ತಿರಲು ಯಾಗಶಾಲಾಭಿಮುಖನಾಗಿ ಪ್ರಯಾಣ ಮಾಡಿ ಯಾಗಶಾಲೆಯನ್ನು ಆವರಿಸಿದನು ಇದನ್ನು ಕಂಡ ಋಷಿಗಳೆಲ್ಲರೂ ಆ ಘೋರರಾಕ್ಷಸಪರಿವಾರವನ್ನು ನೋಡಿದವರಾಗಿ ಭಯಕಂಪಿತರಾಗಿರಲು ಆ ರಾಕ್ಷಸರು ಯಾರಿಗೂ ಗೋಚರಿಸದೆ ನಾನಾ ವಿಧವಾಗಿ ಭಾಧಿಸುತ್ತಿರಲು ।।೧೫।।೧೬।।

ವವರ್ಷುರ್ಗರ್ಮಾಂಸರುಧಿರೈಃಪ್ರಚ್ಛನ್ನಾಸ್ತೈಸಮಂತಕಃ ।
ಕೋಟಿರಾಕ್ಷಸಸಂಯುಕ್ತಾಃಪಾಶಮುದ್ಗರಸಂಯುತಾಃ ॥೧೭॥
ತಾಂದೃಷ್ಟ್ವಾಮುನಯಸ್ಸರ್ವೇಭಯವಿಭ್ರಾಂತಚೇತಸಃ ।
ತ್ರಾಹಿತ್ರಾಹೀತಿಜೋದ್ವಿಗ್ನಾಃಮುಕ್ತೇಕಂಶರಣಂಯಯುಃ ॥೧೮॥

ತಾ॥ ಆ ರಾಕ್ಷಸರು ಪಾಶ, ಮುದ್ಗರವೇ ಮೊದಲಾದ ಆಯುಧಗಳಿಂದ ಋಷಿಗಳನ್ನು ಹಿಂಸಿಸುತ್ತಲೂ ರಕ್ತ ಮಾಂಸಾದಿಗಳಿಂದ ವರ್ಷವನ್ನು ಸುರಿಸುತ್ತಾ ಆ ಯಾಗವನ್ನು ಧ್ವಂಸಗೊಳಿಸುತ್ತಿರಲು ಆ ರಾಕ್ಷಸರ ಹಾವಳಿಯನ್ನು ತಡೆಯಲಾರದೆ ಮಹರ್ಷಿಗಳೆಲ್ಲರು ಭಯಭ್ರಾಂತರಾಗಿ ಕಾಪಾಡು, ಕಾಪಾಡು ಎಂದು ಆ ಮುಕ್ತಕಋಷಿಯನ್ನು ಶರಣು ಹೊಂದಿದರು ॥೧೭॥೧೮॥

ಶ್ರೀನಿಮಿಷಾಂಬಾ ಪ್ರಾದುರ್ಭಾವ

ತದಾನೀಂಮೌಕ್ತಿಕಶ್ರೀವರ್ಗಸಸ್ಮಾರನಿಮಿಷಾಂಬಿಕಾ ।
ತತಕ್ಷಣಂಯಾಗಕುಂಡೇಹವಿರ್ಭವತಿಭಾರತೀ ॥೧೯॥
ತತೋಭಗವತೀದೇವೀನಿಜಭಕ್ತಾರ್ತಿನಾಶಿನೀ ।
ಮಹಾಭಗತೀದುರ್ಗಾಮಹಾಮೋಹಗರೀಯಸೀ ॥೨೦॥
ತ್ರಿಶೂಲಧಾರಿಣೀಗೌರೀಭೀಮಾಭೈರವನಾದಿನೀ ।
ಆಗತಾಬಹುಸಾಹಸ್ರೈಃಪ್ರಥಮೈಃಪರಿಸೇವಿತಾ ॥೨೧॥

ತಾ॥ ಹೀಗೆ ಸರ್ವ ಋಷಿಗಳೂ ಭಯಭೀತರಾಗಿ ಶರಣಾಗತರಾಗಲು ಇವೆಲ್ಲವನ್ನು ನೋಡಿದ ಸರ್ವ ಶ್ರೀಮಂತನಾದ ಆ ಮುಕ್ತಕಋಷಿಯು ನಿಮಿಷಾಂಬಿಕೆಯನ್ನು ಸ್ಮರಿಸಿದವನಾಗಲು ಆ ತಕ್ಷಣವೇ ಯಾಗಶಾಲೆಯ ಹೋಮಕುಂಡದಿಂದ ತನ್ನ ನಿಜಭಕ್ತರ ದುಃಖಗಳನ್ನೆಲ್ಲಾ ನಿವಾರಿಸುವ ಸಲುವಾಗಿ ಭಾರತೀ ಸ್ವರೂಪ ಭಗವತಿಯಾದ ಆ ಗೌರೀದೇವಿಯು ಭಯಂಕರಾಕಾರದ ದುರ್ಗಿಯ ರೂಪವನ್ನು ಧರಿಸಿ ತ್ರಿಶೂಲವನ್ನು ಕೈಯ್ಯಲ್ಲಿ ಹಿಡಿದು ಸರ್ವರನ್ನೂ ಸಮ್ಮೋಹಗೊಳಿಸುವ ರೂಪದಿಂದ ಕಾಲಭೈರವನಂತೆ ಧ್ವನಿಗೈಯ್ಯುತ್ತಾ ನಿಮಿಷಾಂಬಾಭಿದಾನದಿಂದ ಅನೇಕ ಸಾವಿರ ಪ್ರಥಮ ಗಣಗಳಿಂದ ಸೇವಿಸಲ್ಪಟ್ಟವಳಾಗಿ ಆ ಯಾಗಶಾಲೆಯಲ್ಲಿ ಪ್ರತ್ಯಕ್ಷಳಾದಳು ॥೧೯॥೨೦॥೨೧॥

ತಾಂದೃಷ್ಟ್ವಾಮುಕ್ತಕಶ್ರೀವರ್ಗಸನಾಮಚಪುನಃಪುನಃ ।
ಪ್ರಾರ್ಥಯಾಮಾಸತಾಂದೇವೀಂಹರ್ಷೇಣಮಹತಾವೃತಃ ॥೨೨॥
ನಿಮಿಷೇನಿಮಿಷೇಭಿನ್ನಪ್ರಭಾಭಾನೋರಿವಾಮಲಾ ।
ಯಾಸಂಕರೋತಿಸಕಲಂಯಸ್ಯಾಃಕಾರ್ಯಮಿದಂಜಗತ್ ॥೨೩॥

ತಾ॥ ಅಗ್ನಿಕುಂಡದಿಂದ ಆವಿರ್ಭವಿಸಿರುವಳಾದ ನಿಮಿಷಾಂಬಿಕಾದೇವಿಯನ್ನು ಕಂಡ ಆ ಶ್ರೀಮಂತನಾದ ಮುಕ್ತಕಋಷಿಯು ಅತ್ಯಂತ ಸಂತೋಷದಿಂದ ಕೂಡಿದ

ಭಕ್ತಿಯುಕ್ತನಾಗಿ ಆ ದೇವಿಗೆ ಪುನಃ ಪುನಃ ನಮಸ್ಕಾರ ಮಾಡಿ ಶ್ರೀ ನಿಮಿಷಾಂಬಿಕಾ ದೇವಿಯನ್ನು ಪ್ರಾರ್ಥಿಸತೊಡಗಿದನು, ಎಲೈ ಮಾತೆಯೇ ಲೋಕ ಪ್ರಕಾಶಕನಾಗಿರುವ ಸೂರ್ಯನ ಉದಯ ಮೊದಲ್ಗೊಂಡು ಸಾಯಂಕಾಲದವರೆಗೂ ನಿಮಿಷ ನಿಮಿಷ ಗಳಲ್ಲಿಯೂ ಭಿನ್ನ ಭಿನ್ನವಾದ ಪ್ರಭೆಯುಳ್ಳವಳಾಗಿ ಪ್ರತಿ ನಿಮಿಷದಲ್ಲಿಯೂ ಬೇರೆ ಬೇರೆಯಾಗಿ ತೋರುವ ಪ್ರಭಾವಿಶೇಷವುಳ್ಳವಳಾದ ಕಾರಣ ನೋಡುವವರಿಗೆ ಸಾಕೆಂಬ ಬುದ್ಧಿಯು ತೋರದೆ ಯಾವಾಗಲು ನೋಡಬೇಕೆಂಬ ಪ್ರವೃದ್ಧಿಗೈಯುವಳಾಗಿಯೂ ಪ್ರಪಂಚವನ್ನು ಗೋಚರಿಸುವಂತೆ ಮಾಡತಕ್ಕವಳಾಗಿಯೂ ಜಗತ್ಕಾರ್ಯವನ್ನು ತಾನೇ ಮಾಡುವವಳಾಗಿರುವಳೋ ಆ ದೇವಿಯೇ ನಿನಗೆ ಪುನಃ ಪುಸಃ ನಮಸ್ಕಾರ ಮಾಡುವೆನು ॥೨೨॥೨೩॥

ಪ್ರಾಣೇಶ್ವರಪ್ರಿಯತಮಾಮಹಾಮಹಿಷಮರ್ದಿನೀ ।
ಪ್ರಾಣೇಶ್ವರೀಪ್ರಾಣರೂಪಾಪ್ರಧಾನಪುರುಷೇಶ್ವರೀ ॥೨೪॥
ಸರ್ವಶಕ್ತಿರ್ನಿರಾಕಾರಾಸರ್ವಭೂತೇಶ್ವರೇಶ್ವರೀ ।
ಪುರಾಣಾಚಿನ್ಮಯೀಸೂಕ್ಷ್ಮಾಅನಾದಿಪುರುಷರೂಪಿಣೀ ॥೨೫॥

ತಾ॥ ಪ್ರಾಣೇಶ್ವರನಾದ ಪರಮೇಶ್ವರನಿಗೆ ಪ್ರೀತಿಪಾತ್ರಳಾಗಿಯೂ ಬ್ರಹ್ಮಾದಿ ಗಳಿಗೂ ಅಸಾಧ್ಯನಾಗಿರುವ ಲೋಕಕಂಟಕನಾದ ಮಹಿಷಾಸುರನನ್ನು ವಧಿಸಿದವ ಳಾಗಿಯೂ, ಪ್ರಾಣರೂಪವಾಗಿರುವ ಜೀವನಿಗೆ ಈಶ್ವರಿಯಾಗಿಯೂ, ಪರಮ ಪುರುಷನಿಗೆ ಭಾರ್ಯೆಯಾದ ಕಾರಣ ಪ್ರಧಾನ ಪುರುಷರಾಗಿರುವ ಬ್ರಹ್ಮ, ಇಂದ್ರ, ಚಂದ್ರಾದಿಗಳಿಗೆ ನಿಯಾಮಕಳಾಗಿಯೂ ಮತ್ತು ಸಮಸ್ತ ಶಕ್ತಿಗಳುಳ್ಳವಳಾಗಿಯೂ, ಆಕಾರರಹಿತಳಾಗಿಯೂ, ಸಮಸ್ತ ಪ್ರಾಣಿಗಳಿಗೂ, ಪಂಚಭೂತಗಳಿಗೂ, ತ್ರಿಮೂರ್ತಿ ಗಳಿಗೂ ಕೂಡ ಸ್ವಾತಂತ್ರ್ಯವುಳ್ಳವಳಾಗಿಯೂ, ಚಿತ್ಸ್ವರೂಪಿಣಿಯಾಗಿಯೂ, ಸೂಕ್ಷ್ಮಳಾಗಿಯೂ, ಮಾಯಾಸ್ವರೂಪಳಾಗಿಯೂ ಪರಮಪುರುಷರೂಪವುಳ್ಳವ ಳಾಗಿರುವ ಮಾತೆಯೇ ನಿನಗೆ ಪುನಃ ಪುನಃ ನಮಸ್ಕಾರ ಮಾಡುವೆನು ॥೨೪॥೨೫॥

ಬಹುರೂಪಾಸುರೂಪಾಚವಿರೂಪಾರೂಪವರ್ಜಿತಾ ।
ವಾಗ್ದೇವತಾಬ್ರಹ್ಮಕಲಾಬ್ರಹ್ಮವಿಷ್ಣುಶಿವಪ್ರಿಯಾ ॥೨೬॥
ಆದಿತ್ಯವರ್ಣಾಕೌಮಾರೀಮಯೂರವರವಾಹನಾ ।
ಖಗಧ್ವಜಾಖಗಾರೂಢಾಗಹ್ವರೇಷ್ಠಾಗಣಾಗ್ರಣೀ ॥೨೭॥

ತಾ॥ ಎಲೈ ಮಾತೆಯೇ ನೀನು ಬಹುರೂಪಗಳನ್ನು ಧರಿಸುವವಳು, ಸುರೂಪ ವುಳ್ಳವಳು ವಿರೂಪಗಳನ್ನು ನಾಶಮಾಡಿ ರೂಪವರ್ಜಿತಳಾಗಿ ನಿರ್ಗುಣೆಯಾಗಿರು ವವಳು, ವಾಕ್‌ಗೆ ಅಧಿದೇವತೆಯಾಗಿರುವವಳು, ಬ್ರಹ್ಮಕಲೆಯ ಮೂಲಭೂತಳಾಗಿರು ವವಳು ಮತ್ತು ವಿಷ್ಣು ಶಿವರಿಗೆ ಪ್ರಿಯೆಯಾಗಿರುವವಳು, ಆದಿತ್ಯರೂಪವುಳ್ಳವಳು, ಕೌಮಾರಿಯಾಗಿ ಶೋಭಿಸುವವಳು, ಮಯೂರವಾಹನವಾಗುಳ್ಳವಳು, ಖಗಧ್ವಜ

ವುಳ್ಳ ಖಗವನ್ನು ವಾಹನವನ್ನಾಗಿ ಮಾಡಿಕೊಂಡಿರುವವವಳು, ಗಹ್ವ ಮೂಲಾಮಾಯ, ವಿದ್ಯೆಗಳಿಗೆ ಅಧಿಧಾರಿಣಿಯಾಗಿರುವ ಯುದ್ಧದಲ್ಲಿ ಗಣಾಗ್ರಣಿಯಾಗಿರುವ ನಿನಗೆ ಪುನಃ ಪುನಃ ನಮಸ್ಕಾರ ಮಾಡುವೆನು ॥೨೬॥೨೭॥

ಈಶ್ವರಾಣೀಚಶರ್ವಾಣೀಶಂಕರಾರ್ಧಶರೀರಿಣೀ ।
ಮಹೇಶ್ವರಸಮುತ್ಪನ್ನಾಭುಕ್ತಿಮುಕ್ತಿಫಲಪ್ರದಾ ॥೨೮॥
ಇದಾನೀಂದೇವಿದಿತಿಜಾ್ರಾಕ್ಷಸಾನ್ ಪಿಶಿತಾಶನಾ್ ।
ಯಜ್ಞಧ್ವಸಂಕರಾನಾಶುನಾಶಯಸ್ವದುರಾತ್ಮನಃ ॥೨೯॥

ತಾ॥ ಎಲೈ ಮಾತೆಯೇ ನೀನು ಪರಮೇಶ್ವರನ ರಾಣಿಯಾಗಿಯೂ ಶಬ್ದವಾಚ್ಯನಾದ ಈಶ್ವರನಿಗೆ ಅರಸಿಯಾಗಿಯೂ ಲೋಕಶಂಕರನ ವಾಮಭಾಗದಲ್ಲಿ ಅರ್ಧಶರೀರವುಳ್ಳವಳಾಗಿಯೂ ಪರಮೇಶ್ವರನ ದೇಶೆಯಿಂದ ಹುಟ್ಟಿದವಳಾಗಿಯೂ ಇಹಲೋಕದಲ್ಲಿ ಭಕ್ತಿಯನ್ನೂ ಪರಲೋಕದಲ್ಲಿ ಮುಕ್ತಿಯನ್ನೂ ತಪೋವಿಶೇಷಾದಿಗಳ ಫಲವನ್ನೂ ಕೊಡತಕ್ಕವಳಾಗಿರುವ ಶ್ರೀ ತ್ರಿಪುರಸುಂದರಿಯಾದ ನಿನಗೆ ಪುನಃ ಪುನಃ ನಮಸ್ಕರಿಸುವೆನು. ತಾಯಿಯೇ ದಿತಿದೇವಿಯ ವಂಶೀಯರೂ ಮಾಂಸಭಕ್ಷಕರೂ ಯಜ್ಞಯಾಗಾದಿಗಳನ್ನು ಧ್ವಂಸಮಾಡತಕ್ಕವರೂ ದುರಾತ್ಮರೂ ಕ್ರೂರರೂ ಆದ ಈ ರಾಕ್ಷಸರನ್ನು ನಾಶಗೊಳಿಸುವಳಾಗೆಂದು ಆ ಮುಕ್ತಕಋಷಿಯು ಪ್ರಾರ್ಥಿಸಿದನು ॥೨೮॥೨೯॥

ಇತ್ಯುಕ್ತ್ವಾಸಮುನಿಶ್ರೇಷ್ಠಃತದ್ಧ್ಯಾನಂಕೃತವಾ್ವಿಭುಃ ।
ಯಕ್ಷೈಶ್ಚರಾಕ್ಷಸಾನೀಕೈರ್ನಟಯಂತೀತಪೋವನೇ ॥೩೦॥
ತದಾತಸ್ಯಪ್ರಸನ್ನಾಸೇಚ್ಛಂಡೀಮಾಯಾಪಹಾರಿಣೀ ।
ಏತಾದೃಶೀಂಮಹಾದೇವೀಂನಮಸ್ಕೃತ್ಯಮುನೀಶ್ವರಃ ॥೩೧॥

ತಾ॥ ಈ ರೀತಿಯಾಗಿ ನಾನಾ ಪ್ರಕಾರವಾಗಿ ಸ್ತುತಿಸಿ ಪ್ರಾರ್ಥಿಸಲು ರಾಕ್ಷಸರ ಮಾಯಾಪಹಾರಿಣಿಯಾದ ಆ ನಿಮಿಷಾಂಬಿಕೆಯು ಶ್ರೀಮಂತನಾದ ಮುಕ್ತಕನಿಗೂ ಸುಮನಸ್ಕನಿಗೂ ಪ್ರಸನ್ನಳಾದಳು ಅಲ್ಲದೆ ಯಕ್ಷರಾಕ್ಷಸರಿಂದ ಪರಿವೃತಳಾದ ಆ ದೇವಿಯು ಯಾಗ ತಪೋವನದಲ್ಲಿ ನರ್ತನವನ್ನು ಮಾಡಿದಳು ಅದನ್ನು ಕಂಡ ಸುಮನಸ್ಕನು ದೇವಿಯ ಧ್ಯಾನಸಕ್ತನಾಗಲು ಮಹರ್ಷಿಗಳೆಲ್ಲರೂ ಆ ದೇವಿಯನ್ನು ಸ್ತೋತ್ರಮಾಡಿ ನಮಸ್ಕರಿಸಿದರು ॥೩೦॥೩೧॥

ಜಯಶರ್ವಾಣಿರುದ್ರಾಣೀಶಾಂಭವೀಭುವನೇಶ್ವರೀ ।
ಹೇದೇವಿಶೃಣುವಕ್ಷ್ಯಾಮೋರಾಕ್ಷಸಾ್ಯಾಗಘಾತಿನಃ ॥೩೨॥
ಸಂಹಾರಂಪರುಕಲ್ಯಾಣೀಯಾಗಂನಿರ್ವಿಘ್ನಜಂಕುರು ।
ಇತಿಬ್ರುವನ್ತೋಋಷಯಃಕಾರಯಾಮಾಸುರಧ್ವರಂ ॥೩೩॥

ತಾ॥ ಆ ಮಹರ್ಷಿಗಳೆಲ್ಲರೂ ದೇವಿಯನ್ನು ಪ್ರಾರ್ಥಿಸಿದರು. ಎಲೌ ರುದ್ರಾಣಿಯೇ ಶರ್ವಾಣಿಯೇ ದೇವಿಯೇ ಜಯಿಸುವವಳಾಗು, ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಯಾಗವಿಘ್ನಕರರಾದ ಈ ರಾಕ್ಷಸರನ್ನು ಸಂಹರಿಸಿ ಯಾಗವನ್ನು ಸಾಂಗಗೊಳಿಸು. ಲೋಕಕಲ್ಯಾಣಿಯಾದ ನೀನು ಯಾಗಕ್ಕೆ ಬಂದಿರುವ ವಿಘ್ನವನ್ನು ನಿವಾರಿಸೆಂದು ಪ್ರಾರ್ಥಿಸಿ. ಬಳಿಕ ತಮ್ಮ ತಮ್ಮ ಯಾಗಕಾರ್ಯಗಳನ್ನು ನಡೆಸಲು ನಿರತರಾದರು ॥೩೨॥೩೩॥॥

ತದಂತರೇರಾಕ್ಷಸಾಶ್ಚ ಮುಮುಚುರ್ದೃಷದೋಬಹೂಃ ।
ಚಕ್ರುಶ್ಚ ಕರಕಾವೃಷ್ಟಿಂಮಾಂಸಶೋಣಿತಮಿಶ್ರಿತಾಂ ॥೩೪॥
ತತೋಭಗವತೀದೇವೀಶೋಷಣಾಸ್ತ್ರಪ್ರಯೋಗತಃ ।
ವೃಷ್ಟಿಂನಿವಾರಯಾಮಾಸವರ್ಷೋಪಲಮಯೀಂಕ್ಷಣಾತ್ ॥೩೫॥

ತಾ॥ ತರುವಾಯ ಆ ರಾಕ್ಷಸರೆಲ್ಲರೂ ದೊಡ್ಡದೊಡ್ಡ ಕಲ್ಲುಗಳಿಂದಲೂ ಆನೆಕಲ್ಲುಗಳಿಂದಲೂ ರಕ್ತ ಮಾಂಸ ಅಮೇಧ್ಯಗಳಿಂದ ಮಿಶ್ರವಾದ ರುಧಿರವನ್ನು ಮಳೆಯೋಪಾದಿ ಸುರಿಸುತ್ತಿರಲು ಆ ಭಗವತಿಯಾದ ನಿಮಿಷಾಂಬಿಕೆಯು ಶೋಷಣಾಸ್ತ್ರ ಪ್ರಯೋಗಮಾಡಿ ಆ ರಾಕ್ಷಸರು ಸುರಿಸಿದ ಕಲ್ಲು ಮಾಂಸಾದಿ ರಕ್ತ ವರ್ಷವನ್ನು ಕ್ಷಣಾರ್ಧದಲ್ಲಿ ನಿವಾರಿಸಿದಳು ॥೩೪॥೩೫॥

ಅಥದೈತ್ಯವರಸ್ತ್ವೇವಂಬಹೂವಿಸ್ತಾರ್ಯಕೋಪತಃ ।
ಉತ್ಪಾಟ್ಯಶೈಲಶಿಖರಂಪರಿಕ್ಷಿಪ್ತನಭೋಂಗಣಾತ್ ॥೩೬॥
ಶತಕೋಟಿಪ್ರಹಾರೇಣಕೋಟಿಶಶ್ಶಕಲೀಕೃತಂ ।
ಗಜೋಭೂತ್ವಾಽಶುರುದ್ರಾವತಾಂದೇವೀಂಸಮಹಾಸುರಃ ॥೩೭॥

ತಾ॥ ಅದನ್ನು ನೋಡಿದ ಆ ಸರ್ಪಬಾಹುವೆಂಬ ರಾಕ್ಷಸನು ಮಹಾಕೋಪವುಳ್ಳವನಾಗಿ ಒಂದು ಮಹಾ ಪರ್ವತದ ಶಿಖರವನ್ನು ಕಿತ್ತು ಆಕಾಶದಿಂದಲೇ ಆ ನಿಮಿಷಾಂಬಾದೇವಿಯ ಮೇಲೆ ಪ್ರಯೋಗಿಸಿದನು ಮತ್ತು ಒಂದನೂರು ಕೋಟಿ ಬಾಣಗಳನ್ನು ಆ ದೇವಿಯ ಮೇಲೆ ಪ್ರಯೋಗಿಸುತ್ತಿರಲು ಆ ನಿಮಿಷಾಂಬಾದೇವಿಯು ಆ ದೈತ್ಯನೆಸೆದ ಪರ್ವತವನ್ನು ಛಿದ್ರಛಿದ್ರಮಾಡಿ ಆ ಅಸುರನಿಂದ ಬರುತ್ತಿರುವ ಬಾಣಗಳೆಲ್ಲವನ್ನೂ ನಿವಾರಿಸಲು ಆ ರಾಕ್ಷಸನು ಕಡುಕೋಪಗೊಂಡವನಾಗಿ ಆನೆಯ ರೂಪವನ್ನು ತಾಳಿ ಆ ನಿಮಿಷಾಂಬಿಕೆಯ ಮೇಲೆ ಬೀಳಲು ಝೇಂಕಾರಮಾಡುತ್ತಾ ಬಂದನು ॥೩೬॥೩೭॥

ಶೈಲಾಕಾರಂತಿಮಾಯಾಂತ್ತಂದೃಷ್ಟ್ವಾಭಗವತೀಗಜಂ ।
ಪಾಶೇನಬಧ್ವಾತೀಕ್ಷ್ಣೇನಖಡ್ಗೇನಕರಮುಚ್ಛಿನತಾಂ ॥೩೮॥

ತತೋದ್ರೃಪ್ತಸ್ಯಚಾನ್ಯುತ್ಯುಃದೇವ್ಯಾಕೃತ್ತಕರಃಕರೀ ।
ಅಕಿಂಚಿತ್ಕರತಾಂಪ್ರಾಪ್ಯಮಾಹಿಷೀಂವಪುರಾದದೇ ॥೩೯॥

ತಾ॥ ಪರ್ವತದೋಪಾದಿಯಲ್ಲಿ ಬರುತ್ತಿರುವ ಆ ಆನೆಯ ರೂಪವನ್ನು ಧರಿಸಿರುವ ಆ ರಾಕ್ಷಸನನ್ನು ನಿಮಿಷಾಂಬಾದೇವಿಯು ಪಾಶದಿಂದ ಭಂಧಿಸಿ ತೀಕ್ಷ್ಣವಾದ ಕತ್ತಿಯಿಂದ ಆ ಆನೆಯ ಸೊಂಡಿಲನ್ನು ಕತ್ತರಿಸಲು ಆ ರಾಕ್ಷಸನು ಆನೆರೂಪವನ್ನು ಬಿಟ್ಟು ತಕ್ಷಣವೇ ಒಂದು ದೊಡ್ಡ ಎಮ್ಮೆಯರೂಪವನ್ನು ತಾಳಿ ಯುದ್ಧಕ್ಕಾಗಿ ತನ್ನ ಕಾಲುಗಳ ಗೊರಸಿನಿಂದ ಭೂಮಿಯನ್ನು ಧೂಳೆಬ್ಬಿಸುತ್ತಾ ಬಾಲವನ್ನು ಮೇಲಕ್ಕೆತ್ತಿ ಕೊಂಡು ಕಣ್ಣುಗಳು ಕೆಂಪಗೆ ಮಾಡಿಕೊಂಡು ಆ ದೇವಿಗೆದುರಾಗಿ ಬರುತ್ತಿದ್ದನು ॥೩೮॥೩೯॥

ಅಚಲಾಂಚಂಚಲಾಂಸರ್ವಾಂಚಕ್ರೇಽಥಸುರಘಾತಕಃ ।
ಶಿಲೋಚ್ಛಯಾಂಶ್ಚಬಹುಶಃಶೃಂಗಾಭ್ಯಾನುರೇಕ್ಷಿಪತ್ ॥೪೦॥
ಬ್ರಹ್ಮಾಂಡಮುಸ್ಯಕಾಂಡೇಸ್ಮೈತದ್ಭಯೇನಸಮಾಕುಲೇ ।
ದೃಷ್ಟ್ವಾಭಗವತೀಕ್ರುದ್ಧಾತ್ರಿಶೂಲೇನಜಘಾನತಂ ॥೪೧॥

ತಾ॥ ಸಕಲ ದೇವತೆಗಳಿಗೂ ಮೃತ್ಯುಸ್ವರೂಪನಾದ ಆ ಸರ್ಪಬಾಹುವು ಮಹಿಷರೂಪದಿಂದ ಭೂಮಿಯನ್ನೆಲ್ಲಾ ಗಡಗಡ ನಡುಗುವಂತೆ ಆರ್ಭಟಿಸಿ ಗುಟುರು ಹಾಕುತ್ತಾ ತನ್ನ ಕೊಂಬುಗಳಿಂದ ದೊಡ್ಡ ದೊಡ್ಡ ಕಲ್ಲುಗಳನ್ನು ಆ ನಿಮಿಷಾಂಬಾ ದೇವಿಯ ಮೇಲೆಸೆಯುತ್ತಿರುವ ಆ ರಾಕ್ಷಸನ ಆರ್ಭಟಕ್ಕೆ ಬ್ರಹ್ಮಾಂಡವೆಲ್ಲಾ ಭಯ ಕಂಪಿತವಾಗಿರಲು ಆ ನಿಮಿಷಾಂಬಾದೇವಿಯು ಕೋಪಾವಿಷ್ಟಳಾಗಿ ತ್ರಿಶೂಲದಿಂದ ಎಮ್ಮೆಯರೂಪ ತಾಳಿರುವ ಆ ರಾಕ್ಷಸನನ್ನು ಪ್ರಹಾರಮಾಡಿದಳು ॥೪೦॥೪೧॥

ತ್ರಿಶೂಲಘಾತವಿಭ್ರಾಂತಪತಿತ್ವಾಪುನರುತ್ಥಿತಃ ।
ತಂತ್ಯಕ್ತ್ವಾನಾನುಷಂದೇಹಂಅಭೂದ್ಬಾಹುಸಹಸ್ರಭೃತ್ ॥೪೨॥
ಆಯುಧಾನಾಂಸಹಸ್ರಾಣಿಬಿಭ್ರತ್ಕಾಲಾನ್ನಕೋಪಮಃ ।
ಅಥತೂರ್ಣಂಸದೈತ್ಯೇಂದ್ರಃತಾಂದೇವೀಂರಣಕೋವಿದಾಂ ॥೪೩॥

ತಾ॥ ಆ ರಾಕ್ಷಸನು ದೇವಿಯ ತ್ರಿಶೂಲದ ತಿವಿತದ ಪ್ರಹಾರಗಳಿಂದ ವಿಭ್ರಾಂತನಾಗಿ ದಿಕ್ಕುಗೆಟ್ಟು ನೆಲಕ್ಕೆ ಬಿದ್ದವನಾಗಲು ಮತ್ತೆ ಚೇತರಿಸಿಕೊಂಡು ಮಹಿಷರೂಪನು ಬಿಟ್ಟು ಸಹಸ ಬಾಹುಗಳುಳ್ಳ ಮನುಷ್ಯರೂಪನ್ನು ಧರಿಸಿ ತನ್ನ ಮಾಯಾ ರೂಪವಾದ ಸಹಸ್ರ ಕೈಗಳಿಂದಲೂ ಆಯುಧಗಳನ್ನು ಧರಿಸಿದವನಾಗಿ ಕಾಲಾಂತಕನಾದ ಯಮನೋಪಾದಿಯಲ್ಲಿ ಆ ನಿಮಿಷಾಂಬಾದೇವಿಯ ಮೇಲೆ ನಾನಾಸ್ತ್ರಗಳನ್ನು ಪ್ರಯೋಗಿಸುತಾ ಮೇಲೇರಿ ಬರುತ್ತಿರಲು ಸಮೀಪಕ್ಕೆ ಬರುತ್ತಿರುವ ರಾಕ್ಷಸನು ಆ ನಿಮಿಷಾಂಬಾ ದೇವಿಯ ಅಘೋರರೂಪವನು ನೋಡಿ ತಾಳಲಾರದೆ ಹೋದನು ॥೪೨॥೪೩॥

ಮಹಾಬಲಾಂಪ್ರಗೃಹ್ಯಾಂಶುಭೀತರ್ವಾನ್ಮೃಗತಾಂಗತಃ।
ತತೋನೆಭೋಂಗಣಾದ್ಭೂರಂಭಿತ್ವಾಸಾಜಗದಂಬಿಕಾ ॥೪೪॥

ಕ್ಷಣದಾಶುಗಜಾಲೇನಭಾದಯಾಮಾಸಚಂಡಿಕಾ।
ಏತ್ಯೈಃಪ್ರಹಾರೈರ್ದೈರ್ತ್ಯೇಂದ್ರೋಽಮನ್ತ್ರೀಜಾನುಮತೋಽಸುರಃ ॥೪೫॥

ತಾ॥ ಈ ರೀತಿಯಾಗಿ ಭಯಭ್ರಾಂತನಾದ ಆ ಸರ್ಪಬಾಹುವು ಜಿಂಕೆಯ ರೂಪನ್ನು ಧರಿಸಿ ಆಕಾಶಕ್ಕೆ ಹಾರಿ ಅಂತರಿಕ್ಷದಿಂದಲೇ ಮಾಯಾವಿಯಾದ ಆ ಅಸುರನು ನಾನಾ ವಿಧವಾದ ಅಸ್ತ್ರಗಳಿಂದ ಜಗದೀಶ್ವರಿಯಾದ ನಿಮಿಷಾಂಬಾದೇವಿಯ ಮೇಲೆ ಪ್ರಹರಿಸುತ್ತಿರಲು ಆ ಕ್ಷಣದಲ್ಲಿ ದುರ್ಗಾದೇವಿಯ ರೂಪಧಾರಿಣಿಯಾದ ಆ ರಣ ಚಂಡಿಯು ಆ ಜಾನುಮಂಡಲರಾಕ್ಷಸನ ಮಂತ್ರಿಗಳು ಸೈನಿಕರೇ ಮೊದಲಾದ ಸಮಸ್ತ ರಾಕ್ಷಸರನ್ನೂ ತನ್ನ ಬಾಣಗಳ ಜಾಲದಿಂದ ಸಕಲರನ್ನೂ ಸಂಹಾರಮಾಡಿದಳು ॥೪೪॥೪೫॥

ಸ್ವಯೂಥ್ಯೈಃರಾಕ್ಷಸೈಸ್ಸಾರ್ಧಂಪಂಚತ್ವಮುಗಮತ್ತದಾ।
ತದನ್ತರೇಪುಷ್ಪವರ್ಷಂವರ್ಷಯನ್ತಶ್ಚದೇವತಾಃ ॥೪೬॥

ತದನ್ತರೇಮಹಾಯೋಗೀಪೂಜಯಾಮಾಸಚಂಡಿಕಾಂ।
ನನಾಮಮುಕ್ತಕೋದೇವೀಂಮುನಿಭಿಸ್ಸಹಭಕ್ತಿಮಾನ್ ॥೪೭॥

ತಾ॥ ಈ ರೀತಿಯಾಗಿ ತ್ರಿಪುರಸುಂದರಿಯಾದ ನಿಮಿಷಾಂಬಾದೇವಿಯು ಆ ಜಾನುಮಂಡಲನ ಸಮಸ್ತ ರಾಕ್ಷಸರನ್ನು ಸಂಹರಿಸಲು ಗಗನಗಾಮಿಗಳಾದ ದೇವತೆಗಳೆಲ್ಲರೂ ರಣಚಂಡಿಯಾದ ಆ ನಿಮಿಷಾಂಬಾದೇವಿಯ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಅನಂತರ ಮಹಾಯೋಗಿಯಾದ ಆ ಸುಮನಸ್ಕನು ಶ್ರೀಮಂತನಾದ ಮುಕ್ತಕಋಷಿಯೂ ಆ ನಿಮಿಷಾಂಬಾ ರೂಪಳಾದ ಚಂಡಿಕಾದೇವಿಯನ್ನು ಮಹರ್ಷಿಗಳೊಡನೆ ಕೂಡಿ ಭಕ್ತಿಯಿಂದ ಪೂಜಿಸಿ ವಿನಯದಿಂದ ನಮಸ್ಕರಿಸಿದರು ॥೪೬॥೪೭॥

ಸನ್ತುಷ್ಟಾನಿಮಿಷಾದೇವೀಮುಕ್ತಕಂಮುನಿಪುಂಗವಂ।
ವಿಲೋಕ್ಯಕರುಣಾದೃಷ್ಟ್ಯಾವರಂದತ್ವಾಸುಶೋಭನಂ ॥೪೮॥

ಏತದಾರಭ್ಯಮಾಂಪೂಜಾಂಕುರುಷ್ವಮುನಿಪುಂಗವ।
ಇತ್ಯುಕ್ತ್ವಾಪ್ರಥೈಸ್ಸಾರ್ಧಂಶಿವಲೋಕಂಜಗಾಮಸಾ ॥೪೯॥

ತಾ॥ ಈ ರೀತಿಯ ಪೂಜಾದಿಗಳಿಂದ ಸಂತುಷ್ಟಳಾದ ನಿಮಿಷಾಂಬಾ ದೇವಿಯು ಮುಕ್ತಕಮುನಿಯನ್ನು ಕರುಣಾದೃಷ್ಟಿಯಿಂದ ನೋಡಿದವಳಾಗಿ ಶುಭಕರವಾದ ವರಗಳನ್ನು ಕೊಟ್ಟು ಇದು ಮೊದಲ್ಗೊಂಡು ನನ್ನನ್ನು ಪೂಜೆಮಾಡೆಂದು ಆಜ್ಞಾಪಿಸಿ ಪ್ರಥಮ ಗಣಗಳಿಂದ ಪರಿವೃತಳಾಗಿ ತನ್ನ ಶಿವಲೋಕವನ್ನು ಸೇರಿದಳು ॥೪೮॥೪೯॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮೌಕ್ತಿಕೋಪಾಖ್ಯಾನೇ ನಿಮಿಷಾಂಬಾ ಪ್ರತ್ಯಕ್ಷಕಥನಂನಾಮ ದಶಮೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮೌಕ್ತಿಕೋಪಾಖ್ಯಾನದಲ್ಲಿ ಶ್ರೀ ನಿಮಿಷಾಂಬಾ ಪ್ರತ್ಯಕ್ಷ ಕಥನವೆಂಬ ಹತ್ತನೇ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹನ್ನೊಂದನೆಯ ಅಧ್ಯಾಯ :-

ಜಾನುಮಂಡಲನ ಯುದ್ಧ ಪ್ರಯಾಣ

ನಾರದ ಉವಾಚ ;-

ಪಿತಾಮಹಮಹಾಪ್ರಾಜ್ಞನಮಸ್ತೇಸುರಸತ್ತಮ ।
ಮುಕ್ತಕಸ್ಯಚವೃತ್ತಾಂತಂಅದ್ಭುತಂಪಾಪನಾಶನಂ ॥೧॥

ತಾ॥ ಸುರಶ್ರೇಷ್ಠನೂ ಮಹಾ ಪ್ರಾಜ್ಞನೂ ಆದ ಎಲೈ ಪಿತಾಮಹನೇ ನಿನಗೆ ನಮಸ್ಕಾರವು ಮುಕ್ತಕ ಋಷಿಯ ವೃತ್ತಾಂತವು ಅದ್ಭುತವೂ ಪಾಪಹರವೂ ಆದುದು ॥೧॥

ಶ್ರೋತುಂಕೌತೂಹಲಂಮೇಽದ್ಯಯಥಾವದ್ವಕ್ತುಮರ್ಹಸಿ ।
ಶೃಣುನಾರದವಕ್ಷ್ಯಾಮಿತದ್ವೃತ್ತಾಂತಂಮಹಾದ್ಭುತಂ ॥೨॥

ತಾ॥ ಅಂತಹ ಶ್ರೀಮಂತನಾದ ಮುಕ್ತಕಋಷಿಯ ವೃತ್ತಾಂತವನ್ನು ಕೇಳಲು ನಾನು ಅತ್ಯಂತ ಕುತೂಹಲನಾಗಿರುತ್ತೇನೆ ಆತನ ಕಥೆಯನ್ನು ಸವಿಸ್ತಾರವಾಗಿ ಹೇಳಬೇಕೆಂದು ನಾರದಮಹರ್ಷಿಯು ಬ್ರಹ್ಮನನ್ನು ಪ್ರಾರ್ಥಿಸಲು, ಆ ಬ್ರಹ್ಮದೇವನು ನಾರದನಿಗೆ ಮಹಾ ಅದ್ಭುತವಾದ ಆ ಮುಕ್ತಕಋಷಿಯ ವೃತ್ತಾಂತವನ್ನು ಕೇಳುವನಾಗೆಂದನು ॥೨॥

ಏತದ್ವೃತ್ತಾಂತಮವ್ಯಕ್ತಂಜಾನುಮಂತಂಸುರಾನ್ತಕಂ ।
ಊಚುರ್ಯುದ್ಧಸಮುದ್ಭೀತಾಶ್ಚಾರಾವಿಗತಮತ್ಸರಾಃ ॥೩॥

ತಾ॥ ಹೀಗೆ ಯುದ್ಧದಲ್ಲಿ ತ್ರಿಪುರಸುಂದರಿಯಾದ ನಿಮಿಷಾಂಬಾದೇವಿಯಿಂದ ಸಮಸ್ತ ರಾಕ್ಷಸರು ಹತರಾಗಲು ಹತಶೇಷರಾದ ರಾಕ್ಷಸರು ಯುದ್ಧಮಾಡಲು ಭೀತರಾಗಿ ಮತ್ಸರವನ್ನು ಬಿಟ್ಟು ಯತಾರ್ಥವನ್ನು ತಿಳಿಯದವರಾಗಿ ರಾಕ್ಷಸರಾಜನಾದ ಆ ಜಾನುಮಂಡಲನಿಗೆ ಸರ್ಪಬಾಹುವೇ ಮೊದಲಾದ ಮಂತ್ರಿಗಳ ಸಹಿತ ರಾಕ್ಷಸರು ಹತರಾದ ಸಮಾಚಾರವನ್ನು ತಿಳಿಸಿದರು ॥೩॥

ಏವಂಭಯಾರ್ತ್ತಿತಾನ್‌ಚಾರಾನ್‌ದೃಷ್ಟ್ವಾಕೋಪೇನರಾಕ್ಷಸಃ ।
ತಚ್ಛೃತ್ವಾಕ್ರೋಧತಾಮ್ರಾಕ್ಷೋರಥಮಾರುಹ್ಯವೀರ್ಯವಾನ್ ॥೪॥

ತಾ॥ ಈ ರೀತಿ ಭಯಕಂಪಿತರಾದ ಚಾರರನ್ನು ಕೋಪದಿಂದ ನೋಡಿದ ರಾಕ್ಷಸರಾಜನಿಗೆ ಆ ಚಾರ ರಾಕ್ಷಸರ ಮಾತುಗಳನ್ನು ಕೇಳುತ್ತಲೇ ಕ್ರೋಧದಿಂದ

ಕೋಪಾವಿಷ್ಟನಾಗಿ ಮಹಾವೀರ್ಯವಂತನಾದ ಆ ಜಾನುಮಂಡಲನು ರಥಾರೂಢನಾಗಿ ಯುದ್ಧಕ್ಕೆ ಹೊರಟನು ॥೪॥

ಸೇನಾವೂಶ್ಚಾಸ್ಯನಗರಾತ್ ನಿರ್ಜಗಾಮಸುರಾನ್ತಕಃ ।
ತಪೋವನಂಸಮಾಸಾದ್ಯಋಷಿಮಂಡಲಸಂಯುತಂ ॥೫॥

ತಾ॥ ಆ ಜಾನುಮಂಡಲರಾಕ್ಷಸನು ಸೇನಾಸಮೇತನಾಗಿ ತನ್ನ ಪಟ್ಟಣವನ್ನು ಬಿಟ್ಟು ತಪೋವನಾಭಿಮುಖನಾಗಿ ಹೊರಟು ಆ ತಪೋವನದಲ್ಲಿದ್ದ ಯಾಗಮಂಟಪ ವನ್ನೂ ಅದರಲ್ಲಿದ್ದ ಋಷಿವಂಡಲವನ್ನು ನೋಡಿದನು ॥೫॥

ಋಷಿಮಂಡಲಮಧ್ಯಸ್ಥಂಮುಕ್ತಕಂದೃಷ್ಟ್ವಾತದಾ ।
ದೃಷ್ಟ್ವಾಕೋಪೇನದೈತ್ಯೇಂದ್ರಃನನಾದಬಹುಶಸ್ತದಾ ॥೬॥

ತಾ॥ ಹೀಗೆ ತಾನು ನೋಡಿದ ಋಷಿಮಂಡಲ ಮಧ್ಯದಲ್ಲಿರುವ ಮುಕ್ತಕಋಷಿ ಯನ್ನು ನೋಡಿದ ಕೂಡಲೇ ಕೋಪಾವಿಷ್ಟನಾಗಿ ದೈತ್ಯರಾಜನಾದ ಆ ಜಾನು ಮಂಡಲನು ನಾನಾ ವಿಧವಾಗಿ ಸಿಂಹಘರ್ಜನೆಯನ್ನು ಮಾಡಿದನು ॥೬॥

ತಂದೃಷ್ಟ್ವಾಜಾನುವರ್ಮಾಶೀಘ್ರಂವವರ್ಷಶರಜಾಲಕಂ ।
ಶಿಲಾಅಶನಿಕಲ್ಪಾಶ್ಚವರ್ಷಯನ್ತಿಚದಾನವಾಃ ॥೭॥

ತಾ॥ ಈ ರೀತಿಯಾಗಿ ಸಿಂಹನಾದವನ್ನು ಮಾಡುತ್ತಾ ಅತಿ ಶೀಘ್ರವಾಗಿ ಮುಕ್ತಕಋಷಿಯ ಮೇಲೆ ಬಾಣವರ್ಷವನ್ನು ಸುರಿಸಿದನು ಮತ್ತು ಸಿಡಿಲಿಗೆ ಸಮಾನ ವಾದ ಶಿಲಾವರ್ಷವನ್ನು ಆ ಜಾನುಮಂಡಲನು ಸುರಿಸುತ್ತಿರಲು ॥೭॥

ಮುಕ್ತಕಋಷಿಯ ಅಗ್ನಿದೇವ ಪ್ರಾರ್ಥನೆ

ತದಾಮುಕ್ತಕಯೋಗೀಂದ್ರಃಪಾವಕಂಲೋಕಪಾವನಂ ।
ಧ್ಯಾನಾತ್ತತ್ರೈವಜನಿತಾರಥಘೋಷಭಟಾದಯಃ ॥೮॥

ತಾ॥ ಇದನ್ನು ನೋಡಿದ ಯೋಗೀಂದ್ರನಾದ ಆ ಮುಕ್ತಕಋಷಿಯು ಲೋಕ ಪಾವನನಾಗಿ ಸಾಕ್ಷಾತ್ ಪ್ರತ್ಯಕ್ಷದೇವನಾದ ಅಗ್ನಿದೇವನನ್ನು ಧ್ಯಾನಮಾಡಲು ಆ ಯಜ್ಞ ಕುಂಡದಲ್ಲಿ ತಕ್ಷಣವೇ ಅಲ್ಲಿಯೇ ರಥ, ತುರಗ, ಭಟರಾದಿಯಾಗಿ ಹುಟ್ಟಿದವು ॥೮॥

ಕವಚಾನಿಚಶಸ್ತ್ರಾಣಿದಿವ್ಯಾನಿವಿವಿಧಾನಿಚ ।
ಜನಿತಾಹೋಮಕುಂಡೇನಪಾವಕಾರಾಧನೇನಚ ॥೯॥

ತಾ॥ ಕವಚಧಾರಿಗಳೂ, ಶಸ್ತ್ರಧಾರಿಗಳೂ ವಿವಿಧವಾದ ಸಕಲ ರಥಗಜಾಶ್ವವೇ ಮೊದಲಾದ ಸಮರಸಂಯುಕ್ತವಾದ ಮಹಾ ಸೈನ್ಯವು ಪಾವಕನಾದ ಅಗ್ನಿಯ ಆರಾಧನೆ ಯಿಂದ ಆ ಹೋಮಕುಂಡದಲ್ಲಿ ಹುಟ್ಟಿದವು ॥೯॥

ಶೂರೈಃಪರಿವೃತೋಧೀವರ್ಾಚತುರಂಗಬಲೈಸ್ತದಾ ।
ಜಾನುಮಂಡಲಲೋಕ್ಯಕ್ರೋಧತಾಮ್ರಾಯತೇಕ್ಷಣ ॥೧೦॥

ರಾಕ್ಷಸಾರ್ಭಾದಯಾಮಾಸರುಕ್ಮಪುಂಖೈಶ್ಶಿಲೀಮುಖೈಃ ।
ತಾಡಿತಾಮುಕ್ತಕೇನೈವಂಭೀತಸ್ಸ್ವಸ್ವಪುರಂಯಯೌ ॥೧೧॥

ತಾ॥ ಈ ರೀತಿಯಾಗಿ ಹೋಮಕುಂಡದಿಂದ ಜನಿಸಿದ ಚತುರಂಗಬಲಸಮೇತ ನಾದ ಮಹಾವೀರನಾದ ಆ ಮುಕ್ತಕಋಷಿಯು ಕೋಪಯುಕ್ತನಾಗಿ ದುರುಳ ದೈತ್ಯನಾದ ಆ ಜಾನುಮಂಡಲನನ್ನೂ ಅವನ ಕಡೆಯ ರಾಕ್ಷಸರನ್ನೂ ತನ್ನ ದಿವ್ಯಾಸ್ತ್ರಗಳಿಂದ ಪುಂಖಾನು ಪುಂಖವಾಗಿ ಬಾಣವರ್ಷದಿಂದ ಆ ದೈತ್ಯನ ಸಮೇತ ಸಕಲ ರಾಕ್ಷಸರನ್ನೂ ಮುಚ್ಚಲು ಆ ಬಾಣಘಾತಗಳಿಗೆ ತಾಳಲಾರದೆ ಆ ಜಾನುಮಂಡಲನು ಭಯ ಪಟ್ಟು ಉಳಿದ ರಾಕ್ಷಸರೊಡನೆ ಪಲಾಯನಮಾಡಿ ತನ್ನ ಪಟ್ಟಣವನ್ನು ಸೇರಿ ಕೊಂಡನು ॥೧೦॥೧೧॥

ತಾಂಪುರೀಂಋಷಿಭಿಸ್ಸಾರ್ಥಂಮುಕ್ತಕೋಮುನಿಸತ್ತಮಃ ।
ರುರೋಧಸ್ವಬಲೈರ್ವೀರೋಜಾನುಮಂಡಲಪಾಲಿತಾಂ ॥೧೨॥

ತಾ॥ ಈ ರೀತಿಯಾಗಿ ಸೋತು ಓಡಿಹೋದ ಆ ಜಾನುಮಂಡಲನು ತನ್ನ ನಗರವನ್ನು ಸೇರಲು ಮುನಿಶ್ರೇಷ್ಠನೂ ಮಹಾ ವೀರನೂ ಆದ ಮುಕ್ತಕಋಷಿಯು ತನ್ನ ಚತುರಂಗಬಲ ಸಮೇತನಾಗಿಯೂ ಸಕಲ ಋಷಿಗಳಿಂದಲೂ ಕೂಡಿ ಹೊರಟು ಆ ಜಾನುಮಂಡಲನ ಪಟ್ಟಣವನ್ನು ಸೇರಿ ಅದನ್ನು ಮುತ್ತಿಗೆ ಹಾಕಿದನು ॥೧೨॥

ನಗರೀಮದ್ಭುತಾಕಾರಾಂನಾನಾಲಂಕಾರಶೋಭಿತಾಂ ।
ನಾನಾರತ್ನೈಶ್ಚ ಖಚಿತಾಂಸ್ವರ್ಣಪ್ರಾಕಾರಶೋಭಿತಾಂ ॥೧೩॥

ತಾ॥ ಹೀಗೆ ಸೈನ್ಯ ಸಮೇತನಾಗಿ ಮುಕ್ತಕಋಷಿಯು ಮುತ್ತಿಗೆ ಹಾಕಿದ ಆ ಜಾನುಮಂಡಲನ ಪಟ್ಟಣವು ಮಹಾ ಅದ್ಭುತಾಕಾರವಾಗಿಯೂ ನಾನಾಲಂಕಾರಗಳಿಂದ ಕೂಡಿದ ಸೌಧಗಳಿಂದಲೂ, ನಾನಾ ರತ್ನಖಚಿತವಾದ ಗೋಪುರಗಳಿಂದಲೂ ಬಂಗಾರ ದಂತೆ ಹೊಳೆಯುವ ಪ್ರಾಕಾರಗಳಿಂದಲೂ ಕೂಡಿದ್ದಿತು ॥೧೩॥

ಸೌಧೈರಲಂಕೃತಾಂದಿವ್ಯಂಮಂದರಾದ್ರಿಸಮುನ್ನತೈಃ ।
ಅಟ್ಟಾಲಕೈಃಪರಿವೃತಾಂಕೂಟಾಗಾರೈಶ್ಚ ಶೋಭಿತಾಂ ॥೧೪॥

ತಾ॥ ಅಲ್ಲಿನ ಸೌಧಗಳು ನಾನಾ ರೀತಿಗಳಿಂದ ಅಲಂಕೃತವಾಗಿಯೂ ಮಂದ್ರಾದಿ ಪರ್ವತಕ್ಕೆ ಸಮಾನವಾಗಿ ದೊಡ್ಡ ದೊಡ್ಡ ಅಟ್ಟಾಲಿಕೆಗಳಿಂದ ನಿಬಿಡ ವಾಗಿ ಅತ್ಯಂತ ವಿಶಾಲವಾದ ಸಭಾಸ್ಥಾನಗಳಿಂದ ಪರಿವೃತವಾಗಿ ಆ ಪಟ್ಟಣವು ಶೋಭಿಸುತ್ತಿದ್ದಿತು ॥೧೪॥

ಶತಘ್ನೀಭಿಸ್ಸಮಾಕೀರ್ಣಾಂನಾನಾಯಂತ್ರೈಸ್ಸಮಾವೃತಾಂ ।
ಅನೇಕದಶತಸಾಹಸ್ರೈಃಮಾತಂಗೈರುಪಶೋಭಿತಾಂ ॥೧೫॥

ತಾ॥ ಶತ್ರುಗಳಿಗೆ ಭೀತಿಯನ್ನುಂಟುಮಾಡುವ ಶತಘ್ನೀ ಎಂಬ ಕೋಟೆ ರಕ್ಷಣ ಯಂತ್ರಗಳಿಂದಲೂ ಮತ್ತು ಶತ್ರುಗಳನ್ನು ನಾಶಮಾಡಲು ಸಿದ್ಧಗೊಳಿಸಿಟ್ಟಿರುವ ನಾನಾ ವಿಧವಾದ ಯಂತ್ರಾಗಾರಗಳಿಂದಲೂ ಅನೇಕ ದೇಶಗಳಲ್ಲಿ ಹುಟ್ಟಿದ ಮಂದರ ಪರ್ವತ ದಂತೆ ಅತೀ ಎತ್ತರವಾದ ಆನೆಗಳಿಂದ ಆ ಪಟ್ಟಣಕ್ಕೆ ಶೋಭೆಯುಂಟಾಗಿದ್ದಿತು ॥೧೫॥

ತುರಗೈಶ್ಚ ಸಮಾಕೀರ್ಣಾಂನಾನಾದೇಶಸಮುದ್ಭವೈಃ ।
ರಥೈರ್ಮಂದರಸಂಕಾಶೈಸ್ಸಂಪೂರ್ಣವಿವಿಧಾಯುಧೈಃ ॥೧೬॥

ತಾ॥ ನಾನಾ ದೇಶಗಳಲ್ಲಿನ ಉತ್ತಮವಾದ ಕುದುರೆಗಳ ಸಮೂಹವೂ, ಅನೇಕ ವಿವಿಧವಾದ ಆಯುಧಗಳಿಂದಲೂ, ಒಳ್ಳೇ ಸುಂದರವಾದ ರಥಗಳಿಂದಲೂ ಸರ್ವವಿಧ ಗಳಿಂದಲೂ ಸಂಪೂರ್ಣ ಸಮೃದ್ಧವಾಗಿರುವ ಆ ಪಟ್ಟಣವನ್ನು ಮುಕ್ತಕಋಷಿಯು ನೋಡಿ ವಿಸ್ಮಿತನಾದನು ॥೧೬॥

ತತ್ಪಟ್ಟಣೇಮಹಾಘೋರೈಃಪಾಶಮುದ್ಗರಸಂಯುತೈಃ ।
ಭೀಮಾಟ್ಟಹಾಸನಿನದೈಃಸ್ಸಂಗರಾಭಿಮುಖೈಸ್ಸದಾ ॥೧೭॥

ತಾ॥ ಆ ಮಹಾ ಪಟ್ಟಣದಲ್ಲಿ ಪಾಶ, ಮುದ್ಗರ ಮೊದಲಾದ ಆಯುಧ ಗಳನ್ನು ಧರಿಸಿ ಮಹಾಬಲ ಪರಾಕ್ರಮವುಳ್ಳವರಾಗಿಯೂ ಮಹಾ ಭಯಂಕರ ರೂಪ ವುಳ್ಳವರಾಗಿಯೂ ಮಹಾ ಭೀತಿಯುಂಟಾಗುವಂತೆ ಘರ್ಜಿಸುವ ಅಟ್ಟಹಾಸವುಳ್ಳವ ರಾಗಿ ಆ ರಾಕ್ಷಸರು ಯುದ್ಧಕ್ಕೆ ಸದಾ ಸಿದ್ಧರಾಗಿ ನಿಂತಿದ್ದರು ॥೧೭॥

ಏತಾದೃಶೈರ್ಮಹಾವೀರೈ ರಾಕ್ಷಸೈಃಪರಿಸೇವಿತಾಂ ।
ಪುರ್ಯಾಶ್ಚ ಪಶ್ಚಿಮೇದೇಶೇಸಂಸ್ಥಿತಾಮುನಿಪುಂಗವಾಃ ॥೧೮॥

ತಾ॥ ಈ ರೀತಿ ಯುದ್ಧಸಿದ್ಧರಾದ ಮಹಾವೀರ ರಾಕ್ಷಸರಿಂದ ಸೇವಿಸಲ್ಪಡು ತ್ತಿರುವ ಆ ಜಾನುಮಂಡಲನ ಪಟ್ಟಣವನ್ನು ಯುದ್ಧಕ್ಕಾಗಿ ಬಂದು ಮುತ್ತಿರುವ ಮುಕ್ತಕಋಷಿಯೊಡನೆ ಬಂದಿರುವ ಋಷಿಗಳು ಆ ಜಾನುಮಂಡಲನ ಪುರದ ಪಶ್ಚಿಮಪ್ರದೇಶದಲ್ಲಿ ಬಂದು ನಿಂತರು ॥೧೮॥

ಜಾನುಮಂಡಲನ ವಧೆ

ಮುಕ್ತಕಂಚಪುರಸ್ಕೃತ್ಯವಸಿಷ್ಠಾದಿಮುನೀಶ್ವರಾಃ ।
ಅನೇಕಬಲಸಾಹಸ್ರೈಸ್ಸಂವೃತಾಮುನಿಸತ್ತಮಾಃ ॥೧೯॥

ತಾ॥ ವಸಿಷ್ಠಾದಿ ಮುನೀಶ್ವರರು ಹೋಮಕುಂಡದಿಂದ ಉತ್ಪನ್ನವಾದ ಅನೇಕ ಸಹಸ್ರ ಸೈನ್ಯಗಳೊಂದಿಗಿರುವ ಮುಕ್ತಕಋಷಿಯನ್ನು ಸುತ್ತಲೂ ನಿಂತು ಪುರಸ್ಕರಿಸುತ್ತಿರಲು ॥೧೯॥

ಅನೇಕಗಜಸಾಹಸ್ರೈರ್ವಾಜಿಭಿಶ್ಚ ಸಮಂತತಃ ।
ಏತಾದೃಶಂಮುನಿಬಲಂದೃಷ್ಟ್ವಾರ್ರಾಕ್ಷಸಾಧಿಪಃ ॥೨೦॥

ತಾ॥ ಆ ಮುಕ್ತಕಋಷಿಯನ್ನು ಸುತ್ತಿರುವ ಅನೇಕ ಸಾವಿರ ಗಜಬಲವನ್ನೂ ಅನೇಕ ಸಾವಿರ ರಥತುರಗ ಬಲವನ್ನೂ ಸೈನ್ಯಸಮೇತರಾದ ಮುನಿಗಳನ್ನೂ ಆ ರಾಕ್ಷಸರ ರಾಜನಾದ ಆ ಜಾನುಮಂಡಲನು ನೋಡಿದವನಾದನು ॥೨೦॥

ತತ್ಪಟ್ಟಣೇಕಲಕಲಧ್ವನಿರ್ಜಾತೋಮಹಾರವಃ ।
ಜಾತಾನೇಕಾದ್ಭುತಾಸ್ತೇಷಾಂನಾನಾದುಶ್ಶಕುನಾಸ್ತದಾಂ ॥೨೧॥

ತಾ॥ ಈ ರೀತಿಯಾಗಿ ಮುಕ್ತಕಋಷಿಯ ಸಮೇತರಾದ ಮುನಿಗಳು ಚತುರಂಗ ಬಲ ಸಮೇತರಾಗಿ ಜಾನುಮಂಡಲನ ಪಟ್ಟಣವನ್ನು ಮುತ್ತಿರಲು ಆ ಪಟ್ಟಣದ ಒಳಗೆ ಹೆಚ್ಚಾದ ಕಲಕಲ ಧ್ವನಿಯುಂಟಾಗುತ್ತಿರಲು ಅಲ್ಲಿ ಅನೇಕ ಅದ್ಭುತವಾದ ದುಶ್ಶಕುನಗಳುಂಟಾಯಿತು ॥೨೧॥

ಉಲ್ಕಾಪಾತಾಶ್ಚ ಜಾಯನ್ತೇರಕ್ತವೃಷ್ಟಿಸ್ತಥೈವಚ ।
ರಮ್ಯಾಂಪುರೀಂಸಮಾಲೋಕ್ಯಮುಕ್ತಕೋಮುನಿಸತ್ತಮಾಃ ॥೨೨॥

ತಾ॥ ಈ ರೀತಿ ದುಶ್ಶಕುನಗಳು ತೋರುತ್ತಿರಲು ಅಂತರಿಕ್ಷದಿಂದ ಉಲ್ಕಾಪಾತಗಳೆಂಬ ಅಗ್ನಿವರ್ಷವೂ ಮತ್ತು ರಕ್ತವರ್ಷವೂ ಆ ಸುಂದರವಾದ ಪಟ್ಟಣದ ಮೇಲೆ ಸುರುಯುತ್ತಿರಲು ಆ ಸಮಯದಲ್ಲಿ ಮುನಿಶ್ರೇಷ್ಟನಾದ ಆ ಮುಕ್ತಕಮುನಿಯು ಇದು ಯುದ್ಧಕ್ಕೆ ಪ್ರಶಸ್ತವಾದುದೆಂದು ಯುದ್ಧಾಸಕ್ತನಾದನು ॥೨೨॥

ನಿರುಧ್ಯಬಾಣವರ್ಶ್ಯೈಸ್ತಾಂಘೋರಾಶನಿಸಮಪ್ರಭೈಃ ।
ನಿಪಾತ್ಯೈಸ್ಸ್ವರ್ಣವರ್ಣಾಂಶ್ಚ ಸೌಧಾನಭ್ರರಿಕಷಾನಪಿ ॥೨೩॥
ಭಸ್ಮೀಕೃತ್ವಾಚಸರ್ವಾಣಿಮಂದಿರಾಣಿಸಮಂತತಃ ।
ತತೋನ್ಯೈಃರಾಕ್ಷಸೇಂದ್ರಸ್ಯಪ್ರಾಸಾದಂಚನಿಪಾತ್ಯಚ ॥೨೪॥

ತಾ॥ ಆ ಮುಕ್ತಕಋಷಿಯು ಸಿಡಿಲಿಗೆ ಸಮಾನವಾದ ಅನೇಕ ಬಾಣಗಳಿಂದ ಆ ಪಟ್ಟಣದಲ್ಲಿರುವ ಚಿನ್ನದ ಬಣ್ಣದಿಂದ ಅಂತರಿಕ್ಷದವರೆವಿಗೆ ವಿಸ್ತರಿಸಿ ನಿಂತಿರುವ ಎತ್ತರವಾಗಿರುವ ಉಪ್ಪರಿಗೆಗಳನ್ನು ನೆಲಕ್ಕೆ ಕೆಡವಿದನು ಮತ್ತು ಎಲ್ಲಾ ಕಡೆಗಳಿಂದಲೂ ರಾರಾಜಿಸುತ್ತಿರುವ ರಾಕ್ಷಸರ ಮಂದಿರಗಳನ್ನೆಲ್ಲಾ ಬಾಣವರ್ಷದಿಂದ ಸುಟ್ಟು ಭಸ್ಮೀಕೃತಮಾಡಿ ರಾಕ್ಷಸ ಪ್ರಮುಖನಾದ ಆ ಜಾನುಮಂಡಲನ ಪ್ರಾಸಾದವನ್ನೂ ಸಹ ಬಾಣಗಳಿಂದ ಕೆಡವಿದನು ॥೨೩॥೨೪॥

ತಂದೃಷ್ಟ್ವಾಭಗ್ನಪಟ್ಟಣಂಜಾನುಮಂಡಲರಾಕ್ಷಸಃ ।
ಭಾಸ್ಕರಾಕಾರಮಕುಟಶ್ಶಿಂಜಿತಾಂಗದಭೂಷಣಃ ॥೨೫॥

ತಾ॥ ಈ ರೀತಿಯಾಗಿ ತನ್ನ ಪಟ್ಟಣವೆಲ್ಲಾ ಉರಿದು ಬೀಳುತ್ತಿರುವುದನ್ನು ನೋಡಿದ ಆ ರಾಕ್ಷಸ ರಾಜನಾದ ಜಾನುಮಂಡಲನು ಯುದ್ಧಕ್ಕೆ ಹೊರಡಲು ಸೂರ್ಯನಂತೆ ಪ್ರಕಾಶಮಾನವಾಗಿರುವ ಕಿರೀಟವನ್ನು ಧರಿಸಿದವನಾಗಿ ಮುಟ್ಟಿದಾಕ್ಷಣ ಶಬ್ಧ ಬರುವಂತಾ ಆಭರಣಗಳಿಂದ ಅಲಂಕೃತನಾಗಿ ॥೨೫॥

ಮಂದರಾಚಲಸಂಕಾಶೋಮಹಾರಜತಸಂವೃತಃ ।
ಶತಬಾಹುಶ್ಶತಮುಖಶ್ಶತಪ್ರಹರಣೋದ್ಯಮಃ ॥೨೬॥

ತಾ॥ ರಜತದಂತೆ ಶುಭ್ರವಾದ ವಸ್ತ್ರಗಳನ್ನುಟ್ಟವನಾಗಿ ಅನೇಕವಾದ ಭುಜಗಳಿಗೂ ಅಸಂಖ್ಯಾತ ಮುಖವಾದ ಆಯುಧಗಳುಳ್ಳವನಾಗಿ ಯುದ್ಧದಲ್ಲಿ ಪ್ರಾಣಾಪಹರಣಮಾಡುವ ಸಕಲಾಸ್ತ್ರಗಳನ್ನೂ ಹೊಂದಿದವನಾಗಿ ॥೨೬॥

ಶತಶೀರ್ಷಸ್ಸ್ಥಿತಶ್ರೀಮಾನ್ಯತಶೃಂಗಇವಾಚಲಃ ।
ಸಭಾಸ್ಕರಸಹಸ್ರಸ್ಯಸಂಘಾತಮಿವಭಾಸ್ವರಂ ॥೨೭॥
ಸಹಸ್ರವಾಜಿಭಿರ್ಯುಕ್ತಂರಥಮಾಸ್ಥಾಯವೀರ್ಯವಾನ್ ।

ತಾ॥ ನೂರು ಶಿರಗಳುಳ್ಳವನಾದಕಾರಣ ಶತಶೃಂಗಪರ್ವತದಂತೆ ಬೆಳಗುತ್ತಾ ಆ ಜಾನುಮಂಡಲನು ಸಾವಿರ ಸೂರ್ಯರ ಸಮುದಾಯದಂತೆ ಪ್ರಕಾಶನಾಗಿ ಸಹಸ್ರ ಕುದುರೆಗಳನ್ನು ಕಟ್ಟಿದ ರಥವನ್ನೇರಿದನು ॥೨೭॥

ಸಧ್ವಜಸ್ಸಪತಾಕಶ್ಚಸಾನುಕರ್ಷೋಮಹಾರಥಃ ॥೨೮॥
ದಶಸಾದಿಮಾಯುಕ್ತೋಮೇಘಸ್ತನಿತನಿಸ್ವನಃ ।
ಕಾಲಃಕಾಲಮಹಾವಕ್ತ್ರೋಮೇಘಸ್ಥಇವಭಾಸ್ಕರಃ ॥೨೯॥

ತಾ॥ ಉತ್ತಮವಾದ ಧ್ವಜಗಳಿಂದಲೂ ಚಿಕ್ಕ ಚಿಕ್ಕ ನಿಶಾನಿಗಳಿಂದಲೂ ಹಿಂಬಾಲಕರಾದ ರಥಿಕರಿಂದಲೂ ಹತ್ತು ಮಂದಿ ಸಾರಥಿಗಳಿಂದಲೂ ಯುಕ್ತನಾಗಿ ಮೇಘದಂತೆ ಗಂಭೀರವಾಗಿ ಘರ್ಜಿಸುತ್ತಾ ಕೆಂಬಣ್ಣವಾದ ಹೂವಿನಹಾರಗಳಿಂದ ಅಲಂಕೃತನಾಗಿ ಕಪ್ಪಾದ ಮುಖದ ತೇಜಸ್ಸಿನಿಂದ ಪರ್ವತ ಸಮಾನವಾದ ನೀಲವರ್ಣ ವಿಶಿಷ್ಟವಾದ ಶರೀರವುಳ್ಳವನಾದ್ದರಿಂದ ಮೇಘಮಂಡಲದ ಮಧ್ಯದಲ್ಲಿರುವ ಸಾಯಂಕಾಲದ ಸೂರ್ಯನಂತೆ ಹೊಳೆಯುತ್ತಿದ್ದನು ॥೨೮॥೨೯॥

ಕಾಂಚನಾಂಗದನದ್ಧಾಭ್ಯಾಂಭುಜಾಭ್ಯಾಂಶೋಭಯನ್ದಿಶಃ ।
ಶೃಂಗಾಭ್ಯಾಮಿವತುಂಗಾಭ್ಯಾಂಹಿಮವತ್ಪರ್ವತೋತ್ತಮಃ ॥೩೦॥

ತಾ॥ ಮತ್ತು ಬಂಗಾರದಿಂದ ಮಾಡಲ್ಪಟ್ಟ ಬಾಹುಜಿಗೆಗಳಿಂದ ಅಲಂಕೃತನಾಗಿ ಭುಜಶಿರಸ್ಸುಗಳಿಂದ ನೋಡುವವರಿಗೆ ಶೃಂಗದ್ವಯ ಸಂಯುಕ್ತವಾದ ಹಿಮಾಲಯ ಪರ್ವತದಂತೆ ಕಂಗೊಳಿಸಿದನು ॥೩೦॥

ತದಾದಿತಿಜನಾಥಶ್ಚ ರಥಮಾರೂಢವಾರ್ಣಶ್ಚ ಸಃ ।
ನಿಶಾಚರೈರ್ಮಹಾಭೀಮೈಃ ರಥರುತ್ತುಂಗಪಟ್ಟಸೈಃ ॥೩೧॥

ತಾ॥ ಈ ರೀತಿಯಾಗಿ ಅಲಂಕೃತನಾದ ಆ ದಿತಿಪುತ್ರನಾಗಿಯೂ ರಾಕ್ಷಸಾಧಿಪತಿಯಾಗಿಯೂ ಇರುವ ಆ ಜಾನುಮಂಡಲನು ರಥಾರೂಡನಾಗಿ ತನ್ನಂತೆಯೇ ರಥ ಸೈನಿಕರನ್ನೂ ನಿಶಾಚರರಂತೆ ಮಹಾ ಕ್ರೂರಿಗಳಾಗಿಯೂ ಭೀಮಾಕಾಯರಾಗಿಯೂ ಇರುವ ಅಶ್ವಸೈನ್ಯದೊಡನೆಯೂ ಯುದ್ಧಕ್ಕೆ ಸಿದ್ಧನಾದನು ॥೩೧॥

ಪಾಶಕುಂತೈಶ್ಚ ಖಡ್ಗೈಶ್ಚ ಶತಘ್ನಿಭಿಸ್ಸಮಾವೃತಃ ।
ತ್ರಿಶೂಲೈರ್ಭಂಡಿವಾಲೈಶ್ಚ ಚಕ್ರೈಸ್ತೋಮರಸಂಯುತೈಃ ॥೩೨॥

ತಾ॥ ಮಹಾ ಭಯಂಕರವಾದ ಅಲಗುಳ್ಳ ಪಾಶಗಳಿಂದಲೂ ಕುಂತಲಗಳಿಂದಲೂ ದೊಡ್ಡದಾದ ಖಡ್ಗಗಳೇ ಮೊದಲಾದ ಶತಘ್ನೀ ಎಂಬ ಆಯುಧಗಳನ್ನು ಧರಿಸಿರುವ ಕ್ರೂರರಾಕ್ಷಸರಿಂದಲೂ ಮತ್ತು ತ್ರಿಶೂಲ, ಭಂಡಿವಾಳ ಚಕ್ರಗಳು, ತೋಮರಗಳುಳ್ಳ ನಾನಾ ವಿಧವಾದ ಆಯುಧಗಳಿಂದ ಸಜ್ಜಿತರಾದ ಭಯಂಕರ ರಾಕ್ಷಸರಿಂದಲೂ ॥೩೨॥

ಏತಾದೃಶೈರ್ಬಹುವಿಧೈಸ್ಸಾಯಂಕೃ ಜಾನುಮಂಡಲಃ ।
ಋಷೀನುದ್ದಿಶ್ಯದೈತ್ಯೇಂದ್ರೋಯುದ್ಧಂಕರ್ತುಂಸಮುದ್ಯತಃ ॥೩೩॥

ತಾ॥ ಈ ರೀತಿ ನಾನಾ ವಿಧವಾದ ಆಯುಧಗಳಿಂದ ಸಜ್ಜಿತವಾದ ಚತುರಂಗ ಬಲಸಮೇತನಾಗಿ ಪರಿಸೇವಿಸಲ್ಪಡುತ್ತಿರುವ ಆ ಜಾನುಮಂಡಲನು ಋಷಿಸೈನ್ಯದೊಡನೆ ಯುದ್ಧಮಾಡಲು ಉತ್ಸಿತನಾಗಿ ಸಕಲ ಸೇನೆಯೊಡನೆ ಯುದ್ಧರಂಗಕ್ಕೆ ಹೊರಟನು ॥೩೩॥

ರಣಭೇರೀಂತಾಡಯಂತೋದೈತ್ಯಪಾಶ್ಚ ಸಮಾಯಯುಃ ।
ರಾಕ್ಷಸೇಂದ್ರಸಮಾಸಾಧ್ಯಹೋಮೋದ್ಭವರಥಸ್ಥಿತಃ ॥೩೪॥

ತಾ॥ ಆ ರಾಕ್ಷಸೇಂದ್ರನು ಈ ರೀತಿಯಾಗಿ ಸಕಲ ಸೈನ್ಯವನ್ನು ರಣಭೇರಿಗಳು ಭಾರಿಸುತ್ತಿರಲು ದೈತ್ಯಭಟರು ತನ್ನ ಉಭಯಪಾರ್ಶವಗಳಲ್ಲಿ ಸೇವಿಸುತ್ತಾ ಬರುತ್ತಿರಲು ಹೋಮಕುಂಡದಿಂದ ಹುಟ್ಟಿರುವ ಚತುರಂಗಬಲ ಸಮೇತವಾಗಿ ನಿಂತಿರುವ ಮುನಿ ಋಷಿಗಳ ಎದುರು ಆ ಜಾನುಮಂಡಲನು ಯುದ್ಧಕ್ಕೆದುರಾದನು ॥೩೪॥

ಮುಕ್ತಕೋಕ್ರೋಧತಾಮ್ರಾಕ್ಷಃಶರೈರಾಶೀವಿಷೋಪಮೈಃ ।
ಜಘಾನನಿಶಿತೈಸ್ತೂರ್ಣಂಶರೈರಾಪಾದಮಸ್ತಕಂ ॥೩೫॥

ತಾ॥ ಈ ರೀತಿಯಾಗಿ ಎದುರು ಬಂದ ರಾಕ್ಷಸ ಸೈನ್ಯವನ್ನು ನೋಡಿದ ಮುನಿ ಶ್ರೇಷ್ಟನಾದ ಅ ಮುಕ್ತಕಋಷಿಯು ಕೋಪತಾಮ್ರಾಕ್ಷನಾಗಿ ಹೋಮಕುಂಡದಿಂದ ಹುಟ್ಟಿದ ರಥತುರಗ ಗಜ ಚತುರಂಗಬಲ ಸಮೇತನಾಗಿ ಆ ರಾಕ್ಷಸೇಂದ್ರನಿಗೆ ಎದುರಾಗಿ ಸರ್ಪಗಳ ವಿಷಕ್ಕೆ ಸಮಾನವಾದ ಬಾಣಗಳಿಂದ ಆ ರಾಕ್ಷಸರ ಗರ್ವವನ್ನು ಅಣಗಿಸಿದನು ಮತ್ತು ಆ ರಾಕ್ಷಸರ ಆಪಾದಮಸ್ತಕವೂ ಬಾಣಗಳಿಂದ ಮುಚ್ಚಿದನು ಮತ್ತು ನೋಯಿಸಿದನು ॥೩೫॥

ರಾಕ್ಷಸೋಪಿಮಹಾವೀರಃತಂದೃಷ್ಟ್ವಾಕ್ರೋಧಮೂರ್ಛಿತಃ ।
ಬಾಣಾನಗ್ನಿಶಿಖಾಕಾರಾನ್ಮುಮೋಚಮುನಿಪಾಲಕಂ ॥೩೬॥

ತಾ॥ ಮಹಾವೀರನಾದ ಆ ಜಾನುಮಂಡಲನೂ ಕೂಡ ಅದನ್ನು ನೋಡಿ ಕ್ರೋಧಪರವಶನಾಗಿ ಬೆಂಕಿಯ ಜ್ವಾಲೆಗೆ ಸಮಾನವಾದ ಅನೇಕ ಬಾಣಗಳನ್ನು ಆ ಋಷಿಗಳಿಗೆ ರಕ್ಷಕನಾಗಿರುವ ಮುಕ್ತಕಋಷಿಯ ಮೇಲೆ ಪ್ರಯೋಗಿಸಿದನು ॥೩೬॥

ಏವಂಯುದ್ಧೇಸಮುತ್ಪನ್ನೇಸರ್ವಲೋಕಭಯಂಕರೇ ।
ತೇನಯುದ್ಧೇನವಿಭ್ರಾನ್ತಾದೇವಾಶ್ಚೇಂದ್ರಪುರೋಗಮಾಃ ॥೩೭॥

ತಾ॥ ಆ ಜಾನುಮಂಡಲನೂ ಮುಕ್ತಕಋಷಿಯೂ ಒಬ್ಬರಿಗೊಬ್ಬರು ಬಾಣ ಗಳಿಂದ ಘಾತಿಸುತ್ತಿರಲು ಈ ರೀತಿಯಾದ ಸರ್ವಲೋಕ ಭಯಂಕರವಾದ ಯುದ್ಧ ನಡೆಯುತ್ತಿರಲು ಇಂದ್ರಾದಿದೇವತೆಗಳೆಲ್ಲರೂ ಅತಿ ಭಯಕಂಪಿತರಾದರು ॥೩೭॥

ಚಾಲಯನ್ನೀರುಹೀದ್ರಾಶ್ಚ ಶೋಷಯನ್ತಿಚನಿಮ್ನಗಾಃ ।
ವಿಚಲನ್ತಿಚದಿಕ್ಪಾಲಾಃಉಲ್ಕಾಪಾತಾಶ್ಚಸಂಭೃತಾಃ ॥೩೮॥

ತಾ॥ ಈ ರೀತಿಯಾಗಿ ಯುದ್ಧವು ಘೋರವಾಗಿ ನಡೆಯುತ್ತಿರಲು ಅದರ ದೆಶೆ ಯಿಂದ ಪರ್ವತಗಳು ಚಲಿಸಿದವು, ಸಮುದ್ರಗಳು ಬತ್ತಿಹೋದವು. ದಿಕ್ಪಾಲಕರು ನಡುಗಿದರು ಆಕಾಶದಿಂದ ಬೆಂಕಿಯ ಕೊಳ್ಳಿಗಳು ಬಿದ್ದವು ॥೩೮॥

ದೃಷ್ಟ್ವಾಂದೇವಾಸುರಾಸ್ಸರ್ವೇನಭೋಮಂಡಲಮಾಯಯುಃ ।
ಮುನೀನಾಂದಿಕಚಾನಾಂಚಅಭೂದ್ಯುದ್ಧಂಸುಧಾರುಣಂ ॥೩೯॥

ತಾ॥ ಈ ರೀತಿಯಾಗಿ ಅನೇಕ ದುಶ್ಶಕುನಗಳು ಜರುಗಿ ಭಯಂಕರವಾದ ಯುದ್ಧ ನಡೆಯುತ್ತಿರಲು ಆಕಾಶದಲ್ಲಿ ದೇವ, ಗಂಧರ್ವ, ಕಿನ್ನರ, ಕಿಂಪುರುಷರೇ ಮೊದಲಾದವರೆಲ್ಲರೂ ಆಶ್ಚರ್ಯಕರವಾದ ಈ ಯುದ್ಧವನ್ನು ನೋಡುತ್ತಿರಲು ಮುನಿ ಗಳಿಗೂ ರಾಕ್ಷಸರಿಗೂ ತುಂಬಾ ಘೋರವಾಗಿ ಯುದ್ಧ ನಡೆಯಿತು ॥೩೯॥

ತತೋಽಮುಕ್ತಋಷಿಶ್ರೀಮಾನ್ಸಂಧಾಯವಿವಿಧಾನ್ಶರಾನ್ ।
ಜಘಾನರಾಕ್ಷಸೇಂದ್ರಸ್ಯಮರ್ಮಾಣಿಬಹುಶಸ್ತಥಾ ॥೪೦॥

ತಾ॥ ಆ ಸಮಯದಲ್ಲಿ ಶ್ರೀಮಂತನಾದ ಆ ಮುಕ್ತಕಮುನಿಯು ಧನುಸ್ಸಿನಲ್ಲಿ ನಾನಾ ವಿಧವಾದ ಬಾಣಗಳನ್ನು ಸಂಧಾನಮಾಡಿ ಆ ರಾಕ್ಷಸೇಂದ್ರನಾದ ಜಾನುಮಂಡಲನ ಮರ್ಮಸ್ಥಳಗಳನ್ನು ಬಹುವಾಗಿ ನೋಯಿಸಿದನು ॥೪೦॥

ರಾಕ್ಷಸೋಽಪಿಮಹಾವೀರಃಶರೈರಾಶೀವಿಷೋಪಮೈಃ ।
ಬಿಭೇದಮುಕ್ತಕಸ್ಯಾಪಿಮರ್ಮಾಣಿಚಪುನಃಪುನಃ ॥೪೧॥

ತಾ॥ ಮಹಾವೀರನಾದ ಆ ಜಾನುಮಂಡಲನು ಮಹಾ ಕೋಪವುಳ್ಳವನಾಗಿ ಹಾವುಗಳ ವಿಷಕ್ಕೆ ಸಮಾನವಾದ ಬಾಣಗಳನ್ನು ಪ್ರಯೋಗಿಸಿ ಆ ಮುಕ್ತಕನ ಮರ್ಮಸ್ಥಳಗಳನ್ನು ಮತ್ತೆ ಮತ್ತೆ ನೋಯಿಸಿದನು ॥೪೧॥

ಏತಾವೇವಂಸುಸಂಕ್ರುದ್ಧೌವೀರೌಸಿಂಹಪರಾಕ್ರಮೌ ।
ಗಜಾವಿವಮದೋನ್ಮತ್ತೌಅನ್ಯೋನ್ಯಜಯಕಾಂಕ್ಷಿಣೌ ॥೪೨॥

ತಾ॥ ಸಿಂಹ ಪರಾಕ್ರಮವುಳ್ಳ ಅವರೀರ್ವರೂ ಮಹಾ ಕೃದ್ಧರಾಗಿ ಮದಿಸಿದ ಆನೆಗಳಂತೆ ಒಬ್ಬರಿಗೊಬ್ಬರು ಸೆಣಸುತ್ತಾ ಅನ್ಯೋನ್ಯ ಜಯಾಕಾಂಕ್ಷಿಗಳಾಗಿದ್ದರು ॥೪೨॥

ಪರಸ್ಪರೌಭೇದಯನ್ತೌವದನ್ತೌಚಪುನಃಪುನಃ ।
ಪ್ರಹರನ್ತೌಚತೀಕ್ಷ್ಣಾಸ್ತ್ರೈಃರುಕ್ಮಪುಂಖಶಿಲೀಮುಖೈಃ ॥೪೩॥

ತಾ॥ ಒಬ್ಬರನ್ನೊಬ್ಬರು ಭೇದಿಸುತ್ತಾ ಮತ್ತೆ ಮತ್ತೆ ಶಸ್ತ್ರಾಸ್ತ್ರಗಳಿಂದ ಒಬ್ಬರನ್ನೊಬ್ಬರು ನೋಯಿಸುತ್ತಾ ಮಹಾ ತೀಕ್ಷ್ಣವಾದ ಬಾಣಗಳಿಂದಲೂ ಖಡ್ಗಗಳಿಂದಲೂ ನಾನಾ ವಿಧವಾದ ಆಯುಧಗಳಿಂದಲೂ ಒಬ್ಬರಿಗೊಬ್ಬರು ತಾಡಿಸುತ್ತಾ ಸೆಣಸುತ್ತಿದ್ದರು ॥೪೩॥

ಏವಂಸಂಯುಧ್ಯಸುಚಿರಂಮುಕ್ತಕಾಮುರವೈರಿಣೌ ।
ಪರಸ್ಪರವಧಾರ್ಥಂವೈದಿವ್ಯಾಸ್ತ್ರಾಣಿಮುಮೋಚತುಃ ॥೪೪॥

ತಾ॥ ಈ ರೀತಿಯಾಗಿ ಇಬ್ಬರೂ ಸಂಹಾರೇಚ್ಛೆಯಿಂದ ವೈರತ್ವದಿಂದ ಕೂಡಿದವರಾಗಿ ಸರ್ಪಗಳಿಗೆ ಸಮಾನವಾದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಕಾದಾಡಿದರು ಮಧ್ಯೆ ಮಧ್ಯೆ ಒಬ್ಬರನ್ನೊಬ್ಬರು ಸಂಹರಿಸಲು ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು ॥೪೪॥

ವಾಯವ್ಯನೌರಗಂಚೈವತದಾಪಾವಕಮಂಬುದಂ ।
ತಾಮಿಸ್ರಮಥಚಾದಿತ್ಯಂಆಸುರಂದಿವ್ಯಮೇವಚಂ ॥೪೫॥

ತಾ॥ ವಾಯವ್ಯಾಸ್ತ್ರ, ಸರ್ಪಾಸ್ತ್ರ, ಮೇಘಾಸ್ತ್ರ, ಆಗ್ನೇಯಾಸ್ತ್ರ, ಅಂಧಕಾರಾಸ್ತ್ರ, ಸೂರ್ಯಾಸ್ತ್ರ, ದಾನವಾಸ್ತ್ರವೇ ಮೊದಲಾದ ದಿವ್ಯಾಸ್ತ್ರಗಳನ್ನೂ ಒಬ್ಬರಿಗೊಬ್ಬರು ಪ್ರಯೋಗಿಸಿದರು ॥೪೫॥

ಮಾಹೇಶ್ವರಂವೈಷ್ಣವಂಚಭುಜಂಗಾಸ್ತ್ರಂಚಗಾರುಡಃ।
ಏವಮಸ್ತ್ರಾಣಿಸಂಧಾಯವಿನಿಹತ್ಯಪರಸ್ಪರಂ ॥೪೬॥

ತಾ॥ ಮಹೇಶ್ವರಾಸ್ತ್ರ, ವೈಷ್ಣವಾಸ್ತ್ರ, ಭುಜಂಗಾಸ್ತ್ರ, ಗರುಡಾಸ್ತ್ರಗಳನ್ನು ಒಬ್ಬರಿಗೊಬ್ಬರು ಪ್ರಯೋಗಿಸುತ್ತಾ ಆ ರಾಕ್ಷಸ ರಾಜನಾದ ಜಾನುಮಂಡಲನೂ ಋಷಿಶ್ರೇಷ್ಠನಾದ ಮುಕ್ತಕಋಷಿಯೂ ಹೀಗೆ ದಿವ್ಯಾಸ್ತ್ರಗಳಿಂದ ಒಬ್ಬರನ್ನೊಬ್ಬರು ಸಂಹರಿಸಲು ಪ್ರಯೋಗಿಸಿದ್ದನ್ನು ಇನ್ನೊಬ್ಬರು ಅದನ್ನು ಖಂಡಿಸುತ್ತಾ ಬಹುಘೋರವಾಗಿ ಯುದ್ಧ ಮಾಡುತ್ತಿರಲು ॥೪೬॥

ತಥಾಪಾಶುಪತಂಚಾಸ್ತ್ರಂಸಂಧಾಯಋಷಿರದ್ಭುತಂ।
ಸಮ್ಯಜ್ಮಂತ್ರಂಸಮುಚ್ಚಾರ್ಯಹೃದಿಧ್ಯಾತ್ವಾಮಹೇಶ್ವರಂ ॥೪೭॥

ತಾ॥ ಋಷಿಗಳಲ್ಲಿ ಶ್ರೀಮಂತನಾದ ಮುಕ್ತಕಋಷಿಯು ಆಗ ಬಹಳ ಕೋಪಾವಿಷ್ಟನಾಗಿ ಧನುಸ್ಸಿನಲ್ಲಿ ಪಾಶುಪತಾಸ್ತ್ರವನ್ನು ಸಂಧಾನಮಾಡಿ ಆ ಅಸ್ತ್ರಮಂತ್ರವನ್ನು ಪುನಶ್ಚರಿಸಿ ಮನಸ್ಸಿನಲ್ಲಿ ಪರಮೇಶ್ವರನನ್ನು ಧ್ಯಾನಿಸಿ ॥೪೭॥

ದೇವಾನಾಂಚಹಿತಾರ್ಥಾಯಯಾಗಸಂರಕ್ಷಣಾಯಚ।
ಮುಮುಚೇರಾಕ್ಷಸೇಂದ್ರಸ್ಯಮಸ್ತಕಂಮಕುಟೋಜ್ವಲಂ ॥೪೮॥

ತಾ॥ ದೇವತೆಗಳ ಹಿತಕ್ಕಾಗಿಯೂ, ಯಾಗ ಸಂರಕ್ಷಣಾರ್ಥವಾಗಿಯೂ ಲೋಕ ಕಲ್ಯಾಣಾರ್ಥವಾಗಿಯೂ ಸಂಕಲ್ಪಿಸಿ ಪರಮೇಶ್ವರನನ್ನು ಹೃದಯದಲ್ಲಿ ಆರಾಧಿಸಿ ಆ ದೈತ್ಯೇಂದ್ರನ ವಧಾರ್ಥವಾಗಿ ಸಂಕಲ್ಪಿಸಿ ಆ ಜಾನುಮಂಡಲನ ಮೇಲೆ ಬಾಣ ಪ್ರಯೋಗಮಾಡಲು ಆ ಪಾಶುಪತಾಸ್ತ್ರವು ಕೋಟಿಸೂರ್ಯಪ್ರಕಾಶಮಾನವಾಗಿ ಪ್ರಜ್ವಲಿಸುತ್ತಾ ಕಿರೀಟಧಾರಿಯಾದ ಆ ಜಾನುಮಂಡಲನ ಮಸ್ತಕವನ್ನು ಕತ್ತರಿಸಿ ಆ ದೈತ್ಯನ ಪ್ರಾಣಗಳನ್ನು ಅಪಹರಿಸಿ ಮತ್ತೆ ಆ ಮುಕ್ತಕನ ಬತ್ತಳಿಕೆಯನ್ನು ಸೇರಿತು ॥೪೮॥

ಪ್ರಾಣಾತಸ್ಯಸಮಾಹೃತ್ಯವಿನೇಶವಿಶದಂಪುನಃ।
ತತೋದೇವಾಸುರಂದೃಷ್ಟ್ವಾಸಿಹತಂಜಾನುಮಂಡಲಂ ॥೪೯॥

ತಾ॥ ಈ ರೀತಿಯಾಗಿ ಆ ಪಾಶುಪತಾಸ್ತ್ರವು ಜಾನುಮಂಡಲನ ಶಿರವನ್ನು ಕತ್ತರಿಸಿ ಪುನಃ ಮುಕ್ತಕಋಷಿ ಬತ್ತಳಿಕೆಯನ್ನು ಸೇರಿದ್ದನ್ನು ನೋಡಿ ಆಕಾಶದಲ್ಲಿ ಯುದ್ಧವನ್ನು ನೋಡುತ್ತಿದ್ದ ದೇವ, ಯಕ್ಷ, ಕಿನ್ನರ, ಕಿಂಪುರುಷರೇ ಮೊದಲಾದ ಸಕಲರೂ ಹರ್ಷದಿಂದ ವೀಕ್ಷಿಸಿದರು ॥೪೯॥

ವಿಹೃಷ್ಯಪುಷ್ಪವರ್ಷಾಣಿವವರ್ಷುರ್ಧರಣೀತಲೇ ।
ಮುಕ್ತಕೋಪಿಮಹಾಬಾಹುಃದೇವೈರಿಂದ್ರಪುರೋಗಮೈಃ ॥೫೦॥
ಪೂಜ್ಯಮಾನಸ್ತದಾಶೀಘ್ರಂಋಷಿಭಿಶ್ಚಸಮಾವೃತಃ ।

ತಾ॥ ಹೀಗೆ ಸಂತುಷ್ಟರಾದ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿಯನ್ನು ಭೂಮಿಯ ಮೇಲೆ ಸುರಿಸಿದರು ತರುವಾಯ ಆ ಮುಕ್ತಕಋಷಿಯಾದರೋ ಇಂದ್ರಾದಿ ದೇವತೆಗಳಿಂದ ಪೂಜಿತನಾಗಿ ತನ್ನ ತಂದೆಯಾದ ಸುಮನಸ್ಕನನ್ನು ನೋಡಲು ಆತುರ ಪಟ್ಟವನಾಗಿ ದೇವತೆಗಳಿಂದಲೂ ಮುನಿಗಳಿಂದಲೂ ಸಹಕೂಡಿ ಶೀಘ್ರವಾಗಿ ಪ್ರಯಾಣ ಮಾಡಿದವನಾದನು ॥೫೦॥

ಪೌಂಡರೀಕಯಾಗ ಸಂಪೂರ್ಣ

ಯಾಗಶಾಲಾಂಸಮಾಸಾಧ್ಯಪಿತರಂದೀಪ್ತತೇಜಸಂ ।
ಸುಶೀಲಾಂಮಾತರಂಚಾಪಿಪ್ರಣಮ್ಯಚಪುನಃಪುನಃ ॥೫೧॥

ತಾ॥ ಹೀಗೆ ದೇವಋಷಿಗಳ ಸಮೇತ ಚತುರಂಗ ಸೈನ್ಯದೊಡನೆ ವಿಜಯಿ ಯಾದ ಮುಕ್ತಕಋಷಿಯು ಹೊರಟು ಯಾಗಶಾಲೆಯನ್ನು ಸೇರಿ ಅಲ್ಲಿ ಸೂರ್ಯನಂತೆ ತೇಜಸ್ವಿಯಾಗಿ ಪ್ರಕಾಶಿಸುತ್ತಿರುವ ತಂದೆಗೂ ತಾಯಿಯಾದ ಸುಶೀಲಾದೇವಿಗೂ ನಮಸ್ಕಾರಗಳನ್ನು ಪುನಃ ಪುನಃ ಮಾಡಿದನು ॥೫೧॥

ಉವಾಚಮಧುರಂವಾಕ್ಯಂಪ್ರಾಂಜಲಿರ್ಮುಕ್ತಕೋಋಷಿಃ ।
ಸುಮನಸ್ಕಋಷಿಶ್ರೇಷ್ಠ ರಾಕ್ಷಸೇಂದ್ರಸ್ತ್ವದಾಜ್ಞಯಾ ॥೫೨॥

ತಾ॥ ಹೀಗೆ ತಂದೆತಾಯಿಗಳಿಗೆ ನಮಸ್ಕಾರಮಾಡಿದ ಆ ಮುಕ್ತಕಋಷಿಯು ಅತಿ ವಿನಯದಿಂದ ಕೂಡಿದ ಮಧುರವಾದ ವಾಕ್ಯಗಳಿಂದ ಮುನಿಶ್ರೇಷ್ಠನೂ ತಂದೆಯೂ ಆದ ಸುಮನಸ್ಕನಿಗೆ ಎಲೈ ಪಿತನೇ! ನಿನ್ನಾಜ್ಞಾನುಸಾರವಾಗಿ ಆ ರಾಕ್ಷಸೇಂದ್ರನಾದ ಜಾನುಮಂಡಲ ರಾಕ್ಷಸನನ್ನು ವಧಿಸಿ ಬಂದಿರುತ್ತೇನೆಂದು ವಿಜ್ಞಾಪಿಸಿಕೊಂಡನು ॥೫೨॥

ನಿಹತೋರ್ಭತ್ಸುಖೇನೈವಯಾಗಂತ್ವಂಕರ್ತುಮರ್ಹಸಿ ।
ಇತ್ಯೇತದ್ವಚನಂಶ್ರುತ್ವಾಸುಮನಸ್ಕೋಮಹಾಮತಿಃ ॥೫೩॥

ತಾ॥ ಇನ್ನು ನಿನ್ನ ಸಂಕಲ್ಪದಂತೆ ನಿರ್ಭೀತನಾಗಿ ಯಾಗಕಾರ್ಯವನ್ನು ಪೂರೈಸಲು ಸಂಕಲ್ಪವನ್ನು ಮಾಡೆಂದು ಪ್ರಾರ್ಥಿಸುತ್ತಿರುವ ಪುತ್ರನಾದ ಮುಕ್ತಕಋಷಿಯ ವಾಕ್ಯ ಗಳನ್ನು ಕೇಳಿದ ಮಹಾ ಬುದ್ಧಿಶಾಲಿಯಾದ ಆ ಸುಮನಸ್ಕನು ಸಂತೋಷಪಟ್ಟನು ॥೫೩॥

ಪುತ್ರಮಾಲಿಂಗ್ಯಧರ್ಮಾತ್ಮಾಪರಾಂಪ್ರೀತಿಮುಪಾಗಮತ್ ।
ತತೋಋಷಿಗಣೈಸಾರ್ಧಂಯಾಗಂಸಾಂಗಂಸಮಾರಭೇ ॥೫೪॥

ತಾ॥ ಧರ್ಮಾತ್ಮನಾದ ಸುಮನಸ್ಕನು ಅತ್ಯಂತ ಪ್ರೀತಿಯಿಂದ ಪುತ್ರನನ್ನು ಆಲಂಗಿಸಿಕೊಂಡವನಾಗಿ ಅಲ್ಲಿ ನೆರದಿದ್ದ ಋಷಿಗಳೊಡನೆ ಯಾಗವನ್ನು ವಿಧಿವತ್ತಾಗಿ ಪೂರ್ಣಗೊಳಿಸಲು ಆ ಋಷಿಗಳ ಸಮ್ಮತದಿಂದ ಯಾಗಕಾರ್ಯಗಳನ್ನು ಮಾಡಲು ಉದ್ಯುಕ್ತನಾದನು ।।೫೪।।

ಸರ್ವೇಮುನಿಗಣಾಸ್ತುಷ್ಟಾಸ್ತಪೋನಿಷ್ಠಾ ಜಿತೇಂದ್ರಿಯಾಃ ।
ಸಂತೋಷಭಾಸುರಾಸ್ಸರ್ವೇಯಾಗಶಾಲಾನ್ತರೇಸ್ಥಿತಾಃ ॥೫೫॥

ತಾ॥ ಜಿತೇಂದ್ರಿಯರೂ ತಪೋನಿಷ್ಟರೂ ಆದ ಆ ಎಲ್ಲಾ ಮುನಿಋಷಿಗಳು ಸಂತುಷ್ಟಹೃದಯರಾಗಿ ಯಾಗಕಾರ್ಯಕ್ಕಾಗಿ ಸಂತೋಷದಿಂದ ಆ ಯಾಗಶಾಲೆಯಲ್ಲಿ ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾದರು ।।೫೫।।

ಪ್ರಥಮಂಚಾಗ್ನಯೇಸ್ವಾಹಾತ್ಯೇತನ್ಮಂತ್ರಂಸಮುಚ್ಚರ್ರ ।
ಹುನೋತ್ಯಾಜ್ಯಂಹವಿಶ್ಚಾಗ್ನೌಶ್ರದ್ಧಾಭಕ್ತಿಸಮನ್ವಿತಾಃ ॥೫೬॥

ತಾ॥ ಆ ಋಷಿಗಳೆಲ್ಲರೂ ಸುಮನಸ್ಕನನ್ನು ಮುಂದುಮಾಡಿಕೊಂಡು ಅಗ್ನಿಯೇ ಸ್ವಾಹಾ ಎಂಬ ಮಂತ್ರದಿಂದ ಮೊದಲು ಆಜ್ಯವನ್ನೂ ಹವಿಸ್ಸನ್ನೂ ಶ್ರದ್ಧಾಭಕ್ತಿಗಳಿಂದ ಸಮನ್ವಿತರಾಗಿ ಹೋಮಮಾಡಿದವರಾದರು ।।೫೬।।

ತತ್ಸಂಯುತಾಗ್ನಿಜ್ವಾಲಾಯಾಂಜುಹೌಸಂತೋಷಭಾಸುರಃ ।
ಆಜ್ಯಾದೀಹವಿಶ್ಚಾಗ್ನೌಫಲಾಪೂಪಸುವಸ್ತೋರಗ್ನಿಃ ।।೫೭।।

ತಾ॥ ಈ ರೀತಿಯಾಗಿ ಹೋಮಮಾಡುತ್ತಿರುವ ಅಗ್ನಿಜ್ವಾಲೆಯಲ್ಲಿ ಸಂತೋಷ ಭರಿತರಾದ ಮುನಿಗಳು ತುಪ್ಪ, ಹವಿಸ್ಸು, ಹಣ್ಣು, ಮಂಗಳ ದ್ರವ್ಯಗಳು ಆ ಪೂತವೇ ಮೊದಲಾದ ದ್ರವ್ಯಗಳಿಂದ ಶಾಸ್ತ್ರೋಕ್ತ ಪ್ರಕಾರವಾಗಿ ಹೋಮಮಾಡಿ ಪೂರ್ಣಾ ಹುತಿಯನ್ನು ಕೊಟ್ಟರು ।।೫೭।।

ತೇಸರ್ವೇಮುನಿಶಾರ್ದೂಲಂಸ್ತತ್ಪೂರ್ಣಾಹುತಿಮುತ್ತಮಂ ।
ಹುತ್ವಾಯಾಗಂಶುಭಕರಂಸಮಾಪ್ಯಮುನಿಪುಂಗವಾಃ ।।೫೮।।

ತಾ॥ ಯಾಗವನ್ನು ಮಾಡಿಸುವ ಶಾಸ್ತ್ರವಿಧಿಯಲ್ಲಿ ನಿಪುಣರಾದ ಆ ಮುನಿ ಗಳೆಲ್ಲರೂ ಯಜ್ಞೇಶ್ವರನಿಗೆ ಪೂರ್ಣಾಹುತಿಯನ್ನು ಕೊಟ್ಟು ಯಾವ ವಿಘ್ನವೂ ಇಲ್ಲದೆ ಮಂಗಳಕರವಾಗಿ ಯಾಗವನ್ನು ಸಮಾಪ್ತಿಗೊಳಿಸಿ ಯಾಗನಿರ್ವಿಘ್ನವಾಗಿ ಆದುದಕ್ಕೆ ಆ ಮುನಿಗಳೆಲ್ಲರೂ ಸಂತುಷ್ಟರಾದರು ।।೫೮।।

ಪ್ರದಕ್ಷಿಣನಮಸ್ಕಾರಾನ್ಅಗ್ನೇಸದ್ಭಕ್ತಿಸಂಯುತಾಃ ।
ಕೃತ್ವಾಮುನಿಗಣಾಸ್ಸರ್ವೇಭಾರ್ಯಾಯುಕ್ತಾಸಮಂತತಃ ॥೫೯॥

ತಾ॥ ಪೂರ್ಣಾಹುತಿಯಿಂದ ಸಂತುಷ್ಟರಾದ ಆ ಸುಮನಸ್ಕಾದಿ ಮಹಾಋಷಿಗಳೆಲ್ಲರೂ ಅತ್ಯಂತ ಭಕ್ತಿಪೂರ್ವಕವಾಗಿ ಅವರವರ ಪತ್ನೀಸಮೇತರಾಗಿ ಆ ಯಜ್ಞೇಶ್ವರನನ್ನು ಪ್ರದಕ್ಷಿಣೆಮಾಡಿ ನಮಸ್ಕಾರಗಳನ್ನು ಆಚರಿಸಿದರು ॥೫೯॥

ಪ್ರಣೇಮುರ್ಗಾಧಿತನಯಂಸುಮನಸ್ಕೋಮಹಾಮುನಿಃ ।
ಕೃತ್ವಾಚಾವಭೃಥಸ್ನಾನಂಶುದ್ಧವಸ್ತ್ರಾಣಿಧಾರ್ಯಚ ॥೬೦॥

ತಾ॥ ಪ್ರದಕ್ಷಿಣ ನಮಸ್ಕಾರಗಳಾದ ಅನಂತರ ಮಹಾಶ್ರೇಷ್ಠನಾದ ಸುಮನಸ್ಕ ಮುನಿಯು ಗಾಧೀಪುತ್ರನಾದ ವಿಶ್ವಾಮಿತ್ರಋಷಿಗೆ ಪ್ರಣಾಮವನ್ನು ಮಾಡಿ ಯಾಗ ಪೂರ್ತಿಯಾದುದಕ್ಕೆ ಕೃತಾರ್ಥನಾಗಿ ಆ ಯಾಗಾನಂತರ ಪತ್ನೀಸಮೇತನಾಗಿ ಆ ಸುಮನಸ್ಕನು ಅವಭೃತ ಸ್ನಾನಮಾಡಿ, ಮಂಗಳಕರವಾದ ಶುಭ್ರವಸ್ತ್ರಗಳನ್ನು ಧರಿಸಿದವನಾಗಿ ॥೬೦॥

ಚಂದನಂಶುಭದಂದಿವ್ಯಂಧೃತ್ವಾರಕ್ತಾಕ್ಷತಾನ್ಶುಭಾನ್ ।
ವಸಿಷ್ಠಾದಿಋಷೀಣಾಂಚಪೂಜಾಂಕೃತ್ವಾಯಥಾವಿಧಿ ॥೬೧॥

ತಾ॥ ಶುಭವಾದ ಚಂದನಾದಿ ಗಂಧಗಳನ್ನು ಲೇಪಿಸಿಕೊಂಡು ಕೆಂಪು ಅಕ್ಷತೆಯನ್ನು ಭ್ರೂನಿಟಲ ಭಾಗದಲ್ಲಿ ಧರಿಸಿ, ವಾಸಿಷ್ಠಾದಿ ಮಹಾಋಷಿಗಳೆಲ್ಲರಿಗೂ ಯಥಾವಿಧಿಯಾಗಿ ಅರ್ಘ್ಯಪಾಧ್ಯಾಚಮನಗಳಿಂದ ಪೂಜಿಸಿ ಭೂರಿಭೋಜನಾದಿ ತಾಂಬೂಲ ದಕ್ಷಿಣೆಗಳಿಂದ ತೃಪ್ತಿಪಡಿಸಿ, ಪತ್ನೀಪುತ್ರ ಸಮೇತನಾಗಿ ನಮಸ್ಕರಿಸಿ ಅವರುಗಳಿಂದ ಆಶೀರ್ವಾದವನ್ನು ಪಡೆದನು ॥೬೧॥

ಸುಮನಸ್ಕೋಮಹಾಪ್ರಾಜ್ಞೋಭಾರ್ಯಯಾಸಹಿತೋನಘಃ ।
ತೇಸರ್ವೇಮುನಯಃತತ್ರವಸಿಷ್ಠಾದಿದ್ವಿಜೋತ್ತಮಾಃ ॥೬೨॥

ತಾ॥ ಮಹಾ ಬುದ್ಧಿಶಾಲಿಯಾದ ಸುಮನಸ್ಕನು ತನ್ನ ಭಾರ್ಯೆಯಿಂದೊಡಗೊಂಡು ಪೂಜಿಸಲ್ಪಟ್ಟ ಆ ವಸಿಷ್ಠಾದಿ ಮುನೀಶ್ವರರೆಲ್ಲರೂ ॥೬೨॥

ಸಪತ್ನೀಕಾಶ್ಚಗಂಧರ್ವಾಸಿದ್ಧವಿಧ್ಯಾಧರಾದಯಃ
ಹೋಮಾಗ್ನಿಪ್ರಭೂಶ್ಚಾನ್ಯೇರಥವಾಹಭಟೈಸ್ಸಹ । ॥೬೩॥
ಮುಕ್ತಕಂಚಪುರಸ್ಕೃತ್ಯಪ್ರಯಯುರ್ನಗರೀಂಶುಭಾಂ

ತಾ॥ ತಮ್ಮ ತಮ್ಮ ಪತ್ನೀಸಮೇತರಾಗಿ ಯಾಗಕ್ಕಾಗಿ ಬಂದಿದ್ದ ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ ಮತ್ತು ಹೋಮಕುಂಡದಿಂದ ಹುಟ್ಟಿದ ರಥಗಜ, ತುರಗ

ಭಟರೇ ಮೊದಲಾದವರಿಂದ ಕೂಡಿ ಮುಕ್ತಕುಮಿಯನ್ನು ಮುಂದುಮಾಡಿಕೊಂಡು ಆ ಸುಮನಸ್ಕರಾಯನು ಪಟ್ಟಣವನ್ನು ಸೇರಿದನು ।।೬೩।।

ಇತಿಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಜಾನುಮಂಡಲ ವಧೋನಾಮ ಏಕಾದಶೋಽಧ್ಯಾಯಃ ।

ತಾ॥ ಇಲ್ಲಿಗೆ ಬ್ರಹ್ಮಾಂಡ ಪುರಾಣದ ವರ್ಣವೈಭವ ಖಂಡದ ಬ್ರಹ್ಮನಾರದ ಸಂವಾದದಲ್ಲಿ ಜಾನುಮಂಡಲನ ವಧೆಯೆಂಬ ಹನ್ನೊಂದನೆಯ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹನ್ನೆರಡನೆಯ ಅಧ್ಯಾಯ :-

ಮುಕ್ತಕಋುಷಿಯ ವಧೂ ಆಗಮನ

ನಾರದ ಉವಾಚ :-

ತತಃಪರಂಕಿಂಕೃತವಾನ್ಸುಮನಸ್ಕೋಮಹಾಮುನಿಃ ।
ಮುಕ್ತಕಶ್ಚಾಪಿರಾಜರ್ಷಿಸ್ತತ್ಪರಂವಕ್ತುಮರ್ಹಸಿ ॥೧॥

ತಾ॥ ಆ ತರುವಾಯ ಮಹಾ ಮುನಿಶ್ರೇಷ್ಟನಾದ ಸುಮನಸ್ಕನೂ ರಾಜರ್ಷಿಯಾದ ಮುಕ್ತಕಋುಷಿಯೂ ಏನು ಮಾಡಿದರು ? ಮುಂದಿನ ವೃತ್ತಾಂತವನ್ನು ತಿಳಿಸಬೇಕೆಂದು ಬ್ರಹ್ಮನನ್ನು ನಾರದಋುಷಿಯು ಕೇಳಿದನು ।।೧।।

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮಶೇಷತಃ ।
ತತೋವೈಚಿಂತಯಾಮಾಸಸುಮನಸ್ಕೋಮಹಾಋುಷಿಃ ॥೨॥

ತಾ॥ ಎಲೈ ನಾರದನೇ ! ಎಲ್ಲಾ ವಿಶೇಷ ವೃತ್ತಾಂತವನ್ನೂ ಹೇಳುತ್ತೇನೆ ಕೇಳು, ಆ ತರುವಾಯ ಮಹರ್ಷಿಯಾದ ಆ ಸುಮನಸ್ಕನು ಯೋಚಿಸಿದ್ದೇನೆಂದರೆ ॥೨॥

ಮುಕ್ತಕಸ್ಯವಿವಾಹಾರ್ಥಂಸ್ಮೃತ್ವಾಪಶುಪತೇರ್ವಚಃ ।
ಸುದಕ್ಷಿಣೇತಿಕನ್ಯಾಂಚಮುಕ್ತಕಾನ್ತೇತಿವಿಶ್ರುತಾ ॥೩॥

ತಾ॥ ಆ ಸುಮನಸ್ಕರಾಯನು ಹಿಂದೆ ಪಶುಪತಿಯಾದ ಪರಮೇಶ್ವರನು ಹೇಳಿದ್ದ ವಚನವನ್ನು ಜ್ಞಾಪಿಸಿಕೊಂಡು ಮುಕ್ತಕಋುಷಿಯ ವಿವಾಹಾರ್ಥವಾಗಿ ಮುಕ್ತಕಾಂತೆಯೆಂದು ಖ್ಯಾತಳಾದ ಸುದಕ್ಷಿಣೆ ಎಂಬ ಕನ್ಯಾರತ್ನವನ್ನು ।।೩।।

ಅನ್ವೇಷ್ಟುಂಪುತ್ರಸಹಿತೋಹಿಮವತ್ಪ್ರಾನ್ತಮಾಗತಃ ।
ಬೃಹದಾರಣ್ಯಕಂನಾಮವನಂತತ್ರಮನೋಹರಂ ॥೪॥

ತಾ॥ ಹುಡುಕಿ ಕರೆತರುವುದಕ್ಕಾಗಿ ಆ ಸುಮನಸ್ಕನು ಪುತ್ರನಾದ ಮುಕ್ತಕಋುಷಿಯಿಂದೊಡಗೂಡಿ ಹಿಮವತ್‌ಪರ್ವತದ ತಪ್ಪಲಿನಲ್ಲಿರುವ ಬೃಹದಾರಣ್ಯಕವೆಂಬ ಅತಿ ಮನೋಹರವಾದ ವನಕ್ಕೆ ಹೊರಟನು ।।೪।।

ಪ್ರಾಪ್ತವಾನ್ತದ್ವನಂಶೀಘ್ರಂಸಹಪುತ್ರೇಣಧೀಮತಾ ।
ತನ್ಮಧ್ಯೇಚಾಶ್ರಮಂದಿವ್ಯಂಲತಾಮಂಡಲಶೋಭಿತಂ ॥೫॥

ತಾ॥ ಪುತ್ರಸಮೇತನಾದ ಆ ಸುಮನಸ್ಕನು ಬೃಹದಾರಣ್ಯದ ವನದ ಮಧ್ಯದಲ್ಲಿ ಲತೆಗಳಿಂದ ಪರಿಶೋಭಿತವಾಗಿರುವ ಆಶ್ರಮವನ್ನು ಕಂಡು ಶೀಘ್ರವಾಗಿ ಧೀಮಂತರಾದ ಆ ಸುಮನಸ್ಕ ಮುಕ್ತರಾಜರು ಅಲ್ಲಿಗೆ ಬಂದು ಸೇರಿದರು ॥೫॥

ನಾನಾಪುಷ್ಪಸಮಾಕೀರ್ಣಂನಾನಾಪಕ್ಷಿರವಾಕುಲಂ ।
ವಿಭಾನ್ತಂಫಲಸಂಕೀರ್ಣೈಃಋಕ್ಷಜಾಲೈರ್ಮಹೋನ್ನತೈಃ ॥೬॥

ತಾ॥ ಆ ವನವು ನಾನಾ ವಿಧ ಪುಷ್ಪಗಿಡಗಳಿಂದಲೂ ನಾನಾ ವಿಧವಾದ ಬಳ್ಳಿಗಳಿಂದಲೂ ನಾನಾ ವಿಧವಾದ ಪಕ್ಷಿಸಮೂಹಗಳಿಂದಲೂ ಅತ್ಯಂತ ಎತ್ತರವಾದ ಅನೇಕ ಫಲಭರಿತವಾದ ವೃಕ್ಷಗಳಿಂದ ಬಹು ರಮ್ಯವಾಗಿ ಶೋಭಿಸುತ್ತಿದ್ದಿತು ॥೬॥

ಸಂಪೂರ್ಣಪದ್ಮಕಲ್ಹಾರಂಕಮಲಾಕರಶೋಭಿತಂ ।
ವಿಯಚ್ಛರಾನೀಕರನ್ಯೈರ್ವ್ಯಾಪ್ತಂದಿವ್ಯತ್ಕರಂತದಾ ॥೭॥

ತಾ॥ ಆ ವನವು ಕಮಲಕಲ್ಹಾರಾದಿ ಪುಷ್ಪಗಳಿಂದ ತುಂಬಿದ ಸರೋವರಗಳಿಂದ ಶೋಭಿಸುತ್ತಿರುವ ಆ ಸರೋವರಗಳಲ್ಲಿ ಆಕಾಶಗಾಮುನಿಗಳಾದ ದೇವಗಂಧರ್ವರಿಂದ ಕ್ರೀಡಾವನವಾಗಿ ಬಹು ರಮ್ಯವಾಗಿ ದೇವಘೋಷಗಳೊಡನೆ ತುಂಬಿರುವ ಆ ವನ ಮಧ್ಯದಲ್ಲಿ ॥೭॥

ಪ್ರವಿಶ್ಯಋಷಿಭಿಸ್ಸಾರ್ಧಂಮುನೇದೂರ್ವಾಸಸಸ್ತದಾ ।
ಆಶ್ರಮೇಸಂಸ್ಥಿತಾಂಕನ್ಯಾಂಆಖ್ಯಾಯಾಚಸುದಕ್ಷಿಣಾಂ ॥೮॥

ತಾ॥ ದೂರ್ವಾಸಮುನಿಗಳ ಆಶ್ರಮವನ್ನು ಕಂಡು ಆ ಸುಮನಸ್ಕನು ಮತ್ತು ಮುಕ್ತಕಋಷಿಯು ಇಬ್ಬರೂ ಆ ಮುನಿಯ ಆಶ್ರಮದಲ್ಲಿ ಪ್ರವೇಶಿಸಲು ಅಲ್ಲಿ ಕಂಗೊಳಿಸುತ್ತಿರುವ ಸುದಕ್ಷಿಣೆ ಎಂಬ ನಾಮಧ್ಯೇಯದ ಕನ್ಯಾಮಣಿಯನ್ನು ಕಂಡರು ॥೮॥

ಬಿಂಬಾಧರೀಂವಿಶಾಲಾಕ್ಷೀಂಜಟಾವಲ್ಕಲಧಾರಿಣೀಂ ।
ದೃಷ್ಟ್ವಾಸೌಮುನಿಶಾರ್ದೂಲೋಮುಕ್ತಕೇನಸಮಂತತಃ ॥೯॥

ತಾ॥ ವಿಶಾಲವಾದ ನೇತ್ರಗಳುಳ್ಳವಳೂ ತೊಂಡೆಹಣ್ಣಿನಂಥಾ ತುಟಿಗಳುಳ್ಳವಳೂ ಜಟಾವಲ್ಕಧಾರಿಣಿಯೂ ಆದ ಆ ಕನ್ಯಾಮಣಿಯನ್ನು ಮುನಿಪುಂಗವರಾದ ಆ ಇಬ್ಬರೂ ಸುಮನಸ್ಕಮುಕ್ತಕರು ನೋಡಿದರು ॥೯॥

ಋಷಿಸಂಘೈರನುಜ್ಞಾತಃತಾಮಾದಾಯಪುರೀಂಯಯೌ ।
ತತೋಋಷಿಗಣೈಸ್ಸಾರ್ಧಂಸಮ್ಮನ್ತ್ರ್ಯಮುನಿಸತ್ತಮಃ ॥೧೦॥

ತಾ॥ ಆ ವನದಲ್ಲಿರುವ ಋಷಿ ಸಮೂಹದೊಡನೆ ಆ ಸುಮನಸ್ಕನು ತನ್ನ ಮಗನ ವೃತ್ತಾಂತವನ್ನು ತಿಳಿಸಿ ಆ ಋಷಿಗಳ ಸಮ್ಮತಿಯನ್ನು ಪಡೆದು ಆ ಕನ್ಯಾಮಣಿಯಾದ ಸುದಕ್ಷಿಣೆಯನ್ನು ಕರೆದುಕೊಂಡು ತನ್ನ ಪಟ್ಟಣವನ್ನು ಸೇರಿದನು ॥೧೦॥

ವಿಶ್ವಕರ್ಮಾಣಮಾಹೂಯತಪಸ್ವೀತಮುವಾಚಹ ।
ವಿಶ್ವಕರ್ಮ್ಮನ್ಮಹಾಬುದ್ಧೇಮಮಪುತ್ರಸ್ಯಧೀಮತಃ ॥೧೧॥
ವಿವಾಹಾರ್ಥಂಪುರೀಂಸಮ್ಯಕ್ ಅಲಂಕುರುಮಹಾಮತೇ ।
ಇತ್ಯೇತದ್ವಚನಂಶ್ರುತ್ವಾವಿಶ್ವಕರ್ಮಾಮಹಾಮತಿಃ । ॥೧೨॥

ತಾ॥ ಆ ಸುಮನಸ್ಕ ಮಹಾರಾಯನು ವಿಶ್ವಕರ್ಮನನ್ನು ಕರೆಯಿಸಿಕೊಂಡು ಆತನೊಡನೆ ಇಂತೆಂದನು. ಮಹಾಬುದ್ಧಿಶಾಲಿಯಾದ ವಿಶ್ವಕರ್ಮನೇ ಧೀಮಂತನಾದ ನನ್ನ ಪುತ್ರನ ವಿವಾಹಾರ್ಥಕ್ಕಾಗಿ ನನ್ನ ಪಟ್ಟಣವನ್ನು ಚನ್ನಾಗಿ ಅಲಂಕರಿಸುವವನಾಗೆಂದು ಹೇಳಿದ ಸುಮನಸ್ಕನ ಮಾತನ್ನು ಕೇಳಿದ ಮಹಾಬುದ್ಧಿಶಾಲಿಯಾದ ಆ ವಿಶ್ವಕರ್ಮನು ಸಮ್ಮತಿಸಿದನು ॥೧೧॥೧೨॥

ತಥಾಸ್ತ್ವಿತಿಪ್ರತಿಜ್ಞಾಯಕೃತವಾನ್ರುಚಿರಾಂಪುರೀಂ ।
ನಾನಾವಿಚಿತ್ರಸಂಯುಕ್ತಾಂಸ್ವರ್ಣಪ್ರಾಕಾರಶೋಭಿತಾಂ ॥೧೩॥
ಸೌಧೈರಲಂಕೃತಂದಿವ್ಯಂಮಂದರಾದ್ರಿಸಮುನ್ನತೈಃ ।
ಮಾಣಿಕ್ಯತೋರಣೈರ್ಯುಕ್ತಾಂಕದಳೀಕಾಂಡಭಾಸುರಾಂ ॥೧೪॥

ತಾ॥ ಆ ಸುಮನಸ್ಕ ಮಹಾರಾಯನಿಂದ ಆಜ್ಞೆ ಪಡೆದ ಮಹಾಬುದ್ಧಿವಂತನಾದ ಆ ವಿಶ್ವಕರ್ಮನು ಆತನ ಪಟ್ಟಣವನ್ನು ಅಲಂಕರಿಸಲು ಸಂಕಲ್ಪಿಸಿ ಆ ಪಟ್ಟಣವನ್ನು ನಾನಾ ಚಿತ್ರವಿಚಿತ್ರವಾದ ಚಿನ್ನದ ಕೋಟೆಗಳಿಂದ ಸಿಂಗರಿಸಿ ಅಲ್ಲಿನ ಸೌಧಗಳನ್ನು ಮಂದರಾದ್ರಿಯಂತೆ ಅಲಂಕಾರಮಾಡಿ ಮಾಣಿಕ್ಯಗಳಿಂದ ತೋರಣಗಳನ್ನೂ ಕದಳೀಸ್ಥಂಬಗಳಿಂದಲೂ ಶೋಭಾಯಮಾನವಾಗಿರುವಂತೆ ಅಲಂಕಾರಮಾಡಿದನು ॥೧೩॥೧೪॥

ಕಲ್ಯಾಣಮಂಟಪ ರಚನೆ

ವಿಚಿತ್ರವಿವಿಧಾಕಾರೈರ್ನಿತಾನ್ಯೈರುಪಶೋಭಿತಾಂ ।
ಪತಾಕಧ್ವಜಸಂಕೀರ್ಣಂಶೋಭಿತಾಂದಿವ್ಯಮಂಟಪೈಃ ॥೧೫॥
ನಾನಾಸಾಂಬಾರಸಂಯುಕ್ತಾಂಭಕ್ಷ್ಯಭೋಜ್ಯೈ‌ಂಶೇಷತಃ ।
ಸಂಪೂರ್ಣಾಂಗಂಧಪುಷ್ಪಾದ್ಯೈರ್ದಿವ್ಯವಾದ್ಯರವಾಕುಲಾಂ ॥೧೬॥

ತಾ॥ ಚಿತ್ರವಿಚಿತ್ರವಾದ ಧ್ವಜಪತಾಕೆಗಳಿಂದಲೂ ದಿವ್ಯಮಂಟಪಗಳಿಂದಲೂ ನಾನಾ ಸಾಂಬಾರಗಳಿಂದ ತುಂಬಿರುವ ಮಂದಿರಗಳನ್ನೂ ಭಕ್ಷ್ಯ ಭೊಜ್ಯಾದಿಗಳನ್ನು ಸಂಪೂರ್ಣಮಾಡುವ ಗೃಹಗಳನೂ ಮತ್ತು ಸುಗಂಧದ್ರವ್ಯಗಳಾದ ಗಂಧಪುಷ್ಪ

ಗಳಿಂದಲೂ ಯಥೇಶ್ಚವಾಗಿರುವಂತಹ ಮಂದಿರಗಳನ್ನೂ ದೇವಗಾನಕ್ಕೆ ಸಮಾನವಾದ ಪಂಚವಾದ್ಯಗಳನ್ನೂ ತಯಾರಿಸಿ ಸ ಕ ಲ ಸ ನ್ನಾ ಹ ಸಿದ್ಧವಾಗಿರುವಂತೆ ಮಾಡಿದನು ॥೧೫॥೧೬॥

ಏವಂವಿಧಾಂಪುರೀಂಕೃತ್ವಾವಿಶ್ವಕರ್ಮಾಮಹಾಮತಿಃ ।
ಸಮಾಗತ್ಯಾಥಮುನಯೇಽಸ್ರಾಹೇತ್ಯಾಜ್ಞಾಪಯತ್ತದಾ ॥೧೭॥
ತತೋಽನ್ಯೈಮುನಿಶಾರ್ದೂಲೋದೃಷ್ಟ್ವಾಲಂಕಾರಶೋಭಿತಾ ।
ಪುರೀಂಪ್ರವಿಶ್ಯಸಹಸಾಸಸುತೋಮುನಿಭಿಸ್ಸಹ ॥೧೮॥

ತಾ॥ ಈ ರೀತಿಯಾಗಿ ಸಕಲಸನ್ನಾಹ ಪೂರ್ವಕವಾಗಿ ಆ ಪಟ್ಟಣವನ್ನು ಸಿಂಗರಿಸಿ ಮಹಾ ಬುದ್ಧಿವಂತನಾದ ಆ ವಿಶ್ವಕರ್ಮನು ಸುಮನಸ್ಕಮಹಾರಾಯನಿಗೆ ವಿಜ್ಞಾಪನಾ ಪೂರ್ವಕವಾಗಿ ಹೇಳಿದವನಾದನು. ಮಹಾರಾಜನೇ ! ತಮ್ಮ ಆಜ್ಞಾಪ್ರಕಾರ ಪಟ್ಟಣವನ್ನು ಅಲಂಕರಿಸಲಾಗಿದೆ ಪರಾಂಭರಿಸಬೇಕೆಂದು ಕೋರಲು ರಾಜಶಾರ್ದೂಲನಾದ ಆ ಸುಮನಸ್ಕನು ಸರ್ವಾಲಂಕಾರವಾಗಿ ಶೋಭಿಸುತ್ತಿರುವ ತನ್ನ ಪಟ್ಟಣವನ್ನು ನೋಡಿ ಮುನಿಗಳ ಸಮೇತ ಪಟ್ಟಣ ಪ್ರದರ್ಶನವನ್ನು ನೋಡಿದನು ॥೧೭॥೧೮॥

ಸಿಂಹಾಸನೇಸುಖಾಸೀನಃಕುತ್ರಚಿದ್ರತ್ನಮಂಟಪೇ ।
ಋಷಿಸಂಘೈಃಪರಿವೃತೋವಿವಾಹಾರ್ಥಂಸುತಸ್ಸನೈ ॥೧೯॥

ತಾ॥ ಆ ಸುಮನಸ್ಕ ಮಹಾರಾಜನು ಪುತ್ರಸಹಿತನಾಗಿ ವಿಶ್ವಕರ್ಮನಿಂದ ನಿರ್ಮಿತವಾದ ಒಂದಾನೊಂದು ರತ್ನನಿರ್ಮಿತ ಮಂಟಪದಲ್ಲಿರುವ ಸಿಂಹಾಸನಾರೂಢನಾಗಿ ಋಷಿಗಳ ಸಮೂಹದಿಂದ ಪರಿವೃತನಾಗಿ ತನ್ನ ಮಗನ ವಿವಾಹ ಲಗ್ನಕ್ಕಾಗಿ ॥೧೯॥

ವಿಷ್ಣುಂಪುರಾಣಮೀಶಾನಂಬ್ರಹ್ಮಾಣಂಚಪ್ರಜಾಪತೀನ್ ।
ಇಂದ್ರಾದಿಲೋಕಪಾಲಾಂಶ್ಚಋಷೀನಗ್ನಿಸಮಪ್ರಭಾನ್ ॥೨೦॥

ತಾ॥ ಪುರಾಣಪುಣ್ಯಪುರುಷನಾದ ಮಹಾವಿಷ್ಣುವನ್ನೂ ಸೃಷ್ಟಿಕರ್ತನಾಗಿಯೂ ಪಿತಾಮಹನಾಗಿಯೂ ತನ್ನ ಪಿತನಾಗಿಯೂ ಇರುವ ಬ್ರಹ್ಮದೇವನನ್ನೂ ಇಂದ್ರಾದಿ ಅಷ್ಟದಿಕ್ಪಾಲಕರಾದ ಇಂದ್ರ, ಯಮ, ವರುಣ, ಅಗ್ನಿ, ವಾಯು, ಕುಬೇರ, ಈಶಾನ, ನಿರಋತಿಯೇ ಮೊದಲಾದವರನ್ನೂ ಅಗ್ನಿಗೆ ಸಮಾನರಾದ ಋಷಿಗಳನ್ನೂ ಬರಮಾಡಿಕೊಂಡನು ॥೨೦॥

ಗಂಧರ್ವಾನ್ಯಕ್ಷಾಂಚಕಿನ್ನರಾಂಶ್ಚಾರಣಾಂಸ್ತದಾ ।
ಏವಮನ್ಯಾನ್ಮಹೀಪಾಲಾನ್ಲೋಕಪಾಲಸಮಪ್ರಭಾನ್ ॥೨೧॥
ಸ್ಮೃತವಾನ್ಮನಸಾತತ್ರತೇಸರ್ವೇಚಸಮಾಯಯುಃ ।
ಪ್ರತ್ಯುದ್ಗಮ್ಯಮಹಾಭಾಗಾನ್ಬ್ರಹ್ಮವಿಷ್ಣುಮಹೇಶ್ವರಾನ್ ॥೨೨॥

ತಾ॥ ಗಂಧರ್ವರನ್ನೂ, ಯಕ್ಷರನ್ನೂ, ಕಿಂಪುರುಷರನ್ನೂ, ಕಿನ್ನರರನ್ನೂ, ಲೋಕಪಾಲಕರನ್ನೂ. ರಾಜಾಧಿರಾಜರಾದ ಮಹೀಪಾಲರನ್ನೂ, ತ್ರಿಮೂರ್ತಿಗಳಾದ ಬ್ರಹ್ಮ

ವಿಷ್ಣು ಮಹೇಶ್ವರರನ್ನೂ ಆ ಸುಮನಸ್ಕನು ಮನಸ್ಸಿನಲ್ಲಿ ಸ್ಮರಿಸಲು ಎಲ್ಲರೂ ಮುಕ್ತಕ ಋಷಿಯ ವಿವಾಹಕ್ಕಾಗಿ ಎಲ್ಲರೂ ಬಂದವರಾದರು ಹೀಗೆ ಬಂದ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಆ ಸುಮನಸ್ಕನು ಎದುರ್ಗೊಂಡು ಅವರನ್ನು ಭಕ್ತಿಯಿಂದ ಪೂಜಿಸಿದನು ॥೨೧॥೨೨॥

ಯಥಾವತ್ಪೂಜಯಾಮಾಸಸುಮನಸ್ಕೋಮಹಾಮುನಿಃ ।
ತಾನ್ವಿಷ್ಣುಪ್ರಮುಖಾನ್ದೇವಾನ್ಮಹಾಹರ್ಷೋನ್ಸ್ವವೇಶ್ಮಸು ॥೨೩॥
ನಿವೇಶಯಾಮಾಸಮುನೀನ್ಯಥಾಯೋಗ್ಯಂತತಸ್ತತಃ ।
ಅಥಾತಿಥ್ಯಾಯತೇಷಾಂವೈಸುರಧೇನುಮಭೀಷ್ಟದಾಂ ॥೨೪॥
ಮನಸಾಸ್ಮೃತವಾನ್ಸ್ತತ್ರಸಾಜಗಾಮಋಷೀಶ್ವರಂ ।

ತಾ॥ ಮಹಾ ಸೂಕ್ಷ್ಮಮತಿಯಾದ ಆ ಸುಮನಸ್ಕ ಮಹಾರಾಜನು ತನ್ನ ಪುತ್ರನ ವಿವಾಹಕ್ಕಾಗಿ ಬಂದಂಥಾ ವಿಷ್ಣುವೇ ಮೊದಲಾದ ಪ್ರಮುಖ ದೇವತೆಗಳನ್ನು ಯಥಾ ಯೋಗ್ಯವಾದ ಬೇರೆ ಬೇರೆ ಬಿಡದಿ ಮಂದಿರಗಳಲ್ಲಿ ಅವರ ವಾಸಕ್ಕಾಗಿ ಇಳಿಸಿದನು. ಹಾಗೆಯೇ ಋಷಿಗಳೂ, ಯಕ್ಷ, ಕಿನ್ನರ, ಕಿಂಪುರುಷ, ಗಂಧರ್ವರೇ ಮೊದಲಾದವರಿಗೂ ಮತ್ತು ರಾಜಾದಿರಾಜರುಗಳಿಗೂ ಅವರವರ ಇಷ್ಟಾನುಸಾರವಾದ ಮಂದಿರಗಳಲ್ಲಿ ಬಿಡದಿ ಮಾಡಿಸಿದವನಾಗಿ ಬಂದಿರುವ ದೇವತೆಗಳೇ ಮೊದಲಾದ ಸಕಲರಿಗೂ ಆತಿಥ್ಯವನ್ನು ನೆರವೇರಿಸುವುದಕ್ಕಾಗಿ ಕೋರಿದ ಇಷ್ಟಾರ್ಥಗಳನ್ನು ಕೊಡುವಂಥಾ ದೇವಲೋಕದ ಕಾಮಧೇನುವನ್ನು ಮನಸ್ಸಿನಲ್ಲಿ ಸ್ಮರಿಸಲು ಅದು ಆ ಸುಮನಸ್ಕನಲ್ಲಿಗೆ ಬಂದು ಸೇರಿತು ॥೨೩॥೨೪॥

ಕಾಮಧೇನುಸ್ಸಮಾಗತ್ಯವಾಚಂಮೂಚೇಮುನೀಶ್ವರಂ ॥೨೫॥
ಕಿಮರ್ಥಂಮುನಿಶಾರ್ದೂಲಮಾಮದ್ಯಸ್ಮೃತವಾನಿಹ ।
ತಸ್ಯಾಸ್ತದ್ವಚನಂಶೃತ್ವಾಮುನಿರೇವಮುವಾಚಹಂ ॥೨೬॥

ತಾ॥ ಆ ಸುಮನಸ್ಕನು ಸ್ಮರಿಸಿದಾಕ್ಷಣ ಬಂದಂಥಾ ಆ ಕಾಮಧೇನುವು ಮುನಿ ಶಾರ್ದೂಲನಾದ ಆ ಸುಮನಸ್ಕನೊಡನೆ ನನ್ನನ್ನು ಸ್ಮರಿಸಿದ ಕಾರಣವೇನೆಂದು ಕೇಳಲು. ಆದಕ್ಕೆ ಸುಮನಸ್ಕನು ಕಾಮಧೇನುವಿಗೆ ಈ ರೀತಿ ಹೇಳತೊಡಗಿದನು ॥೨೫॥೨೬॥

ಹೇಮಾತಸ್ಸರ್ವಸಾಂಭಾರಾನ್ವಿವಾಹಾರ್ಥಂಸುತಸ್ಯಮೇ ।
ದೋಗ್ಧುಮರ್ಹಸಿಶೀಘ್ರಂವೈಲೋಕಾಭೀಷ್ಟಪ್ರದಾಯಿನೀಂ ॥೨೭॥
ಇತ್ಯೇವಮುಕ್ತ್ವಾಸಾಧೇನುಸ್ತಸ್ಯಾಭೀಷ್ಟಾನ್ಮನೋಹರಾನ್ ।
ದೇವಾನಾಂಪೂಜನಾರ್ಥಾಯಸಂಭಾರಾನಥನಿರ್ಮಮೇ ॥೨೮॥

ತಾ॥ ಎಲೈ ದೇವಲೋಕದ ತಾಯಿಯೇ ನನ್ನ ಮಗನ ವಿವಾಹಕ್ಕಾಗಿ ಬಂದಿರುವ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರೇ ಮೊದಲಾದ ದೇವತೆ

ಗಳಿಗೂ ಯಕ್ಷ, ಗಂದರ್ವ, ಕಿನ್ನರರೇ ಮೊದಲಾದವರಿಗೂ ಮಹಾತೇಜಸ್ವಿಗಳಾದ ಮಹರ್ಷಿಗಳಿಗೂ ಘೃತವೀಶಾರ್ದೂಲರಾದ ರಾಜರಿಗೂ ಆತಿಥ್ಯ ನೆರವೇರಿಸಬೇಕಾಗಿರುವುದರಿಂದಲೂ ಮತ್ತು ಅವರುಗಳೆಲ್ಲರನ್ನೂ ಪೂಜಿಸಬೇಕಾಗಿರುವುದರಿಂದಲೂ ಲೋಕಾಭೀಷ್ಟ ಫಲಪ್ರದಾಯಿನಿಯಾದ ನೀನು ಬೇಕಾದ ಸಕಲ ಸಾಮುಗ್ರಿಗಳನ್ನೂ ಭೋಜನ ಪದಾರ್ಥಗಳನ್ನೂ ಸಿದ್ಧಗೊಳಿಸಬೇಕೆಂದು ಪ್ರಾರ್ಥಿಸಿದ ಆ ಸುಮನಸ್ಕನ ಕೋರಿಕೆಯಂತೆ ಕಾಮಧೇನುವು ಸಕಲ ವಿಶಿಷ್ಟವಾದ ಸಂಭಾರಗಳನ್ನೂ ನಿರ್ಮಾಣಮಾಡಿತ್ತು ॥೨೭॥೨೮॥

ತತಸ್ತಾನ್ ಸರ್ವಸಂಭಾರಾನ್ ಆಲೋಕ್ಯಮುನಿಪುಗವಃ ।
ಸನ್ತುಷ್ಟಸ್ಸಹಸಾತತ್ರವಿಷ್ಣುಂನಾರಾಯಣಂವಿಭುಃ ॥೨೯॥

ತಾ॥ ಅನಂತರ ಮುನಿಪುಂಗವನಾದ ಆ ಸುಮನಸ್ಕ ಮಹಾರಾಜನು ದೇವಲೋಕದ ಕಾಮಧೇನುವಿನಿಂದ ಸಿದ್ಧಮಾಡಲ್ಪಟ್ಟಿರುವ ಸಕಲ ಪದಾರ್ಥಗಳನ್ನು ನೋಡಿ ಸಂತುಷ್ಟನಾಗಿ ಮೊದಲು ಚತುರ್ದಶಲೋಕಗಳಿಗೆ ರಕ್ಷಕನಾದ ಶ್ರೀಮಹಾವಿಷ್ಣುವನ್ನು ವಿಧಿಪ್ರಕಾರ ಪೂಜಿಸಿ ಆತನ ಅಪ್ಪಣೆಯಂತೆ ॥೨೯॥

ಪ್ರಥಮಂಪೂಜಯಾಮಾಸಯಥಾವದ್ವಿಧಿಪೂರ್ವಕಂ ।
ತತಸ್ತಸ್ಯಾನುಜ್ಞಯೈವಬ್ರಹ್ಮಾಣಂಪಾರ್ವತೀವಿಭುಂ ॥೩೦॥

ತಾ॥ ತನ್ನ ಪಿತಾಮಹನೂ ಲೋಕಗಳ ಸೃಷ್ಟಿಕರ್ತನೂ ಆದ ಬ್ರಹ್ಮದೇವನನ್ನು ಯಥಾವಿಧಿಯಾಗಿ ಪೂಜಿಸಿ, ಸರ್ವಲೋಕಗಳಿಗೂ ಮಂಗಳಕರನೂ ಪಾರ್ವತೀದೇವಿಯ ಪತಿಯೂ ಆದ ಈಶ್ವರನನ್ನೂ ಯಥಾವಿಧಿಪೂರ್ವಕವಾಗಿ ಆ ಸುಮನಸ್ಕ ಮಹಾರಾಜನು ಪೂಜಿಸಿದನು ॥೩೦॥

ಮಹೇಂದ್ರಪ್ರಮುಖಾನ್ ದೇವಾನ್ ಋಷೀನಪಿಮಹೌಜಸಃ ।
ಯಥಾವತ್ಸರ್ವಸಂಭಾರೈಃಪೂಜಯಾಮಾಸಯತ್ನತಃ ॥೩೧॥

ತಾ॥ ಇಂದ್ರನೇ ಮೊದಲಾದ ದೇವಪ್ರಮುಖರನ್ನೂ ತಪೋಧನರಾದ ಮಹರ್ಷಿಗಳನ್ನೂ ಯಥಾ ಯೋಗ್ಯವಾಗಿ ಭಕ್ತಿಯಿಂದ ಆ ಸಂಮನಸ್ಕ ಮಹಾರಾಜನು ಪೂಜಿಸಿದನು ॥೩೧॥

ತತೋಲಕ್ಷ್ಮೀಂಗಿರಾಂದೇವೀಂಪಾರ್ವತೀಂಚಶಚೀಂತಥಾ ।
ಅನ್ಯಾಃಮಹರ್ಷೀಣಪತ್ನೀಶ್ಚ ಅರುಂಧತ್ಯಾದಿಕಾಶ್ಶುಭಾಃ ॥೩೨॥
ಪೂಜಯಾಮಾಸಯತ್ನೇನಯಥಾವದ್ವಿಧಿಪೂರ್ವಕಂ ।
ತತಸ್ತೈರಭ್ಯನುಜ್ಞಾತಃಸುಮನಸ್ಕೋಮಹಾಮುನಿಃ ॥೩೩॥

ತಾ॥ ಈ ರೀತಿಯಾಗಿ ಎಲ್ಲಾ ದೇವತೆಗಳನ್ನೂ ಋಷಿಗಳನ್ನೂ ಪೂಜಿಸಿದ ಅನಂತರ ಆ ಸುಮನಸ್ಕ ಮಾಹಾರಾಜನು ತನ್ನ ಪತ್ನಿಯಾದ ಸುಶೀಲೆಯನ್ನು ಮುಂದು ಮಾಡಿಕೊಂಡು ಮಹಾಲಕ್ಷ್ಮೀದೇವಿಯನ್ನೂ, ಮಹಾಸರಸ್ವತೀದೇವಿಯನ್ನೂ, ಮಹಾ

ದೇವಿಯಾದ ಪಾರ್ವತೀದೇವಿಯನ್ನೂ ಇಂದ್ರ ಪತ್ನಿಯಾದ ಶಚೀದೇವಿಯೇ ಮೊದಲಾದ ದೇವಪತ್ನಿಯರನ್ನೂ ಮತ್ತು ವಸಿಷ್ಠಋಷಿಯ ಪತ್ನಿಯಾದ ಅರುಂಧತೀ ದೇವಿಯನ್ನೂ ಮತ್ತು ಪ್ರಭೃತೀದೇವಿಯೇ ಮೊದಲಾದ ಋಷಿಪತ್ನಿಯರನ್ನೂ ಯಥಾವಿಧಿಯಾಗಿ ಭಕ್ತಿಪೂರ್ವಕವಾಗಿ ಅವರೆಲ್ಲರನ್ನೂ ಪೂಜಿಸಿ ಅನಂತರ ಅವರೆಲ್ಲರ ಅನುಮತಿಯನ್ನು ಪಡೆದು ॥೩೨॥೩೩॥

ಮುಕ್ತಕಸ್ಯವಿವಾಹಂವೈಕರ್ತುಂಸಮುಪಚಕ್ರಮೇ ।

ತಾ॥ ಈ ರೀತಿಯಾಗಿ ಅವರುಗಳೆಲ್ಲರಿಂದ ಅಪ್ಪಣೆಯನ್ನು ಪಡೆದು ಪತ್ನೀ ಸಮೇತನಾದ ಆ ಸುಮನಸ್ಕನು ತನ್ನ ಪುತ್ರನಾದ ಮುಕ್ತಕರಾಜನ ವಿವಾಹ ಲಗ್ನವನ್ನು ನೇರವೇರಿಸಲು ವಿವಾಹ ಮಂಗಳಕಾರ್ಯಗಳಿಗೆ ಪ್ರಾರಂಭಮಾಡಿದನು ।

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮುಕ್ತಕವಿವಾಹೋದ್ಯೋಗೋನಾಮದ್ವಾದಶೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತರಾಜನ ವಿವಾಹೋದ್ಯೋಗವೆಂಬ ಹನ್ನೆರಡನೇ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿಮೂರನೆಯ ಅಧ್ಯಾಯ :-

ಮುಕ್ತರಾಜ ಸುದಕ್ಷಿಣಾದೇವಿಯರ ವಿವಾಹ

ನಾರದ ಉವಾಚ :-

ಅನಂತರಂಕಿಕೃತವಾನ್ಸುಮನಸ್ಕೋಮುನೀಶ್ವರಃ ।
ತತ್ಸರ್ವಂಬ್ರೂಹಿವಿಸ್ತಾರಾತ್ ಪಿತಾಮಹಮಮಾಧುನಾ ॥೧॥

ತಾ॥ ಎಲೈ ಪಿತಾಮಹನಾದ ಬ್ರಹ್ಮದೇವನೇ! ಅನಂತರ ಮುನೀಶ್ವರನಾದ ಆ ಸುಮನಸ್ಕನು ಏನು ಮಾಡಿದನು. ಅದನ್ನೆಲ್ಲಾ ವಿಸ್ತರಿಸಿ ನನಗೆ ಹೇಳುವನಾಗೆಂದು ನಾರದನು ಕೇಳಿದನು ॥೧॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಂಸವಿಸ್ತರಂ ।
ತತಶ್ಶುಭಮುಹೂರ್ತೇತುಸುಮನಸ್ಕೋಮಹಾಮುನಿಃ ॥೨॥

ತಾ॥ ಎಲೈ ನಾರದನೇ ಕೇಳು, ಆ ಮಹಾಮುನಿಯಾದ ಸುಮನಸ್ಕನು ತನ್ನ ಮಗನ ವಿವಾಹಾರ್ಥವಾಗಿ ಶುಭ ಕಾರ್ಯಗಳನ್ನು ಮಾಡಲು ಶುಭಮುಹೂರ್ತವನ್ನು ನಿಶ್ಚಯಿಸಿದನು ಆ ವಿವಾಹ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ಹೇಳುವೆನು ಕೇಳೆಂದು ಬ್ರಹ್ಮನು ಹೇಳಿದನು ॥೨॥

ಪುಣ್ಯಾಹ ಮತ್ತು ಸ್ವಸ್ತಿವಾಚನ

ಪುಣ್ಯಾಹವಾಚನಂಕೃತ್ವಾಸ್ವಸ್ತಿವಾಚನಿಕಂತಥಾ ।
ಅನುಜ್ಞಾತಶ್ಚಮುನಿಭಿಃಪೂಜಯಿತ್ವಾರಮಾಪತಿಃ ॥೩॥

ತಾ॥ ಆ ಸುಮನಸ್ಕ ಮಹಾರಾಜನು ಶುಭಮುಹೂರ್ತದಲ್ಲಿ ಸ್ವಸ್ತಿವಾಚನವೆಂಬ ಪುಣ್ಯಾಹವನ್ನು ಮಾಡಿ ಆಚಾರ್ಯರಾದ ವಸಿಷ್ಠಾದಿ ಮಹರ್ಷಿಗಳ ಅನುಜ್ಞೆಯನ್ನು ಪಡೆದು ಭಾರ್ಯಾಸಮೇತನಾಗಿ ಶ್ರೀಲಕ್ಷ್ಮೀನಾರಾಯಣರನ್ನು ಪೂಜಿಸಿದನು ॥೩॥

ವಧೂವರರ ಪೂಜೆ

ತತೋರತ್ನಮಯೇಪೀಠೇಸನ್ನಿವೇಶ್ಯವಧೂವರೌ ।
ಭೇರೀಮೃದಂಗಶಂಖಾದಿವಾದ್ಯಾನಿವಿವಿಧಾನಿಚ ॥೪॥

ತಥಾಮಂಗಳಗೀತಾನಿವಂದಿನ್ಯೈತಾಳಿಕಸ್ತುತೀಃ ।
ಸ್ವಸ್ತಿವಾಚನಶಬ್ಧಾಂಶ್ಚಕಾರಯಿತ್ವಾತತಸ್ತತಃ ॥೫॥

ತಾ॥ ತದನಂತರ ವಧುವಾದ ಮುಕ್ತಕಾಂತೆ ಎಂಬ ಸುದಕ್ಷಿಣಾದೇವಿಯನ್ನೂ ವರನಾದ ಮುಕ್ತರಾಜನನ್ನೂ ರತ್ನಖಚಿತವಾದ ಪೀಠದಲ್ಲಿ ಕುಳ್ಳರಿಸಿ. ಭೇರೀಮೃದಂಗ, ಶಂಖ, ಮೊದಲಾದ ಮಂಗಳ ವಾದ್ಯಗಳು ಮಂಗಳಗೀತೆಗಳನ್ನು ಮೊಳಗುತ್ತಿರಲು ವಂದಿವೈತಾಳೀಕರು ಸ್ತುತಿಸುತ್ತಿರಲು ಆಚಾರ್ಯಪುರುಷರು ಮಹರ್ಷಿಗಳು ಸ್ವಸ್ತಿವಾಚನ ಮಂತ್ರಗಳನ್ನು ಪಠಿಸುತ್ತಿರಲು ಸುಮಂಗಳೆಯರು ಗೀತೆಗಳನ್ನು ಹಾಡುತ್ತಿರುವ ಮಧುರಶಬ್ಧಗಳು ಉಂಟಾಗುತ್ತಿರಲು ವಧೂವರರ ಪೂಜೆಯನ್ನು ಆಗ ನೆರವೇರಿಸಿದವರಾದರು ॥೪॥೫॥

ಆತ್ಮಾನಚಾಸ್ಯಲಂಕೃತ್ವಾಸುಶೀಲಾಂಚಕುಟುಂಬಿನೀಂ ।
ಬ್ರಾಹ್ಮಣೇಭ್ಯೋಧನಂದತ್ವಾಭೋಜಯಿತ್ವಾಬಹೂನಪಿ ॥೬॥

ತಾ॥ ಆ ಸುಮನಸ್ಕಮಹಾರಾಜನೂ ಮತ್ತು ಆತನ ಪತ್ನಿಯಾದ ಸುಶೀಲಾದೇವಿಯೂ ವಸ್ತ್ರ ಭೂಷಣಾದಿಗಳಿಂದ ಅಲಂಕೃತರಾಗಿ ವಧೂವರರ ಪೂಜೆಯನಂತರ ಬ್ರಾಹ್ಮಣರಿಗೆ ಭೂರಿಭೋಜನವನ್ನು ಮಾಡಿಸಿ ದಕ್ಷಿಣೆಯನ್ನು ಕೊಟ್ಟವರಾದರು ॥೬॥

ಮುಹೂರ್ತದದಿನ ತೈಲಾಭ್ಯಂಜನ

ಲಕ್ಷ್ಮೀವಾಗ್ದೇವತಾಗೌರೀಮುಖ್ಯೈಶ್ಚಸುರಯೋಷಿತ್ಯೈಃ ।
ಕಾರಯಿತ್ವಾಸುಗೀತಾನಿಸಂತುಷ್ಟೈಸ್ಸಮಲಂಕೃತೈಃ ॥೭॥

ತಾ॥ ವಿವಾಹದಿನ ಉದಯದಲ್ಲಿ ಚೆನ್ನಾಗಿ ಅಲಂಕಾರಮಾಡಿಕೊಂಡಿರುವವರೂ ಸಂತುಷ್ಟರೂ ಸರ್ವಮಂಗಳೆಯರೂ ಆದ ಶ್ರೀ ಲಕ್ಷ್ಮೀದೇವಿಯೂ, ಶ್ರೀ ಸರಸ್ವತೀದೇವಿಯೂ ಶ್ರೀ ಪಾರ್ವತೀದೇವಿಯೂ ಶಚೀದೇವಿಯೇ ಮೊದಲಾದ ದೇವತಾಸ್ತ್ರೀಯರು ವಿವಾಹದ ಹಾಡುಗಳನ್ನು ಹಾಡುತ್ತಾ ವಿವಾಹಮಂಟಪದಲ್ಲಿ ವಧೂವರರಿಗಾಗಿ ಸಕಲ ಸನ್ನಾಹವನ್ನು ಮಾಡಿದರು ॥೭॥

ತತಶ್ಚಂಪಕತೈಲಾನಿದಿವ್ಯಂಚಾಪ್ಯನುಲೇಪನಂ ।
ಸಮಾನೀಯತದಾನೀಂವೈತಾಂಬೂಲಾದೀನ್ಯನೇಕಶಃ ॥೮॥
ವಧೂವರಾಭ್ಯಾಂತತ್ರೈವಭಾರ್ಯಯಾಸಹಿತೋಮುನಿಃ ।
ಕೃತ್ವಾತುಮಂಗಳಂಸ್ನಾನಂಅಲಂಕೃತ್ಯವಧೂವರಾ ॥೯॥

ತಾ॥ ವಿವಾಹಮಂಟಪದ ಮಧ್ಯದಲ್ಲಿ ಸುವರ್ಣಪೀಠಗಳಲ್ಲಿ ವಧುವಾದ ಸುದಕ್ಷಿಣೆಯನ್ನು ವರನಾದ ಮುಕ್ತರಾಜನನ್ನೂ ಮತ್ತು ಮುನಿವರ್ಯನಾದ ಸುಮನಸ್ಕನನ್ನೂ ಆತನ ಭಾರ್ಯೆಯಾದ ಸುಶೀಲಾದೇವಿಯನ್ನೂ ರತ್ನಖಚಿತವಾದ ಪೀಠಗಳಲ್ಲಿ

ಕುಳ್ಳಿರಿಸಿ ವಿವಾಹದ ಮಂಗಳ ಹಾಡುಗಳನ್ನು ಹೇಳುತ್ತಾ ವಧೂವರರಿಗೂ, ಸುಮನಸ್ಕ ಸುಶೀಲೆಯರಿಗೂ ಸಂಪಿಗೆ ತೈಲದಿಂದಲೂ ದಿವ್ಯವಾದ, ಮಂಗಳಕರವಾದ ಅನುಲೇಪನ ಗಳಿಂದಲೂ ತೈಲವನ್ನು ಒತ್ತಿ, ಅನುಲೇಪನಗಳನ್ನು ಪೂಸಿ ತಾಂಬೂಲಗಳನ್ನು ಕೊಟ್ಟು ಅನಂತರ ವಧೂವರರಿಗೂ ಭಾರ್ಯೆಯಿಂದ ಕೂಡಿದ ಸುಮನಸ್ಕನಿಗೂ ಮಂಗಳಸ್ನಾನ ವನ್ನು ಮಾಡಿಸಿ ವಧೂವರರಿಗೂ ಸುಶೀಲಾ ಸುಮನಸ್ಕರಿಗೂ ವಸ್ತ್ರಭೂಷಣಾದಿಗಳಿಂದ ಅಲಂಕರಿಸಿದರು ॥೮೯॥

ಸಮಾವರ್ತನಕರ್ಮ ಮತ್ತು ಕಾಶಿಯಾತ್ರಾ

ಸಂಕಲ್ಪ್ಯವಿಧಿವತ್ಪೂರ್ವಂಋಷಿಮಂಡಲಮಧ್ಯಗಃ ।
ಮುಕ್ತಕಸ್ಯತದಾಶೀಘ್ರಂಪ್ರಾಜಾಪತ್ಯಾದಿಕಂವ್ರತಂ ॥೧೦॥
ಸಮಾವರ್ತನಕರ್ಮಾಣಿಕಾರಯಿತ್ವಾಯಥಾವಿಧಿ ।
ತತಶ್ಶುಭೇಮುಹೂರ್ತೇತುಶುಭೇಚೋದ್ವಾಹಮಂಟಪೇ ॥೧೧॥

ತಾ॥ ಅನಂತರ ಋಷಿಮಂಡಲ ಮಧ್ಯಸ್ಥನಾದ ಆ ಸುಮನಸ್ಕ ಮಹಾರಾಜನು ವಿಧ್ಯುಕ್ತಪ್ರಕಾರವಾಗಿ ಮೊದಲು ಸಂಕಲ್ಪವನ್ನು ಮಾಡಿ ಮುಕ್ತರಾಜನಿಗೆ ಯಥಾಶಾಸ್ತ್ರ ವಿಧಿಯಂತೆ ಪ್ರಾಜಾಪತ್ಯಾದಿ ವ್ರತಗಳನ್ನೂ ಸಮಾವರ್ತನೆಯೇ ಮೊದಲಾದ ಶುಭಕರ್ಮ ಗಳನ್ನೂ ಮಾಡಿ ಕಾಶೀಯಾತ್ರೆಯೇ ಮೊದಲಾದ ವಿಧ್ಯುಕ್ತ ವಿಧಿಗಳನ್ನು ನೆರವೇರಿಸಿ ಕಲ್ಯಾಣಮಂಟಪದಲ್ಲಿ ಶುಭಮುಹೂರ್ತ ಪ್ರಾಪ್ತವಾಗುತ್ತಿರಲು ವಧುವನ್ನು ಕರೆತರಲು ನಿರೀಕ್ಷಿಸುತ್ತಿದ್ದರು ॥೧೦॥೧೧॥

ಮುಕ್ತರಾಜ ಸುದಕ್ಷಿಣೆಯರ ವಿವಾಹ

ದಿವ್ಯರತ್ನಮಯೇಪೀಠೇನಿವೇಶ್ಯಚವಧೂವರೌ ।
ಜೀರಕಾಗುಡಸಂಯುಕ್ತಂಶುಭದ್ರವ್ಯಂತತಃಪುನಃ ॥೧೨॥
ವಧೂವರಾಭ್ಯಾಮನ್ಯೋನ್ಯಂಧಾರಯರ್ಶಿರಸೋಸ್ತಥಾ ।
ತತೋನ್ಯೈವಾಹಿಕಂಕರ್ಮಕರ್ತುಮಾಜ್ಞಾಪಯನ್ಮುನೀನ್ ॥೧೩॥

ತಾ॥ ತದನಂತರ ಶುಭಮುಹೂರ್ತದಲ್ಲಿ ವಿವಾಹಮಂಟಪದಲ್ಲಿ ದಿವ್ಯರತ್ನ ಗಳಿಂದ ಮಾಡಿದ ಸುವರ್ಣಪೀಠದಲ್ಲಿ ವಧೂವರರನ್ನು ನಿಲ್ಲಿಸಿ ಜೀರಿಗೆ ಬೆಲ್ಲದಿಂದ ಮಿಶ್ರ ವಾದ ಮಂಗಳದ್ರವ್ಯವನ್ನು ವಧೂವರರ ಕೈಗಳಲ್ಲಿ ಕೊಟ್ಟು ವಧೂವರರ ಶಿರಸ್ಸಿನ ಮೇಲೆ ಅನ್ಯೋನ್ಯವಾಗಿ ಜೀರಿಗೆ ಬೆಲ್ಲ ಮಂಗಳದ್ರವ್ಯಗಳನ್ನು ಇಡಿಸಿದರು ಮತ್ತು ಪುನಃ ಪುನಃ ಇಡಿಸಿದರು ತದನಂತರ ವಧೂವರರ ಕೈಗಳಲ್ಲಿ ಪುಷ್ಪಾಹಾರಗಳನ್ನು ಕೊಟ್ಟು ಅನ್ಯೋನ್ಯವಾಗಿ ಒಬ್ಬರಿಂದ ಮತ್ತೊಬ್ಬರ ಶಿರಸ್ಸಿಗೆ ಪುಷ್ಪಾಹಾರಗಳನ್ನೂ ಸಹ ಧಾರಣೆ

ಮಾಡಿಸಿದರು ಮತ್ತು ಪುನಃ ಪುನಃ ಧಾರಣೆಮಾಡಿಸಿದರು ತದನಂತರ ವಧೂವರರನ್ನು ಪೀಠದಲ್ಲಿ ಕುಳ್ಳಿರಿಸಿ ಮುಂದಿನ ವಿವಾಹ ಲಗ್ನಕಾರ್ಯಗಳನ್ನು ಮಾಡಿಸುವಂತೆ ಆಚಾರ್ಯರಾದ ಮಹರ್ಷಿಗಳಿಗೆ ಸುಮನಸ್ಕ ಮಹಾರಾಜನು ಹೇಳಿದನು ॥೧೨॥೧೩॥

ಕನ್ಯಾದಾನ

ಮುಕ್ತಕೋಪಿಮಹಾಭಾಗೋನಾರಾಯಣಮುಖೈಸ್ಸುರೈಃ ।
ಅನುಜ್ಞಾತಸ್ತದಾಶೀಘ್ರಂಸಂಕಲ್ಪ್ಯವಿಧಿಪೂರ್ವಕಂ ॥೧೪॥

ತಾ॥ ಇದಾದನಂತರ ವರನಾದ ಮುಕ್ತಕಋಷಿಯು ಕೈಲಿ ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳ ಅನುಜ್ಞೆಯನ್ನು ಮಾಡಿಸಿ ಬೇಗನೇ ವಿಧಿಪೂರ್ವಕ ವಿವಾಹ ಸಂಕಲ್ಪವನ್ನು ಮಾಡಿಸಿದರು ॥೧೪॥

ಪ್ರೀತ್ಯಾದೂರ್ವಾಸಸೋಮೌನೇಗೌರೀಶಾಂಶಸಮುದ್ಭವಃ ।
ಜಗ್ರಾಹಲಕ್ಷಣೋಪೇತಾಪಾರ್ವತ್ಯಂಶಸಮುದ್ಭವಾಂ ॥೧೫॥
ಸುದಕ್ಷಿಣೇತಿಕನ್ಯಾಂತಾಂಶಚೀಮಿವಪುರಂದರಃ ।

ತಾ॥ ಮಹರ್ಷಿಯಾದ ದೂರ್ವಾಸಮುನಿಯ ಮಗಳಾಗಿಯೂ ಗೌರೀದೇವಿಯಂತೆ ಸರ್ವಲಕ್ಷಣಗಳಿಂದ ಕೂಡಿದವಳಾಗಿಯೂ ಪರ್ವತರಾಜ ಪುತ್ರಿಯಾದ ಪಾರ್ವತೀದೇವಿಯ ಅಂಶದಿಂದ ಹುಟ್ಟಿದವಳೂ ಆದ ಆ ಸುದಕ್ಷಿಣೆಯೆಂಬ ಕನ್ಯಾರತ್ನವನ್ನು ಪರಮೇಶ್ವರಾಂಶದಿಂದ ಸಂಭೂತನಾದ ಆ ಮುಕ್ತಕಋಷಿಯು ದೇವೇಂದ್ರನು ಶಚೀದೇವಿಯನ್ನು ಪಾಣಿಗ್ರಹಣಮಾಡಿಕೊಂಡಂತೆ ತಾನು ಸುದಕ್ಷಿಣೆಯನ್ನು ಪಾಣಿಗ್ರಹಣ ಮಾಡಿಕೊಂಡನು ॥೧೫॥

ತತಃಕ್ಷೀರಾಬ್ಧಿತನಯಾಗಿರಿಕನ್ಯಾಚಪಾರ್ವತೀ ॥೧೬॥
ವಾಣೀಂಗಿರಾಂದೇವತಾಚಪ್ರಲೋಮತನಯಾಶಚೀ ।
ಅನ್ಯಾಸ್ಸಪ್ತರ್ಷಿನಾರ್ಯಶ್ಚಸ್ಸರ್ವಾಸ್ಸನ್ಯಗಲಂಕೃತಾಃ ॥೧೭॥

ತಾ॥ ಆ ವಿವಾಹಮಂಟಪದಲ್ಲಿ ಕ್ಷೀರಸಮುದ್ರರಾಜನ ಮಗಳಾದ ಲಕ್ಷ್ಮೀದೇವಿಯೂ ಪರ್ವತರಾಜನ ಪುತ್ರಿಯಾದ ಪಾರ್ವತೀದೇವಿಯೂ ವಾಗ್ದೇವಿಯಾದ ಸರಸ್ವತೀದೇವಿಯೂ ಪ್ರಲೋಮನ ಪುತ್ರಿಯಾದ ಶಚೀದೇವಿಯೂ ಸಪ್ತರ್ಷಿಗಳ ಭಾರ್ಯೆಯರೂ ಸರ್ವಾಭರಣ ಪುಷ್ಪಗಳಿಂದ ಅಲಂಕೃತರಾಗಿ ॥೧೬॥೧೭॥

ಚಾಂಬೂನದವಿಕಾರಾಣಿನಾನಾರತ್ನಮಯಾನಿಚ ।
ಗೃಹೀತ್ವಾದೀಪಪಾತ್ರಾಣಿಶುಭಗೀತಮನೋಹರಾ ॥೧೮॥

ತಾ॥ ನವರತ್ನಗಳಿಂದ ಮಾಡಲ್ಪಟ್ಟ ಸುವರ್ಣಪಾತ್ರೆಗಳಲ್ಲಿ ದೀಪಗಳನ್ನಿರಿಸಿ ಆ ಪಾತ್ರೆಗಳನ್ನು ಧರಿಸಿದವರಾಗಿ ಮಂಗಳಗೀತೆಗಳನ್ನು ಹಾಡುತ್ತಾ ಆ ವಧೂವರರಾದ

ಮುಕ್ತರಾಜ ಮತ್ತು ಸುದಕ್ಷಿಣಾದೇವಿಯರ ಸುತ್ತಲೂ ಲಕ್ಷ್ಮೀ, ಸರಸ್ವತೀ, ಪಾರ್ವತೀ, ಶಚೀ, ಸಪ್ತರ್ಷಿ ಪತ್ನಿಯರೂ ದೇವಕಯನ್ಯೆರೇ ಮೊದಲಾದ ಸಕಲರೂ ನಿಂತಿರಲು ಆಗ ॥೧೮॥

ವಿವಾಹವೇದಿಕಾಮಧ್ಯೇತಸ್ಥಿರೇಷಾಮುಲೋಚನಾಃ ।
ಕನ್ಯಾದಾನಂಕಾರಯಿತ್ವಾದೂರ್ವಾಸಮುನಿನಾತದಾ ॥೧೯॥

ತಾ॥ ವಿವಾಹಮಂಟಪದ ವಿವಾಹ ವೇದಿಕೆಯಲ್ಲಿ ಮಹರ್ಷಿಗಳು ದೂರ್ವಾಸ ಮುನಿಯ ಕೈಯಿಂದ ಮುಕ್ತಕಋಷಿಗೆ ಸುದಕ್ಷಿಣೆಯನ್ನು ಕ್ಷೀರಧಾರೆಯಿಂದ ಕನ್ಯಾದಾನ ವನ್ನು ಮಾಡಿಸಿದರು ॥೧೯॥

ಮಾಂಗಲ್ಯಧಾರಣೆ

ವೇದಾರ್ಥದ್ಯೋತಕಾಶ್ಚೈವವೇದಮಾರ್ಗಾನುಸಾರತಃ ।
ಪಠಿತ್ವಾಚೂರ್ಣಕಾಂದಿವ್ಯಾಂಮಂಗಳಾಷ್ಟಕಪೂರ್ವಕಂ ॥೨೦॥
ಮಾಂಗಲ್ಯಧಾರಣಂಚೈವಕಂಕಣಂಚಪರಸ್ಪರಂ ।
ತೂರ್ಯವಾದ್ಯಾದಿಘೋಷೈಶ್ಚಕಾರಯಿತ್ವಾಮಹರ್ಷಯಃ ॥೨೧॥

ತಾ॥ ಅನಂತರ ವೇದಮಂತ್ರಗಳನ್ನೂ ವೇದಾರ್ಥದ ಪ್ರತಿಪಾದಕಗಳಾದ ಸೂತ್ರ-ತಂತ್ರಾದಿಗಳಿಂದಲೂ ಮಂಗಳಾಷ್ಟಕಗಳನ್ನೂ ಚೂರ್ಣಿಕೆಗಳನ್ನೂ ಪಠಿಸಿದವ ರಾಗಿ ವಧೂವರರರಿಗೆ ಪರಸ್ಪರ ಕಂಕಣ ಧಾರಣೆಯನ್ನು ಮಾಡಿಸಿ ದೇವದುಂದುಭಿಗಳು ಮತ್ತು ಮಂಗಳವಾದ್ಯಗಳು ಮೊಳಗುತ್ತಿರಲು ಮುಕ್ತಕಋಷಿಯಿಂದ ಸುದಕ್ಷಿಣಾದೇವಿಗೆ ಮಾಂಗಲ್ಯಧಾರಣೆಯನ್ನು ಮಹರ್ಷಿಗಳು ಮಾಡಿಸಿದರು ॥೨೦॥೨೧॥

ಅಕ್ಷತಾರೋಪಣೆ

ಪುರಾವರೇಣಕನ್ಯಾಯಾಃಮುಕ್ತಕಾಮೂರ್ಧ್ನಿನ್ಯಕ್ಷಿಪಟ ।
ಮುಕ್ತಸ್ತಯಾವರಸ್ಯೇವತಥಾಶಿರಸಿನಿಕ್ಷಿತಾಃ ॥೨೨॥
ಅನ್ಯೋನ್ಯಂಚತದಾಶೀಘ್ರಂನಿಕ್ಷಿಪ್ತಾಶ್ಶಿರಸೋಸ್ತಯೋಃ ।

ತಾ॥ ತದನಂತರ ದೇವಮಾತೆಯರು ದೇವಕನ್ಯೆಯರು ಸಪ್ತರ್ಷಿ ಭಾರ್ಯೆ ಯರೂ ಸಹ ದೀಪಗಳನ್ನಿಟ್ಟಿರುವ ಚಿನ್ನದ ಹರಿವಾಣಗಳನ್ನು ಹಿಡಿದು ವಧೂವರರ ಸುತ್ತಲೂ ನಿಂತಿರಲು ವಧೂವರರು ಮುತ್ತುಗಳು ಮತ್ತು ಅಕ್ಷತೆಗಳನ್ನು ಬೆರೆಸಿರುವ ಮಂತ್ರಾಕ್ಷತೆಯನ್ನು ವಧುವಿನ ಶಿರಸ್ಸಿನ ಮೇಲೆ ಮುಕ್ತಕಋಷಿಯೂ, ಮುಕ್ತಕಋಷಿಯ ಶಿರಸ್ಸಿನ ಮೇಲೆ ಸುದಕ್ಷಿಣಾದೇವಿಯೂ ಅಕ್ಷತಾರೋಪಣೆಯನ್ನು ಮಾಡಿದರು

ತರುವಾಯ ವಧೂವರರಿಂದ ಮಹರ್ಷಿಗಳು ಸಪ್ತಪದಿಯನ್ನು ಮಾಡಿಸಿ ದೇವ ಮಾತೆಯರಿಂದಲೂ ಋಷಿಮಾತೆಯರಿಂದಲೂ ಉರಟಣೆಯನ್ನು ಮಾಡಿಸಿದರು ॥೨೨॥

ರಂಭಾದ್ಯಪ್ಸರಸಸ್ತತ್ರನಾಟ್ಯಂಚಾಪ್ರಸ್ಸವುಂತತಃ ॥೨೩॥
ದೇವದುಂದುಭಯೋನೇದುಃದಿವ್ಯಾನಿವಿವಿಧಾನಿಚ ।
ಯಕ್ಷಕಿನ್ನರಗಂಧರ್ವಾಗಾನಂಚಕ್ರುಶ್ಚಸುಸ್ವರಂ ॥೨೪॥
ವಂದಿನೈತಾಳಿಕಾನಾಂಚಸ್ತುತಯೋತಿವಿಜೃಂಭಿತಾಃ ।

ತಾ॥ ಈ ರೀತಿಯಾಗಿ ವೈಭವದಿಂದ ಲಗ್ನವು ನೆರವೇರುತ್ತಿರಲು, ರಂಭಾದಿ ಅಪ್ಸರ ಸ್ತ್ರೀಯರು ನಾಟ್ಯವಾಡುತ್ತಿರಲು ದಿವ್ಯ ವಾದ್ಯಗಳು ದೇವದುಂದುಭಿಗಳು ಮೊಳಗುತ್ತಿರಲು ಯಕ್ಷಕಿನ್ನರ ಗಂಧರ್ವರು ಸುಸ್ವರವಾಗಿ ಗಾನ ಮಾಡುತ್ತಿರಲು ವಂದಿ ವೈತಾಳಿಕರು ಸ್ತುತಿಸುತ್ತಿರಲು ಆ ವಿವಾಹ ಮಂಟಪದಲ್ಲಿ ಎಲ್ಲೆಲ್ಲಿಯೂ ಕೋಲಾಹಲದ ಸುಮಧುರವಾದ ಶಬ್ದಗಳಿಂದ ತುಂಬಿದ್ದಿತು ॥೨೩॥೨೪॥

ತದಾಸರ್ವಮುನೀಂದ್ರಾಣಾಂಅಶಿಷಶ್ಚಸಮಂತತಃ ॥೨೫॥
ಬ್ರಾಹ್ಮಣಾಶ್ಚಧನ್ಯೈಸ್ತತ್ರಸುಸಂತುಷ್ಟಾಬಭೂವಿರೇ ।

ತಾ॥ ಆಗ ಸರ್ವತ್ರ ಸಮಸ್ತ ಮಹರ್ಷಿಗಳೂ ಆಶೀರ್ವಾದ ಮಂತ್ರಗಳನ್ನು ಪಠಿಸಿ ವಧೂವರರನ್ನು ಆಶೀರ್ವದಿಸಿದರು. ಬ್ರಾಹ್ಮಣರು ಬೇಕಾದಷ್ಟು ದಕ್ಷಿಣೆ ಭೋಜನ ತಾಂಬೂಲಗಳನ್ನು ಹೊಂದಿ ಸಂತುಷ್ಟರಾದರು ॥೨೫॥

ಏವಂಕ್ರಮೇಣಸೌಭಾಗ್ಯಸಹಿತೇಶುಭಕರ್ಮಣಿ ॥೨೬॥
ದೇವಾವಿಷ್ಣುಮುಖಾಸ್ತತ್ರಪರಾಂಪ್ರೀತಿಮುಪಾಗರ್ಮ ।
ಅನಂತರಂಲಾಜಾಹೋಮಂಕಾರಯಿತ್ವಾಮುನೀಶ್ವರಾಃ ॥೨೭॥

ತಾ॥ ಈ ರೀತಿ ವೇದೋಕ್ತವಾದ ಸೌಭಾಗ್ಯಸಹಿತವಾದ ಶುಭಕರ್ಮಗಳಿಂದ ಮಂಗಳಕಾರ್ಯವು ನೆರವೇರಲು ಶ್ರೀ ಮಹಾ ವಿಷ್ಣುವೇ ಮೊದಲಾದ ದೇವತೆಗಳೆಲ್ಲರೂ ಹೆಚ್ಚಾದ ಸಂತೋಷವುಳ್ಳವರಾದರು ತದನಂತರ ಮಹರ್ಷಿಗಳು ವಧೂವರರಿಂದ ಲಾಜಾ ಹೋಮವನ್ನು ಮಾಡಿಸಿದರು. ॥೨೬॥೨೭॥

ನಾಕಬಲಿ ಪೂಜಾ

ಚತುರ್ಥೇಹನಿಸಂಪ್ರಾಪ್ತೇಕೃತ್ವಾನಾಕಬಲಿಂತತಃ ।
ವಸನ್ತಮಾಧವಸ್ಯಾಪಿಕೃತ್ವಾಪೂಜಾಂವಿಶೇಷತಃ ॥೨೮॥

ತತಸ್ಸರ್ವಸುರೇಂದ್ರಾಣಾಂಮಂಗಳಸ್ನಾನಮುದ್ಭುತಂ ।
ಕಾರಯಿತ್ವಾಯಥಾನ್ಯಾಯಂಪೂಜಯಿತ್ವಾಸಮಂತತಃ ॥೨೯॥

ತಾ॥ ಆ ಸುಮನಸ್ಕ ಮಹಾರಾಜನು ಈ ರೀತಿಯಾಗಿ ಮಹಾ ವೈಭವ ದಿಂದ ವಿವಾಹ ಕಾರ್ಯಗಳನ್ನು ನೆರವೇರಿಸಿ ನಾಲ್ಕನೆಯ ದಿನ ವಧೂವರರಿಂದ ವಸಂತ ಮಾಧವ ಪೂಜೆಯನ್ನು ಸಾಕ್ಷಾತ್ ಬಂದಿದ್ದ ಶ್ರೀ ಲಕ್ಷ್ಮೀನಾರಾಯಣರಿಗೆ ಮಾಡಿಸಿ ತದನಂತರ ವಧೂವರರಿಗೆ ವಸಂತ ಓಕಳಿಯನ್ನಾಡಿಸಿದರು. ಆ ಸಮಯ ದಲ್ಲಿ ನೆರದಿದ್ದ ದೇವತೆಗಳೆಲ್ಲರೂ ಈ ಸಂತೋಷದಲ್ಲಿ ಪಾಲ್ಗೊಂಡವರಾಗಿ ವಧೂ ವರರ ಪಕ್ಷಗಳನ್ನು ವಹಿಸಿ ಪತ್ನೀ ಸಮೇತರಾಗಿ ಓಕಳಿಯನ್ನಾಡಿ ತದನಂತರ ವಧೂ ವರರ ಸಹಿತವಾದ ಸರ್ವದೇವತೆಗಳೂ ಮಂಗಳಸ್ನಾನ ಮಾಡಿದವರಾಗಿ ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತರಾದರು. ವಧೂವರರಿಗೂ ಮಂಗಳಸ್ನಾನ ಮಾಡಿಸಿದ ನಂತರ ದಿವ್ಯ ವಸ್ತ್ರಾಭರಣಗಳಿಂದ ಅಲಂಕರಿಸಿ ವಿವಾಹ ವೇದಿಕೆಯ ಪೀಠದಲ್ಲಿ ಕುಳ್ಳಿರಿಸಿ ನಾಕಬಲಿಪೂಜೆಯನ್ನು ಮಹರ್ಷಿಗಳು ಮಾಡಿಸಿದ ತರುವಾಯ, ಸಕಲ ದೇವಮಾತೆಯರು ಚಿನ್ನದ ಹರಿವಾಣಗಳಲ್ಲಿ ದೀಪಗಳನ್ನಿಟ್ಟು ಸಪ್ತರ್ಷಿಪತ್ನಿಯ ರೊಡಗೂಡಿ ದೀಪದ ಹರಿವಾಣಗಳನ್ನು ಹಿಡಿದುಕೊಂಡು ವಧೂವರರ ಸಮೇತ ರಾಗಿ ನಾಕಬಲಿಪೂಜಾ ಮಂಟಪವನ್ನು ಪ್ರದಕ್ಷಿಣೆ ಮಾಡಿ ತದನಂತರ ವಧೂವರರಿಗೆ ಉರಟಣೆ ಮಾಡಿ ಆರತಿ ಬೆಳಗಿದರು ॥೨೮॥೨೯॥

ತತೋದಿವ್ಯಾನಿವಾಸಾಂಸಿವಿವಿಧಾಭರಣಾನಿಚ ।
ವಾಹನಾನಿಮಹಾರ್ಹಾಣಿಗಜಾಶ್ವಪ್ರಮುಖಾನಿವೈ ॥೩೦॥
ದತ್ವಾಯಥೇಷ್ಟಂಸರ್ವೇಷಾಂದೇವರ್ಷೀಣಾಂಸಮಂತತಃ

ತಾ॥ ಆ ಸುಮನಸ್ಕ ಮಹಾರಾಜನು ತನ್ನ ಪುತ್ರನ ವಿವಾಹ ಲಗ್ನ ಕಾರ್ಯವನ್ನು ಸಂಪೂರ್ಣವಾಗಿ ನೆರವೇರಿಸಿ ವಿವಾಹಕ್ಕಾಗಿ ಬಂದಿದ್ದ ಸಕಲ ದೇವತೆಗಳನ್ನು ಸಕಲ ಋಷಿಗಳನ್ನೂ ಸಕಲ ರಾಜಾಧಿರಾಜರನ್ನೂ ಸಕಲ ಬ್ರಾಹ್ಮಣರನ್ನೂ ಯಥಾ ವಿಧಿಯಾಗಿ ಪೂಜಿಸಿ ಎಲ್ಲರಿಗೂ ದಿವ್ಯವಾದ ವಸ್ತ್ರಗಳನ್ನೂ ಆಭರಣಗಳನ್ನೂ ಗಜಾಶ್ವಾದಿ ವಾಹನಗಳನ್ನೂ ಗಂಧಪುಷ್ಪ ತಾಂಬೂಲಗಳನ್ನೂ ದಕ್ಷಿಣೆಗಳನ್ನು ಯಥೇಚ್ಛವಾಗಿ ಎಲ್ಲರಿಗೂ ಕೊಟ್ಟು ಎಲ್ಲರಿಗೂ ಅತ್ಯಂತ ನಮ್ರನಾಗಿ ನಮಸ್ಕಾರ ಮಾಡಿದನು ॥೩೦॥

ತತೋವಿಷ್ಣ್ವಾದಿಕಾನ್ ದೇವಾನ್ ಅಭ್ಯರ್ಚ್ಯವಿಧಿಪೂರ್ವಕಂ ।
ಪ್ರೇಷಯಾಮಾಸಮೌನೀಂದ್ರಃಸುಮನಸ್ಕೋಮಹಾಮುನಿಃ ॥೩೧॥

ತಾ॥ ಅನಂತರ ವಿಧಿಪೂರ್ವಕವಾಗಿ ವಿಷ್ಣು, ಬ್ರಹ್ಮ, ಈಶ್ವರರಾದ ತ್ರಿಮೂರ್ತಿಗಳನ್ನು ಅರ್ಚಿಸಿ ಆ ಬುದ್ಧಿಶಾಲಿಯಾದ ಸುಮನಸ್ಕ ಮುನೀಂದ್ರನು ಆ ತ್ರಿಮೂರ್ತಿಗಳನ್ನೂ ದೇವತೆಗಳನ್ನೂ ಬೀಳ್ಕೊಟ್ಟನು ॥೩೧॥

ತೇವಿಷ್ಣು ಪ್ರಮುಖಾದೇವಾಃಸುಸಂತುಷ್ಟಾಮುನೀಶ್ವರಂ ।
ವಾಚಮೂಚುರಿಮಾಂದಿವ್ಯಾಂಪ್ರೀತ್ಯಾವಿಸ್ಮಿತಮಾನಸಾಃ ॥೩೨॥
ಸುಮನಸ್ಕಮಹಾಪ್ರಾಜ್ಞಸಂತುಷ್ಟಾಸ್ಮತವಾಚರ ।
ಇಮೌವಧೂವರೌತೌಚಭುಯಾಸ್ತಾಂಚಿರಜೀವಿನೌ ॥೩೩॥
ತವವಂಶೋಮಹಾಭಾಗಚಿರಸ್ಥಾಯಿಾಭವಿಷ್ಯತಿ ।
ಇತ್ಯುಕ್ತ್ವಾಸರ್ವಲೋಕೇಶಾಸ್ಮ್ರದಾಜಗ್ಮುರ್ಯಥಾಗತಂ ॥೩೪॥

ತಾ॥ ಈ ರೀತಿಯಾಗಿ ಸುಮನಸ್ಕ ಮಹಾರಾಜನಿಂದ ಪೂಜಿಸಿ, ಸತ್ಕಾರ ಹೊಂದಿದ ಶ್ರೀ ಮಹಾವಿಷ್ಣುವೇ ಮೊದಲಾದ ಬ್ರಹ್ಮಾದಿ ದೇವತೆಗಳೂ ಸಕಲ ಋಷಿಗಳೂ ತೃಪ್ತಿಯನ್ನು ಹೊಂದಿ ಸಂತುಷ್ಟರಾಗಿ ಪ್ರಾಜ್ಞನಾದ ಸುಮನಸ್ಕನೇ ನಿನ್ನ ಪೂಜಾ ಸತ್ಕಾರಗಳಿಂದ ನಾವು ಸಂತೋಷ ಪಟ್ಟಿರುವೆವು. ಈ ವಧೂವರರು ಚಿರಂಜೀವಿಗಳಾಗಿ ನಿನ್ನ ವಂಶವು ಚಿರಸ್ಥಾಯಿಯಾಗಿ ಭೂಲೋಕದಲ್ಲಿ ಅಭಿವೃದ್ಧಿ ಹೊಂದಲಿ ಎಂದು ಆಶೀರ್ವದಿಸಿ ತಮ್ಮ ತಮ್ಮ ಲೋಕಗಳಿಗೆ ತೆರಳಿದರು ॥೩೨॥೩೩॥೩೪॥

ಏವಂಕ್ರಮೇಣಮೌನೀಂದ್ರೋಸುಮನಸ್ಕೋಮಹಾಮತಿಃ ।
ಅತೀತೇಷುಚಕಾಲೇಷುಕೇಷುಚಿತ್ತದನಂತರಂ ॥೩೫॥

ತಾ॥ ಈ ರೀತಿಯಾಗಿ ಆ ಸುಮನಸ್ಕ ಮಹಾಮುನಿಯು ಸುಖಸಂಪದಗಳಿಂದ ಭಾರ್ಯಾಪುತ್ರರಿಂದ ಕೂಡಿ ಸುಖಭೋಗಗಳನ್ನು ಅನುಭವಿಸುತ್ತಾ ಕಾಲವನ್ನು ಕಳೆಯುತ್ತಿರಲು ಕೆಲಕಾಲದ ಮೇಲೆ ಕ್ಲೇಶಚಿತ್ತನಾಗಿ ಸಂಸಾರಸುಖದಲ್ಲಿ ಜಿಗುಪ್ಸೆ ಹೊಂದಿದವನಾಗಿ ॥೩೫॥

ಮುಕ್ತಕಂಮುನಿಶಾರ್ದೂಲಂಸರ್ವವಿದ್ಯಾವಿಶಾರದಂ ।
ಅಭಿಷಚ್ಯಮಹಾರಾಜ್ಯೇಸ್ವಯಮಾತ್ತಮನೋರಥಃ ॥೩೬॥

ತಾ॥ ಆ ಸುಮನಸ್ಕನು ಸರ್ವವಿದ್ಯಾವಿಶಾರದನೂ, ಮುನಿಶಾರ್ದೂಲನೂ, ರಾಜತಂತ್ರನಿಪುಣನೂ, ದೇವಬ್ರಾಹ್ಮಣ ಪ್ರಜಾಹಿತ ರಕ್ಷಕನೂ ಆದ ತನ್ನ ಪುತ್ರರತ್ನನಾದ ಮುಕ್ತರಾಜನಿಗೆ ತನ್ನ ಮಹಾ ಸಾಮ್ರಾಜ್ಯಾಭಿಷೇಕವನ್ನು ಮಾಡಿ ಸಮಸ್ತ ರಾಜ್ಯ ಪಟ್ಟವನ್ನು ಕಟ್ಟಿದನು ತನ್ನ ಮನೋರಥವು ನೇರವೇರಲು ಸಂತುಷ್ಟನಾದನು ॥೩೬॥

ಕೃತಕೃತ್ಯಸ್ತದಾಶೀಘ್ರಂಭಾರ್ಯಯಾಸಹಿತೋಽನಘಃ ।
ಮುಕ್ತಕೇನಾಭ್ಯನುಜ್ಞಾತೋಹಿಮಾದ್ರಿಂತಪಸೇಯಯೌ ॥೩೭॥

ತಾ॥ ತದನಂತರ ಆ ಸುಮನಸ್ಕನು ಕೃತಕೃತ್ಯನಾಗಿ ಹೆಂಡತಿಯೊಡನೆ ಕೂಡಿ ಮಗನಾದ ಮುಕ್ತರಾಜನಿಂದ ಬೀಳ್ಕೊಂಡು ಕೂಡಲೇ ತಪಸ್ಸಿಗಾಗಿ ಹಿಮವತ್ಪರ್ವತವನ್ನು ಸೇರಿದನು ॥೩೭॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮುಕ್ತಕವಿವಾಹೋತ್ಸವಕಥನಂನಾಮ ತ್ರಯೋದಶೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತರಾಜನ ವಿವಾಹ ಕಥೆಯೆಂಬ ಹದಿಮೂರನೇ ಆಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿನಾಲ್ಕನೆಯ ಅಧ್ಯಾಯ :-

ಮುಕ್ತರಾಜ ಸುದಕ್ಷಿಣೆಯರ ವಿಹಾರ

ನಾರದ ಉವಾಚ :-

ಪ್ರೀತೋಽಸ್ಮಿಸುಮನಸ್ಕಸ್ಯಕಥಯಾಹಂಸುರೋತ್ತಮ ।
ಮುಕ್ತಕಸ್ಯಕಥಾಂಶ್ರೋತುಂಪರಂಕೌತೂಹಲಂಹಿಮೇ ॥೧॥

ತಾ॥ ಎಲೈ ದೇವತೆಗಳಿಗೆ ಒಡೆಯನಾದ ಬ್ರಹ್ಮದೇವನೆ! ಸುಮನಸ್ಕನ ಕಥೆಯನ್ನು ಕೇಳಿ ಸಂತೋಷವನ್ನು ಹೊಂದಿದೆನು. ಮುಕ್ತರಾಜನ ಕಥೆಯನ್ನು ಕೇಳಬೇಕೆಂಬ ಕುತೂಹಲ ನನಗೆ ಬಹಳವಾಗಿದೆ ಆದ್ದರಿಂದ ಆ ಮುಕ್ತರಾಜನ ಕಥೆಯನ್ನು ಹೇಳೆಂದು ನಾರದನು ಪ್ರಾರ್ಥಿಸಿದನು ॥೧॥

ತತಃಪರಂಕಿಂಕೃತವಾನ್ಮುಕ್ತಕೋಮುನಿಪುಂಗವಃ ।
ವಿಸ್ತಾರ್ಯತಸ್ಯವೃತ್ತಾಂತಂವಕ್ತುಮರ್ಹಸಿಹೇಪ್ರಭೋ ॥೨॥

ತಾ॥ ಎಲೈ ಪಿತಾಮಹನಾದ ಪ್ರಭುವೇ! ಆ ತರುವಾಯ ಮುನಿಪುಂಗವನಾದ ಮುಕ್ತರಾಜನು ಏನುಮಾಡಿದನು ಆತನ ವೃತ್ತಾಂತವನ್ನು ವಿಸ್ತಾರವಾಗಿ ಹೇಳೆಂದು ಬ್ರಹ್ಮದೇವನನ್ನು ನಾರದನು ಕೇಳಿದನು ॥೨॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿಮುಕ್ತಕಸ್ಯಕಥಾಮಿಮಾಂ ।
ಸುಮನಸ್ಕೇಗತೇಽರಣ್ಯಂತಪಸೇಮುಕ್ತಕೋಯುಷಿಃ ॥೩॥

ತಾ॥ ಎಲೈ ನಾರದನೇ ಮುಕ್ತರಾಜನ ಕಥೆಯನ್ನು ಹೇಳುತ್ತೇನೆ ಕೇಳುವವನಾಗು, ಆ ಸುಮನಸ್ಕನು ಭಾರ್ಯಾಸಹಿತನಾಗಿ ತಪವನ್ನಾಚರಿಸಲು ಹಿಮವತ್ಪರ್ವತಕ್ಕೆ ಹೊರಟ ಬಳಿಕ ಆ ಮುಕ್ತರಾಜನು ॥೩॥

ಬಂಧುವರ್ಗೈಸಹಾಮಾತ್ಯೈಃಭೃತ್ಯೈರ್ಮಿತ್ರಜನೈಸ್ಸಹ ।
ದಿವ್ಯಾನನೇಕಭೋಗಾಂಶ್ಚಸಂಪ್ರಾಪ್ಯಪ್ರೀತಮಾನಸಃ ॥೪॥

ತಾ॥ ತನ್ನ ಬಂಧುಗಳು ಮಂತ್ರಿಗಳು ಭೃತ್ಯರು ಮಿತ್ರರೇ ಮೊದಲಾದವರಿಂದ ಪರಿವೃತನಾಗಿ ಅನೇಕ ದಿವ್ಯಭೋಗಗಳನ್ನು ಸಂತುಷ್ಟ ಪ್ರೀತಿಯಿಂದ ಬಹುಕಾಲ ಅನುಭವಿಸಿದನು ॥೪॥

ಉವಾಸಸುಚರಂತತ್ರಭಾರ್ಯಾಯುಕ್ತೋಮಹಾಮತಿಃ ।
ಏವಂಕ್ರಮೇಣಗಚ್ಛೆತ್ಸುಕಾಲೇಷುಮುನಿಸತ್ತಮಃ ॥೫॥

ತಾ॥ ಮತ್ತು ತನ್ನ ಭಾರ್ಯೆಯಾದ ಸುದಕ್ಷಿಣೆಯೊಡಗೂಡಿ ಅನೇಕ ದಿವ್ಯ ಭೋಗಗಳನ್ನು ಅನುಭವಿಸುತ್ತಾ ಸಂತೋಷದಿಂದ ಬಹುಕಾಲ ಕಳೆದನು ॥೫॥

ವಸಂತಕಾಲೇಸಂಪ್ರಾಪ್ತೇಭಾರ್ಯಯಾಸಹಿತೋಽನಘಃ ।
ದಿವ್ಯೋದ್ಯಾನವಿಹಾರಾರ್ಥಂಮತಿಂಚಕ್ರೇಮಹಾಮುನಿಃ ॥೬॥

ತಾ॥ ಪಾಪರಹಿತನಾದ ಆ ಮುಕ್ತರಾಜನು ಭಾರ್ಯಾಸಹಿತನಾಗಿ ವಸಂತಕಾಲವು ಪ್ರಾಪ್ತವಾಗಲು ವನವಿಹಾರ ಮಾಡಬೇಕೆಂಬ ಇಷ್ಟವುಳ್ಳವನಾಗಿ ವನವಿಹಾರಕ್ಕೆ ಹೊರಟನು ॥೬॥

ನಿಲಜೀಮೂತಸಂಕಾಶಂಸಮೀಪೇನಗರಸ್ಯಚ ।
ನಾನಾವೃಕ್ಷಸಮಾಕೀರ್ಣಂನಾನಾಪಕ್ಷಿರವಾಕುಲಂ ॥೭॥

ತಾ॥ ಆ ಮುಕ್ತರಾಜನು ಭಾರ್ಯಾಸಹಿತನಾಗಿ ಹೊರಟು ತನ್ನ ಪಟ್ಟಣಕ್ಕೆ ಸಮೀಪವಾಗಿರುವ ನೀಲವರ್ಣ ಮೇಘಕ್ಕೆ ಸಮಾನವಾದ ಅನೇಕ ಮರಗಳಿಂದ ನಿಬಿಡವಾದ ನಾನಾ ವಿಧವಾದ ಪಕ್ಷಿಗಳಿಂದ ಕೂಡಿರುವ ॥೭॥

ದಿವ್ಯೈಃಕುಮುದಕಲ್ಹಾರೈಃಕಮಲೋತ್ಪಲಶೋಭಿತಂ ।
ಹಂಸಕಾರುಂಡವಾಕೀರ್ಣಾಂನ್ನಿರ್ಮಲೋದಕಭಾಸುರೈಃ ॥೮॥

ತಾ॥ ದಿವ್ಯವಾದ ಕುಮುದ ಕಲ್ಹಾರ ಉತ್ಪಲವೇ ಮೊದಲಾದ ಪುಷ್ಪ ಗಿಡಗಳಿಂದಲೂ ಕೊಕ್ಕರೆ ಹಂಸಗಳೇ ಮೊದಲಾದ ನೀರ ಹಕ್ಕಿಗಳಿಂದಲೂ ನಿರ್ಮಿತ ವಾದ ಉದಕದಿಂದ ಪ್ರಕಾಶಿಸುತ್ತಿರುವ ಕೊಳಗಳಿಂದಲೂ ॥೮॥

ಶೈವಾಲಚಯಸಂಛನ್ನೈಃಚಕ್ರವಾಕಸಮಾಕುಲೈಃ ।
ಶೀತಲೋದಕಸಂಪೂರ್ಣೈಃಕಾಸಾರೈರುಪಶೋಭಿತಂ ॥೯॥

ತಾ॥ ಸಣ್ಣಸಣ್ಣದಾಗಿರುವ ಗುಡ್ಡಗಳಿಂದ ಕೂಡಿರುವ ಪ್ರದೇಶಗಳನ್ನೂ ಚಕ್ರವಾಕ ಪಕ್ಷಿಗಳ ಸಮೂಹಗಳಿಂದಲೂ ಸ್ಪರ್ಶಮಾತ್ರದಿಂದಲೇ ಆನಂದವನ್ನುಂಟು ಮಾಡುವ ಶೀತಲೋದಕಗಳಿಂದ ಕೂಡಿದ ಕಾಸಾರಗಳಿಂದಲೂ ಪರಿಪರಿಯಾಗಿ ಆ ವನವು ಶೋಭಿಸುತ್ತಿದ್ದಿತು ॥೯॥

ನಾನಾಮೃಗಗಣೋಪೇತಾಂಲತಾಮಂಟಪಶೋಭಿತಂ ।
ಪ್ರವಿಶ್ಯಮುನಿಶಾರ್ದೂಲೋಭಾರ್ಯಯಾಸಹಿತೋವನಂ ॥೧೦॥

ತಾ॥ ನಾನಾ ಮೃಗಗಳ ಗುಂಪಿನಿಂದ ಕೂಡಿರುವ ಮತ್ತು ಲತಾ ಮಂಟಪ ಗಳಿಂದ ಶೋಭಿಸುತ್ತಿರುವ ಆ ವನವನ್ನು ಮುನಿಶಾರ್ದೂಲನಾದ ಆ ಮುಕ್ತರಾಜನು ಭಾರ್ಯಾಸಹಿತನಾಗಿ ವನವನ್ನು ಪ್ರವೇಶಿಸಿದನು ॥೧೦॥

ಸೂನಶಯ್ಯಾಂತರಾಸೀನಃಪುಷ್ಪಬಾಣಪ್ರಪೀಡಿತಃ ।
ಕ್ರೀಡರ್ತ್ಸ್ವಭಾರ್ಯಯಾಸಾರ್ಥಂನಾನಾಬಂಧವಿಶೇಷತಃ ॥೧೧॥

ತಾ॥ ಪುಷ್ಪಗಳಿಂದ ಮಾಡಲ್ಪಟ್ಟ ಶಯ್ಯಾ ಮಧ್ಯದಲ್ಲಿ ಕುಳಿತು ಮದನಾಸ್ತ್ರ ಪೀಡಿತನಾಗಿ ಚೌಶೀತಿ ಬಂಧನಗಳಿಂದ ತನ್ನ ಹೆಂಡತಿಯಾದ ಸುದಕ್ಷಿಣೆಯೊಡನೆ ಆ ಮುಕ್ತರಾಜನು ಕ್ರೀಡಿಸಿದವನಾದನು ॥೧೧॥

ಪ್ರೀಣಯರ್ತತತ್ರಪದ್ಮಾಕ್ಷಂಬಹುಮನ್ಮಥಚೇಷ್ಟಿತೈಃ ।
ತತೋನ್ಯೈಕುಂಜಭವನಪಾರ್ಶ್ವಸ್ಥೇಚೂತಪಾದತೇ ॥೧೨॥

ತಾ॥ ಈ ರೀತಿಯಾಗಿ ಆ ಮುಕ್ತರಾಜನು ಪ್ರೇಮಭೋಗಗಳನ್ನು ಅನು ಭವಿಸುತ್ತಾ ಕಮಲಗಳಿಂದ ಹುಟ್ಟಿದ ಲಕ್ಷ್ಮಿಯನ್ನು ವರಿಸಿದ ಆ ಶ್ರೀ ಮಹಾ ವಿಷ್ಣುವನ್ನು ಮನದಲ್ಲಿ ಧ್ಯಾನಿಸುತ್ತಾ ಆತನ ಮಗನಾದ ಮನ್ಮಥನ ಬಾಣಗಳಿಂದ ಪ್ರೇರಿತನಾಗಿ ಪತ್ನಿಯೊಡನೆ ಅನೇಕ ಕಾಮಚೇಷ್ಟೆಗಳನ್ನು ಮಾಡುತ್ತಾ ಆ ವನದಲ್ಲಿ ರುವ ವಿಹಾರ ಸೌಧದಲ್ಲಿ ಆನಂದವನ್ನು ಅನುಭವಿಸುತ್ತಾ ಅದರ ಸಮೀಪದಲ್ಲಿರುವ ಮಾವಿನ ಮರವನ್ನು ನೋಡಿದನು ॥೧೨॥

ಕ್ರೀಡನ್ತೌದೃಷ್ಟ್ವಾರ್ತತತ್ರಚಕ್ರನಾವುಕದಂಪತೀ ।
ಅನ್ಯೋನ್ಯಂರತಿಸಂಸಕ್ತೌಮುದವಿಹ್ವಲಕೂಜಿತಾ ॥೧೩॥

ತಾ॥ ಸಮೀಪದಲ್ಲಿರುವ ಮಾವಿನ ಮರದಲ್ಲಿ ವಾಸಿಸುತ್ತಾ ಅನೇಕ ವಿಧ ವಾದ ಮನ್ಮಥ ಕ್ರೀಡೆಗಳನ್ನು ಮಾಡುತ್ತಾ ಪರಸ್ಪರ ಅನ್ಯೋನ್ಯ ಭಾವದಿಂದ ರತಿಯಲ್ಲಿ ಆಸಕ್ತಿಯುಳ್ಳ ಚಕ್ರವಾಕ ಪಕ್ಷಿಗಳೆಂಬ ದಂಪತಿಗಳನ್ನು ಆ ಮುಕ್ತರಾಜನು ನೋಡಿದನು ॥೧೩॥

ಅನ್ಯೋನ್ಯಾಲಾಪಮಧುರೌಕ್ರೀಡಯಾರಕ್ತಲೋಚನೌ ।
ತೌದೃಷ್ಟ್ವಾಮುನಿಶಾರ್ದೂಲೋಭಾರ್ಯಾಮೇತದುವಾಚಸಃ ॥೧೪॥

ತಾ॥ ಈ ರೀತಿಯಾಗಿ ರತಿಕ್ರೀಡೆಗಳಿಂದ ಆಸಕ್ತಿಯುಳ್ಳ ಮದದಿಂದ ವಿರಹ ವನ್ನು ಹೊಂದಿ ರತಿಕ್ರೀಡೆಯಿಂದ ಕೂಡಿದ ಸಂತೋಷಧ್ವನಿಗೈಯುತ್ತಾ ಅನ್ಯೋನ್ಯ ಸಲ್ಲಾಪದಿಂದಲೂ ಸಂತೋಷದಿಂದ ಸುಖಿಸುತ್ತಿದ್ದ ಚಕ್ರವಾಕ ಪಕ್ಷಿಗಳ ಮಿಥುನವನ್ನು ಕಂಡ ಮುನಿಶಾರ್ದೂಲನಾದ ಆ ಮುಕ್ತರಾಜನು ತನ್ನ ಪಕ್ಕದಲ್ಲಿದ್ದ ಹೆಂಡತಿ ಯೊಡನೆ ಪ್ರೀತಿಯಿಂದ ಚಕ್ರವಾಕಪಕ್ಷಿಗಳ ಸಮಾಚಾರವನ್ನು ಹೇಳುತ್ತಾನೆ ॥೧೪॥

ಚಿತ್ರಕನೆಂಬ ಗಂಧರ್ವದಂಪತಿಗಳ ಶಾಪವಿಮೋಚನೆ

ಪಶ್ಯಭದ್ರೇಚಕ್ರವಾಕೌದಂಪತೀರತಿಲಾಲಸೌ ।
ಅವಾವಿವಸವಾವಿಷ್ಟ್ವಾಚೂತಶಾಖಾತರಂಗತೌ ॥೧೫॥
ಇತ್ಯೇವಮುಕ್ತನಾಥೇನದದರ್ಶವನಿತಾತಥಾ ।

ತಾ॥ ಎಲೈ ಮಂಗಳಾಂಗಿಯೇ ರತಿಪಾರವಶ್ಯದಿಂದ ನಮ್ಮ ಹಾಗೆಯೇ ಆ ಮಾವಿನ ಮರದ ಕೊಂಬೆಯಲ್ಲಿ ಕುಳಿತುಕೊಂಡು ರತಿಸುಖ ಪಡುತ್ತಿರುವ ಆ ಚಕ್ರವಾಕ ಪಕ್ಷಿಗಳನ್ನು ನೋಡೆಂದು ಹೇಳಿದ ಗಂಡನಾದ ಮುಕ್ತರಾಜನ ಮಾತನ್ನು ಕೇಳಿ ಆ ಮರದ ಮೇಲಿರುವ ಆ ಪಕ್ಷಿ ದಂಪತಿಗಳನ್ನು ಆ ಸುದಕ್ಷಿಣಾ ದೇವಿಯು ನೋಡಿದಳು ।।೧೫।।೧೫।

ಏತಸ್ಮಿನ್ನಂತರೇಚಕ್ರವಾಕೌದಂಪತೀಸ್ವಯಂ ॥೧೬॥
ಪಕ್ಷಿರೂಪಂಪರಿತ್ಯಜ್ಯದಿವ್ಯಗಂಧರ್ವರೂಪಿಣೌ ।
ತಯೋರ್ದರ್ಶನಮಾತ್ರೇಣಶೀಘ್ರಮೇವಬಭೂವತುಃ ॥೧೭॥

ತಾ॥ ಆ ಮುಕ್ತರಾಜ ಸುದಕ್ಷಿಣೆಯರು ನೋಡುತ್ತಿರುವಷ್ಟರಲ್ಲಿಯೇ ಆ ಮರದ ಮೇಲಿದ್ದ ಚಕ್ರವಾಕ ದಂಪತಿಗಳು ಆ ಮುಕ್ತರಾಜ ಮತ್ತು ಸುದಕ್ಷಿಣಾ ದೇವಿಯು ತಮ್ಮನ್ನು ನೋಡಿದ ಮಾತ್ರದಿಂದಲೇ ಆ ಪಕ್ಷಿ ರೂಪಗಳನ್ನು ತ್ಯಜಿಸಿ ದಿವ್ಯವಾದ ರೂಪವುಳ್ಳ ಗಂಧರ್ವದಂಪತಿಗಳಾದರು ।।೧೬।।೧೭।।

ಅವರುಹ್ಯತತೋವೃಕ್ಷಾತ್‌ಗಂಧರ್ವೌದಂಪತೀತದಾ ।
ನನಾಮತುರ್ಮುಕ್ತಕಂಚಮುಕ್ತಿಕಾಂತಾತಪಸ್ವಿನೀ ॥೧೮॥

ತಾ॥ ಈ ರೀತಿಯಾಗಿ ನಿಜ ಸ್ವರೂಪವನ್ನು ಹೊಂದಿದ ಆ ಗಂಧರ್ವ ದಂಪತಿಗಳು ಮಾವಿನ ಮರದಿಂದಿಳಿದು ಬಂದು ಆ ಮುಕ್ತರಾಜನಿಗೂ ತಪಸ್ವಿನಿ ಯಾಗಿರುವ ಮುಕ್ತಕಾಂತೆಗೂ ನಮಸ್ಕಾರ ಮಾಡಿದರು ।।೧೮।।

ತೌದೃಷ್ಟ್ವಾಮುನಿಶಾರ್ದೂಲೋದಂಪತೀದಿವ್ಯರೂಪಿಣೌ ।
ಪಕ್ಷಿರೂಪಂಪರಿತ್ಯಜ್ಯದಿವ್ಯರೂಪಂಸಮಾಶ್ರಿತಾ ॥೧೯॥
ಕುತೋವಾಸಶ್ಚೂತವೃಕ್ಷೇಸಂಪ್ರಾಪ್ತೇಯುವಯೋಪುನಃ ।
ಇತಿವಿಸ್ಮಯಮಾಪನ್ನೋವಾಕ್ಯಮೇತದುವಾಚಸಃ ॥೨೦॥

ತಾ॥ ತಮಗೆ ನಮಸ್ಕಾರ ಮಾಡುತ್ತಿರುವ ದಿವ್ಯರೂಪಧಾರಿಗಳಾದ ಆ ಗಂಧರ್ವದಂಪತಿಗಳನ್ನು ನೋಡಿ ಮುಕ್ತರಾಜರ್ಷಿಯು ಆಶ್ಚರ್ಯವನ್ನು ಹೊಂದಿ ಕೌತೂಹಲನಾಗಿ ಪಕ್ಷಿರೂಪಿಗಳಾಗಿದ್ದ ಆ ಗಂಧರ್ವರನ್ನು ಕುರಿತು ನಿಮಗೆ ಈ ಮಾವಿನ

ಮರದ ಮೇಲೆ ವಾಸಿಸುವುದಕ್ಕೆ ಯಾವ ಅಪರಾಧ ಕಾರಣಕ್ಕಾಗಿ ಪ್ರಾಪ್ತವಾಯಿತೆಂದು ಆ ಗಂಧರ್ವ ದಂಪತಿಗಳನ್ನು ಕೇಳಿದನು ॥೧೯॥೨೦॥

ಕೌಯುವಾಂರೂಪಸಂಪನ್ನೌಕುತಸ್ತ್ಯೌಕಾಮರೂಪಿಣೌ ।
ವಿಸ್ತಾರೇಣೈವತತ್ಸರ್ವಂವಕ್ತವ್ಯಮಿದಮದ್ಭುತಂ ॥೨೧॥
ಇತಿತದ್ವಚನಂಶ್ರುತ್ವಾಸತ್ವಾಗಂಧರ್ವದಂಪತೀ ।
ಉವಾಚಮುನಿಶಾರ್ದೂಲಂನಿಜವೃತ್ತಾಂತಮದ್ಭುತಂ ॥೨೨॥

ತಾ॥ ಕಾಮರೂಪಿಗಳಾದ ನೀವು ಯಾರು! ಏನು ಕಾರಣದಿಂದ ನಿಮಗೆ ಈ ಪಕ್ಷಿರೂಪವುಂಟಾಗಿದ್ದಿತು ಅದ್ಭುತವಾದ ಈ ವಿಚಾರವನ್ನು ವಿಸ್ತಾರವಾಗಿ ತಿಳಿಸಿರೆಂದು ಕೇಳಿದ ಮುಕ್ತರಾಜನಿಗೆ ಆ ಗಂಧರ್ವದಂಪತಿಗಳು ನಮಸ್ಕಾರಮಾಡಿ ತಮ್ಮ ನಿಜ ವೃತ್ತಾಂತವನ್ನು ಹೇಳತೊಡಗಿದರು ॥೨೧॥೨೨॥

ಶೃಣುಮುಕ್ತಕಭದ್ರಂತೇಮದ್ವೃತ್ತಾಂತಮಶೇಷತಃ ।
ಅಹಂಹಿಚಿತ್ರಕೋನಾಮಗಂಧರ್ವೋಮುನಿಸತ್ತಮಃ ॥೨೩॥

ತಾ॥ ಎಲೈ ಮಂಗಳಕರನಾದ ಮುಕ್ತರಾಜರ್ಷಿಯೇ ನಿನಗೆ ಶುಭವಾಗಲಿ ನಾನು ಚಿತ್ರಕನೆಂಬ ಗಂಧರ್ವನು ನನ್ನ ಸಕಲ ವೃತ್ತಾಂತವನ್ನು ತಿಳಿಸುವೆನು ಮುನಿ ಸತ್ತಮರಾದ ತಾವು ಲಾಲಿಸಬೇಕೆಂದು ಪ್ರಾರ್ಥಿಸಿದನು ॥೨೩॥

ರೂಪಯೌವ್ವನಸಂಪನ್ನಾಚೇಯಂ ಮಮಕುಟುಂಬಿನೀಂ ।
ಆವಾಂಚಾತಿಮದೇನೈವಜಲಕ್ರೀಡಾಸಮುತ್ಸುಕೌ ॥೨೪॥

ತಾ॥ ನಾನು, ರೂಪಸಂಪನ್ನಳಾದ ನನ್ನ ಹೆಂಡತಿಯೂ ಮದನವಿಹ್ವಲರಾಗಿ ಸರೋವರಗಳಲ್ಲಿ ಜಲಕ್ರೀಡೆಯಾಡಬೇಕೆಂದು ಆಶೆಪಟ್ಟವರಾಗಿ ॥೨೪॥

ನಂದನಾಭಿಷೋರನ್ಯೇಷುತಥಾಚೈತ್ರರಥೇಷ್ವಪಿ ।
ವಿಹೃತ್ಯಬಹುಧಾತತ್ರನೂನಸಾಖ್ಯಂಸರೋವರಂ ॥೨೫॥

ತಾ॥ ನಂದನವನ, ಚೈತ್ರರಥ ಮೊದಲಾದ ರಮ್ಯವಾದ ವನಗಳಲ್ಲಿರುವ ಸರೋವರಗಳಲ್ಲಿ ಬಹು ಪ್ರಕಾರವಾಗಿ ಕಾಮಕೇಳೀ ವಿಲಾಸಗಳಿಂದ ವಿಹರಿಸುತ್ತಾ ಆನಂದ ದಿಂದಿರಲು ॥೨೫॥

ಕಮಲೋತ್ಪಲ್ಲಸಂಕೀರ್ಣಂಶೈವಾಲಚಯಸಂಕುಲಂ ।
ಹಂಸಕಾರುಂಡವಾಕೀರ್ಣಂಸ್ವರ್ಣಬಿಂದುಸಮಾಕುಲಂ ॥೨೬॥
ತಂದೃಷ್ಟ್ವಾಪ್ರೀತಿಮಾಪನ್ನೌತತ್ರಕ್ರೀಡಾಕುತೂಹಲೌ ।

ತಾ॥ ಕಮಲ ಕಲ್ಹಾರಾದಿ ಪುಷ್ಪಗಳಿಂದಲೂ ನಿಬಿಡವಾಗಿಬಿಟ್ಟ ಪುಷ್ಪಗಳ ಪಾಚಿಯಿಂದಲೂ ಹಂಸ ಕಾರುಂಡ ಮೊದಲಾದ ಪಕ್ಷಿಗಳ ಕಲಕಲನಾದದಿಂದಲೂ

ಸುವರ್ಣಬಿಂದುಗಳಿಗೆಣೆಯಾದ ಜಲದಿಂದಕೂಡಿದ ಮಾನಸಸರೋವರವನ್ನು ಕಂಡು ಆ ಸರೋವರದಲ್ಲಿ ಜಲಕ್ರೀಡೆಯಾಡಿ ನಮ್ಮಗಳ ಮದನತಾಪವನ್ನು ಶಮನಗೊಳಿಸಿ ಕೊಳ್ಳಲು ಆಸೆಪಟ್ಟವರಾಗಿ ಈ ವನದ ಸರೋವರಕ್ಕೆ ಬಂದೆವು ॥೨೬॥

ಸ್ಥಿತವಂತೌತದಾಕಶ್ಚಿತ್ ಕಾಶ್ಯಪೋಮುನಿಪುಂಗವಃ ॥೨೭॥
ಕೈಲಾಸಶಿಖರಂಪ್ರಾಪ್ಯಪಾರ್ವತೀಶಂಜಗತ್ಪತಿಂ ।
ಪ್ರಣಮ್ಯಭಕ್ತ್ಯಾಸಂಪೂಜ್ಯಬಹುಶೋಮುನಿಪುಂಗವಃ ॥೨೮॥
ತತಸ್ತೇನಾಭ್ಯನುಜ್ಞಾತಃಸ್ವಾಶ್ರಮಂಗಂತುಮುದ್ಯತಃ ।

ತಾ॥ ನಾವು ಆನಂದಕೇಳೀ ಲೋಲರಾಗಿ ಸರೋವರದಲ್ಲಿ ಜಲಕ್ರೀಡೆಯಾಡುತ್ತಿರಲು ಋಷಿಶ್ರೇಷ್ಠನಾದ ಕಶ್ಯಪಮುನಿಯು ಕೈಲಾಸಕ್ಕೆ ತೆರಳಿ ಜಗದೀಶ್ವರನೂ ಅಂಬಿಕಾರಮಣನೂ ಆದ ಪರಮೇಶ್ವರನನ್ನು ಭಕ್ತಿಯಿಂದ ಪೂಜಿಸಿ ನಮಸ್ಕರಿಸಿ ಆ ಪರಮೇಶ್ವರನನ್ನು ಅನೇಕ ರೀತಿಯಿಂದ ಸ್ತುತಿಸಿ ಅನಂತರ ಶಿವನಿಂದ ಅನುಜ್ಞೆಯನು ಪಡೆದು ತನ್ನ ಆಶ್ರಮಕ್ಕೆ ಹಿಂದಿರುಗಿ ಬರುತ್ತಾ ಮಾರ್ಗ-ಮಧ್ಯದಲ್ಲಿ ನಾವಿದ್ದ ಈ ವನದ ಕಡೆಗೆ ಬಂದನು ॥೨೭॥೨೮॥

ಪ್ರಸ್ಥಿತೋನೇನಮಾರ್ಗೇಣಸರಸ್ತೀರೇಣಶೀಘ್ರತಃ ॥೨೯॥
ಭಾರ್ಯಾಯಾಸಹಿತಶೀಘ್ರಂಸಮುತ್ಥಾಯಚಪ್ರೀತಿತಃ ।
ಅಭ್ಯಾಗತಂಚತಂಮುನಿಂವಿಕೃತಘೋರರೂಪಿಣಂ ॥೩೦॥

ತಾ॥ ಆ ಕಶ್ಯಪ ಮುನೀಂದ್ರನು ಹೊರಟು ನಾವು ಕ್ರೀಡಿಸುತ್ತಿರುವ ಸರೋವರದ ಮಾರ್ಗವಾಗಿ ಬರುತ್ತಿರಲು, ನಾನು ಹೆಂಡತಿಯೊಡನೆ ಶೀಘ್ರವಾಗಿ ದಡವನ್ನು ಸೇರಿ ಅಭ್ಯಾಗತನಾಗಿ ಬರುತ್ತಿರುವ ಆ ಮುನಿಯ ಘೋರವಾದ ವಿಕೃತರೂಪವನ್ನು ಕಂಡು ಭಯಪಟ್ಟವರಾಗಿ ॥೨೯॥೩೦॥

ದೃಷ್ಟ್ವಾಪಿಶಾಚಬುದ್ಧ್ಯಾಹಂರೂಪಸಂಪತ್ತಿಗರ್ವಿತಃ ।
ದಾಷಾಣೈಸ್ಸಿಕತಾಪಿಂಡೈಃಮೃತ್ಪಿಂಡೈಶ್ಚವಿಶೇಷತಃ ॥೩೧॥
ಗಚ್ಛಗಚ್ಛಪಿಚಾಶಸ್ತ್ವಂಕಿಮರ್ಥಮಭಿಗಚ್ಛಸೇ ।
ಇತ್ಯುಕ್ತ್ವಾತಂಪ್ರಹೃತ್ಯೈವಂಕೃತನಪ್ರಿಯಂಮಹತ್ ॥೩೨॥

ತಾ॥ ಆ ಮುನಿಯ ರೂಪವನ್ನು ಕಂಡು ನಾವಿಬ್ಬರೂ ಆತನನ್ನು ಪಿಶಾಚವೆಂದು ತಿಳಿದುಕೊಂಡವರಾಗಿ ಕಲ್ಲುಗಳಿಂದಲೂ ಮಣ್ಣಿನವುಂಡೆಗಳಿಂದಲೂ ಮತ್ತು ಸರೋವರ ತೀರದ ಮರಳಿನ ವುಂಡೆಗಳಿಂದಲೂ ಹೊಡೆದು ಎಲೈ ಪಿಶಾಚವೇ! ಹೊರಡು ಹೊರಡು ಇಲ್ಲಿಗೆ ಏಕೆ ಬರುತ್ತಿದ್ದೀಯೆ ಎಂದು ಆ ಮಹರ್ಷಿಯನ್ನು ಬಹು ಪ್ರಕಾರ ಗಳಿಂದ ಬಹುವಾಗಿ ಹಿಂಸೆಯನ್ನು ಮಾಡಿದೆವು ॥೩೧॥೩೨॥

ಏವಂಮಯಾತಾಡಿತಸ್ಸಜ್ವಲದಗ್ನಿಸಮಪ್ರಭಃ ।
ಕೋಪೇನಮಹತಾನಿಷ್ಪ್ರೋಮುನಿಸ್ಸಂರಕ್ತಲೋಚನಃ ॥೩೩॥
ಉವಾಚಪುರುಷಂವಾಕ್ಯಂಅಕ್ಷ್ಣಾಮಾಂನಿರ್ದಹನ್ನಿವ ।

ತಾ॥ ಈ ರೀತಿಯಾಗಿ ನಮ್ಮಿಂದ ಪೀಡಿತನಾಗಿ ಉರಿಯುತ್ತಿರುವ ಬೆಂಕಿಯೋಪಾದಿಯಲ್ಲಿ ಪ್ರಕಾಶಿಸುತ್ತಿರುವ ಆ ಮುನೀಂದ್ರನು ಕೆಂಪಾದ ಕಣ್ಣುಗಳುಳ್ಳವನಾಗಿ ಕೋಪಾದಿಕ್ಯವನ್ನು ತಾಳಿ ನಮ್ಮನ್ನು ಭಸ್ಮಮಾಡುವವನಂತೆ ನೋಡಿದವನಾಗಿ ಮುಂದೆ ಹೇಳುವಂತೆ ಕ್ರೂರವಾದ ವಾಕ್ಯಗಳಿಂದ ಇಂತೆಂದನು ॥೩೩॥

ರೇರೇಮೂಢತ್ವಮುಹ್ಯೇವಭಾರ್ಯಯಾಸಹಿತೋಧ್ರುವಂ ॥೩೪॥
ಚಕ್ರವಾಕಾಕೃತಿಂಪ್ರಾಪ್ಯದುರ್ಗತಿಂಗಸ್ತುಮರ್ಹಸಿ ।

ತಾ॥ ಎಲೈ ಮೂಢನೆ ! ಮದದಿಂದ ಕೂಡಿದ ನೀನು ನಿನ್ನ ಹೆಂಡತಿಯೊಡನೆ ಚಕ್ರವಾಕಪಕ್ಷಿಗಳ ರೂಪವನ್ನು ಧರಿಸಿ ಚಿರಕಾಲ ದುರ್ಗತಿಯನ್ನು ಅನುಭವಿಸುವವನಾಗು ॥೩೪॥

ಇತ್ಯೇವಂಮುನಿನಾಶಪ್ತಃಪಶ್ಚಾತ್ತಾಪಸಮನ್ವಿತಃ ॥೩೫॥
ಪ್ರಣಮ್ಯಮುನಿಶಾರ್ದೂಲಂಶಾಪಾನ್ತಂಪೃಷ್ಟವಾನಹಂ ।

ತಾ॥ ಹೀಗೆಂದು ಶಾಪಕೊಡಲು ಭಯಭೀತನಾಗಿ ಪಶ್ಚಾತ್ತಾಪದಿಂದ ನಾನು ಆ ಮುನಿಶಾರ್ದೂಲನಿಗೆ ನಮಸ್ಕಾರ ಮಾಡಿ ಶಾಪಾಂತಕವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡೆನು ॥೩೫॥

ತತೋಮುನಿರ್ದಯಾಪನ್ನೋಮಾಮಿಗಂವಾಕ್ಯಮಬ್ರವೀತ್ ॥೩೬॥
ಮುಕ್ತಕೋನಾಮರಾಜರ್ಷಿಶ್ಶಿವಮಾನಸಸಂಭವಃ ।

ತಾ॥ ಹೀಗೆ ಬಹುಪ್ರಕಾರವಾಗಿ ಪ್ರಾರ್ಥಿಸಿದ ನನ್ನನ್ನು ನೋಡಿದಾನಂತರ ಆ ಮುನೀಂದ್ರನು ದಯಾಂತರಂಗನಾಗಿ ನನ್ನೊಡನೆ ಹೇಳಿದ್ದೇನೆಂದರೆ ಕಾಲಕ್ರಮದಲ್ಲಿ ಸಾಕ್ಷಾತ್ ಪರಮೇಶ್ವರನ ಮಾನಸ ಪುತ್ರನಾದ ಮುಕ್ತಕನೆಂಬ ರಾಜರ್ಷಿಯು ॥೪೬॥

ಭಾರ್ಯಯಾಸಹಿತಶ್ಶ್ರೀಮಾನ್‌ವನಕ್ರೀಡಾಸಮನ್ವಿತಃ ॥೩೭॥
ನಾನಾಪುಷ್ಪಲತಾಕೀರ್ಣೇದೇವತೋಧ್ಯಾನಸನ್ನಿಭೇ ।

ತಾ॥ ಸರ್ವಶ್ರೀಮಂತನಾದ ಆ ಮುಕ್ತರಾಜನು ತನ್ನ ಹೆಂಡತಿಯೊಡನೆ ಕೂಡಿವನವಿಹಾರಾರ್ಥವಾಗಿ ದೇವಲೋಕೋಧ್ಯಾನದಂತೆಯೂ ನಾನಾವೃಕ್ಷಗಳಿಂದಲೂ, ಲತೆಗಳಿಂದಲೂ ನಿಬಿಡವಾಗಿರುವ ಈ ಉಧ್ಯಾನವನಕ್ಕೆ ಬಂದಾಗ ॥೩೭॥

ಮಹೋದ್ಯಾನೇರತಿಕ್ರಾಂತಂತ್ವಾಂಯದಾವೀಕ್ಷತೇಮುನಿಃ ॥೩೭॥
ತದಾಶಾಪವಿನಿರ್ಮುಕ್ತಸ್ಸರೂಪಂಗಸ್ತುಮರ್ಹಸಿ ।

ತಾ॥ ಈ ರೀತಿಯಾಗಿ ಕ್ರೀಡಾವಿಹಾರಕ್ಕಾಗಿ ಬರುವ ಆ ಮುನಿಪುಂಗವನಾದ ಮುಕ್ತರಾಜನು ಈ ಮಹಾ ವನದಲ್ಲಿ ತನ್ನ ಸತಿಯೊಡನೆ ಕ್ರೀಡೆಯಲ್ಲಿರುವ ಸಮಯ ದಲ್ಲಿ ಆ ಮುಕ್ತರಾಜ ದಂಪತಿಗಳು ಕ್ರೀಡಾರತಿಯಲ್ಲಿರುವ ನಿನ್ನನ್ನು ನೋಡುವರೋ ಆಗ ನನ್ನ ಶಾಪದಿಂದ ಮುಕ್ತರಾಗಿ ನಿಜರೂಪವನ್ನು ಹೊಂದುವಿರಿ ॥೩೮॥

ಇತ್ಯುಕ್ತ್ವಾಮುನಿಶಾರ್ದೂಲೋಪ್ರಯಯೌಸ್ವಾಶ್ರಮಂಪ್ರತಿ ॥೩೯॥
ತದಾಪ್ರಭೃತಿತಿಷ್ಠಾವಿತ್ವದಾಗಮನಕಾಂಕ್ಷಯಾ ।

ತಾ॥ ಹೀಗೆಂದು ಹೇಳಿ ಆ ಮುನಿಶಾರ್ದೂಲನಾದ ಕಶ್ಯಪ ಋಷಿಯು ತನ್ನ ಆಶ್ರಮಕ್ಕೆ ಹೊರಟುಹೋದನು ಆ ಕಾಲದಿಂದಲೂ ಶುಭ ಶ್ರೀಮಂತನಾದ ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಾ ಈ ಮರದಲ್ಲಿ ವಾಸಿಸುತ್ತಿದ್ದೆವು ॥೩೯॥

ಇದಾನೀಂಭವತಶ್ಶ್ರೀಮದ್ದರ್ಶನಾದೇವಶೀಘ್ರತಃ ॥೪೦॥
ನಿರ್ಮುಕ್ತೋಶ್ಶಾಪಸಂಭೂತೋಬಾರ್ಯಯಾಸಹಿತೊಹ್ಯಹಂ ।
ಗಂತುಂಮದೀಯಭವನಂಅನುಜ್ಞಾತುಂತ್ವಮರ್ಹಸಿ ॥೪೧॥
ಇತ್ಯುಕ್ತೋಮುನಿಶಾರ್ದೂಲಃಪ್ರೀತಿವಿಸ್ತಾವಿತೇಕ್ಷಣಃ ।

ತಾ॥ ಈ ಕಾಲಕ್ಕೆ ಶುಭಕರವಾದ ನಿಮ್ಮಗಳ ದರ್ಶನ ಮಾತ್ರದಿಂದಲೇ ಶಾಪ ವಿಮುಕ್ತಿಯನ್ನು ಹೊಂದಿ ಹೆಂಡತಿಯೊಡನೆ ನಿಜರೂಪವನ್ನು ಹೊಂದಿದೆನು ಇನ್ನು ನನ್ನ ಗೃಹವನ್ನು ಸೇರಲು ನಿಮ್ಮ ಅಪ್ಪಣೆಯನ್ನು ಬೇಡುತ್ತಿರುವೆನೆಂದು ಹೇಳಿದ ಆ ಗಂಧರ್ವದಂಪತಿಗಳ ನುಡಿಗಳನ್ನು ಕೇಳಿದ ಮುನಿಶ್ರೇಷ್ಠನಾದ ಆ ಮುಕ್ತರಾಜನು ಪ್ರೇಮ ದಿಂದಕೂಡಿದ ವಿಶಾಲವಾದ ನೇತ್ರಗಳುಳ್ಳವನಾಗಿ ಪ್ರೀತಿಯಿಂದ ಇಂತೆಂದನು॥೪೦॥೪೧॥

ಗಂಧರ್ವಂಮಾನಯಾಮಾಸಸಭಾರ್ಯಂಬಹುದಸ್ತದಾ ॥೪೨॥
ತತಸ್ತೇನಾಭ್ಯನುಜ್ಞಾತಃಗಂಧರ್ವೋಭಾರ್ಯಯಾಸಹ ।
ಮುದಾಪರಮಯಾಯುಕ್ತಃಪ್ರಯಯೌಸ್ವಪುರಂಪ್ರತಿ ॥೪೩॥

ತಾ॥ ಆ ಮುಕ್ತರಾಜನು ಪರಮಪ್ರೀತಿಯುಳ್ಳವನಾಗಿ ಆ ಗಂಧರ್ವದಂಪತಿ ಗಳನ್ನು ನಾನಾವಿಧ ಉಪಚಾರಗಳಿಂದ ಆದರಿಸಿ ಸಂತೋಷ ಪಡಿಸಲು ಆ ಗಂಧರ್ವ ದಂಪತಿಗಳು ಮುಕ್ತರಾಜನ ಅಪ್ಪಣೆ ಪಡೆದು ತಮ್ಮ ಗಂಧರ್ವಲೋಕದ ಸ್ವಗೃಹಕ್ಕೆ ಹೊರಟು ಹೋದರು ॥೪೨॥೪೩॥

ಮುಕ್ತಕೋಪಿಮಹಾಬಾಹುಃತದಾವಿಸ್ಮಿತಮಾನಸಃ ।
ಭಾರ್ಯಯಾಸಹಿತಶ್ಶೀಘ್ರಂಪ್ರಯಯೌನಿಜಮಂದಿರಂ ॥೪೪॥

ತಾ॥ ಈ ರೀತಿಯಾಗಿ ತನ್ನಿಂದ ಅಪ್ಪಣೆ ಪಡೆದುಹೋದ ಗಂಧರ್ವದಂಪತಿಗಳ ವಿಚಾರದಲ್ಲಿ ಆಶ್ಚರ್ಯಯುಕ್ತನಾಗಿ ಕೂಡಲೆ ಮುಕ್ತರಾಜನು ತನ್ನ ಹೆಂಡತಿಯೊಡನೆ ಹೊರಟು ತನ್ನ ಪಟ್ಟಣದ ಅರಮನೆಯನ್ನು ಸೇರಿದನು ॥೪೪॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮುಕ್ತಕೋಪಾಖ್ಯಾನೇ ಚಿತ್ರಕಾಖ್ಯಗಂಧರ್ವ ಶಾಪವಿಮೋಚನಂ ನಾಮ ಚತುರ್ದಶೋಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತಕೋಪಾಖ್ಯಾನದ ಚಿತ್ರಕನೆಂಬ ಗಂಧರ್ವನ ಶಾಪವಿಮೋಚನವೆಂಬ ಹದಿನಾಲ್ಕನೇ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿನೈದನೆಯ ಅಧ್ಯಾಯ :-

ಮುಕ್ತರಾಜನ ರಾಜ್ಯಭಾರ

ನಾರದ ಉವಾಚ :-

ತತಃಪರಂಕಿಂಕೃತವಾನ್ಮುಕ್ತಕೋಮುನಿಪುಂಗವಃ ।
ತದ್ವೃತ್ತಾಂತಮಶೇಷೇಣವಕ್ತುಮರ್ಹಸಿಹೇಪ್ರಭೋ ॥೧॥

ತಾ॥ ದೇವತೆಗಳಿಗೆಲ್ಲಾ ಪ್ರಭುವಾದ ಬ್ರಹ್ಮದೇವನೇ ! ತದನಂತರ ಆ ಮುನಿ ಶ್ರೇಷ್ಠನಾದ ಮುಕ್ತರಾಜನು ಏನುಮಾಡಿದನು ಆತನ ವೃತ್ತಾಂತವನ್ನೆಲ್ಲಾ ಸಂಪೂರ್ಣ ವಾಗಿ ತಿಳಿಸಬೇಕೆಂದು ನಾರದನು ಪ್ರಾರ್ಥಿಸಿದನು ॥೧॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮಶೇಷತಃ ।
ಮುಕ್ತಕೋನಾಮರಾಜರ್ಷಿರ್ಭಾರ್ಯಯಾಸಹಿತೋನಘಃ ॥೨॥

ತಾ॥ ಎಲೈ ನಾರದನೇ ! ಆ ಮುಕ್ತರಾಜನ ಎಲ್ಲಾ ವೃತ್ತಾಂತವನ್ನು ವಿಸ್ತಾರ ವಾಗಿ ಹೇಳುತ್ತೇನೆ. ಕೇಳು ಪಾಪರಹಿತನೂ ಧೀಮಂತನೂ ಶ್ರೇಷ್ಠನೂ ಆದ ಆ ಮುಕ್ತರಾಜನು ತನ್ನ ಹೆಂಡತಿಯೊಡನೆ ॥೨॥

ವ್ಯೋಮಯಾನಂಸಮಾರುಹ್ಯಕೋಟಿಸೂರ್ಯಸಮಪ್ರಭಃ ।
ತತ್ರತತ್ರವಿಚಿತ್ರೇಷುರಮ್ಯೇಷೂಪವನೇಷುಚ ॥೩॥

ತಾ॥ ಕೋಟಿಸೂರ್ಯ ಪ್ರಕಾಶಮಾನವಾದ ವಿಮಾನದಲ್ಲಿ ಆ ಮುಕ್ತರಾಜನು ಹೆಂಡತಿಯ ಸಹಿತ ಕೂತವನಾಗಿ ಆಕಾಶಮಾರ್ಗದಲ್ಲಿ ಹೋಗುತ್ತಾ ಭೂಮಿಯಲ್ಲಿರುವ ಚಿತ್ರವಿಚಿತ್ರವಾದ ಸ್ಥಳಗಳನ್ನೂ ಅಲ್ಲಲ್ಲಿ ಕಾಣುವ ದಿವ್ಯವಾದ ವನಗಳಲ್ಲಿ ಸಂಚರಿ ಸುತ್ತಾ ॥೩॥

ತಟಾಕಾದಿಷುದಿವ್ಯೇಷುದೀರ್ಘಿಕಾಸುತತಸ್ತತಃ ।
ವಿಹರನ್ಭಾರ್ಯಯಾಸಾರ್ಧಂಸರ್ವಭೋಗೈಸ್ಸಮಂತಕಃ ॥೪॥

ತಾ॥ ದಿವ್ಯವಾದ ಮತ್ತು ವಿಶಾಲವಾದ ಕೆರೆಗಳಲ್ಲಿಯೂ ಸರೋವರಗಳಲ್ಲಿಯೂ ಭಾರ್ಯಾಸಹಿತನಾದ ಆ ಮುಕ್ತರಾಜನು ವಿಹಾರಮಾಡುತ್ತಾ ಸಂತೋಷಯುಕ್ತನಾಗಿ ಸಮಸ್ತ ಭೋಗಗಳನ್ನು ಅನುಭವಿಸಿದನು ॥೪॥

ಮುದಾಪರಮಯಾಯುಕ್ತೋಬಂಧುಮಿತ್ರಸಮಾವೃತಃ ।
ಹಿತಚಾನಸಪದ್ಯೈಶ್ಚಾನಿತಥಾಪ್ರಿಯಹಿತೈಷಿಭಿಃ ॥೫॥

ತಾ॥ ಮತ್ತು ಬಂಧುಮಿತ್ರ ಹಿತೈಷಿಗಳಿಂದ ಪರಿವೃತನಾಗಿ ಅವರಿಂದ ಪೂಜಿಸಲ್ಪಡುತ್ತಾ ಆ ಮುಕ್ತರಾಜನು ಪರಮ ಸಂತೋಷದಿಂದಿದ್ದನು ॥೫॥

ಪೂಜಿತಶ್ಚಬಹೂನ್ಕಾಲಾನ್ನಯನ್ತತ್ರಾವಸನ್ಮುನಿಃ ।
ಏವಂಕ್ರಮೇಣಕಾಲೇಷುಗಚ್ಛತ್ಸ್ವಪಿಮಹಾತ್ಮನಃ ॥೬॥
ನಾಭವತ್ಪುತ್ರಸಂಪತ್ತಿರ್ಮುಕ್ತಕಸ್ಯಮಹಾತ್ಮನಃ ।
ಅಪುತ್ರಸ್ಯಗತಿರ್ನಾಸ್ತೀತ್ಯೇವಂಮನಸಿಚಿಂತಿತಃ ॥೭॥

ತಾ॥ ಈ ರೀತಿಯಾಗಿ ಆ ಮುಕ್ತರಾಜನು ಸರ್ವರಿಂದಲೂ ಪೂಜಿಸಲ್ಪಟ್ಟವನಾಗಿ ಅನೇಕ ಕಾಲ ಸುಖದಿಂದ ತನ್ನ ಪಟ್ಟಣವನ್ನಾಳುತ್ತಿದ್ದರೂ ಎಷ್ಟು ಕಾಲವಾದರೂ ಮಹಾತ್ಮನಾದ ಆ ಮುಕ್ತರಾಜನಿಗೆ ಪುತ್ರಸಂತಾನವು ಪ್ರಾಪ್ತಿಸಲಿಲ್ಲವಾದ್ದರಿಂದ ಆತನು ತನ್ನ ಮನಸ್ಸಿನಲ್ಲಿ ಪುತ್ರರಿಲ್ಲದವನಿಗೆ ಗತಿ ಇಲ್ಲ ಎಂಬುದನ್ನು ನೆನಸಿಕೊಂಡು ಹೀಗೆಂದು ಚಿಂತಿಸತೊಡಗಿದನು ॥೬॥೭॥

ನಾನಾವನೇಷುರಮ್ಯೇಷುತಪಸ್ತಪ್ತ್ವಾಮಹಾಮುನಿಃ ।
ಯಾಗಾನಪಿಮಹಾಬಾಹುರಶ್ವಮೇಧಾಧಿಕಾನ್ಬಹೂನ್ ॥೮॥

ತಾ॥ ಆ ಮುಕ್ತರಾಜನು ಹೆಂಡತಿಯೊಡಗೂಡಿ ಪುತ್ರರಿಗಾಗಿ ಅನೇಕ ವನಗಳಲ್ಲಿ ಕುಳಿತು ಭಕ್ತಿಯಿಂದ ಪರಮಾತ್ಮನ ಧ್ಯಾನಮಾಡಿದನು ಮತ್ತು ಮಹಾಮುನಿಯಾದ ಆ ಮುಕ್ತರಾಜನು ಅಶ್ವಮೇಧವೇ ಮೊದಲಾದ ಅನೇಕ ಯಾಗಗಳನ್ನು ಮಾಡಿದರೂ ಪುತ್ರಸಂತಾನವಾಗಲಿಲ್ಲ

ವಿಧಾಯಚತಟಾಕಾನಿತತ್ರತತ್ರವಿಶೇಷತಃ ।
ನಲೇಭೇಪುತ್ರಸಂಪತ್ತಿಂಮುಕ್ತಕೋಮುನಿಪುಂಗವಃ ॥೯॥

ತಾ॥ ಮನೋಹರವಾದ ಅನೇಕ ತಟಾಕಾದಿಗಳನ್ನು ನಿರ್ಮಿಸಿದರೂ ಕೂಡ ಆ ಮುನಿಪುಂಗವನಾದ ಮುಕ್ತರಾಜನಿಗೆ ಪುತ್ರಸಂತಾನ ಪ್ರಾಪ್ತವಾಗಲಿಲ್ಲ ॥೯॥

ವಿಶ್ವಾಮಿತ್ರಾಗಮನ

ಏತಸ್ಮಿನ್ನಂತರೇಕಶ್ಚಿತ್ ಆಗತೋಮುನಿಪುಂಗವಃ ।
ವಿಶ್ವಾಮಿತ್ರೇತಿವಿಖ್ಯಾತೋಮಹಾತ್ಮಾಜಗತಾಂವರಃ ॥೧೦॥

ತಾ॥ ಈ ರೀತಿಯಾಗಿ ಕೆಲಕಾಲಾನಂತರ ಲೋಕವಿಖ್ಯಾತನೂ ಮಹಾತಪಸ್ವಿಯೂ ಮುನಿಶ್ರೇಷ್ಟನೂ ಆದ ವಿಶ್ವಾಮಿತ್ರಋಷಿಯು ಆ ಮುಕ್ತರಾಜನ ಬಳಿಗೆ ಬಂದನು ॥೧೦॥

ತವಾಯಾನ್ತಂಮಹಾಭಾಗಪ್ರತ್ಯುದ್ಗಮ್ಯಯಥಾಮತಿ ।
ಸಂಪೂಜ್ಯವಿಧಿವದ್ಯೋಗಿವರ್ಯಂಸ್ವಭವನಂಮಹತ್ ॥೧೧॥

ತಾ॥ ಅಥಿತಿಯಾಗಿ ಬಂದಿರುವ ಆ ವಿಶ್ವಾಮಿತ್ರಋಷಿಯನ್ನು ಮುಕ್ತರಾಜನು ಹೆಂಡತಿಯೊಡಗೂಡಿ ಆ ಮಹರ್ಷಿಗೆ ಅರ್ಘ್ಯಪಾದ್ಯಾಚಮನಗಳನ್ನು ಮಾಡಿ ಪೂಜೆ ಮಾಡಿದನಂತರ ನಮಸ್ಕಾರಗಳನ್ನು ಮಾಡಿ ಆ ಮಹರ್ಷಿಯನ್ನು ತಮ್ಮ ಅರಮನೆಗೆ ಕರೆದುತಂದರು ॥೧೧॥

ಪ್ರಾಪಯಿತ್ವಾಋಷಿಶ್ರೇಷ್ಠಂಭಾರ್ಯಯಾಸಹಿತೋಽನಘಃ।
ಪೂಜಯಾಮಾಸಬಹುಶಃಆತಿಥ್ಯೈಶ್ರದ್ಧಯಾನ್ವಿತಃ ॥೧೨॥

ತಾ॥ ಈ ರೀತಿಯಾಗಿ ಅರಮನೆಗೆ ಕರೆತಂದ ಬಳಿಕ ಆ ಮುಕ್ತರಾಜ ದಂಪತಿಗಳು ಅತಿಥಿಯಾಗಿ ಬಂದಿರುವ ವಿಶ್ವಾಮಿತ್ರಮುನಿಯನ್ನು ಅತಿ ಶ್ರದ್ಧಾಭಕ್ತಿ ಗಳಿಂದ ಪೂಜಾದಿ ಷೋಡಶೋಪಚಾರಗಳಿಂದ ಪೂಜಿಸಿದರು ॥೧೨॥

ತತ್ರೈವಮುಕ್ತಕಾಖ್ಯೇನಋಷಿಣಾಪೂಜಿತೋಮುನಿಃ ।
ವಿಶ್ವಾಮಿತ್ರೋಮಹಾಭಾಗೋವಾಕ್ಯಮೇತದುವಾಚಹ ॥೧೩॥
ಶೃಣುಮುಕ್ತಕರಾಜರ್ಷೇಪ್ರೀತೋಽಹಂತ್ವತ್ಸಪರ್ಯಯಾ ।

ತಾ॥ ಈ ರೀತಿಯಾಗಿ ಮುಕ್ತರಾಜ ದಂಪತಿಗಳಿಂದ ಪೂಜಿತನಾದ ಮಹಾತ್ಮ ನಾದ ಆ ವಿಶ್ವಾಮಿತ್ರಋಷಿಯು ಪ್ರಸನ್ನನಾಗಿ ಕೇಳೈ ಮುಕ್ತರಾಜನೇ ನಿನ್ನ ಸೇವೆಯಿಂದ ನಾನು ಸರ್ವಪ್ರಕಾರವಾಗಿ ಸುಪ್ರೀತನಾಗಿರುತ್ತೇನೆ ॥೧೩॥

ವರಂವೃಣೀಷ್ವಭದ್ರಂತೇದಾಸ್ಯಾಮಿಮುನಿಪುಂಗವ ॥೧೪॥
ಮುದಾಪರಮಯಾಯುಕ್ತೋವಾಕ್ಯಮೇವಮಥಾಬ್ರವೀತ್ ।

ತಾ॥ ಎಲೈ ಮುಕ್ತರಾಜನೇ ನಿನಗೆ ಶುಭವಾಗಲಿ ವರವನ್ನು ಬೇಡು ಕೊಡುತ್ತೇ ನೆಂದು ಹೇಳಲು ಆ ವಾಕ್ಯವನ್ನು ಕೇಳಿ ಸಂತೋಷಗೊಂಡ ಮುಕ್ತರಾಜ ನಿಂತೆಂದನು ॥೧೪॥

ವಿಶ್ವಾಮಿತ್ರಮಹಾಭಾಗಯದಿಪ್ರೀತೋಸಿಪೂಜಯಾ ॥೧೫॥
ಅಪುತ್ರಸ್ಯಗತಿರ್ನಾಸ್ತಿಇತಿಪೂರ್ವಂಮಯಾಶ್ರುತಂ ।

ತಾ॥ ಎಲೈ ಮಹಾತ್ಮನಾದ ವಿಶ್ವಾಮಿತ್ರನೇ ! ನನ್ನ ಪೂಜೆಯಿಂದ ನೀನು ಸುಪ್ರೀತನಾಗಿದ್ದಲ್ಲಿ ಅಪುತ್ರವಂತನಿಗೆ ಗತಿ ಇಲ್ಲವೆಂದು ಶಾಸ್ತ್ರ ಲೋಕ ಶ್ರುತವು ಇರುವುದರಿಂದ ॥೧೫॥

ನಾಸ್ತಿಮೇಪುತ್ರಸಂಪತ್ತಿಸ್ತದ್ವರಂದಾತುಮರ್ಹಸಿ ॥೧೬॥
ದಿತ್ಯೇವಮುಕ್ತೋಮುನಿನಾವಿಶ್ವಾಮಿತ್ರೋಮಹಾಮುನಿಃ ।

ತಾ॥ ಎಲೈ ಮಹಾತ್ಮನಾಗಿಯೂ ಸಕಲ ವಿಶ್ವಕ್ಕೂ ಮಿತ್ರನಾಗಿಯೂ ಇರುವ ವಿಶ್ವಾಮಿತ್ರನೇ ನೀನು ನನ್ನ ಆ ಆಸೆಗೆ ಪುತ್ರಸಂತಾನವಾಗುವಂತೆ ವರವನ್ನು ದಯ ಪಾಲಿಸಬೇಕೆಂದು ಆ ಮುಕ್ತರಾಜನು ಕೇಳಿದನು ॥೧೬॥

ವಿಚಿಂತ್ಯಸುಚಿರಂತತ್ರವಾಕ್ಯಮೇತದುವಾಚಹ ॥೧೭॥
ಶೃಣುಮುಕ್ತಕರಾಜರ್ಷೇಮದ್ವಾಕ್ಯಂಶ್ರದ್ಧಯಾನ್ವಿತಃ ।

ತಾ॥ ಆ ಮುಕ್ತರಾಜನ ವರದ ಮಾತನ್ನು ಕೇಳಿದ ವಿಶ್ವಾಮಿತ್ರಋಷಿಯು ಮನಸ್ಸಿನಲ್ಲಿ ಯೋಚಿಸಿ ಸ್ವಲ್ಪಕಾಲದನಂತರ ಮುಕ್ತರಾಜನೇ ನಾನು ಹೇಳುವ ವಿಷಯ ವನ್ನು ಶ್ರದ್ಧಾಸಕ್ತಿಯಿಂದ ಆಲಿಸೆಂದನು ॥೧೭॥

ಆರಾಧಯಾಮಹಾಭಾಗಂಮಾರ್ತಾಂಡಂಲೋಕಸಾಕ್ಷಿಣಂ ॥೧೮॥
ತತಸ್ತೇಪುತ್ರಸಂಪತ್ತಿರ್ಭವಿಷ್ಯತಿನಸಂಶಯಃ ।

ತಾ॥ ನೀನು ಭಾರ್ಯಾಸಮೇತನಾಗಿ ಭಕ್ತಿಶ್ರದ್ಧೆಗಳಿಂದ ಕೂಡಿ ಲೋಕಸಾಕ್ಷಿ ಯಾದ ಸೂರ್ಯ ಭಗವಾನನನ್ನು ಆರಾಧಿಸು ನಿನಗೆ ಪುತ್ರ ಸಂತಾನವಾಗುತ್ತದೆ ಇದರಲ್ಲಿ ಸಂದೇಹವಿಲ್ಲವೆಂದು ಮುಕ್ತರಾಜನಿಗೆ ವಿಶ್ವಾಮಿತ್ರಋಷಿಯು ಹೇಳಿದನು ॥೧೮॥

ಇತ್ಯುಕ್ತ್ವಾಮುನಿಶಾರ್ದೂಲೋಪ್ರಯಯೌಚಯಥಾಗತಂ ॥೧೯॥
ತತೋಮುಕ್ತಕರಾಜರ್ಷಿರ್ಭಾರ್ಯಯಾಸಹಿತೋನಘಃ ।

ತಾ॥ ಈ ರೀತಿಯಾಗಿ ಮುಕ್ತರಾಜ ದಂಪತಿಗಳಿಗೆ ಹೇಳಿ ಆ ವಿಶ್ವಾಮಿತ್ರ ಮುನಿಯು ತನ್ನ ಆಶ್ರಮಕ್ಕೆ ಹೊರಟು ಹೋದನು. ತದನಂತರ ಆ ಮುಕ್ತರಾಜನು ಸೂರ್ಯಭಗವಾನನನ್ನು ಆರಾಧಿಸಲು ಹೆಂಡತಿಯೊಡನೆ ಹೊರಟನು ॥೧೯॥

ಸೂರ್ಯೋಪಾಸನೆ

ಪೂಜಿತಂಭಾಸ್ಕರಂದೇವಂ ಸಮುತ್ಕಂಠಿತಮಾನಸಃ ॥೨೦॥
ಆದಾಯಸರ್ವಸಂಭಾರಾನ್ಪುರೋಹಿತಜನೈಸ್ಸಹ ।

ತಾ॥ ಹಾಗೆ ಹೊರಟ ಮುಕ್ತರಾಜನು ಸೂರ್ಯ ದೇವನನ್ನು ಪೂಜಿಸಲು ಸಕಲ ಪೂಜಾದ್ರವ್ಯಾದಿಗಳನ್ನೂ ಶಾಸ್ತ್ರ ಸಮ್ಮತದಿಂದ ಪೂಜೆಯನ್ನು ಮಾಡಿಸಲು ಆಚಾರ್ಯ ಪುರುಷರಾದ ಪುರೋಹಿತರನ್ನೂ ಸಂಗಡ ಕರೆದುಕೊಂಡು ಹೊರಟನು ॥೨೦॥

ಪ್ರಯಯೌಸ್ವರ್ನದೀತೀರಂ ಮಕರಸ್ಥೇದಿವಾಕರೇ ॥೨೧॥
ತತ್ರಗತ್ವಾಮಹಾಭಾಗಃಸ್ನಾತ್ವಾವಿಗತಕಲ್ಮಷಃ ।

ತಾ॥ ಈ ರೀತಿಯಾಗಿ ಸಕಲ ಸಾಮಾಗ್ರಿ ಸಹಿತನಾಗಿ ದೇವ ಗಂಗೆಯ ನದೀ ತೀರಕ್ಕೆ ಬಂದು ಭಗವಂತನಾದ ಸೂರ್ಯದೇವನು ಮಕರ ರಾಶಿಯನ್ನು ಪ್ರವೇಶಿ

ಸುತ್ತಿರಲು ಪತ್ನೀ ಸಮೇತನಾಗಿ ಶುದ್ಧ ಮನಸ್ಸಿನಿಂದ ಸಕಲ ಪಾಪಹಾರಕಳಾದ ಗಂಗೆಯಲ್ಲಿ ಮುಕ್ತರಾಜನು ಪತ್ನೀಸಮೇತನಾಗಿ ಸ್ನಾನ ಮಾಡಿದನು ।।೨೦।।

ಧೃತ್ವಾವಿಶುದ್ಧವಸ್ತ್ರಾಣಿಶುಚಿರ್ಭೂತ್ವಾಸಮಾಹಿತಃ ॥೨೨॥
ತತಶ್ಶುಭೇಮುಹೂರ್ತೇತುಭಾರ್ಯಯಾಸಹಿತೋಮುನಿಃ ।

ತಾ॥ ಈ ರೀತಿಯಾಗಿ ದೇವ ಗಂಗೆಯಲ್ಲಿ ಸ್ನಾನ ಮಾಡಿದ ಆ ಮುಕ್ತರಾಜ ದಂಪತಿಗಳು ತಮ್ಮ ಮಲಿನ ವಸ್ತ್ರಗಳನ್ನು ಬಿಟ್ಟು ಶುಚಿರ್ಭೂತರಾಗಿ ನೂತನ ವಸ್ತ್ರ ಗಳನ್ನು ಧರಿಸಿದವಳಾಗಿ ಶುಭ ಮುಹೂರ್ತದಲ್ಲಿ ಭಗವಂತನನ್ನು ಆರಾಧಿಸಲು ಭಾರ್ಯಾ ಸಹಿತನಾಗಿ ಆ ಮುಕ್ತರಾಜನು ।।೨೨।।

ವರ್ತುಲಂಮಂಡಲಂಕೃತ್ವಾಸೂರ್ಯಬಿಂಬಸಮಪ್ರಭಂ ।।೨೩॥
ತತ್ರಾಷ್ಟದಳಪದ್ಮಂಚ ತನ್ಮಧ್ಯೇಲೋಕಸಾಕ್ಷಿಣಂ ।
ಸಮಾವಾಹ್ಯಚಯೋಗೀಂದ್ರೋವೇದೋಕ್ತವಿಧಿನಾತತಃ ॥೨೪॥

ತಾ॥ ಮಹರ್ಷಿಗಳಿಂದ ಸಂಕಲ್ಪವನ್ನು ಹೊಂದಿ ಗಂಧಪುಷ್ಪಾಕ್ಷತೆಗಳನ್ನು ಪೂಜಾದ್ರವ್ಯಗಳನ್ನು ಸಿದ್ಧಪಡಿಸಿಕೊಂಡು ಸೂರ್ಯ ಬಿಂಬದಂತೆ ಗುಂಡಾಗಿ ಮಂಡಲವನ್ನು ರಚಿಸಿ ಆದರಲ್ಲಿ ಅಷ್ಟದಳ ಪದ್ಮವನ್ನು ರಚಿಸಿ ಅದರ ಮಧ್ಯೆ ಲೋಕಸಾಕ್ಷಿಯಾದ ಸೂರ್ಯ ದೇವನನ್ನು ಆವಾಹನೆ ಮಾಡಿ ಯೋಗೀಂದ್ರನಾದ ಆ ಮುಕ್ತರಾಜನು ವೇದೋಕ್ತ ವಿಧಿಯಿಂದ ಪೂಜೆಯನ್ನು ಪ್ರಾರಂಭಿಸಿದನು ।।೨೩।।೨೪।।

ಪೂಜಯಾಮಾಸಸಪ್ತಾಶ್ವಂಋಗ್ಯಜುಸ್ಸಾರೂಪಿಣಂ ।
ತತಃಪೂಜಾವಸಾನೇಷುಸಂಸ್ತೋತುಮುಪಚಕ್ರಮೇ ॥೨೫॥

ತಾ॥ ರಥಕ್ಕೆ ಏಳು ಕುದುರೆಗಳುಳ್ಳವನೂ ಋಗ್ವೇದ, ಯಜುರ್ವೇದ ಸಾಮ ವೇದಗಳೆಂಬ ತ್ರಿಮೂರ್ತ್ಯಾರ್ಥಿಕವಾದ ರೂಪವುಳ್ಳವನೂ ಆದ ಸೂರ್ಯ ಭಗವಾನನನ್ನು ಷೋಡಶೋಪಚಾರಗಳಿಂದ ಪೂಜಿಸಿ ಅನಂತರ ಭಗವಂತನನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು ।।೨೫।।

ನಮೋಭಗವತೇತುಭ್ಯಂನಮಸ್ತೇಲೋಕಸಾಕ್ಷಿಣೇ ।
ಭಾಸ್ಕರಾಯನಮಸ್ತೇಽಸ್ತು ಋಗ್ಯಜುಸ್ಸಾಮರೂಪಿಣೇ ॥೨೬॥

ತಾ॥ ಎಲೈ ಭಗವಂತನೇ ನಿನಗೆ ನಮಸ್ಕಾರ, ಲೋಕಸಾಕ್ಷಿಯೇ ನಿನಗೆ ನಮಸ್ಕಾರ, ಋಗ್ವೇದ, ಯಜುರ್ವೇದ ಸಾಮವೇದಸ್ವರೂಪಿಯಾದ ಭಾಸ್ಕರನೇ ನಿನಗೆ ನಮಸ್ಕಾರ ।।೨೬।।

ಸಪ್ತಾಶ್ವಾಯನಮಸ್ತೇಽಸ್ತುಸಹಸ್ರಕಿರಣಾಯತೇ ।
ನಮಸ್ತೇವಿಶ್ವರೂಪಾಯನಮೋಮೂರ್ತಿತ್ರಯಾತ್ಮನೇ ।।೨೭।।

ತಾ|| ಸಪ್ತಾಶ್ವನೇ ನಿನಗೆ ನಮಸ್ಕಾರ. ಸಹಸ್ರಕಿರಣಗಳುಳ್ಳ ತೇಜಸ್ವರೂಪಿಯೇ ನಿನಗೆ ನಮಸ್ಕಾರ ವಿಶ್ವರೂಪನೇ ನಿನಗೆ ನಮಸ್ಕಾರ ತ್ರಿಮೂರ್ತ್ಯಾತ್ಮಕನೇ ನಿನಗೆ ನಮಸ್ಕಾರ ||೨೭||

ಲೋಹಿತಂರಥಮಾರೂಢಂಸರ್ವಲೋಕಪಿತಾಮಹಂ ।
ತಂಸೂರ್ಯ್ಯಾಯನಮಸ್ತೇಸ್ತುಜ್ಞಾನವಿಜ್ಞಾನಮೋಕ್ಷದಂ ||೨೮||

ತಾ|| ಲೋಹರಥದಿಂದ ಕೂಡಿದ ಪರಮಾತ್ಮನೇ ನಿನಗೆ ನಮಸ್ಕಾರ, ಸರ್ವ ಲೋಕಗಳಿಗೂ ಪಿತಾಮಹನಾದ ಸ್ವಾಮಿಯೇ ನಿನಗೆ ನಮಸ್ಕಾರ ಜ್ಞಾನ ಮತ್ತು ವಿಜ್ಞಾನ ಮೋಕ್ಷಕಾರಕನಾದ ಸೂರ್ಯ ಭಗವಂತನೇ ನಿನಗೆ ನಮಸ್ಕಾರ ||೨೮||

ಸವಿತ್ರೇಚನಮಸ್ತುಭ್ಯಂ ನಮಸ್ತೇಕರ್ಮಸಾಕ್ಷಿಣೇ ।
ರವಿಯೇಚನಮಸ್ತುಭ್ಯಂನಮಸ್ತೇಲೋಕಚಕ್ಷುಷೇ ||೨೯||

ತಾ|| ಸವಿತೃನಾಮಕನಾದ ದೇವನೇ ನಿನಗೆ ನಮಸ್ಕಾರವು ನಾವುಗಳು ಮಾಡುವ ಕರ್ಮಗಳ ಸಾಕ್ಷಿಯಾದ ದೇವನೇ ನಿನಗೇ ನಮಸ್ಕಾರ ರವಿಯೇ ನಿನಗೆ ನಮಸ್ಕಾರ ಲೋಕನೇತ್ರನೇ ನಿನಗೆ ನಮಸ್ಕಾರ ||೨೯||

ತ್ರೈಗುಣ್ಯಂಚಮಹಾಶೂರಂಪ್ರಚಂಡಂಕಾಶ್ಯಪಾತ್ಮಜಂ ।
ಏಕಚಕ್ರಧರಂದೇವಂತಂಸೂರ್ಯ್ಯಾಯನಮೋಸ್ತುತೇ ||೩೦||

ತಾ|| ತ್ರಿಗುಣಾತ್ಮಕನಾಗಿ ಮಹಾಶೂರನಾಗಿ ಕಶ್ಯಪ ಪುತ್ರನಾಗಿ ಸರ್ವಲೋಕ ಗಳಿಗೂ ಪ್ರಚಂಡನಾಗಿ ಏಕ ಚಕ್ರರಥಾರೂಢನಾಗಿ ಸರ್ವಪ್ರಪಂಚವನ್ನು ಬೆಳಗುತ್ತಿರುವ ಸೂರ್ಯ ದೇವನೇ ನಿನಗೆ ನಮಸ್ಕಾರ ||೩೦||

ನಮೋವೇದಸ್ವರೂಪಾಯಮಾರ್ತಾಂಡಾಯನಮೋನಮಃ ।
ಹಂಸಾಯಚನಮಸ್ತೇಸ್ತುನಮಸ್ತೇದ್ವಾದಶಾತ್ಮನೇ ||೩೧||

ತಾ|| ವೇದಸ್ವರೂಪನೇ ನಿನಗೆ ನಮಸ್ಕಾರ ಮಾರ್ತಾಂಡನೇ ನಿನಗೆ ನಮಸ್ಕಾರ ಹಂಸ ಸ್ವರೂಪನೇ ನಿನಗೆ ನಮಸ್ಕಾರ. ದ್ವಾದಶಾತ್ಮನೇ ನಿನಗೆ ನಮಸ್ಕಾರ ||೩೧||

ನಮೋನನ್ತಸ್ವರೂಪಾಯತೇಜಸಾಂನಿಧಯೇನಮಃ ।
ಇತ್ಯೇವಂಸ್ತುತಿಭಿಸ್ತತ್ರಸುತ್ವಾಛಾಯಾಮನೋಹರಂ ||೩೨||

ತಾ|| ಅನಂತ ಸ್ವರೂಪನೇ ನಿನಗೆ ನಮಸ್ಕಾರ ತೇಜೋನಿಧಿಯೇ ನಿನಗೆ ನಮಸ್ಕಾರ ಎಂದು ಈ ವಿಧವಾಗಿ ಛಾಯಾ ಮನೋಹರನಾದ ಆ ಸೂರ್ಯದೇವನನ್ನು ಅನೇಕ ಸ್ತೋತ್ರಗಳಿಂದ ಸ್ತೋತ್ರ ಮಾಡಿದನು ||೩೨||

ಪ್ರದಕ್ಷಿಣಾದಿತಂಕೃತ್ವಾನಮುಸ್ಕಾರಾನನೇಕಶ |
ಭಾಸ್ಕರಂಪ್ರಾರ್ಥಯಾಮಾಸಸ್ವೇಷಸಿದ್ಧಿಂಮುನೀಶ್ವರಃ ॥೩೩॥

ತಾ॥ ಈ ರೀತಿಯಾಗಿ ಸ್ತೋತ್ರ ಮಾಡಿ ತದನಂತರ ಅನೇಕ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತನ್ನ ಇಷ್ಟಸಿದ್ಧಿಗೋಸ್ಕರ ಮುನೀಶ್ವರನಾದ ಆ ಮುಕ್ತ ರಾಜನು ಸೂರ್ಯ ದೇವನಿಗೆ ಪ್ರಾರ್ಥನೆಯನ್ನು ಸಲ್ಲಿಸಿದನು ।।೩೩।।

ಏವಂಮಾಸತ್ರಯಂ ಪೂಜಾಂಕೃತವಾ ಮುನಿಪುಂಗವಃ ।
ಪ್ರಾದುರಾಸೀತ್ತತೋಸೂರ್ಯೋಮುಕ್ತಕಾಯಮಹಾತ್ಮನೇ ॥೩೪॥

ತಾ॥ ಈ ರೀತಿಯಾಗಿ ವ್ರತನಿಷ್ಟನಾದ ಮುನಿಪುಂಗವನಾದ ಆ ಮುಕ್ತರಾಜನು ಮಾರ್ಗಶಿರ ಪುಷ್ಯ ಮಾಘಗಳಾದ ಮೂರು ತಿಂಗಳ ಕಾಲ ಸೂರ್ಯ ಭಗವಾನನನ್ನು ಪೂಜಿಸಲಾಗಿ ಆ ಅನಂತರ ಮಹಾತ್ಮನಾದ ಮುಕ್ತರಾಜನಿಗೆ ಸೂರ್ಯದೇವನು ಪ್ರತ್ಯಕ್ಷ ನಾದನು ।।೩೪।।

ತಮಾಲೋಕ್ಯಚರಾಜರ್ಷಿಃಪ್ರೀತಿವಿಸ್ಫಾರಿತೇಕ್ಷಣಃ ।
ಕೃತಾಂಜಲಿಪುಟೋಭೂತ್ವಾವಾಕ್ಯಮೇವಮಥಾಬ್ರವೀತ್ ॥೩೫॥

ತಾ॥ ಪ್ರತ್ಯಕ್ಷನಾದ ಆ ಸೂರ್ಯ ದೇವನನ್ನು ಸಂದರ್ಶಿಸಿ ಭಕ್ತಿಯಿಂದಲೂ ಸಂತೋಷದಿಂದಲೂ ಅರಳಿದ ಕಣ್ಣುಗಳುಳ್ಳನಾಗಿ ರಾಜರ್ಷಿಯಾದ ಮುಕ್ತರಾಜನು ಕೈಗಳನ್ನು ಜೋಡಿಸಿಕೊಂಡು ನಮಸ್ಕಾರಮಾಡಿ ಸೂರ್ಯದೇವನ ಮುಂದೆ ಈ ರೀತಿ ಬೇಡಿಕೊಂಡನು ।।೩೫।।

ಅಧ್ಯಮೇಸಫಲಂಜನ್ಮ ಅದ್ಯಮೇಸಫಲಂತಪಃ ।
ಅದ್ಯಮೇಸಫಲಂಜ್ಞಾನಂತ್ವತ್ಪ್ರಸಾದಾತ್ಸುರೋತ್ತಮಃ ॥೩೬॥

ತಾ॥ ಎಲೈ ಭಗವಂತನೇ ನನ್ನ ಜನ್ಮವು ಸಫಲವಾಯಿತು. ಈಗ ನನ್ನ ತಪಸ್ಸು ಫಲಿಸಿತು ಈಗ ನನ್ನ ಜ್ಞಾನವು ಸಫಲವಾಯಿತು ಆದ್ದರಿಂದ ಎಲೈ ಸುರೋತ್ತಮನೇ ನಿನ್ನ ಅನುಗ್ರಹವು ನನಗುಂಟಾಯಿತು ॥೩೬॥

ಇತ್ಯುಕ್ತವಂತಂವೌನೀದ್ರಂ ಭಾಸ್ಕರೋಮಿತವಿಕ್ರಮಃ ।
ಮುದಾಪರಮಯಾಯುಕ್ತೋ ವಾಕ್ಯಮೇತದುವಾಚಹ ॥೩೭॥

ತಾ॥ ಈ ರೀತಿಯಾಗಿ ಭಕ್ತಿಭಾವದಿಂದ ಬೇಡಿಕೊಳ್ಳುತ್ತಿರುವ ಮುಕ್ತರಾಜನನ್ನು ನೋಡಿ ಅಮಿತ ಪರಾಕ್ರಮವುಳ್ಳ ಸೂರ್ಯದೇವನು ಪ್ರೀತಿವಿಶೇಷದಿಂದ ಕೂಡಿ ಇಂತೆಂದನು ॥೩೭॥

ಸಂತುಷ್ಟೋಸ್ಮಿಚರಾಜರ್ಷೇತವಪೂಜಾವಿಧಾನತಃ ।
ಕಿಮಿಷ್ಟಂತೇಪ್ರದಾಸ್ಯಾಮಿವೃಣೀಷ್ವಮುನಿಸತ್ತಮಃ ॥೩೮॥

ತಾ॥ ಎಲೈ ರಾಜರ್ಷಿಯಾದ ಮುಕ್ತರಾಜನೇ ನಿನ್ನ ಪೂಜಾ ವಿಧಾನದಿಂದ ನಾನು ಸಂತುಷ್ಟನಾಗಿದ್ದೇನೆ ನಿನ್ನ ಕೋರಿಕೆ ಏನಿರುವುದೋ ಕೇಳುವವನಾಗು ವರವನ್ನು ಕೊಡುತ್ತೇನೆ ॥೩೮॥

ಇತ್ಯೇತದ್ವಚನಂಶ್ರುತ್ವಾಮುಕ್ತಕೋಮುನಿಪುಂಗವಃ ।
ಭಾಸ್ಕರಂಪ್ರಾರ್ಥಯಾಮಾಸಭಾರ್ಯಯಾಸಹಿತೋಮುನಿಃ ॥೩೯॥

ತಾ॥ ಹೀಗೆಂದು ಅನುಗ್ರಹಿಸಿ ಸೂರ್ಯದೇವನು ಹೇಳಲು ಆ ಮಾತನ್ನು ಕೇಳಿದ ಮುನಿಪುಂಗವನಾದ ಮುಕ್ತರಾಜನು ಹೆಂಡತಿಯೊಡಗೂಡಿ ಈ ರೀತಿಯಾಗಿ ಸೂರ್ಯನನ್ನು ಪ್ರಾರ್ಥಿಸಿಕೊಂಡನು ॥೩೯॥

ದೇವದೇವನಮಸ್ತೇಸ್ತುಭಾಸ್ವತೇಮಿತತೇಜಸೇ ।
ಯದಿಪ್ರೀತೋಸಿಭಗರ್ವನ್ಮಯಿಛಾಯಾಮನೋಹರ ॥೪೦॥
ಮಮವಂಶಾಭಿವೃಧ್ಯರ್ಥಂಪುತ್ರಾರ್ನ್‌ದೇಹಿಸುರೋತ್ತಮ ।
ಇತ್ಯೇತದ್ವಚಸಂಶ್ರುತ್ವಾಸಂತುಷ್ಟೋಸವಿತಾಪುನಃ ॥೪೧॥

ತಾ॥ ಅಮಿತ ತೇಜಸ್ಸಿನಿಂದ ಪ್ರಕಾಶಿಸುವ ಎಲೈ ದೇವನೇ ! ನಿನಗೆ ನಮಸ್ಕಾರ ಮಾಡುತ್ತೇವೆ ಎಲೈ ಛಾಯಾಮನೋಹರನಾದ ಭಗವಂತನೇ ನಮ್ಮಲ್ಲಿ ನೀನು ಪ್ರೀತಿಯುಳ್ಳವನಾಗಿದ್ದಲ್ಲಿ ನಮ್ಮ ವಂಶಾಭಿವೃದ್ಧಿಗಾಗಿ ಪುತ್ರರನ್ನು ಕೊಡುವವನಾಗು ಎಂದು ವರವನ್ನು ಬೇಡಲು ಆ ಮುಕ್ತರಾಜದಂಪತಿಗಳ ವಚನವನ್ನು ಕೇಳಿ ಸೂರ್ಯ ದೇವನು ಸಂತಸಗೊಂಡನು ॥೪೦॥೪೧॥

ಉವಾಚಮಧುರಂವಾಕ್ಯಂಮುಕ್ತಕಂಲೋಕವಿಶ್ರುತಂ ।
ಶೃಣುಮುಕ್ತರಾಜರ್ಷೇಮಮವಾಕ್ಯಮರಿಂದಮ ॥೪೨॥
ಅಷ್ಟೌಪುತ್ರಾಭವಿಷ್ಯನ್ತಿಮತ್ಪ್ರಸಾದಾನ್ಮಹಾಮತೇ ।
ಏಕಾಕನ್ಯಾಚಸುಶ್ರೋಣೀಭವಿಷ್ಯತಿನಸಂಶಯಃ ॥೪೩॥

ತಾ॥ ಸಂತುಷ್ಟನಾದ ಆ ಸೂರ್ಯದೇವನು ಮಧುರವಾದ ನುಡಿಗಳಿಂದ, ಎಲೈ ಮಹಾಮತಿವಂತರಾದ ಮುಕ್ತರಾಜ ದಂಪತಿಗಳೇ ಕೇಳಿ ! ನಿಮಗೆ ಶತ್ರುದಮನರೂ ಲೋಕವಿಖ್ಯಾತರೂ ಆದ ಎಂಟು ಜನ ಗಂಡುಮಕ್ಕಳೂ ಕೀರ್ತಿ ತರುವಂತಹ ಒಂದು ಹೆಣ್ಣುಮಗುವೂ ನಿಮಗೆ ಸಂಪ್ರಾಪ್ತವಾಗುತ್ತದೆ ಇದರಲ್ಲಿ ಸಂಶಯವಿಲ್ಲವೆಂದು ಸೂರ್ಯಭಗವಂತನು ಅನುಗ್ರಹಿಸಿದನು ॥೪೨॥೪೩॥

ತೇಚಪುತ್ರಾಮಹಾಭಾಗಸ್ತವವಂಶವಿವರ್ಧನಾಃ ।
ಭವಿಷ್ಯನ್ತಿಮಹಾಪ್ರಾಜ್ಞಾಸ್ಸರ್ವಲೋಕೋಪಕಾರಕಾಃ ॥೪೪॥

ತಾ॥ ಆ ನಿಮ್ಮ ಪುತ್ರರು ಮಹಾಪರಾಕ್ರಮವಂತರೂ ನಿಮ್ಮ ವಂಶವನ್ನು ಅಭಿವೃದ್ಧಿಗೊಳಿಸುವವರೂ ಮಹಾಬುದ್ಧಿವಂತರೂ ಸಮಸ್ತ ಜನರಿಗೂ ಉಪಕಾರಿಗಳೂ ಆಗಿರುತ್ತಾರೆ ॥೪೪॥

ಇತ್ಯುಕ್ತ್ವಾ ಭಾಸ್ಕರೋದೇವಃ ತತ್ರೈವಾಂತರಧೀಯತ ।
ತತೋಮುಕ್ತಕರಾಜರ್ಷಿಃ ಮುದಾಪರಮಯಾಯುತಃ ॥೪೫॥

ತಾ॥ ಆ ಸೂರ್ಯದೇವನು ಈ ರೀತಿಯಾಗಿ ವರವನ್ನು ಪ್ರಸಾದಿಸಿ ಅಲ್ಲಿಯೇ ಅಂತರ್ಧಾನವನ್ನೈದಿದನು ಅನಂತರ ರಾಜರ್ಷಿಯಾದ ಆ ಮುಕ್ತರಾಜನು ಅತ್ಯಂತ ಸಂತುಷ್ಟನಾಗಿ ಪತ್ನಿ ಬಂಧು ಪುರೋಹಿತರಿಂದೊಡಗೂಡಿ ತನ್ನ ಪಟ್ಟಣವನ್ನು ಸೇರಿದವನಾದನು ॥೪೫॥೪೬॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದ ಸಂವಾದೇ ಮುಕ್ತಕಪುತ್ರವರಲಾಭೋನಾಮ ಪಂಚದಶೋಽಧ್ಯಾಯಃ ॥

ತಾ॥ ಇಲ್ಲಿಗೆ ಬ್ರಹ್ಮಾಂಡ ಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತರಾಜನಿಗೆ ಪುತ್ರ ವರಪ್ರದಾನವೆಂಬ ಹದಿನೈದನೆಯ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿನಾರನೆಯ ಅಧ್ಯಾಯ :-

ಮುಕ್ತಕಾಂತೆಗೆ ಪುಂಸವನ ಸೀಮಂತನ

ನಾರದ ಉವಾಚ :-

ಅನಂತರಂಕಥಾಶ್ರೋತುಂಇಚ್ಛಾಮಿಕಮಲಾಸನ।
ತತಃಪರಂಕಿಂಕೃತವಾರ್ಮುಕ್ತಕೋಮುನಿಪುಂಗವಃ ॥೧॥

ತಾ॥ ಎಲೈ ಕಮಲಾಸನನೇ ! ಆ ತರುವಾಯ ಮುಕ್ತರಾಜನು ಏನು ಮಾಡಿದನೆಂಬುದನ್ನು ಕೇಳಲು ಕೋರಿಕೆ ಇರುವುದರಿಂದ ಆ ಮುನಿಪುಂಗವನ ಕಥೆಯನ್ನು ಹೇಳಬೇಕೆಂದು ಪ್ರಾರ್ಥಿಸಿದನು ॥೧॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮನುತ್ತಮಂ।
ಪ್ರವಿಶ್ಯನಗರಂರಮ್ಯಂಸೌಧಮಂಡಲಶೋಭಿತಂ ॥೨॥

ತಾ॥ ಎಲೈ ನಾರದನೇ! ಆ ಮುಕ್ತರಾಜನ ಉತ್ತಮವಾದ ವೃತ್ತಾಂತವನ್ನು ಹೇಳುತ್ತೇನೆ ಕೇಳು, ಸೂರ್ಯದೇವನಿಂದ ವರವನ್ನು ಪಡೆದು ತನ್ನ ಸಕಲ ಪರಿವಾರದೊಂದಿಗೆ ಹೊರಟು ಉಪ್ಪರಿಗೆಗಳ ಸಮೂಹದಿಂದ ಕೂಡಿ ಶೋಭಿಸುತ್ತಿರುವ ಮನೋಹರವಾದ ತನ್ನ ಪಟ್ಟಣವನ್ನು ಸೇರಿದನು ॥೨॥

ಬಂಧುಭಿಸ್ಸಹರಾಜರ್ಷಿರ್ಮುನಿಭಿಸ್ಸಹಪೂಜಿತಃ।
ದಿವ್ಯಾಂಬರಸುರವರ್ಣೈಶ್ಚಭೂಷಣೈಶ್ಚವಿಶೇಷತಃ ॥೩॥

ತಾ॥ ಹೀಗೆ ತನ್ನ ಪಟ್ಟಣವನ್ನು ಸೇರಿದ ಮುಕ್ತರಾಜ ದಂಪತಿಗಳನ್ನು ಬಂಧುಗಳು ದಿವ್ಯವಾದ ವಸ್ತ್ರಗಳಿಂದಲೂ ಸುವರ್ಣದಿಂದ ನಿರ್ಮಿಸಿದ ಒಡವೆಗಳಿಂದಲೂ ಪೂಜಿಸಿದರು ಮಹರ್ಷಿಗಳೂ ಆಚಾರ್ಯರೂ ಆ ರಾಜದಂಪತಿಗಳನ್ನು ಆಶೀರ್ವಾದಪೂರಕವಾಗಿ ಸುವರ್ಣ ನಾಣ್ಯಗಳಿಂದಲೂ ಒಡವೆ ವಸ್ತ್ರಗಳಿಂದಲೂ ಕಪ್ಪಕಾಣಿಯ ರೂಪವಾಗಿ ಪೂಜಿಸಿದರು ॥೩॥

ಋಷೀಂದ್ರಂಸರ್ಚಯಾಮಾಸಬಹುಶಸ್ತದನಂತರಂ।
ಸ್ವಾಶ್ರಿತಾನಪಿಸಂತುಷ್ಟ್ವಾರ್ಅಕರೋನ್ಮುನಿಸತ್ತಮಃ ॥೪॥

ತಾ॥ ಈ ರೀತಿಯಾಗಿ ರಾಜರ್ಷಿಯಾದ ಆ ಮುಕ್ತರಾಜನು ಪೂಜಿತನಾದ ನಂತರ ಮಹರ್ಷಿಗಳನ್ನೂ ಆಚಾರ್ಯ ಪುರುಷರನ್ನೂ ವಿಧಿವತ್ತಾಗಿ ಪೂಜಿಸಿ ಅನೇಕ

ಧನಕನಕಗಳಿಂದ ಸಂತೋಷಪಡಿಸಿದನು ಮತ್ತು ತನ್ನನ್ನು ಆಶ್ರಯಿಸಿರುವವರನ್ನೆಲ್ಲಾ ವಸ್ತ್ರಾಭರಣಗಳನ್ನು ಕೊಟ್ಟು ಮರ್ಯಾದೆಮಾಡಿ ಸಂತೋಷಪಡಿಸಿದನು ॥೪॥

ತಾನ್ಸರ್ವಾನ್ಪ್ರೇಕ್ಷಯಿತ್ವಾತುಭಾರ್ಯಯಾಸಹಿತಸ್ಸುಧೀಃ ।
ದಿವ್ಯಾನನೇಕಭೋಗಾಂಶ್ಚಭುಂಜನ್ತತ್ರವ್ಯತಿಷ್ಠತ ॥೫॥

ತಾ॥ ತನ್ನ ಕಾರ್ಯಕ್ಕಾಗಿ ಬಂದಿದ್ದ ಋಷಿವರ್ಯರನ್ನೂ ಆಚಾರ್ಯರನ್ನೂ ಬಂಧುಗಳನ್ನೂ ತನ್ನ ಆಧೀನರಾದ ಮಿತ್ರರನ್ನೂ ಅವರವರ ಸ್ವಗೃಹಗಳಿಗೆ ಕಳುಹಿಸಿಕೊಟ್ಟ ನಂತರ ಆ ಮುಕ್ತರಾಜನು ತನ್ನ ಹೆಂಡತಿಯಾದ ಮುಕ್ತಕಾಂತೆಯನ್ನು ಕೂಡಿ ಅನೇಕ ದಿವ್ಯವಾದ ಭೋಗಭಾಗ್ಯಗಳನ್ನು ಅನುಭವಿಸುತ್ತಿದ್ದನು ॥೫॥

ತತಶ್ಶೀಘ್ರತರೇಣೈವಭಾರ್ಯಾತಸ್ಯತಪಸ್ವಿನೀ ।
ಆಧತ್ತಗರ್ಭಂಸಾದೇವೀಮುಕ್ತಕಾಂತಾಸುಲಕ್ಷಣಾ ॥೬॥

ತಾ॥ ಈ ರೀತಿಯಾಗಿ ಸುಖಭೋಗಗಳನ್ನು ಅನುಭವಿಸುತ್ತಿರಲು ಶೀಘ್ರಕಾಲದಲ್ಲಿಯೇ ವ್ರತನಿಷ್ಠಳಾಗಿ ತಪಸ್ವಿನಿಯಾಗಿರುವ ಆ ಮುಕ್ತರಾಜನ ಹೆಂಡತಿಯಾದ ಮುಕ್ತಕಾಂತೆಯು ಶುಭಲಕ್ಷಣಗಳಿಂದ ಕೂಡಿದ ಗರ್ಭವನ್ನು ಧರಿಸಿದವಳಾದಳು ॥೬॥

ತತಃಪರಂಕ್ರಮೇಣೈವಗರ್ಭವೃದ್ಧಿಮುಪೇಯುಷೀ ।
ಅಲಸಾಮಂದಗಮನಾಮೃದ್ಗಂಧಪ್ರಿಯಮಾನಸಾ ॥೭॥

ತಾ॥ ಅನಂತರ ಕ್ರಮಕ್ರಮವಾಗಿ ಆ ಮುಕ್ತಕಾಂತೆಯ ಗರ್ಭವು ಬೆಳೆಯುತ್ತಿರಲು ಆಕೆಗೆ ಆಲಸ್ಯವೂ ಮಂದಗಮನವೂ ಮಣ್ಣಿನ ವಾಸನೆಯಲ್ಲಿ ಇಷ್ಟವೂ ಉಂಟಾದವಳಾದಳು ॥೭॥

ಕೃಶಾಚಪಾಂಡುವದನಾಸ್ಥೂಲಮಧ್ಯಾಮನೋಹರಾ ।
ನೀಲೋತ್ಪಲೇಕ್ಷಣಾನೀಲವರಕುಂತಲಚೂಚುಕಾ ॥೮॥

ತಾ॥ ಈ ರೀತಿಯಾಗಿ ಆ ಮುಕ್ತಕಾಂತೆಯು ಸ್ವಲ್ಪ ಬಡವಾಗಿ, ಮುಖದಲ್ಲಿ ಬಿಳುಪೇರಿ ನಡುವು ದಪ್ಪವಾಗಿ ಕೆನ್ನೈದಿಲೆಯಂತೆ ಕಣ್ಣುಗಳು ಪ್ರಕಾಶಮಾನವಾಗಿ ಚುಂಚುಕಗಳು ನೀಲವರ್ಣವುಳ್ಳವಳಾದಳು ॥೮॥

ನಿದ್ರಾಳುಶ್ಶ್ರಮಸಂಖಿನ್ನಾವಿಸ್ರಬ್ಧಾಖಿಲಭೂಷಣಾ ।
ಇಚ್ಛಾವತೀವಿಶೇಷೇಷುಭಕ್ಷ್ಯಭೋಜ್ಯೇಷುಭಾಮಿನೀಂ ॥೯॥

ತಾ॥ ನಿದ್ರೆಯಲ್ಲಿ ಆಸಕ್ತಿಯುಳ್ಳವಳೂ ಶ್ರಮವೂ ಖಿನ್ನತ್ವವೂ ತೋರಿ ತೊಟ್ಟಿರುವ ಆಭರಣಗಳನ್ನು ಸಹಾ ತೆಗೆದಿಡುವವಳಾದಳು ಬಗೆಬಗೆಯ ಭಕ್ಷ್ಯ ಭೋಜ್ಯಗಳಲ್ಲಿ ಆ ಮುಕ್ತಕಾಂತೆಗೆ ಅಭಿಲಾಷೆ ಹೆಚ್ಚಿತು ॥೯॥

ಮುಕ್ತಕಾಂನ್ತಾಬಭೂವಾಥದೌಹೃದೇನಮನೋಹರಾ ।
ಏವಂವಿಧಾಂವಿಶಾಲಾಕ್ಷೀಂವಿಲೋಕ್ಯಮುನಿಪುಂಗವಃ ॥೧೦॥

ತಾ॥ ಈ ರೀತಿಯಾದ ದೌಹೃದಲಕ್ಷಣಗಳಿಂದ ಆ ಮುಕ್ತಕಾಂತೆಯು ನೋಡು ವವರಿಗೆ ಅತಿ ಮನೋಹರಳಾಗಿ ಕಾಣಿಸುತ್ತಿರುವ ವಿಶಾಲ ನೇತ್ರಗಳಿಂದ ಆನಂದ ಪುಳಕಿತಳಾಗಿಯಿರುವ ತನ್ನ ಧರ್ಮಪತ್ನಿಯನ್ನು ನೋಡಿ ಆ ಮುಕ್ತರಾಜನು ಆನಂದ ಸಮುದ್ರದಲ್ಲಿ ಮುಳಿಗಿದವನಾದನು ॥೧೦॥

ಬಭೂವಾನಂದಜಲಧೌನಿಮಗ್ನೋವಿಸ್ಮಯಾನ್ವಿತಃ ।
ತತೋದಿವ್ಯಫಲೈರ್ನಾನೀರ್ಭಕ್ಷ್ಯಭೋಜ್ಯೈರ್ವಿಶೇಷತಃ ॥೧೧॥
ಯದ್ಯತ್ತಯಾಭಿಲಷಿತಂತ್ತೈಸ್ತೈರತಿಮನೋಹರೈಃ ।
ತೋಷಯಾಮಾಸನುಶ್ರೋಣೀಂಮುಕ್ತಕೋಃಸುದಕ್ಷಿಣಾಂ ॥೧೨॥

ತಾ॥ ಈ ರೀತಿಯಾಗಿ ಆನಂದವನ್ನು ಹೊಂದಿದ ಮುಕ್ತರಾಜನು ಹರ್ಷಿತನಾಗಿ ತನ್ನ ಹೆಂಡತಿಯಾದ ಮುಕ್ತಕಾಂತೆಯಾದ ಸುದಕ್ಷಿಣಾದೇವಿಗೆ ಇಷ್ಟವಾದ ದಿವ್ಯಫಲ ಗಳನ್ನೂ ಮನೋಹರವಾದ ಭಕ್ಷ್ಯಭೋಜ್ಯಾದಿಗಳನ್ನೂ ಮತ್ತೂ ಆಕೆಯು ಯಾವ ಯಾವ ಪದಾರ್ಥಗಳೂ, ವಸ್ತ್ರಗಳೂ, ಆಭರಣಗಳೂ, ಊಟದ ಪದಾರ್ಥಗಳೂ ಸಕಲ ವಿಧವಾದ ಎಲ್ಲಾ ಆಶೆಯ ಪೂರೈಕೆಗಳನ್ನು ಕೊಡಿಸಿ ಸಂತೋಷಪಡಿಸಿದನು ॥೧೧॥೧೨॥

ಏವಂದಿನೇಷುಗಚ್ಛತ್ಸುತಥಾಕತಿಪಯೇಷುಚ ।
ತೃತೀಯಮಾಸಿಸಂಪ್ರಾಪ್ತೇಮುಕ್ತಕೋಮುನಿಪುಂಗವಃ ॥೧೩॥

ತಾ॥ ಈ ರೀತಿಯಾಗಿ ಸುದಕ್ಷಿಣಾದೇವಿಯಾದ ಮುಕ್ತಕಾಂತೆಯು ಆನಂದ ದಿಂದ ಕಾಲ ತಳ್ಳುತ್ತಿರಲು ಆಗ ಮೂರನೆ ತಿಂಗಳು ಪ್ರಾಪ್ತವಾಗಲು ಆಕೆಯ ಪತಿ ಯಾದ ಮುಕ್ತರಾಜನು ॥೧೩॥

ತಪೋಧನಾಸಮಾಹೂಯವಸಿಷ್ಠಪ್ರಮುಖಾನ್ದ್ವಿಜಾನ್ ।
ತಸ್ಯಾಃಪುಂಸುವನಂಕರ್ಮಕೃತವಾನ್ಮುನಿಸತ್ತಮಃ ॥೧೪॥

ತಾ॥ ತಪೋಧನನಾದ ವಸಿಷ್ಠಮಹರ್ಷಿಯೇ ಮೊದಲಾದ ಆಚಾರ್ಯ ಪುರುಷ ರನ್ನು ಕರೆಯಿಸಿದನು. ಮುನಿಪುಂಗವನಾದ ಆ ಮುಕ್ತರಾಜನು ತನ್ನ ಭಾರ್ಯೆಯಾದ ಮುಕ್ತಕಾಂತೆಗೆ ಪುಂಸವನವೆಂಬ ಶುಭಮಂಗಳಕಾರ್ಯವನ್ನು ನೆರವೇರಿಸಿದನು ॥೧೪॥

ಸೀಮಂತಾದೀನಿಕರ್ಮಾಣಿವೇದೋಕ್ತವಿಧಿನಾತತಃ ।
ಕೃತ್ವಾಬಹುಸುವರ್ಣಾನಿಬ್ರಾಹ್ಮಣೇಭ್ಯೋದದೌಪುನಃ ॥೧೫॥

ತಾ॥ ತದನಂತರ ಕೆಲವು ತಿಂಗಳುಗಳು ಕಳೆದನಂತರ ವೇದೋಕ್ತ ವಿಧಿಗನು ಸಾರವಾಗಿ ಮುಕ್ತಕಾಂತೆಗೆ ಸೀಮಂತಾದಿ ಮಂಗಳ ಕಾರ್ಯಗಳನ್ನು ಮಾಡಿಸಿ, ಶುಭ

ಮಂಗಳಕಾರ್ಯಕ್ಕಾಗಮಿಸಿದ ಬ್ರಾಹ್ಮಣರಿಗೆಲ್ಲಾ ಹೆಚ್ಚಾಗಿ ಸುವರ್ಣವನ್ನು ಆ ಮುಕ್ತ ರಾಜನು ದಾನಮಾಡಿದನು ||೧೫||

ಋಷೀ೯ಸಂಭಾವಯಾವಾಸದಿವ್ಯಾಂಬರಸುಭೂಷಣೈಃ ।
ತತಸ್ತಾ೯ಪ್ರೇಷಯಿತ್ವಾತುಮುಕ್ತಕಃಪ್ರಮುದಾನ್ವಿತಃ ||೧೬||

ತಾ|| ಈ ರೀತಿಯಾದ ಮುಕ್ತಕಾಂತೆಯ ಶುಭಮಂಗಳಕಾರ್ಯಗಳಿಗಾಗಿ ಆಗಮಿಸಿದ್ದ ಸಕಲ ಋಷೀಶ್ವರಿಗೆಲ್ಲಾ ದಿವ್ಯವಾದ ವಸ್ತ್ರಗಳನ್ನೂ ಅಭರಣಗಳನ್ನೂ ಕೊಟ್ಟು ಉಪಚರಿಸಿ ಅವರುಗಳನ್ನು ಬೀಳ್ಕೊಟ್ಟನು ||೧೬||

ಗರ್ಭರಕ್ಷಾಂತತಃಕೃತ್ವಾಮುಮುದೇಮುನಿಪುಂಗವ ।
ಪ್ರಾಪ್ತೇತುದಶಮೇಮಾಸಿಪ್ರಾಪ್ತೇಪುಣ್ಯದಿನೇಚಸಾ ||೧೭||

ತಾ|| ಆ ಮುಕ್ತರಾಜನು ಆನಂತರ ತನ್ನ ಹೆಂಡತಿಯ ಗರ್ಭಕ್ಕೆ ಯಾವ ತೊಂದರೆಯೂ ಉಂಟಾಗದಂತೆ ರಕ್ಷಣಾದಿಗಳನ್ನು ಆಚರಿಸುತ್ತಾ ಹತ್ತನೆಯ ತಿಂಗಳು ಪ್ರಾಪ್ತವಾಗಲು ಶಿಶು ಜನನದ ಸಮಯ ನಿರೀಕ್ಷಿಸುತ್ತಾ ಕಾತುರನಾಗಿ ಸಂತೋಷದಿಂದ ಇದ್ದನು ||೧೭||

ತತಶ್ಶುಭೇಮುಹೂರ್ತೇತು ಪುಣ್ಯನಕ್ಷತ್ರಸಂಯುತೇ ।
ಶುಭಲಗ್ನೇಚಸಾಶೀಘ್ರಂ ಉಚ್ಚಸ್ಥೇಗ್ರಹಪಂಚಕೇ ||೧೮||
ಅಸೂತತನಯಂ ದೇವೀಸೇ ನಾನ್ಯಮಿವಪಾರ್ವತೀ ।
ತದಾದುಂದುಭಯೋನೇದುಃ ಅಭವರ್ಪುಷ್ಪವೃಷ್ಟಯಃ ||೧೯||

ತಾ|| ಈ ರೀತಿಯಾಗಿ ಆ ಮುಕ್ತರಾಜನು ಕಾತುರನಾಗಿ ನಿರೀಕ್ಷಿಸುತ್ತಿದ್ದ ಸಮಯದಲ್ಲಿ ಒಂದು ಶುಭ ದಿನದಲ್ಲಿ ಶುಭ ನಕ್ಷತ್ರದಿಂದ ಕೂಡಿದ ಶುಭ ಲಗ್ನದಲ್ಲಿ ಶುಭ ಮುಹೂರ್ತದಲ್ಲಿ ಐದು ಗ್ರಹಗಳು ಉಚ್ಚದಲ್ಲಿರಲು ಸಾಕ್ಷಾತ್ ಪಾರ್ವತಿದೇವಿಯು ಕುಮಾರಸ್ವಾಮಿಯನ್ನು ಪ್ರಸವಿಸಿದಂತೆ ಆ ಪಾರ್ವತಿದೇವಿಯ ಅಂಶಭೂತಳಾದ ಮುಕ್ತ ಕಾಂತೆಯಾದ ಸುದಕ್ಷಿಣಾದೇವಿಯು ಒಂದು ಗಂಡು ಶಿಶುವನ್ನು ಪ್ರಸವಿಸಿದಳು ಅಗ ದುಂದುಭಿಗಳು ಧ್ವನಿಗೈದವು. ದೇವತೆಗಳು ಅಂತರಿಕ್ಷದಿಂದ ಪುಷ್ಪವೃಷ್ಟಿಯನ್ನು ಸುರಿಸಿದರು ||೧೮|| ||೧೯||

ವವುರ್ಮಂದಾನಿಲಾಸ್ತತ್ರ ದಿಶಶ್ಶುಭ್ರಂಚಕಾಶಿರೇ ।
ತಂಶೃತ್ವಾಮೌಕ್ತಕೋಮೌನಿಃ ಪುತ್ರೋತ್ಸವಮತಂದ್ರಿಕ ||೨೦||
ಮುದಾಪರಮಯಾಯುಕ್ತಃ ಸ್ನಾತ್ವಾವಿಗತಕಲ್ಮಷಃ ।
ಭೂಮಿದೇವಾ೯ಸಮಾಹೂಯ ಋಷೀನಗ್ನಿಸಮಪ್ರಭಾ೯ ||೨೧||

ತಾ|| ಮಂದಮಾರುತವು ಬೀಸತೊಡಗಿತು ದಿಕ್ಕುಗಳು ನಿರ್ಮಲವಾಗಿ ಪ್ರಕಾಶಿಸಿದವು. ಪುತ್ರೋತ್ಸವವಾದ ವಿಚಾರವನ್ನು ತಿಳಿದ ಆ ಮುನಿವರ್ಯನಾದ ಮುಕ್ತರಾಜನು

ಸಂತೋಷಪುಳಕಿತನಾಗಿ ಸ್ನಾನವನ್ನಾಚರಿಸಿ ಅಗ್ನಿಗೆ ಸಮಾನತೇಜಸ್ಸುಳ್ಳ ಋಷಿಗಳನ್ನೂ ಬ್ರಾಹ್ಮಣರನ್ನೂ ಕರೆಯಿಸಿ ॥೨೦॥ ॥೨೧॥

ಚಕಾರಬೀಜದಾನಾನಿಸುವರ್ಣಾನಿಬಹೂನಿಚ ।
ತಥೈವ ಗೋಸಹಸ್ರಾಣಿ ವಸ್ತ್ರಾಣ್ಯಾಭರಣಾಭಿಚ ॥೨೨॥

ತಾ॥ ಅವರುಗಳೆಲ್ಲರಿಗೂ ತನಗೆ ಪುತ್ರೋತ್ಸವವಾದ ಸಂತೋಷಕ್ಕಾಗಿ ಒಳ್ಳೆ ಫಲವತ್ತಾದ ಭೂಮಿಯನ್ನು ಬೀಜಗಳಸಹಿತವಾಗಿ ದಾನ ಮಾಡಿದನು. ಕೆಲವರಿಗೆ ವಸ್ತ್ರಗಳನ್ನೂ ಮತ್ತೇ ಕೆಲವರಿಗೆ ಸುವರ್ಣವನ್ನೂ ಇನ್ನೂ ಅನೇಕರಿಗೆ ಸಾವಿರ ಕರುಗಳ ಸಹಿತವಾದ ಗೋವುಗಳನ್ನೂ ದಾನ ಮಾಡಿದನು. ತನ್ನ ಪರಿವಾರದವರಿಗೆ ವಸ್ತ್ರ ಭೂಷಣಗಳನ್ನು ಸಲ್ಲಿಸಿದನು ॥೨೨॥

ನಾಮಕರಣ ಮಹೋತ್ಸವ

ದತ್ವಾಭೂಮಿಸುರೇಂದ್ರಾಣಾಂಬಂಧೂನಾಚಹಿತೈಷಿಣಃ ।
ದಶಮೇದಿವಸೇಪ್ರಾಪ್ತೇಸ್ನಾತ್ವಾವಿಗತಕಲ್ಮಷಃ ॥೨೩॥
ಪುಣ್ಯಾಹಾದೀನಿಕರ್ಮಾಣಿ ಭಾರ್ಯಯಾಸಹಿತಸ್ಸುಧೀಃ
ಯಥಾವಿಧಿಪ್ರಕಾರೇಣ ಕೃತವಾನ್ಸಪುರೋಹಿತಃ ॥೨೪॥

ತಾ॥ ಈ ರೀತಿಯಾಗಿ ಬ್ರಾಹ್ಮಣರಿಗೆ ಭೂದಾನಾದಿಗಳನ್ನು ಕೊಟ್ಟು, ಬಂಧು ಮಿತ್ರಬಳಗದವರಿಗೆ ವಸ್ತ್ರಭೂಷಣಗಳನ್ನು ಕೊಟ್ಟು ಹತ್ತನೇ ದಿವಸ ಮಗು ಬಾಣಂತಿ ಯರಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಿ ಆ ಮುಕ್ತರಾಜನು ಶುಚಿರ್ಭೂತನಾಗಿ ನೂತನ ವಸ್ತ್ರಗಳನ್ನು ಧರಿಸಿದನು ॥೨೩॥ ॥೨೪॥

ದ್ವಾದಶೇದಿವಸೇಪ್ರಾಪ್ತೇ ಋಷೀನಮಿತತೇಜಸಃ ।
ಸಮಾಹೂಯವಸಿಷ್ಠಾದೀನ್ವೇದೋಕ್ತವಿದಿನಾತತಃ ॥೨೫॥
ಏತೇನೇನಾಮಕರಣಂ ತಸ್ಯಪುತ್ರಸ್ಯಧೀಮತಃ ।
ಜ್ಯೋತಿಷ್ಮಾನಿತಿತನ್ನಾಮ ಜಗದುರ್ಮುನಿಸತ್ತಮಾಃ ॥೨೬॥

ತಾ॥ ಮಗು ಜನಿಸಿದ ಹನ್ನೆರಡನೇ ದಿನದಲ್ಲಿ ಆ ಮುನಿಶ್ರೇಷ್ಟನಾದ ಮುಕ್ತ ರಾಜನು ವಸಿಷ್ಠಾದಿ ಋಷಿಗಳನ್ನು ಕರೆಯಿಸಿದವನಾಗಿ ವೇದೋಕ್ತ ವಿಧಿಯನ್ನನುಸರಿಸಿ ಆ ಬುದ್ಧಶಾಲಿಯಾದ ಶಿಶುವಿಗೆ ನಾಮಕರಣವನ್ನು ನೇರವೇರಿಸಿದನು. ಜಗತ್ಸಾಕ್ಷಿ ಯಾದ ಸೂರ್ಯ ದೇವನ ಅನುಗ್ರಹದಿಂದ ಜನ್ಮಿಸಿದವನಾದ ಕಾರಣ ಮಹರ್ಷಿಗಳೆಲ್ಲರೂ ಸೇರಿ ಆ ಮಗುವಿಗೆ ಜ್ಯೋತಿಷ್ಮಂತನೆಂದು ಹೆಸರಿಟ್ಟರು. ಋಷಿಗಳು ಬ್ರಾಹ್ಮಣರೂ ಮತ್ತು ಮಾತಾಪಿತೃಗಳೂ ಸಹ ಶಿಶುವನ್ನು ಆಶೀರ್ವದಿಸಿದರು ॥೨೫॥೨೬॥

ತಥಾಬಹುಸುವರ್ಣಾನಿವಸ್ತ್ರಾಣಿಚಪುನಃ ಪುನಃ ।
ಋಷಿಭ್ಯೋಭೂಸುರೇಭ್ಯಶ್ಚ ಬಂಧುಭ್ಯೋಮುನಿಸತ್ತಮಃ ॥೨೭॥

ತಾ॥ ಆ ಮುಕ್ತರಾಜನು ತನ್ನ ಹೆಂಡತಿಯಾದ ಮುಕ್ತಕಾಂತೆಯೊಡಗೂಡಿ ಋಷಿಗಳಿಗೂ ಬ್ರಾಹ್ಮಣರಿಗೂ ಬಂಧುಗಳಿಗೂ, ಮಿತ್ರರಿಗೂ, ಪರಿವಾರದವರಿಗೂ. ಯಥೇಶ್ಚವಾಗಿ ಸುವರ್ಣವನ್ನೂ ವಸ್ತ್ರಗಳನ್ನೂ ಆಭರಣಗಳನ್ನೂ ದಾನವಾಗಿಕೊಟ್ಟು ತಾವು ಅತ್ಯಂತ ಸಂತೋಷಭರಿತರಾಗಿದ್ದರು ॥೨೭॥

ದತ್ತವಾನತಿಸಂಪ್ರೀತೋ ಭಾರ್ಯಯಾಸಹಿತೋಽನಘಃ ।
ಏವಂಕ್ರಮೇಣರಾಜರ್ಷೇರಷ್ಟೌಪುತ್ರಾವಿಜಜ್ಞಿರೇ ॥೨೮॥

ತಾ॥ ಈ ಪ್ರಕಾರವಾಗಿ ಮುನಿಪುಂಗವನಾದ ಮುಕ್ತರಾಜರ್ಷಿಗೆ ತನ್ನ ಭಾರ್ಯೆಯಾದ ಸುದಕ್ಷಿಣಾದೇವಿಯಾದ ಮುಕ್ತಕಾಂತೆಯಲ್ಲಿ ಎಂಟು ಜನ ಪುತ್ರರು ಕ್ರಮಪ್ರಕಾರವಾಗಿ ಆದಾಗಲೂ ಸಹ ಭಾರ್ಯೆಯಿಂದ ಕೂಡಿದ ಆ ಮುಕ್ತರಾಜನು ಋಷಿಗಳಿಗೂ ಭೂಸುರರಿಗೂ ಮತ್ತು ಬಂಧುಗಳಿಗೂ ಸಹ ಮತ್ತೆ ಮತ್ತೆ ಸುವರ್ಣಾಭರಣಗಳನ್ನು ಕೊಟ್ಟವನಾದನು ॥೨೮॥

ತೇಷಾಮುಪಿತಥೈವಾಸ್ಯಂಜಾತಕರ್ಮಾದಿಕಾಃಕ್ರಿಯಾಃ ।
ಯಥಾಕ್ರಮಂಚಯೋಗೀಂದ್ರೈಸ್ಸಹಿತಕೃತವಾಂಸ್ತಥಾ ॥೨೯॥

ತಾ॥ ಈ ರೀತಿಯಾಗಿ ಉಳಿದ ಏಳು ಜನ ಗಂಡು ಮಕ್ಕಳಿಗೂ ಅವರವರು ಜನಸಿದಾಗ ಆಯಾ ಕಾಲದಲ್ಲಿ ಮಹರ್ಷಿಗಳಿಂದ ಕೂಡಿ ಆ ಮುಕ್ತರಾಜನು ವೇದೋಕ್ತ ರೀತಿಯಲ್ಲಿ ಜಾತಕರ್ಮಾದಿ ಕ್ರಿಯೆಗಳನ್ನು ನಡೆಸಿ ಸಕಲರನ್ನೂ ಸಂತೋಷಪಡಿಸಿದನು ॥೨೯॥

ಜ್ಯೋತಿಷ್ಮಾನ್ಪ್ರಥಮಸ್ತತ್ರದ್ವಿತೀಯೋಹಂಸಕಸ್ಮೃತಃ ।
ಬಾಹುಮಾನಿತಿವಿಖ್ಯಾತಃ ಸ್ತೃತೀಯೋಮುನಿಸತ್ತಮಃ ॥೩೦॥

ತಾ॥ ಜ್ಯೇಷ್ಟಪುತ್ರನು ಜ್ಯೋತಿಷ್ಮಂತನೆಂತಲೂ ಎರಡನೆಯವನು ಹಂಸಕನೆಂತಲೂ ಮತ್ತು ಪ್ರಖ್ಯಾತನಾದ ಬಾಹುಮಂತನೆಂಬುವನು ಮೂರನೆಯ ಮಗನಾಗಿ ಮುಕ್ತರಾಜನಿಗೆ ಹುಟ್ಟಿದರು ॥೩೦॥

ಚತುರ್ಥೋಮಂದಪಾಲಾಖ್ಯಃರುಕ್ಮವರ್ಣಸ್ತತಃಪರಂ ।
ರುಕ್ಮಮಾಲಿರುಕ್ಮಕಂಠಃ ಚತುರೋರುಕ್ಮಭೂಷಣಃ ॥೩೧॥

ತಾ॥ ನಾಲ್ಕನೆಯವನಾಗಿ ಮಂದಪಾಲನೂ ಅನಂತರ ರುಕ್ಮವರ್ಣನು ಐದನೆಯವರಾಗಿಯೂ ಹುಟ್ಟಿದರು ಆರನೆಯವನು ರುಕ್ಮಮಾಲಿಯಾಗಿಯೂ ಏಳನೆಯವನು ಚತುರನಾದ ರುಕ್ಮಭೂಷಣನಾಗಿ ಮುಕ್ತರಾಜ ದಂಪತಿಗಳಿಗೆ ಗಂಡು ಮಕ್ಕಳು ಹುಟ್ಟಿದರು ॥೩೧॥

ವಿಷ್ಣುದಾಸಾಭಿಧಾನಶ್ಚ ಪುತ್ರಾಸ್ತಸ್ಯ ವಿಚಕ್ಷಣಾಃ ।
ಶುಕ್ಲಪಕ್ಷೇಂದುವನ್ಮಾನೇಃಕ್ರಮಾದ್ವೃದ್ಧಿಮುಪೇಯುಷಃ ॥೩೨॥

ತಾ॥ ಕೊನೆಯವನು ವಿಷ್ಣುದಾಸನೆಂದು ಹೆಸರಾದನು ಈ ರೀತಿ ಎಂಟು ಜನ ಗಂಡು ಮಕ್ಕಳು ಶುಕ್ಲಪಕ್ಷದ ಚಂದ್ರನಂತೆ ದಿನ ದಿನವೂ ಪ್ರವರ್ಧಮಾನರಾಗಿ ಮುಕ್ತರಾಜದಂಪತಿಗಳನ್ನು ಆನಂದಪರವಶರನ್ನಾಗಿ ಮಾಡಿದರು ॥೩೨॥

ಪುತ್ರಾನ್ವಿಲೋಕ್ಯರಾಜರ್ಷಿರ್ಯಥಾಕಾಯತಂದ್ರಿತಃ ।
ಚೌಲೋಪನಯನಾದೀನಿಕಾರಯಾಮಾಸಶೀಘ್ರತಃ ॥೩೩॥

ತಾ॥ ಆ ಮುಕ್ತರಾಜನು ತನ್ನ ಎಂಟು ಮಂದಿ ಪುತ್ರರಿಗೂ ಉಕ್ತಕಾಲಗಳಲ್ಲಿ ಚೌಲೋಪನಯನಾದಿ ಮಂಗಳ ಕಾರ್ಯಗಳನ್ನು ಶೀಘ್ರವಾಗಿ ಸಕಾಲದಲ್ಲಿ ಮಾಡಿದವನಾದನು ॥೩೩॥

ತೇಚಪುತ್ರಾಮಹೇಷ್ವಾಸಾವೇದವೇದಾಂಗಪಾರಗಾಃ ।
ನೀತಿಶಾಸ್ತ್ರಪುರಾಣಾದಿಸರ್ವವಿದ್ಯಾವಿಶಾರದಾಃ ॥೩೪॥

ತಾ॥ ಆ ಮುಕ್ತರಾಜನ ಪುತ್ರರೆಲ್ಲರೂ ವೇದವೇದಾಂಗಗಳಿಂದ ಕೂಡಿದ ಸಕಲ ಶಾಸ್ತ್ರ ಪುರಾಣಗಳಲ್ಲಿ ಪಾರಂಗತರಾಗಿಯೂ ಅಸ್ತ್ರಶಸ್ತ್ರಾದಿ ಸಕಲ ಧನುರ್ವಿದ್ಯಾ ಪಾರಂಗತರಾಗಿಯೂ ರಾಜಕಾರ್ಯಗಳಲ್ಲಿ ನೀತಿಶಾಸ್ತ್ರ ಪಾರಾಂಗತರಾಗಿಯೂ ಶೋಭಿಸಿದರು ॥೩೪॥

ಶಿಕ್ಷಿತಾಮುನಿಶಾರ್ದೂಲೈರ್ಬಭೂವುರ್ಮುನಿಸತ್ತಮಾಃ ।
ತತೋಮುಕ್ತಕರಾಜರ್ಷಿಪುತ್ರಾಣಾಮಮಿತೌಜಸಾಂ ॥೩೫॥

ತಾ॥ ಶ್ರೇಷ್ಟರಾದ ಮುನಿಗಳಿಂದ ಶಿಕ್ಷಿತರಾಗಿ ಶಮದಮಾದಿ ಅಷ್ಟಗುಣಗಳಿಂದ ಮುನಿಗಳೆನಿಸಿಕೊಂಡರು ಪೂರ್ಣಯೌವ್ವನಸಂಪನ್ನರಾಗಿ ಸಿಂಹ ಪರಾಕ್ರಮವುಳ್ಳವರಾಗಿಯೂ ಅತ್ಯಂತ ತೇಜಸ್ವಿಗಳಾಗಿಯೂ ಇದ್ದರು ॥೩೫॥

ವಿವಾಹಂಕರ್ತುಮುದ್ಯುಕ್ತಃಸಮ್ಮಂತ್ರ್ಯಾಪ್ತಜನೈಸ್ಸಹ ।
ರೂಪಯೌವ್ವನಸಂಪನ್ನಾನ್ದೃಷ್ಟ್ವಾಸಿಂಹಪರಾಕ್ರಮಾನ್ ॥೩೬॥

ತಾ॥ ಸಕಲ ವಿದ್ಯಾಪಾರಂಗತರಾಗಿ ರೂಪಸಂಪನ್ನರಾಗಿ ಯೌವ್ವನ ಯುಕ್ತರಾಗಿ ಸಿಂಹ ಪರಾಕ್ರಮದಿಂದಿರುವ ತನ್ನ ಮಕ್ಕಳನ್ನು ನೋಡಿ ಅವರುಗಳಿಗೆ ವಿವಾಹಗಳನ್ನು ಮಾಡಬೇಕೆಂದು ಆ ಮುಕ್ತರಾಜನು ನಿಶ್ಚಯಿಸಿದನು ॥೩೬॥

ಮುಕ್ತರಾಜ ಪುತ್ರರ ವಿವಾಹ

ಆಹೂಯಮಂತ್ರಿಭಿಸ್ಸಾರ್ಧಂಯಯೌಮುನಿವರಾಶ್ರಮಂ ।
ತತ್ರಸ್ಥಮುನಿಶಾರ್ದೂಲಾನ್ವಿಲೋಕ್ಯಮುನಿಸತ್ತಮಃ ॥೩೭॥

ತಥಾಬಹುಸುವರ್ಣಾನಿವಸ್ತ್ರಾಣಿಚಪುನಃ ಪುನಃ |
ಋಷಿಭ್ಯೋಭೂಸುರೇಭ್ಯಶ್ಚ ಬಂಧುಭ್ಯೋಮುನಿಸತ್ತಮಃ ||೨೭||

ತಾ|| ಆ ಮುಕ್ತರಾಜನು ತನ್ನ ಹೆಂಡತಿಯಾದ ಮುಕ್ತಕಾಂತೆಯೊಡಗೂಡಿ ಋಷಿಗಳಿಗೂ ಬ್ರಾಹ್ಮಣರಿಗೂ ಬಂಧುಗಳಿಗೂ, ಮಿತ್ರರಿಗೂ, ಪರಿವಾರದವರಿಗೂ. ಯಥೇಚ್ಛವಾಗಿ ಸುವರ್ಣವನ್ನೂ ವಸ್ತ್ರಗಳನ್ನೂ ಆಭರಣಗಳನ್ನೂ ದಾನವಾಗಿಕೊಟ್ಟು ತಾವು ಅತ್ಯಂತ ಸಂತೋಷಭರಿತರಾಗಿದ್ದರು ||೨೭||

ದತ್ವಾನತಿಸಂಪ್ರೀತೋ ಭಾರ್ಯಯಾಸಹಿತೋನಘಃ |
ಏವಂಕ್ರಮೇಣರಾಜರ್ಷೇರಷ್ಟೌಪುತ್ರಾವಿಜಜ್ಞಿರೇ ||೨೮||

ತಾ|| ಈ ಪ್ರಕಾರವಾಗಿ ಮುನಿಪುಂಗವನಾದ ಮುಕ್ತರಾಜರ್ಷಿಗೆ ತನ್ನ ಭಾರ್ಯೆಯಾದ ಸುದಕ್ಷಿಣಾದೇವಿಯಾದ ಮುಕ್ತಕಾಂತೆಯಲ್ಲಿ ಎಂಟು ಜನ ಪುತ್ರರು ಕ್ರಮಪ್ರಕಾರವಾಗಿ ಆದಾಗಲೂ ಸಹ ಭಾರ್ಯೆಯಿಂದ ಕೂಡಿದ ಆ ಮುಕ್ತರಾಜನು ಋಷಿಗಳಿಗೂ ಭೂಸುರರಿಗೂ ಮತ್ತು ಬಂಧುಗಳಿಗೂ ಸಹ ಮತ್ತೆ ಮತ್ತೆ ಸುವರ್ಣಾಭರಣಗಳನ್ನು ಕೊಟ್ಟವನಾದನು ||೨೮||

ತೇಷಾಮಪಿತಥೈವಾ್ಯಯಂಜಾತಕರ್ಮಾದಿಕಾಃಕ್ರಿಯಾಃ |
ಯಥಾಕ್ರಮಂಚಯೋಗೀಂದ್ರೈಸ್ಸಹಿತಕೃತವಾ್ಞತಥಾ ||೨೯||

ತಾ|| ಈ ರೀತಿಯಾಗಿ ಉಳಿದ ಏಳು ಜನ ಗಂಡು ಮಕ್ಕಳಿಗೂ ಅವರವರು ಜನಿಸಿದಾಗ ಆಯಾ ಕಾಲದಲ್ಲಿ ಮಹರ್ಷಿಗಳಿಂದ ಕೂಡಿ ಆ ಮುಕ್ತರಾಜನು ವೇದೋಕ್ತ ರೀತಿಯಲ್ಲಿ ಜಾತಕರ್ಮಾದಿ ಕ್ರಿಯೆಗಳನ್ನು ನಡೆಸಿ ಸಕಲರನ್ನೂ ಸಂತೋಷಪಡಿಸಿದನು ||೨೯||

ಜ್ಯೋತಿಷ್ಮಾ್ರಪ್ರಥಮಸ್ತತ್ರದ್ವಿತೀಯೋಹಂಸಕಸ್ಮೃತಃ |
ಬಾಹುಮಾನಿತಿವಿಖ್ಯಾತಃ ಸ್ತೃತೀಯೋಮುನಿಸತ್ತಮಃ ||೩೦||

ತಾ|| ಜ್ಯೇಷ್ಟಪುತ್ರನು ಜ್ಯೋತಿಷ್ಮಂತನೆಂತಲೂ ಎರಡನೆಯವನು ಹಂಸಕನೆಂತಲೂ ಮತ್ತು ಪ್ರಖ್ಯಾತನಾದ ಬಾಹುಮಂತನೆಂಬುವನು ಮೂರನೆಯ ಮಗನಾಗಿ ಮುಕ್ತರಾಜನಿಗೆ ಹುಟ್ಟಿದರು ||೩೦||

ಚತುರ್ಥೋಮಂದಪಾಲಾಖ್ಯಃರುಕ್ಮವರ್ಣೇತತಃಪರಂ |
ರುಕ್ಮಮಾಲಿರುಕ್ಮಕಂಠಃ ಚತುರೋರುಕ್ಮಭೂಷಣಃ ||೩೧||

ತಾ|| ನಾಲ್ಕನೆಯವನಾಗಿ ಮಂದಪಾಲನೂ ಅನಂತರ ರುಕ್ಮವರ್ಣನು ಐದನೆಯವರಾಗಿಯೂ ಹುಟ್ಟಿದರು ಆರನೆಯವನು ರುಕ್ಮಮಾಲಿಯಾಗಿಯೂ ಏಳನೆಯವನು ಚತುರನಾದ ರುಕ್ಮಭೂಷಣನಾಗಿ ಮುಕ್ತರಾಜ ದಂಪತಿಗಳಿಗೆ ಗಂಡು ಮಕ್ಕಳು ಹುಟ್ಟಿದರು ||೩೧||

ವಿಷ್ಣುದಾಸಾಭಿಧಾನಶ್ಚಪುತ್ರಾಸ್ತಸ್ಯವಿಚಕ್ಷಣಾಃ ।
ಶುಕ್ಲಪಕ್ಷೇಂದುವನ್ಮಾನೇಃಕ್ರಮಾದ್ವೃದ್ಧಿಮುಪೇಯುಷಃ ॥೩೨॥

ತಾ॥ ಕೊನೆಯುವನು ವಿಷ್ಣುದಾಸನೆಂದು ಹೆಸರಾದನು ಈ ರೀತಿ ಎಂಟು ಜನ ಗಂಡು ಮಕ್ಕಳು ಶುಕ್ಲಪಕ್ಷದ ಚಂದ್ರನಂತೆ ದಿನ ದಿನವೂ ಪ್ರವರ್ಧಮಾನರಾಗಿ ಮುಕ್ತರಾಜದಂಪತಿಗಳನ್ನು ಆನಂದಪರವಶರನ್ನಾಗಿ ಮಾಡಿದರು ॥೩೨॥

ಪುತ್ರಾನ್ವಿಲೋಕ್ಯರಾಜರ್ಷಿರ್ಯಥಾಕಾಯುತಂದ್ರಿತಃ ।
ಚೌಲೋಪನಯನಾದೀನಿಕಾರಯಾಮಾಸಶೀಘ್ರತಃ ॥೩೩॥

ತಾ॥ ಆ ಮುಕ್ತರಾಜನು ತನ್ನ ಎಂಟು ಮಂದಿ ಪುತ್ರರಿಗೂ ಉಕ್ತಕಾಲಗಳಲ್ಲಿ ಚೌಲೋಪನಯನಾದಿ ಮಂಗಳ ಕಾರ್ಯಗಳನ್ನು ಶೀಘ್ರವಾಗಿ ಸಕಾಲದಲ್ಲಿ ಮಾಡಿದವನಾದನು ॥೩೩॥

ತೇಚಪುತ್ರಾಮಹೇಷ್ವಾಸಾವೇದವೇದಾಂಗಪಾರಗಾಃ ।
ನೀತಿಶಾಸ್ತ್ರಪುರಾಣಾದಿಸರ್ವವಿದ್ಯಾವಿಶಾರದಾಃ ॥೩೪॥

ತಾ॥ ಆ ಮುಕ್ತರಾಜನ ಪುತ್ರರೆಲ್ಲರೂ ವೇದವೇದಾಂಗಗಳಿಂದ ಕೂಡಿದ ಸಕಲ ಶಾಸ್ತ್ರ ಪುರಾಣಗಳಲ್ಲಿ ಪಾರಂಗತರಾಗಿಯೂ ಅಸ್ತ್ರಶಸ್ತ್ರಾದಿ ಸಕಲ ಧನುರ್ವಿದ್ಯಾ ಪಾರಂಗತರಾಗಿಯೂ ರಾಜಕಾರ್ಯಗಳಲ್ಲಿ ನೀತಿಶಾಸ್ತ್ರ ಪಾರಾಂಗತರಾಗಿಯೂ ಶೋಭಿಸಿದರು ॥೩೪॥

ಶಿಕ್ಷಿತಾಮುನಿಶಾರ್ದೂಲೈರ್ಬಭೂವುರ್ಮುನಿಸತ್ತಮಾಃ ।
ತತೋಮುಕ್ತಕರಾಜರ್ಷಿಪುತ್ರಾಣಾಮಮಿತೌಜಸಾಂ ॥೩೫॥

ತಾ॥ ಶ್ರೇಷ್ಟರಾದ ಮುನಿಗಳಿಂದ ಶಿಕ್ಷಿತರಾಗಿ ಶಮದಮಾದಿ ಅಷ್ಟಗುಣಗಳಿಂದ ಮುನಿಗಳೆನಿಸಿಕೊಂಡರು ಪೂರ್ಣಯೌವ್ವನಸಂಪನ್ನರಾಗಿ ಸಿಂಹ ಪರಾಕ್ರಮವುಳ್ಳವರಾಗಿಯೂ ಅತ್ಯಂತ ತೇಜಸ್ವಿಗಳಾಗಿಯೂ ಇದ್ದರು ॥೩೫॥

ವಿವಾಹಂಕರ್ತುಮುದ್ಯುಕ್ತಃಸಮ್ಮಂತ್ರ್ಯಾಪ್ತೈಜನೈಸ್ಸಹ ।
ರೂಪಯೌವ್ವನಸಂಪನ್ನಾನ್‌ದೃಷ್ಟ್ವಾಸಿಂಹಪರಾಕ್ರಮಾನ್ ॥೩೬॥

ತಾ॥ ಸಕಲ ವಿದ್ಯಾಪಾರಂಗತರಾಗಿ ರೂಪಸಂಪನ್ನರಾಗಿ ಯೌವ್ವನ ಯುಕ್ತರಾಗಿ ಸಿಂಹ ಪರಾಕ್ರಮದಿಂದಿರುವ ತನ್ನ ಮಕ್ಕಳನ್ನು ನೋಡಿ ಅವರುಗಳಿಗೆ ವಿವಾಹಗಳನ್ನು ಮಾಡಬೇಕೆಂದು ಆ ಮುಕ್ತರಾಜನು ನಿಶ್ಚಯಿಸಿದನು ॥೩೬॥

ಮುಕ್ತರಾಜ ಪುತ್ರರ ವಿವಾಹ

ಆಹೂಯಮಂತ್ರಿಭಿಸ್ಸಾರ್ಧಂಯಯೌಮುನಿವರಾಶ್ರಮಂ ।
ತತ್ರಸ್ಥಮುನಿಶಾರ್ದೂಲಾನ್ವಿಲೋಕ್ಯಮುನಿಸತ್ತಮಃ ॥೩೭॥

ತಾ|| ಆ ಮುಕ್ತರಾಜನು ಈ ರೀತಿಯಾಗಿ ನಿಶ್ಚಯಿಸಿದವನಾಗಿ ತನ್ನ ಪುತ್ರರೊಡನೆಯೂ ಮಂತ್ರಿಗಳೊಡನೆಯೂ ಕೂಡಿ ಮಹರ್ಷಿಗಳು ತಪಸ್ಸನ್ನು ಮಾಡುತ್ತಿದ್ದ ತಪೋವನವನ್ನು ಸೇರಿದನು ||೩೭||

ಪ್ರೋವಾಚಮಧುರಂವಾಕ್ಯಂಪ್ರಾಂಜಲಿರ್ವಿನಯಾನ್ವಿತಃ ।
ಶೃಣುಧ್ವಂಮುನಿಶಾರ್ದೂಲಂಮದ್ವಾಕ್ಯಮಮಿತೌಜಸಃ ||೩೮||

ತಾ|| ಈ ರೀತಿಯಾಗಿ ವನವನ್ನು ಪ್ರವೇಶಿಸಿದ ಆ ಮುಕ್ತರಾಜನು ಮುನೀಂದ್ರರನ್ನು ಕಂಡು ವಿನಯದಿಂದ ಕೂಡಿ ಅವರುಗಳಿಗೆ ನಮಸ್ಕಾರಗಳನ್ನು ಮಾಡಿ ಮಹಾತೇಜೋವಂತರಾದ ಋಷಿಶ್ರೇಷ್ಟರೇ ನನ್ನ ವಾಕ್ಯಗಳನ್ನು ಕೇಳಬೇಕೆಂದು ತನ್ನ ಮಧುರ ವಾಕ್ಯಗಳಿಂದ ಆ ಮುನಿಶ್ರೇಷ್ಟರನ್ನು ಪ್ರಾರ್ಥಿಸಿದನು ||೩೮||

ಏತೇಷಾಂಮಮಪುತ್ರಾಣಾಂರೂಪಯೌವ್ವನಶಾಲಿನಾಂ ।
ಸರ್ವಶಾಸ್ತ್ರವಿದಾಮದ್ಯವಿವಾಹಂಕರ್ತುಮುದ್ಯತಃ ||೩೯||

ತಾ|| ಎಲೈ ಮುನಿವರ್ಯರೇ ನನ್ನ ಜೊತೆಯಲ್ಲಿರುವ ಇವರುಗಳು ನನ್ನ ಪುತ್ರರು, ರೂಪಯೌವ್ವನವಂತರಾಗಿ ಸಕಲ ವಿದ್ಯೆಗಳನ್ನೂ ಕಲಿತು ವಿವಾಹಕ್ಕೆ ಪ್ರಾಪ್ತ ವಯಸ್ಕರಾಗಿರುತ್ತಾರೆ ಇವರಿಗೆ ವಿವಾಹವನ್ನು ಮಾಡಬೇಕೆಂದು ನಾನು ಉದ್ಯುಕ್ತನಾಗಿದ್ದೇನೆ ||೩೯||

ತಪೋಧನಾನಾಂಯುಷ್ಮಾಕಂಸವಿಧಂಪ್ರಾಪ್ತವಾನಹಂ ।
ರೂಪಯೌವ್ವನಶಾಲಿನ್ಯಃಕನ್ಯಕಾಸುಕುಲೋದ್ಭವಾಃ ||೪೦||
ಕುತ್ರಸನ್ತಿಮಹಾಭಾಗಾಃತತ್ಸರ್ವಂವಕ್ತುಮರ್ಹಥ ।
ಏತಚ್ಛೃತ್ವಾಋಷಿಶ್ರೇಷ್ಠಾವಿಲೋಕ್ಯಜ್ಞಾನದೃಷ್ಟಿಭಿಃ ||೪೧||

ತಾ|| ಆದ್ದರಿಂದ ತಪೋಧನರಾದ ನಿಮ್ಮ ಸಾನಿಧ್ಯಕ್ಕೆ ಬಂದಿರುವೆನು ಸತ್ಕುಲ ಪ್ರಸೂತರೂ ರೂಪಯೌವ್ವನಗಳಿಂದ ಕೂಡಿರುವ ಕನ್ಯೆಯರು ಎಲ್ಲಿರುವರೋ, ತಾವುಗಳು ದಯವಿಟ್ಟು ತಿಳಿಸಬೇಕೆಂದು ಆ ಮುಕ್ತರಾಜನು ಮಹರ್ಷಿಗಳನ್ನು ಪ್ರಾರ್ಥಿಸಲು ಮುಕ್ತರಾಜನ ಮಾತುಗಳನ್ನು ಕೇಳಿದ ಆ ಯೋಗಿಗಳಾದ ಮಹರ್ಷಿಗಳು ತಮ್ಮ ಜ್ಞಾನದೃಷ್ಟಿಯಿಂದ ನೋಡಿದವರಾದರು ||೪೦||೪೧||

ಪ್ರೋಚುರ್ಮುಕ್ತಕರಾಜರ್ಷಿಮತೀವಪ್ರಮುದಾನ್ವಿತಾಃ ।
ಶೃಣುಮುಕ್ತಕರಾಜರ್ಷೇಪುತ್ರಾಣಾಂತವಧೀಮತಾಂ ||೪೨||
ಅನುಕೂಲಾಃರೂಪವತ್ಯಃಕುಲೀನಾಶ್ಚಾಪಿಕನ್ಯಕಾಃ ।
ವಸನ್ತ್ಯತ್ರೈವಮುನಿಭಿಃಪಾಲಿತಾಃಮುನಿಸತ್ತಮ ||೪೩||

ತಾ|| ಈ ರೀತಿಯಾಗಿ ಆ ಮಹರ್ಷಿಗಳು ತಮ್ಮ ಜ್ಞಾನದೃಷ್ಟಿಯಿಂದ ಸಕಲವೂ ತಿಳಿದವರಾಗಿ ಸಂತೋಷದಿಂದ ಮುನಿಶ್ರೇಷ್ಟನಾದ ಆ ಮುಕ್ತರಾಜನೊಡನೆ ಈ ರೀತಿ

ಯಾಗಿ ಹೇಳಿದರು. ಎಲೈ ಮುಕ್ತರಾಜನೇ ಕೇಳು! ಧೀಮಂತರಾದ ನಿನ್ನ ಪುತ್ರರಿಗೆ ಅನುಕೂಲರಾದ ಮತ್ತು ರೂಪಯೌವ್ವನವತಿಯರಾದ ಕುಲೀನೆಯರಾದ ಕನ್ಯೆಯರು ಇಲ್ಲಿಯೇ ಋಷಿಗಳಿಂದ ಪೋಷಿಸಲ್ಪಡುತ್ತಿದ್ದಾರೆ ॥೪೨॥೪೩॥

ಸುತೀಕ್ಷ್ಣೋಮಂದಪಾಲೋಥಮಾಗಧೋವಿನಯಾನ್ವಿತಃ ।
ಜಾಬಾಲ್ಯತ್ರೇಯಶ್ಯಾಂಡಿಲ್ಯಃಗಾರ್ಗ್ಯಃಕೌಶಿಕನಾಮಕಃ ॥೪೪॥

ತಾ॥ ಸುತೀಕ್ಷಣ, ಮಂದಪಾಲ, ಮಾಗಧ, ಜಾಬಾಲ, ಆತ್ರೇಯ, ಶ್ಯಾಂಡಿಲ್ಯ, ಗಾರ್ಗ್ಯ, ಕೌಶಿಕರೆಂಬ ಮಹರ್ಷಿಗಳು ಇಲ್ಲಿಯೇ ನೆಲೆಗೊಂಡಿರುವರು ॥೪೪॥

ತೇವಸನ್ತಿಮಹಾಭಾಗಾಮುನಯೋಬ್ರಹ್ಮವಂಶಜಾಃ ।
ತೇಷಾಂವಂಶೇಸಮುದ್ಭೂತಾಃಕನ್ಯಕಾಲಕ್ಷಣಾನ್ವಿತಾಃ ॥೪೫॥

ತಾ॥ ಈ ಮಹರ್ಷಿಗಳೆಲ್ಲರೂ ಬ್ರಹ್ಮ ವಂಶದವರು ಅವರುಗಳ ವಂಶದಲ್ಲಿ ಜನಿಸಿದ ಶುಭಲಕ್ಷಣಗಳಿಂದ ಕೂಡಿದ ಸರ್ವಮಂಗಳೆಯರಾದ ಕನ್ಯೆಯರಿರುವರು ॥೪೫॥

ತಾಸ್ಸಮಾದಾಯರಾಜರ್ಷೇಪುತ್ರಾಣಾಮಮಿತೌಜಸಾಂ ।
ಪಾಣಿಗ್ರಹೋತ್ಸವಂಶೀಘ್ರಂಕಾರಯಸ್ವಮಹಾಮತೇ ॥೪೬॥

ತಾ॥ ಎಲೈ ಮಹಾಬುದ್ಧಿವಂತನಾದ ಮುಕ್ತರಾಜನೇ ನೀನು ಅವರಲ್ಲಿಗೆ ಹೋಗಿ ಆ ಮಹರ್ಷಿಗಳ ಅಪ್ಪಣೆಯಿಂದ ಆ ಕನ್ಯೆಯರನ್ನು ಕರೆದುಕೊಂಡು ಹೋಗಿ ನಿನ್ನ ಪುತ್ರರಿಗೆ ಬೇಗನೆ ವಿವಾಹಮಹೋತ್ಸವವನ್ನು ನೆರವೇರಿಸುವವನಾಗು ॥೪೬॥

ಇತ್ಯೇತದ್ವಚನಂಶ್ರುತ್ವಾಋಷೀಣಾಂದೀಪ್ತತೇಜಸಾಂ ।
ಮುಕ್ತಕೋಮುನಿಶಾರ್ದೂಲಃಸುತೀಕ್ಷ್ಣಸ್ಯಾಶ್ರಮಂಯಯೌ ॥೪೭॥

ತಾ॥ ಮಹಾತೇಜಸ್ವಿಯಾದ ಆ ಮುನಿಪುಂಗವನ ಮಾತನ್ನು ಕೇಳಿದ ಮುನಿ ಶಾರ್ದೂಲನಾದ ಆ ಮುಕ್ತರಾಜನು ಸುತೀಕ್ಷ್ಣ ಮಹರ್ಷಿಯ ಆಶ್ರಮವನ್ನು ಕುರಿತು ತೆರಳಿದನು ॥೪೭॥

ತತ್ರಗತ್ವಾಸುತೀಕ್ಷ್ಣಾದೀನ್ಋಷೀರಗ್ನಿಸಮಪ್ರಭಾನ್ ।
ಪ್ರಣಮ್ಯವಿನಯೈರ್ಯುಕ್ತಃಸಪುತ್ರೋವಾಕ್ಯಮಬ್ರವೀತ್ ॥೪೮॥

ತಾ॥ ಈ ರೀತಿಯಾಗಿ ಪ್ರಯಾಣಮಾಡಿದ ಮುಕ್ತರಾಜನು ಸುತೀಕ್ಷ್ಣಾದಿ ಮಹರ್ಷಿಗಳ ಆಶ್ರಮಕ್ಕೆ ಬಂದು ಅಗ್ನಿಸಮಾನರಾಗಿ ಪ್ರಕಾಶಿಸುತ್ತಿರುವ ಆ ಸುತೀಕ್ಷ್ಣಾದಿ ಮಹರ್ಷಿಗಳಿಗೆ ಪುತ್ರರಿಂದ ಕೂಡಿದ ಮುಕ್ತರಾಜನು ಅವರುಗಳಿಗೆ ನಮಸ್ಕಾರಾದಿ ಗಳನ್ನು ಮಾಡಿ ವಿನಯದಿಂದ ಈ ರೀತಿಯಾಗಿ ಪ್ರಾರ್ಥಿಸಿದನು ॥೪೮॥

ಶೃಣುಧ್ವಂಮುನಿಶಾರ್ದೂಲಾಃಪುತ್ರಾಣಾಂಮಮಧೀಮತಾಂ ।
ವಿವಾಹಾರ್ಥಮಹಂಶೀಘ್ರಂತ್ವತ್ಸಮೀಪಮುಪಾಗತಃ ॥೪೯॥

ತಾ॥ ಎಲೈ ತಪೋಧನರಾದ ಮಹಾಮುನಿಶ್ರೇಷ್ಟರೇ! ಧೀಮಂತರಾದ ನನ್ನ ಪುತ್ರರಿಗೆ ಬೇಗನೇ ವಿವಾಹ ಮಾಡಬೇಕೆಂದೆಣಿಸಿ ನಿಮ್ಮ ಸಮೀಪಕ್ಕೆ ಪುತ್ರಸಹಿತನಾಗಿ ಬಂದಿರುತ್ತೇನೆ ॥೪೯॥

ವರ್ತನ್ತೇರೂಪಸಂಪನ್ನಾಃಕನ್ಯಕಾಭವತಾಂಶ್ರುತಂ ।
ತಾಃಕನ್ಯಾಮಮಪುತ್ರೇಭ್ಯೋದಾತುಂಯೂಯವಿವಾಹಾರ್ಥಂ॥೫೦॥

ತಾ॥ ರೂಪಯೌವ್ವನ ಸಂಪನ್ನರಾದ ನಿಮ್ಮ ಕನ್ಯೆಯರು ವಿವಾಹಯುಕ್ತ ವಯಸ್ಕರಾಗಿದ್ದಾರೆಂದು ಕೇಳಿ ತಮ್ಮಗಳಲ್ಲಿಗೆ ಬಂದಿರುತ್ತೇನೆ. ನನ್ನ ಪುತ್ರರಿಗೆ ನಿಮ್ಮ ಕನ್ಯೆಯರನ್ನು ಕೊಟ್ಟು ಕನ್ಯಾದಾನಮಾಡಬೇಕೆಂದು ಮುಕ್ತರಾಜನು ಸುತೀಕ್ಷ್ಣಾದಿ ಮಹರ್ಷಿಗಳನ್ನು ಪ್ರಾರ್ಥಿಸಿದನು ॥೫೦॥

ಇತ್ಯೇತದ್ವಚನಂಶ್ರುತ್ವಾಸುತೀಕ್ಷ್ಣಪ್ರಮುಖಾಸ್ತಥಾ ।
ಅಭಿನಂದ್ಯವಚಸ್ತಸ್ಯವಾಕ್ಯಮೇವಮಥಾಬ್ರುವೀತ್ ॥೫೧॥

ತಾ॥ ಈ ರೀತಿಯಾಗಿ ಪ್ರಾರ್ಥಿಸಿದ ಮುಕ್ತರಾಜನ ವಾಕ್ಯಗಳನ್ನು ಕೇಳಿದ ಆ ಸುತೀಕ್ಷ್ಣಾದಿ ಮಹರ್ಷಿಗಳು ಆ ಮುಕ್ತರಾಜನನ್ನು ಅಭಿನಂದಿಸಿ ಈ ರೀತಿಯಾಗಿ ಹೇಳಿದರು ॥೫೧॥

ಶೃಣುಮುಕ್ತಕರಾಜರ್ಷೇಸಮ್ಯಗುಕ್ತಂತ್ವಯಾನಘ ।
ಅಸ್ಮಾಸುಕನ್ಯಾವರ್ತನ್ತೇರೂಪಯೌವ್ವನಸಂಪದಃ ॥೫೨॥

ತಾ॥ ಎಲೈ ಮುಕ್ತರಾಜನೇ ಕೇಳು ನಿನ್ನಿಂದ ವರ್ಣಿಸಲ್ಪಟ್ಟ ರೂಪಯೌವ್ವನ ಸಂಪನ್ನೆಯರಾದ ಕನ್ಯೆಯರು ನಮ್ಮಲ್ಲಿರುವರು ॥೫೨॥

ಪುತ್ರೇಭ್ಯಸ್ತವತಾಃಕನ್ಯಾಃದಾಸ್ಯಾಮೋನಾಸ್ತಿಸಂಶಯಃ ।
ಇತ್ಯೇತದ್ವಚನಂಶ್ರುತ್ವಾಮುಕ್ತಕೋಮುನಿಸತ್ತಮಃ ॥೫೩॥

ತಾ॥ ಎಲೈ ಮುಕ್ತರಾಜನೇ ನಿನ್ನ ಪುತ್ರರಿಗೆ ನಮ್ಮಗಳ ಸುಲಕ್ಷಣ ಸುಶೀಲೆಯರಾದ ಕನ್ಯೆಯರನ್ನು ಕೊಡುವುದರಲ್ಲಿ ಸಂಶಯವಿಲ್ಲವೆಂದು ಹೇಳಿದ ಸುತೀಕ್ಷ್ಣಾದಿ ಮಹರ್ಷಿಗಳ ವಾಕ್ಯಗಳನ್ನು ಕೇಳಿದ ಮುನಿಶ್ರೇಷ್ಟನಾದ ಆ ಮುಕ್ತರಾಜನು ॥೫೩॥

ಋಷಿಭಿಸ್ಸಹತಾಃಕನ್ಯಾಃಸಮಾದಾಯಪುರಂಯಯೌ ।
ತತಶ್ಶುಭೇಮುಹೂರ್ತೇತುಪ್ರಾಪ್ತೇಬಂಧುಜನೈಸ್ಸಹಾ ॥೫೪॥

ತಾ॥ ವಿವಾಹ ವಧುಗಳಾದ ಆ ಕನ್ಯೆಯರನ್ನೂ ಅವರುಗಳ ಮಾತಾಪಿತೃಗಳಾದ ಸುತೀಕ್ಷ್ಣಾದಿ ಮಹರ್ಷಿಗಳನ್ನೂ ಸಹ ಕರೆದುಕೊಂಡು ತನ್ನ ಪಟ್ಟಣವನ್ನು ಸೇರಿ ಆ ಮುಕ್ತರಾಜನು ತನ್ನ ಬಂಧುಗಳನ್ನೂ ಮಿತ್ರಪರಿವಾರವನ್ನೂ ತನ್ನ ಪುತ್ರರ ವಿವಾಹಕ್ಕಾಗಿ ಸಕಲರನ್ನೂ ಕರಯಿಸಿದನು ಮತ್ತು ಶುಭಮುಹೂರ್ತದಲ್ಲಿ ॥೫೪॥

ಯಥಾಕ್ರಮೇಣಪುತ್ರಾಣಾಂಸರ್ವಸಂಪತ್ಸಮಾಹಿತಃ ।
ವಿವಾಹಂಕಾರಯಾಮಾಸಯಥಾಶಾಸ್ತ್ರಮತಂದ್ರಿತಃ ॥೫೫॥

ತಾ॥ ವಿವಾಹಕ್ಕೆಬೇಕಾದ ಸಕಲಸಾಂಬಾರಗಳನ್ನು ಅಣಿಮಾಡಿಕೊಂಡು ಶಾಸ್ತ್ರೋಕ್ತವಾಗಿ ಒಳ್ಳೆ ಶುಭಮುಹೂರ್ತದಲ್ಲಿ ಶುಭ ಲಗ್ನದಲ್ಲಿ ಕ್ರಮವಾಗಿ ತನ್ನ ಪುತ್ರರಿಗೂ ಮಹರ್ಷಿಗಳ ಕನ್ಯೆಯರಿಗೂ ವಿವಾಹ ಮಹೋತ್ಸವವನ್ನು ಬಹು ವೈಭವ ವಾಗಿ ಮಾಡಿಸಿದನು ।।೫೫।।

ಸ್ವಸ್ಯಕನ್ಯಾಂಚಸುಶ್ರೋಣೀಂಸರ್ವಲಕ್ಷಣಸಂಯುತಾಂ ।
ಸರ್ವಶಾಸ್ತ್ರವಿದೇತಸ್ಮೈಗೌತಮಾಯದದೌಪುನಃ ॥೫೬॥

ತಾ॥ ಅನಂತರ ಮುಕ್ತರಾಜನು ಸರ್ವ ಲಕ್ಷಣವತಿಯೂ ಸುಶ್ರೋಣಿಯೂ ಆದ ತನ್ನ ಮಗಳನ್ನು ಸರ್ವ ಶಾಸ್ತ್ರ ವಿಶಾರದನಾದ ಗೌತಮನೆಂಬ ಮಹರ್ಷಿಗೆ ಕೊಟ್ಟು ಕನ್ಯಾದಾನ ಮಾಡಿ ಮುಹೂರ್ತವನ್ನು ನೆರವೇರಿಸಿದನು ।।೫೬।।

ತತೋಮಹೋತ್ಸವೇತಸ್ಮಿನ್ವಿವಾಹಾಖ್ಯೇಸಮಾಪಿತೇ ।
ತಪೋಧನಾನಾಂಸರ್ವೇಷಾಂಬಂಧೂನಾಂಚವಿಶೇಷತಃ ॥೫೭॥
ತತೋದಿವ್ಯಾನಿವಸ್ತ್ರಾಣಿಭೂಷಣಾನಿಧನಾನಿಚ ।
ಯಥಾರ್ಹಂಪುರುಹೂತಾದೀನ್‌ಲೋಕಪಾಲಾನ್‌ವಿಶೇಷತಃ ॥೫೮॥
ತೋಷಯಾಮಾಸರಾಜರ್ಷಿಃಪುತ್ರೈಃಸಹವಿಚಕ್ಷಣೈಃ ।
ಏವಂಕ್ರಮೇಣಕಾಲೇಷುಗಚ್ಛತ್ಸುಮುನಿಸತ್ತಮಃ ॥೫೯॥

ತಾ॥ ಈ ರೀತಿಯಾಗಿ ಮಹಾ ವೈಭವದಿಂದ ಪುತ್ರರಿಗೂ ಪುತ್ರಿಗೂ ವಿವಾಹ ಮಹೋತ್ಸವವನ್ನು ನೆರವೇರಿಸಿದ ತರುವಾಯ ಆ ಮಹೋತ್ಸವವು ಪೂರೈಸಲು ವಿವಾಹಕ್ಕಾಗಿ ಬಂದಿದ್ದ ಸಕಲತಪೋಧನರಾದ ಮಹರ್ಷಿಗಳಿಗೂ, ಇಂದ್ರಾದಿ ಲೋಕ ಪಾಲಕರಿಗೂ ಪೂಜೆಯನ್ನು ಮಾಡಿ ಭಕ್ತಿಯಿಂದ ಪ್ರಣಾಮಗಳನ್ನು ಮಾಡಿ ಯಥೇಚ್ಛ ವಾಗಿ ವಸ್ತುಗಳನ್ನೂ ಆಭರಣಗಳನ್ನೂ ಸುವರ್ಣವನ್ನೂ ಕೊಟ್ಟು ತನ್ನ ಬಂಧುಗಳಿಗೂ ಮಿತ್ರರಿಗೂ ಪರಿವಾರದವರಿಗೂ ವಸ್ತ್ರಾದಿ ಆಭರಣಗಳನ್ನು ಪಾರಿತೋಷಕವಾಗಿ ಕೊಟ್ಟು ವಿವಾಹಕ್ಕೆ ಬಂದಿದ್ದ ಸಮಸ್ತದೇವ ಬ್ರಾಹ್ಮಣರಾದಿಯಾಗಿ ಎಲ್ಲರನ್ನು ಕಳುಹಿಸಿ ವಿಚಕ್ಷಣರಾದ ತನ್ನ ಪುತ್ರರಿಂದಲೂ ಸುಶೀಲಸಲ್ಲಕ್ಷಣವತಿಯರಾದ ಸೊಸೆಯರಿಂದಲೂ ಪತ್ನೀ ಸಮೇತನಾಗಿ ಆ ಮುಕ್ತರಾಜನು ಬಹುಕಾಲ ಸುಖವನ್ನನು ಭವಿಸಿದನು ॥೫೭॥೫೮॥೫೯॥

ಯೋಗಿದರ್ಶನ

ಏತಸ್ಮಿನ್ನಂತರೇಕಾಲೇಮಧ್ಯಾಹ್ನೇಸಮುಪಸ್ಥಿತೇ ।
ಕಶ್ಚಿದ್ಯೋಗೀಸಮಾಯಾತೋಹ್ಯತಿಥೇರ್ಭಾವಮಾಶ್ರಿತಃ ॥೬೦॥

ತಾ॥ ಈ ರೀತಿಯಾಗಿ ಆ ಮುಕ್ತರಾಜನು ಆನಂದದಿಂದಿರುವ ಒಂದಾನೊಂದು ದಿನ ಮಧ್ಯಾನ್ಹ ಸಮಯಕ್ಕೆ ಸರಿಯಾಗಿ ಒಬ್ಬಾನೊಬ್ಬ ಯೋಗಿಯು ಅತಿಥಿಯಾಗಿ ಆ ಮುಕ್ತರಾಜನ ಅರಮನೆಗೆ ಬಂದಂಥಾವನಾದನು ॥೬೦॥

ಪ್ರತ್ಯುತ್ಥಾಯಮುನಿಂದೃಷ್ಟ್ವಾಮುಕ್ತಕೋಮುವಿಪುಂಗತಃ ।
ಅರ್ಘ್ಯಪಾದ್ಯೈಶ್ಚಸಂಪೂಜ್ಯರತ್ನಪೀಠೇನಿವೇಶ್ಯಚ ॥೬೧॥

ಪತ್ನೀಂಚಾಹೂಯಯತ್ತೇನವಾಕ್ಯಮೇವಮುಥಾಬ್ರವೀತ್ ।
ಕುರುಷ್ವಪಾಕಂಶೀಘ್ರೇಣಕಾಲಂನಕ್ಷೇಪ್ತುಮರ್ಹಸಿ ॥೬೨॥

ತಾ॥ ಹೀಗೆ ಸಮಯಕ್ಕೆ ಸರಿಯಾಗಿ ಬಂದಂತಹ ಯೋಗಿಯನ್ನು ಕಂಡು ಆ ಮುಕ್ತರಾಜನು ಎದುರ್ಗೊಂಡು ಮರ‍್ಯಾದೆಯಿಂದ ಆ ಯೋಗಿಯನ್ನು ರತ್ನಖಚಿತವಾದ ಪೀಠದಲ್ಲಿ ಕುಳ್ಳಿರಿಸಿ ಉದಕವನ್ನುತಂದು ಆ ಯೋಗಿಯ ಪಾದಗಳನ್ನು ತೊಳೆದು ಅರ್ಘ್ಯ ಪಾದ್ಯಾಚಮನಗಳನ್ನು ಮಾಡಿ ಪುಷ್ಪಗಳಿಂದ ಪೂಜಿಸಿದವನಾಗಿ ತನ್ನ ಸಹ ಧರ್ಮಿಣಿಯಾದ ಮುಕ್ತಕಾಂತೆಗೆ ಅತಿಥಿಯನ್ನು ಸತ್ಕರಿಸಲು ಕಾಲವಿಳಂಬವಾಗದಂತೆ ಭಕ್ಷ್ಯಗಳನ್ನು ಮಾಡೆಂದು ಹೇಳಿದನು ॥೬೧॥೬೨॥

ಇತ್ಯೇತದ್ವಚನಂಶ್ರುತ್ವಾಜೋಷಮಾಸ್ತೇವಿಧೇರ್ವಶಾತ್ ।
ತಾಂದೃಷ್ಟ್ವಾಕೋಪತಾಮ್ರಾಕ್ಷೋಭರ್ತ್ಸಯಾಮಾಸನೃಮುನಿಃ॥೬೩॥

ತಾ॥ ಈ ರೀತಿಯಾಗಿ ತನ್ನ ಗಂಡನಾದ ಮುಕ್ತರಾಜನು ಹೇಳಿದ ಮಾತುಗಳನ್ನು ಕೇಳಿದ ಆ ಮುಕ್ತಕಾಂತೆಯು ವಿಧಿವಶದಿಂದ ಮೌನವಾಗಿರಲು ಇದನ್ನು ಕಂಡ ಆ ಮುಕ್ತರಾಜನು ರೋಷಗೊಂಡವನಾಗಿ ನೇತ್ರಗಳನ್ನು ಕೆಂಪಗೆ ಮಾಡಿಕೊಂಡು ತನ್ನ ಪತ್ನಿಯನ್ನು ಗದರಿಸಿದನು ॥೬೩॥

ಏವಂನಿರ್ಭರ್ತ್ಸಿತಾನಾರೀಮುಕ್ತಕಾನ್ತಾತಿಮಾನಿನೀ ।
ತತ್ರೈವಾನ್ತರ್ದಧೇಶೀಘ್ರಂಮಾಯಾಶಕ್ತಿಸ್ವರೂಪಿಣೀ ॥೬೪॥

ತಾ॥ ಆ ಮುಕ್ತಕಾಂತೆಯು ತಾನು ಸಾಕ್ಷಾತ್ ಪಾರ್ವತೀ ದೇವಿಯ ಮಾಯಾ ಶಕ್ತಿ ಸ್ವರೂಪಿಣಿಯಾದ ಕಾರಣ ಗಂಡನಾದ ಮುಕ್ತರಾಜನು ಈ ರೀತಿ ಗರ್ಜಿಸಲು ತಕ್ಷಣವೇ ಅಲ್ಲಿಯೇ ಅಂತರ್ಧಾನವಾದಳು ॥೬೪॥

ತಾಮದೃಷ್ಟ್ವಾಮುನೀಂದ್ರೋಪಿಭಯವಿಭ್ರಾನ್ತಚೇತಸಾ ।
ಯೋಗಿಂದ್ರಮಾಗತಂದೃಷ್ಟ್ವಾವಾಕ್ಯಮೇತದುವಾಚಹ ॥೬೫॥

ತಾ॥ ತನ್ನ ಪ್ರಾಣಕಾಂತೆಯಾದ ಸುದಕ್ಷಿಣೆಯನ್ನು ಕಾಣದವನಾಗಿ ಆ ಮುಕ್ತರಾಜನು ಭಯವಿಭ್ರಾಂತ ಚಿತ್ತನಾಗಿ ಅತಿಥಿಯಾಗಿ ಬಂದಿರುವ ಆ ಯೋಗಿಯೊಡನೆ ಈ ರೀತಿ ಹೇಳಿದನು ॥೬೫॥

ಕಿನ್ನೇತದ್ಭಗವರ್ನಚಿತ್ರಂಗತಾಮಮಸುಭಾಮಿನೀ ।
ಮಮಪ್ರಾಣಸಮಾನಾರೀನಾಹಂಜೀವಾಮಿತಾಂವಿನಾ ॥೬೬॥

ತಾ॥ ಎಲೈ ಯೋಗೀಂದ್ರನಾದ ಭಗವಂತನೆ ಇದೇನಾಶ್ಚರ್ಯವು ನನ್ನ ಪ್ರಾಣಕ್ಕೆ ಸಮಾನಳಾದ ನನ್ನ ಹೆಂಡತಿಯು ಅದೃಶ್ಯಳಾಗಿರುವಳು ಅವಳನ್ನು ಬಿಟ್ಟು ನಾನು ಹೇಗೆ ಜೀವಿಸಲಿ ॥೬೬॥

ಇತ್ಯುಕ್ತ್ವಾವಿಲಪರ್ಶತತ್ರಮುಮೂರ್ಛಮುನಿಸತ್ತಮಃ ।
ಯೋಗೀಂದ್ರೋಪಿಮುನಿಂದೃಷ್ಟ್ವಾಮುಕ್ತಂವಿಗತಚೇತಸಂ ॥೬೭॥

ತಾ॥ ಈ ರೀತಿಯಾಗಿ ಆ ಮುಕ್ತರಾಜನು ವಿಲಾಪವನ್ನು ಮಾಡಿ ದುಃಖವನ್ನು ಭರಿಸಲಾರದೆ ಹೆಂಡತಿಯ ವಿಯೋಗವನ್ನು ನೆನೆನೆನೆದು ದುಃಖದಿಂದರೋಧಿಸುತ್ತಾ ಆ ಮುಕ್ತರಾಜನು ಮೂರ್ಛಿತನಾಗಲು ಬಂದಿದ್ದ ಆ ಯೋಗೀಂದ್ರನೇ ಶೈತ್ಯೋಪಚಾರ ವನ್ನು ಮಾಡಿ ಉಪಚರಿಸಿದನು ॥೬೮॥

ಮುಹೂರ್ತ್ತೋಸಮಾಶ್ವಾಸ್ಯವಾಕ್ಯಮೇವಮಥಾಬ್ರವಿತ್ ।
ಶೃಣುಮುಕ್ತಕರಾಜರ್ಷೇತ್ವಂಮಾಗಾಅತಿದೀನತಾಂ ॥೬೮॥

ತಾ॥ ಆ ಯೋಗಿಯು ಮುಕ್ತರಾಜನಿಗೆ ಉಪಚಾರಮಾಡಿ ಎಚ್ಚರಗೊಳಿಸಿದ ಬಳಿಕ ಮುಹೂರ್ತಕಾಲ ತನ್ನ ಮನಸ್ಸಿನಲ್ಲಿಯೇ ಯೋಚಿಸಿ ನಿಶ್ಚಯಿಸಿದವನಾಗಿ ಆ ಮುಕ್ತರಾಜನನ್ನು ಕುರಿತು ಈ ರೀತಿ ಹೇಳಿದನು ಎಲೈ ರಾಜರ್ಷಿಯೇ ಏಕೆ ನೀನು ಇಷ್ಟು ದೀನನಾಗಿ ರೋಧಿಸುತ್ತೀಯೇ ॥೬೮॥

ಋಣಾನುಬಂಧರೂಪೇಣಪಶುಪತ್ನೀಸುತಾಲಯಾಃ ।
ಭವನ್ತಿಚಋಣೇಕ್ಷೀಣೇಗಚ್ಛನ್ತೀತಿಯಥಾಗತಂ ॥೬೯॥

ತಾ॥ ಋಣಾನುಬಂಧನವಾದ ಪಶುಗಳೂ ಪತ್ನಿಯೂ, ಮಕ್ಕಳೂ, ಗೃಹಗಳೂ ಇವುಗಳೆಲ್ಲಾ ನಿನ್ನ ವಶವಾಗಿ ನಿನ್ನದಾಗಿ ಕಾಣಿಸುವುವು ಆ ನಿನ್ನ ಋಣವು ತೀರಿ ಹೋದರೆ ನಿನಗೆ ನಿನ್ನದಾಗಿದ್ದ ಸಕಲವೂ ಅಂದರೆ ಗೋಚರಿಸುತ್ತಿರುವ ಪಶು ಪತ್ನಿ ಸುತರೂ ಬಂಧುಗಳೂ ಪರಿವಾರವೂ ಸಾಮ್ರಾಜ್ಯವೂ ಸಕಲವೂ ಮರೆಯಾಗಿ ಹೋಗುವುದು ॥೬೯॥

ಏವಂವಿಜ್ಞಾಯತತ್ವೇನಧೀರಸ್ತತ್ರನಮುಹ್ಯತಿ ।
ತ್ವಂಧೀರೋಜ್ಞಾನಿನಾಂಶ್ರೇಷ್ಠೋನೈವಶೋಚತುಮರ್ಹಸಿ ॥೭೦॥

ತಾ॥ ಈ ರೀತಿಯಾಗಿ ಯತಾರ್ಥ ಜ್ಞಾನವನ್ನು ಆ ಯೋಗಿಯು ಆ ಮುಕ್ತ ರಾಜನಿಗೆ ತಿಳಿಸಿ ಎಲೈ ನೀನು ಧೀರನಾಗಿಯೂ ಜ್ಞಾನಿಯಾಗಿಯೂ ಅದರಲ್ಲೂ ಜ್ಞಾನ ಶ್ರೇಷ್ಠನಾಗಿಯೂ ಇರುವ ನೀನು ಈ ರೀತಿ ಚಿಂತಿಸಬೇಕೆ ನಿನ್ನ ಜ್ಞಾನ ಮಾರ್ಗದಿಂದ

ಅದನ್ನು ತಿಳಿಯುವವನಾಗು ಆಗ ನಿನಗೆ ಈಗ ಆಗಿರುವ ಮನೋದುಃಖವು ದೂರವಾಗಿ ಮನಶ್ಶಾಂತಿಲಭಿಸುವುದು ಎಂದು ಹೇಳಿದನು ॥೭೦॥

ಮುಕ್ತರಾಜನ ಜ್ಞಾನಸಾಮ್ರಾಜ್ಯ

ಇತ್ಯೇತದ್ವಚನಂಶ್ರುತ್ವಾಮುಕ್ತಕೋಮುನಿಸತ್ತಮಃ ।
ಯಥಾರ್ಥನಿಂತಿವಿಜ್ಞಾಯಂಧೈರ್ಯಂಸಾಲಂಬ್ಯಶೀಘ್ರತಂ ॥೭೧॥

ತಾ॥ ಈ ರೀತಿಯಾಗಿ ಬೋಧೆಮಾಡಿದ ಯೋಗೀಂದ್ರನ ವಾಕ್ಯಗಳನ್ನು ಕೇಳಿದ ಮುನಿಪುಂಗವನಾದ ಮುಕ್ತರಾಜನು ತನ್ನ ಯತಾರ್ಥ ಜ್ಞಾನದಿಂದ (ಆತ್ಮಜ್ಞಾನ) ವಿಜ್ಞಾನ ಯುಕ್ತನಾಗಿ ವಿಚಾರಮಾಡಿ ಬೇಗನೆ ಧೈರ್ಯವನ್ನು ತಾಳಿದನು (ಸಂಶಯವನ್ನು ತೊರೆದನು) ॥೭೧॥

ಪ್ರಣಮ್ಯಚೌತಿಥಂನೌನಿಂವಾಕ್ಯಮೇತದುವಾಚಹ ।
ಅಹಂಪಾಕಂಕರೋಮ್ಯದ್ಯಭಗರ್ವಭೋ..ಕ್ತುಮರ್ಹಸಿ ॥೭೨॥

ತಾ॥ ಆ ಮುಕ್ತರಾಜನು ಈ ರೀತಿಯಾಗಿ ಮನಸ್ಸಿನಲ್ಲಿ ಧೃಢ ನಂಬಿಕೆಯುಳ್ಳವನಾಗಿ ಅನಂತರ ಎದ್ದು ಎದುರಿಗಿರುವ ಯೋಗೀಂದ್ರನಿಗೆ ನಮಸ್ಕಾರಮಾಡಿ ಎಲೈ ಮಹಾತ್ಮನೇ ! ಈಗ ನಾನೇ ಭಕ್ಷ್ಯಗಳನ್ನು ಮಾಡಿ ತಮಗೆ ನಿವೇದಿಸುತ್ತೇನೆ ತಾವು ಸ್ವೀಕರಿಸಬೇಕೆಂದು ಪ್ರಾರ್ಥಿಸಿದನು ॥೭೨॥

ಇತ್ಯೇತದ್ವಚನಂಶ್ರುತ್ವಾಪ್ರತ್ಯುವಾಚಾತಿಥಿರ್ಮುನಿಃ ।
ಶೃಣುಮುಕ್ತಕರಾಜರ್ಷೇನಾಹಂಭೋಜ್ಯೇಕದಾಚನ ॥೭೩॥

ತಾ॥ ಈ ರೀತಿಯಾಗಿ ಮುಕ್ತರಾಜನು ಹೇಳಿದ ವಾಕ್ಯಗಳನ್ನು ಕೇಳಿದ ಯೋಗೀಂದ್ರನು ಎಲೈ ಮುಕ್ತರಾಜನೆ ನನಗೆ ವ್ರತನಿಯಮವಿರುವುದರಿಂದ ನೀನು ಮಾಡಲ್ಪಡುವ ಭಕ್ಷ್ಯಗಳನ್ನು ನಾನು ಸ್ವೀಕರಿಸಲಾರೆ ॥೭೩॥

ಗೃಹಿಣೀರಹಿತಂಗೇಹಂಅರಣ್ಯಸದೃಶಂವಿದುಃ ।

ತಾ॥ ಗೃಹಿಣಿ ಇಲ್ಲದ ಗೃಹವು ಅರಣ್ಯಕ್ಕೆ ಸಮಾನವೆಂದು ಬಲ್ಲ ವಿದ್ವಾಂಸರು ಹೇಳುತ್ತಾರೆ ಆದ್ದರಿಂದ ನನ್ನ ವ್ರತಕ್ಕೆ ಭಂಗಬರುವುದರಿಂದ ನಾನು ಸ್ವೀಕರಿಸುವುದಿಲ್ಲ ಎಂದು ಯೋಗೀಂದ್ರನು ಹೇಳಿದನು ।

ತದನ್ತರೇಚಸಾನಾರೀಮಾಯಾವಿದ್ಯಾನ್ವಿತಾಸತೀ ।
ಪಾಕಶಾಲಾಂಪ್ರವಿಶ್ಯಾಶುಪಕ್ವಾನ್ನದಿಕಮುತ್ತಮಂ । ॥೭೪॥

ತಾ॥ ಅಷ್ಟರಲ್ಲಿ ಮಾಯಾವಿದ್ಯೆಯಿಂದ ಕೂಡಿದ ಸತೀಮಣಿಯಾದ ಸುದಕ್ಷಿಣಾ ದೇವಿಯು ಬೇಗನೆ ಪಾಕಶಾಲೆಯನ್ನು ಪ್ರವೇಶಿಸಿದವಳಾಗಿ ಮೃಷ್ಟಾನ್ನವೇ ಮೊದಲಾದ ಭಕ್ಷ್ಯಭೋಜ್ಯಗಳನ್ನು ಸಿದ್ಧಪಡಿಸಿದಳು ॥೭೪॥

ಮಾಯಯಾರಹಿತಾಭೂತ್ವಾಗತ್ವಾಭರ್ತಾರಮನ್ತಿಕೇ ।
ಅಲಂಭರ್ತ್ರಾಧುನಾನಾಥಮುನಯೇನ್ತಂದದಾತುಮೈ ॥೭೫॥

ತಾ॥ ತನ್ನ ಮಾಯಾ ಸ್ವರೂಪವನ್ನು ತ್ಯಜಿಸಿ ತನ್ನ ಗಂಡನಾದ ಮುಕ್ತರಾಜನ ಬಳಿ ಬಂದು ನಾಥನೇ ಸಕಲ ಪದಾರ್ಥಗಳು ಸಿದ್ಧವಾಗಿವೆ ಯೋಗೀಂದ್ರನಾದ ಅತಿಥಿಗೆ ಆತಿಥ್ಯವನ್ನು ಮಾಡಬಹುದೆಂದು ಮುಕ್ತಕಾಂತೆಯು ಹೇಳಿದಳು ॥೭೫॥

ಪತ್ನೀಂದೃಷ್ಟ್ವಾಮುಕ್ತಕೋಪಿಶ್ರುತ್ವಾತದ್ವಾಕ್ಯಮುತ್ತಮಂ ।
ಮುನೇತ್ವಮನ್ನಮಾಗಚ್ಛಪತ್ನ್ಯಾದಾಸ್ಯೇಂಜಸಾತವಂ ॥೭೬॥

ತಾ॥ ಆ ಮುಕ್ತರಾಜನು ತನ್ನ ಹೆಂಡತಿಯನ್ನು ನೋಡಿ ಆಕೆಯ ಉತ್ತಮ ವಾದ ವಾಕ್ಯಗಳನ್ನು ಕೇಳಿ, ಅತಿಥಿಯಾದ ಯೋಗೀಂದ್ರನನ್ನು ಕುರಿತು ಎಲೈ ಮಹಾತ್ಮನೇ ನನ್ನ ಹೆಂಡತಿಯಿಂದಲೇ ಆತಿಥ್ಯವನ್ನು ಕೊಡಿಸುವೆನು ತಮ್ಮ ವ್ರತಭಂಗ ವಾಗದಂತೆ ತಾವು ದಯಮಾಡಿ ಊಟಕ್ಕೆ ಏಳಬೇಕೆಂದು ಪ್ರಾರ್ಥಿಸಿದನು ॥೭೬॥

ಇತ್ಯುಕ್ತ್ವಾಮುನಿಶಾರ್ದೂಲಸ್ಸುಪ್ರೀತೋಭುಂಜತೇತದಾ ।
ವ್ಯಂಜನೈರ್ಬಹುಭಿರ್ಭಕ್ಷ್ಯೈರ್ಲೇಹ್ಯೈಶ್ಚೋಷ್ಯೈಶ್ಚಪಾಯಸೈಃ ॥೭೭॥

ತಾ॥ ಆ ಯೋಗೀಂದ್ರನು ಆತಿಥ್ಯವನ್ನು ಸ್ವಿಕರಿಸಲು ಪೀಠಸ್ತನಾಗಿ ಸುಪ್ರೀತ ನಾಗಿ ಊಟಕ್ಕೆ ಕುಳಿತು ಅನೇಕ ಪಲ್ಯಗಳೂ ಭಕ್ಷ್ಯಗಳೂ ಅನ್ನಾದಿ ಭೋಜ್ಯಗಳೂ ಉಪ್ಪಿನಕಾಯಿ ಚಟ್ನಿ ಕೋಸಂಬರಿಯೇ ಮೊದಲಾದ ಲೇಹ್ಯಗಳೂ ವಿವಿಧವಾದ ಪಾಯಂಸಗಳನ್ನೂ ಊಟಮಾಡಿದನು ॥೭೭॥

ಮಧುದುಗ್ಧಘೃತಾದ್ಯೈಶ್ಚಶರ್ಕರೈಃಕದಳೀಫಲೈಃ ।
ಪನಸಾಮ್ರೈಶ್ಚಖರ್ಜೂರೈರತಿಮಾಧುರ್ಯವಸ್ತುಭಿಃ । ॥೭೮॥

ನಾ॥ ಮತ್ತು ಜೇನುತುಪ್ಪ, ಹಾಲು, ತುಪ್ಪ, ಮೊಸರು, ಸಕ್ಕರೆ, ಬಾಳೆಹಣ್ಣು, ಮಾವಿನಹಣ್ಣು, ಹಲಸಿನಹಣ್ಣು, ದ್ರಾಕ್ಷಿ, ಖರ್ಜೂರವೇ ಮೊದಲಾದ ಮಧುರವಾದ ಸಿಹಿಪದಾರ್ಥಗಳನ್ನೂ ಭುಂಜಿಸಿದನು ॥೭೮॥

ಲವಣಕ್ಷಾರಮಧುರಕಟುತಿಕ್ತಾಮ್ಲಸಂಯುತೈಃ ।
ನಾನಾವ್ಯಂಜನಯೋಗ್ಯೈಶ್ಚಭುಕ್ತ್ವಾತೃಪ್ತಿಂಯಯೌಮುನಿಃ ॥೭೯॥

ತಾ॥ ಉಪ್ಪು, ಖಾರ, ಹುಳಿ, ಕಹಿ, ಒಗರು ಮೊದಲಾದವುಗಳಿಂದ ಕೂಡಿದ ನಾನಾ ವಿಧವಾದ ಅನ್ನಗಳನ್ನೂ ಇನ್ನೂ ಅನೇಕ ವಿಧವಾದ ಮಧುರ ಭಕ್ಷ್ಯಗಳನ್ನು ಆ ಯೋಗೀಂದ್ರನು ಊಟಮಾಡಿ ತೃಪ್ತಿಯಾಗಿ ಆನಂದವನ್ನು ಹೊಂದಿದನು ॥೭೯॥

ಇತಿಭುಕ್ತ್ವಾಂತರ್ದಧೇಯೋಗೀಗಿರೀಶೇನನಿಯೋಜಿತಃ ।
ತತೋಮುಕ್ತಕರಾಜರ್ಷಿಶ್ಚಿಂತಯಾಮಾಸವೈಚಿರಂ ॥೮೦॥

ತಾ॥ ಹೀಗೆ ತೃಪ್ತಿಯಾಗಿ ಊಟಮಾಡಿ ಗೌರೀಪತಿಯಾದ ಪರಮೇಶ್ವರನಿಂದ ನಿಯೋಜಿಸಲ್ಪಟ್ಟಿದ್ದ ಆ ಯೋಗೀಂದ್ರನು ಅಂತರ್ಧಾನವನ್ನು ಪಡೆಯಲು ಆ ಮುಕ್ತ ರಾಜನು ಬಹುಪ್ರಕಾರ ಚಿಂತಾಕ್ರಾಂತನಾಗಿ ಯೋಚಿಸಿದನು ॥೮೦॥

ಕುತೋಭಾರ್ಯಾವಿಯೋಗಶ್ಚ ಕುತೋಯೋಗಿಸಮಾಗಮಃ ।
ಅದೃಷ್ಟಚರಮಾಶ್ಚರ್ಯಂದೃಷ್ಟವಾನಸ್ಮಿಸಾಂಪ್ರತಂ ॥೮೧॥
ಇತ್ಯೇವಂಚಿಂತಯನ್ಸೌಯುತ್ತಮಾನಸೋಮುನಿಪುಂಗವಃ ।
ಪಾರ್ವತೀಪತಿಮೀಶಾನಂಮನಸಾಶರಣಂಯಯೌ ॥೮೨॥

ತಾ॥ ನನಗೆ ಏಕೆ ಭಾರ್ಯಾವಿಯೋಗವುಂಟಾಯಿತು, ಏಕೆ ಯೋಗೀಂದ್ರರ ಸಮಾಗಮವು ಪ್ರಾಪ್ತವಾಯಿತು ಹಿಂದೆ ಗೋಚರವಾಗಿದ್ದದ್ದು ಈಗ ಅದೃಶ್ಯವಾಗಿದೆ ಆಶ್ಚರ್ಯವಾಗಿರುವ ಇಂಥಾದ್ದನ್ನು ನಾನು ಕಾಣಬೇಕಾಯಿತು. ಹೀಗೆ ಮನೋಚಿಂತೆಯಿಂದ ಕೂಡಿದವನಾಗಿ ಮುನಿಶ್ರೇಷ್ಠನೂ ರಾಜಶಾರ್ದೂಲನೂ ಆದ ಆ ಮುಕ್ತರಾಜನು ಮನಸ್ಸಿನಲ್ಲಿ ದೃಢಭಕ್ತಿಯಿಂದ ಪಾರ್ವತೀಪತಿಯಾದ ಪರಮ ಮಂಗಳಕರನಾದ ಶ್ರೀ ಶಂಕರನನ್ನು ಧ್ಯಾನಿಸಿದನು ॥೮೧॥೮೨॥

ಸತಂದೃಷ್ಟ್ವಾಮುಕ್ತಕೋಪಿಪ್ರೀತ್ಯಾವಿಸ್ಫಾರಿತೇಕ್ಷಣಃ ।
ಪ್ರಣಮ್ಯಪಾರ್ವತೀನಾಥಂತದ್ವೃತ್ತಾಂತಮಶೇಷತಃ ॥೮೩॥

ತಾ॥ ಧ್ಯಾನಿಸಿದ ಮಾತ್ರದಿಂದಲೇ ಪ್ರತ್ಯಕ್ಷನಾದ ಪಾರ್ವತೀಪತಿಯಾದ ಪರಮೇಶ್ವರನನ್ನು ಮುಕ್ತರಾಜನು ಅತ್ಯಂತ ಸಂತೋಷಭರಿತವಾದ ನೇತ್ರಗಳಿಂದ ನೋಡಿ ನಮಸ್ಕಾರಾದಿಗಳನ್ನು ಮಾಡಿ ನಡೆದ ವೃತ್ತಾಂತವನ್ನು ಭಿನ್ನವಿಸಿದನು ॥೮೩॥

ನ್ಯವೇದಯತ್ತದಾಸೌನಿಃತಚ್ಛ್ರುತ್ವಾಪಾರ್ವತೀಪತಿಃ ।
ಉವಾಚಮಧುರಂವಾಕ್ಯಂಮುಕ್ತಕಂಮುನಿಪುಂಗವಂ ॥೮೪॥

ತಾ॥ ಈ ರೀತಿಯಾಗಿ ಭಿನ್ನವಿಸಿದ ಮುಕ್ತರಾಜನ ವೃತ್ತಾಂತವನ್ನು ಕೇಳಿದ ಪಾರ್ವತೀರಮಣನು ಮಧುರವಾದ ಮಾತುಗಳಿಂದ ಆ ಮುನಿಪುಂಗವನಾದ ಮುಕ್ತ ರಾಜನಿಗೆ ಇಂತೆಂದನು ॥೮೪॥

ಶೃಣುಮುಕ್ತಕರಾಜರ್ಷೇಮಾಗಾಸ್ತ್ವಮತಿವಿಸ್ಮಯಂ ।
ಮುಕ್ತಕಾಂತಾಮಹಾದೇವೀಮಮವಾಮಭುಜೋದ್ಭವಾ ॥೮೫॥

ತಾ॥ ಎಲೈ ಮುಕ್ತರಾಜನೇ ಕೇಳು ನೀನು ಈ ರೀತಿಯಾಗಿ ಆಶ್ಚರ್ಯಪಡಬೇಕಾದುದಿಲ್ಲ. ಮಹಾದೇವಿಯಾದ ಮುಕ್ತಕಾಂತೆಯು ನನ್ನ ಎಡಭುಜದಿಂದ ಜನಿಸಿದವಳು॥೮೫॥

ತಾಪಸೀರುಪನೀಂಪನ್ನ್ಯಾಮುನ್ಮಾಯಾಶಕ್ತಿರೂಪಿಣೀ ।
ತ್ವಂಚಮೇಮಾನಸಾಚ್ಚಾತೋಮುರೂಪಮುಪಾಪ್ಯಸಿ ॥೮೬॥

ತಾ॥ ಆ ಮುಕ್ತಕಾಂತೆಯು ರೂಪಸಂಪನ್ನಳು ತಪಸ್ವಿನಿಯು ನನ್ನ ಮಾಯಾ ಶಕ್ತಿಸ್ವರೂಪಿಣಿಯು, ನೀನು ನನ್ನ ಮಾನಸಪುತ್ರನು ನೀನು ನನ್ನನ್ನೇ ಹೊಂದುವೆ. (ನನ್ನಲ್ಲಿ ಐಕ್ಯನಾಗುತ್ತೀಯೆ) ॥೮೬॥

ತಸ್ಮಾದೇವಂವಿಧಂಕ್ಲೇಶಂತ್ವಂನೈವಪ್ರಾಪ್ತುಮರ್ಹಸಿ ।
ಇತ್ಯುದೀರ್ಯಪುರಾರಾತಿಃಪ್ರಯಯಾಚಯಥಾಗತಂ ॥೮೭॥

ತಾ॥ ಆದ್ದರಿಂದ ಎಲೈ ಮುಕ್ತರಾಜನೇ ನೀನು ದುಃಖಿಸಬೇಕಾಗಿಲ್ಲವೆಂದು ಹೇಳಿ ತ್ರಿಪುರಸಂಹಾರಕನಾದ ಆ ಪರಮೇಶ್ವರನು ಬಂದಂತೆಯೇ ಅಂತರ್ಧಾನವನ್ನು ಹೊಂದಿದನು ॥೮೭॥

ತತೋಮುಕ್ತಕರಾಜರ್ಷಿರ್ವೈರಾಗ್ಯಮವಲಂಬ್ಯಸಃ ।
ವಿವೇಶಬದರೀಕ್ಷೇತ್ರಂನರನಾರಾಯಣಾಸ್ಪದಂ ॥೮೮॥

ತಾ॥ ಅನಂತರ ರಾಜರ್ಷಿಯಾದ ಆ ಮುಕ್ತರಾಜನು ವೈರಾಗ್ಯವನ್ನು ತಾಳಿ ನರನಾರಾಯಣರು ಸದಾ ತಪಸ್ಸಿನಲ್ಲಿ ನಿರತರಾಗಿರುವ ಬದರೀಕ್ಷೇತ್ರವೆಂಬ ಪರ್ವತಕ್ಕೆ ಹೋಗಿ ಅಲ್ಲಿ ತಪೋನಿರತನಾದನು ॥೮೮॥

ಯತ್ರಯಜ್ಞಾತ್ರಕುರ್ವಂತಿಮುನಯಸ್ತತ್ವದರ್ಶಿನಃ ।
ವಸಿಷ್ಠೋವಾಮದೇವಶ್ಚರೈಭ್ಯೋಧೂಮ್ರಸ್ತಥೈವಚ ॥೮೯॥
ಜಾಬಾಲಃಕಾಶ್ಯಪಃಕಣ್ವೋಭರದ್ವಾಜೋಥಗೌತಮಃ ।
ಅತ್ರಿರಶ್ವಶಿರಾಶ್ಚೈವಶಂಖಶ್ಶಂಖನಿಧಿಃಕುಣಿರ ॥೯೦॥
ಪಾರಾಶರ್ಯಃಪವಿತ್ರಾಕ್ಷೋಯಾಜ್ಞವಲ್ಕ್ಯೋಮಹಾಮುನಿಃ ।
ಮುನಯೋದೀರ್ಘತಪಸಸ್ಸಮಾಧೌಕೃತನಿಶ್ಚಯಾಃ ॥೯೧॥

ತಾ॥ ಯಾವ ಪುಣ್ಯಪ್ರದೇಶದಲ್ಲಿ ವಸಿಷ್ಠ, ವಾಮದೇವ, ರೈಭ, ದೂಮ್ರ, ಜಾಬಾಲಿ, ಕಾಶ್ಯಪ, ಕಣ್ವ, ಭರದ್ವಾಜ, ಗೌತಮ, ಅತ್ರಿ, ಅಶ್ವಶಿರಸ್ಸು, ಶಂಖನಿಧಿ, ಕುಣಿಯೇ ಮೊದಲಾದ ಯಾವ ಮಹರ್ಷಿಗಳು ಪಾಪಪರಿಹಾರಾರ್ಥವಾಗಿ ಸದಾ ಯಾಗಗಳನ್ನು ಮಾಡುತ್ತಿರುವರೋ ಮತ್ತು ಪರಾಶರ ಪುತ್ರನಾದ ವ್ಯಾಸಮುನಿಯೂ, ಪವಿತ್ರಾಕ್ಷನೂ, ಯಾಜ್ಞವಲ್ಕ್ಯನೇ ಮೊದಲಾದ ಮಹರ್ಷಿಗಳೂ ಸಮಾದಿಷ್ಟರಾಗಿ ಯಾವ ಪ್ರದೇಶದಲ್ಲಿ ಬಹುಕಾಲದಿಂದ ತಪಸ್ಸು ಮಾಡುತ್ತಿರುವರೋ ಅಂತಹ ಪವಿತ್ರ ವಾದ ಬದರಿಕಾಶ್ರಮವೆಂಬ ಪರ್ವತಕ್ಕೆ ಹೋಗಿ ತಪವನ್ನು ಮಾಡಲು ಆ ಮುಕ್ತರಾಜ ರ್ಷಿಯು ನಿಶ್ಚಯಿಸಿದನು ॥೮೯॥೯೦॥೯೧॥

ತದ್ವನಂಪ್ರವಿವೇಶತತಪ್ತುಂಸಮುಪಚಕ್ರಮೇ ।
ಸ್ವಸ್ತಿಕಂಗೋಮುಖಂಪದ್ಮಂವೀರಂಸಿಂಹಾಸನಂತಥಾ ॥೯೨॥

ತಾ॥ ಅಂತಹ ಪವಿತ್ರವಾದ ಪ್ರದೇಶವನ್ನು ಹೊಕ್ಕಿದ ಆ ಮುಕ್ತರಾಜರ್ಷಿಯು ತಪಸ್ಸುಮಾಡಲು ಪ್ರಾರಂಭಿಸಿ, ಸ್ವಸ್ತಿಕ, ಗೋಮುಖ, ಪದ್ಮ, ವೀರ, ಸಿಂಹಾಸನ, ಎಂಬ ಯೋಗಾಸನಗಳನ್ನು ಮಾಡುತ್ತಾ ತಪವನ್ನಾಚರಿಸಿದನು ॥೯೨॥

ಭದ್ರಮುಕ್ತಾಸನಂಚೈವಮಯೂರಾಸನಮೇವಚ ।
ಸುಖಾಸನಸಮಾಖ್ಯಾತಂನವಮಂಯತ್ರಚಕ್ಷತೇ ॥೯೩॥

ತಾ॥ ಮತ್ತು ಭದ್ರಾಸನ, ಮುಕ್ತಾಸನ, ಮಯೂರಾಸನ, ಸುಖಾಸನ ಎಂಬುದಾಗಿ ಹೇಳಿರುವ ನವವಿಧಾಸನಗಳಿಂದ ತಪವನ್ನು ಮಾಡುತ್ತಾ ಮನದಲ್ಲಿ ಪಾರ್ವತೀ ರಮಣನಾದ ಸರ್ವಮಂಗಳಕರನನ್ನು ಸ್ಥಿರವಾಗಿ ನಿಲ್ಲಿಸಿ ಮತ್ತು ಮನೋಶಾಂತಿಯಿಂದ ತಪವನ್ನು ಮಾಡಿದನು ॥೯೩॥

ತತಸ್ತುಭಗವಾನ್ಸಾಕ್ಷಲಂಬಿಕಾಯೋಗಮಾಶ್ರಿತಃ ।
ಸುಖಮದ್ಯಾಪಿತತ್ರಾಸ್ತೇಶಿವಮಾನಸಸಂಭವಃ ॥೯೪॥

ತಾ॥ ಈ ರೀತಿಯಾಗಿ ಯೋಗಾಸನಗಳಿಂದ ಪರಮಾತ್ಮನನ್ನು ಸಮೀಪಿಸುತ್ತಾ ಲಂಬಿಕಾ ಯೋಗವನ್ನಾಶ್ರಯಿಸಿದವನಾಗಿ ತಪೋನಿರತನಾಗಿ ಆ ಮುಕ್ತರಾಜರ್ಷಿಯು ಸುಖವಾಗಿ ಈಗಲೂ ಆ ಶಿವಮಾನಸ ಪುತ್ರನು ಆ ಬದರೀಕ್ಷೇತ್ರದಲ್ಲಿ ವಾಸ ವಾಗಿರುವನು ॥೯೪॥

ಭಗರ್ವಪರಿತುಷ್ಟೋಽಸ್ಮಿಮುಕ್ತಕಸ್ಯಮಹಾತ್ಮನಃ ॥೯೫॥

ತಾ॥ ಎಲೈ ಭಗವಂತನೇ ಲೋಕಗಳಿಗೆ ಪ್ರಭುವಾದ ಬ್ರಹ್ಮನೇ ಮಹಾತ್ಮನಾದ ಮುಕ್ತರಾಜರ್ಷಿಯ ಚರಿತ್ರೆಯನ್ನು ಕೇಳಿ ಸಂತುಷ್ಟನಾಗಿರುತ್ತೇನೆಂದು ನಾರದನು ಹೇಳಿದನು ॥೯೫॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಂಡೇ ಬ್ರಹ್ಮನಾರದ ಸಂವಾದೇ ಮುಕ್ತಕೋಪಾಖ್ಯಾನೇಮುಕ್ತರಾಜಮುಕ್ತಿಪ್ರಧಾನಕಥನಂನಾಮ ಷೋಡಶೋಽಧ್ಯಾಯಃ ।

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವ ಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತಕೋಪಾಖ್ಯಾನದಲ್ಲಿ ಮುಕ್ತರಾಜರ್ಷಿಯ ಮುಕ್ತಿಪ್ರಧಾನವೆಂಬ ಹದಿನಾರನೆಯ ಅಧ್ಯಾಯವು ಸಂಪೂರ್ಣವು ॥

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿನೇಳನೆಯ ಅಧ್ಯಾಯ :-

ಮುಕ್ತರಾಜ ವಂಶಪರಂಪರಾ

ನಾರದ ಉವಾಚ :-

ಅನಂತರಂಕಥಾಂಶ್ರೋತುಂಪರಂಕೌತೂಹಲಂಹಿಮೇ ।
ತದ್ವೃತ್ತಾಂತವಿಶೇಷೇಣವಕ್ತುಮರ್ಹಸಿಹೇಪ್ರಭೋ ॥೧॥

ತಾ॥ ಎಲೈ ಜಗತ್ ಪ್ರಭುವಾದ ಬ್ರಹ್ಮದೇವನೇ ! ಆ ಮುಕ್ತರಾಜನ ಮುಂದಿನ ಕಥೆಯನ್ನು ಕೇಳಬೇಕೆಂಬ ಕುತೂಹಲವಿದೆ ಸಂಪೂರ್ಣವಾಗಿ ಮುಕ್ತರಾಜನ ಪರಂಪರೆಯ ಚರಿತ್ರೆಯನ್ನು ನನಗೆ ಹೇಳುವವನಾಗೆಂದು ಬ್ರಹ್ಮ ದೇವನನ್ನು ಪ್ರಾರ್ಥಿಸಿದನು ॥೧॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮುತ್ತಮಂ ।
ತಸ್ಯಪುತ್ರಾಮಹಾಭಾಗಾಕೃತೋದ್ವಾಹಾತತಃಪರಂ ॥೨॥

ತಾ॥ ಎಲೈ ನಾರದನೇ ! ಉತ್ತಮವಾದ ಆ ಮುಕ್ತರಾಜನ ವಂಶವೃತ್ತಾಂತ ವನ್ನು ಹೇಳುತ್ತೇನೆ ಕೇಳುವವನಾಗು ಮುಕ್ತರಾಜನ ಪುತ್ರರು ವಿವಾಹವಾದ ತರುವಾಯ ॥೨॥

ನಾನಾಭೋಗೇಷುಸಂಸಕ್ತಾಃರೂಪಯೌವ್ವನಸಂಪದಾಃ ।
ಪತ್ನೀಭಿಸ್ಸಹಸರ್ವತ್ರಸಂಚರನ್ತೋಮುದಾನ್ವಿತಾಃ ॥೩॥

ತಾ॥ ಅವರವರ ಹೆಂಡತಿಯರೊಂದಿಗೆ ನಾನಾವಿಧವಾದ ಭೋಗಸುಖಗಳನ್ನು ಅನುಭವಿಸುತ್ತಾ ರೂಪಯೌವ್ವನ ಸಂಪನ್ನರಾಗಿ ಸಕಲಸೌಭಾಗ್ಯಗಳಿಂದ ಸಂತೋಷ ಚಿತ್ತರಾಗಿದ್ದರು ॥೩॥

ಜ್ಯೋತಿಷ್ಮಂತೋಮಹಾರಾಜೋವಪುಷಾನಿತಿವಿಶ್ರುತಃ ।
ವಪುಷ್ಮತೋಬ್ರಹ್ಮಮೇಧಾಶ್ರದೇವಸ್ತತ್ಸುತೋಭವತ್ ॥೪॥

ತಾ॥ ಆ ಮುಕ್ತರಾಜನ ಪುತ್ರರಲ್ಲಿ ದೊಡ್ಡವನಾದ ಜ್ಯೋತಿಷ್ಮಂತನಿಗೆ ವಪುಷ್ಮಂತನೆಂಬ ಮಗನು ಹುಟ್ಟಿದನು ಆ ವಪುಷ್ಮಂತನಿಗೆ ಬ್ರಹ್ಮಮೇಧಸ್ಸೆಂಬ ಕುಮಾರನು ಹುಟ್ಟಿದನು ಅವನಿಗೆ ಶ್ರೀದೇವನೆಂಬ ಮಗನು ಹುಟ್ಟಿದನು ಶ್ರೀದೇವನಿಗೆ ಕೃತನೆಂಬ ಮಗನು ಹುಟ್ಟಿದನು ॥೪॥

ತಸ್ಯಾಪ್ಯಾಸೀತ್ಕೃತೋವಿಪ್ರಾರುದ್ರಭಕ್ತೋಮಹಾಬಲಃ ।
ಕೃತಸ್ಯಾರ್ಯಭವತ್ಪುತ್ರಃಕುಂತೋವೃಷ್ಣಿ ಸುತಸ್ತತಃ ॥೫॥
ವೃಷ್ಣೇರ್ನಿವೃತ್ತಉತ್ಪನ್ನೋದಶಾರ್ಹಸ್ತಸ್ಯತುದ್ವಿಜಾಃ ।

ತಾ॥ ಆ ಕೃತನೆಂಬುವನು ದೇವ ಬ್ರಾಹ್ಮಣ ಪ್ರಿಯನಾದ ಶ್ರೀಮಹಾದೇವನಾದ ರುದ್ರನಿಗೆ ಪರಮಭಕ್ತನಾಗಿ ಮಹಾಬಲಶಾಲಿಯಾಗಿದ್ದನು ಅವನಿಗೆ ಕುಂತನೆಂಬ ಪುತ್ರನು ಹುಟ್ಟಿದನು ಆ ಕುಂತನ ಮಗನು ಸುವೃತನೆಂಬುವನು ಆತನ ಮಗನೇ ವೃಷ್ಣಿಯು ಇವನ ಮಗನೇ ನಿವೃತ್ತನೆಂಬುವನು ಆ ನಿವೃತ್ತನ ಮಗನು ದಶಾರ್ಹನೆಂಬುವನು ॥೫॥

ದಶಾರ್ಹಪುತ್ರೋವ್ಯಾರೋಜೀಮೂತಸ್ತತ್ಸುತೋಭವತ್ ॥೬॥
ಜೈಮೂತರಭವದ್ವೀರೋವಿಕೃತಿಃಪರವೀರಹಾ ।

ತಾ॥ ಆ ದಶಾರ್ಹನ ಮಗನು ವ್ಯಾರೋಹನೆಂಬುವನು ಅವನ ಮಗನು ಜೀಮೂತನೆಂದು ಪ್ರಸಿದ್ಧಿಯಾದವನು ಆ ಜೀಮೂತನ ಪುತ್ರನು ವಿಕೃತಿಯೆಂಬುವನು ಪರಮಬಲಶಾಲಿಯಾಗಿದ್ದನು ॥೬॥

ತಸ್ಯಭೀಮರಥಃಪುತ್ರಸ್ತಸ್ಮಾನ್ನವರಥೋಭವತ್ ॥೭॥
ತದಾಚಿನ್ಮಗಯಾಂಯಾತೋದೃಷ್ಟ್ವಾರಾಕ್ಷಸಮೂರ್ಛಿತಂ ।
ದುದ್ರಾವಮಹಾತಾವಿಷ್ಣೋಭಯೇನರಾಜಪುಂಗವಾಃ ॥೮॥

ತಾ॥ ಆ ವಿಕೃತಿಯ ಮಗನು ಮಹಾಬಲಶಾಲಿಯಾದ ಭೀಮರಥನೆಂಬುವನು ಆ ಭೀಮರಥನಿಗೆ ನವರಥನೆಂಬ ಮಗನುಂಟಾದನು. ಎಲೈ ನಾರದನೇ ಆ ನವರಥನು ಒಂದಾನೊಂದು ಕಾಲದಲ್ಲಿ ಬೇಟೆಯಾಡಲು ಮಹಾರಣ್ಯಕ್ಕೆ ಹೋದಾಗ ಅಲ್ಲಿ ಭಯಂಕರನಾದ ಒಬ್ಬ ರಾಕ್ಷಸನನ್ನು ನೋಡಿ ಮೂರ್ಛಿತನಾದನು ಅನಂತರ ಎದ್ದವನಾಗಿ ಭಯ ಭೀತನಾದ ಆ ರಾಜನು ಭಯದಿಂದ ಓಡಿ ಹೋದನು ॥೭॥೮॥

ಅನ್ವಧಾತವಸಂಕ್ರುದ್ಧೋರಾಕ್ಷಸಸ್ತಂಮಹಾಬಲಂ ।
ದುರ್ಯೋಧನೋಗ್ರಸಂಕಾಶಶ್ಶೂಲಾಸಕ್ತಮಹಾಕರಃ ॥೯॥

ತಾ॥ ಈ ರೀತಿಯಾಗಿ ಓಡಿಹೋಗುತ್ತಿರುವ ಆ ರಾಜನನ್ನು ನೋಡಿದ ಆ ಮಹಾಬಲವಂತನಾದ ರಾಕ್ಷಸನು ಕಾಲಾಗ್ನಿರುದ್ರಸದೃಶನಾದ ಕಾರಣ ದುಃಖಕರವಾದ ಯುದ್ಧಾಸಕ್ತಿಯುಳ್ಳವನಾಗಿ ಶೂಲಾಯುಧವನ್ನು ಹಿಡಿದು ಆ ನವರಥನನ್ನು ಬೆನ್ನಟ್ಟಿದನು ॥೯॥

ರಾಜಾನವರಥೋಚಿಂತ್ಯಂನಾತಿದೂರಾದನುತ್ತಮಂ ।
ಆ ಪಶ್ಯತ್ಪರಮಂಸ್ಥಾನಂಸರಸ್ವತ್ಯಾಸ್ಸುಶೋಚಿತಂ ॥೧೦॥

ತಾ॥ ಆ ನವರಥ ಮಹಾರಾಜನು ತನ್ನನ್ನು ಬೆನ್ನಟ್ಟಿಬರುತ್ತಿರುವ ಆ ಮಹಾರಾಕ್ಷಸನು ಸಮೀಪಿಸುವುದನ್ನು ನೋಡಿ ಅಲ್ಲಿ ತನ್ನನ್ನು ರಕ್ಷಿಸುವವರಾರನ್ನೂ

ಕಾಣದೆ ತನಗೆ ರಕ್ಷಣೆಯಂತೆ ಗೋಚರಿಸುತ್ತಿರುವ ಸರಸ್ವತೀದೇವಾಲಯವನ್ನು ಕಂಡನು ॥೧೦॥

ಸಉದ್ವೇಗೇನಮಹತಾಸಂಪ್ರಾಪ್ಯಮತಿಮಾನ್ನೃಪಃ ।
ನನಂದೇಶಿರಸಾದೃಷ್ಟ್ವಾಸಾಕ್ಷಾದೇವೀಂಸರಸ್ವತೀಂ ॥೧೧॥

ತಾ॥ ಮಹಾ ಬುದ್ಧಿಶಾಲಿಯಾದ ಆ ರಾಜನು ಬಹುಭಯದಿಂದ ಆ ದೇವಾಲಯವನ್ನು ಹೊಕ್ಕು ಅಲ್ಲಿರುವ ಸಾಕ್ಷಾತ್ ಸರಸ್ವತೀದೇವಿಯನ್ನು ನೋಡಿ ಆಕೆಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಈ ರೀತಿಯಾಗಿ ಪ್ರಾರ್ಥಿಸಿದನು ॥೧೧॥

ನಮಸ್ತ್ಯೈಪರಮಾನಂದಾಂಚಿತ್ಕಳಾಂಬ್ರಹ್ಮರೂಪಿಣೀಂ ।
ಪಾಹಿಮಾಂಪರಮೇಶಾನಿಹಿತಂಶರಣಮಾಗತಂ ॥೧೨॥

ತಾ॥ ಎಲೈ ಪರಮೇಶ್ವರಿಯೇ ಪರಮಾನಂದೆಯಾಗಿಯೂ ಚಿಚ್ಛಕ್ತಿಯಾಗಿಯೂ, ಬ್ರಹ್ಮಸ್ವರೂಪಿಣಿಯಾಗಿಯೂ ಇರುವ ಸರಸ್ವತೀದೇವಿಯೇ ನಿನಗೆ ನಮಸ್ಕಾರವನ್ನು ಮಾಡುತ್ತಿದ್ದೇನೆ. ಶರಣಾಗತನಾದ ನನ್ನನ್ನು ದಯಾಮಯಳಾದ ನೀನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತಿದ್ದನು ॥೧೨॥

ಏತಸ್ಮಿನ್ನಂತರೇಕೃದ್ಧೋರಾಜಾನಂರಾಕ್ಷಸೇಶ್ವರಃ ।
ಹಂತುಂಸಮಾಗತಸ್ಥಾನಂಯತ್ರದೇವೀಸರಸ್ವತೀ ॥೧೩॥

ತಾ॥ ಅಷ್ಟರಲ್ಲಿ ಮಹಾದೈತ್ಯನಾದ ಆ ರಾಕ್ಷಸನು ಕಡುಕೋಪವುಳ್ಳವನಾಗಿ ನವರಥನನ್ನು ಹೊಡೆಯಲುದ್ಯುಕ್ತನಾಗಿ ಶೂಲವನ್ನು ಹಿಡಿದು ಆ ಸರಸ್ವತೀದೇವಿಯ ಮಂದಿರವನ್ನು ಪ್ರವೇಶಮಾಡಿ ರಾಜನನ್ನು ಹೊಡೆಯಲುದ್ಯುಕ್ತನಾಗಲು ॥೧೩॥

ಸಮುದ್ಯಮ್ಯಮಹಾಶೂಲಂಪ್ರವೇಷ್ಟುಂಬಲಗರ್ವಿತಃ ।
ತ್ರಿಲೋಕಮಾತುರ್ನಸ್ಥಾನಂಶಶಾಂಕಾದಿತ್ಯಸನ್ನಿಭಂ ॥೧೪॥

ತಾ॥ ಆಗ ಸರಸ್ವತೀದೇವಿಯು ತ್ರಿಲೋಕರೂಪಧಾರಿಣಿಯಾಗಿ ಪ್ರಳಯಾಗ್ನಿಯಂತೆ ಮಹಾಭಯಂಕರವಾದ ರೂಪವನ್ನು ಧರಿಸಿ ಮಹತ್ತರವಾದ ಶಕ್ತಿಯ ಶೂಲದಿಂದ ಆ ರಾಕ್ಷಸನನ್ನು ತಿವಿದು ಕೆಳಗೆಬೀಳಿಸಿದಳು ॥೧೪॥

ತದಂತರೆಮಹದ್ಭೂತಂಯುಗಾಂತಾನಲಸನ್ನಿಭಂ ।
ಶೂಲೆನೋರಸಿನಿರ್ಭಿದ್ಯಪಾತಯಾಮಾಸತಂಭುವಿ ॥೧೫॥

ಗಚ್ಛೇತ್ಯಾಹಮಹಾರಾಜಂಸಸ್ಥಾತನ್ವ್ಯಂತ್ವಯಾನೃಪ ।
ಇದಾನೀಂನಿರ್ಭಯಾಸ್ತೂರ್ಣಂಸ್ಥಾನೇಸ್ಮಿನ್ರಾಕ್ಷಸೋಹತಃ ॥೧೬॥

ತಾ॥ ಹೀಗೆ ಬಿದ್ದಂತಹ ರಾಕ್ಷಸನನ್ನು ಆ ದೇವಿಯು ಮಹದ್ಭುತವಾದ ಶೂಲದಿಂದ ಅವನ ಮರ್ಮಸ್ಥಾನದಲ್ಲಿ ತಿವಿದುಕೊಂದಳು ಆ ರಾಕ್ಷಸನು ಬಿದ್ದನಂತರ

ಆ ನವರಥ ಮಹಾರಾಜನನ್ನು ಕುರಿತು ಎಲೈ ದೊರೆಯೇ! ರಾಕ್ಷಸನು ಮೃತನಾಗಿ ಭೂಮಿಯಲ್ಲಿ ಬಿದ್ದಿರುವನು. ನೀನು ನಿರ್ಭಯನಾಗಿ ತೆರಳುವವನಾಗು ಇಲ್ಲಿ ನಿಲ್ಲಬೇಡ ವೆಂದು ದೇವಿಯು ನುಡಿದಳು ॥೧೫॥೧೬॥

ತತಃಪ್ರಣಮ್ಯಹೃಷ್ಟಾತ್ಮಾರಾಜಾನವರಥಃಪರಾಂ ।
ಪುರೀಂಜಗಾಮವಿಪ್ರೇಂದ್ರಾಃಪುರಂದರಪುರೋಪಮಾಂ ॥೧೭॥

ತಾ॥ ಶ್ರೀ ಸರಸ್ವತೀದೇವಿಯ ವಾಕ್ಯವನ್ನು ಕೇಳಿದ ಆ ನವರಥ ಮಹಾರಾಜನು ಮೃತನಾದ ಆ ರಾಕ್ಷಸನನ್ನು ನೋಡಿ ಸಂತುಷ್ಟನಾಗಿ ದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ರಾಕ್ಷಸ ಸಂಹಾರಾನಂತರ ದೇವೇಂದ್ರನು ಅಮರಾವತಿಯನ್ನು ಹೇಗೆ ಸೇರಿದನೋ ಹಾಗೆ ನವರಥ ಮಹಾರಾಯನು ತನ್ನ ರಾಜಧಾನಿಗೆ ಬಂದು ಸೇರಿದನು ॥೧೭॥

ಸ್ಥಾಪಯಾಮಾಸದೇವೇಶೀಂತತ್ರಭಕ್ತಿಸಮನ್ವಿತಃ ।
ಈಜೇಚಬಹುಭಿರ್ಯಜ್ಞೈರ್ಹೋಮ್ಯೈದೇವೀಂಸರಸ್ವತೀಂ ॥೧೮॥

ತಾ॥ ಈ ರೀತಿಯಾಗಿ ಪಟ್ಟಣವನ್ನು ಸೇರಿದ ನವರಥ ಮಹಾರಾಯನು ಸರಸ್ವತೀ ದೇವಿಯಲ್ಲಿ ಭಕ್ತಿಯುಳ್ಳವನಾಗಿ ತನ್ನ ಪಟ್ಟಣದಲ್ಲಿ ಸುಂದರವಾದ ದೇವಾಲಯವನ್ನು ಕಟ್ಟಿಸಿ ಜಗದೀಶ್ವರಿಯಾದ ಸರಸ್ವತೀದೇವಿಯನ್ನು ಪ್ರತಿಷ್ಟಾಪಿಸಿ ಆ ದೇವಿಯ ಪ್ರೀತ್ಯರ್ಥವಾಗಿ ಬಹು ಯಾಗಗಳನ್ನು ಮಾಡಿದನು ॥೧೮॥

ತಸ್ಯಜಾಸೀದ್ದಶರಥಃಪುತ್ರಃಪರಮಧಾರ್ಮಿಕಃ ।
ದೇವ್ಯಾಭಕ್ತೋಮಹಾತೇಜಾಶ್ಶಕುನಿಸ್ತಸ್ಯಜಾತ್ಮಜಃ ॥೧೯॥

ತಾ॥ ಆ ನವರಥ ಮಹಾರಾಯನಿಗೆ ದೇವೀಭಕ್ತನಾಗಿಯೂ ಪರಮ ಧರ್ಮಿಷ್ಟನಾಗಿಯೂ ಅತ್ಯಂತ ಸುಂದರನಾಗಿಯೂ ಇರುವ ಶಕುನಿ ಎಂಬ ಮಗನು ಉಂಟಾದನು ॥೧೯॥

ತಸ್ಮಾತ್ಕುರಂಧಿಸ್ಸಂಭೂತೋದೇವರಾತಸ್ತತೋಭವತ್ ।
ಈಜೆದಶಾಶ್ವಮೇಧೇನದೇವಯಜ್ಞಶ್ಚತತ್ಸುತಃ ॥೨೦॥

ತಾ॥ ಆ ಶಕುನಿಯ ಕುಮಾರನೇ ಕುರಂಧಿ ಎಂಬುವನು. ಆ ಕುರಂಧಿಯ ಕುಮಾರನು ದೇವರಾತನೆಂಬುವನು ಅವನು ಹತ್ತು ಅಶ್ವಮೇಧ ಯಾಗಗಳನ್ನು ಮಾಡಿದವನು. ಅವನ ಮಗನೇ ದೇವಯಜ್ಞನೆಂಬುವನು ॥೨೦॥

ಮಧುಸ್ತಸ್ಯತುದಾಯಾದತಸ್ಮಾತ್ಕುರವಶೋಭವತ್ ।
ಪುತ್ರದ್ವಯಮಭೂತ್ತಸ್ಯಸುತ್ರಾಮಾಹ್ಯನುರೇವಚ ॥೨೧॥

ತಾ॥ ಆ ದೇವಯಜ್ಞನ ಪುತ್ರನು ಮಧು ಎಂಬುವನು ಆತನ ಮಗನು ಕುಶನೆಂದು ಪ್ರಖ್ಯಾತನಾದವನು ಆ ಕುಶನಿಗೆ ಸುಮಿತ್ರಾ ಮತ್ತು ಅನು ಎಂಬ ಇಬ್ಬರು ಮಕ್ಕಳಾದರು ।।೨೧।।

ಅನೋಸ್ತು ಪುತ್ರಃ ಕುತ್ಸೋಽಭೂದಂಶಸ್ತಸ್ಯಾಪಿ ಕುಕ್ಷಿಭಾಕ್ ।
ಅಥಾಂಶುಸ್ಸತ್ವತೋ ನಾಮ ವಿಷ್ಣುಭಕ್ತಪ್ರತಾಪವಾನ್ ॥೨೨॥

ತಾ॥ ಆ ಅನು ಎಂಬ ರಾಜನಿಗೆ ಕುತ್ಸನು ಎಂಬ ಕುಮಾರನುಂಟಾದನು ಅವನಿಗೆ ಅಂಶುಮಂತನೆಂಬ ಧೀರಪುತ್ರನಾದನು ಆ ಅಂಶುಮಂತನಿಗೆ ಕುಕ್ಷಿಭಾಕ್ ಎಂಬುವನು, ಅವನ ಮಗನೇ ಅಂಶು ಎಂಬುವನು ಅವನ ಪುತ್ರನು ಸತ್ವತನು ಇವನು ಮಹಾವಿಷ್ಣುಭಕ್ತನಾಗಿಯೂ ಮಹಾಪರಾಕ್ರಮಶಾಲಿಯಾಗಿದ್ದನು ।।೨೨।।

ಶಾಸ್ತ್ರಂ ಪ್ರವರ್ತಯಾಮಾಸ ಕುಂಡಗೋಳಾದಿಭಿಸ್ಮೃತಂ ।
ತಸ್ಯ ನಾಮ್ನಾ ಇತಿ ಖ್ಯಾತಂ ಸಾತ್ವತಂ ನಾಮ ಶೋಭನಂ ॥೨೩॥

ತಾ॥ ಆ ಸತ್ವತನು ಕುಂಡಗೋಳಕರೆಂಬುವರೇ ಮೊದಲಾದ ಸಂಕರ ಜಾತಿಯವರನ್ನು ವಿವರಿಸುವ ಶಾಸ್ತ್ರವನ್ನು ಕಲ್ಪಿಸಿದವನಾದಕಾರಣ ಆ ಶಾಸ್ತ್ರಕ್ಕೆ ಸಾತ್ವತವೆಂದು ಪ್ರಸಿದ್ಧಿಯುಂಟಾಯಿತು ಶಾಸ್ತ್ರಪ್ರವರ್ತಕನನ್ನು ಸಾತ್ವತನೆಂದು ಕರೆದರು ।।೨೩।।

ಅಂಧಕಂ ನೈಮಹಾಭೋಜಂ ವೃಷ್ಣಿಂ ದೇವಾವೃಧುವಿಭುಂ ।
ಜ್ಯೇಷ್ಠಂ ಚ ಭಜಮಾನಾಖ್ಯಂ ಧನುರ್ವೇದವಿಶಾರದಂ ॥೨೪॥

ತಾ॥ ಆ ಸಾತ್ವತನೆಂಬುವನಿಗೆ ಅಂಧಕ, ಮಹಾಭೋಜ, ವೃಷ್ಣಿ, ದೇವಾವೃಥ, ವಿಭು, ಜ್ಯೇಷ್ಠ, ಭಜಮಾನ ಎಂಬ ಏಳು ಜನ ಕುಮಾರರುಂಟಾದರು ಇವರೆಲ್ಲರೂ ಧನುರ್ವಿಧ್ಯೆಯಲ್ಲಿ ನಿಪುಣರಾಗಿದ್ದರು ।।೨೪।।

ಮಾದ್ರ್ಯಾಂ ವೃಷ್ಣೇಸ್ಸುತೋ ಜಜ್ಞೇ ಪೃಶ್ನಿರ್ನೈರ್ಯದುನಂದನಃ ।
ಜಿಜ್ಞಾತೇ ತನಯೌ ಪುಶ್ನೈಶ್ಯಫಲ್ಕಿಶ್ಚಿತ್ರಕಶ್ಚ ಹಾ ॥೨೫॥

ತಾ॥ ಆ ವೃಷ್ಣಿ ಎಂಬುವನಿಗೆ ಮಾದ್ರಿ ಎಂಬ ಹೆಂಡತಿಯಲ್ಲಿ ವೃಶ್ನಿ ಎಂಬ ಮಗನುಂಟಾದನು ಆ ವೃಶ್ನಿಗೆ (ಯದುನಂದನನೆಂದು ಬೇರೊಂದು ಹೆಸರೂ ಉಂಟು) ಶ್ಯಫಲ್ಕನು, ಚಿತ್ರಕನು ಎಂಬ ಇಬ್ಬರು ಪುತ್ರರುಂಟಾದರು ॥೨೫॥

ರೋಮಶಾಂ ಶೋಮಹಾಶಾಪಾಚಿತ್ರಕಶ್ಚಿತ್ರಕೋಭವತ್ ।
ಚಿತ್ರಕಸ್ಯ ಪೃಥುಃ ಪುತ್ರಃ ಪೃಥೋರ್ವಿಪೃಥುರೇವಚ ॥೨೬॥

ತಾ॥ ಆ ಚಿತ್ರಕನೆಂಬುವನಿಗೆ ರೋಮಶನೆಂಬ ಮಹರ್ಷಿಯ ಶಾಪದಿಂದ ಚಿತ್ರಕನೇ ಆದನು. ಆ ಚಿತ್ರಕನಿಗೆ ಪೃತು ಎಂಬ ಮಗನುಟ್ಟಿದನು ಅವನು ಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದನು ಆ ಪೃಥುವಿಗೆ ವಿಪೃತುವೆಂಬ ಮಗನು ಉಂಟಾದನು ॥೨೬॥

ನಾರದ ಉವಾಚ :-

ಚಿತ್ರಕಸ್ಯಮಹಾಭಾಗಾಃಕಿಂಕುರ್ವನ್ತಿಚತತ್ವತಃ ।
ತತ್ಸರ್ವಂಶ್ರೋತುಮಿಚ್ಛಾಮಿಪಿತಾಮಹನಮೋಽಸ್ತುತೇ ॥೨೭॥

ತಾ॥ ಎಲೈ ಪಿತಾಮಹನಾದ ಬ್ರಹ್ಮದೇವನೇ ! ಆ ಚಿತ್ರಕನು ಯಾವ ಕಾರಣಕ್ಕಾಗಿ ಶಾಪವನ್ನು ಹೊಂದಿ ಚಿತ್ರಕನೇ ಆದನು, ಆ ಅದ್ಭುತವಾದ ಎಲ್ಲಾ ಕಥೆಯನ್ನು ಕೇಳಬೇಕೆಂದು ಇಚ್ಛೆಯಿರುವುದರಿಂದ ಆ ಚಿತ್ರಕನ ಸಕಲ ವೃತ್ತಾಂತವನ್ನೂ ವಿಶದವಾಗಿ ಹೇಳಬೇಕೆಂದು ನಾರದನು ಪ್ರಾರ್ಥಿಸಿದನು ॥೨೭॥

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮನುತ್ತಮಂ ।
ಚಿತ್ರಕಸ್ಯಮಹಾಭಾಗಾಃತತ್ಪುತ್ರತತಃಪರಂ ॥೨೮॥

ತಾ॥ ಎಲೈ ನಾರದನೇ ! ಉತ್ತಮವಾದ ಆ ವೃತ್ತಾಂತವನ್ನು ಹೇಳುತ್ತೇನೆ ಕೇಳುವವನಾಗು. ಮಹಾ ಯಶಸ್ವಿಯಾದ ಚಿತ್ರಕನು ಮತ್ತು ಆತನ ಪುತ್ರರೂ ಮಾಡಿದ ಸಕಲವನ್ನೂ ತಿಳಿಸುವೆನು ॥೨೮॥

ಚಿತ್ರಕ ಮತ್ತು ಅವನ ಮಕ್ಕಳಿಗೆ ರೋಮಶಋಷಿಯ ಶಾಪ

ನಾನಾಭೋಗೇಷುಸಂಸಕ್ತಾಃರೂಪಯೌವ್ವನಗರ್ವಿತಾಃ ।
ತತ್ಸ್ತ್ರೀಭಿಸ್ಸಹಸರ್ವತ್ರಸಂಚರನ್ತೋಮುದಾನ್ವಿತಾಃ ॥೨೯॥

ತಾ॥ ಆ ಚಿತ್ರಕನು ಮತ್ತು ಅವನ ಪುತ್ರರು ರೂಪಯೌವ್ವನಗಳಿಂದ ಗರ್ವಿತರಾಗಿ ತಮ್ಮ ತಮ್ಮ ಹೆಂಡತಿಯರೊಡಗೂಡಿ ನಾನಾ ವಿಧವಾದ ಕಾಮಕ್ರೀಡಾದಿ ಭೋಗಗಳನ್ನು ಅನುಭವಿಸುತ್ತಾ ಸಂತೋಷದಿಂದ ಸಂಚರಿಸುತ್ತಿದ್ದರು ॥೨೯॥

ದಿವ್ಯಾರ್ರಥಾಸಮುಸ್ಥಾಯನಾನಾಪ್ರಹರಣೈರ್ವ್ಯಾತಾ ।
ದಿಕ್ಷುಸರ್ವಾಸಗಚ್ಛನ್ತಃಪೀಡಯನ್ತಶ್ಚವೈರಿಣಃ ॥೩೦॥

ತಾ॥ ಅವರುಗಳು ದಿವ್ಯವಾದ ಅಸ್ತ್ರಶಸ್ತ್ರಗಳಿಂದ ಕೂಡಿದ ರಥಗಳಲ್ಲಿ ಕುಳಿತು ನಾಲ್ಕು ದಿಕ್ಕುಗಳಲ್ಲೂ ಸಂಚರಿಸುತ್ತಾ ವೈರಿಗಳನ್ನು ಜಯಿಸುತ್ತಾ ನಾನಾ ವಿಧವಾದ ಸ್ಥಳಗಳನ್ನು ನೋಡುತ್ತಾ ಸಂತೋಷದಿಂದಿರುತ್ತಿದ್ದರು ॥೩೦॥

ಏವಂಬಲಮದೋನ್ಮತ್ತಾಃಸರ್ವಾಭರಣಭೂಷಿತಾಃ ।
ಸದಾಶ್ರಮವನಂಪ್ರಾಪ್ತಾಃಹ್ಯವರ್ತನ್ತಪುರೇತದಾ ॥೩೦॥

ತಾ॥ ಈ ರೀತಿಯಾಗಿ ಸಕಲ ವೈರಿಗಳನ್ನು ಜಯಿಸಿದ ಬಲಮದಗಳಿಂದ ಕೂಡಿದ ಅವರುಗಳು ಸರ್ವಾಭರಣಭೂಷಿತರಾಗಿ ಉನ್ಮತ್ತದಿಂದ ಆಶ್ರಮಗಳಲ್ಲಿಯೂ ವನಗಳಲ್ಲಿಯೂ ಸಂಚರಿಸುತ್ತಾ ಕೊನೆಗೆ ಪಟ್ಟಣವನ್ನು ಸೇರಿದವರಾದರು ॥೩೦॥

ಏವಂಕ್ರಮೇಣಗಚ್ಛತ್ಸ್ವಾಕಾಲೇಷುರಾಜಾದವಚ ।
ವಸನ್ತಕಾಲೇಸಂಪ್ರಾಪ್ತೇಕದಾಚಿತ್ತತ್ರಸೂನವಃ ॥೩೧॥

ತಾ॥ ಈ ರೀತಿಯಾಗಿ ಕೆಲವು ಕಾಲ ಕಳೆಯಲು ವಸಂತಋತುವು ಪ್ರಾಪ್ತವಾಗಲು ವನವಿಹಾರಮಾಡಬೇಕೆಂಬ ಇಚ್ಛೆಯುಳ್ಳವರಾಗಿ ರಾಜನಾದ ಚಿತ್ರಕನ ಪುತ್ರರಾದ ರಾಜಕುಮಾರರು ॥೩೨॥

ವನಕ್ರೀಡಾಸಮಾಸಕ್ತಾಃಪ್ರಿಯಾಭಿಸ್ಸಹಸಂಗತಾಃ ।
ಆದಾಯಸರ್ವಸಾಂಭಾರಾರ್ಭಕ್ಷ್ಯಭೋಜ್ಯಾದಿಕಾರ್ತದಾ ॥೩೩॥

ತಾ॥ ಈ ರೀತಿಯಾಗಿ ಕ್ರೀಡಾಸಕ್ತಿಯುಳ್ಳ ಅವರುಗಳು ತಮ್ಮ ತಮ್ಮ ಪತ್ನಿಯರೊಡಗೂಡಿ, ಭಕ್ಷ್ಯಗಳು, ಭೋಜ್ಯ ಪದಾರ್ಥಗಳೇ ಮೊದಲಾದ ಸಕಲ ಸಾಮಗ್ರಿಗಳನ್ನು ತೆಗೆದುಕೊಂಡವರಾಗಿ ॥೩೩॥

ದಿವ್ಯಗಂಧಾಶ್ಚವಸ್ತ್ರಾಣಿಭೂಷಣಾನಿವಿಶೇಷತಃ ।
ಭೃತ್ಯೈಸ್ಸಹರಥಾರೂಢಾನಿರ್ಯಯುರ್ನಗರಾದ್ಬಹಿ ॥೩೪॥

ತಾ॥ ಮತ್ತು ಕಾಮಕ್ರೀಡೆಗಳಿಗಾಗಿ ದಿವ್ಯವಾದ ಗಂಧಗಳೂ ವಿಧವಿಧವಾದ ವಸ್ತ್ರಗಳೂ ವಿಶೇಷವಾಗಿ ಭೂಷಣಗಳೂ ಮತ್ತು ಧನವನ್ನೂ ತೆಗೆದುಕೊಂಡು ಭೃತ್ಯರಿಂದೊಡಗೂಡಿ ರಥಗಳಲ್ಲಿ ಕುಳಿತು ಪಟ್ಟಣವನ್ನು ಬಿಟ್ಟು ಪ್ರಯಾಣಮಾಡಿ ವನಮೃಗಗಳನ್ನು ಬೇಟೆಯಾಡಲು ಹೊರಹೊರಟರು ॥೩೪॥

ಕ್ರೋಶಮಾತ್ರೇಮಹಾರಣ್ಯಂಆರಾಮಂದದೃಶುಸ್ತದಾ ।
ನಾನಾವೃಕ್ಷಸಮಾಕೀರ್ಣಂನಾನಾಪಕ್ಷಿರವಾಕುಲಂ ॥೩೫॥

ತಾ॥ ಆ ಪಟ್ಟಣಕ್ಕೆ ಕ್ರೋಶಮಾತ್ರ ದೂರದಲ್ಲಿರುವ ಮಹಾರಣ್ಯವನ್ನೂ ಅಲ್ಲಿರುವ ನಾನಾ ವಿಧವಾದ ಮರಗಳಿಂದಲೂ ಅನೇಕ ಜಾತಿಯ ಪಕ್ಷಿಗಳ ಸಮೂಹಗಳಿಂದ ಕೂಡಿದ ಉದ್ಯಾನವನವನ್ನು ಕಂಡವರಾದರು ॥೩೫॥

ನಾನಾ ಲತಾಗೃಹೋಪೇತಂದಿವ್ಯಸೌಧೈರ್ವಿರಾಜಿತಂ ।
ದಿವ್ಯಪುಷ್ಪೈಸ್ಸಮಾಕೀರ್ಣಂಚಂದನಾನಿಲಶೋಭಿತಂ ॥೩೬॥

ತಾ॥ ಆ ಮನೋಹರವಾದ ವನವು ಅನೇಕ ಲತಾ ಮಂಟಪಗಳಿಂದಲೂ ಸೌಂದರ್ಯಯುಕ್ತವಾದ ಭುವನಗಳಿಂದಲೂ ಅನೇಕ ದಿವ್ಯವಾದ ಪುಷ್ಪರಾಜಿಯಿಂದಲೂ ಆ ಪುಷ್ಪಗಳಿಂದ ಸೂಸುತ್ತಿರುವ ಚಂದನಾದಿ ಸುಗಂಧ ಪರಿಮಳಗಳಿಂದಲೂ ಇರುವ ಆ ವನವನ್ನು ನೋಡಿ ॥೩೬॥

ದೇವತೋದ್ಯಾನಸದೃಶಂಪಿಪಿಶುರಾಜಸತ್ತಮಃ ।
ತತ್ರಗತ್ವಾಮಹಾಭಾಗಾಃವನಕ್ರೀಡಾಪರಾಯಣಾಃ ॥೩೭॥

ತಾ॥ ದೇವಸದೃಶವಾದ ನಂದನವನಕ್ಕೆ ಸಮಾನವಾದ ಆ ವನವನ್ನು ನೋಡಿದ ಆ ರಾಜಪುತ್ರರೆಲ್ಲರೂ ವನಕ್ರೀಡೆಗೆ ಅದು ಸರಿಯಾದುದೆಂದು ಭಾವಿಸಿ ಅಲ್ಲಿ ನೆಲಸಿದವರಾದರು ॥೩೭॥

ತತ್ರತತ್ರಪ್ರದೇಶೇಷುರಮ್ಯವೃಕ್ಷತಲೇಷುಚ ।
ಪ್ರತ್ಯೇಕಂರತಿಸಂಸಕ್ತಾಃವಿಜಹ್ರೂರಾಜನಂದನಾಃ ॥೩೮॥

ತಾ॥ ಆ ಉದ್ಯಾನವನದಲ್ಲಿ ಮನೋಹರವಾದ ಮರಗಳ ಬುಡದಲ್ಲಿ ಮತ್ತು ಸುಂದರವಾದ ಸ್ಥಳಗಳಲ್ಲಿ ಆ ರಾಜಪುತ್ರರು ಒಬ್ಬೊಬ್ಬರು ಪ್ರತ್ಯೇಕವಾಗಿ ತಮ್ಮ ಹೆಂಡತಿಯರ ಸಂಗಡ ಕಾಮಕೇಳಿ ವಿಲಾಸಗಳಿಂದ ಆ ಮನೋಹರೆಯರನ್ನು ಕೂಡಿ ರತಿಕ್ರೀಡೆಯಲ್ಲಿ ಮಗ್ನರಾದರು ॥೩೮॥

ಏವಂಚಿರತರಂಭೋಗಾ೯ ಅನುಭೂಯಿಸಮಂತತಃ ।
ರತಿಶ್ರಮಪರಿಕ್ಲಿನ್ನಾಜಲಕ್ರೀಡಾಸುಲೋಲುಪಾಃ ॥೩೯॥

ತಾ॥ ಈ ರೀತಿಯಾಗಿ ಆ ರಾಜಕುಮಾರರು ಅವರ ಪತ್ನಿಯರ ಕೂಡ ಅನೇಕ ಕಾಲ ಭೋಗಗಳನ್ನು ಅನುಭವಿಸಿ ರತಿ ಕ್ರೀಡೆಯಿಂದ ಉಂಟಾದ ದೇಹಶ್ರಮಗಳನ್ನು ಪರಿಹರಿಸಿಕೊಳ್ಳಲು ಅವರುಗಳು ಒಂದು ಸರೋವರದಲ್ಲಿ ಜಲಕ್ರೀಡಾಸಕ್ತರಾದರು ॥೩೯॥

ಕಾಸಾರಂಪಿಪಿಶುಸ್ತತ್ರಕಮಲೋತ್ಪಲ್ಲಶೋಭಿತಂ ।
ಹಂಸಕಾರಂಡವಾಕೀರ್ಣಂಪಾಂಡುಡಿಂಡೀರಶೋಭಿತಂ ॥೪೦॥

ತಾ॥ ಆ ಸರೋವರದಲ್ಲಿ ರಾಜಪತ್ನಿಯರ ಕೋಮಲಮುಖಕಮಲಗಳನ್ನು ನಾಚಿಸುವಂಥಾ ಕಮಲಪುಷ್ಪಗಳಿಂದ ಆ ಕೋಮಲಾಂಗಿಯರ ದುಕೂಲಗಳನ್ನು ನಾಚಿಸುವಂಥಾ ಬಿಳುಪಾದ ನೊರೆಗಳಿಂದಲೂ ಆ ರಮಣಿಯರ ಕೋಕಿಲ ಕಂಠಧ್ವನಿಯನ್ನು ಮೀರಿಸುವ ಹಂಸಕಾರಂಡ ಪಕ್ಷಿಗಳಿಂದಲೂ ಆ ಸರೋವರವು ತುಂಬಿದ್ದಿತು ॥೪೦॥

ಚಂದ್ರಕಾನ್ತೋಪಲೈರ್ದಿವ್ಯೈಃಸ್ಥಗಿತಂಚಂಸಮಂತತಃ ।
ನಾನಾವಿಚಿತ್ರಸಂಯುಕ್ತಂಜಲಪಕ್ಷಿಸಮಾವೃತಂ ॥೪೧॥

ತಾ॥ ಆ ಸರೋವರದ ಸುತ್ತಲೂ ಆಯಾಸ ಪರಿಹಾರಾರ್ಥಕ್ಕಾಗಿ ಚಂದ್ರಿಕಾಶಿಲಪೀಠಗಳು ಸರೋವರಕ್ಕಿಳಿಯಲು ರಚಿತವಾದ ಸೋಪಾನಗಳೂ ಕಣ್ಮನಗಳಿಗೆ ಆನಂದವನ್ನುಂಟುಮಾಡುವ ನಾನಾ ವಿಚಿತ್ರಗಳಿಂದ ಕೂಡಿರುವ ಪಕ್ಷಿಗಳ ಸಮೂಹದಿಂದ ಆ ಸರೋವರವು ರಾರಾಜಿಸುತ್ತಿದ್ದಿತು ॥೪೧॥

ತರಂಗಮಾಲಿತೋಪೇತಂಮತ್ಸ್ಯಕಚ್ಛಪಶೋಭಿತಂ ।
ಮಾನಸೇನಸಮಾದಿವ್ಯಂಕಾಸಾರಂರಾಜಕಾತ್ಮಜಾಃ ॥೪೨॥

ತಾ॥ ಸಮುದ್ರತರಂಗಗಳಂತೆ ಅಲೆಗಳುಳ್ಳದ್ದಾಗಿಯೂ ನಾನಾ ವಿಧವಾದ ಮೀನಂಗಳಿಂದಲೂ ಪಟರು ಶಬ್ದಮಾಡುವ ವಿವಿಧ ಕಪ್ಪೆಗಳಿಂದಲೂ ಕೂಡಿದ ಆ ಸರೋವರವು ಮಾನಸಸರೋವರದಂತೆ ಅತಿ ರಮ್ಯವಾಗಿರಲು ಆ ಸರೋವರದಲ್ಲಿ ಆ ರಾಜಕುಮಾರರು ॥೪೨॥

ಪ್ರವಿಶ್ಯಸಹಪತ್ನೀಭಿಃಕ್ರೀಡಯಾಮಾಸುರಂಜನಾ ।
ಏವಂವಾರಿವಿಹಾರೇಷುಸಂಸಕ್ತಾಚಿತ್ರಕಾತ್ಮಜಾಃ ॥೪೩॥

ತಾ॥ ದೇವಮಾನಸಸರೋವರಕ್ಕೆ ಸಮನಾದ ಆ ಸರೋವರದಲ್ಲಿ ಆ ಚಿತ್ರಕನ ಪುತ್ರರು ತಮ್ಮ ತಮ್ಮ ಪತ್ನಿಯರ ಜೊತೆಯಲ್ಲಿ ಜಲಕ್ರೀಡಾ ವಿಶೇಷಗಳಿಂದ ಆ ಸರೋವರದಲ್ಲಿ ಕಾಮಾಂಧರಾಗಿ ಆ ತರುಣಿಯರ ಜೊತೆಯಲ್ಲಿ ವಿಹರಿಸುತ್ತಿರುವ ಸಮಯದಲ್ಲಿ ॥೪೩॥

ದದೃಶುರ್ಮುನಿಶಾರ್ದೂಲಂರೋಮಶಂಜಪತಾಂವರಂ ।
ಜಟಾಮಂಡಲಸಂವೀತಂಭಸ್ಮೋದ್ಧೂಳಿತವಿಗ್ರಹಂ ॥೪೪॥
ಕೃಶಮತ್ಯಂತತಪಸಾಹಾರಿರುದ್ರಾಕ್ಷಶೋಭಿತಂ ।
ಕೈಲಾಸಶಿಖರಂಪ್ರಾಪ್ಯತೋಷಿಯಿತ್ವಾಽಥಶೂಲಿನಂ ॥೪೫॥

ತಾ॥ ಪರಮಾತ್ಮನನ್ನು ಜಪ ಮಾಡುವವರಲ್ಲಿ ಶ್ರೇಷ್ಠನಾಗಿಯೂ ಜಟಾಮಂಡಲ ಶೋಭಿತನೂ ಶರೀರಕ್ಕೆಲ್ಲಾ ಭಸ್ಮವನ್ನು ಲೇಪಿಸಿಕೊಂಡಿರುವವನೂ ತಪಸ್ಸಿನಿಂದ ಕೃಶವಾಗಿರುವ ಶರೀರವುಳ್ಳವನೂ ಕಂಠದಲ್ಲಿ ರುದ್ರಾಕ್ಷಿಹಾರವನ್ನು ಧರಿಸಿದವನೂ ಆದ ರೋಮಶನೆಂಬ ಋಷಿಯು ಕೈಲಾಸ ಶಿಖರಕ್ಕೆ ಹೋಗಿದ್ದು ಪಾರ್ವತೀ ಪರಮೇಶ್ವರರನ್ನು ಆರಾದಿಸಿ ಸ್ತೋತ್ರಮಾಡಿ ಪ್ರಣಾಮಗಳನ್ನರ್ಪಿಸಿ ಆ ಪಾರ್ವತೀ ಪರಮೇಶ್ವರರನ್ನು ಸಂತೋಷಪಡಿಸಿ ಹಿಂದಿರುಗಿ ತನ್ನ ಆಶಮಕ್ಕೆ ಹೊರಟು ಬರುತ್ತಾ ॥೪೪॥೪೫॥

ಸರೋವರಸ್ಯಮಾರ್ಗೇಣಪ್ರತ್ಯಾಯಾಂತಂಮುನೀಶ್ವರಂ ।
ದೃಷ್ಟ್ವಾರೂಪಮದೋನ್ಮತ್ತಾಃಚಿತ್ರಕಸ್ಯಸುತಾಃಪರಂ ॥೪೬॥
ಪರಿಹಾಸಾದಿಕಂಚಕ್ರುಃಸಂತಾಡ್ಯಸಿಕತಾಶ್ಮಭಿಃ ।
ಪಿಶಾಚಬುದ್ಧ್ಯಾಮೌನೀಂದ್ರಂಪರಿಭಾವ್ಯಪುನಃಪುನಃ ॥೪೭॥

ತಾ॥ ಈ ರೀತಿಯಾಗಿ ಭಗವಂತನ ಸೇವೆಯನ್ನು ಮಾಡಿ ತನ್ನಾಶ್ರಮಕ್ಕಾಗಿ ಹೋಗುತ್ತಿದ್ದ ಆ ರೋಮಶಋಷಿಯು ಆ ಚಿತ್ರಕ ರಾಜಪುತ್ರರು ಜಲಕ್ರೀಡಾಸಕ್ತ ರಾಗಿದ್ದ ಸರೋವರದ ಕಡೆಗೆ ಬರುತ್ತಿರುವುದನ್ನು ಕಂಡು ಆ ರಾಜಪುತ್ರರು

ಸೌಂದರ್ಯದ ಮದದಿಂದಲೂ ಕಾಮಕ್ರೀಡಾದಿಜಲಕ್ರೀಡಾದಿಸಂಯುಕ್ತರಾಗಿ ಪತ್ನಿಯರಿಂದ ಕೂಡಿ ಮದಿಸಿದವರಾದ್ದರಿಂದಲೂ ಸ್ವಶರೀರಬುದ್ಧಿಲಕ್ಷ್ಯವಿಲ್ಲದೆ ಆ ರೋಮಶಋಷಿಯನ್ನು ನೋಡಿ ಅಪಹಾಸ್ಯಮಾಡುತ್ತಾ ಇದೊಂದು ಪಿಶಾಚವೆಂದು ಬುದ್ಧಿಭ್ರಮಣೆಯನ್ನು ಹೊಂದಿದವರಾಗಿ ಆ ಮಹರ್ಷಿಯನ್ನು ಕಲ್ಲುಗಳಿಂದಲೂ, ಮರಳಿನ ಉಂಡೆಗಳಿಂದಲೂ ಪುನಃ ಪುನಃ ಹೊಡೆಯುತ್ತಾ ಆವಾಚ್ಯ ಶಬ್ಧಗಳಿಂದ ಬೈಯುತ್ತಲಿದ್ದರು ॥೪೬॥೪೭॥

ಅತೀವಹೇಳನಂಚಕ್ರುಃಮುದಾಚಿತ್ರಕಸೂನವಃ ।
ತಾನ್ವಿಲೋಕ್ಯಮುನಿಶ್ರೇಷ್ಠಃಕೋಪಸಂರಕ್ತಲೋಚನಃ ॥೪೮॥

ತಾ॥ ಈ ರೀತಿಯಾಗಿ ಆ ಚಿತ್ರಕನ ಕುಮಾರರು ಬಹಳವಾಗಿ ನಗುತ್ತಾ ಅತಿಯಾಗಿ ಅವಹೇಳನವನ್ನು ಮಾಡುತ್ತಿರಲು ಅವರನ್ನು ನೋಡಿದ ಆ ಮುನಿಶ್ರೇಷ್ಠನು ಕೋಪದಿಂದ ಕೆಂಪಾದ ನೇತ್ರಗಳುಳ್ಳವನಾಗಿ ॥೪೮॥

ಉವಾಚವಚನಂಘೋರಂದಹನ್ನಿವತಪೋಗ್ನಿನಾ ।
ಯತೋಮಾಂವೀಕ್ಷ್ಯಸಂದೃಷ್ಟಾಮೂಡಾಚಿತ್ರಕಸೂನವಃ ॥೪೯॥

ಯೂಯಂಪಿಶಾಚಬುದ್ಧ್ಯಾವೈರೂಪಯೌವ್ವನಗರ್ವಿತಾಃ ।
ಕೃತವಂತಃಪರೀಹಾಸಂಅತೆಶ್ಶಾಪಮವಾಪ್ಸ್ಯಥಂ ॥೫೦॥

ತಾ॥ ಆ ಮಹರ್ಷಿಯು ಕಡುಕೋಪದಿಂದ ತನ್ನ ತಪಸ್ಸೆಂಬ ಬೆಂಕಿಯಿಂದ ಅವರನ್ನು ಸುಡುವವನಂತೆ ನೋಡುತ್ತಾ ಘೋರವಾದ ಮಾತನ್ನು ಹೇಳಿದ್ದೇನೆಂದರೆ ಎಲೈ ಮೂಢರಾದ ಚಿತ್ರಕ ಪುತ್ರರೇ ಕೇಳುವವರಾಗಿ, ನೀವು ಯಾವ ಕಾರಣದಿಂದಾಗಿ ಸೌಂದರ್ಯಯೌವ್ವನಗರ್ವಗಳಿಂದ ಹಿಂದು ಮುಂದು ಕಾಣದೆ ನನ್ನನ್ನು ಪಿಶಾಚವೆಂದು ಅಪಹಾಸ್ಯವನ್ನು ಮಾಡುವವರಾಗಿದ್ದೀರೋ ಅದರ ಫಲವಾಗಿ ನನ್ನಿಂದ ಶಾಪವನ್ನು ಅನುಭವಿಸುವವರಾಗಿರಿ ॥೪೯॥೫೦॥

ಜಾತ್ಯಾಚಾರವಿಹೀನಶ್ಚವೇದಶಾಸ್ತ್ರವಿವರ್ಜಿತಾಃ ।
ತೀಕ್ಷ್ಣಧ್ವನಿಮಿತಿಕೋಪೇನಶಪ್ತ್ವಾಮುನಿವರೋಯಯೌ ॥೫೧॥

ತಾ॥ ಎಲೈ ಮೂಢರೇ ಕೇಳಿ. ನಿಮ್ಮ ಜಾತಿಗೆ ಅರ್ಹವಾದ ಆಚಾರವಿಹೀನರಾಗಿ ವೇದಶಾಸ್ತ್ರ ವಿಧಿವರ್ಜಿತರಾಗಿ ಬಾಳಿರೆಂದು ಕೋಪದಿಂದ ಶಾಪವನ್ನು ಕೊಟ್ಟು ಆ ರೋಮಶಋಷಿಯು ಹೊರಟುಹೋದನು ॥೫೧॥

ಇತಿ ಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮ ನಾರದ ಸಂವಾದೇ ಮುಕ್ತಕೋಪಾಖ್ಯಾನೇ ಚಿತ್ರಕಸುತಂ ಶಾಪನಂ ನಾಮಸಪ್ತ ದಶೋಧ್ಯಾಯಃ।

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವಖಂಡದ ಬ್ರಹ್ಮನಾರದ ಸಂವಾದದ ಮುಕ್ತಕೋಪಾಖ್ಯಾನದಲ್ಲಿ ಚಿತ್ರಕ ಪುತ್ರರಿಗೆ ಶಾಪವೆಂಬ ಹದಿನೇಳನೇ ಅಧ್ಯಾಯವು ಸಂಪೂರ್ಣವು।

ಬ್ರಹ್ಮಾಂಡಪುರಾಣದ ವರ್ಣವೈಭವಖಾಂಡದಲ್ಲಿ

-: ಹದಿನೆಂಟನೆಯ ಅಧ್ಯಾಯ :-

ಪರಮೇಶ್ವರನಿಂದ ಶಾಪವಿಮೋಚನೆ

ನಾರದ ಉವಾಚ :-

ತತಃಪರಂಕಿಂಕೃತವಾಂಚಿತ್ರಕೋರಾಜಸತ್ತಮಃ ।
ತದ್ಬ್ರೂಹಿಮಮವಿಸ್ತಾರಾತ್ ಶ್ರೋತುಮಿಚ್ಛಾಮಿಹೇಪ್ರಭೋ ॥೧॥

ತಾ॥ ಆ ಅನಂತರ ರಾಜಶಾರ್ದೂಲನಾದ ಆ ಚಿತ್ರಕ ಮಹಾರಾಜನು ಏನೇನು ಮಾಡಿದನೆಂಬುದನ್ನು ಸವಿಸ್ತಾರವಾಗಿ ಕೇಳಬೇಕೆಂದು ನನಗೆ ತುಂಬಾ ಇಷ್ಟವಾಗಿರುವುದರಿಂದ ಎಲೈ ಜಗತ್ಪತಿಯಾದ ಬ್ರಹ್ಮದೇವನೇ ಹೇಳೆಂದು ನಾರದ ಮುನಿಯು ಪ್ರಾರ್ಥಿಸಿದನು ।।೧।।

ಬ್ರಹ್ಮೋವಾಚ :-

ಶೃಣುನಾರದವಕ್ಷ್ಯಾಮಿತದ್ವೃತ್ತಾಂತಮುತ್ತಮಃ ।
ತಸ್ಯಪುತ್ರಾಮಹಾಭಾಗಾಃಕುಶಲಾಶ್ಚಿತ್ರಕರ್ಮಸು ॥೨॥

ತಾ॥ ಎಲೈ ನಾರದನೇ ! ಶ್ರದ್ಧೆಯಿಂದ ಕೇಳುವವನಾಗು ಅವರ ಮುಂದಿನ ವೃತ್ತಾಂತವನ್ನು ಹೇಳುತ್ತೇನೆ ಆ ಚಿತ್ರಕ ಪುತ್ರರಾದ ಆ ಮಹಾನುಬಾವರು ಕುಶಲ ಚಿತ್ರಕಾರರಾದರು ।।೨।।

ಇತಿಘೋರತರಂಶಾಪಂನಿಶಮ್ಯಚಿತ್ರಸೂನವಃ ।
ಪಶ್ಚಾತ್ತಾಪೇನಸಂಯುಕ್ತಾಃಪರಾಂಚಿಂತಾಮುಪಾಗರ್ಮ ॥೩॥

ತಾ॥ ಈ ರೀತಿಯಾದ ಘೋರ ಶಾಪವನ್ನು ಆ ಮಹರ್ಷಿಯಿಂದ ಕೇಳಿದವರಾಗಿ ಆ ಚಿತ್ರಕ ಮಹಾರಾಜನ ಪುತ್ರರು ಪಶ್ಚಾತ್ತಾಪದಿಂದ ಕೂಡಿ ಬಹಳವಾಗಿ ಚಿಂತಾಕ್ರಾಂತರಾದರು ।।೩।।

ಸಮುತ್ಥಾಯತತಶ್ಶೀಘ್ರಂಕಾಸಾದಾದತಿವಿಹ್ವಲಾ ।
ಭಾರ್ಯಾಭಿಸ್ಸಹದುಃಖೇನಪ್ರವಿಶ್ಯಚನಿಜಾಂಪುರೀಂ ।।೪।।

ತಾ॥ ಚಿಂತಾಕ್ರಾಂತರಾದ ಆ ರಾಜಕುಮಾರರು ಕಳವಳಗೊಂಡವರಾಗಿ ಆ ತರುವಾಯ ತಮ್ಮ ತಮ್ಮ ಪತ್ನಿಯರೊಡನೆ ಆ ಸರೋವರದಿಂದ ಹೊರಕ್ಕೆ ಬಂದು ವ್ಯಸನಯುಕ್ತರಾಗಿ ತಮ್ಮ ಪಟ್ಟಣಕ್ಕೆ ಶೀಘ್ರವಾಗಿ ಬಂದು ಸೇರಿದರು ।।೪।।

ಚಿತ್ರಕಂಪಿತರಂಧ್ರುಷ್ಟ್ವಾಪ್ರಣಮ್ಯವಿನಯಾನ್ವಿತಾಃ ।
ಮಹರ್ಷೇರಬ್ರುರ್ವಶಾಪಂಭೀಮಮತ್ಯಂತದುಃಖದಂ ॥೫॥

ತಾ॥ ಈ ರೀತಿಯಾಗಿ ಪಟ್ಟಣವನ್ನು ಸೇರಿದ ಆ ರಾಜಕುಮಾರರು ತಮ್ಮ ತಂದೆಯಾದ ಚಿತ್ರಕರಾಜನ ಬಳಿಗೆ ಹೋಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಅತೀ ಭಯಕಂಪಿತವುಳ್ಳವರಾಗಿ ಕಂಪಿತಕಂಠದಿಂದ ವಿನಯ ಪೂರ್ವಕವಾಗಿ ಆ ರೋಮಶ ಋಷಿಯಿಂದ ತಮಗೆ ಪ್ರಾಪ್ತವಾದ ದುಃಖಕರವೂ ಅತಿಭಯಂಕರವೂ ಆದ ಶಾಪದ ವೃತ್ತಾಂತವನ್ನು ತಿಳಿಯಪಡಿಸಿದರು ॥೫॥

ತಂಶೃತ್ವಾಚಿತ್ರಕೋರಾಜಾಅತೀಭಯಕಂಪಿತಃ ।
ವಿಚಿನ್ತ್ಯಮನಸಾತತ್ರತಪಸಾಕೃತನಿಶ್ಚಯಃ ॥೬॥

ತಾ॥ ತನ್ನ ಕುಮಾರರಿಂದ ಶಾಪದ ವಿಚಾರವನ್ನು ಕೇಳಿ ಅತ್ಯಂತಭಯ ಕಂಪಿತನಾಗಿ ಆ ಚಿತ್ರಕರಾಜನು ಚಿಂತಾಕ್ರಾಂತಸ್ತನಾಗಿ ವಿಚಾರಗೊಂಡು ತಪಸ್ಸು ಮಾಡಲು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡನು ॥೬॥

ಗಂಗಾತೀರಮನುಪ್ರಾಪ್ಯಪುತ್ರೈಸ್ಸಹದೃಢವ್ರತಃ ।
ಅಂಗುಷ್ಠಾಭ್ಯಾಂಭುವಂಸ್ಪೃಷ್ಟ್ವಾತಪಸ್ತೇಜಿತೇಂದ್ರಿಯಃ ॥೭॥

ತಾ॥ ಈ ರೀತಿಯಾಗಿ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿದ ಆ ಚಿತ್ರಕ ಮಹಾ ರಾಜನು ತನ್ನ ಮಕ್ಕಳೊಡನೆ ಹೊರಟು ಗಂಗಾನದಿಯ ತೀರವನ್ನು ಸೇರಿ ಅತ್ಯಂತ ಧೃಢ ವ್ರತನಾಗಿ ಪಾದ ಅಂಗುಷ್ಟಗಳನ್ನು ಭೂಮಿಯ ಮೇಲಿಟ್ಟು ಜಿತೇಂದ್ರಿಯನಾಗಿ ತಪಸ್ಸನ್ನು ಪ್ರಾರಂಭಿಸಿದನು ॥೭॥

ಏವಮೀಶ್ವರಮುದ್ದಿಶ್ಯಶಿತಿಕಂಠಂತಪೋಧನಃ ।
ನಿಯಮೇನಮಹಾಘೋರಂಕೃತವಾನ್ಸುಮಹತ್ತಪಃ ॥೮॥

ತಾ॥ ಆ ಚಿತ್ರಕ ರಾಜನು ಹೃದಯದಲ್ಲಿ ಈಶ್ವರನನ್ನು ಉದ್ದಿಶ್ಯವಾಗಿಟ್ಟು ಕೊಂಡು ನೀಲಕಂಠನಾದ ಪರಮೇಶ್ವರನನ್ನು ಕುರಿತು ನಿಯಮದಿಂದ ಮಹಾಘೋರ ವಾದ ತಪಸ್ಸನ್ನು ಮಾಡಿದನು ॥೮॥

ತತಃಪರಂಮಹಾದೇವಃಪಾರ್ವತೀಸಹಿತಶ್ಶಿವಃ ।
ಪ್ರಾದುರಾಸೀತ್ಪುರಾರಾತಿರ್ಯತ್ರಾಸ್ತೇಚಿತ್ರಕೋರಾಜಃ ॥೯॥

ತಾ॥ ಈ ರೀತಿಯಾಗಿ ಘೋರತಪಸನ್ನಾಚರಿಸುತ್ತಿರಲು ಕೆಲಕಾಲದ ನಂತರ ತ್ರಿಪುರಸಂಹಾರಿಯಾದ ಆ ಪರಮೇಶ್ವರನು ಪಾರ್ವತೀಸಹಿತನಾಗಿ ಆ ಚಿತ್ರಕರಾಜನು ಇದ್ದ ಸ್ಥಳದಲ್ಲಿ ಪ್ರತ್ಯಕ್ಷನಾದನು ॥೯॥

ಆಗತಂತಂಸಮಾಲೋಕ್ಯಪಾರ್ವತೀಪ್ರಾಣವಲ್ಲಭಂ ।
ನನಾಮಚಿತ್ರಕೋರಾಜಃಸಂಪ್ರೀತ್ಯಾವಿನಯಾನ್ವಿತಃ ॥೧೦॥

ತಾ॥ ಪ್ರತ್ಯಕ್ಷನಾದ ಆ ಪಾರ್ವತೀ ಪತಿಯಾದ ಪರಮೇಶ್ವರರನ್ನು ನೋಡಿದವನಾಗಿ ಆ ಚಿತ್ರಕರಾಜನು ಸಂತೋಷವನ್ನು ಹೊಂದಿ ವಿನಯಾನ್ವಿತನಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದನು ॥೧೦॥

ಶಿರಸ್ಯಂಜಲಿಮಾಧಾಯಸಂಸ್ತೋತುಮುಪಚಕ್ರಮೇ ।
ನಮಸ್ತೇಪಾರ್ವತೀನಾಥನಮಸ್ತೇಭಕ್ತವತ್ಸಲ ॥೧೧॥

ತಾ॥ ತನ್ನ ಎರಡು ಕೈಗಳನ್ನು ಜೋಡಿಸಿ ಶಿರಸ್ಸಿನಲ್ಲಿಟ್ಟುಕೊಂಡು ಆ ಪಾರ್ವತೀ ಪರಮೇಶ್ವರರನ್ನು ಸ್ತೋತ್ರಮಾಡಲುಪಕ್ರಮಿಸಿದನು, ಎಲೈ ಪಾರ್ವತೀನಾಥನೆ ನಿನಗೆ ನಮಸ್ಕಾರವು, ಭಕ್ತರಲ್ಲಿ ವಾತ್ಸಲ್ಯವುಳ್ಳವನೇ ನಿನಗೆ ನಮಸ್ಕಾರವು ॥೧೧॥

ಗಂಗಾಧರನಮಸ್ತೇಸ್ತುನಮಸ್ತೇಶೂಲಪಾಣಯೇ ।
ತ್ವಮೇವಸರ್ವಭೂತಾನಾಂಈಶ್ವರಶ್ಚಂದ್ರಶೇಖರಃ ॥೧೨॥

ತಾ॥ ಗಂಗಾದೇವಿಯನ್ನು ಪಾವನಮಾಡಿದ ಗಂಗಾಧರನೇ ನಿನಗೆ ನಮಸ್ಕಾರವು ಶೂಲಾಯುಧವನ್ನು ಕೈಯಲ್ಲಿಧರಿಸಿ ಸಕಲ ದುಷ್ಟಶಕ್ತಿಗಳನ್ನು ದಮನ ಮಾಡಿದವನೇ ನಿನಗೆ ನಮಸ್ಕಾರವು ಸಕಲಚರಾಚರ ಭೂತಗಳಿಗೂ ಮಂಗಳವನ್ನುಂಟು ಮಾಡುವ ಈಶ್ವರನೇ ನಿನಗೆ ನಮಸ್ಕಾರವು. ಸರ್ವಲೋಕಗಳ ಸಸ್ಯಗಳಿಗೆ ಪ್ರಾಣಾಧಾರನಾದ ಚಂದ್ರನನ್ನು ಶಿಖೆಯಲ್ಲಿಧರಿಸಿರುವ ಚಂದ್ರಶೇಖರನೇ ನಿನಗೆ ನಮಸ್ಕಾರವು ॥೧೨॥

ತ್ವತ್ಪ್ರಸ್ಸಾದಲವೇನೈವವಿಶ್ವಮೇತಚ್ಚರಾಚರಂ ।
ಸುಖಂವ್ರಸತಿಲೋಕೇಶಪಾಹಿಮಾಂವೃಷಭಧ್ವಜ ॥೧೩॥

ತಾ॥ ನಿನ್ನ ಅನುಗ್ರಹದ ಲೇಶಮಾತ್ರದಿಂದಲೇ ಸಕಲಚರಾಚರವಾದ ಈ ಪ್ರಪಂಚವು ಇರುವಂಥಾದ್ದಾಗಿದೆ ಎಲೈ ಲೋಕಗಳೆಲ್ಲವನ್ನು ಕಾಪಾಡುವ ಲೋಕೇಶನೇ ! ವೃಷಭಧ್ವಜನೇ ಸರ್ವ ಪಾಪ ಪರಿಹಾರಕನೇ ನನ್ನನ್ನು ರಕ್ಷಿಸುರಕ್ಷಿಸು ॥೧೩॥

ಇತಿಸ್ತುವನ್ತಂಚಿತ್ರಕಂವಿಲೋಕ್ಯಪರಮೇಶ್ವರಃ ।
ಉವಾಚಮಧುರಂವಾಕ್ಯಂಮುದಾಪರಮಯಾಯುತಂ ॥೧೪॥

ತಾ॥ ಈ ರೀತಿಯಾಗಿ ಸ್ತೋತ್ರ ಮಾಡುತ್ತಿರುವ ಚಿತ್ರಕರಾಜನನ್ನು ನೋಡಿ ಅತ್ಯಂತ ಸಂತೋಷದಿಂದ ಕೂಡಿದ ಪರಮೇಶ್ವರನು ತನ್ನ ಮಧುರವಾದ ವಾಕ್ಯಗಳಿಂದ ಈ ರೀತಿ ಹೇಳಿದನು ॥೧೪॥

ಶೃಣುಚಿತ್ರಕರಾಜರ್ಷೇತುಷ್ಟೋಸ್ಮಿತಪಸಾತವ ।
ಕಿಮಿಷ್ಟಂತೇಪ್ರದಾಸ್ಯಾಮಿವರಶೀಘ್ರಂಮಹಾಮತೆ ॥೧೫॥

ತಾ॥ ಎಲೈ ರಾಜರ್ಷಿಯಾದ ಚಿತ್ರಕನೇ ಕೇಳು ನಿನ್ನ ತಪಸ್ಸಿಗೆ ಸಂತಸವನ್ನು ಹೊಂದಿರುತ್ತೇನೆ ನಿನಗೆ ಇಷ್ಟವಾದ ವರವನ್ನು ಕೊಡುತ್ತೇನೆ ಬೇಗನೇ ವರವನ್ನು ಬೇಡುವವನಾಗು ॥೧೫॥

ತತ್ಯತದ್ವಚನಂಶೃತ್ವಾಚಿತ್ರಕೋರಾಜಪುಂಗವಃ ।
ಉವಾಚವಚನಂಶೀಘ್ರಂಪ್ರಣಮ್ಯವಿನಯಾನ್ವಿತಃ ॥೧೬॥

ತಾ॥ ಶ್ರೀ ಪರಮೇಶ್ವರನ ವಚನವನ್ನು ಕೇಳಿದ ರಾಜಪುಂಗವನಾದ ಆ ಚಿತ್ರಕನು ಪಾರ್ವತೀಪರಮೇಶ್ವರರಿಗೆ ನಮಸ್ಕರಿಸಿ ವಿನಯದಿಂದ ಬೇಗನೆ ವಿಜ್ಞಾಪಿಸಿ ಕೊಂಡನು ॥೧೬॥

ಶೃಣುಷ್ವಪಾರ್ವತೀನಾಥಮಮಪುತ್ರಾಮಹಾಬಲಾಃ ।
ರೋಮಶೇನಋಷೀಂದ್ರೇಣಶಾಪಂಪ್ರಾಪ್ತಾಸ್ಸುದುಃಖಿತಾಃ ॥೧೭॥
ಜಾತ್ಯಾಚಾರವಿಹೀನಾಶ್ಚವೇದಮಾರ್ಗವಿವರ್ಜಿತಾಃ ।
ವರ್ತನ್ತೇತ್ಯಂತಸಮ್ಮೂಢಾಸ್ತಾನ್ರಕ್ಷಗಿರಿಜಾಪತೇ ॥೧೮॥

ತಾ॥ ಪಾರ್ವತೀಪತಿಯೇ ಆಲಿಸುವವನಾಗು ಮಹಾಬಲಶಾಲಿಗಳಾದ ನನ್ನ ಪುತ್ರರು ರೋಮಶಮಹರ್ಷಿಯಿಂದ ಶಾಪವನ್ನು ಹೊಂದಿ ಆಚಾರವಿಹೀನರಾಗಿಯೂ ವೇದಮಾರ್ಗವಿವರ್ಜಿತರಾಗಿಯೂ ಮೂಢರಾಗಿಯೂ ಆಗಿದ್ದು ದುಃಖಿಸುತ್ತಿರುವ ಅವರನ್ನು ಕಾಪಾಡುವವನಾಗು ॥೧೭॥೧೮॥

ಇತ್ಯೇತದ್ವಚನಂಶೃತ್ವಾಪಾರ್ವತೀಪ್ರಾಣವಲ್ಲಭಃ ।
ಉವಾಚಮಧುರಂವಾಕ್ಯಂವಿಚಾರ್ಯಚಪುನಃಪುನಃ ॥೧೯॥

ತಾ॥ ಈ ರೀತಿಯಾಗಿ ಬೇಡಿಕೊಳ್ಳುತ್ತಿರುವ ಚಿತ್ರಕನ ವಾಕ್ಯವನ್ನು ಕೇಳಿ ಪಾರ್ವತೀವಲ್ಲಭನಾದ ಪರಮೇಶ್ವರನು ಮತ್ತೆ ಮತ್ತೆ ಆಲೋಚಿಸಿ ತನ್ನ ಮಧುರವಾದ ವಚನಗಳಿಂದ ಈ ರೀತಿ ಹೇಳಿದನು ॥೧೯॥

ಶೃಣುಚಿತ್ರಕರಾಜರ್ಷೇತವಪುತ್ರಾಶ್ಚಕೇನಜಿತ್ ।
ನಾನಾವಿಚಿತ್ರಕುಶಲಾಃನಾನಾಕರ್ಮವಿಶಾರದಾಃ ॥೨೦॥

ತಾ॥ ಎಲೈ ರಾಜರ್ಷಿಯಾದ ಚಿತ್ರಕನೇ ಕೇಳು ನಿನ್ನ ಪುತ್ರರಲ್ಲಿ ಕೆಲವರು ನಾನಾ ವಿಧವಾದ ಕೆಲಸಗಳಲ್ಲಿ ಕುಶಲರಾಗಿಯೂ ನಾನಾ ವಿದ್ಯೆಗಳಲ್ಲಿ ವಿಶಾರದರಾಗಿಯೂ ಧರಣಿಯಲ್ಲಿ ವಿಖ್ಯಾತರಾಗುವರು ॥೨೦॥

ರಜತಸ್ವರ್ಣವಿದ್ಯಾಸುಪ್ರವೀಣಾಧರಣೀತಲೇ ।
ವರ್ತಿಷ್ಯನ್ತೇಮಹಾಭಾಗಾಃಸದಾಲೋಕೋಪಕಾರಕಾ ॥೨೧॥

ತಾ॥ ಬೆಳ್ಳಿ, ಬಂಗಾರ ಕೆಲಸದ ವಿದ್ಯೆಗಳಲ್ಲಿ ಪ್ರವೀಣರಾಗಿರುತ್ತಾರೆ, ಇನ್ನು ಮುಂದೆ ಭೂಲೋಕದಲ್ಲಿ ನಿನ್ನ ವಂಶೀಯರೆಲ್ಲಾ ಜನರಿಗೆ ಉಪಕಾರಿಗಳಾಗಿ ಪ್ರಖ್ಯಾತ ರಾಗಿರುತ್ತಾರೆ ॥೨೧॥

ಶಾಪಂಚಾಪಿಋಷಿಪ್ರೋಕ್ತುಂತ್ಯಕ್ತುಮುದ್ಯನಸಾಂಪ್ರತಂ ।
ತಸ್ಮಾತ್ತವಸುತಾಧೀರಾವೇದಾಧ್ಯಯನತತ್ಪರಾಃ ॥೨೨॥

ತತ್ಯತದ್ವಚನಂಶ್ರುತ್ವಾಚಿತ್ರಕೋರಾಜಪುಂಗವಃ ।
ಉವಾಚವಚನಂಶೀಘ್ರಂಪ್ರಣಮ್ಯವಿನಯಾನ್ವಿತಃ ॥೧೬॥

ತಾ॥ ಶ್ರೀ ಪರಮೇಶ್ವರನ ವಚನವನ್ನು ಕೇಳಿದ ರಾಜಪುಂಗವನಾದ ಆ ಚಿತ್ರಕನು ಪಾರ್ವತೀಪರಮೇಶ್ವರರಿಗೆ ನಮಸ್ಕರಿಸಿ ವಿನಯದಿಂದ ಬೇಗನೆ ವಿಜ್ಞಾಪಿಸಿ ಕೊಂಡನು ॥೧೬॥

ಶೃಣುಷ್ವಪಾರ್ವತೀನಾಥಮನುಪುತ್ರಾಮಹಾಬಲಾಃ ।
ರೋಮಶೇನಖುಷೀಂದ್ರೇಣಶಾಪಂಪ್ರಾಪ್ತಾಸ್ಸುದುಃಖಿತಾಃ ॥೧೭॥
ಜಾತ್ಯಾಚಾರವಿಹೀನಾಶ್ಚವೇದಮಾರ್ಗವಿವರ್ಜಿತಾಃ ।
ವರ್ತನ್ತೇತ್ಯಂತಸಮ್ಮೂಢಾಸ್ತ್ರಾರಕ್ಷಗಿರಿಜಾಪತೇ ॥೧೮॥

ತಾ॥ ಪಾರ್ವತೀಪತಿಯೇ ಆಲಿಸುವವನಾಗು ಮಹಾಬಲಶಾಲಿಗಳಾದ ನನ್ನ ಪುತ್ರರು ರೋಮಶಮಹರ್ಷಿಯಿಂದ ಶಾಪವನ್ನು ಹೊಂದಿ ಆಚಾರವಿಹೀನರಾಗಿಯೂ ವೇದಮಾರ್ಗವಿವರ್ಜಿತರಾಗಿಯೂ ಮೂಢರಾಗಿಯೂ ಆಗಿದ್ದು ದುಃಖಿಸುತ್ತಿರುವ ಅವರನ್ನು ಕಾಪಾಡುವವನಾಗು ॥೧೭॥೧೮॥

ಇತ್ಯೇತದ್ವಚನಂಶ್ರುತ್ವಾಪಾರ್ವತೀಪ್ರಾಣವಲ್ಲಭಃ ।
ಉವಾಚಮಧುರಂವಾಕ್ಯಂವಿಚಾರ್ಯಚಪುನಃಪುನಃ ॥೧೯॥

ತಾ॥ ಈ ರೀತಿಯಾಗಿ ಬೇಡಿಕೊಳ್ಳುತ್ತಿರುವ ಚಿತ್ರಕನ ವಾಕ್ಯವನ್ನು ಕೇಳಿ ಪಾರ್ವತೀವಲ್ಲಭನಾದ ಪರಮೇಶ್ವರನು ಮತ್ತೆ ಮತ್ತೆ ಆಲೋಚಿಸಿ ತನ್ನ ಮಧುರವಾದ ವಚನಗಳಿಂದ ಈ ರೀತಿ ಹೇಳಿದನು ॥೧೯॥

ಶೃಣುಚಿತ್ರಕರಾಜರ್ಷೇತವಪುತ್ರಾಶ್ಚಕೇನಜಿತ್ ।
ನಾನಾವಿಚಿತ್ರಕುಶಲಾಃನಾನಾಕರ್ಮವಿಶಾರದಾಃ ॥೨೦॥

ತಾ॥ ಎಲೈ ರಾಜರ್ಷಿಯಾದ ಚಿತ್ರಕನೇ ಕೇಳು ನಿನ್ನ ಪುತ್ರರಲ್ಲಿ ಕೆಲವರು ನಾನಾ ವಿಧವಾದ ಕೆಲಸಗಳಲ್ಲಿ ಕುಶಲರಾಗಿಯೂ ನಾನಾ ವಿದ್ಯೆಗಳಲ್ಲಿ ವಿಶಾರದರಾಗಿಯೂ ಧರಣಿಯಲ್ಲಿ ವಿಖ್ಯಾತರಾಗುವರು ॥೨೦॥

ರಜತಸ್ವರ್ಣವಿದ್ಯಾಸುಪ್ರವೀಣಾಧರಣೀತಲೇ ।
ವರ್ತಿಷ್ಯನ್ತೇಮಹಾಭಾಗಾಃಸದಾಲೋಕೋಪಕಾರಕಾ ॥೨೧॥

ತಾ॥ ಬೆಳ್ಳಿ, ಬಂಗಾರ ಕೆಲಸದ ವಿದ್ಯೆಗಳಲ್ಲಿ ಪ್ರವೀಣರಾಗಿರುತ್ತಾರೆ, ಇನ್ನು ಮುಂದೆ ಭೂಲೋಕದಲ್ಲಿ ನಿನ್ನ ವಂಶೀಯರೆಲ್ಲಾ ಜನರಿಗೆ ಉಪಕಾರಿಗಳಾಗಿ ಪ್ರಖ್ಯಾತ ರಾಗಿರುತ್ತಾರೆ ॥೨೧॥

ಶಾಪಂಚಾಪಿಖುಷಿಪ್ರೋಕ್ತಂತ್ಯಕ್ತ್ವಾಮುದ್ಯನಸಾಂಪ್ರತಂ ।
ತಸ್ಮಾತ್ತವಸುತಾಧೀರಾವೇದಾಧ್ಯಯನತತ್ಪರಾಃ ॥೨೨॥

ಚಿತ್ರಕಲಾಭಿವೃದ್ಧಿ

ನಾರದ ಉವಾಚ :–

ಭಗವನ್ ಪರಿತುಷ್ಟೋಽಸ್ಮಿ ಚಿತ್ರಕಸ್ಯ ಮಹಾತ್ಮನಃ ।
ವೃತ್ತಾಂತಶ್ರವಣೇನೈವ ತತ್ಪ್ರಸಾದಾಜ್ಜಗತ್ಪ್ರಭೋ ॥೨೮॥

ತಾ॥ ಎಲೈ ಭಗವಂತನೇ ಲೋಕಗಳಿಗೆಲ್ಲಾ ಪ್ರಭುವಾದ ಬ್ರಹ್ಮದೇವನೇ ಮಹಾತ್ಮನಾದ ಚಿತ್ರಕನ ಕಥೆಯನ್ನು ಕೇಳಿ ಸಂತುಷ್ಟನಾದೆನು. ಆತನ ಪುತ್ರರು ಅನಂತರ ಏನು ಮಾಡಿದರೋ ಆ ವಿಚಾರವನ್ನು ಹೇಳಬೇಕೆಂದು ಪ್ರಾರ್ಥಿಸಿದನು ॥೨೮॥

ಬ್ರಹ್ಮೋವಾಚ :–

ಶೃಣು ನಾರದ ವಕ್ಷ್ಯಾಮಿ ತದ್ವೃತ್ತಾಂತಮತನ್ದ್ರಿತಃ ।
ತಸ್ಯ ಪುತ್ರಾ ಮಹಾಭಾಗಾಃ ಕುಶಲಾಶ್ಚಿತ್ರಕರ್ಮಸು ॥೨೯॥

ತಾ॥ ಎಲೈ ನಾರದನೇ ! ಶ್ರದ್ಧೆಯಿಂದ ಕೇಳುವವನಾಗು, ಆ ಚಿತ್ರಕನ ಮಕ್ಕಳು ಚಿತ್ರಕಲೆಗಳಲ್ಲಿ ಮಹಾ ಯಶಸ್ವಿಗಳಾಗಿ ಸಕಲ ಕುಶಲ ಕರ್ಮಗಳಲ್ಲಿ ನಿಪುಣರಾದರು॥೨೯॥

ಸ್ವವಂಶಜಾನಾಂ ಸರ್ವೇಷಾಂ ಯಥಾ ಪಾಲಮತಂದ್ರಿತಾಃ ।
ವೇದೋಕ್ತೇನೈವ ಮಾರ್ಗೇಣ ಜಾತಕರ್ಮಾದಿಕಾಃ ಕ್ರಿಯಾಃ ॥೩೦॥

ತಾ॥ ಆ ರಾಜಶಾರ್ದೂಲನಾದ ಚಿತ್ರಕನ ವಂಶದವರು ಪರಂಪರಾನುಗತವಾಗಿ ವೇದೋಕ್ತಮಾರ್ಗವಾದ ಜಾತಕರ್ಮಾದಿ ಶೋಡಷ ಕರ್ಮಗಳನ್ನು ಅನೂಚಾನವಾಗಿ ಪಾಲಿಸಿಕೊಂಡು ಬರುವವರಾದರು ॥೩೦॥

ಕಾರಯನ್ತಶ್ಚ ಪುತ್ರೈಶ್ಚ ಪೌತ್ರೈಶ್ಚ ಚಿತ್ರಕೋಽಸುತಃ ।
ಸಹಿತಾಸ್ತತ್ರ ವರ್ತನ್ತೇ ಸದಾ ಲೋಕೋಪಕಾರಿಣಃ ॥೩೧॥

ತಾ॥ ಈ ರೀತಿಯಾಗಿ ಆ ಚಿತ್ರಕನ ಪುತ್ರರು, ಮೊಮ್ಮಕ್ಕಳು, ಮರಿಮಕ್ಕಳು, ಸಹ ಕಾಲಾನುಗುಣವಾಗಿ ತಮ್ಮ ಧರ್ಮವನ್ನು ಬಿಡದೆ ಯಾವಾಗಲೂ ಲೋಕೋಪಕಾರಿಗಳಾಗಿ ಸುಖದಿಂದಿರುವವರಾಗಿದ್ದಾರೆ ॥೩೧॥

ನಾನಾವಿಧವಿಚಿತ್ರೈಶ್ಚ ಕರ್ಮಭಿರ್ಜಗದೀಶ್ವರಂ ।
ತೋಷಯಿತ್ವಾ ಮಹಾಭಾಗಾಃ ಸದಾಚಾರೇಷು ನಿಷ್ಠಿತಾ ॥೩೨॥
ತ್ರಿಪುರಂ ಹನ್ತುಕಾಮಸ್ಯ ಪುರಾರಾತೇರ್ಮಹಾತ್ಮನಃ ।
ಅಭೇಧ್ಯ ವಜ್ರಕವಚಂ ನಿರ್ಮಾಯಾದದುರುತ್ತಮಂ ॥೩೩॥

ತಾ॥ ಆ ಮುಕ್ತಕಋಷಿವಂಶದವರು ನಾನಾ ವಿಧವಾದ ಚಿತ್ರವಿಚಿತ್ರಕಲೆಗಳಲ್ಲಿ ಕುಶಲರಾಗಿ ಸದಾಚಾರಸಂಪನ್ನರಾಗಿ ನಿಷ್ಠಾಗರಿಷ್ಠರಾಗಿ ತಮ್ಮ ಕಾರ್ಯಕುಶಲತೆಯಿಂದ ತ್ರಿಪುರಸಂಹಾರಕ್ಕಾಗಿ ಅಭೇಧ್ಯವಾದ ವಜ್ರಕವಚವನ್ನು ತಯಾರಿಸಿ ಪಾರ್ವತೀ ಪತಿಯಾದ ಶ್ರೀ ಪರಮೇಶ್ವರನಿಗೆ ಸಮರ್ಪಿಸಿದರು ॥೩೨॥೩೩॥

ಪೀತಾಂಬರಂಮಹಾರ್ಹಂಚನಾನಾರತ್ನೈರ್ವಿಚಿತ್ರಿತಂ ।
ಪುರಾಣಪುರುಷಸ್ಯಾಪಿದದುರ್ವಿಷ್ಣೋರನುತ್ತಮಃ ॥೩೪॥

ತಾ॥ ಇದೇ ರೀತಿಯಾಗಿ ಮಹಾಶ್ರೇಷ್ಠವಾದ ನಾನಾ ವಿಧವಾದ ನವರತ್ನಗಳಿಂದ ಚಿತ್ರವಿಚಿತ್ರವಾದ ಮನಮೋಹಕವಾದ ರೀತಿಯಲ್ಲಿ ಪೀತಾಂಬರವನ್ನು ನಿರ್ಮಿಸಿ ಪುರಾಣ ಪುಣ್ಯಪುರುಷನಾದ ಶ್ರೀ ಮಹಾವಿಷ್ಣುವಿಗೂ ಸಹಾ ಸಮರ್ಪಿಸಿದರು ॥೩೪॥

ವಿಮಾನಂಸೂರ್ಯಸಂಕಾಶಂನಾನಾರತ್ನವಿಭೂಷಿತಂ ।
ದದುರ್ಮಮಾಪಿವಸೌನೀಂದ್ರಪ್ರೀತ್ಯಾಪರಮಯಾಯುತಾ ॥೩೫॥

ತಾ॥ ನಾನಾ ರತ್ನಗಳಿಂದಲೂ ಸುವರ್ಣದಿಂದಲೂ ಸೂರ್ಯತೇಜಸ್ಸಿಗೆ ಸಮಾನವಾಗಿ ಪ್ರಕಾಶಿಸುವಂಥಾ ವಿಮಾನವನ್ನು ನಿರ್ಮಿಸಿ ಭಕ್ತಿಯಿಂದ ನನಗೂ (ಬ್ರಹ್ಮ) ಅರ್ಪಿಸಿದವರಾದರು ॥೩೫॥

ನಾನಾವಿಚಿತ್ರಕರ್ಮಾಣಿಶಿಕ್ಷಯನ್ತಃಪರಸ್ಪರಂ ।
ಪುತ್ರಾನ್ಪೌತ್ರಾನ್ಪ್ರಪೌತ್ರಾಂಶಶಿಕ್ಷಯನ್ತಶ್ಚನಿತ್ಯಶಃ ॥೩೬॥

ತಾ॥ ಆ ಮುಕ್ತರಾಜ ವಂಶಸ್ಥರು ಈ ರೀತಿಯಾಗಿ ನಾನಾ ವಿಧಗಳಾದ ಚಿತ್ರ ಕಲೆಯ ಕರ್ಮಗಳಲ್ಲಿ ಕುಶಲರಾಗಿ ತಮ್ಮ ತಮ್ಮಲ್ಲೇ ಒಬ್ಬರಿಗೊಬ್ಬರು ಆ ಚಿತ್ರ ಕುಶಲ ಕಲೆಯ ವಿದ್ಯೆಗಳನ್ನು ಕಲಿಸುತ್ತಾ ಮಕ್ಕಳಿಗೂ, ಮೊಮ್ಮಕ್ಕಳಿಗೂ, ಮರಿಮಕ್ಕಳಿಗೂ, ಪರಂಪರಾನುಗತವಾದ ಕುಶಲಕಲಾ ವಿದ್ಯಾಪಾರಂಗತರಾಗಿಯೂ ಲೋಕೋಪಕಾರಿಗಳಾಗಿಯೂ ವರ್ತಿಸುತ್ತಿರುವರು ॥೩೬॥

ರಾಜಾನಂದೃಷ್ಟವಂತಸ್ತೈಸ್ವೈಃಕಾರ್ಯೈಃಪೃಥಕ್ಪೃಥಕ್ ।
ಕೃಷಿವಾಣಿಜ್ಯಗೋರಕ್ಷಾಶಿಲ್ಪವೈದ್ಯಚಿತ್ರಕಲೈಃ ॥೩೭॥

ತಾ॥ ಆ ಬಳಿಕ ಆ ರಾಜಕುಮಾರರು ಬೇರೆ ಬೇರೆಯಾಗಿ ತಮ್ಮ ತಮ್ಮ ಕೃತ್ಯಗಳಿಂದ ಕೃಷಿ, ವ್ಯಾಪಾರ, ಗೋರಕ್ಷೆ, ಶಿಲ್ಪ, ಚಮತ್ಕೃತಿ, ಚಿತ್ರ ಎಂಬ ವಿದ್ಯೆಗಳಿಂದಲೂ ಸಕಲ ಜನರನ್ನು ಸಂತೋಷಗೊಳಿಸುತ್ತಿದ್ದರು ॥೩೭॥

ಏವಂರಾಜ್ಯವಿನಾಶೇಪಿಪಾಲಯನಾರ್ಯಶಬ್ದಕಂ ।
ತಸ್ಮಾತ್ತೇಸೋಮವಂಶಸ್ಥಾಆರ್ಯಶಬ್ದಪುರಸ್ಸರಾಃ ॥೩೮॥

ತಾ॥ ಈ ರೀತಿಯಾಗಿ ನಾನಾ ವಿಧವಾದ ಕುಲಕರ್ಮಗಳಿಂದಲೂ ಕೃಷಿವಾಣಿಜ್ಯಗಳಿಂದಲೂ ಜೀವನ ನಡೆಸುತ್ತಿದ್ದರು. ಆ ರೋಮಶ ಋಷಿಯ ಶಾಪದಿಂದ ರಾಜ್ಯಕೋಶಗಳನ್ನು ಕಳೆದುಕೊಂಡರೂ ಸಹ ಅವರುಗಳು ನೀಚ ವೃತ್ತಿಗಳಿಗೆ ಪ್ರವೇಶಿಸದೆ ತಮಗೆ ಬಂದಿರುವ ಆರ್ಯ ಎಂಬ ಶಬ್ಧವನ್ನು ಕಾಪಾಡಿಕೊಂಡು ಬಂದರಾದ ಕಾರಣ ಈ ಮುಕ್ತಕಋಷಿಯ ವಂಶಸ್ಥರೆಲ್ಲರೂ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂದೇ ಲೋಕದಲ್ಲಿ ಪ್ರಸಿದ್ಧಿಯಾದರು ॥೩೮॥

ಸದಾದೇವದ್ವಿಜಾನಾಂಚಸಮಾರಾಧನತತ್ಪರಾಃ ।
ವರ್ತಂತೇಸುಮಹಾಪ್ರಾಜ್ಞಾಃಸ್ಸದಾಸಧರ್ಮನಿಷ್ಠಿತಾಃ ॥೩೯॥

ತಾ॥ ಈ ಮುಕ್ತಕಋಷಿವಂಶದವರು, ನಿರಂತರ ದೇವತಾಪೂಜೆಯನ್ನೂ ಬ್ರಾಹ್ಮಣ ಆಥಿತ್ಯವನ್ನೂ ಮಾಡುವವರಾಗಿ ಮಹಾ ಬುದ್ಧಿಶಾಲಿಗಳಾಗಿ ಪರೋಪಕಾರಿಗಳಾಗಿ ಸದ್ಧರ್ಮನಿಷ್ಠರಾಗಿ ಪ್ರವರ್ತಿಸುವರು ॥೩೯॥

ಕಥಾಶ್ರವಣಫಲ

ಸಹಸ್ರದಾಕುಲಂತೇಷಾಂವೃದ್ಧಿಂಪ್ರಾಪ್ಯಮಹೀತಲೇ ।
ವರ್ತಿಷ್ಯಂತೇಮಹಾಭಾಗಾಃಸುಖಮಾಚಂದ್ರತಾರಕಂ ॥೪೦॥

ತಾ॥ ಆ ಮುಕ್ತರಾಜನ ವಂಶವು (ಕುಲ) ಸಾವಿರಸಂಖ್ಯೆಯಲ್ಲಿ ವೃದ್ಧಿಯನ್ನು ಹೊಂದಿ ಭೂಲೋಕದಲ್ಲಿ ಸಕಲ ಸುಖಭೋಗಗಳನ್ನು ಅನುಭವಿಸುತ್ತಾ ಚಂದ್ರನೂ, ನಕ್ಷತ್ರಗಳೂ ಇರುವವರೆವಿಗೂ ಬಾಳುವವರಾಗುತ್ತಾರೆ ॥೪೦॥

ಮುಕ್ತರಾಜಸ್ಯಜನನಮ ರಾತ್ರಫಲಂದಿಶೇತ್ ।
ಸರ್ವರತ್ನಮಯಂದಿವ್ಯಂವಿಮಾನಮಧಿರೋಹತಿ ॥೪೧॥

ತಾ॥ ಈಶ್ವರನ ಮಾನಸಪುತ್ರನಾದ ಮುಕ್ತರಾಜನ ಉತ್ಪತ್ತಿಯ ಕಥೆಯ ಪಾರಾಯಣವನ್ನಾಗಲಿ ಶ್ರವಣವನ್ನಾಗಲಿ ಮಾಡಿದವರಿಗೆ ಅತಿರಾತ್ರವೆಂಬ ಮಹಾ ಯಾಗವನ್ನು ಮಾಡಿದ್ದರಿಂದ ಉಂಟಾಗುವ ಫಲವನ್ನು ಮುಕ್ತರಾಜನ ಜನನ ಕಥಾ ಶ್ರವಣ ಮಾತ್ರದಿಂದಲೇ ಆ ಯಾಗಫಲವನ್ನು ಹೊಂದುತ್ತಾರೆ ॥೪೧॥

ನಿಮಿಷಾಂಬಾನುಗ್ರಹಂಚಶೃತ್ವಾಮುಚ್ಯೇತಬಂಧನಾತ್ ।
ಪುತ್ರಪೌತ್ರೈಃಪರಿವೃತೋಭುಕ್ತ್ವಾಭೋಗಾನ್ಯಥೇಪ್ಸಿತಾನ್ ॥೪೨॥

ತಾ॥ ಯಾಗಸಂರಕ್ಷಣಾರ್ಥವಾಗಿ ಯಾವ ಮುಕ್ತರಾಜನಿಂದ ಪ್ರಾರ್ಥಿತಳಾಗಿ ಆ ಮುಕ್ತರಾಜನಿಗೆ ಶ್ರೀ ನಿಮಿಷಾಂಬಾದೇವಿಯು ದರ್ಶನವಿತ್ತ ಅನುಗ್ರಹರೂಪಕವಾದ ಕಥೆಯನ್ನು ಪಾರಾಯಣವನ್ನಾಗಲಿ, ಶ್ರವಣವನ್ನಾಗಲಿ ಮಾಡಿದವರಿಗೆ ಏನು ಕಷ್ಟಗಳಿದ್ದರೂ ಆ ತಕ್ಷಣವೇ ಆ ಕಷ್ಟಗಳಿಂದ ವಿಮುಕ್ತರಾಗುವರಲ್ಲದೆ ಈ ಲೋಕದಲ್ಲಿ ರೂಪವತಿಯಾದ ಪತ್ನಿಯಿಂದಲೂ ಬುದ್ಧಿಶಾಲಿಗಳಾದ ಮಕ್ಕಳಿಂದಲೂ ಸಕಲ ಸುಖಭೋಗಗಳನ್ನು ಅನುಭವಿಸುವರು ॥೪೨॥

ಮುಕ್ತರಾಜಸ್ಯಕಲ್ಯಾಣಂಕಥಾಂಶೃತ್ವಾಚಭಕ್ತಿತಃ ।
ಇಹಲೋಕೇಸುಖೀಭೂತ್ವಾಪಶ್ಚಾನ್ಮುಕ್ತೋಭವೇದ್ಧ್ರುವಂ ॥೪೩॥

ತಾ॥ ಇದಲ್ಲದೆ ಮುಕ್ತರಾಜನ ಕಲ್ಯಾಣವೆಂಬ ಕಥೆಯನ್ನು ಭಕ್ತಿಯಿಂದ ಕೇಳಿದವರು ಲೋಕದಲ್ಲಿ ಪುತ್ರ ಮಿತ್ರ ಕಳತ್ರಾದಿಗಳಿಂದ ಸುಖಭೋಗಗಳನ್ನು ಅನುಭವಿಸಿ ದೇಹಾಂತ್ಯದಲ್ಲಿ ಮುಕ್ತಿಯನ್ನು ಹೊಂದುವರು ॥೪೩॥

ಇದಂಶುಭಕರಂದಿವ್ಯಂಆಖ್ಯಾನಂತಪನಾರದ ।
ಉಕ್ತವಾನಸ್ಮಿಕೃಪಯಾತ್ವಯಾಪೃಷ್ಟೋಮಹಾಮತೇ ॥೪೪॥

ತಾ॥ ಎಲೈ ಪ್ರಾಜ್ಞನಾದ ನಾರದನೇ ಈ ವಿಧವಾಗಿ ನನ್ನಿಂದ ಹೇಳಲ್ಪಟ್ಟ ಈ ಮುಕ್ತಕೋಪಾಖ್ಯಾನವನ್ನು ನಿನ್ನಲ್ಲಿ ನನಗಿರುವ ಪ್ರೀತಿಯಿಂದ ಹೇಳಿರುವೆನು ಈ ಆಖ್ಯಾನವು ಶುಭಪ್ರದವೂ ದಿವ್ಯವೂ ಆದದ್ದು ॥೪೪॥

ಇತಿಬ್ರಹ್ಮಾಂಡಪುರಾಣೇ ವರ್ಣವೈಭವಖಾಂಡೇ ಬ್ರಹ್ಮನಾರದಸಂವಾದೇ
ಮುಕ್ತಕಕುಲವೃದ್ಧಿಕಥನಂನಾಮಅಷ್ಟದಶೋಧ್ಯಾಯಃ

ತಾ॥ ಇಲ್ಲಿಗೆ ಬ್ರಹ್ಮಾಂಡಪುರಾಣದ ವರ್ಣವೈಭವಖಂಡದ ಬ್ರಹ್ಮ ನಾರದ ಸಂವಾದದಲ್ಲಿ ಮುಕ್ತಋಷಿಯ ಕುಲವೃದ್ಧಿಕಥನವೆಂಬ ಹದಿನೆಂಟನೆಯ ಆಧ್ಯಾಯವು ಸಂಪೂರ್ಣವು ॥

ಶ್ರೀ ವಿಶ್ವಾವಸುನಾಮ ಸಂವತ್ಸರ ಶರದೃತು ಕಾರ್ತೀಕಮಾಸ ಶುದ್ಧ ದ್ವಾದಶಿ ಸ್ಥಿರವಾರ (ತಾ॥ 6–11–1965) ಕರ್ಣಾಟಕದ ರಾಜಧಾನಿ ಬೆಂಗಳೂರುನಗರ ನಿವಾಸಿಯಾದ ಮುಕ್ತರಾಜವಂಶದ ಶ್ಯಾಂಡಿಲ್ಯಸ ಗೋತ್ರದ ಪಾನಗಂಟಿ ಕೃಷ್ಣಪ್ಪನವರ ಪುತ್ರನಾದ ಕೆ. ಗೋಪಾಲ್‌ರಾಜುಯವರಿಂದ ವಿರಚಿತವಾದ ಮುಕ್ತರಾಜಚರಿತವೆಂಬ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣದಲ್ಲಿ ಬ್ರಹ್ಮಾಂಡಪುರಾಣಾಂತರ್ಗತವಾದ ಮುಕ್ತಕೋಪಾಖ್ಯಾನಕ್ಕೆ ಕನ್ನಡ ತಾತ್ಪರ್ಯವು ಸಂಪೂರ್ಣವು.

ಲೋಕಾಸಮಸ್ತಾಸ್ಸುಖನೋಭವನ್ತು ಶುಭಮಸ್ತು ಮಂಗಳಂ

ಶ್ರೀ ಸೋಮವಂಶ ಆರ್ಯಕ್ಷತ್ರಿಯ ಪುರಾಣ

ಮುಕ್ತರಾಜ ಪುರಾಣದಲ್ಲಿನ ಕೆಲವು ವಿವಾದವಾದ ಅಂಶಗಳು

ಶ್ರೀ ನಿಮಿಷಾಂಬಾದೇವಿಯು ಅವಿರ್ಭಾವದ ಸ್ಥಳ

ಬ್ರಹ್ಮಾಂಡಪುರಾಣದಲ್ಲಿ ಸುಮನಸ್ಕನು ಗಂಗಾತೀರದಲ್ಲಿ ಮಾಡಿದ ಪೌಂಡರೀಕ ಯಾಗಕುಂಡದಲ್ಲಿ ಶ್ರೀ ನಿಮಿಷಾಂಬಾದೇವಿಯು ಅವಿರ್ಭವಿಸಿರುವುದಾಗಿ ಹೇಳಿದೆ.

ಸನತ್ಕುಮಾರ ಸಂಹಿತೆಯಲ್ಲಿ ಮುಕ್ತರಾಜ ದಂಪತಿಗಳಿಂದ ಕಲ್ಯಾಣ ಸಮಯದಲ್ಲಿ ಶ್ರೀ ನಿಮಿಷಾಂಬಾದೇವಿಯು ಪೂಜೆಯನ್ನು ಮಾಡಲು ಆಗ ದೇವಿಯು ಕಲಶದಲ್ಲಿಯೇ ಅವಿರ್ಭವಿಸಿ ಮುಕ್ತರಾಜ ದಂಪತಿಗಳಿಗೆ ವರವನ್ನು ಕೊಟ್ಟಿರುವುದಾಗಿ ಹೇಳಿದೆ.

ಸುಮನಸ್ಕ ಮತ್ತು ಮುಕ್ತರಾಜರು ರಾಜ್ಯವಾಳಿದ ಸ್ಥಳ ವಿಚಾರ

ಸನತ್ಕುಮಾರ ಸಂಹಿತೆಯಲ್ಲಿ ಸುಮನಸ್ಕನು ಈಶ್ವರನ ಆಜ್ಞಾನುಸಾರವಾಗಿ ವಿದರ್ಭದೇಶದ ರಾಜನಾದ ಕುಶಿಕನೆಂಬ ರಾಜನಿಗೆ ದತ್ತು ಪುತ್ರನಾದನೆಂದು ಹೇಳಿದೆ. ತದನಂತರ ಸುಮನಸ್ಕರಾಜನು ವಸುಮತಿ ಎಂಬ ಪಟ್ಟಣವನ್ನು ಹೊಸದಾಗಿ ನಿರ್ಮಿಸಲ್ಪಟ್ಟು ಅಲ್ಲಿ ರಾಜ್ಯವಾಳಿದನೆಂದು ಹೇಳಿದೆ. ಬ್ರಹ್ಮಾಂಡ ಪುರಾಣದಲ್ಲಿ ಮುಕ್ತರಾಜನು ತನ್ನ ಹೆಂಡತಿಯೊಡನೆ ವನವಿಹಾರಕ್ಕೆ ತನ್ನ ಪಟ್ಟಣದ ಸಮೀಪ ದಲ್ಲಿರುವ ಮಾನಸ ಸರೋವರದ ವನಕ್ಕೆ ತೆರಳಿದ್ದನೆಂದು ಹೇಳಿದೆ.

ನಾರದಪುರಾಣದಲ್ಲಿ ಮುಕ್ತರಾಜದಂಪತಿಗಳು ಸೂರ್ಯದೇವನನ್ನು ತನ್ನ ಪಟ್ಟಣದ ಸಮೀಪದಲ್ಲಿರುವ ಗಂಗಾನದೀ ತೀರದಲ್ಲಿ ಪೂಜಿಸಿದನೆಂದು ಹೇಳಿದೆ.

ಸನತ್ಕುಮಾರ ಸಂಹಿತೆ ಮತ್ತು ಬ್ರಹ್ಮಾಂಡ ಪುರಾಣಗಳಲ್ಲಿ ಮುಕ್ತರಾಜ ಪರಂಪರೆ ಯಿಂದ ಬಂದ ಚಿತ್ರಕನೆಂಬ ರಾಜನಿಗೆ ಮತ್ತು ಆತನ ಮಕ್ಕಳಿಗೆ ದ್ವಾರಕಾಪಟ್ಟಣದ ಸಮೀಪದ ಸರೋವರದ ಬಳಿ ಜಲಕ್ರೀಡೆಯ ಸಮಯದಲ್ಲಿ ರೋಮಶ ಋಷಿಯಿಂದ ಶಾಪ ಬಂದಿತೆಂದುಅನಂತರ ಚಿತ್ರಕರಾಜನು ಅವನ ಮಕ್ಕಳು ದ್ವಾರಕೆಯನ್ನು ಬಿಟ್ಟರೆಂದು ಹೇಳಿದೆ.

ಜಾನುಮಂಡಲನ ರಾಜಧಾನಿ

ವಿಷ್ಣು ಪುರಾಣದಲ್ಲಿ ಜಾನುಮಂಡಲನ ಪೂರ್ವಜರು ವಾಸಿಸುತ್ತಿದ್ದ ಪ್ರಾಗ್ ಜ್ಯೋತಿಷಪುರದಲ್ಲಿದ್ದನೆಂದು ಹೇಳಿದೆ.

ಭವಿಷ್ಯೋತ್ತರ ಪುರಾಣದಲ್ಲಿ ರಮಣಕದ್ವೀಪವನ್ನು ಮಯಾಸುರನಿಂದ ನಿರ್ಮಿಸಲ್ಪಟ್ಟು ಅದರಲ್ಲಿ ಜಾನುಮಂಡಲನು ರಾಜ್ಯಭಾರಮಾಡಿದನೇದು ಹೇಳಿದೆ.

ಬ್ರಹ್ಮಾಂಡ ಪುರಾಣದಲ್ಲಿ ಜಾನುಮಂಡಲನು ತಪಸ್ಸಿನಿಂದ ವರಗಳನ್ನು ಪಡೆದು ತನ್ನ ಪಟ್ಟಣಕ್ಕೆ ಬಂದು ಸೇರಿದನಂತರ ಮಯಾಸುರನಿಂದ ರಮಣಕದ್ವೀಪದಲ್ಲಿ ಮಾಹೀಷ್ಮತೀ ಎಂಬ ಪಟ್ಟಣವನ್ನು ನಿರ್ಮಿಸಲ್ಪಟ್ಟು ಅದರಲ್ಲಿ ರಾಜ್ಯಭಾರಮಾಡಿದ ನೆಂದು ಹೇಳಿದೆ.

ಉತ್ತರಖಾಂಡ

ಶ್ರೀರಸ್ತು.

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ
ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಸಂಧ್ಯಾವಂದನೆ

ಸಂಧ್ಯಾಕಾಲ ವಿಚಾರ.

ತಮೋಗುಣಕ್ಕೆ :— ರಾತ್ರಿ ಎಂಟು ಘಂಟೆಯಿಂದ ಬೆಳಗಿನ ಝಾವ ನಾಲ್ಕು ಘಂಟೆ (20 ಘಳಿಗೆ) ಯ ವರೆಗಿನ ಎಂಟು ಘಂಟೆಗಳ ಕಾಲದ ಅಧಿಕಾರ.

ರಜೋಗುಣಕ್ಕೆ :— ಪ್ರಾತಃಕಾಲ ಎಂಟು ಘಂಟೆಯಿಂದ ಮಧ್ಯಾಹ್ನ ನಾಲ್ಕು ಘಂಟೆ (20 ಘಳಿಗೆ) ಯ ವರೆಗಿನ ಎಂಟು ಘಂಟೆಗಳ ಕಾಲದ ಅಧಿಕಾರ.

ಸತ್ವಗುಣಕ್ಕೆ :—ಬೆಳಗಿನ ಝಾವ ನಾಲ್ಕು ಘಂಟೆಯಿಂದ ಪ್ರಾತಃಕಾಲದ ಎಂಟು ಘಂಟೆಯವರೆಗೆ ಆಗುವ ನಾಲ್ಕು ಘಂಟೆಗಳ ಕಾಲವೂ, ಮಧ್ಯಾಹ್ನ ನಾಲ್ಕು ಘಂಟೆಯಿಂದ ರಾತ್ರಿ ಎಂಟು ಘಂಟೆಯವರೆಗೆ ಆಗುವ ನಾಲ್ಕು ಘಂಟೆಗಳ ಕಾಲವೂ ಸೇರಿ ಆಗುವ ಎಂಟು ಘಂಟೆ (20 ಘಳಿಗೆ) ಗಳಕಾಲದ ಅಧಿಕಾರ.

ಸೃಷ್ಟಿ ಸ್ಥಿತಿ ಲಯಗಳನ್ನನುಸರಿಸಿಯೂ ಸಂಧ್ಯಾಕಾಲದ ವಿಚಾರವನ್ನು ತಿಳಿಯ ಬಹುದು.

(1) ರಾತ್ರಿ ಹನ್ನೆರಡು ಘಂಟೆಯಿಂದ ಸೃಷ್ಟಿಗೆ ಪ್ರಾರಂಭ. ಬೆಳಗಿನ ಆರು ಘಂಟೆಗೆ ಸೃಷ್ಟಿಪೂರ್ಣ.

(2) ಬೆಳಗಿನ ಆರು ಘಂಟೆಯಿಂದ ವ್ಯಾಪಾರಕ್ಕೆ ಪ್ರಾರಂಭ ಮಧ್ಯಾಹ್ನ ಹನ್ನೆರಡು ಘಂಟೆಗೆ ವ್ಯಾಪಾರದ ಉನ್ನತ ಸ್ಥಿತಿ.

(3) ಮಧ್ಯಾಹ್ನ ಹನ್ನೆರಡು ಘಂಟೆಯಿಂದ ವ್ಯಾಪಾರ ಕ್ಷಯಿಸಲು ಪ್ರಾರಂಭ. ಸಾಯಂಕಾಲ ಆರು ಘಂಟೆಗೆ ವ್ಯಾಪಾರದ ಸಂಪೂರ್ಣ ಲಯ.

(4) ಸಾಯಂಕಾಲ ಆರು ಘಂಟೆಯಿಂದ ಸೃಷ್ಟಿಯೂ ಲಯವಾಗಲು ಪ್ರಾರಂಭ. ರಾತ್ರಿ ಹನ್ನೆರಡು ಘಂಟೆಗೆ ಸೃಷ್ಟಿಯ ಸಂಪೂರ್ಣ ಲಯ.

ಸತ್ವಗುಣಕ್ಕೆ :—ಬೆಳಗಿನ ಝಾವ ನಾಲ್ಕುಘಂಟೆಯಿಂದ ಪ್ರಾತಃಕಾಲ ಎಂಟು ಘಂಟೆಯವರೆಗೆ ಮತ್ತು ಮಧ್ಯಾಹ್ನ ನಾಲ್ಕು ಘಂಟೆಯಿಂದ ರಾತ್ರಿ ಎಂಟು ಘಂಟೆವರೆವಿಗೆ.

ರಜೋಗುಣಕ್ಕೆ :—ಪ್ರಾತಃಕಾಲ ಎಂಟು ಘಂಟೆಯಿಂದ ಮಧ್ಯಾಹ್ನ ನಾಲ್ಕು ಘಂಟೆವರೆವಿಗೆ.

ತಮೋಗುಣಕ್ಕೆ :—ರಾತ್ರಿ ಎಂಟು ಘಂಟೆಯಿಂದ ಬೆಳಗಿನ ಝಾವ ನಾಲ್ಕು ಘಂಟೆವರೆವಿಗೆ.

ಸಂಧ್ಯಾವಂದನೆಯು ತ್ರಿಕಾಲ ಮಾಡಬೇಕೆಂದು ಮಹರ್ಷಿಗಳು ಹೇಳುತ್ತಾರೆ. ಅದರಲ್ಲಿ ಸತ್ವಗುಣವು ಅತ್ಯಂತ ಉತ್ಕೃಷ್ಟವಾದ್ದರಿಂದ ಆ ಸಮಯದಲ್ಲಿ ದ್ವಿಕಾಲದಲ್ಲಿ ಯಾದರೂ ಸಂಧ್ಯಾವಂದನೆಯನ್ನು ಮಾಡಬೇಕು ಕಾಲಹೇಪ್ಯದಿಂದ ಅದಕ್ಕೆ ಸಾಧ್ಯ ವಾಗದಿದ್ದವರು ಪ್ರಾತಃಕಾಲವಾದರೂ ಮಾಡಲೇಬೇಕು ಇಲ್ಲವಾದರೆ ನಮ್ಮಗಳಿಗೆ ವಿಧಿಸಿರುವ ವೇದೋಕ್ತ ಮಾರ್ಗವೆಂಬ ವಿಧಿಗೆ ನಾವು ಬದ್ದರಾಗದಿದ್ದರೆ ಕರ್ಮ ಬ್ರಷ್ಟರಾಗುವೆವು.

ಸಂಧ್ಯಾದೇವಿ

ಯಾ ಸಂಧ್ಯಾ ಸಾ ಜಗತ್ಸೂತಿರ್ಮಾಯಾತೀತಾಹಿ ನಿಷ್ಕಳಾ ।
ಈಶ್ವರೀ ಕೇವಲಾಶಕ್ತಿಸ್ತತ್ವತ್ರಯ ಸಮುದ್ಭವಾ ॥

ತಾ ॥ ಸಂಧ್ಯಾ ದೇವತೆಯು ಲೋಕ ಸೃಷ್ಟಿಗೆ ಕಾರಣಳು. ಸಮಸ್ತ ಮಾಯೆಗಳನ್ನೂ ಮೀರಿ ಹೆವಳು, ಕಳಾತೀತಳು, ಸರ್ವಕ್ಕೂ ನಿಯಾಮಕಳು, ಪರಾಶಕ್ತಿ ಸ್ವರೂಪಳು, ಸಗುಣದಲ್ಲಿ ಅಕಾರ, ಉಕಾರ, ಮಕಾರಗಳಾದ ಮೂರು ರೂಪದಿಂದ ಉದಯಿಸುವವಳು ಎಂಬುದಾಗಿ ವಸಿಷ್ಠ ಮಹರ್ಷಿಗಳು ದೇಳಿರುವರು.

ಉಪಾಸ್ತೇ ಸಂಧಿವೇಳಾಯಾಂ ನಿಶಾಯಾಂ ದಿವಸಸ್ಯಚ ।
ತಾಮೇವ ಸನ್ಧ್ಯಾಂ ತಸ್ಮಾತ್ತು ಪ್ರವದನ್ತಿ ಮನೀಷಿಣಃ ॥

ತಾ ॥ ಹಗಲು ರಾತ್ರಿಗಳ ಸಂಧಿಕಾಲಗಳಲ್ಲಿ ಉಪಾಸಿಸಲ್ಪಡುವ ದೇವತೆಯಾದುದರಿಂದ ಸಂಧ್ಯಾದೇವಿ ಎಂಬುದಾಗಿ ವ್ಯಾಸಮಹರ್ಷಿಗಳು ಹೇಳಿರುವರು.

ಲಲಿತಾಸಹಸ್ರನಾಮ ಭಾಷ್ಯದಲ್ಲಿ ಹೇಳಿರುವ ಆಧಾರ :-

ತ್ರಿಪುರಾತ್ರಿವಿಧಾದೇವೀ ಬ್ರಹ್ಮವಿಷ್ಣ್ವೀಶರೂಪಿಣೀ ।
ಜ್ಞಾನಶಕ್ತಿಃ ಕ್ರಿಯಾಶಕ್ತಿರಿಚ್ಛಾಶಕ್ತ್ಯಾತ್ಮಿಕಾಪ್ರಿಯೇ ॥

ತಾ ॥ ತ್ರಿಪುರೆಯು ಲಕ್ಷ್ಮೀ, ಸರಸ್ವತಿ, ಪಾರ್ವತಿ ದೇವಿಯಾಗಿ ತ್ರಿವಿಧರೂಪಧಾರಿಣಿಯಾಗಿ ಜ್ಞಾನಶಕ್ತಿ, ಕ್ರಿಯಾಶಕ್ತಿ ಮತ್ತು ಇಚ್ಛಾಶಕ್ತಿಗಳಾಗಿರುವ ತತ್ವಸ್ವರೂಪರಾದ ಬ್ರಹ್ಮ, ವಿಷ್ಣು, ಮತ್ತು

ರುದ್ರರೇ ಋಗ್ಯಜುಸ್ಸಾಮಾಥರ್ವಣವೇದಗಳ ಸ್ವರೂಪರ ಅಧಿಧಾರಿಣಿಯಾದ ಗಾಯಿತ್ರಿ ದೇವಿಯಾಗಿ ತ್ರಿಮೂರ್ತಿಗಳ ಶಕ್ತಿಧಾರಿಣಿಯಾಗಿದ್ದಾಳೆ.

ಶ್ರೀ ಶಂಕರಾಚಾರ್ಯರ ದೇವೀ ನವರತ್ನಮಾಲಿಕೆಯಲ್ಲಿ ಆಧಾರ :—

ಆಗಮ ಪ್ರಣವ ಪೀಠಿಕಾಮಮಲವರ್ಣಮಂಗಳ ಶರೀರಿಣೀಂ ।
ಆಗಮಾವಯವ ಶೋಭಿನೀಮಖಿಲವೇದಸಾರಕೃತಶೇಖರೀಂ ॥
ಮೂಲ ಮಂತ್ರ ಮುಖಮಂಡಲಾಂ ಮುದಿತ ನಾದಬಿಂದು
ನವಯೌವನಾಂ ।
ಮಾತೃಕಾಂ ತ್ರಿಪುರ ಸುಂದರೀಂ ಮನಸಿ ಭಾವಯಾಮಿ
ಪರದೇವತಾಂ ॥

ತಾ ॥ ವೇದಗಳಿಂದ ಕೂಡಿದ ಪ್ರಣವವೇ ಪೀಠವುಳ್ಳವಳಾಗಿಯೂ, ಪರಿಶುದ್ಧವಾದ ಮತ್ತು ಮಂಗಳರೂಪವಾದ ಶರೀರವುಳ್ಳವಳಾಗಿಯೂ, ವೇದವೇ ಅವಯವವಾಗಿ ಶೋಭಿಸುತ್ತಿರುವವಳಾಗಿಯೂ ವೇದಗಳ ಸಾರಭೂತವೇ ಕಿರೀಟವುಳ್ಳವಳಾಗಿಯೂ, ಮೂಲ ಮಂತ್ರವಾದ ತತ್ವಸ್ತು ರೂಪವಾದ ಪರಬ್ರಹ್ಮ ರೂಪವೇ ಮುಖಮಂಡಲವಾಗಿರುವವಳಾಗಿಯೂ ಇದರಿಂದ ಉದಯವಾದ ಬಹು ಸ್ಫುಟವಾದ ನಾದಬಿಂದುಗಳುಳ್ಳವಳಾಗಿಯೂ ಇರುವ ಜಗಜ್ಜನನಿಯಾದ ಮಹಾ ತ್ರಿಪುರಸುಂದರೀ ಪರದೇವತೆಯನ್ನು ಸ್ಮರಿಸುತ್ತೇನೆ.

ಕರ್ಮ ಪ್ರಧಾನ್ಯತೆ

ಪ್ರೇಯಸ್ಸು ಮತ್ತು ಶ್ರೇಯಸ್ಸು ಎಂಬ ಎರಡು ಪುರುಷಾರ್ಥಗಳಿಗೆ ಸಾಧಕವಾದಂತಹ ಕರ್ಮವನ್ನು ಪರಮಾತ್ಮನು ಸೃಷ್ಟಿಯ ಪ್ರಾರಂಭದಲ್ಲಿಯೇ ಜೀವರಾಶಿಗಳ ಜತೆಯಲ್ಲಿ ಕರ್ಮವನ್ನು ಉದ್ಭವಿಸಿದ್ದಾನೆ.

ಇದಕ್ಕೆ ಗೀತೆಯಲ್ಲಿ ಹೇಳಿರುವ ಆಧಾರ :—

ಸಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಮೇಷ ವೋಸ್ತ್ವಿಷ್ಟಕಾಮಧುಕ್ ॥

ಹೀಗೆ ಕರ್ಮಗಳನ್ನು ಮಾಡಿ ತಮ್ಮ ಇಷ್ಟಾರ್ಥವನ್ನು ಹೊಂದುತ್ತಾರೆ. ಮತ್ತು ಇದೇ ಕರ್ಮಗಳನ್ನು ಫಲಾಪೇಕ್ಷೆಯಿಂದ ಮಾಡಿದರೆ ಪ್ರೇಯಸ್ಸನ್ನೂ ಮತ್ತು ನಿಷ್ಕಾಮದಿಂದ ಕರ್ಮಗಳನ್ನು ಮಾಡಿದರೆ ಜ್ಞಾನಾದ್ವಾರಾ ಶ್ರೇಯಸ್ಸ (ಮೋಕ್ಷವ)ನ್ನೂ ಹೊಂದುವುದರಿಂದ ಕರ್ಮವು ಸರ್ವಸಾಧಕಗಳಿಗೂ ಕಾರಣವಾಗಿದೆ. ಇಂಥಾ ಕರ್ಮದಲ್ಲಿ ನಿತ್ಯಕರ್ಮವು ಶಿರಪ್ರಾಯವಾದದ್ದು. ನಿತ್ಯಕರ್ಮವಿಲ್ಲದೆ ತಾನು ಮಾಡಿದ ಇತರ ಕರ್ಮಗಳು ಫಲಿಸಲಾರವು. ಆದ್ದರಿಂದ ಸರ್ವರೂ ತಪ್ಪದೆ ಮುಖ್ಯವಾಗಿ ನಿತ್ಯಕರ್ಮಗಳನ್ನು ಆಚರಿಸಬೇಕು. ಪೂರ್ವದಲ್ಲಿನ ಕ್ಷತ್ರಿಯರಾದ ಜನಕಾದಿ ಚಕ್ರವರ್ತಿಗಳು ಕರ್ಮವನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಭಕ್ತಿ ಮುಕ್ತಿಗಳನ್ನು ಪಡೆದಿರುವರು.

ಇದಕ್ಕೆ ಗೀತೆಯಲ್ಲಿ ಆಧಾರ :—

ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।

ಹೀಗೆ ಕ್ಷತ್ರಿಯರ ಧರ್ಮವಿರುವುದರಿಂದ ಪ್ರತಿಯೊಬ್ಬ ಕ್ಷತ್ರಿಯನೂ ಹಿಂದಿನ ಕ್ಷತ್ರಿಯರ ಮಾರ್ಗವನ್ನೇ ಅನುಸರಿಸಬೇಕು. ನಿತ್ಯಕರ್ಮಗಳಲ್ಲಿ ಪ್ರಾಧಾನ್ಯವಾದದ್ದು ಸಂಧ್ಯಾವಂದನೆಯು. ಈ ಸಂಧ್ಯಾವಂದನೆಯು ಸಂಧಿಕಾಲಗಳ ಈಶ್ವರ ಪ್ರೀತ್ಯರ್ಥ ವಾಗಿ ಮಾಡುವ ಕರ್ತವ್ಯವು. ಇದರಿಂದ ಸಂಧ್ಯಾವಂದನೆಗೂ ಕಾಲಚಕ್ರಕ್ಕೂ ನಿಕಟ ಸಂಬಂಧವಿದೆ. ಮತ್ತು ನಮ್ಮಗಳಿಗೂ ಕಾಲಚಕ್ರಕ್ಕೂ ಸಂಬಂಧವಿರುವುದರಿಂದ ಸಂಧ್ಯಾವಂದನೆಯು ಅತ್ಯಾವಶ್ಯಕ.

ಈ ಸಂಧ್ಯಾವಂದನೆಯಲ್ಲಿ ಗಾಯತ್ರೀ ಜಪವು ಅದ್ವಿತೀಯವಾದದ್ದು. ಅಲ್ಲದೆ ಅಮೋಘವಾದ ವೇದಾಂತದ ಮಹಾ ವಾಕ್ಯಗಳ ಅರ್ಥವನ್ನೂ ಮತ್ತು ಶರೀರ ದಲ್ಲಿರುವ ಬ್ರಹ್ಮದಂಡದ ತತ್ವಗಳನ್ನೂ ಗರ್ಭೀಕರಿಸಿಕೊಂಡಿದೆ. ಇಂಥಾ ಗಾಯತ್ರಿಯ ಜಪದಿಂದ ತೇಜಸ್ಸೂ, ನಮ್ಮ ಜಾತಿಕಲ್ಯಾಣವೂ ಉಂಟಾಗುವುದಲ್ಲದೆ ಆತ್ಮಶಕ್ತಿಯೂ ಉದ್ಭವಿಸಿ ಜ್ಞಾನವುಂಟಾಗಿ ಪರಮ ಶಾಂತಿಯು ಸಿದ್ಧಿಸುತ್ತದೆ.

ಕ್ಷತ್ರಿಯರಲ್ಲಿ ನಮ್ಮಗಳಿಗೆ ಆರ್ಯ ಎಂಬ ಪೂಜ್ಯ ನಾಮವನ್ನು ಪರಮೇಶ್ವರನು ದಯಪಾಲಿಸಿದ್ದಾನೆ. ಹೀಗೆ ಆರ್ಯ ಎಂಬ ಬಿರುದನ್ನು ಉಳಿಸಿಕೊಳ್ಳಬೇಕಾದರೆ ನಮ್ಮ ಆಚಾರ ನಿಷ್ಠೆಗಳನ್ನು ಕಾಪಾಡಿಕೊಂಡು ಪ್ರಜಾ ಧರ್ಮವನ್ನು ಮತ್ತು ಪ್ರಜೆಗಳಿಗೆ ಮುಕ್ತಿ ಮಾರ್ಗವಾದ ಕರ್ಮಗಳನ್ನು ನಾವುಗಳು ಮಾಡಿ ತೋರಿಸಿ ಲೋಕಕ್ಕೂ ಮತ್ತು ನಮ್ಮ ವಂಶಕ್ಕೂ ಕಲ್ಯಾಣವುಂಟಾಗುವಂತೆ ಮಾಡಬೇಕು. ಇದರಲ್ಲೂ ನಮ್ಮ ಕುಲ ಪುರಾಣವಾದ ಮುಕ್ತರ್ಷಿ ಚರಿತ್ರೆಯಲ್ಲಿ ಹೇಳಿರುವ ರೋಮಶಋಷಿ ಶಾಪವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಪರಮೇಶ್ವರನು ಕೊಟ್ಟ ವಚನದಂತೆ ನಾವುಗಳು ನಿತ್ಯಕರ್ಮಗಳನ್ನು ಮಾಡಿ ಮುಕ್ತರಾಗಬೇಕು.

ಕಾಲ ನಿರ್ಣಯ

ಸಂವತ್ಸರಗಳು—60

1 ಪ್ರಭವ	9 ಯುವ	17 ಸ್ವಭಾನು	25 ಖರ
2 ವಿಭವ	10 ಧಾತು	18 ತಾರಣ	26 ನಂದನ
3 ಶುಕ್ಲ	11 ಈಶ್ವರ	19 ಪಾರ್ಥಿವ	27 ವಿಜಯ
4 ಪ್ರಮೋದೂತ	12 ಬಹುಧಾನ್ಯ	20 ವ್ಯಯ	28 ಜಯ
5 ಪ್ರಜೋತ್ಪತ್ತಿ	13 ಪ್ರಮಾಥಿ	21 ಸರ್ವಜಿತ್	29 ಮನ್ಮಥ
6 ಆಂಗೀರಸ	14 ವಿಕ್ರಮ	22 ಸರ್ವಧಾರಿ	30 ದುರ್ಮುಖಿ
7 ಶ್ರೀಮುಖ	15 ವೃಷ (ವಿಷು)	23 ವಿರೋಧಿ	31 ಹೇವಿಳಂಬಿ
8 ಭಾವ	16 ಚಿತ್ರಭಾನು	24 ವಿಕೃತಿ	32 ವಿಳಂಬಿ

33 ವಿಕಾರಿ	40 ಪರಾಭವ	47 ಪ್ರಮಾದೀಚ	54 ರೌದ್ರಿ
34 ಶಾರ್ವರಿ	41 ಪ್ಲವಂಗ	48 ಆನಂದ	55 ದುರ್ಮತಿ
35 ಪ್ಲವ	42 ಕೀಲಕ	49 ರಾಕ್ಷಸ	56 ದುಂದುಭಿ
36 ಶುಭಕೃತು	43 ಸೌಮ್ಯ	50 ನಳ	57 ರುಧಿರೋದ್ಗಾರಿ
37 ಶೋಭಕೃತು	44 ಸಾಧಾರಣ	51 ಪೈಂಗಳ	58 ರಕ್ತಾಕ್ಷಿ
38 ಕ್ರೋಧಿ	45 ವಿರೋಧಿಕೃತ್	52 ಕಾಳಯುಕ್ತಿ	59 ಕ್ರೋಧನ
39 ವಿಶ್ವಾವಸು	46 ಪರೀಧಾವಿ	53 ಸಿದ್ಧಾರ್ಥಿ	60 ಅಕ್ಷಯ (ಕ್ಷಯ)

ಅಯನಗಳು—2

1 ಉತ್ತರಾಯಣ 2 ದಕ್ಷಿಣಾಯಣ

ಋತುಗಳು—6

1 ಚೈತ್ರ – ವೈಶಾಖ	ವಸಂತಋತು	2 ಜ್ಯೇಷ್ಠ – ಆಷಾಢ	ಗ್ರೀಷ್ಮಋತು
3 ಶ್ರಾವಣ – ಭಾದ್ರಪದ	ವರ್ಷಋತು	4 ಅಶ್ವಯುಜ – ಕಾರ್ತಿಕ	ಶರದೃತು
5 ಮಾರ್ಗಶಿರ – ಪೌಷ	ಹೇಮಂತಋತು	6 ಮಾಘ – ಫಾಲ್ಗುಣ	ಶಿಶಿರಋತು

1 ಶಿಶಿರ, ವಸಂತ ಮತ್ತು ಗ್ರೀಷ್ಮಋತುಗಳುಸೇರಿದರೆ ಉತ್ತರಾಯಣ

2 ವರ್ಷ, ಶರತ್ ಮತ್ತು ಹಿಮಂತಋತುಗಳುಸೇರಿದರೆ ದಕ್ಷಿಣಾಯಣ

ಚಾಂದ್ರಮಾನ ಮಾಸಗಳು—12

1 ಚೈತ್ರ	4 ಆಷಾಢ	7 ಆಶ್ವಯುಜ	10 ಪೌಷ
2 ವೈಶಾಖ	5 ಶ್ರಾವಣ	8 ಕಾರ್ತಿಕ	11 ಮಾಘ
3 ಜ್ಯೇಷ್ಠ	6 ಭಾದ್ರಪದ	9 ಮಾರ್ಗಶಿರ	12 ಫಾಲ್ಗುಣ

ಪಕ್ಷಗಳು—2

1 ಶುಕ್ಲಪಕ್ಷ 2 ಕೃಷ್ಣಪಕ್ಷ

ತಿಥಿಗಳು—15

1) ಪಾಡ್ಯಮಿ 2) ವಿದಿಯಾ 3) ತದಿಯಾ 4) ಚೌತಿ 5) ಪಂಚಮಿ 6) ಷಷ್ಠಿ 7) ಸಪ್ತಮಿ 8) ಅಷ್ಟಮಿ 9) ನವಮಿ 10) ದಶಮಿ 11) ಏಕಾದಶಿ 12) ದ್ವಾದಶಿ 13) ತ್ರಯೋದಶಿ 14) ಚತುರ್ದಶಿ 15) ಪೂರ್ಣಿಮ ಅಥವ ಅಮಾವಾಸ್ಯೆ, ಶುಕ್ಲಪಕ್ಷದ ಕೊನೆಯಲ್ಲಿ ಪೂರ್ಣಿಮೆಯು ಕೃಷ್ಣಪಕ್ಷದ ಕೊನೆಯಲ್ಲಿ ಅಮಾವಾಸ್ಯೆಯು ಆಗುತ್ತದೆ.

ವಾರಗಳು—7

1) ಭಾನುವಾರ—**ಭಾನುವಾಸರ,** 2) ಸೋಮವಾರ—**ಇಂದುವಾಸರ,**
3) ಮಂಗಳವಾರ—**ಭೌಮವಾಸರ,** 4) ಬುಧವಾರ—**ಸೌಮ್ಯವಾಸರ,**
5) ಗುರುವಾರ—**ಗುರುವಾಸರ,** 6) ಶುಕ್ರವಾರ—**ಭಾರ್ಗವಾಸರ,**
7) ಶನಿವಾರ—**ಸ್ಥಿರವಾಸರ.**

ನಕ್ಷತ್ರಗಳು—27

1 ಅಶ್ವಿನಿ, 2 ಭರಣಿ, 3 ಕೃತ್ತಿಕಾ, 4 ರೋಹಿಣಿ, 5 ಮೃಗಶಿರ, 6 ಆರಿದ್ರಾ, 7 ಪುನರ್ವಸು, 8 ಪುಷ್ಯ, 9 ಆಶ್ಲೇಷ, 10 ಮಖೆ, 11 ಪುಬ್ಬಾ. 12 ಉತ್ತರ, 13 ಹಸ್ತಾ, 14 ಚಿತ್ತಾ, 15 ಸ್ವಾತಿ, 16 ವಿಶಾಖ, 17 ಅನೂರಾಧ, 18 ಜ್ಯೇಷ್ಠಾ, 19 ಮೂಲ, 20 ಪೂರ್ವಾಷಾಢ, 21 ಉತ್ತರಾಷಾಢ, 22 ಶ್ರವಣ, 23 ಧನಿಷ್ಠಾ, 24 ಶತಭಿಷಾ, 25 ಪೂರ್ವಾಭಾದ್ರ, 26 ಉತ್ತರಾಭಾದ್ರ, 27 ರೇವತಿ.

ಕಾಲನಿರ್ಣಯದಲ್ಲಿ ಹೇಳಿರುವ ಸಂವತ್ಸರಗಳು, ಆಯನಗಳು, ಋತುಗಳು, ಮಾಸಗಳು, ಪಕ್ಷಗಳು, ತಿಥಿಗಳು, ವಾರಗಳು, ನಕ್ಷತ್ರಗಳನ್ನು ಸಂಧ್ಯಾವಂದನೆಯ ಸಂಕಲ್ಪದಲ್ಲಿ ಬಿಟ್ಟಿರುವ ಕಾಲಿಜಾಗಗಳಲ್ಲಿ ಮೇಲ್ಕಂಡವುಗಳನ್ನು ಆಯಾ ಸಂವತ್ಸರ, ಋತು, ಮಾಸ, ಪಕ್ಷ, ತಿಥಿ, ವಾರ ನಕ್ಷತ್ರ ಮೊದಲಾದವುಗಳನ್ನು ಸೇರಿಸಿಕೊಂಡು ಸಂಕಲ್ಪವನ್ನು ಹೇಳಿಕೊಳ್ಳಬೇಕು.

ಶ್ರೀರಸ್ತು

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಸಂಧ್ಯಾವಂದನೆ

ಪ್ರೋಕ್ಷಣೆ

ಅಪವಿತ್ರಃ ಪವಿತ್ರೋವಾಸರ್ವಾವಸ್ಥಾಂಗ ತೋಪಿವಾ ।
ಯಸ್ಮರೇತ್ಪುಂಡರೀಕಾಕ್ಷಂ ಸಬಾಹ್ಯಾಭ್ಯಂತರಶ್ಶುಚಿಃ ॥

ತಾ ॥ ಅಪರಿಶುದ್ಧನಾದರೂ, ಪರಿಶುದ್ಧನಾದರೂ ಸಮಸ್ತ ವಿಧವಾದ ಅವಸ್ಥೆಗಳನ್ನು ಹೊಂದಿದವನಾದರೂ ಪರಿಶುದ್ಧನಾಗಬೇಕೆಂದು ಯಾವ ಮನುಷ್ಯನು ಶ್ರೀಮನ್ನಾರಾಯಣನನ್ನು ಭಕ್ತಿಯಿಂದ ಧ್ಯಾನಮಾಡುತ್ತಾನೋ ಆ ಮನುಷ್ಯನು ದೇಹದ ಹೊರಗೂ ಒಳಗೂ ಪರಿಶುದ್ಧನಾಗುತ್ತಾನೆ.

ಮಂತ್ರವನ್ನು ಹೇಳುತ್ತಾ ನೀರನ್ನು ತನ್ನ ಅಂಗಾಂಗಗಳ ಮೇಲೆ ಪ್ರೋಕ್ಷಿಸಿಕೊಳ್ಳುವುದು

ಆಚಮನ

೧. ಓಂ ಕೇಶವಾಯಸ್ವಾಹಾ
೨. ಓಂ ನಾರಾಯಣಾಯಸ್ವಾಹಾ
೩. ಓಂ ಮಾಧವಾಯಸ್ವಾಹಾ
೪. ಓಂ ಗೋವಿಂದಾಯನಮಃ
೫. ಓಂ ವಿಷ್ಣವೇನಮಃ
೬. ಓಂ ಮಧುಸೂದನಾಯನಮಃ
೭. ಓಂ ತ್ರಿವಿಕ್ರಮಾಯನಮಃ
೮. ಓಂ ವಾಮನಾಯನಮಃ
೯. ಓಂ ಶ್ರೀಧರಾಯನಮಃ
೧೦. ಓಂ ಹೃಷೀಕೇಶಾಯನಮಃ
೧೧. ಓಂ ಪದ್ಮನಾಭಾಯನಮಃ
೧೨. ಓಂ ದಾಮೋದರಾಯನಮಃ

೧೩. ಓಂ ಸಂಕರ್ಷಣಾಯನಮಃ
೧೪. ಓಂ ವಾಸುದೇವಾಯನಮಃ
೧೫. ಓಂ ಪ್ರದ್ಯುಮ್ನಾಯನಮಃ
೧೬. ಓಂ ಅನಿರುದ್ಧಾಯನಮಃ
೧೭. ಓಂ ಪುರುಷೋತ್ತಮಾಯನಮಃ
೧೮. ಓಂ ಅಧೋಕ್ಷಜಾಯನಮಃ
೧೯. ಓಂ ನಾರಸಿಂಹಾಯನಮಃ
೨೦. ಓಂ ಅಚ್ಯುತಾಯನಮಃ
೨೧. ಓಂ ಜನಾರ್ಧನಾಯನಮಃ
೨೨. ಓಂ ಉಪೇಂದ್ರಾಯನಮಃ
೨೩. ಓಂ ಶ್ರೀಹರಯೇನಮಃ
೨೪. ಓಂ ಶ್ರೀಕೃಷ್ಣಾಯನಮಃ

ತಾ॥ ನಾಮೋಚ್ಚಾರಣೆಯೊಡನೆ ಆಯಾಯಾ ಅಂಗನ್ಯಾಸ ಮಾಡುವುದರಿಂದ ಆಯಾ ಅಂಗಗಳ ಭೂತಾಭಿಮಾನ ದೇವತಾಶಕ್ತಿಗಳು ಪ್ರ ಫುಲ್ಲವಾಗಿ ಕರ್ಮ ಮಾಡುವವನಿಗೆ ಅನುಗ್ರಹಾಭಿಮುಖ ರಾಗುತ್ತಾರೆ.

೧-೨-೩ ಒಂದು ನಾಮಕ್ಕೆ ಒಂದು ಸಲ ಪ್ರಕಾರವಾಗಿ ಮೂರು ನಾಮಗಳಿಗೂ ಮೂರು ಸಲ ನೀರನ್ನು ಕುಡಿಯುವುದು. ೪ ನಾಮವನ್ನು ಹೇಳಿ ನೀರನ್ನು ಬಿಡುವುದು. ೫ ಬಲಕೆನ್ನೆ, ೬ ಎಡಕೆನ್ನೆ, ೭ ಗಡ್ಡ, ೮ ನೀರನ್ನು ಬಿಡುವುದು. ೯ ಕೈಗಳನ್ನು ಜೋಡಿಸುವಿಕೆ, ೧೦ ಬಲತೊಡೆ, ೧೧ ಎಡತೊಡೆ, ೧೨ ನೆತ್ತಿ, ೧೩ ಮೇಲಿನ ತುಟಿ, ೧೪ ಬಲಮೂಗಿನ ಭಾಗ, ೧೫ ಎಡಮೂಗಿನ ಭಾಗ, ೧೬ ಬಲಕಣ್ಣು, ೧೭ ಎಡಕಣ್ಣು, ೧೮ ಬಲಕಿವಿ, ೧೯ ಎಡಕಿವಿ, ೨೦ ಪಕ್ಕಳು, ೨೧ ಎದೆ (ಹೃದಯ), ೨೨ ತಲೆ (ಜುಟ್ಟಿನ ಹತ್ತಿರ), ೨೩ ಬಲಭುಜ, ೨೪ ಎಡಭುಜ. ಈ ರೀತಿಯಾಗಿ ಕೈಯಿಂದ ಆಯಾ ನಾಮಕ್ಕೆ ಆಯಾ ಅಂಗಗಳನ್ನು ಮುಟ್ಟುವುದು.

ಪ್ರಣವ

ಭೂವ್ಯಾದಿ ಊರ್ಧ್ವಲೋಕಾನಾಂ ಉಪರಿಸ್ಥೋದಿವಾಕರಃ ।
ದಶಪ್ರಣವಸಂಯುಕ್ತಃ ಪ್ರಾಣಾಯಾಮಃ ಪ್ರಕೀರ್ತಿತಃ ॥

ತಾ॥ ಭೂಲೋಕವನ್ನು ಮೊದಲುಗೊಂಡು ಸೂರ್ಯನೇ ಅಂತ್ಯದಲ್ಲಿರುವ ಸಮಸ್ತ ಲೋಕ ಗಳಲ್ಲಿಯೂ ಮತ್ತು ಅಧೋಲೋಕಗಳಲ್ಲಿಯೂ ವ್ಯಾಪಕನಾದ ಪ್ರಣವವೆಂಬ ಪರಬ್ರಹ್ಮವನ್ನು ಶಾಸ್ತ್ರೋಕ್ತವಾಗಿ ಬಾರುಬಾರಿಗೂ ಮೂರು ಸಲ ಜಪಿಸಬೇಕು.

ಹೆಬ್ಬೆಟ್ಟು ಕಿರಿಬೆರಳುಗಳಿಂದ ಮೂಗನ್ನು ಹಿಡಿದುಕೊಂಡು ಮಂತ್ರವನ್ನು ಹೇಳುವುದು,

ವೇದೋಕ್ತದವರಿಗೆ—

ಪ್ರಣವಸ್ಯ ಪರಬ್ರಹ್ಮಋಷಿಃ। ಪರಮಾತ್ಮಾ ದೇವತಾ। ದೇವೀ ಗಾಯತ್ರೀಚ್ಛಂಧಃ। ಪ್ರಾಣಾಯಾಮೇವಿನಿಯೋಗಃ॥ ಓಂಭೂಃ ಓಂ ಭುವಃ ಓಗ್ಂಸುವಃ ಓಂಮಹಃ ಓಂಜನಃ ಓಂತಪಃ ಓಗ್ಂ ಸತ್ಯಂ। ಓಂತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯಧೀಮಹಿ ಧಿಯೋಯೋನಃ ಪ್ರಚೋದಯಾತ್॥

ವೇದೋಕ್ತವನ್ನು ಆಚರಣೆಯಲ್ಲಿಟ್ಟುಕೊಂಡಿರುವವರು ಈ ಮಂತ್ರವನ್ನು ಪ್ರಣವಕ್ಕೆ ಹೇಳಿಕೊಳ್ಳುವುದು.

ಸಂಕಲ್ಪ

ಶುಭಾಯಾಂ ಶೋಭನೇ ಮುಹೂರ್ತೇ ಅದ್ಯಬ್ರಹ್ಮಣ ದ್ವಿತೀಯ ಪ್ರಹರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ **ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ——ಸಂವತ್ಸರೇ—— ಣಾಯನೇ——ಋತೌ——ಮಾಸೇ——ಪಕ್ಷೇ——ವ್ಯಾಂ—— ವಾಸರಯುಕ್ತಾಯಾಂ ಶುಭ——ನಕ್ಷತ್ರ ಶುಭಯೋಗ ಶುಭಕರಣ** ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಉಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಪ್ರಾತಃಸ್ಸಂಧ್ಯಾವಂದನಂ ಕರಿಷ್ಯೇ.

ಬಲತೊಡೆಯಮೇಲೆ ಎರಡು ಕೈಗಳನ್ನು ಜೋಡಿಸಿಕೊಂಡು ಸಂಕಲ್ಪವನ್ನು ಹೇಳುವುದು.

ಸಂಕಲ್ಪದಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಆಯಾ ಕಾಲದಲ್ಲಿರುವ ಸಂವತ್ಸರದ ಹೆಸರು, ಅಯನ, ಋತು, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ ಮೊದಲಾದವುಗಳನ್ನು ಸೇರಿಸಿಕೊಳ್ಳಬೇಕು ಮತ್ತು ಮಧ್ಯಾಹ್ನ, ಸಾಯಂಕಾಲ ಸಂಧ್ಯಾವಂದನೆ ಮಾಡುವಾಗ **ಸಾಯಂ** ಅಥವಾ **ಮಧ್ಯಾಹ್ನ** ಎಂದು ಪ್ರಾತಃ ಎಂಬುದರ ಬದಲಾಗಿ ಮೇಲೆ ಹೇಳಿದವುಗಳನ್ನು ಸೇರಿಸಿಕೊಳ್ಳಬೇಕು.

ಪ್ರೋಕ್ಷಣೆ

ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ।
ನರ್ಮದೇ ಸಿಂಧುಕಾವೇರಿ ಜಲೇಸ್ಮಿನ್ಸನ್ನಿಧಿಂಕುರು॥

ಗಂಗಾ ಗೋದಾವರೀಚೈವ ತುಂಗಭದ್ರಾಸರಸ್ವತೀ ।
ಕಾವೇರಿಚೇತಿ ವಿಖ್ಯಾತಾಃ ಪಂಚಗಂಗಾಃ ಪ್ರಕೀರ್ತಿತಾಃ ॥

ತಾ॥ ಜಲಾಧಿಷ್ಠಾನ ಶಕ್ತಿಗಳಾದ ಗಂಗೆ, ಯಮುನೆ, ಗೋದಾವರಿ, ಸರಸ್ವತೀ, ನರ್ಮದಾ, ಸಿಂಧು, ಕಾವೇರಿಗಳು ಈ ಜಲದಲ್ಲಿ ಸನ್ನಿಧಿಯನ್ನು ಪಡೆದು ನನಗೆ ಆತ್ಮಸುಖ ಸಾದಕಗಳಾಗಿ ಆಗಲಿ ಎಂಬುದಾಗಿ ಮಾರ್ಜನೆಯನ್ನು ಮಾಡಿಕೊಳ್ಳುವುದು.

ಈ ಮಂತ್ರಗಳನ್ನು ಹೇಳುತ್ತಾ ನೀರನ್ನು ತನ್ನ ಅಂಗಾಂಗಗಳ ಮೇಲೆ ಪ್ರೋಕ್ಷಿಸಿಕೊಳ್ಳುವುದು.

ವೇದೋಕ್ತದವರಿಗೆ :—

ಆಪೋಹಿಷ್ಠಾಮಯೋಭುವಸ್ತಾನ ಊರ್ಜೇದಧಾತನ । ಮಹೇರಣಾಯಚಕ್ಷಸೇ । ಯೋವಶ್ಶಿವತಮೋರಸ ಸ್ತಸ್ಯಭಾಜಯತೇಹನಃ । ಉಶತೀರಿವಮಾತರಃ ತಸ್ಮಾಅರಂಗಮಾಮವೋ । ಯಸ್ಯಕ್ಷಯಾಯಜಿನ್ವಥ ಆಪೋಜನಯಥಾಚನಃ ॥

ಆತ್ಮಾರ್ಪಣೆ

ಕಾಲವೇದಿಜ್ಯೋತಿರೂಪಿ ಕಾಮಕ್ರೋಧವಿನಾಶಿನಿ ।
ರಾತ್ರಿಕಾಲ ಕೃತಂ ಪಾಪಂ ಸೂರ್ಯೇ ಜ್ಯೋತಿಷಿಹೂಯತೇ ॥

ತಾ॥ ಕಾಲಾಗ್ನಿಯೂ ಜ್ಯೋತಿಸ್ವರೂಪನೂ ಕಾಮ ಕ್ರೋಧ ಪರಿಹಾರಕನೂ ಆದ ಸೂರ್ಯ ಭಗವಂತನೆ ರಾತ್ರಿಕಾಲದಲ್ಲಿ ಮಾಡಿದ ಪಾಪವನ್ನು ನಿನ್ನ ತೇಜಸ್ಸಿನಲ್ಲಿ ಹೋಮ ಮಾಡುತ್ತೇನೆ ಅಂದರೆ ಅರ್ಪಿಸುತ್ತೇನೆ.

ಕೈಯಲ್ಲಿ ನೀರನ್ನು ಇಟ್ಟುಕೊಂಡು ಮಂತ್ರವನ್ನು ಹೇಳಿ ನೀರನ್ನು ಕುಡಿಯುವುದು.

ಶ್ಶುಚಿರಗ್ನಿಶ್ಶುಚಿರ್ವಿಪ್ರಃ ಶುಚಿಬ್ರ್ರಹ್ಮಾ ಶುಚಿಃ ಕವಿಃ ।
ಶ್ಶುಚಿರರ್ಕಶ್ಶುಚಿಶ್ಚಂದ್ರಃ ಶುಚಿರ್ವೇದಃ ಶುಚಿರ್ವಸುಃ ॥

ಆಪಶ್ಶುದ್ಧಿಕರಾಸ್ಸತ್ಯಃ ಯಥಾಪಾಪಂ ನವಿದ್ಯತೇ ।
ಮಯಿಪ್ರತಿಷ್ಠಿತಂ ಸರ್ವನೋನೋಮಂತ್ರಾತ್ರಮುಚ್ಯತೇ ॥

ತಾ॥ ಅಗ್ನಿಯು, ಬ್ರಾಹ್ಮಣನು, ಬ್ರಹ್ಮನು, ಪರಮಾತ್ಮನು, ಸೂರ್ಯನು, ಚಂದ್ರನು, ವೇದವು, ವಸುವು, ಉದಕಗಳು ಹೇಗೆ ಪರಿಶುದ್ಧವಾದವುಗಳೋ ಹಾಗೆಯೇ ಜಲಾಧಿಷ್ಠಾನದೇವತೆಗಳು ನನ್ನಲ್ಲಿ ಪಾಪವಿಲ್ಲದಂತೆ ಶುದ್ಧಿಯನ್ನುಂಟುಮಾಡಲಿ ಮತ್ತು ನನ್ನಲ್ಲಿರುವ ಸಮಸ್ತ ಪಾಪಗಳನ್ನೂ ಬಿಡಿಸುವುದರ ಮೂಲಕ ಆತ್ಮಸುಖವನ್ನುಂಟುಮಾಡಲಿ,

ಪಾಪವಿಸರ್ಜನೆ

ಪಾಣಿಮಧ್ಯೇ ಧೃತಾಸ್ತ್ವಾಪಃ ತ್ಯಕ್ತ್ವಾಶ್ಚಾಘ್ರಾಯಭೂತಲೇ।
ಏತಾಹರಂತುಮೇಪಾಪಂ ಸಪ್ತಜನ್ಮಾಂತರೈಃ ಕೃತಂ॥

ತಾ॥ ಏಳು ಜನ್ಮಗಳಿಂದ ಮಾಡಲ್ಪಟ್ಟ ನನ್ನ ಪಾಪಗಳನ್ನು ಜಲಾಭಿಮಾನದೇವತೆಗಳು ಪರಿಹರಿಸಲಿ.

ನೀರನ್ನು ಅಂಗೈಯಲ್ಲಿ ಇಟ್ಟುಕೊಂಡು ಮಂತ್ರವನ್ನು ಹೇಳಿ ನೀರನ್ನು ಮೂಸಿನೋಡಿ ಬಿಡುವುದು.

ಪ್ರಣವ:–

ಭೂವ್ಯಾದಿ ಊರ್ಧ್ವಲೋಕಾನಾಂ ಉಪರಿಸ್ಥೋದಿವಾಕರಃ।
ದಶಪ್ರಣವಸಂಯುಕ್ತಃ ಪ್ರಾಣಾಯಾಮಃ ಪ್ರಕೀರ್ತಿತಃ॥

ಸಂಕಲ್ಪ:–

ಶುಭಾಯಾಂ ಶೋಭನೇ ಮುಹೂರ್ತೆ ಅದ್ಯಬ್ರಹ್ಮಣ ದ್ವಿತೀಯ ಪ್ರಹರಾರ್ಧೆ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ **ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ———ಸಂವತ್ಸರೇ——— ಅಯನೇ———ಋತೌ———ಮಾಸೇ———ಪಕ್ಷೇ———ವ್ಯಾಂ——— ವಾಸರಯುಕ್ತಾಯಾಂ ಶುಭ———ನಕ್ಷತ್ರ ಶುಭಯೋಗ ಶುಭಕರಣ** ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಉಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ ಅರ್ಘ್ಯಪ್ರದಾನಮಹಂ ಕರಿಷ್ಯೇ.

ಗಾಯತ್ರ್ಯಾಃ ವಿಶ್ವಾಮಿತ್ರಋಷಿಃ। ಸವಿತಾದೇವತಾ।
ಅನುಷ್ಟುಪ್‌ಛಂಧಃ। ಅರ್ಘ್ಯಪ್ರದಾನೇ ವಿನಿಯೋಗಃ॥

ಅರ್ಘ್ಯ

ಯೋದೇವಸ್ಸವಿತಾಸ್ಮಾಕಂ ಧಿಯೋಧರ್ಮಾದಿಗೋಚರಃ।
ಪ್ರೇರಯೇತ್ತಸ್ಯಯದ್ಭರ್ಗಸ್ತದ್ವರೇಣ್ಯಮುಪಾಸ್ಮಹೇ॥

೧೦. ತಾ॥ ಸತ್ಕರ್ಮ ಪ್ರತಿಬಂಧಕ ನಿವರ್ತಕನೂ, ಪರಮೈಶ್ವರ್ಯಸಂಪನ್ನನೂ, ಸರ್ವಕರ್ಮ ಪ್ರೇರಕನೂ, ಸರ್ವಪ್ರಾಪ್ಯನೂ ಆಗಿರುವ ಎಲೈ ಸೂರ್ಯಭಗವಂತನೇ! ಈ ಲೋಕದಲ್ಲಿನ ಪ್ರಾಣಿಗಳು ಆಚರಿಸುವ ಯತ್ಕಿಂಚಿತ್ ಕರ್ಮವೂ, ಕರ್ಮಕಾಲಾತಿಕ್ರಮಣ ನಿಮಿತ್ತ ದೋಶವೂ, ತದನುಗುಣವಾದ ಶಿಕ್ಷಾಕರ್ತೃತ್ವಗಳೂ ನಿನ್ನ ಆಧೀನವಾಗಿಯೇ ಇವೆ. ಆದಕಾರಣ ನನ್ನ ಪ್ರಾರ್ಥನೆಯನ್ನು ಲಾಲಿಸಿ ಯಾವವಿಧವಾದ ದೋಷಕ್ಕೂ ನನ್ನನ್ನು ಭಾಗಿಯನ್ನಾಗಿ ಮಾಡದೆ ಪ್ರಸನ್ನನಾಗಿ ಉದ್ಧರಿಸು.

ಎರಡುಕೈಗಳಿಂದಲೂ ನೀರನ್ನು ಹಿಡಿದುಕೊಂಡು ಮಂತ್ರವನ್ನು ಹೇಳಿ ಬಿಡುವುದು (ಪ್ರಾತಃಕಾಲ ೪ ಸಲ, ಮಧ್ಯಾಹ್ನ ೨ ಸಲ, ಸಾಯಂಕಾಲ ೩ ಸಲ.)

ವೇದೋಕ್ತದವರಿಗೆ—

ಓಂ ಭೂರ್ಭುವಸ್ಸುವಃ ತತ್ಸವಿತುರ್ವರೇಣಿಯಂ। ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ ॥

ಪ್ರಾಯಶ್ಚಿತ್ತಾರ್ಘ್ಯ

ಏಹಿ ಸೂರ್ಯಸಹಸ್ರಾಂಶೋತೇಜೋರಾಶೇಜಗತ್ಪತೇ।
ಅನುಕಂಪಯಮಾಂ ಭಕ್ತ್ಯಾಗೃಹಾಣಾರ್ಘ್ಯಂ ನಮೋಸ್ತುತೇ॥

ಸಂಧ್ಯಾವಂದನೆಯನ್ನು ಸಕಾಲದಲ್ಲಿ ಮಾಡದಿದ್ದರೆ ಅದಕ್ಕಾಗಿ ಪಾಯಶ್ಚಿತ್ತಾರ್ಘ್ಯ ವನ್ನು ಮಾಡಬೇಕು. ಪ್ರಾಣಾಯಾಮಮಾಡಿ ಅನಂತರ "ಮಮ ಉಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ ಪ್ರಾತಃ ಸಂಧ್ಯಾಕಾಲಾತೀತ ದೋಷ ಪ್ರಾಯಶ್ಚಿತ್ತಾರ್ಥಂ ಅರ್ಘ್ಯಪ್ರದಾನಂಕರಿಷ್ಯೇ" ಎಂದು ಸಂಕಲ್ಪಮಾಡಿ ಈ ಮೇಲಿನ ಮಂತ್ರದಿಂದ ಒಂದು ಸಲ ಅರ್ಘ್ಯವನ್ನು ಕೊಡಬೇಕು

ಸಂಧ್ಯಾಪ್ರಾರ್ಥನೆ

ಉತ್ತಿಷ್ಠ ದೇವಿಗಂತವ್ಯಂ ಪುನರಾಗಮನಾಯಚ।
ಪ್ರಸೀದದೇವಿ ತುಷ್ಟ್ಯರ್ಥಂ ಪ್ರವಿಶ್ಯಹೃದಯಂಮಮ ॥

ತಾ॥ ಎಲೈ ಸಂಧ್ಯಾದೇವಿಯೆ! ನೀನು ಎಚ್ಚರಗೊಂಡು ಪ್ರಸನ್ನತೆಯಿಂದ ನನ್ನ ಹೃದಯ ವೆಂದರೆ ಸಹಸ್ರಾರ ಕಮಲವನ್ನು ಪ್ರವೇಶಿಸಿ ಸಂತುಷ್ಟಳಾಗಿ ಪುನಃ ಅಲ್ಲಿಂದ ಬರುವವಳಾಗು.

ಕೈಯಲ್ಲಿ ನೀರನ್ನು ಹಾಕಿಕೊಂಡು ತನ್ನನ್ನು ಸುತ್ತುಕಟ್ಟುವುದು.

ಆತ್ಮಪ್ರದಕ್ಷಿಣೆ

ಸೇತುಂ ಭೋಗಿಶಯಂ ವಿಷ್ಣುಂ ದ್ವಾರಕಾಂ ಬದರೀವನಂ।
ಶ್ರೀಪರ್ವತಂ ಗಜಾರಣ್ಯಂ ಸ್ಮೃತ್ವಾತಾಂ ಭೂಪ್ರದಕ್ಷಿಣಂ॥

ತಾ॥ ರಾಮಸೇತುವನ್ನೂ, ಶೇಷಶಾಯಿಯಾದ ಮಹಾವಿಷ್ಣುವನ್ನೂ, ದ್ವಾರಕಾಕ್ಷೇತ್ರವನ್ನೂ, ಬದರಿಕಾಶ್ರಮವನ್ನೂ, ಶ್ರೀಪರ್ವತವನ್ನೂ, ಗಜಾರಣ್ಯ ಕ್ಷೇತ್ರವನ್ನೂ ಸ್ಮರಿಸಿದವರಿಗೆ ಭೂಪ್ರದಕ್ಷಿಣೆ ಮಾಡಿದಷ್ಟು ಫಲವುಂಟಾಗಲಿ.

ಅಸಾವಾದಿತ್ಯೋ ಬ್ರಹ್ಮ।
ತೇಜೋಸಿ ತೇಜೋಮಯಿಧೇಹಿ॥

ತಾ॥ ನಮಗೆ ಗೋಚರವಾಗುವ ಆದಿತ್ಯನು ಪರಬ್ರಹ್ಮ ಸ್ವರೂಪನೂ ತೇಜಸ್ವರೂಪನು ಅಂತಹ ತೇಜಸ್ಸನ್ನು ನನ್ನಲ್ಲಿ ಅನುಗ್ರಹಿಸು.

ಕೈಗಳನ್ನು ಜೋಡಿಸಿಕೊಂಡು ಈ ಮಂತ್ರಗಳನ್ನು ಹೇಳುವುದು.

ದೇವತರ್ಪಣ

೧. ಸಂಧ್ಯಾಂ ತರ್ಪಯಾಮಿ   ೨. ಗಾಯತ್ರೀಂ ತರ್ಪಯಾಮಿ
೩. ಸಾವಿತ್ರೀಂ ತರ್ಪಯಾಮಿ   ೪. ಸರಸ್ವತೀಂ ತರ್ಪಯಾಮಿ
೫. ವೈಷ್ಣವೀಂ ತರ್ಪಯಾಮಿ   ೬. ವಾರಾಹೀಂ ತರ್ಪಯಾಮಿ
೭. ರೌದ್ರೀಂ ತರ್ಪಯಾಮಿ   ೮. ನಿಮೃಜೀಂ ತರ್ಪಯಾಮಿ

ಕೆಲವರು ಸಂಪ್ರದಾಯದಂತೆ ಮಾಡುತ್ತಾರೆ ಸಂಪ್ರದಾಯವಿಲ್ಲದವರು ಇದನ್ನು ಮಾಡಬೇಕಾಗಿಲ್ಲ. ಉತ್ತರದೇಶದವರು ಮುಖ್ಯವಾಗಿ ಇದನ್ನು ಮಾಡುವುದರಿಂದ ಮೇಲಿನದನ್ನು ಸೇರಿಸಲಾಗಿದೆ.

ಸ್ಥಳ ಶುದ್ಧಿ ಮತ್ತು ಆಸನ

ಅಪಸರ್ಪಂತು ಯೇಭೂತಾಃ ಯೇಭೂತಾ ಭೂಮಿಸಂಸ್ಥಿತಾಃ ।
ಯೇಭೂತಾ ವಿಘ್ನಕರ್ತಾರಃ ತೇನಶ್ಯಂತು ಶಿವಾಜ್ಞಯಾ ॥
ಅಪಕ್ರಾಮಂತ ಭೂತಾದ್ಯಾಃ ಸರ್ವೇತೇ ಭೂಮಿಭಾರಕಾಃ ।
ಸರ್ವೇಷಾ ಮವಿರೋಧೇನ ಸಂಧ್ಯಾಕರ್ಮ ಸಮಾರಭೇ ॥
ಪೃಥಿವ್ಯಾಃ ಮೇರುಪೃಷ್ಠ ಋಷಿಃ ಕೂರ್ಮೋದೇವತಾ ।
ಸುತಲಂಛಂದಃ ಆಸನೇವಿನಿಯೋಗಃ ॥
ಪೃಥ್ವೀತ್ವಯಾ ಧೃತಾಲೋಕಾಃ ದೇವಿತ್ವಂ ವಿಷ್ಣುನಾಧೃತಾ ।
ತ್ವಂಚಧಾರಯ ಮಾಂದೇವಿ ಪವಿತ್ರಂ ಕುರು ಚಾಸನಂ ॥

ತಾ॥ ಎಲೌ ಭೂಮಾತೆಯೆ! ನೀನು ಲೋಕಗಳನ್ನು ಧರಿಸಿರುವೆ, ನಿನ್ನನ್ನು ಪರಮಾತ್ಮನು ಧರಿಸಿರುವನು. ನೀನು ಕೂಡ ಪರಿಶುದ್ಧ ಮತ್ತು ಸ್ಥಿರವಾದ ಆಸನವನ್ನು ಮಾಡಿಕೊಟ್ಟು ನನ್ನನ್ನು ಧರಿಸಿಕೊಂಡಿರಬೇಕೆಂದು ನಮಸ್ಕರಿಸಿ ಬೇಡುತ್ತೇನೆ.

ಕೈಗಳನ್ನು ಜೋಡಿಸಿಕೊಂಡು ಈ ಮಂತ್ರವನ್ನು ಹೇಳುವುದು.

ಗಾಯತ್ರಿ ಹೃದಯ ಪ್ರಾರ್ಥನೆ

ಆಗಚ್ಛ ವರದೇದೇವಿಜಪ್ಯೇಮೇ ಸನ್ನಿಧೌಭವ ।
ಗಾಯನ್ತಂತ್ರಾಯಸೇ ಯಸ್ಮಾತ್ ಗಾಯತ್ರಿ ತ್ವಮತಃ ಸ್ಮೃತಾ॥

ತಾ|| ಅಭೀಷ್ಟದಾಯಕಳಾದ ದೇವಿಯೆ ! ನನ್ನ ಸಮೀಪಕ್ಕೆ ದಯಮಾಡು. ಉಪಾಸನೆ ಮಾಡುವವರನ್ನು ನೀನು ಅನುಗ್ರಹಮಾಡುವವಳಾದ್ದರಿಂದ ನೀನು ಗಾಯತ್ರೀ ದೇವಿಯಾಗಿರುತ್ತೀಯೆ, ಈ ಉಪಾಸನೆಯನ್ನು ಸ್ವೀಕರಿಸಿ ನನಗೆ ಅನುಗ್ರಹ ಮಾಡು. ಗಾಯಂತಂ–ಉಪಾಸನೆ ಮಾಡುವವನನ್ನು ತ್ರಾಯತಿ–ಉದ್ಧಾರ ಮಾಡುತ್ತಾಳೆ, ರಕ್ಷಿಸುತ್ತಾಳೆ ಆದ್ದರಿಂದ ಗಾಯತ್ರಿ ಎಂಬ ಹೆಸರು ಬಂದಿತು.

ಪ್ರಣವ :–

ಭೂವ್ಯಾದಿ ಊರ್ಧ್ವಲೋಕಾನಾಂ ಉಪರಿಸ್ಥೋದಿವಾಕರಃ ।
ದಶಪ್ರಣವಸಂಯುಕ್ತಃ ಪ್ರಾಣಾಯಾಮಃ ಪ್ರಕೀತಿತಃ ॥

ಸಂಕಲ್ಪ :–

ಶುಭಾಯಾಂ ಶೋಭನೇ ಮುಹೂರ್ತೇ ಅಧ್ಯಬ್ರಹ್ಮಣ ದ್ವಿತೀಯ ಪ್ರಹರಾರ್ಧೆ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ **ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ——ಸಂವತ್ಸರೇ—— ಣಾಯನೇ——ಋತೌ——ಮಾಸೇ——ಪಕ್ಷೇ——ವ್ಯಾಂ—— ವಾಸರಯುಕ್ತಾಯಾಂ ಶುಭ——ನಕ್ಷತ್ರ ಶುಭಯೋಗ ಶುಭಕರಣ** ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಉಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಯಥಾಶಕ್ತಿ ಗಾಯತ್ರೀ ಮಂತ್ರಜಪಂ ಕರಿಷ್ಯೇ.

ಕರನ್ಯಾಸ

೧.	ಯೋದೇವಸ್ಸವಿತಾಸ್ಮಾಕಂ	—	ಅಂಗುಷ್ಠಾಭ್ಯಾಂನಮಃ
೨.	ಧಿಯೋಧರ್ಮಾದಿಗೋಚರಃ	—	ತರ್ಜನೀಭ್ಯಾಂನಮಃ
೩.	ಪ್ರೇರಯೇತ್ತಸ್ಯ	—	ಮಧ್ಯಮಾಭ್ಯಾಂನಮಃ
೪.	ಯದ್ಭರ್ಗಃ	—	ಅನಾಮಿಕಾಭ್ಯಾಂನಮಃ
೫.	ತದ್ವರೇಣ್ಯಂ	—	ಕನಿಷ್ಠಿಕಾಭ್ಯಾಂನಮಃ
೬.	ಉಪಾಸ್ಮಹೇ	—	ಕರತಲಕರಪೃಷ್ಠಾಭ್ಯಾಂನಮಃ

೧. ಹೆಬ್ಬೆಟ್ಟನ್ನು ಪಕ್ಕದ ಬೆರಳಿನಿಂದ ಸವರುವುದು. ೨. ಪಕ್ಕದ ಬೆರಳನ್ನು ಹೆಬ್ಬೆಟ್ಟಿನಿಂದ ಸವರುವುದು. ೩. ಮಧ್ಯದ ಬೆರಳನ್ನು ಹೆಬ್ಬೆಟ್ಟಿನಿಂದ ಸವರುವುದು. ೪. ಉಂಗುರದ ಬೆರಳನ್ನು ಹೆಬ್ಬೆಟ್ಟಿನಿಂದ ಸವರುವುದು. ೫. ಕಿರಿಬೆರಳನ್ನು ಹೆಬ್ಬೆಟ್ಟಿನಿಂದ ಸವರುವುದು. ೬. ಬಲಗೈ ಹಸ್ತದಿಂದ ಎಡಗೈ ಹಸ್ತವನ್ನೂ, ಎಡಗೈ ಹಸ್ತದಿಂದ ಬಲಗೈ ಹಸ್ತವನ್ನು ಸವರುವುದು ಮತ್ತು ಬಲಹಸ್ತದ ಹಿಂದಿನಿಂದ ಎಡಹಸ್ತದ

ಹಿಂದುಗಡೆಯೂ, ಎಡಹಸ್ತದ ಹಿಂದುಗಡೆಯಿಂದ ಬಲಹಸ್ತದ ಹಿಂದುಗಡೆಯೂ ಸವರುವುದು.

ಅಂಗನ್ಯಾಸ

೧. ಯೋದೇವಸ್ಸವಿತಾಸ್ಮಾಕಂ — ಹೃದಯಾಯನಮಃ
೨. ಧಿಯೋಧರ್ಮಾದಿಗೋಚರಃ — ಶಿರಸೇನಮಃ
೩. ಪ್ರೇರಯೇತ್ತಸ್ಯ — ಶಿಖಾಯೈನಮಃ
೪. ಯದ್ಭರ್ಗಃ — ಕವಚಾಯನಮಃ
೫. ತದ್ವರೇಣ್ಯಂ — ನೇತ್ರತ್ರಯಾಯನಮಃ
೬. ಉಪಾಸ್ಮಹೇ — ಅಸ್ತ್ರಾಯನಮಃ

ತಾ॥ ನಾಮೋಚ್ಚಾರಣೆಯೊಡನೆ ಆಯಾಯ ಕರನ್ಯಾಸ, ಅಂಗನ್ಯಾಸಗಳು ಮಾಡುವುದರಿಂದ ಆಯಾ ಕರ ಮತ್ತು ಅಂಗಗಳ ಭೂತಾಭಿಮಾನ ದೇವತಾಶಕ್ತಿಗಳು ಪ್ರಫುಲ್ಲವಾಗಿ ಕರ್ಮ ಮಾಡುವವನಿಗೆ ಅನುಗ್ರಹಾಭಿಮುಖರಾಗುತ್ತಾರೆ.

೧. ಎದೆ, ೨. ತಲೆ, ೩. ಜುಟ್ಟು, ೪. ಬಾಹುಗಳು, ೫. ಕಣ್ಣುಗಳು, ಇವುಗಳನ್ನು ಕೈಗಳಿಂದ ಮುಟ್ಟುವುದು. ೬. ತಲೆ ಸುತ್ತು ಚಿಟಿಕೆಹಾಕಿ ಚಪ್ಪಾಳೆ ಹೊಡೆಯುವುದು.

ಲೋಕತ್ರಯೇಣದಿಗ್ಬಂಧಃ

ಗಾಯತ್ರಿ ಧ್ಯಾನಮಂತ್ರ

ಮುಕ್ತಾವಿದ್ರುಮ ಹೇಮನೀಲ ಧವಳಚ್ಛಾಯೈರ್ಮುಖೈಸ್ತ್ರೀಕ್ಷಣೈಃ ।
ಯುಕ್ತಾಮಿಂದುನಿಬದ್ಧರತ್ನಮುಕುಟಾಂ ತತ್ವಾರ್ಥವರ್ಣಾತ್ಮಿಕಾಂ॥
ಗಾಯತ್ರೀಂ ವರದಾಭಯಾಂ ಕುಶಕಶಾಂ ಶುಭ್ರಂ ಕಪಾಲಂಗುಣಂ ।
ಶಂಖಂಚಕ್ರ ಮಥಾರವಿಂದಯುಗಳಂ ಹಸ್ತೈರ್ವಹಸ್ತೀಂಭಜೇ ॥

ತಾ॥ ಮುತ್ತು, ಹವಳ, ನೀಲಮಣಿ, ಸ್ಪಟಿಕಗಳ ಕಾಂತಿಯಂತೆ ಮುಖವುಳ್ಳ, ಮೂರು ಕಣ್ಣುಗಳುಳ್ಳ, ಕಚಂದ್ರಳೆಗಳಿಂದ ಕೂಡಿದ ರತ್ನಖಚಿತವಾದ ಕಿರೀಟಗಳುಳ್ಳ, ಪರಮತತ್ವಾರ್ಥಗಳನ್ನು ಪ್ರತಿಪಾದಿಸುವ ತೇಜೋರೂಪಳಾದ ಮತ್ತು ಓಂಕಾರ ಮುಂತಾದ ವರ್ಣ (ಅಕ್ಷರ) ರೂಪಗಳಾಗಿರುವ ಅಂಕುಶ, ಶೂಲ, ಕಶಾ, ಗದಾ, ಕಪಾಲ, ಶಂಖ, ಚಕ್ರ ಮತ್ತು ಕಮಲದ ಮೊಗ್ಗುಗಳನ್ನು ಹಸ್ತಗಳಲ್ಲಿ ಧರಿಸಿರುವ ಉಪಾಸಕರಿಗೆ ವರವನ್ನೂ, ಅಭಯವನ್ನೂ ಕೊಟ್ಟು ಕಾಪಾಡುವ ವರದಾಭಯ ಹಸ್ತಗಳುಳ್ಳ, ಗಾಯತ್ರಿದೇವಿಯ ದಿವ್ಯಸುಂದರಮೂರ್ತಿ ಸ್ವರೂಪವನ್ನು ನಾನು ಧ್ಯಾನಮಾಡುತ್ತೇನೆ.

ಈ ಮಂತ್ರಗಳಿಂದ ಸ್ತೋತ್ರಮಾಡುವುದು.

ಗಾಯತ್ರಿ ಜಪಮಂತ್ರ

ಯೋದೇವಸ್ಸವಿತಾಸ್ಮಾಕಂ ಧಿಯೋಧರ್ಮಾದಿಗೋಚರಃ ।
ಪ್ರೇರಯೇತ್ತಸ್ಯ ಯದ್ಭರ್ಗಸ್ತದ್ವರೇಣ್ಯಮುಪಾಸ್ಮಹೇ ॥

ತಾ॥ ಯಾವ ದೇವನು ನಮ್ಮ ಧರ್ಮಾರ್ಥಿಗಳಲ್ಲಿ ಕಾಣುತ್ತಲಿರುವ ಇಂದ್ರಿಯ ವೃತ್ತಿಗಳನ್ನು ಪ್ರೇರೇಪಿಸುತ್ತಲಿರುವನೋ ಅಂತಹ ದೇವತೆಯ ಅತ್ಯುತ್ಕೃಷ್ಟವಾದ ತೇಜಸ್ಸು ಯಾವದಿರುವುದೋ ಅಂತಹ ತೇಜೋವಿಶೇಷವನ್ನು ಉಪಾಸನೆ ಮಾಡುತ್ತೇನೆ.

ವೇದೋಕ್ತದವರಿಗೆ :—

ಓಂಭೂರ್ಭುವಸ್ಸುವಃ ತತ್ಸವಿತುರ್ವರೇಣಿಯಂ । ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ ॥

೨೪–೩೬–೧೦೮ ಜಪಸಂಖ್ಯೆ ಪ್ರಕಾರ ಜಪಮಾಡುವುದು. ಶ್ರಾವಣಮಾಸದಲ್ಲಿ ಬರುವ ಗಾಯತ್ರೀ ಪ್ರತಿಪತ್ ದಿನದಲ್ಲಿ ೧೦೦೮ ಜಪವನ್ನು ಮಾಡುವುದು.

ಕರನ್ಯಾಸ :—

೧.	ಯೋದೇವಸ್ಸವಿತಾಸ್ಮಾಕಂ	—	ಅಂಗುಷ್ಠಾಭ್ಯಾಂನಮಃ
೨.	ಧಿಯೋಧರ್ಮಾದಿಗೋಚರಃ	—	ತರ್ಜನೀಭ್ಯಾಂನಮಃ
೩.	ಪ್ರೇರಯೇತ್ತಸ್ಯ	—	ಮಧ್ಯಮಾಭ್ಯಾಂನಮಃ
೪.	ಯದ್ಭರ್ಗಃ	—	ಅನಾಮಿಕಾಭ್ಯಾಂನಮಃ
೫.	ತದ್ವರೇಣ್ಯ	—	ಕನಿಷ್ಠಿಕಾಭ್ಯಾಂನಮಃ
೬.	ಉಪಾಸ್ಮಹೇ	—	ಕರತಲಕರಪೃಷ್ಠಾಭ್ಯಾಂನಮಃ

ಅಂಗನ್ಯಾಸ :—

೧.	ಯೋದೇವಸ್ಸವಿತಾಸ್ಮಾಕಂ	—	ಹೃದಯಾಯನಮಃ
೨.	ಧಿಯೋಧರ್ಮಾದಿಗೋಚರಃ	—	ಶಿರಸೇನಮಃ
೩.	ಪ್ರೇರಯೇತಸ್ಯ	—	ಶಿಖಾಯೈನಮಃ
೪.	ಯದ್ಭರ್ಗಃ	—	ಕವಚಾಯನಮಃ
೫.	ತದ್ವರೇಣ್ಯಂ	—	ನೇತ್ರತ್ರಯಾಯನಮಃ
೬.	ಉಪಾಸ್ಮಹೇ	—	ಅಸ್ತ್ರಾಯನಮಃ

ಲೋಕತ್ರಯೇಣ ದಿಗ್ವಿಮೋಕಃ

ಉಪಸ್ಥಾನ

ಉತ್ತಮೇಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ ।
ಬ್ರಾಹ್ಮಣೇಭ್ಯೋ ಭ್ಯನುಜ್ಞಾತಾ ಗಚ್ಛದೇವಿ ಯಥಾಸುಖಂ ॥
ಶ್ರೀ ಗಚ್ಛದೇವಿ ಯಥಾಸುಖೋನ್ನಮ ಇತಿ

ತಾ॥ ಎಲೌ ಸಂಧ್ಯಾದೇವಿಯೇ! ಭೂಲೋಕದ ಮೇಲೆ ನೆಲೆಸಿರುವ ಉತ್ತರ ಮೇರುಪರ್ವತ ಶಿಖರಗಳ ಮಧ್ಯ ಶಿಖರದ ದಿವ್ಯ ಮಂದಿರದಲ್ಲಿ ಜನಿಸಿದವಳಾದುದರಿಂದ ಆ ಸ್ಥಳದಲ್ಲಿ ವಾಸಿಸಲು ಸಂಧ್ಯಾಕರ್ಮಾನುಷ್ಠಾನ ತತ್ಪರರಾದ ಬ್ರಾಹ್ಮಣರಿಂದ ಪ್ರಾರ್ಥಿತಳಾಗಿ ಸುಖವಾಗಿ ತೆರಳುವವಳಾಗು. ನಿನಗೆ ಮನಃಪೂರ್ವಕವಾಗಿ ವಂದಿಸುವೆನು.

ಸ್ತುತೋಮಯಾ ವರದಾ ವೇದಮಾತಾ ।
ಪ್ರಚೋದಯಂತೀ ಪವನೇದ್ವಿಜಾತಾ ॥
ಆಯುಃ ಪೃಥಿವ್ಯಾಂ ದ್ರವಿಣಂ ಬ್ರಹ್ಮವರ್ಚಸಂ ।
ಮಹ್ಯಂದತ್ವಾ ಪ್ರಜಾತುಂ ಬ್ರಹ್ಮಲೋಕಂ ॥

ತಾ॥ ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ಪ್ರೇರೇಪಿಸುವ ವೇದಜನನಿಯಾದ ಪರಬ್ರಹ್ಮ ಮತ್ತು ಸೂರ್ಯಮಂಡಲ ಸ್ಥಾನಗಳೆರಡರಲ್ಲಿ ಉದ್ಭವಳಾದ, ಉಪಾಸಕರಿಗೆ ಇಷ್ಟಾರ್ಥಪ್ರದಳಾದ ಗಾಯತ್ರೀದೇವಿಯೆ! ನಾನು ಮಾಡುವ ಪ್ರಾರ್ಥನೆಗೆ ಅನುಗ್ರಹಿಸಿ ನನಗೆ ಆಯುಸ್ಸನ್ನೂ, ಧನವನ್ನೂ, ಬ್ರಹ್ಮವರ್ಚಸ್ಸನ್ನೂ ಕೊಟ್ಟು ನಿನ್ನ ಆವಿರ್ಭವದ ಉತ್ಕೃಷ್ಟ ಸ್ಥಳವಾದ ಪರಬ್ರಹ್ಮಸ್ಥಾನಕ್ಕೆ ಹೋಗಿ ನೆಲೆಸು.

ಈ ಮಂತ್ರಗಳನ್ನು ಸೂರ್ಯನೆದುರಿಗೆ ನಿಂತುಕೊಂಡು ಕೈಗಳನ್ನು ಜೋಡಿಸಿಕೊಂಡು ಹೇಳುವುದು.

ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ ।
ನಾರಾಯಣ ಸ್ಸರಸಿಜಾಸನ ಸನ್ನಿವಿಷ್ಟಃ ॥
ಕೇಯೂರವಾ ಮಕರಕುಂಡಲವಾ ಕಿರೀಟೀ ।
ಹಾರೀ ಹಿರಣ್ಮಯವಪುಃ ಧೃತಶಂಖಚಕ್ರಃ ॥

ತಾ॥ ಸೂರ್ಯಮಂಡಲ ಮಧ್ಯದಲ್ಲಿರುವ ತಾವರೆಯ ಆಸನದಲ್ಲಿ ಚೆನ್ನಾಗಿ ಕುಳಿತಿರುವ ತೋಳು ಬಳೆಗಳು, ಮಕರಕುಂಡಲಗಳು, ಕಿರೀಟ, ಹಾರಗಳಿಂದ ಕೂಡಿರುವ ಸ್ವರ್ಣಮಯವಾದ ಶರೀರವುಳ್ಳ, ಶಂಖ ಚಕ್ರಗಳನ್ನು ಧರಿಸಿದವನಾಗಿರುವ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸುತ್ತೇನೆ.

ನಮಸ್ಸವಿತ್ರೇ ಜಗದೇಕಚಕ್ಷುಷೇ ।
ಜಗತ್ಪ್ರಸೂತಿ ಸ್ಥಿತಿನಾಶಹೇತವೇ ॥
ತ್ರಯೀಮಯಾಯ ತ್ರಿಗುಣಾತ್ಮಧಾರಿಣೇ ।
ವಿರಂಚಿ ನಾರಾಯಣ ಶಂಕರಾತ್ಮನೇ ॥

ತಾ॥ ಈ ಪ್ರಪಂಚಕ್ಕೆಲ್ಲಾ ನೇತ್ರರೂಪನಾದ, ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣಭೂತನಾದ, ವೇದತ್ರಯಾತ್ಮಕನಾದ, ತ್ರಿಗುಣಾತ್ಮಧಾರಿಯಾದ, ಬ್ರಹ್ಮ, ವಿಷ್ಣು, ಮಹೇಶ್ವರಾತ್ಮಕನಾದ ಸೂರ್ಯದೇವನಿಗೆ ನಮಸ್ಕಾರವು.

ಕಾಲಾತ್ಮಾ ಸರ್ವಭೂತಾತ್ಮಾ ವೇದಾತ್ಮಾ ವಿಶ್ವಭಾವನಃ ।
ಜನ್ಮಮೃತ್ಯು ಜರಾವ್ಯಾಧಿ ಸಂಸಾರ ಭಯನಾಶನಃ ॥

ತಾ॥ ಕಾಲಸ್ವರೂಪನೂ, ಸರ್ವಭೂತಸ್ವರೂಪನೂ, ವೇದಸ್ವರೂಪನೂ, ವಿಶ್ವಭಾವನನೂ, ಜನನ ಮರಣ ವಾರ್ಧಿಕ್ಯರೋಗ ಸಂಸಾರ ಭಯಗಳನ್ನು ಹೋಗಲಾಡಿಸತಕ್ಕವನೂ ಆದ ಸೂರ್ಯದೇವನಿಗೆ ನಮಸ್ಕಾರವು.

ಉದಯೇ ಬ್ರಹ್ಮಸ್ವರೂಪ ಮಧ್ಯಾಹ್ನೇತು ಮಹೇಶ್ವರಃ ।
ಅಸ್ತಮಾನೇಸ್ವಯಂವಿಷ್ಣುಃ ತ್ರಯಿಾಮೂರ್ತಿರ್ದಿವಾಕರಃ ॥

ತಾ॥ ಉದಯಕಾಲದಲ್ಲಿ ಬ್ರಹ್ಮಸ್ವರೂಪನಾಗಿಯೂ, ಮಧ್ಯಾಹ್ನಕಾಲದಲ್ಲಿ ಮಹೇಶ್ವರಸ್ವರೂಪನಾಗಿಯೂ, ಅಸ್ತಮಾನ ಕಾಲದಲ್ಲಿ ಸ್ವಯಂ ವಿಷ್ಣುವಾಗಿಯೂ ಹೀಗೆ ತ್ರಿಮೂರ್ತ್ಯಾತ್ಮಕನಾದ ಸೂರ್ಯದೇವನಿಗೆ ನಮಸ್ಕಾರವು.

ಈ ಮಂತ್ರಗಳನ್ನೂ ಸಹ ನಿಂತುಕೊಂಡೇ ಹೇಳುವುದು.

ದಿಗ್ದೇವತಾ ನಮಸ್ಕಾರ

೧. ಪ್ರಾಚ್ಯೈನಮಃ । ೨. ದಕ್ಷಿಣಾಯೈನಮಃ । ೩. ಪ್ರತೀಚ್ಯೈನಮಃ । ೪. ಉದೀಚ್ಯೈನಮಃ । ೫. ಊರ್ಧ್ವಾಯೈನಮಃ । ೬. ಅಧರಾಯೈನಮಃ ೭. ಅವಾಂತರಾಯೈನಮಃ ॥

ತಾ॥ ಎಲ್ಲಾ ದಿಕ್ಕುಗಳಲ್ಲಿಯೂ ಇರುವ ಪರಮಾತ್ಮನ ರಾಜ್ಯಾಧಿಕಾರವರ್ಗದ ಅಷ್ಟದಿಕ್ಪಾಲಕಾದಿ ಸಕಲದೇವತೆಗಳನ್ನೂ ಉದ್ಧೇಶಿಸಿ ಅವರುಗಳಿಗೆ ನಮಸ್ಕರಿಸುತ್ತೇನೆ.

ನಿಂತುಕೊಂಡು ಕೈಗಳನ್ನು ಜೋಡಿಸಿಕೊಂಡು ೧. ಪೂರ್ವ, ೨. ದಕ್ಷಿಣ, ೩. ಪಶ್ಚಿಮ, ೪. ಉತ್ತರ, ೫. ಮೇಲೆ, ೬. ತಳಗಡೆ, ೭. ಪಾತಾಳಲೋಕ ನಮಸ್ಕಾರಗಳನ್ನು ಮಾಡುವುದು.

ಋಷಿದೇವತಾದಿ ನಮಸ್ಕಾರಗಳು

ಸಂಧ್ಯಾಯೈನಮಃ । ಸಾವಿತ್ರ್ಯೈನಮಃ । ಗಾಯತ್ರ್ಯೈನಮಃ । ಸರಸ್ವತ್ಯೈನಮಃ । ಸರ್ವಾಭ್ಯೋದೇವತಾಭ್ಯೋನಮಃ । ದೇವೇಭ್ಯೋನಮಃ । ಮುನಿಭ್ಯೋನಮಃ । ಋಷಿಭ್ಯೋನಮಃ । ಗುರುಭ್ಯೋನಮಃ । ಮಾತೃಭ್ಯೋನಮಃ । ಪಿತೃಭ್ಯೋನಮಃ । ಆಚಾರ್ಯೇಭ್ಯೋನಮಃ । ಕಾಮೋಕಾರ್ಷೀನ್ಮನ್ಯುರಕಾರ್ಷೀನ್ನಮೋನಮಃ ॥

ತಾ॥ ಸಂಧ್ಯಾದಿದೇವತೆಗಳನ್ನುದ್ದೇಶಿಸಿ ವಂದಿಸುವುದಲ್ಲದೆ ಮಾತಾ ಪಿತೃ ಗುರುಗಳನ್ನುದ್ದೇಶಿಸಿ ವಂದನೆಯನ್ನು ಸಮರ್ಪಿಸುತ್ತೇನೆ. ಮಾತಾಪಿತೃಗಳು ದೇವತಾ ಸಮಾನರಾದ್ದರಿಂದ ಇವರುಗಳನ್ನು ವಂದಿಸುವುದರಲ್ಲಿ ನೈಜವಾದ ಭಕ್ತಿಯು ನನ್ನಲ್ಲಿ ನೆಲೆಗೊಳ್ಳಲಿ ಎಂಬುದಾಗಿ ವಂದಿಸುವೆನು.

ಸ್ತೋತ್ರಗಳು

ಓಂಕಾರ ಪ್ರಭವಾ ವೇದಾ ಓಂಕಾರಪ್ರಭವಾಸ್ಸ್ವರಾಃ ।
ಓಂಕಾರ ಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ ॥

ತಾ॥ ಪರಬ್ರಹ್ಮಶಕ್ತಿಯಿಂದ ಓಂಕಾರ ಸ್ವರವಾಗಿ ಉದಯಿಸಿದಕೂಡಲೇ ವೇದಗಳಾಗಿ ಓಂಕಾರ ಶುದ್ಧಸತ್ವದಿಂದ ಇಂದ್ರಾದಿ ಸಕಲದೇವತೆಗಳ ಸೃಷ್ಟಿಯೂ, ಓಂಕಾರದ ರಜಸ್ತಮೋಗುಣಗಳಿಂದ ಮೂರು ಲೋಕಗಳಲ್ಲಿ ಸಕಲ ಚರಾಚರಗಳನ್ನು ಸೃಷ್ಟಿಸಿದ ಪರಮಾತ್ಮನೆ, ನೀನು ಮಂಗಳವನ್ನುಂಟುಮಾಡು.

ಸರ್ವವಿದ್ಯಾ ಪ್ರದೇತುಭ್ಯಂ ನಮಃ ಶಕ್ತ್ಯಾದಿಪೂಜಿತೇ ।
ಭಜೇಹಂವೇದಗೀತೇತ್ವಾಂ ದೇವಗೀತೇ ನಮೋನಮಃ ॥

ತಾ॥ ಸರ್ವವಿದ್ಯೆಗಳಿಗೂ ಪ್ರಧಾನಹೇತುವಾದ ಶಬ್ದಸ್ವರೂಪಳಾಗಿ ಕಳಾಸ್ವರೂಪಿಣಿಯರೂಪವನ್ನು ತಾಳಿ ಸಕಲಶಕ್ತ್ಯಾತ್ಮಕರೂಪಧಾರಿಣಿಯಾಗಿ ಪೂಜಿಸಲ್ಪಡುವ ವಾಣಿಯು ವೇದ, ಗಾನ, ಸಂಗೀತ, ಧ್ಯಾನ ಯೋಗವೆಂಬ ಸ್ವರೂಪಧಾರಿಣಿಯಾದ ಗಾಯತ್ರೀದೇವಿಯೇ ನಿನಗೆ ನಮಸ್ಕಾರವು.

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ ।
ಶಿವಸ್ಯಹೃದಯಂ ವಿಷ್ಣುಃ ವಿಷ್ಣೋಶ್ಚಹೃದಯಂ ಶಿವಃ ॥

ತಾ॥ ಶಿವತತ್ವವೇ ವಿಷ್ಣುತತ್ವವು, ವಿಷ್ಣುತತ್ವವೇ ಶಿವತತ್ವವು, ಶಿವನೇ ವಿಷ್ಣುರೂಪನು, ವಿಷ್ಣುವೇ ಶಿವರೂಪನು, ಶಿವಸ್ವರೂಪನಾದ ವಿಷ್ಣುವಿಗೂ, ವಿಷ್ಣುಸ್ವರೂಪನಾದ ಶಿವನಿಗೂ ನಮಸ್ಕರಿಸುವೆನು.

ಯಥಾಶಿವಮಯೋವಿಷ್ಣುಃ ಏವಂವಿಷ್ಣುಮಯಶ್ಶಿವಃ ।
ಯಥಾಂತರಂ ನಪಶ್ಯಾಮಿ ತಥಾಮೇಸ್ವಸ್ತಿರಾಯುಷಿ ॥

ತಾ॥ ಹರಿಹರರಿಗೆ ಅಭೇದಭಾವನೆಯನ್ನು ನಾವು ಹೊಂದಿರುವಂತೆ ನನ್ನ ಆಯುಃಪ್ರಮಾಣದ ವಿಷಯದಲ್ಲಿ ಮಂಗಳವಾಗಲಿ. ಅಂದರೆ ಹರಿಹರರೂಪವಾಗಿ ಬೆಳಗುತ್ತಿರುವ ಒಂದಾದ ಚಿದ್ವಸ್ತುವಿನ ಅನುಗ್ರಹದಿಂದ ಚಿರಂಜೀವತ್ವವು ನನಗೆ ಉಂಟಾಗಲಿ.

ಬ್ರಹ್ಮಣ್ಯೋ ದೇವಕೀಪುತ್ರೋ ಬ್ರಹ್ಮಣ್ಯೋ ಮಧುಸೂದನಃ ।
ಬ್ರಹ್ಮಣ್ಯಃ ಪುಂಡರೀಕಾಕ್ಷೋ ಬ್ರಹ್ಮಣ್ಯೋವಿಷ್ಣುರಚ್ಯುತಃ ॥

ತಾ ॥ ಸರ್ವಮೂಲಕಾರಣನಾದ ಪರಬ್ರಹ್ಮ ಅಂಶನಾದ ದೇವಕೀಪುತ್ರನಾದ ಶ್ರೀ ಕೃಷ್ಣ ಭಗವಂತನೂ, ಮಧುವೈರಿಯಾದ ಶ್ರೀಮಹಾವಿಷ್ಣುವೂ, ಪುಂಡರೀಕಾಕ್ಷನೆನಿಸಿದ ವೈಕುಂಠವಾಸಿಯಾದ ನಾರಾಯಣನೂ, ಆದ ಶ್ರೀ ಮಹಾವಿಷ್ಣುವಿಗೆ ನಮಸ್ಕಾರವು.

ನಮೋಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯಚ ।
ಜಗದ್ಧಿತಾಯಕೃಷ್ಣಾಯ ಗೋವಿಂದಾಯನಮೋನಮಃ ॥

ತಾ॥ ಪರಬ್ರಹ್ಮನೇ ಬ್ರಾಹ್ಮಣರಿಗೆ ದೇವನಾದ ಗೋಬ್ರಾಹ್ಮಣರಿಗೂ ಜಗತ್ತಿಗೂ ಹಿತವನ್ನುಂಟು ಮಾಡುವ ಶ್ರೀ ಕೃಷ್ಣಪರಮಾತ್ಮ ಸ್ವರೂಪನಾದ ಗೋವಿಂದ ನಾಮದಿಂದ ಗೋಚರಿಸುತ್ತಿರುವ ಪರಮಾತ್ಮನಾದ ನಿನಗೆ ನಮಸ್ಕಾರವು.

ವಾಸನಾದ್ವಾಸುದೇವಸ್ಯ ವಾಸಿತಂತೇ ಜಗತ್ರಯಂ ।
ಸರ್ವಭೂತನಿವಾಸೋಸಿ ವಾಸುದೇವ ನಮೋಸ್ತುತೆ ॥

ತಾ॥ ಎಲೈ ಪರಮಾತ್ಮನೆ! ನೀನು ಸರ್ವಾಂತರ್ಯಾಮಿಯಾಗಿ ಸರ್ವದಾ ವಾಸಮಾಡುತ್ತಿರುವುದ ರಿಂದ ಲೋಕತ್ರಯವೂ ನಿಂತಿರುವುದು. ಸರ್ವಾಂತರ್ಯಾಮಿಯಾದ ನಿನಗೆ ನಮಸ್ಕಾರವು.

ಆಕಾಶಾತ್ಪತಿತಂ ತೋಯಂ ಯಥಾಗಚ್ಛತಿಸಾಗರಂ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

ತಾ॥ ಮೇಘಮಂಡಲದಿಂದ ಬಿದ್ದ ನೀರು ಸಮುದ್ರವನ್ನು ಸೇರುವಂತೆ ಯಾವ ದೇವತೆಗಳಿಗೆ ನಮಸ್ಕಾರವನ್ನು ಮಾಡಿದರೂ ಪರಮಾತ್ಮನನ್ನೇ ಹೊಂದುವುದು.

ಚತುರ್ಭುಜೇ ಚಂದ್ರಕಳಾವತಂಸೇ । ಕುಚೋನ್ನತೇ
ಕುಂಕುಮರಾಗಶೋಣೇ ॥

ಪುಂಡ್ರೇಕ್ಷು ಪಾಶಾಂಕುಶ ಪುಷ್ಪಬಾಣೇ । ಹಸ್ತೇನಮಸ್ತೇ
ಜಗದೇಕಮಾತಃ ॥

ತಾ॥ ಚತುರ್ಭುಜಗಳಿಂದ ಕೂಡಿದವಳಾಗಿಯೂ, ಷೋಡಷಕಳಾಪೂರ್ಣಳಾಗಿಯೂ, ಅಮೃತ ಮಯವಾದ ಸ್ವರ್ಣಕುಂಭಗಳಂತಿರುವ ಕುಚಗಳುಳ್ಳವಳಾಗಿಯೂ, ಪಾಶ, ಅಂಕುಶ, ಪುಷ್ಪಬಾಣಗಳನ್ನು ಧರಿಸಿದವಳಾಗಿಯೂ, ವರದಹಸ್ತದಿಂದ ಭಕ್ತರ ಅಭೀಷ್ಟವನ್ನು ಪಾಲಿಸುವವಳಾಗಿಯೂ ಇರುವ ತ್ರಿಗುಣ ಸ್ವರೂಪಳಾದ ಜಗದೀಶ್ವರಿಯೇ ನಮ್ಮನ್ನು ಕಾಪಾಡು.

ನಮಸ್ತೇ ಪಾರ್ವತೀದೇವೀ ಕೈಲಾಸಘನವಾಸಿನೀ ।
ಕಮಲಾಸನಕೌಮಾರೀ ಶ್ರೀ ನಿಮಿಷಾಂಬಾ ನಮೋಸ್ತುತೇ ॥

ತಾ॥ ಸಕಲ ಲೋಕಗಳಿಗಧಿಪತಿಯಾದ ಪರಮೇಶ್ವರನ ಅರ್ಧಾಂಗಿಯಾಗಿ, ಮುಕ್ತರಾಜನ ಸ್ತೋತ್ರ ದಿಂದ ಸುಪ್ರೀತಳಾಗಿ ನಿಮಿಷಮಾತ್ರದಲ್ಲಿ ನಿಮಿಷಾಂಬಾದೇವಿಯೆಂಬ ಅಭಿನಾಮದಿಂದ ಅವಿರ್ಭವಿಸಿ ಕಮಲಾಸನ ಕುಮಾರಿಯಾಗಿ ಮುಕ್ತರಾಜನ ವಂಶವನ್ನುದ್ಧರಿಸಿದ ಜಗನ್ಮಾತೆಯಾದ ಶ್ರೀ ನಿಮಿಷಾಂಬಾ ದೇವಿಯೇ ನಮ್ಮನ್ನು ಉದ್ಧರಿಸು.

ಅಭಿವಾದನೆ

ಚತುಸ್ಸಾಗರ ಪರ್ಯಂತಂ ಶ್ರೀ ಮುಕ್ತರ್ಷಿ ವಂಶೋದ್ಭವ ಶ್ರೀಸೋಮವಂಶ ಆರ್ಯಕ್ಷತ್ರಿಯ ಕುಲೇಶುಭಂಭವತ್——ಋಷೇಯ ಪ್ರವರಾನ್ವಿತ——ಗೋತ್ರಃ ಆಪಸ್ತಂಬಸೂತ್ರಃ ಯಜುಶ್ಶಾಖಾಧ್ಯಾಯೀ——ವರ್ಮಾ ಅಹಂಭೋ ಅಭಿವಾದಯೇ.

ತಾ॥ ನಮ್ಮಗಳ ವಂಶವು ಚತುಸ್ಸಾಗರ ಪರ್ಯಂತರವೂ ಹರಡಿ ಎಲ್ಲೆಲ್ಲೂ ಸತ್ಯಧರ್ಮಗಳಿಂದ ಕೂಡಿರುವ ನಾವುಗಳು ನಮ್ಮ ವಂಶಕಲ್ಯಾಣಕ್ಕಾಗಿ ಅಭಿವಾದನೆಮಾಡಿ ನಮಸ್ಕಾರ ಮಾಡಬೇಕು.

ಎರಡು ಕೈಗಳಿಂದಲೂ ಎರಡು ಕಿವಿಗಳನ್ನು ಹಿಡಿದುಕೊಂಡು ಈ ಮಂತ್ರವನ್ನು ಹೇಳುವುದು. ಮೇಲ್ಗಡೆ ಬಿಟ್ಟಿರುವ ಸ್ಥಳಗಳಲ್ಲಿ ಅವರವರ ಪ್ರವರದ ಋಷಿಗಳ ಹೆಸರು, ಗೋತ್ರದ ಹೆಸರು ಮತ್ತು ತನ್ನ ಹೆಸರು ಹೇಳಿಕೊಳ್ಳುವುದು.

ಸಂಧ್ಯಾಕರ್ಮ ನ್ಯೂನತಾಪರಿಹಾರ

ಯಸ್ಯಸ್ಮೃತ್ಯಾಚ ನಾಮೋಕ್ತ್ಯಾ ತಪಸ್ಸಂಧ್ಯಾಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿಸದ್ಯೋವಂದೇತಮಚ್ಯುತಂ ॥

ತಾ॥ ಯಾವ ಪರಮಾತ್ಮನ ಸ್ಮರಣ ಮತ್ತು ನಾಮೋಚ್ಚಾರಣಮಾತ್ರದಿಂದ ತಪಸ್ಸಂಧ್ಯಾದಿ ಕರ್ಮಗಳಲ್ಲಿನ ನ್ಯೂನತೆಗಳೆಲ್ಲವೂ ಪರಿಹಾರವಾಗಿ ಪೂರ್ಣತೆಯನ್ನು ಪಡೆಯುವವೋ ಅಂತಹ ಅಚ್ಯುತನಿಗೆ ನಮಸ್ಕರಿಸುವೆನು.

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ಧನ ।
ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುತೇ ॥

ತಾ॥ ಮಂತ್ರ, ಕರ್ಮ ಭಕ್ತಿಗಳಲ್ಲಿ ಲೋಪವುಂಟಾಗಿದ್ದರೆ ಅಂತಹ ದೋಷಗಳು ತೊಲಗಿ ಪೂರ್ಣ ಫಲಪ್ರದವಾಗುವಂತೆ ಎಲೈ ಪರಮಾತ್ಮನೆ ! ನನಗೆ ಅನುಗ್ರಹಿಸು.

ಅನೇನಪ್ರಾತಃ (ಮಾಧ್ಯಾಹ್ನಿಕ) (ಸಾಯಂ) ಸಂಧ್ಯಾವಂದನೇನ ಭಗವಾನ್ ಸರ್ವಾತ್ಮಕಃ ತತ್ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು ॥

ಮಧ್ಯೇ ಮಂತ್ರ ತಂತ್ರ ಧ್ಯಾನ ನಿಯಮ ಸ್ವರವರ್ಣ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರಂ ಜಪಂಕರಿಷ್ಯೇ.

ಅಚ್ಯುತಾಯನಮಃ ಅನಂತಾಯನಮಃ ಗೋವಿಂದಾಯನಮಃ

ಎಂದು ಮೂರಾವರ್ತಿ ಹೇಳಬೇಕು.

ಪರಮಾತ್ಮನಲ್ಲಿ ಕರ್ಮಫಲ ಸಮರ್ಪಣೆ

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾವಾ ಪ್ರಕೃತೇಃ ಸ್ವಭಾವತ್ಕರೋಮಿ ಯದ್ಯತ್ಸಕಲಂ ಪರಸ್ಮೈ ಶ್ರೀಮನ್ನಾರಾಯಣಾಯೇತಿ ಸಮರ್ಪಯಾಮಿ ॥

ತಾ॥ ಶರೀರ, ವಾಕ್ಕು, ಮನಸ್ಸು, ಇಂದ್ರಿಯ, ಬುದ್ಧಿ, ಅಹಂಕಾರ ಮತ್ತು ಅಜ್ಞಾನಗಳಿಂದ ಮಾಡಲ್ಪಟ್ಟ ಸಕಲವನ್ನೂ ಶ್ರೀಮನ್ನಾರಾಯಣನಿಗೆ ಸಮರ್ಪಿಸುವೆನು.

ಮೇಲಿನ ಮಂತ್ರವನ್ನು ಹೇಳಿ ಕೈಯೊಳಗೆ ನೀರನ್ನು ಹಾಕಿಕೊಂಡು ತಟ್ಟೆಯಲ್ಲಿ ಬಿಡುವುದು.

ಆಚಮನವನ್ನು ಮಾಡುವುದು.

ವಿಷ್ಣುಶಕ್ತಿ ಸಮುದ್ಭೂತೇ ಶಂಖವರ್ಣೇ ಮಹೀತಲೇ।
ಅನೇಕರತ್ನಸಂಪನ್ನೇ ಭೂಮಿದೇವಿ ನಮೋಸ್ತುತೇ॥

ತಾ॥ ಶ್ರೀವಿಷ್ಣು ಪರಮಾತ್ಮನಿಂದ ಸಂಭೂತಳಾಗಿ ಶಂಖವರ್ಣವುಳ್ಳವಳಾಗಿ ಸಕಲ ಚರಾಚರ ವಸ್ತುಗಳು ಮತ್ತು ಸಕಲವಾದ ಜೀವರತ್ನಗಳನ್ನು ಧರಿಸಿರುವ ಭೂಮಾತೆಯೇ ನಿನಗೆ ನಮಸ್ಕಾರವು.

ತಾನು ಕುಳಿತುಕೊಂಡಿದ್ದ ಮಣೆ ಕೆಳಗೆ ಭೂಮಿಮೇಲೆ ನೀರನ್ನು ಹಾಕಿ ಭೂಮಿಯನು ಮುಟ್ಟಿ ಕಣ್ಣುಗಳಿಗೆ ಒತ್ತಿಕೊಳ್ಳುವುದು.

ನೂತನ ಯಜ್ಞೋಪವೀತ ಧಾರಣೆ

ಆಚಮನ:–

೧. ಓಂ ಕೇಶವಾಯಸ್ವಾಹಾ
೨. ಓಂ ನಾರಾಯಣಾಯಸ್ವಾಹಾ
೩. ಓಂ ಮಾಧವಾಯಸ್ವಾಹಾ
೪. ಓಂ ಗೋವಿಂದಾಯನಮಃ
೫. ಓಂ ವಿಷ್ಣುವೇನಮಃ
೬. ಓಂ ಮಧುಸೂದನಾಯನಮಃ
೭. ಓಂ ತ್ರಿವಿಕ್ರಮಾಯನಮಃ
೮. ಓಂ ವಾಮನಾಯನಮಃ
೯. ಓಂ ಶ್ರೀಧರಾಯನಮಃ
೧೦. ಓಂ ಹೃಷೀಕೇಶಾಯನಮಃ
೧೧. ಓಂ ಪದ್ಮನಾಭಾಯನಮಃ
೧೨. ಓಂ ದಾಮೋದರಾಯನಮಃ
೧೩. ಓಂ ಸಂಕರ್ಷಣಾಯನಮಃ
೧೪. ಓಂ ವಾಸುದೇವಾಯನಮಃ
೧೫. ಓಂ ಪ್ರದ್ಯುಮ್ನಾಯನಮಃ
೧೬. ಓಂ ಅನಿರುದ್ಧಾಯನಮಃ
೧೭. ಓಂ ಪುರುಷೋತ್ತಮಾಯನಮಃ
೧೮. ಓಂ ಅಧೋಕ್ಷಜಾಯನಮಃ
೧೯. ಓಂ ನಾರಸಿಂಹಾಯನಮಃ
೨೦. ಓಂ ಅಚ್ಯುತಾಯನಮಃ

೨೧. ಓಂ ಜನಾರ್ಧನಾಯನಮಃ
೨೨. ಓಂ ಉಪೇಂದ್ರಾಯನಮಃ
೨೩. ಓಂ ಶ್ರೀಹರಯೇನಮಃ
೨೪. ಓಂ ಶ್ರೀಕೃಷ್ಣಾಯನಮಃ

ಪ್ರಣವ:–

ಭೂವ್ಯಾದಿ ಊರ್ಧ್ವಲೋಕಾನಾಂ ಉಪರಿಸ್ಥೋದಿವಾಕರಃ।
ದಶಪ್ರಣವ ಸಂಯುಕ್ತಃ ಪ್ರಾಣಾಯಾಮಃ ಪ್ರಕೀರ್ತಿತಃ॥

ಸಂಕಲ್ಪ:–

ಶುಭಾಯಾಂ ಶೋಭನೇ ಮುಹೂರ್ತೆ ಅದ್ಯಬ್ರಹ್ಮಣ ದ್ವಿತೀಯ ಪ್ರಹರಾರ್ಧೆ ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ **ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ——ಸಂವತ್ಸರೇ—— ಣಾಯನೇ——ಋತೌ——ಮಾಸೇ——ಪಕ್ಷೇ——ವ್ಯಾಂ—— ವಾಸರಯುಕ್ತಾಯಾಂ ಶುಭ——ನಕ್ಷತ್ರ ಶುಭಯೋಗ ಶುಭಕರಣ** ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಮಮ ಉಪಾತ್ತದುರಿತಕ್ಷಯದ್ವಾರಾ ಶ್ರೀ ಪರಮೇಶ್ವರ ಪ್ರೀತ್ಯರ್ಥಂ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಕರ್ಮಾಧಿಕಾರ ಸಿದ್ಯರ್ಥಂ ಯಜ್ಞೋಪವೀತಂ ಧಾರಣಂಕರಿಷ್ಯೇ.

ಯಜ್ಞೋಪವೀತಂ ಪರಮಂ ಪವಿತ್ರಂ ಸಹಜಂತು ಪ್ರಜಾಪತೇಃ।
ಅಪ್ರತ್ಯಾಯುಷ್ಯಮಾರೋಗ್ಯಂ ಬಲದಂಸ್ಯಾತ್
ವಿಧಾರಣಾತ್॥

ಆಚಮನ—ಕೇಶವನಾಮಗಳನ್ನು ಮಾಡಿ—ಗೃಹಸ್ಥಾಶ್ರಮ ಯೋಗ್ಯತಾ ಸಿದ್ಯರ್ಥಂ ದ್ವಿತೀಯ ಯಜ್ಞೋಪವೀತಂ ಧಾರಣಂಕರಿಷ್ಯೇ.

ಒಂದೊಂದು ಯಜ್ಞೋಪವೀತವನ್ನು ಧರಿಸುವಾಗಲೂ ಮಧ್ಯೆ ಕೊಟ್ಟಿರುವ ಮಂತ್ರ ವನ್ನು ಹೇಳಿಕೊಳ್ಳಬೇಕು.

ಯಜ್ಞೋಪವೀತ ವಿಸರ್ಜನ ಮಂತ್ರ

ಉಪವೀತಂ ಭಿನ್ನತಂತು ಜೀರ್ಣಕಶ್ಮಲದೂಷಿತಂ।
ವಿಸೃಜಾಮಿಪರಬ್ರಹ್ಮನ್ ವರ್ಜೋದೀರ್ಘಾಯುರಸ್ತುಮೇ॥

ಹಿಂದಿನ ಪುಟದ ಕೊನೆಯಲ್ಲಿರುವ ಮಂತ್ರವನ್ನು ಹೇಳಿ ಯಜ್ಞೋಪವೀತವನು ತೆಗೆದುಹಾಕುವುದು. ನೂತನ ಯಜ್ಞೋಪವೀತವು ಶುಭ ಅಶುಭ ಕರ್ಮಗಳು ಬಂದು ಮುಗಿದ ದಿನವೂ ಮತ್ತು ಆಯುಷ್ಕರ್ಮ ಮಾಡಿಸಿಕೊಂಡ ದಿವಸವೂ ಧಾರಣೆ ಮಾಡುವುದು. ಉಪನಯನ ವಾದ ಬ್ರಹ್ಮಚಾರಿ(ವಟು)ಗಳು ಕೃಷ್ಣಾಂಜಿನ ಸಮೇತ ವಾದ ಒಂದು ಯಜ್ಞೋಪವೀತವನ್ನೂ ಮದುವೆಯಾದವರು ಎರಡು ಯಜ್ಞೋಪವೀತಗಳನ್ನೂ ತಂದೆಯು ಕರ್ಮಗಳನ್ನು ಮಾಡುವವರು ಮೂರು ಯಜ್ಞೋಪವೀತ ಗಳನ್ನೂ ಧಾರಣೆ ಮಾಡಬೇಕು.

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಸಂಧ್ಯಾವಂದನೆ

ಸಮಾಪ್ತಿ

ಶಾಂತಿಃ ಶಾಂತಿಃ ಶಾಂತಿಃ

ಶ್ರೀರಸ್ತು

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ದೇವತಾರ್ಚನೆ

ಪೂ ಜಾ ವಿ ವ ರ ಣೆ

ಕುಲಬಾಂಧವರಾದ ಕ್ಷತ್ರಿಯರು ಸಂಧ್ಯಾವಂದನೆಯನ್ನು ಮಾಡಿದಮೇಲೆ ದೇವ ಪ್ರೀತ್ಯರ್ಥವಾಗಿ ದೇವರಪೂಜೆಯನ್ನು ಮಾಡಬೇಕಾದ ಕರ್ತವ್ಯವು. ಈ ದೇವಯಜ್ಞ (ಪೂಜೆ) ಮಾಡುವುದರಿಂದ ದೇವತೆಗಳಿಗೂ ನಮಗೂ ಅನ್ಯೋನ್ಯಭಾವ ಬೆಳೆಯುವುದರಿಂದ ಆಯಾ ದೇವತೆಗಳನ್ನು ಸಂತುಷ್ಟರನ್ನಾಗಿಮಾಡಿ ನಮ್ಮ ಕಾಮ್ಯಾರ್ಥಗಳನ್ನು ಹೊಂದುತ್ತೇವೆ.

ಇದಕ್ಕೆ ಗೀತೆಯಲ್ಲಿ ಆಧಾರ :–

ದೇವಾನ್‌ಭಾವಯುತಾನೇನತೇದೇವಾಭಾವಯುಂತುವಃ ।
ಪರಸ್ಪರಂ ಭಾವಯುಂತಃ ಶ್ರೇಯುಃ ಪರಮವಾಸ್ಸ್ಯಥ ॥
ಇಷ್ಟಾನ್ ಭೋಗಾನ್ ಹಿವೋದೇವಾದಾಸ್ಯಂತೆ ಯಜ್ಞಭಾವಿತಾಃ ।

ಈ ರೀತಿಯಾಗಿ ಭಗವಂತನ ಸ್ವರೂಪದಿಂದ ಬೇರೆ ಬೇರೆಯ ಸ್ವರೂಪಗಳಲ್ಲಿ ನಮ್ಮಗಳ ಇಷ್ಟಕಾಮ್ಯಗಳನ್ನು ಪೂರೈಸುವುದರಿಂದ ನಾವುಗಳು ನಮ್ಮ ನಮ್ಮ ಪರಂಪರಾನುಗತವಾಗಿ ಅವರವರ ಮನೆಯ ಸಾಂಪ್ರದಾಯದಲ್ಲಿರುವ ಅವರವರ ಮನೆದೇವತಾ ಸ್ವರೂಪದ ನಾಮಾಂಕಿತದರೂಪದಲ್ಲಿ ಭಗವಂತನನ್ನು ಆರಾಧಿಸಿ ನಮ್ಮ ಇಷ್ಟಕಾಮ್ಯಗಳನ್ನು ತೀರಿಸಿಕೊಳ್ಳುವುದಲ್ಲದೆ ಮುಕ್ತಿಗೆ ಹೇತುವಾದ ಭಕ್ತಿ, ಜ್ಞಾನಗಳನ್ನೂ ಸಹ ಹೊಂದಿ ನಾವುಗಳು ಮುಕ್ತರಾಗುತ್ತೇವೆ.

ದೇವತಾರ್ಚನೆಯ ಸಮಯದಲ್ಲಿ ನಾವುಗಳು ಸಂಕಲ್ಪವನ್ನು ಹೇಳುವಾಗ ಪ್ರತಿನಿತ್ಯವೂ ಪೂಜೆಯಸಮಯದಲ್ಲಿ ಸಹಕುಟುಂಬ ಎಂದು ಹೇಳಿಕೊಂಡರೆ ಮುಕ್ತಿಮಾರ್ಗ

ವಿಲ್ಲದೆ ನಮ್ಮಗಳ ಕಾಮ್ಯಾರ್ಥಗಳು ಪೂರೈಸುವುದಾದ್ದರಿಂದ ಸಹಕುಟುಂಬವನ್ನು ವಿಶೇಷಪೂಜಾಸಮಯಗಳಲ್ಲಿ ಮಾತ್ರ ಸಂಕಲ್ಪದಲ್ಲಿ ಹೇಳಿಕೊಳ್ಳಬೇಕೆಂದು ಶಾಸ್ತ್ರಕಾರರ ಸಮ್ಮತವು.

ನಾವು ಆಚರಿಸುತ್ತಿರುವಂತಹ ಕ್ರಮವು ಸ್ಮಾರ್ತಸಾಂಪ್ರದಾಯವು ನಮ್ಮವರ ಮೂಲ ಆಚಾರ್ಯಪುರಷರೂ ಮತ್ತು ನಮ್ಮ ಕುಲಪುರೋಹಿತರುಗಳೂ ಸ್ಮಾರ್ತ ಸಾಂಪ್ರದಾಯದವರು ಮತ್ತು ಅವರು ನಮ್ಮವರಲ್ಲಿ ನಡೆಯುವ ಸಕಲ ಶೋಡಷಕರ್ಮ ಕಾರ್ಯಗಳಲ್ಲೂ ಮತ್ತು ಪೂಜಾವ್ರತಗಳಲ್ಲಿಯೂ ಸ್ಮಾರ್ತಸಾಂಪ್ರದಾಯವನ್ನೇ ಮಾಡಿ ಸುತ್ತಿದ್ದಾರೆ. ಆದರೆ ನಮಲ್ಲಿ ವೈಷ್ಣವಸಾಂಪ್ರದಾಯದವರು ವಿಶೇಷವಾಗಿರುವರು. ಅವರಲ್ಲಿ ಕೆಲವರು ನಮ್ಮ ಜನಾಂಗದ ಶಾಸನಗಳಲ್ಲಿರುವ ತಿರುಮಲ ನಲ್ಲಾರ್ ಚಕ್ರವರ್ತಿ ಗಳವರ ಪರಂಪರೆಯುವರಿಂದಲೂ ಮತ್ತು ಶ್ರೀರಂಗದ ಭಟ್ಟರ ಪರಂಪರೆಯುವ ರಿಂದಲೂ ಚಕ್ರಾಂಕಿತವನ್ನು ಮಾಡಿಸಿಕೊಂಡು ವೈಷ್ಣವಸಾಂಪ್ರದಾಯದಿಂದ ದೇವತಾ ಪೂಜೆಯನ್ನು ಸುಮಾರು 400 ವರ್ಷಗಳಿಂದಲೂ ಆಚರಿಸುತ್ತಾ ಬಂದಿರುವುದರಿಂದ ನಾನು ಪೂಜೆಯಲ್ಲಿ ಕೆಲವು ಸ್ಥಳಗಳಲ್ಲಿ ವೈಷ್ಣವರಿಗೆಂದು ಪ್ರತ್ಯೇಕಿಸಿ ಬರೆದಿರುವೆನು. ಆದ್ದರಿಂದ ಅವರವರ ಮನೆತನದ ಸಾಂಪ್ರದಾಯದಂತೆ ಪೂಜಾಚರಣೆಯನ್ನು ಮಾಡ ಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಸಂಕಲ್ಪದಲ್ಲಿಬರುವ ಸಂವತ್ಸರ. ಅಯನ, ಋತು, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರಗಳನ್ನು ಹಿಂದೆ ಸಂಧ್ಯಾವಂದನೆಯ ಕಾಲನಿರ್ಣಯದಲ್ಲಿ ನಿರೂಪಿಸಿರುವುದನ್ನು ಸೇರಿಸಿಕೊಳ್ಳಬೇಕು.

ಓಂ ಆದಿತ್ಯವರ್ಣಕೌಮಾರಿ ಮಯೂರವರವಾಹಿನ್ಯೈ ನಮೋನಮಃ
ಓಂ ಬಹುರೂಪಾಸುರೂಪಾಚವಿರೂಪಾರೂಪವರ್ಜಿತಾಯೈ ನಮೋನಮಃ
ಓಂ ನಿರ್ಗುಣಾನಿತ್ಯವಿಭವಾ ನಿಸ್ಸಾರನಿರಪತ್ರಪಾಯೈ ನಮೋನಮಃ
ಓಂ ಸದಾನಂದಸತ್ವಮೂರ್ತಿಸ್ಸರ್ವಭೂತಾಶಯಸ್ಥಿತ್ಯೈ ನಮೋನಮಃ
ಓಂ ಕಲಶೋದ್ಭವಮುಕ್ತರಾಜಪೂಜಿತಾಯೈ ನಮೋನಮಃ
ಓಂ ದೇವರ್ಷಿಗಣಸಂಘಾತಸ್ತೂಯಮಾನಾತ್ಮವೈಭವಾಯೈ ನಮೋನಮಃ
ಓಂ ವಾಗ್ದೇವತಾಬ್ರಹ್ಮಕಲಾಬ್ರಹ್ಮವಿಷ್ಣುಶಿವಪ್ರಿಯಾಯೈ ನಮೋನಮಃ
ಓಂ ಕೂಶ್ಮಾಂಡಾಧನರತ್ನಾಡ್ಯಾಂ ಸುಗಂಧಾಗಂಧದಾಯಿನ್ಯೈ
ನಮೋನಮಃ
ಓಂ ಸುದರ್ಲಭಾಧನಾಧ್ಯಕ್ಷಾಧನ್ಯಾಪಿಂಗಳಲೋಚನ್ಯೈ ನಮೋನಮಃ
ಓಂ ಖಗಧ್ವಜಾಖಗಾರೂಢಾಗಹ್ವತಿಷ್ಠಾಗಣಾಗ್ರಣ್ಯೈ ನಮೋನಮಃ
ಓಂ ಚಾಣೂರಘ್ನೀತ್ರಿಣಸಯನಾನೀತಿಜ್ಞಾಕಾಮರೂಪಿಣ್ಯೈ ನಮೋನಮಃ
ಓಂ ಮಹಾಭಗವತೀದುರ್ಗಾ ಮಹಾಮೋಹಗರೀಯಸ್ಯೈ ನಮೋನಮಃ
ಓಂ ದಕ್ಷಿಣಾದಾನನಿರತಾಸರ್ವಭೂತನಮಸ್ಕೃತ್ಯೈ ನಮೋನಮಃ
ಓಂ ವಿಧೇಯಮುಕ್ತವಿಜ್ಞಾನಸಿದ್ಧಿದಾಯೈ ನಮೋನಮಃ
ಓಂ ಕಾಮಕ್ರೋಧಾದಿಷಡ್ವರ್ಗನಾಶನಾಯೈ ನಮೋನಮಃ
ಓಂ ಸಹಸ್ರರತಿಸೌಂದರ್ಯಶರೀರಾಯೈ ನಮೋನಮಃ
ಓಂ ಲೋಪಾಮುದ್ರಾರ್ಚಿತ ಶ್ರೀಮಚ್ಚರಣಾಯೈ ನಮೋನಮಃ
ಓಂ ಸತ್ಯಸಂಪೂರ್ಣವಿಜ್ಞಾನಸಿದ್ಧಿದಾಯೈ ನಮೋನಮಃ
ಓಂ ಮಾತೃಮಂಡಲಸಂಯುಕ್ತಲಲಿತಾಯೈ ನಮೋನಮಃ
ಓಂ ಪತಿವ್ರತಾಂಗನಾಭೀಷ್ಟಫಲದಾಯೈ ನಮೋನಮಃ
ಓಂ ಲಗ್ನಚಾಮರಹಸ್ತ ಶ್ರೀಶಾರದಾಪರಿವೀಜಿತಾಯೈ ನಮೋನಮಃ
ಓಂ ಏಕಾತಪತ್ರಸಾಮ್ರಾಜ್ಯಪ್ರದಾಯೈ ನಮೋನಮಃ
ಓಂ ಆನರ್ಘ್ಯಕೈವಲ್ಯಪದದಾಯಿನ್ಯೈ ನಮೋನಮಃ
ಓಂ ಸರ್ವೋಪನಿಷದುದ್ಘುಷ್ಟಾಯೈ ನಮೋನಮಃ
ಓಂ ಕ್ಷಯಾಪಸ್ಮಾರಕುಷ್ಟಾದಿವಿನಿರ್ಮುಕ್ತಾಯೈ ನಮೋನಮಃ
ಓಂ ಭಂಡಾಸುರವಧೋದ್ಯುಕ್ತಶಕ್ತಿಸೇನಾಸಮನ್ವಿತಾಯೈ ನಮೋನಮಃ
ಓಂ ಸಂಪತ್ಕರೀಸಮಾರೂಢಾಸಿಂಧೂರವ್ರಜಸೇವಿತಾಯೈ ನಮೋನಮಃ
ಓಂ ಭಂಡಪುತ್ರವಧೋದ್ಯುಕ್ತಬಾಲಾವಿಕ್ರಮನಂದಿತಾಯೈ ನಮೋನಮಃ
ಓಂ ವಿಶುಕ್ಲಪ್ರಾಣಾಹರಣವಾರಾಹೀವೀರ್ಯನಂದಿತಾಯೈ ನಮೋನಮಃ

ಓಂ ರಾಮೇಶ್ವರಮುಖಾಲೋಕಕಲ್ಪಿತ ಶ್ರೀಗಣೇಶ್ವರಾಯೈ ನಮೋನಮಃ
ಓಂ ಚಂದ್ರಮಂಡಲಮಧ್ಯಗಾಯೈ ನಮೋನಮಃ
ಓಂ ಸದಾಶಿವಾನುಗ್ರಹಾಯೈ ನಮೋನಮಃ
ಓಂ ಭಾನುಮಂಡಲಮಧ್ಯಸ್ಥಾಯೈ ನಮೋನಮಃ
ಓಂ ಗುಡಾನ್ನಪ್ರೀತಮಾನಸಾಯೈ ನಮೋನಮಃ
ಓಂ ಸರ್ವಮೃತ್ಯುನಿವಾರಿಣ್ಯೈ ನಮೋನಮಃ
ಓಂ ತ್ರಿಕೋಣಾಂತರದೀಪಿಕಾಯೈ ನಮೋನಮಃ
ಓಂ ಶ್ರೀನಾಥಸೋದರೀ ಭೂತಚಿತ್ಕಳಾಯೈ ನಮೋನಮಃ
ಓಂ ಮುಕ್ತೇಶ್ವರಭಕ್ತಾರ್ತಿಭಂಜನಾಯೈ ನಮೋನಮಃ
ಓಂ ಚಕ್ರರಾಜರಥಾರೂಢಾ ಸರ್ವಾಯುಧಪರಿಷ್ಕೃತಾಯೈ ನಮೋನಮಃ
ಓಂ ಮುಕ್ತರಾಜಸಂರಕ್ಷಣಾರ್ಥವ್ಯೋಮೋದ್ಭವಾಯೈ ನಮೋನಮಃ
ಓಂ ಸಕಲಾಸ್ತ್ರಶಸ್ತ್ರಾಣಾಂಮುಕ್ತರಾಜ್ಞಾವರಪ್ರದಾಯುನ್ಯೈ ನಮೋನಮಃ
ಓಂ ಜಾನುಮಂಡಲಸುಮಂಡಲನಾಶನಪ್ರೇರಿತಾಯೈ ನಮೋನಮಃ
ಓಂ ನಾಮರೂಪವಿವರ್ಜಿತಾಯೈ ನಮೋನಮಃ
ಓಂ ಮುಕ್ತಪ್ರಜಾಪತಿ ಸುತಾವೇಷಾದ್ಯಾಯೈ ನಮೋನಮಃ
ಓಂ ಹ್ರೀಂಕಾರಮಯಸೌವರ್ಣಸ್ತಂಭವಿದ್ರುಮಪುತ್ರಿಕಾಯೈ ನಮೋನಮಃ
ಓಂ ಹ್ರೀಂಕಾರವೇದೋಪನಿಷದಾಯೈ ನಮೋನಮಃ
ಓಂ ಹ್ರೀಂಕಾರಮಂತ್ರಸರ್ವಸ್ವಾನ್ಯೈ ನಮೋನಮಃ
ಓಂ ಮಹಾಕಾಮೇಶನಯನಕುಮುದಾಹ್ಲಾದಕೌಮುದ್ಯೈ ನಮೋನಮಃ
ಓಂ ಅನಾದ್ಯಂತಸ್ವಯಂಭೂತ ವಿಗ್ರಹಾಯೈ ನಮೋನಮಃ
ಓಂ ವಾಣೀಗಾಯತ್ರೀಸಾವಿತ್ರೀಸನ್ನುತಾಯೈ ನಮೋನಮಃ
ಓಂ ಸಕಲಾಗಮಸಂದೋಹಶುಕ್ತಿಸಂಪುಟಮೌಕ್ತಿಕಾಯೈ ನಮೋನಮಃ
ಓಂ ಶ್ರೀಷೋಡಶಾಕ್ಷರೀಮಂತ್ರಮಧ್ಯಗಾಯೈ ನಮೋನಮಃ
ಓಂ ಭಂಡದೈತ್ಯಮಹಾಸತ್ವನಾಶನಾಯೈ ನಮೋನಮಃ
ಓಂ ಕ್ರೂರಭಂಡಶಿರಚ್ಛೇದ ನಿಪುಣಾಯೈ ನಮೋನಮಃ
ಓಂ ಧಾತ್ರಚ್ಯುತಸುರಾಧೀಶ ಸುಖದಾಯೈ ನಮೋನಮಃ
ಓಂ ಚಂಡಮುಂಡನಿಶುಂಭಾದಿಖಂಡನಾಯೈ ನಮೋನಮಃ
ಓಂ ರಕ್ತಾಕ್ಷರಕ್ತಜಿಹ್ವಾದಿ ಶಿಕ್ಷಕಾಯೈ ನಮೋನಮಃ
ಓಂ ಮಹಿಷಾಸುರದೋರ್ವೀರ್ಯನಿಗ್ರಹಾಯೈ ನಮೋನಮಃ
ಓಂ ಬ್ರಹ್ಮೋಪೇಂದ್ರಮಹೇಂದ್ರಾದಿದೇವಸಂಸ್ತುತವೈಭವಾಯೈ ನಮೋನಮಃ
ಓಂ ಮಹೇಶಯುಕ್ತನಟನತತ್ಪರಾಯೈ ನಮೋನಮಃ

ಓಂ ನಿಜಭಕ್ತಮುಖಾಂಭೋಜಚಿಂತನಾಯ್ಯೆ ನಮೋನಮಃ
ಓಂ ರಾಜರಾಜಾರ್ಚಿತಪದಸರೋಜಾಯ್ಯೆ ನಮೋನಮಃ
ಓಂ ವಿಧೇಯಮುಕ್ತವಿಜ್ಞಾನಸಿದ್ಧಿದಾಯ್ಯೆ ನಮೋನಮಃ
ಓಂ ಸಾಕ್ಷಾತ್ ಶ್ರೀ ದಕ್ಷಿಣಾಮೂರ್ತಿಮನೋಜ್ಞಾಯ್ಯೆ ನಮೋನಮಃ
ಓಂ ಜನ್ಮಮೃತ್ಯುಜರಾರೋಗಭಂಜನಾಯ್ಯೆ ನಮೋನಮಃ
ಓಂ ನಿತ್ಯಯೌವನಮಾಂಗಲ್ಯ ಮಂಗಳಾಯ್ಯೆ ನಮೋನಮಃ
ಓಂ ಶ್ರೀ ಮುಕ್ತೇಶ್ವರದೇವಸಮಾಯುಕ್ತಾಯ್ಯೆ ನಮೋನಮಃ
ಓಂ ಶ್ರೀ ಕಮಲಾಸನ ಕೌಮಾರಿಯ್ಯೆ ನಮೋನಮಃ
ಓಂ ಶ್ರೀ ನಿಮಿಷಾಂಬಾ ಮಹಾದೇವ್ಯೈ ನಮೋನಮಃ

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೆನಮಃ ಅಷ್ಟೋತ್ತರಶತ ದಿವ್ಯನಾಮಪೂಜಾಂ ಸಮರ್ಪಯಾಮಿ । ಪುಷ್ಪಾಣಿ ಸಮರ್ಪಯಾಮಿ ॥

ಲಲಿತ ತ್ರಿಶತಿ ಮತ್ತು ಲಲಿತಸಹಸ್ರನಾಮಾವಳಿ ಪೂಜೆಯನ್ನು ಸಹ ಮಾಡಬಹುದು.

ಧೂಪಂ

ವನಸ್ಪತಿರ್ಭವೋರ್ದಿವ್ಯೈ ನಾನಾಗಂಧೈಶ್ಚ ಸಂಯುತಃ ।
ಆಘ್ರೇಯಸ್ಸರ್ವದೇವಾನಾಂಧೂಪೋಯಂಪ್ರತಿಗೃಹ್ಯತಾಂ॥
ಚಂದನಾಗರು ಕರ್ಪೂರಸಾರ ಗುಗ್ಗುಲಸಂಯುತಂ ।
ಧೂಪಂಗೃಹಾಣಚಾಮುಂಡೇನಿಮಿಷಾಂಬೇ ನಮೋಸ್ತುತೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೆನಮಃ ಧೂಪಮಾಘ್ರಾಪಯಾಮಿ । ಧೂಪಾನಂತರಂ ಆಚಮನಂ ಸಮರ್ಪಯಾಮಿ । ಆಚಮನಾನಂತರಂ ಪುಷ್ಪಾಣಿ ಸಮರ್ಪಯಾಮಿ ॥

ಏಕಾರ್ತಿದೀಪಂ

ಕಪಿಲಾಘೃತಸಂಯುಕ್ತಂ ದೀಪಂಕಾರ್ಪಾಸವರ್ತಿಕಂ ।
ಕರ್ಪೂರರೇಣುಸಂಯುಕ್ತಂ ಸರ್ವಬಂಧವಿಮೋಚನಂ ॥
ಸಾಜ್ಯಂತ್ರಿವರ್ತಿ ಸಂಯುಕ್ತಂ ವಹ್ನಿನಾದ್ಯೋತಿತಂಮಯಾ ।
ಗೃಹಾಣಮಂಗಳಂ ದೀಪಂ ತ್ರೈಲೋಕ್ಯಂ ತಿಮಿರಾಪಹ ॥
ಭಕ್ತ್ಯಾದೀಪಂ ಪ್ರಯಚ್ಛಾಮಿ ದೇವಾಯಪರಮೇಶ್ವರೀ ।
ತ್ರಾಹಿಮಾಂನರಕಾದ್ಘೋರಾದ್ದಿವ್ಯಜ್ಯೋತಿರ್ನಮೋಸ್ತುತೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೆನಮಃ ಏಕಾರ್ತಿದೀಪಂ ದರ್ಶಯಾಮಿ । ಧೂಪದೀಪಾನಂತರಂ ಆಚಮನಂ ಸಮರ್ಪಯಾಮಿ । ಆಚಮನಾನಂತರಂ ಪುಷ್ಪಾಣಿ ಸಮರ್ಪಯಾಮಿ ॥

ನೈವೇದ್ಯಂ

ಅಶ್ವದಾಯಿಾ ಗೋದಾಯಿಾ ಧನದಾಯಿಾ ಮಹಾಧನೇ ಧನಂ ನೇ ಜುಷತಾಂದೇವಿ ಸರ್ವಕಾಮಾರ್ಥ ಸಿದ್ಧಯೇ ॥

ರಂಭಾಫಲಂಘೃತಂಕ್ಷೀರಂ ಗೋಧೂಮಸ್ಯಚಚೂರ್ಣಕಂ ।
ಶರ್ಕರಾಯುಕ್ತನೈವೇದ್ಯಂ ಸಪಾದಂಭಕ್ಷ್ಯಮುತ್ತಮಂ ॥
ಘೃತಪಕ್ವಹವಿಷ್ಯಾನ್ನಂ ಸಪಾದಂಪಾಯಸಂತಥಾ ।
ನಾನಾವಿದಂಚನೈವೇದ್ಯಂ ಈಶ್ವರೀ ಪ್ರತಿಗೃಹ್ಯತಾಂ ॥

ಪ್ರೋಕ್ಷ್ಯಾಪರಿಷಿಚ್ಯ

ಪ್ರಾತರ್ಮಧ್ಯಾನ್ಹಃ ಸಂಧ್ಯಾಯಾಂ ತ್ರಿಮೂರ್ತ್ಯಾಂ ವೇದಮಾತರಂ । ಚತುರ್ದ್ವಿಂಶದ್ವರ್ಣರೂಪೀಂ ಗಾಯತ್ರೀಂ ಭಾಸ್ವತೇನಮಃ । ಪ್ರಥಮಾತ್ಮನೇನಮಃ । ದ್ವಿತಿಯಾತ್ಮನೇನಮಃ । ತೃತಿಯಾತ್ಮನೇನಮಃ । ಚತುರ್ಥಾತ್ಮನೇನಮಃ । ಪ್ರಾಣಾಯಾಮ ಪಂಚಭೂತಾತ್ಮನೇನಮಃ । ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ । ——ನೈವೇದ್ಯಂ ಸಮರ್ಪಯಾಮಿ । ಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ ॥

ಭಾನುವಾರ	ಅಕ್ಕಿಯಪೊಂಗಲ್, ಪಾಯಸ	**ಅಷ್ಟಮಿ**	ತೆಂಗಿನಪಾಯಸ
ಸೋಮವಾರ	ಶ್ಯಾಲ್ಯಾನ್ನ, ಹಾಲು	**ನವಮಿ**	ಬತ್ತದಹರಳು
ಮಂಗಳವಾರ	ರವೇಬೆಲ್ಲದಬಾತ್, ಬಾಳೇಹಣ್ಣು	**ದಶಮಿ**	ಎಳ್ಳೆಣ್ಣೆಯಚಿತ್ರಾನ್ನ
ಬುಧವಾರ	ದಧ್ಯಾನ್ನ, ಬೆಣ್ಣೆ	**ಏಕಾದಶಿ**	ಮೊಸರನ್ನ
ಗುರುವಾರ	ಘೃತಪಕ್ವಾನ್ನ, ಕಲ್ಲುಸಕ್ಕರೆ	**ದ್ವಾದಶಿ**	ಅವಲಕ್ಕಿಅನ್ನ
ಶುಕ್ರವಾರ	ರವೇಕೇಸರಿಬಾತ್, ಸಕ್ಕರೆ ಅಥವ ಬೆಲ್ಲ	**ತ್ರಯೋದಶಿ**	ಬೆಲ್ಲಮಿಶ್ರಿತ ಕಡಲೆಹಿಟ್ಟು
ಶನಿವಾರ	ಚಿತ್ರಾನ್ನ, ಹಸುವಿನತುಪ್ಪ	**ಚತುರ್ದಶಿ**	ಮೊಸರಿನಲ್ಲಿ ಕಲಿಸಿದ ಹರಳಿನ ಹಿಟ್ಟು

ಮೇಲ್ಕಂಡ ನೈವೇದ್ಯಗಳು ವಸಂತನವರಾತ್ರಿಯಲ್ಲೂ ಮತ್ತು ಶರನ್ನವರಾತ್ರಿಯಲ್ಲೂ ಅಲ್ಲದೆ ಗ್ರಹಚಾರಪರಿಹಾರಕ್ಕಾಗಿ ವಿಶೇಷ ಶಾಂತಿಕ್ರಮನಡೆಸುವಾಗ ಮಾಡುವುದು.

ಸರ್ವೇಸಾಧಾರಣವಾಗಿ ಪೂಜಾಕಾಲದಲ್ಲಿ ನಾನಾವಿಧವಾದಫಲಗಳು, ಚಿತ್ರಾನ್ನ, ಮೊಸರನ್ನ, ಪಾಯಸ, ಹೋಳಿಗೆ, ಕಡಬು ಅಂಬೊಡೆ, ದೋಸೆ, ಅನ್ನ, ಸಾರು, ತಾಳಿಗೆ, ತೊವ್ವೆಗಳೇ ಮೊದಲಾದವುಗಳನ್ನು ನೈವೇದ್ಯಕ್ಕಾಗಿ ಇಡುವುದು.

ಪಾನೀಯಂ

ಪುತ್ರಪೌತ್ರ ಧನಂಧಾನ್ಯಂ ಹಸ್ತ್ಯಶ್ವಾಜಾವಿಗೋರಥಂ ।
ಪ್ರಜಾನಾಭವಸೀಮಾತಾ ಆಯುಷ್ಮಂತಂಕರೋತುಮಾಂ ॥

ಪಾನೀಯಂಪಾವನಂಶ್ರೇಷ್ಟಂ ಗಂಗಾದಿಸರಿದುದ್ಭವಂ ।
ಹಸ್ತಪ್ರಕ್ಷಾಳನಂದೇವಿ ಶುದ್ಧ್ಯರ್ಥಂ ಪ್ರತಿಗೃಹ್ಯತಾಂ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾದೇವತಾಯ್ಯೈನಮಃ ಪಾನೀಯಂ ಸಮರ್ಪಯಾಮಿ । ಉತ್ತರಾಪೋಷನಂ ಸಮರ್ಪಯಾಮಿ । ಹಸ್ತಪ್ರಕ್ಷಾಳನಂಸಮರ್ಪಯಾಮಿ । ಪಾದಪ್ರಕ್ಷಾಳನಂ ಸಮರ್ಪಯಾಮಿ । ಪುನರಾಚಮನಂ ಸಮರ್ಪಯಾಮಿ ॥

ತಾಂಬೂಲಂ

ಪೂಗೀಫಲ ಸಮಾಯುಕ್ತಾಂ ನಾಗವಲ್ಲೀದಳೈರ್ಯುತಂ ।
ಕರ್ಪೂರಚೂರ್ಣ ಸಂಯುಕ್ತಂ ತಾಂಬೂಲಂಪ್ರತಿಗೃಹ್ಯತಾಂ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೈನಮಃ ಪೂ ಗೀ ಫ ಲ ತಾಂಬೂಲಂ ಸಮರ್ಪಯಾಮಿ ॥

ಸುವರ್ಣಪುಷ್ಪಂ

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂವಿಭಾವಸೋಃ ।
ಅನಂತಪುಣ್ಯಫಲದಂ ಅತಶ್ಯಾಂತಿಪ್ರಯಚ್ಛಮೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೈನಮಃ ಸುವರ್ಣಪುಷ್ಪಂ ಸಮರ್ಪಯಾಮಿ । ಸರ್ವೋಪಚಾರಪೂಜಾಂ ಸಮರ್ಪಯಾಮಿ ॥

ಮಂಗಳನೀರಾಜನಂ

ನಮಸ್ತೇ ಪಾರ್ವತೀದೇವಿ ಕೈಲಾಸ ಘನವಾಸಿನೀ ।
ಕಮಲಾಸನ ಕೌಮಾರಿ ಶ್ರೀ ನಿಮಿಷಾಂಬಾ ನಮೋಸ್ತುತೇ ॥

ಘೃತವರ್ತಿಸಮಾಯುಕ್ತಂ ಘನಸಾರಸಮನ್ವಿತಂ ।
ನೀರಾಜನಮಿದಂದೇವೀ ಗೃಹಾಣಹರವಲ್ಲಭೇ ॥

ಸರ್ವಮಂಗಳಮಾಂಗಲ್ಯೇ ಶಿವೇಸರ್ವಾರ್ಥಸಾದಕೇ ।
ಶರಣ್ಯೇತ್ರ್ಯಂಬಕೇದೇವಿ ನಿಮಿಷಾಂಬಾ ನಮೋಸ್ತುತೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯ್ಯೈನಮಃ ನೀರಾಜನಂ ದರ್ಶಯಾಮಿ । ನೀರಾಜನಾನಂತರಂ ಆಚಮನಂ ಸಮರ್ಪಯಾಮಿ । ಆಚಮನಾನಂತರಂ ಪುಷ್ಪಾಣಿ ಸಮರ್ಪಯಾಮಿ ॥

ಈ ಆರತಿ ವಿಷಯವಾಗಿ ತಿಳಿಸುವುದೇನೆಂದರೆ ಮನುಷ್ಯರಿಗೆ ಅರಶಿನ, ಸುಣ್ಣ ಕಲಕಿದ ನೀರಿನ ಆರತಿಯನ್ನೂ ದೇವರಿಗೆ ಅರಸಿನ, ಕುಂಕುಮ ಕಲಸಿದ ನೀರಿನ ಆರತಿಯನ್ನೂ

ಮತ್ತು ವಿಶೇಷ ಪೂಜಾದಿನಗಳಾದ ಜನ್ಮೋತ್ಸವ ಹಾಗು ಶಾರದಾನವರಾತ್ರಿಗಳಲ್ಲಿ ತಂಬಿಟ್ಟಿನದೀಪದ ಆರತಿಗಳನ್ನು ಮಾಡಬೇಕು.

ಮಂತ್ರಪುಷ್ಪಂ

ಚಂಪಕೈಃಶತಪತ್ರೈಶ್ಚ ಕಲ್ಹಾರೈಃಕರವೀರಕೈಃ ।
ಪಾಟಲೈರ್ವಕುಳೈರ್ಯುಕ್ತಂ ಗೃಹಾಣಕುಸುಮಾಂಜಲಿ ॥
ಪದ್ಮಾನೇನಪದ್ಮರೂಪ ಪದ್ಮಾಕ್ಷೀ ಪದ್ಮಸಂಭವೇ ।
ತ್ವಂಯಾಂಭಜಸ್ವ ಪದ್ಮಾಕ್ಷಿಯೇನಸೌಖ್ಯಂಲಭಾಮ್ಯಹಂ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ ಮಂತ್ರಪುಷ್ಪಂ ಸಮರ್ಪಯಾಮಿ ॥

ಪ್ರದಕ್ಷಿಣ ನಮಸ್ಕಾರ

ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಳಾಯತಾಕ್ಷಿ ।
ವಿಶ್ವಪ್ರಿಯೇವಿಷ್ಣುಮನಾನುಕೂಲೇತ್ವತ್ಪಾದಪದ್ಮಂಮಯಿಸನ್ನಿಧತ್ಸ್ವ
ದೇವಿಪ್ರಸನ್ನಾರ್ತಿಹರೇಪ್ರಸೀದ ಪ್ರಸೀದಮಾತರ್ಜಗತೋಽಖಿಲಸ್ಯ ।
ಪ್ರಸೀದವಿಶ್ವೇಶ್ವರಿ ಪಾಹಿವಿಶ್ವಂತ್ವಮೀಶ್ವರೀದೇವಿ ಚರಾಚರಸ್ಯ ॥
ಮಹಾದುರ್ಗೇ ನಮಸ್ತೇಽಸ್ತು ಸರ್ವೇಷ್ಟಫಲದಾಯಿನೀ ।
ಪ್ರದಕ್ಷಿಣಂ ಕರೋಮಿತ್ವಾಂ ಪ್ರಿಯತಾಂ ಹರಿವಲ್ಲಭೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ ಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ ॥

ಫಲಸಮರ್ಪಣೆ

ಇದಂಫಲಂಮಯಾದೇವೀ ಸ್ಥಾಪಿತಂಪುರತಸ್ತವೇ ।
ತೇನಮೇಸಫಲಂಪ್ರಾಪ್ತಿ ಭವೇಜನ್ಮನಿಜನ್ಮನೀ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ ಪೂರ್ಣಫಲಂ ಸಮರ್ಪಯಾಮಿ ॥

ಪ್ರಾರ್ಥನೆ

ನಮಸ್ತೇ ಗಿರಿಜಾದೇವೀ ನಮಸ್ತೇ ತ್ರೈಲೋಕ್ಯನಾಯಕೀ ।
ನಮಸ್ತೇಸರ್ವಪಾಪಾಘ್ನಿ ಶ್ರೀನಿಮಿಷಾಂಬಾನಮೋಽಸ್ತುತೇ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ ಪ್ರಾರ್ಥನಾಂ ಸಮರ್ಪಯಾಮಿ ॥

ಪುನಃ ಪೂಜಾಂಕರಿಷ್ಯೆ

ಛತ್ರಂ ಸಮರ್ಪಯಾಮಿ । ಚಾಮರಾಭ್ಯಾಂ ವೀಜಯಾಮಿ । ನೃತ್ಯಂ ದರ್ಶಯಾಮಿ । ಸಿಂಹಾರೋಹಣಂ ಸಮರ್ಪಯಾಮಿ । ಅಶ್ವಾರೋಹಣಂ ಸಮರ್ಪಯಾಮಿ । ಧ್ವಜಾರೋಹಣಂ ಸಮರ್ಪಯಾಮಿ । ಗಜಾರೋಹಣಂ ಸಮರ್ಪಯಾಮಿ । ರಥಾರೋಹಣಂ ಸಮರ್ಪಯಾಮಿ । ಸಮಸ್ತರಾಜೋಪಚಾರ, ದೇವೋಪಚಾರ, ಭಕ್ತ್ಯುಪಚಾರ, ಶಕ್ತ್ಯುಪಚಾರ, ಷೋಡಶೋಪಚಾರ ಪೂಜಾಂ ಸಮರ್ಪಯಾಮಿ ॥

ಯಸ್ಯಸ್ಮೃತ್ಯಾಚ ನಾಮೋಕ್ತ್ಯಾ ತಪಃಪೂಜಾಕ್ರಿಯಾದಿಷು ।
ನೂನ್ಯಂಸಂಪೂರ್ಣತಾಂ ಯಾತಿದೇವೀಪೂಜಾಂಮಾಹೇಶ್ವರೀ ॥
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಸುರೇಶ್ವರೀ ।
ಯತ್ಪೂಜಿತಂಮಯಾದೇವಿ ಪರಿಪೂರ್ಣಂತದಸ್ತುಮೇ ॥

ಅನೇನ ಯಾವಚ್ಛಕ್ತಿ ಧ್ಯಾನ ಆವಾಹನಾದಿ ಷೋಡಶೋಪಚಾರ ಪೂಜಾ ವಿಧಾನೇನ ಭಗವತೀ ಸರ್ವಾತ್ಮಕಃ ಸರ್ವಂ ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾ ಸುಪ್ರೀತಾ ಸುಪ್ರಸನ್ನಾ ವರದಾಭವಂತು ॥

ದೇವಾನಾಥಗರೋ ಸ್ವಾಮಿರ್ ದೇಶಿಕಸ್ವಾತ್ಮನಾಯಿಕಾ ।
ತ್ರಾಹಿತ್ರಾಹಿಕೃಪಾಸಿಂಧೋ ಪೂಜಾಂಪೂರ್ಣತರಂಕುರು ॥
ಆವಾಹನಂ ನಜಾನಾಮಿ ನಜಾನಾಮಿ ವಿಸರ್ಜನಂ ।
ಪೂಜಾಂಚೈವನಜಾನಾಮಿ ಕ್ಷಮಸ್ವ ಪರಮೇಶ್ವರೀ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾ ದೇವತಾಯೈನಮಃ ಶ್ರೀ ದೇವಿ ಪ್ರಸಾದ ತಿಲಕಂ ಧಾರಯಿತ್ವಾ ॥

ಪ್ರಸಾದಧಾರಣ

ಉತ್ತಿಷ್ಟದೇವಾಂ ಗಂತವ್ಯಂ ಪುನರಾಗಮನಾಯಚ ।
ಪುನರಾಗತ್ಯಸಂತಿಷ್ಠ ಪ್ರವಿಶ್ಯಹೃದಯೇಮಮ ॥

ಶ್ರೀ ತ್ರಿಪುರಸುಂದರೀ ನಿಮಿಷಾಂಬಾದೇವಿ ಪ್ರಸಾದಧಾರಣಪ್ರಾರ್ಥನಂ ಸಮರ್ಪಯಾಮಿ॥

ಶ್ರೀ ಮುಕ್ತ್ಯರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯಕ್ಷತ್ರಿಯರ ದೇವಿ ಪೂಜಾವಿಧಾನ

ಸಮಾಪ್ತಿ

ಓಂ ಭದ್ರಂ ಓಂ ಶಿವಂ ಓಂ ಮಂಗಳಂ

ಶ್ರೀರಸ್ತು

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಶಾಸನಗಳು

ಶ್ರೀ ಶ್ರೀ ವಿಜಯನಗರ ಶಾಸನದ ವಿವರ

ಶ್ರೀ ಮುಕ್ತರಾಜಋಷಿ ವಂಶೋದ್ಭವರು ಬರೆಸಿಕೊಟ್ಟ ಶಾಸನದ ವಿವರ

ಶ್ರೀಮನ್‌ಮಹಾದೇವ ಕರುಣಾಕಟಾಕ್ಷ ವೀಕ್ಷಣಾಲಂಕಾರ ಸಂಹೃದಿತ ಅಷ್ಟೈಶ್ವರ್ಯ ಸಂಪನ್ನರೂ ಅಯೋನಿಸಂಭವರೂ ಜಾನುಮಂಡಲ ರಾಕ್ಷಸ ಮರ್ಧನ ಗುಂಡ ಗಂಡ ಬಿರುದಾಂಕಿತರೂ, ಶ್ರೀ ನಿಮಿಷಾಂಬಾದೇವಿ ವರಪ್ರಸಾದಕರೂ, ಶ್ರೀ ವೆಂಕಟೇಶ್ವರ ಪಾದಾಂಬುಜಧ್ಯಾನಾಮೃತಸೇವಕರೂ, ಉಭಯ ಚತುರಂಗದಳ ಶೃಂಗಾರ ಬಿರುದಾಂಕಿತರೂ, ಮೇಧನಿಯ ನಾನಾರಾಜರತ್ನ ಪರೀಕ್ಷಕರೂ, ಶ್ರೀ ಪರಮೇಶ್ವರನ ಹೃದಯಪದ್ಮದಿಂದ ಜನಿಸಿದ ಮುಕ್ತಋಷಿ ವಂಶೋದ್ಭವರೂ ನಾನಾ ದೇಶ ವಿಗ್ರಹಾನುಗ್ರಹ ಕಾರ್ಯ ಪ್ರವೀಣರೂ, ಅತಲ, ವಿತಲ, ಸುತಲ, ತಲಾತಲ, ರಸಾತಲ, ಮಹಾತಲ, ಪಾತಾಳಾದಿ ಸಪ್ತಲೋಕಾಧೀಶ್ವರರ, ಭೂಲೋಕ, ಭುವರ್ಲೋಕ, ಮಹಾಲೋಕ, ತಪೋಲೋಕ, ಸ್ವರ್ಗಲೋಕ, ಸತ್ಯಲೋಕ, ಬ್ರಹ್ಮಲೋಕ, ಇಂದ್ರಲೋಕ, ಲೋಕಾಲೋಕ ವೀಕ್ಷಣ ಸಮರ್ಥರೂ, ರಾಹುಮಂಡಲ, ಕೇತುಮಂಡಲ, ವಾಯುಮಂಡಲ, ವಹ್ನಿಮಂಡಲ, ನಕ್ಷತ್ರಮಂಡಲ ಮೊದಲಾದ ಚಿತ್ರ, ವಿಚಿತ್ರ ಮಂಡಲ ನಿರ್ಮಾಣಕಾರಕರೂ, ಮೇರುಗಿರಿ, ಮಂದರಗಿರಿ, ಕೈಲಾಸಗಿರಿಗಳ ಮಧ್ಯೆ ವಿಹರಿಸುವ ಶ್ರೀ ಪಾರ್ವತೀ ಪರಮೇಶ್ವರನ ಪಾದಪಂಕಜದ ಪರಮ ಭಕ್ತರೂ, ಏಕಾದಶ ರುದ್ರರು, ದ್ವಾದಶ ಆದಿತ್ಯರು, ದೇವಬ್ರಾಹ್ಮಣ ಸಂರಕ್ಷಣ ಅತಿಥಿ ಸತ್ಕಾರ, ಭೋಗಮಂಟಪ, ದೇವಮಂಟಪ, ಕಲ್ಯಾಣಮಂಟಪ, ಗುರುಮಂಟಪ ಮೊದಲಾದ ಸಕಲ ಧರ್ಮಗಳ ಪಾಲಕರೂ, ಹನುಮಧ್ವಜ, ಗರುಡಧ್ವಜ, ಮೀನಧ್ವಜ, ಸರ್ವಧ್ವಜಗಳ ಬಿರುದಾಂಕಿತರೂ, ಪಂಚಮಹಾ ವಾಧ್ಯ ಪ್ರವೀಣರೂ, ಸಿದ್ಧಿಯೋಗ, ಯೋಗಶಾಸ್ತ್ರಾಧಿ ವಿಶೇಷ ಶಾಸ್ತ್ರ ಪಂಡಿತರೂ, ಹರಿ, ಹರ, ಗುರುಭಕ್ತ, ಪಾರಾಯಣರೂ, ಶ್ರೀ ಮುಕ್ತಋಷಿ

ವಂಶೋದ್ಭವ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಕುಲವಂಶೋದ್ಭವರ ಆದಿ ಪ್ರಶಸ್ಥ ಬಿರುದು.......

ಸ್ವಸ್ತಿ ಸಮಸ್ತ ವಿಜಯಾಭ್ಯುದಯ ಶಾಲಿವಾಹನ ಶಕೆ ವರ್ಷಂಗಳು 1369ನೇ ವರ್ಷಕ್ಕೆ ಸಂದ ಅಂಗೀರಸ ಸಂವತ್ಸರ ಆಶ್ವೀಜಮಾಸ ಬಹುಳ ದಶಮಿ ಸೋಮವಾರ ವಿಜಯನಗರದ ರಾಜಸಭೆಯಲ್ಲಿ ನಡೆದ ಪ್ರಕರಣ :—

ಶ್ರೀಮನ್‌ಮಹಾಮಂಡಲೇಶ್ವರ, ರಾಜಾಧಿರಾಜ, ರಾಜ ಮಹಾರಾಜ, ರಾಜ ಪರಮೇಶ್ವರ, ರಾಜಕಂಠೀರವ, ರಾಜಮಾರ್ತಾಂಡ, ರಾಜಕಂದರ್ಪ, ರಾಜಶಿರೋ ಭೂಷಣ, ರಾಜತೇಜೋನಿಧಿ, ರಾಜ ಶ್ರೀ ವೀರಪ್ರತಾಪ ಪ್ರೌಢದೇವ ಮಹಾರಾಜರು ವಜ್ರಸಿಂಹಾಸನಾರೂಢರಾಗಿ ರಾಜ್ಯಭಾರ ಮಾಡುತ್ತಿರುವಾಗ, ವಿಜಯನಗರದ ಮುಖ್ಯ ದೇವರಾದ ವಿರೂಪಾಕ್ಷ ದೇವರಿಗೆ ದೇವಲ (ದೀಪಾವಳಿ) ಹಬ್ಬದ ದೀಪಾರಾಧನೆ ಸಮಯದಲ್ಲಿ, ಆ ದೇಶದ ಶ್ರೀವೈಷ್ಣವರು, ದೇವಬ್ರಾಹ್ಮಣರು, ಮೈಲಾರದೇವರ ಭಕ್ತರು, ದೇಶದ ಪ್ರಮುಖರು, ದೇವಸ್ಥಾನದ ಸಕಲ ಅಧಿಕಾರ ವರ್ಗದವರೂ ಸೇರಿರಲು ಆ ಸಮಯದಲ್ಲಿ ನಗರದಲ್ಲಿ ಪ್ರಮುಖರೂ ಆದ ದೂರ್ವಾಸಮುನಿ ಗೋತ್ರದ ಮಲ್ಲದೇವರ ಮಲ್ಲರೌತು, ವಜ್ರಾಂಗಿಯ ಮಾಧುವ ಅಮೋಘರೌತು, ಯೇನಗಲ ಕಾಶಿರೌತು, ಮುಮ್ಮಡಿರಾಜವೀರರೌತು, ಪೋತುರೌತುರವರ ಶ್ರೀಕಂಠನು ಭೂರಿಗುಂಡ್ಲದಿಂದ ಬಂದಿದ್ದ ಪೈಡಿಪನಿ (ಮರಗೆಲಸ) ನಾಗರೌತು ಮೊದಲಾದ ಪ್ರಮುಖರು ದೇವಸನ್ನಿಧಿಯ ಪೂಜಾ ಸಮಯದಲ್ಲಿರಲು ಮೇಧಿನಿಯವರು ತಾವು ಉಭಯದಳ ಶೃಂಗಾರಕರ್ತರೆಂದೂ, ಸಕಲಧ್ವಜ ಬಿರುದಾಂಕಿತರೆಂದೂ ಪಂಡಿತರಿಂದ ಹೊಗಳಿಸಿಕೊಳ್ಳಲು ಅಲ್ಲಿದ್ದ ಮುಮ್ಮಡಿ ರಾಜವೀರರೌತುವು ಹೊಗಳು ಭಟರಾದ ಪಂಡಿತರ ಬಾಯಿ ಮುಚ್ಚಿಸಲು ಅಲ್ಲಿದ್ದ ಇತರ ವರ್ಣಗಳವರು ನೋಡಿ ಕಲಹಕ್ಕೆ ಪ್ರಾರಂಭಿಸಲು ಸಭೆಯಲ್ಲಿದ್ದ ದೇವಸ್ಥಾನದ ಪಾರುಪತ್ತೇದಾರರಾದ ತರುವಕಲ ಮಲ್ಲಪ್ಪನೆಂಬುವರು, ಎಲ್ಲರಿಗೂ ಮಧ್ಯೆ ಬಂದು ಈ ದಿನ ಪೂಜೆ ಮುಗಿಯಲಿ ಜಾತಿಕಟ್ಟಳೆಯ (ಪಣಕಟ್ಟು) ವಿವಾದವನ್ನು ನಾಳೆ ನಾವುಗಳೆಲ್ಲರೂ ಸೇರಿ ರಾಜರಲ್ಲಿ ಬಿನ್ನವಿಸಿಕೊಳ್ಳೋಣವೆಂದು ಸಮಾಧಾನ ಮಾಡಿದರು. ಮಾರನೆಯ ದಿನ ರಾಜಸಭೆಗೆ ಎರಡು ಪಂಗಡದವರನ್ನು ಕರೆಸಿದಾಗ ರಾಜರ ಸಮ್ಮುಖದಲ್ಲಿ ತರುವಕಲ ಮಲ್ಲಪ್ಪನು ಸಭೆಯಲ್ಲಿ ಭಿನ್ನವಿಸಿಕೊಂಡದ್ದೇನೆಂದರೆ : ನಿನ್ನೆಯ ದಿನ ದೇವರ ಸನ್ನಿಧಿಯಲ್ಲಿ ಮೇಧಿನಿಯವರು ತಾವು ಉಭಯದಳ ಶೃಂಗಾರಕರ್ತರೆಂದೂ, ಸಕಲ ವಿದ್ಯಾಪಾರಂಗತ ರೆಂದೂ, ಸಕಲಧ್ವಜ ಬಿರುದಾಂಕಿತರೆಂದು ಹೊಗಳಿಸಿಕೊಳ್ಳಲು ಮುಕ್ತಋಷಿ ನಾಯ ಕರು ಆ ಬಿರುದುಗಳು ತಮಗೆ ಸೇರಿದವೆಂದು ಅದನ್ನು ಹೊಗಳಿದ ವಿದ್ಯಾ ವಸ್ತುಗಳ ಬಾಯನ್ನು ಮುಚ್ಚಿಸಿದರು ಎಂಬುದಾಗಿ ಬಿನ್ನವಹಿಸಲು ಆಗ ರಾಜರು ಮೇಧಿನಿಯವ ರನ್ನು ಕೇಳಲು ಅವರುಗಳು ತಾವು ಹೊಗಳಿಸಿಕೊಂಡ ಬಿರುದುಗಳು ತಮ್ಮದೆಂದೂ

ಅವುಗಳು ಮುಕ್ತಋಷಿ ವಂಶದವರದಾದರೆ ಅವರುಗಳು ಅದರ ದಾಖಲೆಗಳನ್ನು ತಮ್ಮ ಸಮ್ಮುಖದಲ್ಲಿ ತೋರಿಸಿದರೆ ಸಮ್ಮುಖವು ವಿಧಿಸುವ ಅಪರಾಧಕ್ಕೆ ನಾವುಗಳು ಸಿದ್ಧವೆಂದು ಮೇಧಿನಿಯವರು ಅರಿಕೆ ಮಾಡಿಕೊಳ್ಳಲು, ಆಗ ಮಹಾರಾಜರು ಮುಕ್ತ ಋಷಿ ವಂಶದ ನಾಯಕರ ಕಡೆ ನೋಡಲು ಆಗ ಮುಮ್ಮಡಿ ರಾಜವೀರರೌತುವು ಎದ್ದು ಸಭೆಗೂ ರಾಜರಿಗೂ ನಮಸ್ಕರಿಸಿ ತಮ್ಮ ವಂಶಪಾರಂಪರ್ಯದಿಂದ ಬಂದ ಬಿರುದು ಗಳೆಂದೂ, ಅವುಗಳು ಅವುಗಳ ಮೂಲ ಪುರಾಣವೂ ಕಾಂಚಿಯಲ್ಲಿರುವ ತಮ್ಮ ಕುಲ ಗುರುಗಳಿಗೆ ತಿಳಿದಿದೆಯೆಂದು ಬಿನ್ನವಿಸಿಕೊಳ್ಳಲು ಆಗ ತರುವಕಲ ಮಲ್ಲಪ್ಪನವರು ರಾಜರ ಬಳಿ ಪರಾಂಬರಿಸಲು ಮಹಾರಾಜರು ಕೊಡಿಸಿದ ಅಪ್ಪಣೆ ಏನೆಂದರೆ ಮೇಧಿನಿ ಯವರು ಹೊಗಳಿಸಿಕೊಂಡಿರುವ ಬಿರುದುಗಳು ಅವರದಲ್ಲದಿದ್ದರೆ ಅದನ್ನು ಹೊಗಳಿಸಿ ಕೊಂಡ ತಪ್ಪಿತಕ್ಕಾಗಿ ಐದು ಸಾವಿರ ವರಹಗಳ ದಂಡವನ್ನು ಐದು ತಲೆಗಳನ್ನೂ ಕೊಡತಕ್ಕದ್ದು. ಹಾಗೆ ಅವರು ಹೊಗಳಿಸಿಕೊಂಡದ್ದು ಸರಿಯಾಗಿದ್ದ ಪಕ್ಷಕ್ಕೆ ಮುಕ್ತ ಋಷಿ ಪಂಗಡದವರು ಐದು ಸಾವಿರ ವರಹಗಳ ದಂಡವನ್ನೂ ಐದು ತಲೆಗಳನ್ನು ಕೊಡತಕ್ಕದೆಂದು ತೀರ್ಪಿಯಲು ಆಗ ರಾಜಸಭೆಯಲ್ಲಿದ್ದ ಮುಕ್ತರಾಜ ಮುಖಂಡ ರೆದ್ದು ಮಹಾರಾಜರಲ್ಲಿ ವಿಜ್ಞಾಪಿಸಿಕೊಂಡಿದ್ದೇನೆಂದರೆ: ತಮ್ಮ ಮೂಲಪುರುಷನಾದ ಶ್ರೀ ಮುಕ್ತಋಷಿ ಉತ್ಪತ್ತಿಯ ಪುರಾಣ, ಬಿರುದುಗಳ ಮೂಲ, ಮೊದಲಾದುವುಗಳು ಕಾಂಚಿಗೆ ಹೋಗಿ ತರಲು ತಮಗೆ ಮೂರು ವರುಷಗಳ ಅವಧಿ ಬೇಕೆಂದು ಬಿನ್ನವಿಸಿ ಕೊಳ್ಳಲು ಆಗ ಮಹಾರಾಜರು ಸಂತೋಷಪಟ್ಟು ಆಗಲೆಂದು ಒಪ್ಪಿದ್ದಲ್ಲದೆ ಆ ಅವಧಿಯವರೆಗೆ ಮೊದಲಿನಂತೆಯೇ ನಿಮ್ಮ ಬಿರುದುಗಳನ್ನು ನೀವು ಹೊಗಳಿಸಿಕೊಳ್ಳ ಬಹುದೆಂದು ಮುಕ್ತರಾಜ ಪ್ರಮುಖರಿಗೆ ಆಜ್ಞೆಯನ್ನಿತ್ತರು. ಅದನ್ನು ಕೇಳಿದ ಪರಿ ವಾರದವರೂ, ರಾಜಸಭಾಪ್ರಮುಖರೂ, ಸಕಲ ಪ್ರಜೆಗಳೂ ಮುಕ್ತರಾಜವಂಶ ಪ್ರಮು ಖರೂ ಸಂತೋಷಪಟ್ಟರು.

ತದನಂತರ ಐದುಪ್ರನೂರಿ ನಾಗರೌತು ಎಂಬಾತನು ಬೇರೆ ಬೇರೆ ಊರು ಗಳಲ್ಲಿರುವ ಮುಕ್ತರಾಜವಂಶಸ್ಥರನ್ನು ಆಪ್ತರ ಮುಖೇನ ಕರೆಸಲು ಆಗ ಬಂದವರು ಗಳ್ಯಾರೆಂದರೆ :–

(1) ಪೆನುಗೊಂಡ ವೆಂಕಟರೌತು, (2) ಕೊಟುಕುಳ್ಳ ಮಲ್ಲರೌತು,
(3) ಮುಮ್ಮಾರಿ ನಾಗರೌತು, (4) ಪುಲಿತಲ ನಾಗರೌತು,
(5) ಪೈಡಿಬೂರಗ ಗುರುವಾರೌತು, (6) ಪೈಡಿಪನಿ ಮಲ್ಲರೌತು,
(7) ಗುತ್ತಿ ವೆಂಕಟರೌತು, (8) ಬತ್ತಿಯವರ ಬೈಚರೌತು,
(9) ವೆಂಕಟಗಿರಿ ತಿಪ್ಪರೌತು, (10) ರಾಯದುರ್ಗದ ರಾಜರೌತು,
(11) ಬಂಟರೌತು, (12) ಭೀಮರೌತು,
(13) ಕೊಳ್ಳಾಲ ಮಲ್ಲರೌತು, (14) ಆನೆಗೊಂದಿ ಅಂಕರೌತು,

(15) ಮುಡಿವಾಯಿ ಶ್ರೀಪತಿರೌತು, (16) ದುದ್ದಿಲ ತಿಪ್ಪಲರೌತು
(17) ರೂಪನಗುಡಿ ಮಾಧವರೌತು, (18) ಉಯ್ಯಾಲ ನಾಗರೌತು,
(19) ಚಂದ್ರಗಿರಿ ದಾಸರೌತು, (20) ನಾರಣವನದ ನಾಗರೌತು,
(21) ಸಿದ್ಧವಟದ ವರದರೌತು, (22) ಕಂದನೂರಿ ಸರ್ವರೌತು,
(23) ಮುಸವಿಮಡಗು ಲಿಂಗರೌತು, (24) ಪಾನಗಂಟಿ ರಾಮರೌತು,
(25) ಆದವಾಣಿ ವಿಜಯರೌತು, (26) ಗೊಡಗಲ ಕೃಷ್ಣರೌತು,
(27) ಭುವನಗಿರಿ ಈಶ್ವರರೌತು,

ಮೊದಲಾದವರು ವಿಜಯನಗರಕ್ಕಾಗಮಿಸಲು ನಗರದ ದೂರ್ವಾಸಮುನಿ ಗೋತ್ರದ ಪ್ರಮುಖರೂ ಮತ್ತು ರಾಜಸಮ್ಮುಖದ ಮಲ್ಲಪ್ಪನವರೂ, ಸಂಗಪ್ಪನವರೂ ಸಹ ಸಭೆ ಸೇರಿದಾಗ ಊರುಗಳಿಂದ ಬಂದಂಥಾ ಮುಕ್ತರಾಜ ವಂಶದವರು ನಮ್ಮೆಲ್ಲರನ್ನು ಕರೆಸಲು ಕಾರಣವೇನೆಂದು ಕೇಳಲು ಆಗ ಮುಮ್ಮಡಿ ರಾಜವೀರರೌತು ಎದ್ದು ಸಭೆಗೆ ನಮಸ್ಕರಿಸಿ ದೀಪಾವಳಿ ಹಬ್ಬದ ದೀಪಾರಾಧನೆಯ ಮಹೋತ್ಸವದಲ್ಲಿ ಜರುಗಿದ ಪ್ರಕರಣವನ್ನೂ ರಾಜಸಭೆಯಲ್ಲಾದ ವಿಚಾರವನ್ನೂ ಸಭೆಯಲ್ಲಿ ನೆರೆದವರೆಲ್ಲರಿಗೂ ಹೇಳಿ, ಇದಕ್ಕೆ ಪರಿಹಾರವನ್ನು ಸಭೆಯ ಪ್ರಮುಖರು ಪರಿಹಾರ ಮಾಡಬೇಕೆಂದು ವಿಜ್ಞಾಪಿಸಲು ಆಗ ಸಭೆಯಲ್ಲಿದ್ದ ಚಂದ್ರಗಿರಿ ದಾಸರೌತು, ಪಾನಗಂಟಿ ರಾಮರೌತು, ಮತ್ತು ಗೊಡಗಲ ಕೃಷ್ಣರೌತುಯವರು ಕಾಂಚಿಯಲ್ಲಿ ನಮ್ಮ ಕುಲಪುರಾಣವು ನಮ್ಮ ಗುರುಗಳ ಬಳಿ ಇರುವುದು ಅವರಲ್ಲಿಗೆ ಈ ಸಭೆಯಲ್ಲಿರುವ ಕೆಲವರನ್ನು ಕಳುಹಿಸಿ ತರಿಸಬೇಕೆಂದು ಹೇಳಲಾಗಿ ಆಗ ಸಭೆಯಿಂದ ಕೆಲವರನ್ನು ಕಳುಹಿಸಲು ನಿರ್ಧರಿಸಿದರು ಅವರುಗಳ್ಯಾರೆಂದರೆ

(1) ಮುಮ್ಮಡಿ ರಾಜವೀರರೌತು, (2) ಮಲ್ಲದೇವರ ಮಲ್ಲರೌತು,
(3) ಮುಸವಿಮಡಗು ಲಿಂಗರೌತು, (4) ಪಾನಗಂಟಿ ರಾಮರೌತು,
(5) ಸಿದ್ಧವಟದ ವರದರೌತು, (6) ಗೊಡುಗಲ ಕೃಷ್ಣರೌತು,
(7) ಭುವನಗಿರಿ ಈಶ್ವರರೌತು, (8) ಆನೆಗೊಂದಿ ಅಂಕರೌತು,
(9) ರೂಪನಗುಡಿ ಮಾಧವರೌತು (10) ನಾರಣವನದ ನಾಗರೌತು,

ಇವರುಗಳನ್ನು ಕಳುಹಿಸಲು ಇವರುಗಳ ಕರ್ಚಿಗಾಗಿ ಏಳನೂರು ವರಹಗಳನ್ನು ಕೊಟ್ಟು ಆಂಗೀರಸನಾಮ ಸಂವತ್ಸರ ಮಾಘಮಾಸದಲ್ಲಿ ಕಳುಹಿಸಲು ಅವರುಗಳು ಕಾಂಚಿಗೆ ಬಂದು ಅಲ್ಲಿ ಗುರುಗಳಾದ ನಲ್ಲಾಚಕ್ರವರ್ತಿ ತಿರುವೆಂಗಡೈಯ್ಯಂಗಾರ್ ರವರಿಗೂ ಕಾಂಚಿಯ ಸಕಲ ವರ್ಣಾಶ್ರಮಧರ್ಮಗಳ ಪ್ರಮುಖರಿಗೂ ಮತ್ತು ರಾಜಕರ್ಮಚಾರಿ ಗಳಿಗೂ ಮತ್ತು ದೇವಸ್ಥಾನಗಳ ಧರ್ಮದರ್ಶಿಗಳಿಗೂ ತಾವುಗಳು ಬಂದಿರುವ ವಿಚಾರವನ್ನು ತಿಳಿಸಲು ಅಲ್ಲಿನ ಪ್ರಮುಖರೂ ದೇವಸ್ಥಾನದ ಮುಖ್ಯಸ್ಥರೂ ಮತ್ತು

ನಲ್ಲಾರ್‍ಚಕ್ರವರ್ತಿ ತಿರುವೆಂಗಡೈಯ್ಯಂಗಾರರೂ ಸಮಾಲೋಚಿಸಿ ಕಾಂಚಿಯ ಮುಕ್ತೇಶ್ವರ ದೇವಸ್ಥಾನದಲ್ಲಿದ್ದ ತಾಂಬ್ರ ಶಾಸನಗಳನ್ನು ತೆಗೆಸಿ ಅದರಲ್ಲಿದ್ದ ಮುಕ್ತರಾಜ ಚರಿತ್ರವೂ ಇವರ ಬಿರುದಾವಳಿಗಳೂ ಸಹ ಅಲ್ಲಿನ ವಿದ್ವತ್ ಸಭೆಯಲ್ಲಿ ನಲ್ಲಾನ್ ಚಕ್ರವರ್ತಿ ತಿರುವೆಂಗಡ ಅಯ್ಯಂಗಾರರು ಶೃತಪಡಿಸಲು ಸಭೆಯ ವಿದ್ವತ್ ಜನರು ಸಂತೋಷ ಪಡಲು ಅಲ್ಲಿನ ಮುಕ್ತರಾಜ ವಂಶಸ್ಥರಾದ ಘಂಟಿಕೋಟೆ ಭೈಜರೌತು, ಕತ್ತಿ ಮಲ್ಲರೌತು ಸೇರಿ ಪ್ರಯಾಣ ಮಾಡಿದ ಎರಡು ವರುಷ ಮೂರು ತಿಂಗಳ ನಂತರ ಗುರುಗಳ ಮತ್ತು ಪುರಾಣ ಬಿರುದಾವಳಿಗಳ ಸಮೇತ ವಿಜಯನಗರಕ್ಕಾಗಮಿಸಿ ಕುಲಬಾಂಧವರಿಗೂ, ರಾಜಪ್ರತಿನಿಧಿ ತರುವುಕಲ ಮಲ್ಲಪ್ಪನವರೇ ಮೊದಲಾದ ಪ್ರಮುಖರಿಗೂ ತಿಳಿಸಲು ಆಗ ರಾಜಪ್ರತಿನಿಧಿ ತರುವುಕಲ ಮಲ್ಲಪ್ಪನು ರಾಜರಿಗೂ ಇತರ ಪ್ರಮುಖರಿಗೂ ಈ ಸಂಗತಿಯನ್ನರುಹಿ ಶ್ರೀ ವಿರೂಪಾಕ್ಷ ದೇವಾಲಯದಲ್ಲಿ ರಾಜಸಭೆಯನ್ನು ಏರ್ಪಡಿಸಲು ಅಲ್ಲಿ ಸಮಸ್ತ ವರ್ಣ ಪ್ರಮುಖರೂ ವಿದ್ವತ್ ಶಿಖಾಮಣಿಗಳೂ ಸಭೆ ಸೇರಿರಲು ಅಲ್ಲಿಗೆ ಮುಕ್ತರಾಜ ವಂಶದವರು ತಮ್ಮ ಗುರುಗಳಾದ ನಲ್ಲಾನ್ ಚಕ್ರವರ್ತಿ ತಿರುವೆಂಗಡ ಅಯ್ಯಂಗಾರರನ್ನು ಮುಂದುಮಾಡಿ ಕೊಂಡು ಸಭಾಪ್ರವೇಶವನ್ನು ಮಾಡಲು ಆಗ ರಾಜರ ಅಪ್ಪಣೆಯಂತೆ ಸಭೆಯಲ್ಲಿ ನಲ್ಲಾನ್ ಚಕ್ರವರ್ತಿ ತಿರುವೆಂಗಡ ಅಯ್ಯಂಗಾರರು ಶ್ರೀ ಮುಕ್ತಋಷಿ ಉತ್ಪತ್ತಿಯ ಚರಿತ್ರೆ ಮತ್ತು ಮುಕ್ತರಾಜರ ವಂಶಾವಳಿ ಅವರ ಬಿರುದಾವಳಿಗಳು ಮೊದಲಾದ ಸಕಲ ಶಾಸ್ತ್ರ ಸಮ್ಮತ ಪುರಾಣವನ್ನು ಸಭೆಯಲ್ಲಿ ಪಠಿಸಲು ಅದನ್ನು ಕೇಳಿದ ರಾಜರೂ ಮತ್ತು ಸಭಾಸದರೆಲ್ಲರೂ ಸಂತೋಷಪಟ್ಟರು ಆಗ ಮಹಾರಾಜರು ಈ ರೀತಿ ಅಪ್ಪಣೆ ಕೊಡಿಸಿದರು. ಅದೇನೆಂದರೆ ಈ ಮುಕ್ತರಾಜ ಪುರಾಣವನ್ನು ಐದು ಪ್ರತಿಗಳು ಮಾಡಿಸಿ ರಾಜ್ಯಕ್ಕೆ ಒಂದು, ಮುಕ್ತರಾಜ ವಂಶಸ್ಥರಿಗೆ ಒಂದು, ಶ್ರೀ ವಿರೂಪಾಕ್ಷ ಸನ್ನಿಧಿಗೆ ಒಂದು, ಗುರುಮಠಕ್ಕೆ ಒಂದು ಮತ್ತು ಪಣಕಟ್ಟಳೆಯವರಿಗೆ ಒಂದು ಕೊಡುವುದೆಂದೂ ಮತ್ತು ಮುಕ್ತರಾಜ ವಂಶಸ್ಥರಿಗೆ ತಮ್ಮ ಪೂರ್ವ ಬಿರುದಾವಳಿಗಳನ್ನು ಹೊಗಳಿಸಿಕೊಳ್ಳುವುದಕ್ಕೂ ಪುರಾಣ ಗ್ರಂಥಗಳಿಂದ ತೋರಿಸಿರು ವುದರಿಂದ ಇವರಿಗೆ ಗ್ರಾಮಗಳು ಮಾನ್ಯಗಳಾಗಿ ಕೊಡಲ್ಪಡಲಿ ಮತ್ತು ಇದನ್ನು ಪಠಿಸಿದ ನಲ್ಲಾನ್ ಚಕ್ರವರ್ತಿ ತಿರುವೆಂಗಡ ಅಯ್ಯಂಗಾರ್‍ರವರಿಗೆ ರಾಜೋಚಿತ ಮರ್ಯಾದೆ ಮಾಡತಕ್ಕದೆಂದು ನಿರೂಪವನ್ನು ಕೊಡಿಸಿದರು. ತದನಂತರ ಮುಕ್ತರಾಜ ಕುಲಬಾಂಧವರೆಲ್ಲರೂ ತಮ್ಮ ಗುರುಗಳಿಗೆ ಯಾವ ರೀತಿ ಸತ್ಕರಿಸಬೇಕೆಂದು ಯೋಚಿಸಿ ದವರಾಗಿ ಆಗ ಸಕಲರೂ ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಸೇರಿ ಗುರುಗಳನ್ನು ರಾಜೋಪಚಾರದ ಪರಿಯಲ್ಲಿ ಮೆರವಣಿಗೆಯಲ್ಲಿ ಸ್ವಾಮಿ ಸನ್ನಿಧಾನಕ್ಕೆ ಕರೆದುಕೊಂಡು ಬಂದು ರಾಜಪ್ರತಿನಿಧಿಗಳನ್ನೂ ಮೈಲಾರದೇವರ ಭಕ್ತರಾದ ಮೇಧಿನಿಯವರನ್ನೂ ದೇವಬ್ರಾಹ್ಮಣರನ್ನೂ ಸಭೆಗೆ ಕರತಂದು ಸಕಲರ ಸಮಕ್ಷಮದಲ್ಲಿ ನಲ್ಲಾನ್ ಚಕ್ರವರ್ತಿ ತಿರುವೆಂಗಡಯ್ಯಂಗಾರ್‍ರವರಿಗೆ ಪಾದಪೂಜೆಯನ್ನು ಸಲ್ಲಿಸಿ ಇನ್ನುಮುಂದೆ ಅವರನು

ಕುಲಗುರುಗಳನ್ನಾಗಿ ಘೋಷಿಸಿದಲ್ಲದೆ ಗುರುಗಳಿಗೆ ಶಿಷ್ಯರಾದ ತಮ್ಮಿಂದ ಕಪ್ಪಕಾಣಿಕೆಗಳನ್ನು ಕೊಟ್ಟಿದಲ್ಲದೆಯೂ ಮುಂದೆ ಶಾಶ್ವತವಾಗಿ ಗುರುಗಳಿಗೆ ತಮ್ಮಿಂದ ತಾವುಗಳು ಮಾಡುವ ವೃತ್ತಿ ವಿಧಾನವನ್ನನುಸರಿಸಿ ಪ್ರತಿ ವರ್ಷವೂ ಕಾಣಿಕೆಗಳನ್ನು ಕೊಡುವುದಾಗಿ ಪ್ರಮಾಣವನ್ನು ಮಾಡಿದರು. ಅದರ ವಿವರವೇನೆಂದರೆ ಸರಿಗೆ (ಜರಿ ತೆಗೆಯುವ) ಪೀಟ ಒಂದಕ್ಕೆ ವರ್ಷಕ್ಕೆ ಧರಣವು ಬಂಗಾರದ (ಚಿನ್ನದ ತಗಡು) ರೇಕುಲಕಿ ವರ್ಷಕ್ಕೆ ಧರಣ, ಪಲ್ಲಾಲ ಕೆಲಸಕ್ಕೆ ವರ್ಷಕ್ಕೆ ಧರಣ, ಕತ್ತಿ ಕಠಾರಿ ತಯಾರಕರು ವರ್ಷಕ್ಕೆ ಚೌಲ, ಬಮ್ಮಲ (ಗೊಂಬೆ) ಕೆಲಸಕ್ಕೆ ವರ್ಷಕ್ಕೆ ಚೌಲ, ಸೂದಿ ಕಾಯಕಕ್ಕೆ ವರ್ಷಕ್ಕೆ ಚೌಲ, ಚಿತ್ರಪು (ಚಿತ್ರದ) ಕೆಲಸಕ್ಕೆ ವರ್ಷಕ್ಕೆ ಧರಣ, ಇತರೆ ಕೆಲಸಗಳಿಗೆ ವರ್ಷಕ್ಕೆ ಚೌಲ. ಸ್ಥಪತಿ ಕೆಲಸಕ್ಕೆ ವರ್ಷಕ್ಕೆ ಧರಣ. ವಿಗ್ರಹದ ಲೋಹದ ಕೆಲಸಕ್ಕೆ ವರ್ಷಕ್ಕೆ ಧರಣ. ಮದುವೆಗೆ ಮಾಡ, ನೂತನ ಭವನಾಲಕು (ಹೊಸ ಮನೆಗಳಿಗೆ), ರೂಕ. ಪಲ್ಲಕ್ಕಿಗಳಿಗೆ ವರ್ಷಕ್ಕೆ ಮಾಡ, ದೇವರ ಛತ್ರಿಗಳಿಗೆ ವರ್ಷಕ್ಕೆ ಧರಣ. ಈ ರೀತಿಯಾಗಿ ನಾವುಗಳು ಧರ್ಮಸಾಕ್ಷಿಯಾ ಆಚಾರ್ಯರಾದಗಿ ತಮಗೆ ನಮ್ಮ ಪುತ್ರ ಪೌತ್ರರಾದಿಯಾಗಿ ನಡೆಸಿಕೊಡುತ್ತೇವೆಂದು ಶ್ರೀ ವಿರೂಪಾಕ್ಷ ಸನ್ನಿದಿಯ ಸಮಸ್ತರಿಂದ ತುಂಬಿದ ಸಭೆಯಲ್ಲಿ ಆಚಾರ್ಯರಿಗೆ ಮಾಡಿಕೊಟ್ಟ ಶಾಸನ. ಅಲ್ಲಿಂದ ಕೋಸಲ ಮೊದಲಾದ ಸ್ಥಳಗಳಿಂದ ಬಂದಿದ್ದ ಮುಕ್ತರಾಜ ವಂಶಸ್ಥರು ಗುರುಗಳನ್ನು ಅವರವರ ಊರುಗಳಿಗೆ ಕರೆದುಕೊಂಡು ಹೋಗಿ ಅವರಿಂದ ಶ್ರೀ ನಿಮಿಷಾಂಬಾ ದೇವಿಯ ಮಹಾತ್ಮೆಯನ್ನೂ ಮುಕ್ತರಾಜ ಚರಿತವನ್ನೂ ಓದಿಸಿ ಗುರುಗಳಿಗೆ ಅರ್ಘ್ಯಪಾದ್ಯ ಆಚಮನಗಳಿಂದ ಪೂಜಿಸಿ ತಮ್ಮ ಯಥಾಶಕ್ತಿ ಕಾಣಿಕೆಗಳನ್ನು ಕೊಟ್ಟು ಮುಂದೆಯೂ ವಂಶಪಾರಂಪರ್ಯವಾಗಿ ಹೀಗೆಯೇ ನಡೆಸಿಕೊಡಬೇಕೆಂದು ಗುರುಗಳನ್ನು ಪ್ರಾರ್ಥಿಸಿ ಮುಕ್ತರಾಜ ಕುಲದವರು ಬರೆಸಿಕೊಟ್ಟ ಶಾಸನ.

ಶ್ರೀ ಶ್ರೀ ಚಂದ್ರಗಿರಿ ಶಾಸನ

ಶ್ರೀ ಮುಕ್ತಋಷಿ ವಂಶೋದ್ಭವರು ಚಂದ್ರಗಿರಿಯಲ್ಲಿ ಬರೆಸಿಕೊಟ್ಟ ಶಾಸನದ ವಿವರ :–

ಸ್ವಸ್ತಿ ಸಮಸ್ತ ಸದ್ಗುಣಾಲಂಕಾರ ಪರಮೇಶ್ವರ ವರಪ್ರಿಯಾ ವಿತ್ತಾವದಾನ ಂಧೂಜನಾಧಾರ, ಚೌಷಷ್ಠಿವಿದ್ಯಾವಿಚಕ್ಷಣ, ಸಕಲ ಕಳಾನಿಧಿ, ಭೇಧನ ಸದಾಶಿವ ಹೃದಾಶ್ವಸಂಭವ, ಸಂಗೀತಲೋಲ ಸಾಹಿತ್ಯಪಾರಾಯಣ, ಸರ್ವಾಯುಧ ಪ್ರವೀಣ ಮೇಧಿನೀರಾಯ, ರಾಹುತ್ತರಾಜ್ಯ ಶೃಂಗಾರಹಾರ ದಳಶೃಂಗಾರಹಾರ, ಆಂಧೋಳಿತ ಶೃಂಗಾರಹಾರ, ಗಜದಳ ಶೃಂಗಾರಹಾರ, ಅಶ್ವದಳ ಶೃಂಗಾರಹಾರ, ನರದಳ ಶೃಂಗಾರ ಹಾರ, ಪರದಳ ಶೃಂಗಾರಹಾರ, ಉಭಯದಳ ಶೃಂಗಾರಹಾರ, ಚೀಣಿ ಚೀಣಾಂಬರ

ಧನಾನ್ವಿತವಿಚಾರ, ಅನೀತಿವಿಧೂರ, ನಿರ್ಮಲಚಾರಿತ್ರ, ನಿತ್ಯಪ್ರತಿಪಾಲಕನಾದ ಚತುರಾಗ್ನಿ ಮಧ್ಯೆ ಆದಿಶಕ್ತಿಯನ್ನು ಧ್ಯಾನಿಸಿ ತಪವಂಗೈಯ್ಯಲು ಆಕಸ್ಮಿಕವಾಗಿ ಉದ್ಭವಿಸಿದ ನಿಮಿಷಾಂಬಾದೇವಿ ನಿರ್ಮಿತಾಧಾರ, ಸರ್ವಜೀವ ದಯಾಪರ ಸರ್ವಸಂರಕ್ಷಣಜನಪಾಲಿತ, ಜಾನುಮಂಡಲ ರಾಕ್ಷಸ ಶಿರಶ್ಛೇದನ, ಅಂಧಕಾಸುರಹಾಂಕಾರಮರ್ಧನ, ತಾರಕಾಸುರ ಗಂಡಗಾಸುರ ಗರ್ವಾಂಧಕಾರ ಭಾಸ್ಕರ ಆರ್ಭಟಪುರವಿಹಾರ ಅಮರಕಂಟಕಪುರ ಅಲ್ಲಕಲ್ಲೋಲ ಸೋಮವಂಶಾಬ್ಧಿ ಪರಿಪೂರ್ಣ ಚಂದ್ರೋದಯ ಮುಕ್ತರಾಜ ವೈಭವಾನಂದ ಚಂದ್ರ ವಜ್ರವೈಢೂರ್ಯ ಗೋಮೇಧಿಕ ಪುಷ್ಪರಾಗ ಮರಕತಮಾಣಿಕ್ಯ ದಿವ್ಯನವರತ್ನ ಮಾಲಾಧ್ಯಾಭರಣಭೂಷಿತ ತ್ರೈಂತಿಮ್ಶತ್ಕೋಟಿ ದೇವತ ಸಂರಕ್ಷಣಾರ್ಥವಾಗಿ ಶ್ರೀ ಪರಮೇಶ್ವರನ ಹೃದಯಕಮಲದಲ್ಲಿ ಮುಕ್ತಋಷಿಯಾಗಿ ಜನಿಸಿ ಬ್ರಹ್ಮನಿಗೆ ವಜ್ರಕವಚವನ್ನೂ, ವಿಷ್ಣುವಿಗೆ ರತ್ನಕವಚವನ್ನೂ, ಇಂದ್ರನಿಗೆ ಲೋಹಕವಚವನ್ನೂ, ಯಮನಿಗೆ ಜೀವಕವಚವನ್ನೂ, ಅಗ್ನಿಗೆ ಹೋಮಕವಚವನ್ನೂ, ನೈರುತಿಗೆ ಅರುಣಕವಚವನ್ನೂ, ವರುಣನಿಗೆ ಅಶ್ವಕವಚವನ್ನೂ, ವಾಯುವಿಗೆ ರಾರಾಜ್ಯಕವಚವನ್ನೂ, ಕುಬೇರನಿಗೆ ಜೀವಕವಚವನ್ನೂ ಮಿಕ್ಕ ದೇವತಾಸಮೂಹಕ್ಕೆಲ್ಲಾ ರಣಕವಚಗಳನ್ನೂ ಸಂರಕ್ಷಣಾರ್ಥವಾಗಿ ನಿರ್ಮಿಸಿಕೊಟ್ಟು ದೇವತೆಗಳಿಂದ ರಾಕ್ಷಸರನ್ನು ಸಂಹರಿಸಿ ವಿಜಯಲಕ್ಷ್ಮಿಯನ್ನು ಪಡೆದು ತ್ರಿಕಾಲಸಂಧ್ಯಾ ಜಪ, ತಪ, ನಿತ್ಯಕರ್ಮಾನುಷ್ಟಾನ ಶ್ರೀ ಗಾಯತ್ರಿ ತಪೋನಿಷ್ಟರಾದ ಶ್ರೀ ಮುಕ್ತಋಷಿ ದೂರ್ವಾಸಮುನಿ ಪುತ್ರಿಸಂತತೋದ್ಧಾರ, ಪ್ರಾಣಲಿಂಗಪ್ರತಿಷ್ಠಾಪನಾಚಾರ್ಯ ಚತುರ್ಧಶಲೋಕೋಪಕಾರರಾದ ಶ್ರೀ ಸೋಮವಂಶ ಆರ್ಯಕ್ಷತ್ರಿಯರ ಆದಿಪ್ರಶಸ್ಥ ಬಿರುದುಗಳು ಶುಭಃ. ವಿಜಯೀಭವ ದಿಗ್‌ವಿಜಯೀಭವ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು 1516 ಕ್ಕೆ ಸರಿಯಾದ ವಿಶ್ವಾವಸು ನಾಮಸಂವತ್ಸರ ಆಶ್ವೀಜ ಶುದ್ಧ ದಶಮೀ ಭಾನುವಾರ ಶ್ರೀಮನ್ ಮಹಾಮಂಡಲೇಶ್ವರ ಶ್ರೀ ರಾಜರಾಜಪರಮೇಶ್ವರ, ರಾಜಕಂಠೀರವ, ರಾಜಕಂದರ್ಪ, ರಾಜಮಾರ್ತಾಂಡ, ರಾಜತೇಜೋನಿಧಿ, ರಾಜರಾಜ ಶ್ರೀ ವೀರಪ್ರತಾಪ ಪೆದ್ದವೆಂಕಟಪತಿ ದೇವರಾಯರ ಸಮುಖದಲ್ಲಿ ಶ್ರೀಮದ್‌ವ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಉಭಯ ವೇದಾಂತ ಪ್ರವರ್ತಕರಾದ ತಿರುಮಲನಲ್ಲಾನ್ ಚಕ್ರವರ್ತಿ ವೆಂಕಟಾಚಲಗುರುಗಳ ಕೃಪಾಪಾತ್ರರಾದ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಮಹಾಜನರು ಶ್ರೀ ಶ್ರೀನಿವಾಸ ಕ್ಷೇತ್ರ ಸುವರ್ಣಮುಖೀತೀರ ಚಂದ್ರಗಿರಿಯಲ್ಲಿ ಧಾರಧಾರಾಗ್ರಹಿತವಾಗಿ ಸಮರ್ಪಿಸಿದ ಶಾಸನದ ಕ್ರಮದ ವಿವರಣೆ ಚಂದ್ರಗಿರಿ ರಾಜಾಸ್ಥಾನದಲ್ಲಿ ರಾಜಕುಮಾರರೂ, ರಾಜರ ಅಳಿಯಂದಿರೂ. ರಾಜರ ಮೊಮ್ಮಕ್ಕಳೂ ರಾಜಸಭಾಸದರೂ, ಧರ್ಮಪರಾಯಣರಾದ ಬ್ರಾಹ್ಮಣವೃಂದವೂ ಸಕಲಶಾಸ್ತ್ರ ಪಂಡಿತರೂ, ಸಕಲ ವರ್ಣಾಶ್ರಮದ ಮುಖಂಡರೂ, ರಾಜರಾಜ ಶ್ರೀ ಪೆದ್ದವೆಂಕಟಪತಿದೇವರಾಯರು ಸಿಂಹ್ಾಸನಾರೂಢರಾಗಿದ್ದಾಗ ಸಕಲ ದೇಶಗಳಿಂದ ಬಂದಿದ್ದ ಮುಕ್ತರಾಜವಂಶ ಪ್ರಮುಖರನ್ನೂ ಚಂದ್ರಗಿರಿಯ ಮುಕ್ತರಾಜ ವಂಶ ಪ್ರಮುಖರನ್ನೂ, ಪಲ್ಲಕ್ಕಿ ನಾರಾಯಣರೌತು, ಪಾನಗಂಟಿ ಕೃಷ್ಣರೌತು,

ಗೊಡುಗಲ ವೆಂಕಟರೌತು, ತಕ್ಕೋಲ ರಾಯಚಿತ್ತಾರು ವೀರಪ್ರತಾಪರೌತು ಈ ನಾಲ್ಕು ಮಂದಿಯೂ ಮುಖಂಡರಾಗಿ ಮುಕ್ತರಾಜ ವಂಶಸ್ಥರನ್ನು ರಾಜಸಭೆಗೆ ಕರೆದುಕೊಂಡು ಹೋಗುವ ವಿಧಾನ ಹೇಗೆಂದರೆ, ಮುಕ್ತರಾಜ ಕುಲದವರೆಲ್ಲರಿಗೂ ಚೀಣಿ ಚೀಣ ಪೀತಾಂಬರಗಳು ಯಜ್ಞೋಪವೀತದ ಜೊತೆಗೆ ಚಿನ್ನದ ಉತ್ತರ ಜಂಜವು, ತಲೆಗೆ ರಾಜರು ಧರಿಸುವಂಥಾ ಜರೀಕೆಲಸದ ಟೋಪಿ (ಕಿರೀಟ) ಗಳನ್ನು ಧರಿಸಿ ರಾಜಸಭೆಗೆ ಬರುತ್ತಿರಲು ರಾಜಮಹಲ್ಲಿನ ಹಜಾರದಲ್ಲಿ ನಿಂತಿದ್ದ ರಾಜಕುಮಾರರೂ, ರಾಜರ ಅಳಿಯಂದರೂ ಇವರುಗಳು ಬರುವ ವೈಭವವನ್ನು ಕಂಡು ಇವರನ್ನು ಹಜಾರದಲ್ಲಿಯೇ ನಿಲ್ಲಿಸಲು ಚಾರರಿಗೆ ಅಪ್ಪಣೆಕೊಟ್ಟರು. ಆಗ ಮುಕ್ತರಾಜವಂಶ ಪ್ರಮುಖ ಮುಖಂಡ ರಾದ ನಾಲ್ವರು ರಾಜರ ಬಳಿಗೈದು ತಮಗಾದ ಪರಾಭವವನ್ನು ವಿಜ್ಞಾಪಿಸಲು ಆಗ ರಾಜರು ತಮ್ಮ ಕುಮಾರರನ್ನೂ ಅಳಿಯಂದರನ್ನೂ ಕರೆಸಿ ಕೇಳಲಾಗಿ ಅದಕ್ಕೆ ಅವರುಗಳು ರಾಜರಿಗೆ ವಂದಿಸಿ, ಮುಕ್ತರಾಜವಂಶದವರು ಬರುತ್ತಿದ್ದ ವೈಭವವನ್ನೂ ಅವರುಗಳು ಧರಿಸಿದ್ದ ಚಿನ್ಹೆಗಳೂ ಇವರಿಗೆ ಇದೆಯೇ ಎಂದು ನಮಗೆ ಶಂಕೆಬರಲಾಗಿ ನಾವು ಮುಕ್ತರಾಜವಂಶದವರು ತಮ್ಮ ಸಭೆಗೆ ಬರದಂತೆ ತಡೆದೆವೆಂದು ವಿಜ್ಞಾಪಿಸಿದರು. ಆಗ ಮಹಾರಾಜರು ಮುಕ್ತರಾಜವಂಶ ಪ್ರಮುಖರನ್ನು ಕೇಳಿದ ವಿವರ ನಿಮ್ಮ ಕುಲ ಯಾವುದು. ನಿಮಗೆ ಯಜ್ಞೋಪವೀತಗಳೂ, ಚಿನ್ನದ ಯಜ್ಞೋಪವೀತಗಳೂ, ನೀವುಗಳು ಧರಿಸಿರುವ ಮೇಲುಟೊಪ್ಪಿಗೆಗಳೂ ಮೊದಲಾದ ವೈವಿಧ್ಯಗಳಿಗೆ ಕಾರಣ ವೇನೆಂದು ಕೇಳಿದರು. ಆಗ ಮುಕ್ತರಾಜವಂಶ ಪ್ರಮುಖರು ಕೊಟ್ಟ ಉತ್ತರದ ವಿವರ, ನಮಗೆ ಈ ಕಲಿಯುಗದಲ್ಲಿ ಮಾತ್ರವಲ್ಲದೆ, ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಮಹಾಯುಗಗಳಲ್ಲಿಯೂ ಪೂಜ್ಯನಾದ ಪರಮೇಶ್ವರನಿಗೆ ಹೃದಯಕಮಲದಲ್ಲಿ ನಮ್ಮ ಮೂಲಪುರುಷನಾದ ಮುಕ್ತರಾಜನುದ್ಭವಿಸಿ ದೂರ್ವಾಸಮುನಿ ಪುತ್ರಿಯೊಡ ಗೂಡಿದ ವಂಶವಾದ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂದು ನಮ್ಮ ನಾಮಧ್ಯೇಯವು ನಮಗೆ ತ್ರಿಕಾಲಸಂಧ್ಯಾ, ಜಾತಕರ್ಮಾದಿ ಷೋಡಷಕರ್ಮಗಳನ್ನೂ ನಾವು ಶ್ರೀ ಪರಮೇಶ್ವರನ ಆಜ್ಞಾನುಸಾರವಾಗಿ ನಡೆಸಿಕೊಂಡು ಬರುತ್ತಿರುವೆವು ಮತ್ತು ನಾವು ಮಾಡುತ್ತಿರುವ ನಾನಾ ವಿಧವಾದ ಚಿತ್ರ ವಿಚಿತ್ರ ಕೆಲಸಗಳು. ಸಕಲಪುರಾಣಗಳಿಗೆ ಮೂಲವಾದ ಬ್ರಂಹ್ಮಾಂಡಪುರಾಣದಲ್ಲಿ ನಮ್ಮ ಮೂಲ ಪುರುಷನ ಉತ್ಪತ್ತಿ ನಮ್ಮ ವಂಶಾವಳಿ ಬಿರುದುಗಳು ಮತ್ತು ನಾವುಗಳು ಮಾಡುತ್ತಿರುವ ಕೆಲಸಗಳ ವಿವರವೂ ಎಲ್ಲವೂ ಇರುವುದಲ್ಲದೆ, ಹಿಂದೆ ತಮ್ಮ ಪರಮಪೂಜ್ಯರೂ ಸಕಲ ರಾಜರಾಜ ಪರಮೇಶ್ವರರೂ ಆಗಿದ್ದ ಪ್ರೌಡದೇವರಾಯರ ಕಾಲದಲ್ಲಿ ಪಣಕಟ್ಟಿನ ವಿಚಾರದಲ್ಲಿ ನಾವು ಕಾಂಚಿಯಿಂದ ನಮ್ಮ ಗುರುಗಳನ್ನು ಕರಿಸಿ ಆಗ ನಡೆದ ಸಕಲ ವಿಷಯಗಳನ್ನು ನಿವೇಧಿಸಲು ಅದನ್ನು ಕೇಳಿದ ಮಹಾರಾಜರು ನಿಮ್ಮ ಗುರುಗಳನ್ನು ನಮ್ಮ ಸಭೆಗೆ ಕರೆಸುವಂತೆ ಆಜ್ಞಾಪಿಸಿದರು. ಆಗ ಮುಕ್ತರಾಜವಂಶ ಪ್ರಮುಖರು ಕಾಂಚಿಗೆ ಹೋಗಿ ಅಲ್ಲಿಂದ ತಮ್ಮ ಕುಲಗುರುಗಳಾದ ತಿರುಮಲ ನಲ್ಲಾರ್ ಚಕ್ರವರ್ತಿ ತಿರುವೆಂಗಡ

ಅಯ್ಯಂಗಾರರ ವಂಶಸ್ಥರಾದ ವೆಂಕಟಾಚಲಾಚಾರ್ಯರವರಿಗೆ ತಾವುಗಳು ಬಂದ ಸಕಲ ವಿಷಯಗಳನ್ನೂ ನಿವೇಧಿಸಿ, ಗುರುಗಳ ಸಹಿತರಾಗಿ ಚಂದ್ರಗಿರಿಗೆ ಬಂದು ಸಕಲದೇಶಗಳ ಮುಕ್ತರಾಜ ಪ್ರಮುಖರನ್ನೂ ಕರೆಸಿದನಂತರ ರಾಜರಲ್ಲಿ ಭಿನ್ನವಿಸಿಕೊಳ್ಳಲು ಆಗ ಮಹಾರಾಜರು ಸಭೆಯನ್ನು ಕರೆದು ಒಡ್ಡೋಲಗದಲ್ಲಿರುವ ಸಮಯದಲ್ಲಿ ಮುಕ್ತರಾಜ ವಂಶಸ್ಥರ ಕುಲಗುರುಗಳಾದ ತಿರುಮಲನಲ್ಲಾನ್ ಚಕ್ರವರ್ತಿ ವೆಂಕಟಾಚಲಾಚಾರ್ಯರಿಗೆ ಕೊಡಿಸಿದ ಆಜ್ಞೆ ಏನೆಂದರೆ ಈ ಮುಕ್ತರಾಜವಂಶದವರ ಕುಲವಾವುದು ಇವರ ಪೂರ್ವೋತ್ತರಗಳನ್ನು ವಿವರವಾಗಿ ಸಭೆಗೆ ಉತ್ತರಿಸಬೇಕೆಂದು ಆಜ್ಞಾಪಿಸಿದರು.

ಆಗ ಆಚಾರ್ಯರಾದ ತಿರುಮಲನಲ್ಲಾನ್ ಚಕ್ರವರ್ತಿ ವೆಂಕಟಾಚಲಾಚಾರ್ಯರು ಪಠಿಸಿದ ವಿವರ: ಶ್ರೀ ಶ್ರೀ ಮಹಾರಾಜರೆ, ಪಂಡಿತಶ್ರೇಷ್ಠರಾದ ದೇವಬ್ರಾಹ್ಮಣರೇ ಮತ್ತು ಸಕಲ ವರ್ಣಾಶ್ರಮ ಧರ್ಮನಾಯಕರುಗಳೇ ಈ ವಂಶದವರ ಮೂಲಪುರುಷನಾದ ಮುಕ್ತರಾಜನು ಪೂರ್ವದಲ್ಲಿ ಶ್ರೀ ಪರಮೇಶ್ವರನ ಹೃದಯಕಮಲದಲ್ಲಿ ಜನಿಸಿ ಜಾನುಮಂಡಲ ಮೊದಲಾದ ರಾಕ್ಷಸರನ್ನು ಕೊಂದು ಸಕಲ ದೇವತೆಗಳನ್ನೂ ಸಂತೋಷಪಡಿಸಿದನು. ಮುಂದೆ ಕಾಲಾನುಕ್ರಮದಲ್ಲಿ ಚಿತ್ರಕನೆಂಬ ರಾಜನಿಗೆ ರೋಮಶ ಋಷಿಯ ಶಾಪ ಬಂದು ಆಗಿನಿಂದ ಈ ವಂಶಸ್ಥರು ಚಿತ್ರ ವಿಚಿತ್ರವಾದ ಅರವತ್ತು ನಾಲ್ಕು ವಿದ್ಯೆಗಳಲ್ಲಿಯೂ ಪಾಂಡಿತ್ಯರಾಗಿ ಸಕಲ ಬಿರುದುಗಳುಳ್ಳವರೆಂದು ಕಂಚಿಯ ಶ್ರೀ ಏಕಾಂಬರೇಶ್ವರಸ್ವಾಮಿಯ ಸನ್ನಿಧಿಯ ತಾಂಬ್ರ ಶಾಸನಗಳು ಮತ್ತು ಶ್ರೀ ಮುಕ್ತೇಶ್ವರಸ್ವಾಮಿಯ ಸನ್ನಿಧಿಯ ತಾಂಬ್ರಶಾಸನಗಳಿಂದಲೂ ಇವರಿಗೆ ಸಕಲ ಬಿರುದುಗಳು ಇರುವುದೆಂದು ವಿಜ್ಞಾಪಿಸಲು ಆಗ ಸಭೆಯಲ್ಲಿದ್ದ ಪಂಡಿತರು ಇವುಗಳು ಈಚೆಗೆ ಪ್ರಕಟಪಟ್ಟವಾದ್ದರಿಂದ ಇದು ಶಾಸ್ತ್ರಸಮ್ಮತವಲ್ಲವೆಂದು ಖಂಡಿಸಿದರು ಆಗ ಆಚಾರ್ಯರಾದ ವೆಂಕಟಾಚಲಾಚಾರ್ಯರು ಬ್ರಹ್ಮಾಂಡಪುರಾಣದಲ್ಲಿನ ವರ್ಣವೈಭವಕಾಂಡದಲ್ಲಿ ಶ್ರೀ ಮುಕ್ತರಾಜಚರಿತವನ್ನು ಬ್ರಹ್ಮನಾರದ ಸಂವಾದ ರೂಪದಲ್ಲಿರುವ ಕಥೆಯನ್ನು ಅರ್ಥವಿವರವಾಗಿ ಪಠಿಸಿ ಮತ್ತು ಹಿಂದೆ ಶಾಲಿ 1372 ರಲ್ಲಿ ಶ್ರೀ ಪ್ರೌಢದೇವ ಮಹಾರಾಜರ ಕಾಲದಲ್ಲಿ ಪಣಕಟ್ಟಿನ ವಿಚಾರವಾಗಿ ನಡೆದ ವಿಷಯವನ್ನು ಕೂಲಂಕುಶವಾಗಿ ತಮ್ಮ ವಂಶಪಾರಂಪರ್ಯವಾಗಿ ಬಂದಿದ್ದ ತಮ್ಮಗಳ ಬಳಿಯಿರುವ ಶಿಷ್ಯರು ಪ್ರಮಾಣಪೂರ್ವಕವಾಗಿ ಬರೆದುಕೊಟ್ಟಿರುವ ದಾಖಲೆಗಳನ್ನು ಸಭೆಯ ಮುಂದಿಡಲು ಆಗ ಪಂಡಿತರು ಅವುಗಳನ್ನು ಪರಾಂಬರಿಸಿ ಸರಿಯಾಗಿದೆ ಎಂದೂ ಮುಕ್ತರಾಜವಂಶಸ್ಥರಿಗೆ ಸಕಲ ಬಿರುದಾವಳಿಗಳು ಸಲ್ಲತಕ್ಕದೆಂದೂ ತಮ್ಮಗಳ ಅಭಿಪ್ರಾಯವನ್ನು ಮಹಾರಾಜರಿಗೆ ಬಿನ್ನವಿಸಲು ಆಗ ಮಹಾರಾಜರೇ ಮೊದಲಾದ ಸಭೆಯ ಸಕಲರೂ ಸಂತೋಷಪಟ್ಟರು.

ಆಗ ಮಹಾರಾಜರು ಶ್ರೀ ತಿರುಮಲನಲ್ಲಾನ್ ಚಕ್ರವರ್ತಿ ವೆಂಕಟಾಚಲಾಚಾರ್ಯರವರಿಗೆ ಖಿಲ್ಲತ್ತುಗಳನ್ನು ಕೊಟ್ಟು ರಾಜಸಭಾ ಮರ್ಯಾದೆಯನ್ನು ಮಾಡಿಸಿ ತದನಂತರ

ಆಚಾರ್ಯರನ್ನು ಈ ರೀತಿ ಪ್ರಶ್ನಿಸಿದರು ಆಚಾರ್ಯರೇ ಈ ಮುಕ್ತರಾ. ವಂಶಸ್ಥರು ಧೈರ್ಯ ಸಾಹಸಗಳಿಂದ ಇಷ್ಟು ಕಲಾಪಗಳನ್ನು ಮಾಡಿರುವುದರಿಂದ ಇವರಿಗೆ ಯಾವ ರೀತಿಯು ಸಭಾಮರ್ಯಾದೆಯನ್ನು ಮಾಡಬೇಕೆಂಬುದು ತಾವು ತಿಳಿಸಿದರೆ ಆ ರೀತಿ ತಮ್ಮ ಆಜ್ಞೆಯು ಪ್ರಕಾರ ಇವರಿಗೆ ಮರ್ಯಾದೆಯನ್ನು ಮಾಡಲಾಗುವುದೆಂದು ಆಜ್ಞೆಯಿತ್ತರು. ಆ ಸಮಯದಲ್ಲಿ ಆಚಾರ್ಯ ರಾದ ವೆಂಕಟಾಚಲಾಚಾರ್ಯರು ಅಲ್ಲಿ ನೆರೆದಿದ್ದ ವೃದ್ಧರು ಮತ್ತು ಪಂಡಿತರೊಡಗೂಡಿ ಸಮಾಲೋಚಿಸಿ, ತದನಂತರ ರಾಜರಿಗೆ ಈರೀತಿ ವಿಜ್ಞಾಪಿಸಿದರು. ಶ್ರೀಶ್ರೀ ಮಹಾರಾಜರೆ ಈ ಮುಕ್ತರಾಜ ವಂಶೋದ್ಭವರಾದ ಶ್ರೀ ಸೋಮವಂಶದವರಿಗೆ ಸಕಲಶಾಸ್ತ್ರ ಸಮ್ಮತವಾದ ಷೋಡಶಕರ್ಮಗಳೂ ಚತುರ್ವೇದಗಳಿಂದ ಯುಕ್ತವಾದ ಸಕಲ ಬಿರುದುಗಳೂ ಸಕಲ ರಾಜಮರ್ಯಾದೆಗಳೂ ಸಲ್ಲುವುದರಿಂದ ತಾವುಗಳು ಇಷ್ಟ ಪಟ್ಟಲ್ಲಿ ಇವರುಗಳನ್ನು ರಾಜಮರ್ಯಾದೆಗಳಿಂದ ಶೋಭಿತವಾದ ಆನೆಗಳ ಮೇಲೆ ಕುಳ್ಳಿರಿಸಿ ಚಂದ್ರಗಿರಿಯ ಮುಖ್ಯರಾಜಬೀದಿಗಳಾದ ಹದಿನಾರರಲ್ಲಿ ಇವರನ್ನು ಮೆರವಣಿಗೆ ಮಾಡಿಸುವುದೆಂದು ಬಿನ್ನವಿಸಿದರು. ಇದನ್ನು ಕೇಳಿದ ಸಭೆಯವರೆಲ್ಲರೂ ಜಯಘೋಷಣೆ ಗಳನ್ನು ಮಾಡಲುಆಗ ಮಹಾರಾಜರುಗಳ ಅಪ್ಪಣೆಪ್ರಕಾರ ಮುಕ್ತರಾಜ ಪ್ರಮುಖರನ್ನು ಸಕಲ ವಜ್ರವೈಡೂರ್ಯಗಳಿಂದ ಅಲಂಕೃತವಾದ ಆನೆಗಳ ಮೇಲೆ ಕುಳ್ಳಿರಿಸಿ ಚಂದ್ರಗಿರಿಯ ರಾಜಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯನ್ನು ಮಾಡಿಸಿದರು. ತದನಂತರ ಸಕಲ ದೇಶ ಗಳಿಂದ ಬಂದಿದ್ದ ಮುಕ್ತರಾಜವಂಶದವರು ಶ್ರೀ ಗುರುಗಳನ್ನು ಶ್ರೀ ವೆಂಕಟೇಶ್ವರ ಸನ್ನಿಧಿಗೆ ಮೆರವಣಿಗೆಯಲ್ಲಿ ಕರದೊಯ್ದು ಅಲ್ಲಿ ಸಕಲ ಜನಾಂಗದ ಎದುರಿನಲ್ಲಿ ತಾವು ಗಳೆಲ್ಲರೂ ಶ್ರೀ ವೆಂಕಟೇಶ್ವರನಿಗೂ ಸಕಲರಿಗೂ ನಮಸ್ಕರಿಸಿ. ಶ್ರೀ ತಿರುಮಲನಲ್ಲಾನ್ ಚಕ್ರವರ್ತಿ ವೆಂಕಟಾಚಲಾಚಾರ್ಯರಿಗೆ ಪಾದಪೂಜೆಯನ್ನು ಮಾಡಿ ತಾವುಗಳೆಲ್ಲರೂ ಕಪ್ಪ ಕಾಣಿಕೆಗಳನ್ನು ಕೊಟ್ಟು ತಮ್ಮ ಪೂರ್ವಿಕರು ಹಿಂದೆ ಮಾಡಿಕೊಟ್ಟ ಪ್ರಕಾರ ಈ ಮುಂದೆ ಯೂ ಕಪ್ಪಕಾಣಿಕೆಗಳನ್ನು ಕೊಡುವುದಾಗಿ ಪ್ರಮಾಣ ಮಾಡಿದ ವಿವರವೇನೆಂದರೆ, ಮದುವೆಗೆ ಮಾಡ, ಸರಿಗೆ (ಜರಿ) ಪೀಠ ಒಂದಕ್ಕೆ ವರ್ಷಕ್ಕೆ ಧರಣ. ಚಿತ್ರದ ಕೆಲಸಕ್ಕೆ ವರ್ಷಕ್ಕೆ ಧರಣ ಹೀಗೆ ಹಿಂದೆ ಮಾಡಿಕೊಟ್ಟ ಪ್ರಕಾರವಾಗಿ ಈಗ ತಾವುಗಳೂ ಮತ್ತು ತಮ್ಮ ವಂಶಪಾರಂಪರ್ಯವಾಗಿ ಕಾಣಿಕೆಗಳನ್ನು ಕೊಡುವೆವೆಂದು ಪ್ರಮಾಣ ಮಾಡಿದರು. ಹಾಗೆಪ್ರಮಾಣ ಮಾಡಿದ ಸಕಲದೇಶಗಳ ಮುಕ್ತರಾಜವಂಶ ಪ್ರಮುಖರ್ಯಾರ್ಯಾರೆಂದರೆ :

1. ಪಲ್ಲಕ್ಕಿ ನಾರಾಯಣರೌತು,
2. ಪಾನಗಂಟಿ ಕೃಷ್ಣರೌತು,
3. ಗೊಡುಗಲ ವೆಂಕಟರೌತು,
4. ತಕ್ಕೋಲವೀರ ಪ್ರತಾಪರೌತು.
5. ಅಲ್ಲಾಡಿ ನಾರಾಯಣರೌತು,
6. ಶ್ರೀಪತಿ ವಸುರೌತು,
7. ಯಾದವಗಿರಿ ಕೃಷ್ಣರೌತು,
8. ಪಾನಗಂಟಿ ಹೋಬಳರೌತು,
9. ಬರಾಂಪುರಂ ಬಸವರೌತು,
10. ಸಮುದ್ರಾಲ ಗುರುವರೌತು,
11. ವಜ್ರಾಂಗಿ ಶರಭರೌತು,
12. ಕೋಸಲದೇಶಂ ಯಾಸರೌತು,
13. ನಾಗಪಟ್ಣಂ ವೀರರೌತು,
14. ಬಾದಾಮಿ ಕೃಷ್ಣರೌತು,

15. ಸಕಲಾತಿ ವಸಂತರೌತು,
16. ಕಾಳಹಸ್ತಿ ರಾಮರೌತು,
17. ಅರಗಪನಿ ಕೃಷ್ಣರೌತು,
18. ಗುಂಟೂರು ಮಲ್ಲರೌತು,
19. ಪಾಕಾಲ ಬಸವರೌತು,
20. ಗಜಪತಿದುರ್ಗಂ ರಾಮರೌತು,
21. ಶ್ರೀನಗರಂ ಲಿಂಗರೌತು,
22. ಪೊಬ್ಬತಿ ಚಂದ್ರರೌತು,
23. ನಲ್ಲಗೊಂಡ ಕೃಷ್ಣರೌತು,
24. ದೇವರಕೊಂಡ ತಿಮ್ಮರೌತು,
25. ಬಂಗಾರುಪುರಂ ಲಿಂಗರೌತು,
26. ವಿಶಾಖಪಟ್ನಂ ಮೊಗತಲ ವೆಂಕಟರೌತು,
27. ಗುಂಡ್ರಾಕುಲ ಎಲ್ಲಪ್ಪರೌತು,
28. ವೃದ್ಧಾಚಲಂ ವೀರ ನನ್ನುರೌತು,
29. ನಂದಿಗಂ ವೀರರೌತು,
30. ಭೀಮವರಂ ಗಂಗರೌತು,
31. ಭಂಡಿಪುರಂ ಕೃಷ್ಣರೌತು,
32. ಕನಕಪುರಂ ಯಲ್ಲರೌತು,
33. ಕಸ್ತೂರಿ ವಿರೂಪಾಕ್ಷರೌತು.
34. ಎಗಮಳ್ಳಿ ಲಿಂಗರೌತು,
35. ಉದ್ದಂಟಿ ವೆಂಕಟರೌತು,
36. ಕಮಲಾಪುರಂ ಗೋಪರೌತು,
37. ಅದ್ದಂಕಿ ಶರಭರೌತು,
38. ಗುಂಡ್ಲೂರಿ ಶೇಷಾದ್ರಿರೌತು,
39. ಭುವನಗಿರಿ ವೆಂಕಟರೌತು,
40. ಕೋಟಾನುಕೋಟ ಯಲ್ಲಿರೌತು,
41. ವೀರಭದ್ರುಣಿ ಶರಭರೌತು,
42. ನಂದಿದುರ್ಗಂ ವೀರರೌತು,
43. ಕಾಮಪಲ್ಲಿ ಮಲ್ಲರೌತು,
44. ನಂದಿಪಟ್ನಂ ಲಿಂಗರೌತು,
45. ಮಾಚರ್ಲ ಪೈಡಿಪನಿ ನಾಗರೌತು,
46. ಪೆನುಗೊಂಡ ಗುರುವರೌತು,
47. ಕಳದಿ ನಾರಾಯಣರೌತು.
48. ತಕ್ಕೋಲಂ ಅಂಕರೌತು.
49. ಧನಾಲ ವೆಂಕಟರೌತು,
50. ಆರಣಿ ಕೃಷ್ಣರೌತು,
51. ವಿಭೂತಿಪಟ್ನಂ ತಿಮ್ಮರೌತು,
52. ಮಹಾಬಲಿಪುರಂ ರಂಗರೌತು,
53. ಗೂಡೂರು ಕೊಂಡರೌತು,
54. ದಶರಥಪುರಂ ಶರಭರೌತು,
55. ಚಿತ್ತಾರಪಲ್ಲಿ ರಂಗರೌತು,
56. ವಾಣಂಬಾಡಿ ಏಕಾಂಬರರೌತು,
57. ವೈದರ್ಭಂ ಕೆಂಪರೌತು,
58. ಚರುಕಪಲ್ಲೆ ಕೃಷ್ಣರೌತು,
59. ಕಂಚಿ ರಾಜರೌತು,
60. ಕಾಮಾಕ್ಷಿಪುರಂ ನಲ್ಲರೌತು,
61. ಶ್ರೀರಂಗಂ ಪೆರುಮಾಳರೌತು,
62. ಆರ್ಕಾಪುರಂ ರಂಗರೌತು,
63. ದುರ್ಗಂ ಕಾಮರಾಜರೌತು,
64. ದಾಸರಿಪಲ್ಲೆ ಬಸವರೌತು,
65. ಹೇಮಾದ್ರಿ ನಾರಾಯಣರೌತು,
66. ಸಿಂಹಾದ್ರಿ ಗಜರಾಜರೌತು.
67. ರಾಮಸಮುದ್ರಂ ವೆಂಕಟರೌತು.
68. ನಾನಗರಿ ಅಶನರೌತು,
69. ಪೈಡಿಪಟ್ನಂ ಬಸವರೌತು,
70. ಉದಯಗಿರಿ ರಾಮರೌತು,
71. ಶ್ರೀ ಕಾಶಿ ಚಲಪತಿರೌತು.
72. ಪ್ರಯಾಗಂ ರುದ್ರರೌತು,
73. ಅಯೋಧ್ಯಾ ರಾಮರೌತು,
74. ಚಂದ್ರಪುರಂ ಕುಮಾರರೌತು,
75. ಕೊಲ್ಲಾಪುರಂ ಯಲ್ಲರೌತು,
76. ಮಧುರ ನೀಲಕಂಠರೌತು,
77. ಸ್ವರ್ಣಗಿರಿ ಚಂದ್ರರೌತು,

78. ರಾಮನಾಡು ಕೃಷ್ಣರೌತು,
79. ಗೊಲ್ಲಪಲ್ಲೆ ನಾರಾಯಣರೌತು.
80. ಕಾಶ್ಮೀರಂ ವರದರೌತು,
81. ಬಂಗಾರುಪುರಂ ವೆಂಕಟರೌತು,
82. ರಾಮೇಶ್ವರಂ ರಾಜಶ್ರೀರೌತು,
83. ಗುಮ್ಮಡಿಪುರಂ ಕೃಷ್ಣರೌತು,
84. ಮಂಗಳಾಪುರಂ ಲಿಂಗರೌತು,
85. ಪೋತುಗನೂರು ನಾರಾಯಣರೌತು
86. ಕನಕಗಿರಿ ಶೇಷಾದ್ರಿರೌತು,
87. ಕಾವಲಗುಟ್ಟ ಲಿಂಗರೌತು,
88. ಕಾರಮಂಗಳಂ ಶೇಷಾದ್ರಿರೌತು,
89. ಮುತ್ತಲೂರಿ ವೆಂಕಟರೌತು.
90. ಮುಸಲಿಮಡಗು ಎಲ್ಲರೌತು.
91. ನಂದ್ಯಾಲ ಬಸವರೌತು,
92. ಪಟ್ನಂ ಬಾಬೂರೌತು,
93. ನಂದಿಕೊಂಡ ಮಲ್ಲರೌತು,
94. ಗಿದ್ದಲೂರಿ ವೆಂಕಟರೌತು,
95. ಮೆರವಕೊಂಡ ಗಂಗರೌತು,
96. ಭೈರಪಟ್ನಂ ಎಲ್ಲರೌತು,
97. ಕಮ್ಮೆಟ್ಟಗುಟ್ಟ ರಂಗರೌತು,
98. ರಾಜಪಾಳ್ಯಂ ಶ್ರೀಕಂಠರೌತು,
99. ಕಂಪಲಿ ಗುರುವರೌತು,
100. ಪಾಟ್ನಾಪುರಂ ಕೃಷ್ಣರೌತು,
101. ಕೃಷ್ಣಮಧುರಪುರಂ ಕೃಷ್ಣರೌತು,
102. ಗಜೇಂದ್ರಪುರಂ ಅಂಕರೌತು,
103. ಹಸ್ತಿನಾಪುರಂ ದಿಲೀಪರೌತು,
104. ಕಾಶ್ಮೀರಂ ವೆಂಕಟರೌತು,
105. ಮತ್ಸ್ಯಪುರಂ ಅರ್ಜುನರೌತು,
106. ಪಲ್ಲವೋರು ನಾರಾಯಣರೌತು,
107. ವಾಕಾಟಿಪುರಂ ರಾಮರೌತು
108. ಮಾಚರ್ಲ್ಲ ಕೊಂಡರೌತು,
109. ಮೆಟ್ಟಪಾಳ್ಯಂ ಅಂಕರೌತು,
110. ಚೊಪ್ಪಲ್ಲಿ ಚೊಕ್ಕನಾಥರೌತು,
111. ಚಿಟ್ಟೆಲ ವೆಂಕಟರೌತು,
112. ಸದಾಪುರಂ ಗೋವಿಂದರೌತು,
113. ಭೀಮವರಂ ಶನಿಗಿರಿರೌತು,
114. ಸಿಂಹಾದ್ರಿ ಯಲ್ಲರೌತು,
115. ಕಂದುಕೂರಿ ಅಂಕರೌತು,
116. ದೇವತ ನಾರಾಯಣರೌತು,
117. ಓರಗಂಟಿ ಲಿಂಗರೌತು,
118. ಗಣಪತಿಪುರಂ ಹೋಬಳರೌತು,
119. ತಲ್ಲಾಡಿಪುರಂ ಅಂಕರೌತು,
120. ನೀಲಲೂರಿ ತಿಪ್ಪರೌತು,
121. ತಿರುಪತಿ ಚಲಪತಿರೌತು,
122. ಪಾದರಿಕುಪ್ಪಂ ಮೂರ್ತಿರೌತು,
123. ಗುರುವಲೂರಿ ಪೆದ್ದರಾಯರೌತು
124. ಅಹೋಬಲಂ ನರಸರೌತು,
125. ಪರ್ವತಪಟ್ನಂ ಮಲ್ಲಿಕಾರ್ಜುನರೌತು,
126. ಬದರಿ ನಾರಾಯಣರೌತು,
127. ಉಕ್ಕಿಮಠಂ ಈಶ್ವರರೌತು,
128. ಗೋಪೇಶ್ವರಂ ನೀಲರೌತು,
129. ಜೋಷಿಮಠಂ ಪರ್ವತರೌತು,
130. ಶೃಂಗೇರಿ ಸೋಮರೌತು,
131. ದ್ವಾರಕಾ ಭೀಮರೌತು,
132. ಪೂರಿ ಜಗನ್ನಾಥರೌತು.
133. ಕಾಳಂಗಿ ವಜ್ರರೌತು,
134. ಪೋತಂಗಿ ಸರ್ಪಧರರೌತು,
135. ವೆಂಕಟಗಿರಿ ರಾಮರೌತು,
136. ಕಾಳಹಸ್ತಿ ವೆಂಕಟಗಿರಿರೌತು,
137. ಕೊಂಡಮನಾಡು ಗೋವಿಂದರೌತು,
138, ನಾರಾಯಣವನಂ ವರದರೌತು,

ಇವರೆಲ್ಲರೂ ಶ್ರೀ ವೆಂಕಟೇಶ್ವರನ ಸಮಕ್ಷಮದಲ್ಲಿ ಶ್ರೀ ತಿರುಮಲ ನಲ್ಲಾನ್ ಚಕ್ರವರ್ತಿ ಶ್ರೀ ವೆಂಕಟಾಚಲಾಚಾರ್ಯರವರಿಗೆ ಪ್ರಮಾಣಪೂರ್ವಕವಾಗಿ ಬರೆಸಿಕೊಟ್ಟ ಕಪ್ಪಕಾಣಿಕೆಗಳ ಸಮುಖ ಪತ್ರಕ್ಕೆ ಹಸ್ತಾಕ್ಷರವನ್ನಿತ್ತವರ ಹೆಸರಗಳು. ಶುಭಃ ॥

ಶ್ರೀ ಶ್ರೀ ಕಾಂಚಿನಗರದ ಶಾಸನ

ಕಡಪ ಪಣಕಟ್ಟುವಿಚಾರ ಫಲವಾಗಿ ಬಂದ ಶಾಸನದ ವಿವರ :—

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ವರ್ಷಂಗಳು 1724ಕ್ಕೆ ಸರಿಯಾದ ದುರ್ಮತಿನಾಮ ಸಂವತ್ಸರ ಆಶ್ವೀಜಶುದ್ಧ ಪಂಚಮಿ ಸೋಮವಾರ ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ ಉಭಯ ವೇದಾಂತಾಚಾರ್ಯರಾದ ಕೋಟಿ ಕನ್ಯಾದಾನದ ತಾತಾಚಾರ್ಯರು, ಕಂದಾಳ ಭಾವನಾಚಾರ್ಯರು ಪ್ರತಿವಾದಿ ಭಯಂಕರ ರಾಘವಾಚಾರ್ಯರು, ವಿಳಂಬ ಅಪ್ಪಳಾಚಾರ್ಯರು, ಮೊದಲಾದ ಆಚಾರ್ಯ ಪುರುಷರು ಮತ್ತು ಶ್ರೀಮದ್ ವಿದ್ವದ್‌ಜನ, ಯಾಜನ ಅಧ್ಯಯನ, ಅಧ್ಯಾಪನ, ದಾನ, ದಾನ ಪ್ರತಿಗ್ರಹ ಷಟ್‌ಕರ್ಮ ನಿರತರಾದ ವೇದಬ್ರಹ್ಮ ವಿದ್ವತ್ ಸಭೆಯವರುಗಳು ಮತ್ತು ಐವತ್ತಾರು ದೇಶಗಳಿಗೆ ಕರ್ತರಾದ ದೇಶಾಯಿ ಧನಪಾಲ ದೇವರಾಯರವರು, ಆ ಗ್ರಾಮದ ಕರಣಿಕರಾಯಸಂ ಸ್ವಾಮಿ ಪಿಳ್ಳಯ್ಯ ಮೊದಲಾದ ಪ್ರಮುಖರು ಬರೆಸಿ ಕೊಟ್ಟ ಶಾಸನ ಪತ್ರಿಕೆಯ ಕ್ರಮದ ವಿವರವೇನೆಂದರೆ, ಶ್ರೀಮದ್ ಅಹೋಬಳ ತಿರುಮಲಾಚಾರ್ಯರು ಕಡಪ ನೇತನಾಂಬಾದಾ ಅಮರಾವತಿ ಶೇಷಯ್ಯನೂ ಇಲ್ಲಿಗೆ ಬಂದು ದೇಶಾಯಿ ದೇವರಾಯರವರೇ ಮೊದಲಾದ ಆಚಾರ್ಯ ಪುರುಷರೆಲ್ಲರಿಗೂ ಕಡಪದಲ್ಲಿ ನಡೆದ ಪಣಕಟ್ಟಿನ ವಿಚಾರ ಪೂರ್ವೋತ್ತರಗಳನ್ನು ತಿಳಿಸಲು ಆಗ ದೇಶಾಯಿ ಶೆಟ್ಟಿಯವರು ಸಕಲವಿದ್ವಾಂಸರುಗಳನ್ನು ಕರೆಯಿಸಿ ಕಡಪದ ಶೇಷಯ್ಯನೂ, ಅಹೋಬಳ ತಿರುಮಲಾಚಾರ್ಯರೂ ತಿಳಿಸಿದ ಪಣಕಟ್ಟಿನ ವಿಚಾರವನ್ನು ನಮಗೆ ತಿಳಿಸಿ ಈ ಚಿತ್ತಾರು ಕೆಲಸದವರ ಪೂರ್ವೋತ್ತರವು ಪಣಕಟ್ಟು ಶಾಸನಗಳಲ್ಲಿರುವುದನ್ನು ಶೋಧಿಸಿ ತೆಗಿಸ ಬೇಕೆಂದು ಹೇಳಿ ಆ ಶಾಸನಗಳು ಇರುವ ಸ್ಥಳವಾದ ಕಾಂಚಿ ಏಕಾಂಬರೇಶ್ವರ ಗುಡಿಯ ಸರ್ವಾಧಿಕಾರಿಯಾದ ತಂಬೂ ದೀಕ್ಷಿತರಲ್ಲಿರಲು ಅವುಗಳನ್ನು ತಂದು ಸಭೆಯಲ್ಲಿ ಶಾಸನ ಗಳನ್ನು ಓದಲು ಅದರಲ್ಲಿದ್ದ ವಿಚಾರದ ವಿವರ, ಪೂರ್ವಕಾಲದಲ್ಲಿ ಅಮರಕಂಠಕಪುರ ದಲ್ಲಿ ಜಾನುಮಂಡಲನೆಂಬ ರಾಕ್ಷಸನೂ, ಗಜಾಸುರನೆಂಬ ರಾಕ್ಷಸನೂ ಹುಟ್ಟಿ, ದೇವತೆ ಗಳನ್ನೂ ಮುನೀಶ್ವರರನ್ನು ಸಂಹರಿಸುತ್ತಿರಲು, ದೇವತೆಗಳು ಮತ್ತು ಮುನಿಗಳು ಈ ರಾಕ್ಷಸರ ಭಾದೆಯನ್ನು ತಾಳಲಾರದೆ ದೇವೇಂದ್ರನಲ್ಲಿ ಹೋಗಿ ಮೊರೆಯಿಡಲು ಆಗ ದೇವೇಂದ್ರನು ಈ ಜಾನುಮಂಡಲ ಮತ್ತು ಗಜಾಸುರರನ್ನು ಸಂಹರಿಸಲು ಶಕ್ಯವಿಲ್ಲ ವಾದ್ದರಿಂದ ದೇವೇಂದ್ರನು ದೇವತೆಗಳು ಮತ್ತು ಮುನಿಗಳೊಡಗೂಡಿ ಶ್ರೀ ಮಹಾ

ವಿಷ್ಣುವಿನ ಸಮೀಪಕ್ಕೆ ಹೋಗಿ ಆ ಪರಮೇಷ್ಠಿಗೆ ತಾವುಗಳು ಬಂದಿರುವ ವಿಚಾರವನ್ನು ತಿಳಿಸಲು ಶ್ರೀ ಮಹಾವಿಷ್ಣುವು ಯೋಚಿಸಿ ದೇವತೆಗಳ ಸಮೇತವಾಗಿ ಬ್ರಹ್ಮದೇವರಲ್ಲಿಗೆ ಹೋಗಿ, ಜಾನುಮಂಡಲ ಮತ್ತು ಗಜಾಸುರರಿಗೆ ಯಾವ ರೀತಿ ನೀನು ವರಪ್ರಧಾನ ವನ್ನು ಮಾಡಿರುವೆ. ಆ ಅಸುರರು ದೇವತೆಗಳನ್ನೂ ಮುನಿಗಳನ್ನು ಸಂಹರಿಸುತ್ತಾ ಲೋಕಕಂಟಕರಾಗಿರುವುದರಿಂದ ಅವರುಗಳನ್ನು ಯಾವ ರೀತಿ ಸಂಹರಿಸಬೇಕೆಂದು ಕೇಳಲಾಗಿ ಆಗ ಬ್ರಹ್ಮದೇವರು ನಾನು ಅವರುಗಳ ತಪಸ್ಸಿಗೆ ಮೆಚ್ಚಿ ವರಗಳನ್ನು ಕೊಟ್ಟಾಯಿತು ಅದನ್ನು ತಪ್ಪಿಸಲು ನನ್ನಿಂದ ಸಾಧ್ಯವಿಲ್ಲವೆಂದು ಹೇಳಿ ಸಕಲ ದೇವ ಗಣಗಳು, ಮುನಿಗಣಗಳು, ಶ್ರೀ ವಿಷ್ಣುವೂ, ಬ್ರಹ್ಮದೇವನೂ ಎಲ್ಲರೂ ಹೊರಟು ಕೈಲಾಸವಾಸನಾದ ಶ್ರೀಶಂಕರನಲ್ಲಿಗೆ ಬಂದು ಶಂಕರನನ್ನು ಪ್ರಾರ್ಥಿಸಿ ಜಾನುಮಂಡಲ ಮತ್ತು ಗಜಾಸುರನನ್ನು ಸಂಹರಿಸಿ ದೇವತೆಗಳಿಗೂ ಮುನಿಗಳಿಗೂ ಲೋಕಗಳಲ್ಲಿರುವ ಸಕಲ ಪ್ರಾಣಿವರ್ಗಗಳಿಗೂ ಬಂದಿರುವ ಕಷ್ಟವನ್ನು ಪರಿಹರಿಸಿ ಲೋಕಗಳನ್ನು ಉದ್ಧರಿಸ ಬೇಕೆಂದು ಪ್ರಾರ್ಥಿಸಲು ಆಗ ಶ್ರೀ ಶಂಕರನಿಗೆ ಕೋಪವು ಹುಟ್ಟಲು ಆಗ ಈಶ್ವರ ಹೃತ್‌ಕಮಲದಿಂದ ಮುಕ್ತ್ಯಋಷಿಯು ಜನ್ಮಿಸಿದನು. ಜನ್ಮಿಸಿದ ಮುಕ್ತ್ಯಋಷಿಯು ಪರಮೇಶ್ವರನನ್ನು ಕುರಿತು ಕೇಳಿದನು ಯಾವ ಕಾರಣಕ್ಕಾಗಿ ನನ್ನನ್ನು ಸೃಷ್ಟಿಸಿದೆ ಯಾವ ಕಾರ್ಯವನ್ನು ನಾನು ಮಾಡಬೇಕು ಯಾರ ಸಂಹಾರವನ್ನು ಮಾಡಲಿ ಎಂದು ಪ್ರಾರ್ಥಿಸಲು ಆಗ ಪರಮೇಷ್ಟಿಯು, ಅಮರಕಂಟಕ ಪುರದಲ್ಲಿ ಜಾನುಮಂಡಲನೆಂಬ ರಾಕ್ಷಸನು ಜನ್ಮಿಸಿ ದೇವತೆಗಳನ್ನು ಮುನಿಗಳನ್ನು ಭಾಧೆಪಡಿಸುತ್ತಿರುವನಾದ್ದರಿಂದ ನೀನು ಆ ರಾಕ್ಷಸನನ್ನು ಸಂಹಾರಮಾಡಿ ಬಾ ಎಂದು ಆಜ್ಞಾಪಿಸಲು, ಆಗ ಮುಕ್ತ್ಯಋಷಿಯು ಪರಮೇಷ್ಠಿಯನ್ನು ಕುರಿತು ವಿಜ್ಞಾಪಿಸಿಕೊಂಡಿದ್ದೇನೆಂದರೆ ಆ ಜಾನುಮಂಡಲ ರಾಕ್ಷಸ ನಾರು. ಅವನು ಯಾವ ವರಬಲದಿಂದ ಲೋಕಕಂಠಕನಾಗಿದ್ದಾನೆ. ಯಾವ ಆಯುಧ ಗಳಿಂದ ಮರಣಹೊಂದುತ್ತಾನೆಂಬುದನ್ನು ತಿಳಿಸಿ ಕರುಣಿಸಬೇಕೆಂದು ಪ್ರಾರ್ಥಿಸಲು ಆಗ ಪರಮೇಷ್ಠಿಯು ನೀನು ವಿಶ್ವಾಮಿತ್ರನು ಯಾಗಮಾಡಿದ ವನಕ್ಕೆ ಹೋಗಿ ಅಲ್ಲಿ ಯಾಗ ವನ್ನು ಮಾಡಿದರೆ ಆ ಯಾಗಕುಂಡದಿಂದ ಆಯುಧಗಳು, ರಥಗಳು, ಅಶ್ವಗಳು, ಸೇನೆ ಎಲ್ಲವೂ ಉದ್ಭವಿಸುವುದು. ಆ ಬಲದಿಂದ ನೀನು ಆ ರಾಕ್ಷಸರನ್ನು ಸಂಹಾರಮಾಡೆಂದು ವರವೀಯಲು ಆಗ ಅದೇ ಪ್ರಕಾರ ಆ ಯಾಗಮಾಡಲು ಆ ವನಕ್ಕೆ ದೇವತೆಗಳ ಮತ್ತು ಮುನಿಗಳ ಸಮೇತವಾಗಿ ಹೋಗಿ ಅಲ್ಲಿ ಯಾಗಮಂಟಪವನ್ನು ಕಟ್ಟಿ ಯಾಗ ಪ್ರಾರಂಭಿಸಲು ಜಾನುಮಂಡಲ, ಗಜಾಸುರನ ರಾಕ್ಷಸಚಾರರು ಬಂದು ಯಾಗ ವಿಘ್ನ ಮಾಡಲು ಆಗ ಮುಕ್ತ್ಯಋಷಿಯು ಚಿಂತಿಸಿ ಈಶ್ವರನ ಅರ್ಧಾಂಗಿಯಾದ ಪಾರ್ವತೀ ದೇವಿಯನ್ನು ಪ್ರಾರ್ಥಿಸಲು ನಿಮಿಷದಲ್ಲಿ ಪ್ರತ್ಯಕ್ಷವಾಗಿ ಯಾಗಶಾಲೆಯಲ್ಲಿದ್ದ ರಾಕ್ಷಸರನ್ನು ಸಂಹರಿಸಿ ಯಾಗ ಸಂರಕ್ಷಣೆಯನ್ನು ಮಾಡಲು ಆಗ ಯಾಗದಿಂದ ರಥಗಳು, ಬಾಣಗಳು, ಸೇನೆ ಮೊದಲಾದುವು ಉದ್ಭವಿಸಲು ಆಗ ದೇವಿಯು ಅಂತರ್ಧಾನವನ್ನು ಹೊಂದಲು, ಮುಕ್ತ್ಯಋಷಿಯು ಸೇನೆ, ರಥ ಮೊದಲಾದವುಗಳೊಡನೆ

ಅಮರಕಂಟಕ ಪುರಕ್ಕೆ ಹೋಗಿ ಜಾನುಮಂಡಲನೇ ಮೊದಲಾದ ರಾಕ್ಷಸರನ್ನು ಸಂಹಾರ ಮಾಡಿ. ಅವರ ಚರ್ಮವನ್ನು ತೆಗೆದುಕೊಂಡು ಈಶ್ವರನ ಸಮುಖಕ್ಕೆ ಬರಲು ಈಶ್ವರನು ಅದನ್ನು ಕಂಡು ಸಂತೋಷಿಸಿ ಈ ಚರ್ಮವು ವಜ್ರಚರ್ಮವು ಆದ್ದರಿಂದ ಈ ಚರ್ಮದಿಂದ ದೇವತೆಗಳಿಗೆ ಕವಚಗಳನ್ನು ನಿರ್ಮಿಸಲು ಆಜ್ಞಾಪಿಸಿದನು. ಆ ಆಜ್ಞಾಪ್ರಕಾರವಾಗಿ ಶೃಂಗಾರವಾಗಿ ದೇವತೆಗಳಿಗೆ ಕವಚಗಳನ್ನು ನಿರ್ಮಿಸಿಕೊಟ್ಟನು. ಅದಕ್ಕಾಗಿ ನೀನು ಸಕಲ ದಳಶೃಂಗಾರ ಪೂಜಿತನಾಗಿ ನಿನ್ನ ಸಂತತಿಯವರು ಲೋಕಶೃಂಗಾರ ಪೂಜಿತರಾಗಿ ಪ್ರವರ್ಧಮಾನರಾಗಿರೆಂದು ವರವನ್ನು ಕೊಟ್ಟು ದೂರ್ವಾಸಮುನಿಯ ಪುತ್ರಿಯಾದ ಶಾಂತವತಿಯನ್ನು ಲಗ್ನಮಾಡಿಸಿದರು. ಆದ್ದರಿಂದ ಮುಕ್ತಋಷಿ ದೂರ್ವಾಸ ಪುತ್ರಿಯ ಸಂತತಿಯವರಿಗೆ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂಬ ನಾಮಧೇಯವೂ, ವೇದೋಕ್ತ ತ್ರಿಕಾಲಸಂಧ್ಯಾ, ಅಗ್ನಿಹೋತ್ರ, ಜಪತಪ ಧ್ಯಾನಗಳು. ಉಭಯ ದಳಶೃಂಗಾರ ವಶೀಕರಣ ದತ್ತಾಹಾರ ಅಶ್ವದಳ, ಗಜದಳ ಶೃಂಗಾರ ಬಿರುದುಗಳು. ಹನುಮದ್ವಜ, ಗರುಡಧ್ವಜ, ವೃಶಭಧ್ವಜ, ಸಿಂಹಧ್ವಜ, ಬಿರುದುಗಳು ಸಹ ಇವರುಗಳಿಗೆ ಸಲ್ಲತಕ್ಕದ್ದು ಆದ್ದರಿಂದ ಈ ಕಾಂಚಿ ಸ್ಥಳದಲ್ಲಿ ಮುಕ್ತೇಶ್ವರದೇವಾಲಯವಿದೆ. ಇವರಿಗೆ ಸಕಲ ಶೃಂಗಾರಗಳೂ, ರಾಜಬೀದಿಯಲ್ಲಿ ಮೆರವಣಿಗೆಯೂ ಉಂಟು. ಈ ಕಾಂಚೀಪುರದಲ್ಲಿ ಮೊದಲಿನಿಂದಲೂ ಈ ರೀತಿಯಲ್ಲಿ ನಡೆಯುತ್ತಿದೆ. ಇದಕ್ಕೆ ಇಲ್ಲಿನ ಸಕಲ ಪಣಕಟ್ಟಿ ನವರಿಂದಲೂ ಬಹುಮತಿಯಿದೆ. ಈ ಕಾಂಚಿ ಶ್ರೀಕಾಮಾಕ್ಷಿದೇವಾಲಯದ ಧ್ವಜಸ್ತಂಬದ ಕೆಳಗೆ ಇದ್ದ ಶಾಸನದ ನಕಲು ಏಕಾಂಬರೇಶ್ವರನ ಗುಡಿಯಲ್ಲಿ ತಾಂಬ್ರ ಶಾಸನರೂಪ ದಲ್ಲಿರುವುದನ್ನು ಪರಿಶೋಧಿಸಿ ಅದರ ಪ್ರತಿಯನ್ನು ಬರೆದು ಕಳುಹಿಸಿರುವೆವು ಇದು ಸತ್ಯವು. ಇದನ್ನು ಅಸತ್ಯವೆಂದು ಹೇಳುವವರು, ಸ್ತ್ರೀಹತ್ಯಾ, ಗೋಹತ್ಯಾ, ಬ್ರಹ್ಮ ಹತ್ಯಾಗಳನ್ನು ಮಾಡಿದವರ ಪಾಪಕ್ಕೆ ಗುರಿಯಾಗುವರು. ಕಾಂಚಿ ಶ್ರೀ ಕಾಮಾಕ್ಷಿದೇವಿ ಶ್ರೀ ಏಕಾಂಬರೇಶ್ವರದೇವರ ಕೋಪಕ್ಕೆ ಪಾತ್ರರಾಗಬೇಕಾಗುತ್ತದೆ. ಇಲ್ಲಿನ ವಿದ್ವತ್ ಸಭೆಯವರು ಮತ್ತು ಶ್ರೀ ದೇವಕಾಂಚಿ ಮಹಾನಾಡಿನವರು ಬರೆಸಿಕೊಟ್ಟ ಧರ್ಮಶಾಸನ ಪತ್ರಿಕೆ ಸಭೆಯವರ ಮತ್ತು ಮಹಾನಾಡಿನವರ ಸಮ್ಮತಿಯಿಂದ ಕರಿಣಿಕ ಸ್ವಾಮಿ ಪಿಳ್ಳಯ್ಯನು ಬರೆದ ಶಾಸನ ಸಹಿ ॥ ಶುಭಃ ॥

ಪ್ರಶ್ನೆ :—ಈ ಶಾಸನ ತರಲು ಕಾರಣವೇನು.
ಉತ್ತರ :—ಕಡಪದಲ್ಲಿನ ಪಣಕಟ್ಟಿನ ವಿಚಾರವಾಗಿ, ವಿವರವಿಲ್ಲಾ.

ಇದರ ದಾಖಲೆಗಳಿರುವ ಸ್ಥಳಗಳು :—

(1) ಕಡಪದಲ್ಲಿರುವ ಚೌದರಿ ಗುರಪ್ಪನವರಲ್ಲಿ.

(2) ಚಿಟವೇಲಿಯಲ್ಲಿರುವ ಭಾರದ್ವಾಜ ಗೋತ್ರದ ಮಾಚರೌತು ಚಲಮಯ್ಯನ ಮೊಮ್ಮಗ (ಪೌತ್ರ) ವೆಂಕಟಾದ್ರಿಯ ಮಗನಾದ ಲಕ್ಷ್ಮಯ್ಯನವರಲ್ಲಿ.

(3) ನಂದ್ಯಾಲದಲ್ಲಿರುವ ಶ್ರೀವತ್ಸ ಗೋತ್ರದ ತಿಪ್ಪರೌತುರವರ ವಂಶಸ್ಥರಾದ ರಾಮ ವರ್ಮರವರಲ್ಲಿ,

(4) ವೆಂಕಟಗಿರಿಯಲ್ಲಿ ಭಾರದ್ವಾಜಗೋತ್ರದ ಸಿದ್ಧಾಪುರದ ನರಸಯ್ಯನವರಲ್ಲಿ.

(5) ಚಿಟ್ಟವೇಲಿಯಲ್ಲಿರುವ ಕಾಶ್ಯಪಸಗೋತ್ರದ ಪೈಕೋಟಿ ಅಪ್ಪಯ್ಯನವರು ಈ ಶಾಸನವನ್ನು ಬರೆಸಿದವರು.

(1) ವಿಜಯನಗರದ ಶಾಸನ, (2) ಚಂದ್ರಗಿರಿ ಶಾಸನ, (3) ಕಾಂಚಿ ಶಾಸನ ಇವುಗಳಿಗೆ ಪಣಕಟ್ಟಿನ (ಜಾತಿ ಅಂತಃಕಲಹಗಳು) ವಿಚಾರವೇ ಮುಖ್ಯವಾದುದು. ಮೊದಲು ಅಲ್ಪವಾಗಿ ಪ್ರಾರಂಭವಾಗಿ ಕೊನೆಗೆ ಅತಿ ದುಸ್ತರವಾಗಿ ಪ್ರಯತ್ನಪೂರ್ವಕ ವಾಗಿ ಐಕ್ಯಮತ್ಯದಿಂದ ಶಾಸನಗಳು ದೊರಕಿರುವುದು ಬೆಳಕಿಗೆ ಬಂದಿದೆ. ತಿರುಪತಿ ಯಲ್ಲಿರುವ ಆರ್ಟಿಸ್ಟ್ ಎನ್. ಮಲ್ಲಯ್ಯನವರಿಂದ ನನಗೆ ಕೊಟ್ಟಿದ್ದ ಈ ಮೂರು ಶಾಸನ ಗಳ ಮೂಲ ಪ್ರತಿಗಳು. ಮದ್ರಾಸಿನಲ್ಲಿರುವ ಭಾರದ್ವಾಜ ಗೋತ್ರದ ದೊಡ್ಡಪುಟ್ಟಯ್ಯ ನವರ ಕೊಮಾರರಾದ ಶ್ರೀ ಪಿ. ವೆಂಕಟರಮಣರಾಜು, ಎಗ್ಜಿಕ್ಯುಟಿವ್ ಇಂಜನಿಯರ್ ರವರಿಗೆ ಸರ್ 1938ರಲ್ಲಿ ಇವುಗಳನ್ನು ಮುದ್ರಣಮಾಡಿಸುವ ಸಲುವಾಗಿ ಬೆಂಗಳೂರಿನ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಸೇವಾಸಂಘದ ಪರವಾಗಿ ನಾನು ಆಗ ಅವರಿಗೆ ಮೂಲ ಪ್ರತಿಗಳನ್ನು ಕೊಟ್ಟಿರುತ್ತೇನೆ. ಈಗ ಹಾಲಿ ನನ್ನಲ್ಲಿರುವ ಅದರ ಕಾಪಿಗಳಿಂದ ಈ ಮೂರು ಶಾಸನಗಳನ್ನು ಬರೆದಿರುವೆನು. ಇವುಗಳು ಮೂಲದಲ್ಲಿ ತೆಲುಗಿನಲ್ಲಿದ್ದು ಕನ್ನಡಕ್ಕೆ ಭಾಷಾಂ ತರಿಸಿರುವುದರಿಂದ ಏನಾದರು ಲೋಪದೋಷಗಳು ಕಂಡುಬಂದರೆ ಅದನ್ನು ನನಗೆ ತಿಳಿಸಿದ ಪಕ್ಷದಲ್ಲಿ ಮತ್ತೆ ಮುದ್ರಣ ಮಾಡಿಸುವಾಗ ಅದನ್ನು ತಿದ್ದಿ ಮುದ್ರಣ ಮಾಡಿಸುತ್ತೇನೆ.

ಇತಿ ಗ್ರಂಥಕರ್ತ.

ಕುಲಬಾಂಧವರಲ್ಲಿ ವಿಜ್ಞಾಪನೆ :—

ನಮ್ಮಗಳಿಗೆ ಆದಾರಸ್ಥಂಬದಂತಿರುವ ಈ ಶಾಸನಗಳು ಮತ್ತು ಇದರ ಮೂಲ ದೊರೆತಿರುವ ಸ್ಥಳ ಕಾಂಚೀಪಟ್ಟಣವು ದ್ರಾವಿಡ ರಾಜ್ಯವಾಗಿದ್ದಿತು ಮತ್ತು ಈಗಲೂ ಅದು ದ್ರಾವಿಡ ರಾಜ್ಯವೆ. ನಮ್ಮಗಳ ಕುಲಬಂಧುಗಳು ಆಸೇತು ಹಿಮಾಚಲ ಪರ್ಯಂತರ ಇದ್ದರೂ ಕಾಂಚೀಪಟ್ಟಣದಲ್ಲೇ ಇವು ಮೂರು ಸಲವೂ ತರಲು ಕಾರಣ ವೇನು. ನಮ್ಮಗಳ ಮೂಲ ಸ್ಥಳವಾವುದು. ನಾವುಗಳು ಎಲ್ಲಿಂದ ಎಲ್ಲಿಗೆ ಬಂದೆವು. ನಮ್ಮ ಮೂಲಪುರುಷನಾದ ಮುಕ್ತರಾಜನ ರಾಜಧಾನಿಯಾವುದು. ಅದರ ಪರಂಪರೆ ಏನು ಎಂಬ ವಿಚಾರವನ್ನು ನಮ್ಮಲ್ಲಿನ ವಿದ್ಯಾವಂತರು ಪರಿಶೋಧಿಸಬೇಕಾಗಿ ಪ್ರಾರ್ಥನೆ.

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯಕ್ಷತ್ರಿಯರ ಶಾಸನ ವಿವರಗಳ

ಸಮಾಪ್ತಿ

ಶ್ರೀರಸ್ತು

॥ ಶ್ರೀ ನಿಮಿಷಾಂಬಾಪರಮೇಶ್ವರ್ಯೈನಮಃ ॥

ಶ್ರೀ ಮುಕ್ತರ್ಷಿ ವಂಶೋದ್ಭವ

ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ವಂಶಾವಳಿಗಳು

ಗೋತ್ರಗಳು ಪ್ರವರಗಳು ಮತ್ತು ವಂಶಾವಳಿಗಳು

ಕುಲಬಾಂದವರಲ್ಲಿ ವಿಜ್ಞಾಪನೆ:-

ಬೆಂಗಳೂರಿಗೆ ಮೊದಲು ಬಂದು ನೆಲಸಿದ ಗೋಪಾಲಪ್ಪನ ಜೊತೆಗೆ ಆತನ ದಾಯಾದಿ ಶ್ಯಾಂಡಿಲ್ಯಸ ಗೋತ್ರದ ಈಗ ಭಜನೆಮನೆಯವರೆಂದು ಕರೆಯುವ ಗಿಡ್ಡ ಸುಬ್ಬಯ್ಯನವರ ಮೂಲಪುರುಷನಾದ ಸುಬ್ಬಯ್ಯನೂ ಮತ್ತು ಗೋಪಾಲಯ್ಯನ ಭಾವ ನಾದ ಶ್ರೀ ವತ್ಸಗೋತ್ರದ ಉದ್ದಂಟಿ ಮನೆತನದ ಈಗಿನ ಯಜಮಾ಼ ತಿರುಪತಯ್ಯ ನವರ ಮೂಲಪುರುಷನಾದ ದಾಸಪ್ಪನೂ ಸೇರಿ ಹಂಪಿಯ ಹತ್ತಿರದ ಕಮಲಾಪುರದಿಂದ ಹೊರಟು ಚಂದ್ರಗಿರಿ, ಮುಳಬಾಗಿಲು ಮಾರ್ಗವಾಗಿ ಬೆಂಗಳೂರಿಗೆ ಬಂದು ನೆಲಸಿದ ರೆಂದೂ ಅನಂತರ ಈಗಿನ ನಮ್ಮ ಜನಾಂಗದವರೆಲ್ಲಾ ಮೈಸೂರು, ಗಂಜಾಂ, ಆನೇಕಲ್ಲು, ಮಟ್ನಹಳ್ಳಿ, ಬೇರಿಕೆ, ಕೋಲಾರ, ಬಾಗಲೂರು, ಹೊಸೂರು, ಮದ್ರಾಸ್, ಮಂಡ್ಯ, ಮಲ್ಲೆಂಡಹಳ್ಳಿ. ಸರ್ಜಾಪುರ, ಗುಡಿಬಂಡೆ, ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಹಿಂದೂಪುರ, ಅಮರಾಪುರ, ಕೋನೇಟಿ, ಅನಂತಪ್ಪುರ, ಕಡಪ, ಬಳ್ಳಾರಿ, ತರೀಕೆರೆ, ಗಾಜನೂರು, ಹೊಸಪೇಟೆ, ಉತ್ತರ ಆರ್ಕಾಟ್, ಶ್ರೀರಂಗ ಮೊದಲಾದ ಕಡೆಗಳಿಂದ ಬಂದು ನೆಲಸಿದ್ದಾರೆ. ನಮ್ಮ ಜನಾಂಗದವರೆಲ್ಲರೂ ಆಂದ್ರ (ತೆಲಗು) ಭಾಷೆಯನ್ನಾಡು ವವರಾದರೂ ಹಾಲಿ ಇರುವುದು ಮೈಸೂರು ಕರ್ನಾಟಕವಾದ್ದರಿಂದ ಈ ಗ್ರಂಥವನ್ನು ಕನ್ನಡದಲ್ಲಿಯೇ ಬರೆದಿರುವೆನು.

ನಮ್ಮ ಪೂಜ್ಯ ದೊಡ್ಡ ತಂದೆಯವರಾದ ದಿವಂಗತ ಶೆಟ್ಟಿಪಾಪಯ್ಯನವರು ಮತ್ತು ಅವರ ಮಕಾಲೀನರಾದ ಶಿವಮೊಗ್ಗೆಯ ಗುರುಮೂರ್ತಪ್ಪ, ಚನ್ನಪ್ಪ

ಎಂಬುವರು ಸರ್ 1917 ನೇ ಇಸವಿಯಲ್ಲಿ ಸೇರಿ ಮೇಲ್ಕಂಡ ನಮ್ಮ ವಂಶಾವಳಿಯ್ನುಳ ಬರೆದಿಟ್ಟಿರುವ ಕಾಗದಗಳಿಂದ ಸರ್ 1934ರಲ್ಲಿ ನನ್ನ ಕೈಯಲ್ಲಿ ಅವರಲ್ಲಿದ್ದ ಕಾಗದಗಳು ಶಿಥಿಲವಾಗಿದ್ದುದರಿಂದ ಪುಸ್ತಕಕ್ಕೆ ಬರೆಸಿರುವರು. ಅದರ ಪ್ರಕಾರ ನಾನು ನಮ್ಮ ವಂಶವನ್ನು ನಿರೂಪಿಸಿದ್ದೇನೆ. ನನ್ನ ಮನೆತದವರು ಮೊದಲಿನಿಂದಲೂ ದೊಡ್ಡ ತಿರುಪತಿಯ ಶ್ರೀ ವೆಂಕಟರಮಣಸ್ವಾಮಿಯವರ ಭಕ್ತರಾಗಿದ್ದಾಗ್ಯೂ ನಮ್ಮ ಮನೆತಂಕ್ಕೆ ಮೂಲಪುರುಷನಾದ ರಾಯಪ್ಪನೆಂಬಾತನಿಗೆ ಗಂಡು ಸಂತತಿಯಾಗದೆ ಇದ್ದುದರಿದ ಯಾರ ಪ್ರೇರಣೆಯಿಂದಲೋ ಈಗ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಹೊಸೂರು ತಾಲ್ಲೂಕ್ ಬೇರಿಕೆ ಗ್ರಾಮದ ಸೊಣ್ಣಾಪುರದ ಶ್ರೀ ಮುನೇಶ್ವರಸ್ವಾಮಿಯ ಸೇವೆಗೆ ಹೋಗಿ, ಅಲ್ಲಿ ರಾಯಪ್ಪನು ನಾಗಪ್ರತಿಷ್ಠೆಮಾಡಿ ನನಗೆ ಗಂಡು ಸಂತಾನವಾದರೆ ನಿನ್ನನ್ನು ನನ್ನ ಮನೆದೇವರಾಗಿಯೂ ಮತ್ತು ನನ್ನ ಸಂತತಿಯವರು ನಿನ್ನಲ್ಲಿಗೆ ಬಂದು ತಲೆಗೂದಲು ತೆಗೆಯುವುದು ಕಿವಿ ಚುಚ್ಚುವುದೇ ಮೊದಲಾದುವನ್ನು ಮಾಡುತ್ತಾರೆಂದು ಹರಕೆ ಹೊತ್ತರೆಂದು ಪ್ರತೀತಿ, ಆಗ ಆತನಿಗೆ ಗಂಡು ಸಂತಾನ ವಾದ್ದರಿಂದ ಈಗಲೂ ಆ ಸಂತಾನದವರಾದ ನಾವುಗಳೆಲ್ಲರೂ ಸೊಣ್ಣಾಪುರದ ಮುನೇಶ್ವರಸ್ವಾಮಿಯ ಭಕ್ತರಾಗಿದ್ದೇವೆ. ಮತ್ತು ನಮ್ಮ ಮನೆಯಲ್ಲಿ ಹುಟ್ಟಿದ ಕೆಲವು ಮಕ್ಕಳಿಗೆ ಮುನಿ ಎಂಬ ಹೆಸರನ್ನೂ ಸೇರಿಸಿ ಹೆಸರುಗಳನ್ನು ಇಡುತ್ತಾ ಬಂದಿರುತ್ತೇವೆ. ನಮ್ಮ ವಿನಃ ಮಿಕ್ಕ ನಮ್ಮ ವಂಶಸ್ತರು ಕೆಲವರು ದೊಡ್ಡತಿರುಪತಿಯ ವೆಂಕಟರಮಣಸ್ವಾಮಿಯ ಭಕ್ತರಾಗಿಯೂ ಮತ್ತೆ ಕೆಲವರು ಬನ್ನೇರುಘಟ್ಟದ ಸಂಪಂಗಿ ರಾಮಸ್ವಾಮಿಯ ಭಕ್ತರಾಗಿಯೂ ಇದ್ದಾರೆ.

ಗೋತ್ರಗಳು ಅದರ ಪ್ರವರ ವಿಧಾನಗಳು ಮತ್ತು ಆಯಾ ಮನೆತನದವರುಗಳು ಮತ್ತು ಶ್ರೀ ಸೋಮವಂಶದಲ್ಲಿ ನಮ್ಮಗಳ ಯಾವ ಯಾವ ಮನೆತನಗಳಿಗೆ ಗೋತ್ರ ಗಳಿದ್ದವೆಂಬುದನ್ನು ವಿವರಿಸಿದ್ದೇನೆ, ಈ ಹಿಂದೆ 1940ನೇ ಇಸವಿಯಲ್ಲಿ ನಾನೂ ಮತ್ತು ನನ್ನ ಮಿತ್ರರಾದ ದಿವಂಗತ ಆರ್. ವೆಂಕಟರಮಣರಾಜುರವರು ಸೇರಿ ನಿತ್ಯ ಕರ್ಮ ವಿಧಿ ಎಂಬ ಪುಸ್ತಕದಲ್ಲಿ ಗೋತ್ರಗಳು ಮತ್ತು ಮನೆತನದ ಊರಿನ ಹೆಸರುಗಳು ಪ್ರಚುರಿಸಿದ್ದೆವು ಆದರೆ ಅದರಲ್ಲಿ ಆಂದ್ರ, ದ್ರಾವಿಡ, ಕರ್ನಾಟಕದಲ್ಲಿರುವ ಗೋತ್ರ ಪ್ರವರದ ಪಾಠ ಬೇದಗಳನ್ನು ಪ್ರಚರಿಸಿರಲಿಲ್ಲ. ಕರ್ನಾಟಕದ ಪದ್ಧತಿ ಮಾತ್ರ ಪ್ರಚುರಪಡಿಸಿದ್ದೆವು ಈಗಿನದರಲ್ಲಿ. (1) ಕರ್ನಾಟಕ, (2) ಆಂದ್ರ, (3) ದ್ರಾವಿಡ ದೇಶಗಳಲ್ಲಿರುವ ಪುರೋಹಿತರುಗಳಿಂದ ಹೇಳಲ್ಪಡುತ್ತಿರುವ ಗೋತ್ರ ಪ್ರವರ ಭೇದ ಗಳನ್ನು ವಿಂಗಡಿಸಿ ಬರೆದಿರುತ್ತೇನೆ.

ಗೋತ್ರ ಪ್ರವರಗಳಲ್ಲಿ ಹಿಂದೆ ಮುದ್ರಿಸಿರುವ ಪ್ರಕಾರವನ್ನು ತಪ್ಪಿಸಿ ಈಗ ಗೋತ್ರಗಳಲ್ಲಿ ಬರುವ ಋಷಿಗಳ ಸಂಖ್ಯಾ ಕ್ರಮವನ್ನು ಅಂದರೆ ಮೊದಲು ಸಪ್ತಾರ್ಷೇಯವೂ, ಪಂಚಾರ್ಷೇಯವೂ ಅನಂತರ ತ್ರಯಾರ್ಷೇಯವೂ ಕೊಟ್ಟಿರುತ್ತೇನೆ

ಅದರಲ್ಲಿ ತ್ರಯಾರ್ಷೇಯದಲ್ಲಿ ವತ್ಸಗೋತ್ರಕ್ಕೆ. ಶ್ರೀಮನ್ನಾರಯಣನ ಗೋತ್ರವೆಂದೂ ಅದು ಶ್ರೇಷ್ಠವೆಂದೂ ಅದಕ್ಕಾಗಿ ಆ ಗೋತ್ರಕ್ಕೆ. ಶ್ರೀಕಾರವು ಮುಖ್ಯವೆಂದೂ ಹೇಳಿದೆ. ಅದ್ದರಿಂದ ಹಿಂದಿನವರೂ ಮತ್ತು ನಾವು ಹಿಂದೆ ಪ್ರಕಟಿಸಿದ್ದುದರಲ್ಲಿಯೂ ಶ್ರೀ ವತ್ಸ ಗೋತ್ರವೆಂದೇ ಬರೆದಿರುತ್ತೇನೆ. ಆದ್ದರಿಂದ ಈಗ ತ್ರಯಾರ್ಷೇಯದಲ್ಲಿ ಮೊದಲು ಶ್ರೀ ವತ್ಸ ಗೋತ್ರವನ್ನೂ ಆದನಂತರ ಮಿಕ್ಕವುಗಳನ್ನೂ ಕ್ರಮಪಡಿಸಿರುತ್ತೇನೆ. ನಾಗ ಪುರದವರು ಪ್ರಕಟಿಸಿರುವ ಗೋತ್ರಗಳಲ್ಲಿ ವತ್ಸ ಗೋತ್ರವೆಂದು ಮಾತ್ರ ಇದೆ.

1. ಈ ವಂಶದ ಮೂಲಪುರುಷನಾದ ಸುಮನಸ್ಕ ಮಹಾಮುನಿಯು ಬ್ರಹ್ಮ ನಿಂದ ಉದ್ಭವಿಸಿ ಚಂದ್ರವಂಶದ ಕುಶಿಕ ಮಹಾರಾಜನಿಗೆ ದತ್ತುಪುತ್ರನಾದ್ದರಿಂದ ಈ ಸುಮನಸ್ಕ ಮಹಾರಾಜನ ವಂಶದವರಿಗೆ ಶ್ರೀ ಸೋಮವಂಶ ಕ್ಷತ್ರಿಯರೆಂದು ಹೆಸರು ಬಂದಿತು.

2. ಈ ಸುಮನಸ್ಕ ಮಹಾರಾಜನು ಈಶ್ವರನನ್ನು ಕುರಿತು ಪುತ್ರಾರ್ಥವಾಗಿ ತಪಸ್ಸು ಮಾಡಿ ಈಶ್ವರನ ಮಾನಸಪುತ್ರನಾದ ಮುಕ್ತರಾಜನನ್ನು ಪುತ್ರನನ್ನಾಗಿ ಪಡೆದ ಮೇಲೆ ಮುಕ್ತರಾಜನು ಜಾನುಮಂಡಲನನ್ನು ಸಂಹರಿಸಿದ ಮೇಲೆ ಈಶ್ವರನಿಂದ ಆರ್ಯ ಎಂಬ ಬಿರುದು ಬಂದಿತು. ಆ ನಂತರ ಈ ವಂಶಕ್ಕೆ ಶ್ರೀ ಸೋಮವಂಶ ಆರ್ಯಕ್ಷತ್ರಿಯ ರೆಂದು ಪ್ರಸಿದ್ಧಿಯಾಯಿತು.

3. ಚಂದ್ರವಂಶದಲ್ಲಿರುವ 32 ವಂಶಗಳಿಂದಲೂ ಸುಮನಸ್ಕ ಮಹಾರಾಜನ ಪುತ್ರನಾದ ಮುಕ್ತರಾಜನ ವಂಶದವರಿಗೆ ಹೆಣ್ಣು ಮಕ್ಕಳನ್ನು ಕೊಟ್ಟು ತೆಗೆದುಕೊಂಡಿದ್ದ ರಿಂದ ಚಂದ್ರವಂಶದಲ್ಲಿ ಬರುವ 32 ವಂಶಗಳ ಹೆಸರುಗಳು ಮತ್ತು ಅದರ ಗೋತ್ರ ಪ್ರವರ್ತಕರಾದ ಋಷಿಗಳ ಪ್ರವರವೂ ಮುಕ್ತರಾಜನ ವಂಶಕ್ಕೆ ಬಂದು ಮುಕ್ತರಾಜ ವಂಶಾವಳಿಯಲ್ಲಿಯೂ 32 ವಂಶಗಳು ಮತ್ತು 32 ಗೋತ್ರಗಳೂ ಸಹ ಪ್ರಚರಿತ ವಾದವು.

4. ಚಂದ್ರವಂಶವು ಅದರ ವಿವರಣೆಗಳು ಹದಿನೆಂಟು ಪುರಾಣಗಳು ಮತ್ತು ಹದಿನೆಂಟು ಉಪಪುರಾಣಗಳಲ್ಲೂ. ಭಾರತ, ಭಾಗವತ, ರಾಮಾಯಣಗಳಲ್ಲೂ ವರ್ಣಿತವಾಗಿದೆ.

5. ಬ್ರಹ್ಮಾಂಡಪುರಾಣ, ಸ್ಕಾಂದಪುರಾಣದ ಸನತ್ಕುಮಾರ ಸಂಹಿತೆ ಮತ್ತು ಭವಿಷ್ಯೋತ್ತರ ಪುರಾಣಗಳಲ್ಲಿ ಸುಮನಸ್ಕನ ಚರಿತ್ರೆಯೂ ಮುಕ್ತರಾಜನ ವಂಶಾವಳಿ ಯೂ ಬರುವುದು.

6. ಇತರ ಪುರಾಣ ಇತಿಹಾಸಗಳಲ್ಲಿ "ಶ್ರೀ ಸೋಮವಂಶ ಆರ್ಯಕ್ಷತಿಯು" ಎಂಬ ವಾಕ್ಯಗಳು ಉಲ್ಲೇಖವಾಗಿಲ್ಲ.

7. ಚಂದ್ರವಂಶದ ಕುಶಿಕನಿಗೆ ದತ್ತುಪುತ್ರನಾದ ಸುಮನಸ್ಕ ಮಹಾರಾಜನಿಂದ ಈಚೆಗೆ ಮುಕ್ತರಾಜ ವಂಶದವರಾದ ಶ್ರೀ ಸೋಮವಂಶ ಆರ್ಯಕ್ಷತ್ರಿಯರ 32 ವಂಶ ಗಳನ್ನು ಮತ್ತು 32 ಗೋತ್ರಗಳು ಮತ್ತು ಆದರ ಪ್ರವರಗಳನ್ನೂ ಅದಕ್ಕೆ ಸಂಬಂಧ ಪಟ್ಟ ಚಂದ್ರಗಿರಿ ಶಾಸನದಲ್ಲಿ ನಮ್ಮ ಹಿರಿಯರು ತೀರ್ಮಾನಿಸಿ ಬರೆದಿರುವ ಮನೆತನದ (ಊರುಗಳ) ಹೆಸರುಗಳನ್ನು ಬರೆದಿರುತ್ತೇನೆ. ಇದಕ್ಕೆ ಸಂಬಂಧಪಟ್ಟವರು ಮಾತ್ರ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂದು ತಿಳಿಯತಕ್ಕದ್ದು.

8. ಪುರಾಣಗಳಲ್ಲೂ ಮತ್ತು ಇತರ ಇತಿಹಾಸಗಳಲ್ಲೂ ಅನೇಕ ಕ್ಷತ್ರಿಯ ವಂಶಗಳು ಅವುಗಳ ವರ್ಣನೆ ಪ್ರಸಿದ್ಧಿಗಳು ಇದ್ದರೂ ಶ್ರೀ ಸೋಮವಂಶ ಆರ್ಯಕ್ಷತ್ರಿಯ ವಂಶದವರಾದ ನಮಗೂ ಇತರ ಕ್ಷತ್ರಿಯ ವಂಶದವರಿಗೂ ಏನೂ ಸಂಬಂಧವಿಲ್ಲವೆಂದು ಭಾವಿಸಬೇಕು.

9. ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂದು ಹೇಳಿಕೊಳ್ಳುವವರಿಗೆ ಈ ಕೆಳಗೆ ಕಾಣಿಸಿರುವ ಮೂರು ವಿಧವಾದ ಸಂಬಂಧಗಳಿದ್ದವರು ಮಾತ್ರ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂಬುದಾಗಿ ತಿಳಿಯಬೇಕು.

(1) ಶ್ರೀ ನಿಮಿಷಾಂಬಾದೇವಿಯು ಕುಲದೇವಿಯಾಗಿರಬೇಕು.

(2) 32 ವಂಶಗಳಿಗೆ ಸೇರಿದ 32 ಗೋತ್ರಗಳ ಪ್ರವರ್ತಕರಾಗಿರಬೇಕು.

(3) 32 ಗೋತ್ರಗಳಿಗೆ ನಮ್ಮ ಹಿರಿಯರು ನಿರೂಪಿಸಿರುವ 259 ಮನೆತನಗಳ ಸಂಬಂಧವಿರುವವರಾಗಿರಬೇಕು. ಮೇಲ್ಕಂಡ ಮೂರು ವಿಧಗಳಾದ ಸಂಬಂಧವಿದ್ದವರು ಪೂರ್ವದ ಪೂರಿಜಗನ್ನಾಥದಿಂದ ಪಶ್ಚಿಮದ ದ್ವಾರಕೆಯ ವರೆವಿಗೂ ಮತ್ತು ಉತ್ತರದ ಹಿಮಾಲಯದ ಬದರೀನಾಥದಿಂದ ದಕ್ಷಿಣದ ಕನ್ಯಾಕುಮಾರಿವರೆಗಿರುವ ಎಲ್ಲರೂ ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಂದು ಭಾವಿಸಬೇಕು. ಆಯಾ ದೇಶದ ಯಾವ ಬಾಷೆಯವರಾದರೂ ಮೇಲ್ಕಂಡ ಮೂರುವಿಧ ಸಂಬಂಧವಿದ್ದವರೆಲ್ಲರೂ ಶ್ರೀಸೋಮ ವಂಶ ಆರ್ಯಕ್ಷತ್ರಿಯರೆಂದು ಎಲ್ಲರೂ ಭಾವಿಸಬೇಕು.

10. ಇತರ ಚಂದ್ರವಂಶದವರಾಗಲಿ, ಸೂರ್ಯವಂಶದವರಾಗಲಿ ಇತರ ಕ್ಷತ್ರಿಯ ವಂಶದವರಾಗಲಿ ಯಾರೇ ಎಷ್ಟೇ ಕೀರ್ತಿವಂತರೂ ಐಶ್ವರ್ಯವಂತರೂ ಪ್ರತಿಷ್ಠಿತರೂ ಆಗಿದ್ದರೂ ಶ್ರೀ ಸೋಮವಂಶ ಆರ್ಯಕ್ಷತ್ರಿಯರಾದ ನಮಗೂ ಅವರಿಗೂ ಏನೂ ಸಂಬಂಧ ವಿಲ್ಲವೆಂಬುದನ್ನು ಶ್ರೀ ಸೋಮವಂಶ ಆರ್ಯಕ್ಷತ್ರಿಯರೆಲ್ಲರೂ ತಿಳಿಯತಕ್ಕದ್ದು.

11. ಚಂದ್ರಗಿರಿ ಶಾಸನಕಾಲದಲ್ಲಿ ನಮ್ಮ ಪೂರ್ವೀಕರಿಂದ ನಿರ್ಧರಿಸಲ್ಪಟ್ಟ ಮನೆತನದ (ಊರುಗಳ) ಹೆಸರುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಗೋತ್ರಗಳು ಅದರ ಪ್ರವರಗಳು ನಮ್ಮಲ್ಲಿ ಪ್ರಚುರವಿರುವುದೂ ಅಲ್ಲದೆ, ನಮ್ಮ ಜನಾಂಗದವರಿಂದ

ಮುದ್ರಿಸಿ ಪ್ರಚುರಪಡಿಸಿರುವ ಅನಂತಪುರದವರ ಬ್ರಹ್ಮಾಂಡಪುರಾಣದ ಗ್ರಂಥದಲ್ಲೂ ಮತ್ತು ಪ್ರೊದಟೂರಿನವರ ಮುಕ್ತರಾಜ ಕಾವ್ಯಚರಿತದಲ್ಲೂ ಸಹ ಗೋತ್ರಪ್ರವರ ಕಾಂಡದಲ್ಲಿ ಮನೆತನದ ಊರುಗಳ ಹೆಸರುಗಳೂ ಮತ್ತು 32 ಗೋತ್ರಗಳು ಸಹ ನಾವು 1940 ರಲ್ಲಿ ಮುದ್ರಿಸಿದ್ದ ಪ್ರಕಾರವೇ ಇರುತ್ತವೆ ಮತ್ತು ಒಂದೇ ಆಗಿರುತ್ತವೆ.

12. ಈಗ ನಮಗೆ ದೊರೆತಿರುವ ನಾಗಪುರದವರು ಕಳುಹಿಸಿರುವ ಗೋತ್ರ ಪ್ರವರಾವಳಿಯಲ್ಲಿ 40 ಗೋತ್ರಗಳು, 171 (ಊರಿನವರು) ಮನೆತನದ ಹೆಸರುಗಳೂ ಇವೆ. ನಮ್ಮಲ್ಲಿ ಯಜುರ್ವೇದವೂ ಆಪಸ್ತಂಭಸೂತ್ರವು ಮಾತ್ರ ಇದೆ. ನಾಗಪುರದವರು ಮುದ್ರಿಸಿರುವುದರಲ್ಲಿ ಋಗ್ವೇದ, ಯಜುರ್ವೇದ, ಸಾಮವೇದದವರೂ ಅಶ್ವಾಲಾಯನ, ಮದ್ಯಾಂತರೀ, ಕಾಥುಮೀ ಸೂತ್ರಗಳೂ ಇವೆ. ಅಲ್ಲದೆ ಚಂದ್ರವಂಶ, ಸೂರ್ಯವಂಶ, ನಾಗವಂಶಗಳೆಂದೂ ಮುದ್ರಿಸಿದ್ದಾರೆ. ಆದರೆ ಗೋತ್ರಗಳಿಗೆ ಪ್ರವರ (ಋಷಿ) ಸಂಖ್ಯಾ ಮಾತ್ರ ಕೊಟ್ಟು ಋಷಿಗಳ ಹೆಸರುಗಳನ್ನು ಕೊಟ್ಟಿಲ್ಲ. ಇದೂ ಅಲ್ಲದೆ ಮನೆತನದ ಊರುಗಳ ಹೆಸರಿನಲ್ಲೂ ಭೇದಗಳೂ ಮತ್ತು ಹೊಸವೂ ಇದೆ. ಇದನ್ನು ಕುಲಭಾಂದವರಾದ ಹಿರಿಯರೂ ಮತ್ತು ವಿದ್ಯಾವಂತರೆಲ್ಲರೂ ಸೇರಿ ತೀರ್ಮಾನಿಸಬೇಕಾದ ವಿಷಯ.

13. ಗೋತ್ರಗಳಲ್ಲಿ ವಿಶ್ವಾಮಿತ್ರಾದಿ ಮಹರ್ಷಿಗಳು ಕ್ಷತ್ರಿಯರಲ್ಲವೇ ? ಅವರುಗಳು ಹೇಗೆ ಗೋತ್ರದ ಅಧಿಪತಿಗಳಾದರು ಎಂದು ನಮ್ಮಗಳಿಗೆ ಸಂದೇಹ ವುಂಟಾಗುತ್ತದೆ, ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದ ಕಾಲದಲ್ಲಿ ಆತನು ಗೋತ್ರ ಪ್ರವರ್ತಕನಾಗಿರಲಿಲ್ಲ. ಆತನು ತಪಸ್ಸಾಮರ್ಥ್ಯದಿಂದ ಬ್ರಾಹ್ಮಣ್ಯವನ್ನು ಹೊಂದಿದ ಮೇಲೆಯೇ ಗೋತ್ರಪ್ರವರ್ತಕನಾದನು. ವಿಶ್ವಾಮಿತ್ರಮಹರ್ಷಿಯ ಹಾಗೆಯೇ ಶುನಕ, ಮಿತ್ರಯು, ಮುದ್ಗಲ, ಕಣ್ವ, ವಿಷ್ಣುವರ್ಧನ, ಹರಿಷ, ವೀತಿಹವ್ಯ, ನೈಧ್ರುವ, ಶಂಡಿಲ, ಅಂಬರೀಷ, ಯೌವ್ವನಾಶ್ವ, ವೈತಹವ್ಯ, ಕಾಕುಸ್ಥ ಮೊದಲಾದ ಕೆಲವು ಕ್ಷತ್ರಿಯರು ಸಹ ತಪಸ್ಸಾಮರ್ಥ್ಯದಿಂದ ಬ್ರಾಹ್ಮಣ್ಯವನ್ನು ಹೊಂದಿ ಗೋತ್ರಪ್ರವರ್ತಕರಾಗಿರುತ್ತಾರೆ ಆದ್ದರಿಂದ ಗೋತ್ರಗಳಲ್ಲಿ ಋಷಿಗಳ ಹೆಸರಿನ ಜತೆಯಲ್ಲಿರುವರೆಂಬ ಸಂಶಯವನ್ನು ನಿವಾರಿಸಿಕೊಳ್ಳಬೇಕು.

ಇತಿ ಗ್ರಂಥಕರ್ತ

ಪಾನಗಂಟಿ ಕೆ. ಗೋಪಾಲರಾಜು

ಶಾಲಿ. 1888 ವಿಶ್ವಾವಸು.
ಶ್ರಾವಣ ಪೂರ್ಣಿಮಾ. ಬುಧವಾರ,
ಕ್ರಿಸ್ತ. 11-8-1965.

ಶ್ರೀ ಸೋಮವಂಶ ಆರ್ಯಕ್ಷತ್ರಿಯರ ಸಂತತಿಯು ಮುಕ್ತರಾಜಋಷಿ ವಂಶದ ಶ್ಯಾಂಡಿಲ್ಯಸ ಗೋತ್ರದ ವಿವರ

ಶ್ರೀಮಹಾವಿಷ್ಣುವಿಗೆ ಉದರದಲ್ಲಿ ಬ್ರಹ್ಮನು, ಬ್ರಹ್ಮನಿಗೆ ಅತ್ರಿಯು, ಹೀಗೆಯೇ ಅತ್ರಿಋಷಿಗೆ :—

(1) ಚಂದ್ರನು
(2) ಬುಧನು
(3) ಪೂರೂರವನು
(4) ಆಯುವು
(5) ನಹುಷನು
(6) ಯಯಾತಿಯು
(7) ಯದುವು
(8) ಕ್ರೋಷ್ಟುವು
(9) ಧ್ವಜನೀಪನು
(10) ಮಹಾಮೂರ್ತಿ
(11) ವಿಶಂಕುವು
(12) ಚಿತ್ರರಥನು
(13) ಶಶಿಬಿಂದುವು
(14) ಪೃಥುಯಶಸ್ಸು
(15) ಪೃತುಕರ್ಮ
(16) ಕ್ರಥುರಥ
(17) ಪೃಥುಶ್ರವ
(18) ಪೃಥುಸತ್ತಮ
(19) ಉಶನ
(20) ಶೀತೇಷು
(21) ರಕ್ತಕವಚ
(22) ಶರಾವೃತ
(23) ಸ್ವಾಮಿಷ
(24) ವಿಧರ್ಭ
(25) ರೋಮಪಾದ
(26) ಬಭ್ರುವು
(27) ವೃತ್ತಿಧರ
(28) ಶಂತನ
(29) ವಿಶ್ವವಹ
(30) ಕುಶಿಕ
(31) ಸುಮನಸ್ಕ
(32) ಮುಕ್ತರಾಜ
(33) ಜ್ಯೋತಿಷ್ಮಂತ
(34) ವಪುಷ್ಮಂತ
(35) ಬ್ರಹ್ಮಮೇಧಸು
(36) ದೇವರಾಜ
(37) ಕೃತರಾಜ
(38) ಕುಂತರಾಜ
(39) ವೃಷ್ಣಿ
(40) ನಿವೃತ್ತ
(41) ದಶಾರ್ಹ
(42) ವ್ಯಾರೋಹ
(43) ಜೀಮೂತ
(44) ವಿಕೃತಿ
(45) ಭೀಮರಥಿ
(46) ನವರಥ (ಸರಸ್ವತಿ ಉಪಾಸಕ)
(47) ಶಕುನಿ
(48) ಕುರಂಧಿ
(49) ದೇವರಾತ (10ಅಶ್ವಮೇಧಗಳನ್ನು ಮಾಡಿದವನು.)
(50) ದೇವಯಜ್ಞ
(51) ಮಧು
(52) ಕುಶ
(53) ಅನುವು
(54) ಕುತ್ಸನ
(55) ಅಂಶು
(56) ಕುಕ್ಷಿಭಾಕರ
(57) ಸಾತ್ವತ
(58) ವೃಷ್ಣಿ

ಹಾಗೂ (59) ಪೃಶ್ನಿ ಇವನ ಮಗ (60) ಚಿತ್ರಕ ಇವನಿಗೆ ರೋಮಶ ಮಹರ್ಷಿಯಿಂದ ಶಾಪ ಬಂದು ಚಿತ್ರಕನೇ ಆದ.

ಚಿತ್ರಕನ ಪುತ್ರನಾದ (61) ಪೃಥು ಚಕ್ರವರ್ತಿ ಇವನು ಶಾಪ ವಿಮೋಚನೆಗಾಗಿ ಶ್ರೀ ಪರಮೇಶ್ವರನನ್ನು ತಪಶಕ್ತಿಯಿಂದ ಮೆಚ್ಚಿಸಿ ಪುನಃ ರಾಜ್ಯವನ್ನು ಸಂಪಾದಿಸಿದನು. ಚಿತ್ರಕನ ಶಾಪದಿಂದಲೂ ಯಾದವ ಕಲಹದಿಂದ ಗಾರ್ಗ್ಯಮುನಿ ಶಾಪದಿಂದಲೂ

ವೃಷ್ಣಿಗಳು, ಭೋಜರು, ಯಾಜಮಾನರು, ಯಾಧವರೂ, ಅಂಧಕರು ಹತರಾಗಲು ಶಾಪಗ್ರಸ್ತನಾದ ಚಿತ್ರಕನು ಉಳಿದ ಮಕ್ಕಳೊಡಗೂಡಿ ದ್ವಾರಕೆಯನ್ನು ಬಿಟ್ಟು ಹೊರಟುಹೋದನು.

ಶ್ಯಾಂಡಿಲ್ಯಸ ಗೋತ್ರ

೧. ವೀರಭದ್ರುನಿಯವರು, ೨. ಪಾನಗಂಟಿಯವರು, 3. ಕಾಮರೌತು ಯವರು, ೪. ಆಲೂರಿಯವರು, ೫. ಪಾಣಿಂಯವರು ೬. ಮುತ್ಯಾಲಯವರು ಈ ಆರು ಮನೆಗಳವರ ಗೋತ್ರವು ಶ್ಯಾಂಡಿಲ್ಯಸ ಗೋತ್ರವು.

ಇದಕ್ಕೆ ಪ್ರವರ :

1. ಕರ್ಣಾಟಕ :—**ಕಾಶ್ಯಪ, ಆವತ್ಸಾರ, ನೈಧೃವ, ರೇಭ, ರೈಭ, ಶಂಡಿಲ, ಶ್ಯಾಂಡಿಲ್ಯ** ಸಪ್ತಾರ್ಷೇಯ.
2. ಆಂಧ್ರ :—**ನೈಭ, ರೇಭ, ಚ್ಯವನ, ಶತಮರ್ಷಣ, ರೈಭ, ರೇಭ, ಶ್ಯಾಂಡಿಲ್ಯ** ಸಪ್ತಾರ್ಷೇಯ.
3. ದ್ರಾವಿಡ :—**ಚ್ಯವನ, ಶತಮರ್ಷಣ, ನೈಧೃವ, ಶಂಡಿಲ, ಶ್ಯಾಂಡಿಲ್ಯ,** ಪಂಚಾರ್ಷೇಯಪ್ರವರಾನ್ವಿತ ಶ್ಯಾಂಡಿಲ್ಯಸಗೋತ್ರಃ । ಆಪಸ್ತಂಭಸೂತ್ರಃ ಯಜುಶ್ಶಾಖಾಧ್ಯಾಯನಮಃ ॥

ಈ ವಂಶಕ್ಕೆ ಸುಮನಸ್ಕಮಹಾರಾಜನಿಂದೀಚೆಗೆ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಮುಕ್ತರಾಜವಂಶದ ಶ್ಯಾಂಡಿಲ್ಯಸ ಗೋತ್ರದವರೆಂದು ಹೆಸರು.

ಗೋತ್ರ :– ಶ್ಯಾಂಡಿಲ್ಯಸ, **ಮನೆತನ :–** ಪಾನಗಂಟಿ, **ಮನೆದೇವರು :–** ಬನ್ನೇರುಘಟ್ಟದ ಸಂಪಂಗಿರಾಮಸ್ವಾಮಿ. ಶೆಟ್ಟಿ ಸಂಪಂಗಪ್ಪನವರ ಶೆಟ್ಟಿನಾರಾಯಣಪ್ಪನವರ ವಂಶಾವಳಿ.

1

- ಗೋಪಾಲಯ್ಯ
  - ಗುರುಮೂರ್ತಪ್ಪ
    - 1) ಪೆದ್ದ ರಂಗಯ್ಯ
      - ಸಂಪಂಗಿರಾಮಯ್ಯ
        - ಪೆದ್ದಯ್ಯ
          - ರಾಮಪ್ಪ
            - ಶೆಟ್ಟಿ ಸಂಪಂಗಯ್ಯ
              - ಮುನಿರಂಗಯ್ಯ
                - ನರಸಿಂಹಯ್ಯ
                  - ಈಶ್ವರರಾಜು
                  - ಮುದ್ದರಾಜು
                  - ಗೋಪಾಲರಾಜು
                - ಹನುಮಂತಪ್ಪ
                  - ಮನ್ನಾರಯ್ಯರಾಜು
                    - ಆನಂದರಾಜು
                    - ರಾಮರಾಜು
                    - ರಾಜಶೇಖರರಾಜು
                  - ವಾಸುದೇವರಾಜು
                  - ಅಚ್ಚುತರಾಜು
                  - ಗೋವಿಂದರಾಜು
                - ಸಂಪಂಗಪ್ಪ
                  - ಕೃಷ್ಣರಾಜು
                  - ಗೋವಿಂದರಾಜು
                  - ರಾಮರಾಜು
            - ಕೃಷ್ಣಪ್ಪ
              - ಶೆಟ್ಟಿನಾರಣಪ್ಪ
                - ರಾಜಗೋಪಾಲ್‌ರಾಜು
                  - ಅಶ್ವತ್ಥನಾರಾಯಣರಾಜು
                  - ಸಂಪಂಗಿರಾಮರಾಜು
                  - ಸುಂದರರಾಜು
                - ವೆಂಕಟರಾಜು
                  - ಗೋವಿಂದರಾಜು
                  - ರಾಮರಾಜು
                - ಪೆದ್ದಕೃಷ್ಣರಾಜು – ಸಂಪಂಗಿರಾಮರಾಜು
                - ಚಿನ್ನಕೃಷ್ಣರಾಜು – ಶ್ರೀನಿವಾಸರಾಜು
                - ಭೀಮರಾಜು
                - ಏಕಾಂಬರರಾಜು
                - ಗೋಪಾಲರಾಜು
              - ರಾಘವಪ್ಪ
            - ರಂಗಪ್ಪ
              - ಪೆದ್ದರಾಮಯ್ಯ
                - ಪೆದ್ದ ರಂಗಯ್ಯ
                - ಚಿನ್ನ ರಂಗಯ್ಯ – ಸಂಪಂಗಿರಾಮರಾಜು
              - ಚಿನ್ನ ರಾಮಯ್ಯ
                - ರಾಮಲಕ್ಷ್ಮಯ್ಯ
                  - ಕೃಷ್ಣರಾಜು
                  - ಕೋದಂಡರಾಜು
                  - ಧನರಾಜು
                - ಶ್ರೀರಾಮಯ್ಯ
                  - ಅನಂತರಾಜು
                  - ವಾಸುದೇವರಾಜು
                  - ಅಚ್ಯುತರಾಜು
              - ಸಂಪಂಗಿರಾಮಯ್ಯ
                - ನಾರಾಯಣರಾಜು
                - ರಾಜಶೇಖರರಾಜು
                - ರಂಗರಾಜು
                - ಲಕ್ಷ್ಮೀನಾರಾಯಣರಾಜು
                - ಗೋಪಾಲರಾಜು
                - ಅಚ್ಯುತರಾಜು
                - ಕೃಷ್ಣರಾಜು
              - ಪಿಲ್ಲಕೃಷ್ಣಪ್ಪ
                - ಅಶ್ವತ್ಥನಾರಾಯಣರಾಜು
                - ರಂಗಯ್ಯರಾಜು
                  - ದೇವರಾಜು
                  - ಸೋಮಶೇಖರರಾಜು
                - ಕೃಷ್ಣರಾಜು
                  - ವಿಜಯಕುಮಾರ್‌ರಾಜು
                  - ಪರಾಶರರಾಜು
      - ನಾರಣಪ್ಪ
    - 2) ಕೃಷ್ಣಯ್ಯ
    - 3) ಪಿಲ್ಲರಂಗಯ್ಯ
    - 4) ಸುಬ್ಬಯ್ಯ

ಗೋತ್ರ :– ಶ್ಯಾಂಡಿಲ್ಯಸ, **ಮನೆತನ :**– ಪಾನಗಂಟಿ, **ಮನೆದೇವರು :**— ದೊಡ್ಡತಿರುಪತಿ ವೆಂಕಟರಮಣಸ್ವಾಮಿ. ಶಿವಮೊಗ್ಗ ಗುರುಮೂರ್ತಪ್ಪನವರ ವಂಶಾವಳಿ.

2

- ಗೋಪಾಲಯ್ಯ — ಗುರುಮೂರ್ತಪ್ಪ
  - (1) ಪೆದ್ದರಂಗಯ್ಯ
  - (2) ಕೃಷ್ಣಯ್ಯ — ಗೋಪಾಲಯ್ಯ
    - ಪೆದ್ದರಂಗಯ್ಯ
      - ಪುಟ್ಟಯ್ಯ
        - ಐನಾಪ್ಪ
          - ಪೆದ್ದರಂಗಪ್ಪ
            - ಐಸಾಮಪ್ಪ
            - ಪೆದ್ದಕೃಷ್ಣಪ್ಪ — ಕೃಷ್ಣರಾಜು — ಪುರುಷೋತ್ತಮರಾಜು
            - ಚಿನ್ನಕೃಷ್ಣಪ್ಪ (ಮೈಸೂರು)
              - ಕೃಷ್ಣರಾಜು
                - ಆನಂದರಾಜು
                - ಕೃಷ್ಣರಾಜು
                - ಸತ್ಯನಾರಾಯಣರಾಜು
                - ಸೋಮಶೇಖರರಾಜು
              - ಕೃಷ್ಣಮೂರ್ತಿರಾಜು
                - ಗೋಪಾಲರಾಜು
                - ಧನರಾಜು
                - ಶ್ರೀನಿವಾಸರಾಜು
                - ಪ್ರೇಂಕುಮಾರ್
              - ರಾಮಕೃಷ್ಣರಾಜು
                - ವೇಣುಗೋಪಾಲರಾಜು
                - ಸತ್ಯನಾರಾಯಣರಾಜು
          - ಸೂರಪ್ಪ
          - ಚಿನ್ನರಂಗಪ್ಪ
        - ಗೋವಿಂದಪ್ಪ
          - ಗುರುಮೂರ್ತಪ್ಪ (ಶಿವಮೊಗ್ಗ)
            - ಗೋವಿಂದಪ್ಪ
              - ಪಿಲ್ಲಕೃಷ್ಣಯ್ಯರಾಜು
              - ರಂಗರಾಜು
              - ಶ್ರೀರಾಮರಾಜು
              - ನಾರಾಯಣರಾಜು
              - ಸುಂದರರಾಜು
              - ಅನಂತರಾಜು
            - ಅಶ್ವತ್ಥನಾರಣಪ್ಪ
              - ಗೋಪಾಲರಾಜು
              - ಜಯರಾಮರಾಜು
            - ಗೋಪಾಲರಂಗಯ್ಯ
            - ಸೂರ್ಯನಾರಾಯಣರಾಜು
              - ಲಕ್ಷ್ಮೀನಾರಾಯಣರಾಜು
              - ಬಸವರಾಜು
            - ರಾಮಕೃಷ್ಣರಾಜು
              - ರಾಮರಾಜು
              - ಕೃಷ್ಣರಾಜು
              - ಗುರುರಾಜು
          - ಚಿಕ್ಕನಾರಣಪ್ಪ
        - ಅಪ್ಪೋಜಿಡು — ನಾರಣಪ್ಪ
        - ನಾರಣಪ್ಪ — ಶ್ರೀನಿವಾಸಯ್ಯ (ಮೈಸೂರು)
          - ಸತ್ಯನಾರಾಯಣರಾಜು
          - ಕೃಷ್ಣರಾಜು
      - ರಾಮಪ್ಪ
      - ಕಂಚಿರಂಗಯ್ಯ
      - ವೆಂಕಟನಾರಣಪ್ಪ
    - ಚಿನ್ನರಂಗಯ್ಯ
